# ಪ್ರಶ್ನೋಪನಿಷತ್

[ಕನ್ನಡ ಅವತರಣಿಕೆ]

# PRAŚNOPANIṢAT ( Kannaḍa Avataraṇike)

A Project of the Academy of Sanskrit Research, Melkote.


General Editor

M. A. S. Rajan, M.Sc.

Chief Editor

Prof. M. A. Lakshmithathachar, M.A.,

Registrar, The Academy of Sanskrit Research, Melkote.



First Edition : 1988

No. of Copies : 1100

**Published with the Financial Assistance from the Ministry of Human Resource Development Government of India**

Publishers

The Academy of Sanskrit Research, Melkote - 571 431



© Publishers



Price: Calico-bound Copy : Rs.

Half Calico-bound Copy : Rs.

Type-set at the Desk-Top Publishing System of the Academy and Printed at Sharadh Enterprises, Palace Guttahalli, Bangalore - 3.

## ಕಾರ್ಯನಿರ್ವಾಹಕ ಮಂಡಳಿ

ಗ್ರಂಥಮಾಲೆಯ ಸಂಪಾದಕರು
ಎಮ್· ಎ· ಎಸ್· ರಾಜನ್, ಎಂ· ಎಸ್ಸಿ,
ಅಧ್ಯಕ್ಷರು, ಸಂಸ್ಕೃತ ಸಂಶೋಧನ ಸಂಸತ್

ಪ್ರಧಾನ ಸಂಪಾದಕರು
ಎಮ್· ಎ· ಲಕ್ಷ್ಮೀತಾತಾಚಾರ್, ನ್ಯಾಯ ವಿದ್ವಾನ್, ರಾಷ್ಟ್ರಭಾಷಾ ಪ್ರವೀಣ
ಕುಲಸಚಿವರು, ಸಂಸ್ಕೃತ ಸಂಶೋಧನ ಸಂಸತ್

ವಿಭಾಗದ ಮುಖ್ಯಸ್ಥರು
ಪಂಡಿತರತ್ನಂ ಶ್ರೀ ಕೆ· ಎಸ್· ವರದಾಚಾರ್ಯ,
ತರ್ಕ, ವೇದಾನ್ತ ವಿದ್ವಾನ್

ಸಹಾಯಕರು
ವಿದ್ವಾನ್ ಉಮಾಕಾಂತ ಭಟ್ಟ, ಎಮ್· ಎ· (ಆಂಗ್ಲ)
ವಿದುಷೀ ಎಮ್· ವಿ· ಸಾವಿತ್ರಿ, ರಾಷ್ಟ್ರಭಾಷಾಪ್ರವೀಣ
ವಿದ್ವಾನ್ ಎಸ್· ನರಸರಾಜ ಭಟ್ಟರ್, ಎಮ್· ಎ·, ಬಿ· ಕಾಮ್,
ಕೆ· ಆರ್· ನಾಗಲಕ್ಷ್ಮೀ, ಬಿ· ಎಸ್ಸಿ·, ಎಮ್· ಎ,

ತಾಂತ್ರಿಕ ಸಹಾಯಕರು
ವಿಜಯ
ಶ್ರೀಮತಿ
ಸಿ· ನರಸಿಂಹೇಗೌಡ

ಶ್ರೀಃ

# ಮೊದಲ ಮಾತು

ಭಾರತದ ವೈಶಿಷ್ಟ್ಯ ಎದ್ದು ಕಾಣಿಸುವುದು ಅದರ ಸಂಸ್ಕೃತಿಯಲ್ಲಿ. ಸಂಸ್ಕೃತಿಗೆ ಮೂಲವಾದುದು ಧರ್ಮ. ನಮ್ಮ ಸಂಪ್ರದಾಯದಂತೆ ಧರ್ಮಕ್ಕೆ ಸಾವಿಲ್ಲ. ಆದರೆ ಧರ್ಮಕ್ಕೆ ಆಘಾತ ಉಂಟಾದರೆ ಭಗವಂತನು ಭೂಲೋಕದಲ್ಲಿ ಅವತರಿಸಿ ಅದನ್ನು ಕಾಪಾಡುವನು ಎಂಬ ನಂಬಿಕೆ ಇದೆ. ನಮ್ಮ ದೇಶದ ಆಚಾರ್ಯ ಪರಂಪರೆ ಆ ನಂಬಿಕೆಯನ್ನು ಸಾರ್ಥಕಪಡಿಸಿದೆ.

ವೇದವು ಅಪೌರುಷೇಯ, ಅತಿ ಪ್ರಾಚೀನ. ಜ್ಞಾನವೃಕ್ಷದ ತಾಯಿಬೇರಂಥಾದ್ದು. ವೇದಧರ್ಮ ನಶಿಸುತ್ತಿದ್ದ ಕಾಲಬಂದಾಗ ಅದರ ಪರಿಪಾಲನಕ್ಕಾಗಿ ಅವತಾರಪುರುಷರಂತೆ ಆಚಾರ್ಯತ್ರಯರು ಉದ್ಭವಿಸಿದರು ಎಂದರೆ ಚರಿತ್ರೆಯ ಪ್ರಕಾರ ತಪ್ಪಾಗಲಾರದು. ಇವರು ಆಯಾ ಕಾಲಧರ್ಮವನ್ನು ಅನುಸರಿಸಿ ಸಾಂದರ್ಭಿಕ ಒತ್ತಡಗಳಿಗೆ ಎಡೆಗೊಡದೆ ವೈದಿಕ ಧರ್ಮವನ್ನು ಉಳಿಸಿದರು. ಬೆಳೆಸಿದರು.

ವೇದವು ಕುಸುಮಿತವಾಗಿ ಫಲಿತವಾಗಿರುವುದು ಉಪನಿಷತ್ತುಗಳಲ್ಲಿ. ಹೀಗೆ ಉಪನಿಷತ್ತುಗಳು ವೇದದ ಅಂತಿಮ ಭಾಗಗಳು ಎಂದು ಅನಿಸಿವೆ. ಆದ್ದರಿಂದಲೇ ಅವು ವೇದದ ಸಾರಸರ್ವಸ್ವ. ಧರ್ಮ ಸಂಸ್ಕೃತಿಗಳಿಗೆ ಆಧಾರಸ್ತಂಭಗಳು. ಉಪನಿಷತ್ತುಗಳಿಗೆ ತಾತ್ವಿಕ ಮತ್ತು ಸಾಹಿತ್ಯಕ ಮೌಲ್ಯಗಳಿವೆ. ಅವು ಮಂಡಿಸುವುದು ಪರತತ್ವಜ್ಞಾನವನ್ನು. ಆ ಜ್ಞಾನ ತರ್ಕದಿಂದಾಗಲಿ ಚಮತ್ಕೃತಿಯಿಂದಾಗಲಿ ಜನಿಸಿ-ದಂಥಾದ್ದಲ್ಲ. ವ್ಯಾಕರಣದಿಂದ ಗೋಚರವಾಗದು. ಅದನ್ನರಿಯಲು ಅನುಭವವೇ ಹೆದ್ದಾರಿ. ಅನುಭೂತಿ ದೊರಕಬೇಕಾದರೆ ಪರಮಾತ್ಮನ ನಿರ್ಹೇತುಕ ಕೃಪೆಯಿರಬೇಕು. ಭಗವತ್ಸಂಕಲ್ಪದಿಂದ ಸದ್ಗುರು ಪ್ರಾಪ್ತಿಯಾಗಬೇಕು. ಗುರುಮುಖೀನ ಉಪನಿಷತ್ತುಗಳ ರಹಸ್ಯಗಳನ್ನು ತಿಳಿಯಬೇಕು.

ಗುರುಶ್ರೇಷ್ಠರಾದ ಆಚಾರ್ಯ ರಾಮಾನುಜರು ಭಕ್ತಿಪಂಥವನ್ನು ಜನರಿಗೆ ತೋರಿಸಿದರು ಪ್ರಪತ್ತಿಯನ್ನು ಸಾರಿದರು. ಆಚಾರ್ಯ ರಾಮಾನುಜರ ದೃಷ್ಟಿಕೋನವನ್ನು ಪ್ರತಿಬಿಂಬಿಸುವ ಉಪನಿಷ-ದ್ವ್ಯಾಖ್ಯಾನಗಳು ಅಲ್ಲೊಂದು ಇಲ್ಲೊಂದೆಂಬಂತೆ ಇವೆ. ಇದ್ದರೂ ಸಂಸ್ಕೃತದಲ್ಲಿವೆ. ಅವುಗಳನ್ನು ಸಂಸ್ಕೃತ ತಿಳಿಯದ ಆದರೆ ತತ್ವಜ್ಞಾನವನ್ನು ಅಪೇಕ್ಷಿಸುವ ಜಿಜ್ಞಾಸುಗಳಾದವರಿಗೆ ಮುಟ್ಟಿಸುವ ಪ್ರಯತ್ನ ನಮ್ಮದು.

ಇಲ್ಲಿಯವರೆಗೆ ಈಶ, ಕೇನ ಕಠೋಪನಿಷತ್ತುಗಳಿಗೆ ವಿಶಿಷ್ಟಾದ್ವೈತಪರವಾಗಿ ವ್ಯಾಖ್ಯಾನಗಳು ಸಂಗ್ರಹೀತವಾಗಿ ಮುದ್ರಿತವಾಗಿವೆ. ಅವು ವಿಮರ್ಶಾತ್ಮಕ ಅಧ್ಯಯನವನ್ನೊಳಗೊಂಡ ಗ್ರಂಥಗಳು. ಈ ಗ್ರಂಥಮಾಲೆಯಲ್ಲಿ ಇದು ಮತ್ತೊಂದು ಕುಸುಮ.

ಪ್ರಶ್ನೋಪನಿಷತ್ತಿನಲ್ಲಿ ಜಿಜ್ಞಾಸುಗಳಾದ ಶಿಷ್ಯರು ಮಹರ್ಷಿ ಪಿಪ್ಪಲಾದರಿಂದ ಅತಿ ಗಂಭೀರವಾದ ಪ್ರಶ್ನೆಗಳಿಗೆ ಸಮಾಧಾನಗಳನ್ನು ಪಡೆಯುತ್ತಾರೆ. ಜಗತ್ತಿನ ಸೃಷ್ಟಿ ಮೊದಲುಗೊಂಡು ಪ್ರಾಣದ ಸಂಬಂಧ, ನಿದ್ರೆಯ ಸ್ವಭಾವ, ಪ್ರಣವದ ವೈಶಿಷ್ಟ್ಯ ಮುಂತಾದ ರಹಸ್ಯಗಳು ವಿವರಿಸಲ್ಪಟ್ಟಿವೆ. ಪ್ರಶ್ನೋತ್ತರಗಳು ಒಂದಕ್ಕೊಂದು ಸರಪಣಿಯ ಕೊಂಡಿಗಳಂತೆ ಹೆಣೆದುಕೊಂಡು ಉಪನಿಷತ್ತಿನ ಶೀರ್ಷಿಕೆಯನ್ನು ಸಾರ್ಥಕಪಡಿಸಿವೆ. ಇಲ್ಲಿ ವಿಶ್ವದ ಸಮಸ್ತಕಾರ್ಯಗಳೂ ಪರಮಾತ್ಮನಿಗೆ ಅಧೀನ ಎಂಬ ಸಾರಾಂಶವನ್ನೂ ಪರಬ್ರಹ್ಮನ ಸ್ವರೂಪವನ್ನೂ ಬಹಳ ಸುಂದರವಾಗಿ ನಿರೂಪಿಸಲಾಗಿದೆ.

ಈ ಗ್ರಂಥದ ಸೌರಭ ಓದುಗರಿಗೆ ಮುದ ನೀಡಲಿ. ಇದೇ ನಮ್ಮ ಹರಕೆ-ಹಾರೈಕೆ. ಆಗ ಸಂಸತ್ತಿನ ಶ್ರಮ ಸಾರ್ಥಕವಾದಂತೆ. ಸಂಸತ್ತಿನ ಕೋವಿದರು ಇದಕ್ಕಾಗಿ ಶ್ರಮಿಸಿದ್ದಾರೆ. ಇವರೆಲ್ಲರಿಗೂ ನನ್ನ ಹಾರ್ದಿಕ ಅಭಿನಂದನೆಗಳು. ಈ ಮೊದಲ ಮಾತಿನ ತಯಾರಿಕೆಗೆ ವಿಶೇಷವಾಗಿ ಸಹಕರಿಸಿದ ಶ್ರೀಮತಿ ನಾಗಲಕ್ಷ್ಮಿಯವರಿಗೆ ನಾನು ಅತ್ಯಂತ ಆಭಾರಿ.

ಎಂ. ಎ. ಎಸ್. ರಾಜನ್
ಅಧ್ಯಕ್ಷರು

# ವಿಷಯಸೂಚಿ


| ವಿಷಯ | ಪುಟ |
|---|---|
| ಪ್ರಸ್ತಾವನೆ | 1-20 |
| ಪ್ರಶ್ನೋಪನಿಷತ್ ಮೂಲ | 21-32 |
| (ಪ್ರಶ್ನೋಪನಿಷತ್ ಸಂಸ್ಕೃತಮೂಲ-ಕನ್ನಡಮೂಲ-ಪ್ರತಿಪದಾರ್ಥ-ತಾತ್ಪರ್ಯ - ರಂಗರಾಮಾನುಜಭಾಷ್ಯ-ಅನುವಾದ-ಭಾಷ್ಯಸಾರಸಹಿತ) | |
| ಶಾಂತಿಪಾಠ | ೧-೩ |


## ಪ್ರಥಮ ಪ್ರಶ್ನಃ

### ಮಂತ್ರ - ೧


| | |
|---|---|
| ಮಂತ್ರ | ೧ |
| ಪ್ರತಿಪದಾರ್ಥ | ೧-೨ |
| ತಾತ್ಪರ್ಯ | ೨ |
| ರಂಗರಾಮಾನುಜಭಾಷ್ಯ | ೨-೩ |
| ಅನುವಾದ | ೩-೪ |
| ಭಾಷ್ಯಸಾರ | ೪-೫ |


### ಮಂತ್ರ - ೨


| | |
|---|---|
| ಮಂತ್ರ | ೫ |
| ಪ್ರತಿಪದಾರ್ಥ | ೬ |
| ತಾತ್ಪರ್ಯ | ೬ |
| ರಂಗರಾಮಾನುಜಭಾಷ್ಯ | ೬-೭ |
| ಅನುವಾದ | ೭ |
| ಭಾಷ್ಯಸಾರ | ೭-೮ |

## ಮಂತ್ರ - ೩


| ವಿಷಯ | ಪುಟ |
| --- | --- |
| ಮಂತ್ರ | ೯ |
| ಪ್ರತಿಪದಾರ್ಥ | ೯ |
| ತಾತ್ಪರ್ಯ | ೯ |
| ರಂಗರಾಮಾನುಜಭಾಷ್ಯ | ೯ |
| ಅನುವಾದ | ೧೦ |
| ಭಾಷ್ಯಸಾರ | ೧೦ |


## ಮಂತ್ರ - ೪


| | |
| --- | --- |
| ಮಂತ್ರ | ೧೧ |
| ಪ್ರತಿಪದಾರ್ಥ | ೧೧ |
| ತಾತ್ಪರ್ಯ | ೧೧-೧೨ |
| ರಂಗರಾಮಾನುಜಭಾಷ್ಯ | ೧೨ |
| ಅನುವಾದ | ೧೨ |
| ಭಾಷ್ಯಸಾರ | ೧೩ |


## ಮಂತ್ರ - ೫


| | |
| --- | --- |
| ಮಂತ್ರ | ೧೪ |
| ಪ್ರತಿಪದಾರ್ಥ | ೧೪ |
| ತಾತ್ಪರ್ಯ | ೧೪ |
| ರಂಗರಾಮಾನುಜಭಾಷ್ಯ | ೧೪-೧೫ |
| ಅನುವಾದ | ೧೫ |
| ಭಾಷ್ಯಸಾರ | ೧೫-೧೬ |


## ಮಂತ್ರ - ೬


| | |
| --- | --- |
| ಮಂತ್ರ | ೧೬ |
| ಪ್ರತಿಪದಾರ್ಥ | ೧೬-೧೭ |
| ತಾತ್ಪರ್ಯ | ೧೭ |

| ವಿಷಯ | ಪುಟ |
|---|---|
| ರಂಗರಾಮಾನುಜಭಾಷ್ಯ | ೧೭-೧೮ |
| ಅನುವಾದ | ೧೮-೧೯ |
| ಭಾಷ್ಯಸಾರ | ೧೯-೨೦ |

## ಮಂತ್ರ - ೭

| | |
|---|---|
| ಮಂತ್ರ | ೨೦ |
| ಪ್ರತಿಪದಾರ್ಥ | ೨೧ |
| ತಾತ್ಪರ್ಯ | ೨೧ |
| ರಂಗರಾಮಾನುಜಭಾಷ್ಯ | ೨೧ |
| ಅನುವಾದ | ೨೨ |
| ಭಾಷ್ಯಸಾರ | ೨೨-೨೩ |

## ಮಂತ್ರ - ೮

| | |
|---|---|
| ಮಂತ್ರ | ೨೩ |
| ಪ್ರತಿಪದಾರ್ಥ | ೨೩ |
| ತಾತ್ಪರ್ಯ | ೨೪ |
| ರಂಗರಾಮಾನುಜಭಾಷ್ಯ | ೨೪ |
| ಅನುವಾದ | ೨೫ |
| ಭಾಷ್ಯಸಾರ | ೨೫-೨೬ |

## ಮಂತ್ರ - ೯

| | |
|---|---|
| ಮಂತ್ರ | ೨೬ |
| ಪ್ರತಿಪದಾರ್ಥ | ೨೭ |
| ತಾತ್ಪರ್ಯ | ೨೭ |
| ರಂಗರಾಮಾನುಜಭಾಷ್ಯ | ೨೮ |
| ಅನುವಾದ | ೨೮-೨೯ |
| ಭಾಷ್ಯಸಾರ | ೩೦-೩೧ |

## ಮಂತ್ರ - ೧೦

| | |
|---|---|
| ಮಂತ್ರ | ೩೧ |

| ವಿಷಯ | ಪುಟ |
|---|---|
| ಪ್ರತಿಪದಾರ್ಥ | ೩೨ |
| ತಾತ್ಪರ್ಯ | ೩೨-೩೩ |
| ರಂಗರಾಮಾನುಜಭಾಷ್ಯ | ೩೪ |
| ಅನುವಾದ | ೩೪-೩೫ |
| ಭಾಷ್ಯಸಾರ | ೩೫-೩೬ |

## ಮಂತ್ರ - ೧೧

| | |
|---|---|
| ಮಂತ್ರ | ೩೬-೩೭ |
| ಪ್ರತಿಪದಾರ್ಥ | ೩೭ |
| ತಾತ್ಪರ್ಯ | ೩೭ |
| ರಂಗರಾಮಾನುಜಭಾಷ್ಯ | ೩೭-೩೮ |
| ಅನುವಾದ | ೩೮ |
| ಭಾಷ್ಯಸಾರ | ೩೮-೩೯-೪೦ |

## ಮಂತ್ರ - ೧೨

| | |
|---|---|
| ಮಂತ್ರ | ೪೦ |
| ಪ್ರತಿಪದಾರ್ಥ | ೪೦ |
| ತಾತ್ಪರ್ಯ | ೪೦-೪೧ |
| ರಂಗರಾಮಾನುಜಭಾಷ್ಯ | ೪೧ |
| ಅನುವಾದ | ೪೧ |
| ಭಾಷ್ಯಸಾರ | ೪೧-೪೨ |

## ಮಂತ್ರ - ೧೩

| | |
|---|---|
| ಮಂತ್ರ | ೪೨ |
| ಪ್ರತಿಪದಾರ್ಥ | ೪೨ |
| ತಾತ್ಪರ್ಯ | ೪೩ |
| ರಂಗರಾಮಾನುಜಭಾಷ್ಯ | ೪೩ |
| ಅನುವಾದ | ೪೩ |
| ಭಾಷ್ಯಸಾರ | ೪೪ |

## ಮಂತ್ರ - ೧೪


| ವಿಷಯ | ಪುಟ |
|---|---|
| ಮಂತ್ರ | ೪೪ |
| ಪ್ರತಿಪದಾರ್ಥ | ೪೪ |
| ತಾತ್ಪರ್ಯ | ೪೪ |
| ರಂಗರಾಮಾನುಜಭಾಷ್ಯ | ೪೫ |
| ಅನುವಾದ | ೪೫ |
| ಭಾಷ್ಯಸಾರ | ೪೫ |


## ಮಂತ್ರ - ೧೫, ೧೬


| | |
|---|---|
| ಮಂತ್ರ | ೪೬ |
| ಪ್ರತಿಪದಾರ್ಥ | ೪೬ |
| ತಾತ್ಪರ್ಯ | ೪೭ |
| ರಂಗರಾಮಾನುಜಭಾಷ್ಯ | ೪೭ |
| ಅನುವಾದ | ೪೭-೪೮ |
| ಭಾಷ್ಯಸಾರ | ೪೮-೪೯ |


# ದ್ವಿತೀಯ ಪ್ರಶ್ನಃ

## ಮಂತ್ರ - ೧


| | |
|---|---|
| ಮಂತ್ರ | ೫೦ |
| ಪ್ರತಿಪದಾರ್ಥ | ೫೦ |
| ತಾತ್ಪರ್ಯ | ೫೦ |
| ರಂಗರಾಮಾನುಜಭಾಷ್ಯ | ೫೧ |
| ಅನುವಾದ | ೫೧ |
| ಭಾಷ್ಯಸಾರ | ೫೧-೫೨ |

## ಮಂತ್ರ - ೨


| ವಿಷಯ | ಪುಟ |
|---|---|
| ಮಂತ್ರ | ೫೨-೫೩ |
| ಪ್ರತಿಪದಾರ್ಥ | ೫೩ |
| ತಾತ್ಪರ್ಯ | ೫೩ |
| ರಂಗರಾಮಾನುಜಭಾಷ್ಯ | ೫೩ |
| ಅನುವಾದ | ೫೪ |
| ಭಾಷ್ಯಸಾರ | ೫೪-೫೫ |


## ಮಂತ್ರ - ೩


| | |
|---|---|
| ಮಂತ್ರ | ೫೫ |
| ಪ್ರತಿಪದಾರ್ಥ | ೫೫-೫೬ |
| ತಾತ್ಪರ್ಯ | ೫೬ |
| ರಂಗರಾಮಾನುಜಭಾಷ್ಯ | ೫೬ |
| ಅನುವಾದ | ೫೬ |
| ಭಾಷ್ಯಸಾರ | ೫೭ |


## ಮಂತ್ರ - ೪


| | |
|---|---|
| ಮಂತ್ರ | ೫೮ |
| ಪ್ರತಿಪದಾರ್ಥ | ೫೯ |
| ತಾತ್ಪರ್ಯ | ೫೯ |
| ರಂಗರಾಮಾನುಜಭಾಷ್ಯ | ೫೯ |
| ಅನುವಾದ | ೫೯-೬೦ |
| ಭಾಷ್ಯಸಾರ | ೬೦-೬೧ |


## ಮಂತ್ರ - ೫


| | |
|---|---|
| ಮಂತ್ರ | ೬೧ |
| ಪ್ರತಿಪದಾರ್ಥ | ೬೧ |
| ತಾತ್ಪರ್ಯ | ೬೨ |
| ರಂಗರಾಮಾನುಜಭಾಷ್ಯ | ೬೨ |
| ಅನುವಾದ | ೬೨ |
| ಭಾಷ್ಯಸಾರ | ೬೨-೬೩ |

## ಮಂತ್ರ - ೬


| ವಿಷಯ | ಪುಟ |
|---|---|
| ಮಂತ್ರ | ೬೩ |
| ಪ್ರತಿಪದಾರ್ಥ | ೬೩ |
| ತಾತ್ಪರ್ಯ | ೬೪ |
| ರಂಗರಾಮಾನುಜಭಾಷ್ಯ | ೬೪ |
| ಅನುವಾದ | ೬೪ |
| ಭಾಷ್ಯಸಾರ | ೬೪-೬೫ |


## ಮಂತ್ರ - ೭


| | |
|---|---|
| ಮಂತ್ರ | ೬೫ |
| ಪ್ರತಿಪದಾರ್ಥ | ೬೫ |
| ತಾತ್ಪರ್ಯ | ೬೫ |
| ರಂಗರಾಮಾನುಜಭಾಷ್ಯ | ೬೫ |
| ಅನುವಾದ | ೬೫ |
| ಭಾಷ್ಯಸಾರ | ೬೫-೬೬ |


## ಮಂತ್ರ - ೮


| | |
|---|---|
| ಮಂತ್ರ | ೬೭ |
| ಪ್ರತಿಪದಾರ್ಥ | ೬೭ |
| ತಾತ್ಪರ್ಯ | ೬೭ |
| ರಂಗರಾಮಾನುಜಭಾಷ್ಯ | ೬೭ |
| ಅನುವಾದ | ೬೭-೬೮ |
| ಭಾಷ್ಯಸಾರ | ೬೮ |


## ಮಂತ್ರ - ೯


| | |
|---|---|
| ಮಂತ್ರ | ೬೮ |
| ಪ್ರತಿಪದಾರ್ಥ | ೬೮ |
| ತಾತ್ಪರ್ಯ | ೬೯ |
| ರಂಗರಾಮಾನುಜಭಾಷ್ಯ | ೬೯ |
| ಅನುವಾದ | ೬೯ |
| ಭಾಷ್ಯಸಾರ | ೬೯ |

## ಮಂತ್ರ - ೧೦


| ವಿಷಯ | ಪುಟ |
|---|---|
| ಮಂತ್ರ | ೭೦ |
| ಪ್ರತಿಪದಾರ್ಥ | ೭೦ |
| ತಾತ್ಪರ್ಯ | ೭೦ |
| ರಂಗರಾಮಾನುಜಭಾಷ್ಯ | ೭೦ |
| ಅನುವಾದ | ೭೦-೭೧ |
| ಭಾಷ್ಯಸಾರ | ೭೧ |


## ಮಂತ್ರ - ೧೧


| | |
|---|---|
| ಮಂತ್ರ | ೭೧ |
| ಪ್ರತಿಪದಾರ್ಥ | ೭೧ |
| ತಾತ್ಪರ್ಯ | ೭೧ |
| ರಂಗರಾಮಾನುಜಭಾಷ್ಯ | ೭೧-೭೨ |
| ಅನುವಾದ | ೭೨ |
| ಭಾಷ್ಯಸಾರ | ೭೨ |


## ಮಂತ್ರ - ೧೨


| | |
|---|---|
| ಮಂತ್ರ | ೭೩ |
| ಪ್ರತಿಪದಾರ್ಥ | ೭೩ |
| ತಾತ್ಪರ್ಯ | ೭೩ |
| ರಂಗರಾಮಾನುಜಭಾಷ್ಯ | ೭೩ |
| ಅನುವಾದ | ೭೩-೭೪ |
| ಭಾಷ್ಯಸಾರ | ೭೪ |


## ಮಂತ್ರ - ೧೩


| | |
|---|---|
| ಮಂತ್ರ | ೭೪ |
| ಪ್ರತಿಪದಾರ್ಥ | ೭೪-೭೫ |
| ತಾತ್ಪರ್ಯ | ೭೫ |
| ರಂಗರಾಮಾನುಜಭಾಷ್ಯ | ೭೫ |
| ಅನುವಾದ | ೭೫ |
| ಭಾಷ್ಯಸಾರ | ೭೫ |

# ತೃತೀಯ ಪ್ರಶ್ನಃ

## ಮಂತ್ರ - ೧


| ವಿಷಯ | ಪುಟ |
|---|---|
| ಮಂತ್ರ | ೭೬ |
| ಪ್ರತಿಪದಾರ್ಥ | ೭೬-೭೭ |
| ತಾತ್ಪರ್ಯ | ೭೭ |
| ರಂಗರಾಮಾನುಜಭಾಷ್ಯ | ೭೭ |
| ಅನುವಾದ | ೭೭ |
| ಭಾಷ್ಯಸಾರ | ೭೭-೭೮ |


## ಮಂತ್ರ - ೨


| | |
|---|---|
| ಮಂತ್ರ | ೭೮ |
| ಪ್ರತಿಪದಾರ್ಥ | ೭೯ |
| ತಾತ್ಪರ್ಯ | ೭೯ |
| ರಂಗರಾಮಾನುಜಭಾಷ್ಯ | ೭೯ |
| ಅನುವಾದ | ೭೯ |
| ಭಾಷ್ಯಸಾರ | ೭೯-೮೦ |


## ಮಂತ್ರ - ೩


| | |
|---|---|
| ಮಂತ್ರ | ೮೦ |
| ಪ್ರತಿಪದಾರ್ಥ | ೮೧ |
| ತಾತ್ಪರ್ಯ | ೮೧ |
| ರಂಗರಾಮಾನುಜಭಾಷ್ಯ | ೮೧ |
| ಅನುವಾದ | ೮೧-೮೨ |
| ಭಾಷ್ಯಸಾರ | ೮೨-೮೩-೮೪ |


## ಮಂತ್ರ - ೪


| | |
|---|---|
| ಮಂತ್ರ | ೮೪-೮೫ |
| ಪ್ರತಿಪದಾರ್ಥ | ೮೫ |
| ತಾತ್ಪರ್ಯ | ೮೫ |
| ರಂಗರಾಮಾನುಜಭಾಷ್ಯ | ೮೫ |
| ಅನುವಾದ | ೮೫-೮೬ |
| ಭಾಷ್ಯಸಾರ | ೮೬ |

## ಮಂತ್ರ - ೫


| ವಿಷಯ | ಪುಟ |
|---|---|
| ಮಂತ್ರ | ೮೭ |
| ಪ್ರತಿಪದಾರ್ಥ | ೮೭ |
| ತಾತ್ಪರ್ಯ | ೮೭-೮೮ |
| ರಂಗರಾಮಾನುಜಭಾಷ್ಯ | ೮೮ |
| ಅನುವಾದ | ೮೮ |
| ಭಾಷ್ಯಸಾರ | ೮೯ |


## ಮಂತ್ರ - ೬


| | |
|---|---|
| ಮಂತ್ರ | ೮೯ |
| ಪ್ರತಿಪದಾರ್ಥ | ೯೦ |
| ತಾತ್ಪರ್ಯ | ೯೦ |
| ರಂಗರಾಮಾನುಜಭಾಷ್ಯ | ೯೦ |
| ಅನುವಾದ | ೯೦ |
| ಭಾಷ್ಯಸಾರ | ೯೧ |


## ಮಂತ್ರ - ೭


| | |
|---|---|
| ಮಂತ್ರ | ೯೧ |
| ಪ್ರತಿಪದಾರ್ಥ | ೯೧ |
| ತಾತ್ಪರ್ಯ | ೯೧-೯೨ |
| ರಂಗರಾಮಾನುಜಭಾಷ್ಯ | ೯೨ |
| ಅನುವಾದ | ೯೨ |
| ಭಾಷ್ಯಸಾರ | ೯೨-೯೩ |


## ಮಂತ್ರ - ೮


| | |
|---|---|
| ಮಂತ್ರ | ೯೩-೯೪ |
| ಪ್ರತಿಪದಾರ್ಥ | ೯೪ |
| ತಾತ್ಪರ್ಯ | ೯೪ |
| ರಂಗರಾಮಾನುಜಭಾಷ್ಯ | ೯೪, ೯೫ |
| ಅನುವಾದ | ೯೫ |
| ಭಾಷ್ಯಸಾರ | ೯೫, ೯೬ |

## ಮಂತ್ರ - ೯


| ವಿಷಯ | ಪುಟ |
|---|---|
| ಮಂತ್ರ | ೯೬ |
| ಪ್ರತಿಪದಾರ್ಥ | ೯೬ |
| ತಾತ್ಪರ್ಯ | ೯೬ |
| ರಂಗರಾಮಾನುಜಭಾಷ್ಯ | ೯೭-೯೮ |
| ಅನುವಾದ | ೯೮-೯೯ |
| ಭಾಷ್ಯಸಾರ | ೯೯ |


## ಮಂತ್ರ - ೧೦


| | |
|---|---|
| ಮಂತ್ರ | ೧೦೦ |
| ಪ್ರತಿಪದಾರ್ಥ | ೧೦೦ |
| ತಾತ್ಪರ್ಯ | ೧೦೦ |
| ರಂಗರಾಮಾನುಜಭಾಷ್ಯ (೯ನೇ ಮಂತ್ರದಲ್ಲಿ ಅಳವಡಿಸಿದೆ) | |
| ಅನುವಾದ (೯ನೇ ಮಂತ್ರದಲ್ಲಿ ಅಳವಡಿಸಿದೆ) | |
| ಭಾಷ್ಯಸಾರ | ೧೦೦-೧೦೧ |


## ಮಂತ್ರ - ೧೧


| | |
|---|---|
| ಮಂತ್ರ | ೧೦೧ |
| ಪ್ರತಿಪದಾರ್ಥ | ೧೦೧ |
| ತಾತ್ಪರ್ಯ | ೧೦೧ |
| ರಂಗರಾಮಾನುಜಭಾಷ್ಯ | ೧೦೨ |
| ಅನುವಾದ | ೧೦೨ |
| ಭಾಷ್ಯಸಾರ | ೧೦೨ |


## ಮಂತ್ರ - ೧೨


| | |
|---|---|
| ಮಂತ್ರ | ೧೦೩ |
| ಪ್ರತಿಪದಾರ್ಥ | ೧೦೩ |
| ತಾತ್ಪರ್ಯ | ೧೦೩ |
| ರಂಗರಾಮಾನುಜಭಾಷ್ಯ | ೧೦೩-೧೦೪ |
| ಅನುವಾದ | ೧೦೪ |
| ಭಾಷ್ಯಸಾರ | ೧೦೪ |

# ಚತುರ್ಥ ಪ್ರಶ್ನಃ

## ಮಂತ್ರ - ೧


| ವಿಷಯ | ಪುಟ |
|---|---|
| ಮಂತ್ರ | ೧೦೫ |
| ಪ್ರತಿಪದಾರ್ಥ | ೧೦೫ |
| ತಾತ್ಪರ್ಯ | ೧೦೫-೧೦೬ |
| ರಂಗರಾಮಾನುಜಭಾಷ್ಯ | ೧೦೬ |
| ಅನುವಾದ | ೧೦೬ |
| ಭಾಷ್ಯಸಾರ | ೧೦೬-೧೦೭ |


## ಮಂತ್ರ - ೨


| | |
|---|---|
| ಮಂತ್ರ | ೧೦೭-೧೦೮ |
| ಪ್ರತಿಪದಾರ್ಥ | ೧೦೮ |
| ತಾತ್ಪರ್ಯ | ೧೦೮-೧೦೯ |
| ರಂಗರಾಮಾನುಜಭಾಷ್ಯ | ೧೦೯ |
| ಅನುವಾದ | ೧೦೯-೧೧೦ |
| ಭಾಷ್ಯಸಾರ | ೧೧೦ |


## ಮಂತ್ರ - ೩


| | |
|---|---|
| ಮಂತ್ರ | ೧೧೦ |
| ಪ್ರತಿಪದಾರ್ಥ | ೧೧೧ |
| ತಾತ್ಪರ್ಯ | ೧೧೧ |
| ರಂಗರಾಮಾನುಜಭಾಷ್ಯ | ೧೧೧-೧೧೨ |
| ಅನುವಾದ | ೧೧೨ |
| ಭಾಷ್ಯಸಾರ | ೧೧೨-೧೧೩ |


## ಮಂತ್ರ - ೪


| | |
|---|---|
| ಮಂತ್ರ | ೧೧೩-೧೧೪ |
| ಪ್ರತಿಪದಾರ್ಥ | ೧೧೪ |
| ತಾತ್ಪರ್ಯ | ೧೧೪ |
| ರಂಗರಾಮಾನುಜಭಾಷ್ಯ (೩ನೇ ಮಂತ್ರದಲ್ಲಿ ಅಳವಡಿಸಲಾಗಿದೆ) | |
| ಅನುವಾದ (೩ನೇ ಮಂತ್ರದಲ್ಲಿ ಅಳವಡಿಸಲಾಗಿದೆ) | |
| ಭಾಷ್ಯಸಾರ | ೧೧೪-೧೧೫ |

## ಮಂತ್ರ - ೫


| ವಿಷಯ | ಪುಟ |
|---|---|
| ಮಂತ್ರ | ೧೧೫ |
| ಪ್ರತಿಪದಾರ್ಥ | ೧೧೫-೧೧೬ |
| ತಾತ್ಪರ್ಯ | ೧೧೬ |
| ರಂಗರಾಮಾನುಜಭಾಷ್ಯ | ೧೧೬ |
| ಅನುವಾದ | ೧೧೬-೧೧೭ |
| ಭಾಷ್ಯಸಾರ | ೧೧೭-೧೧೮ |


## ಮಂತ್ರ - ೬


| | |
|---|---|
| ಮಂತ್ರ | ೧೧೮ |
| ಪ್ರತಿಪದಾರ್ಥ | ೧೧೮ |
| ತಾತ್ಪರ್ಯ | ೧೧೮ |
| ರಂಗರಾಮಾನುಜಭಾಷ್ಯ | ೧೧೮-೧೧೯ |
| ಅನುವಾದ | ೧೧೯ |
| ಭಾಷ್ಯಸಾರ | ೧೧೯-೧೨೦ |


## ಮಂತ್ರ - ೭


| | |
|---|---|
| ಮಂತ್ರ | ೧೨೦ |
| ಪ್ರತಿಪದಾರ್ಥ | ೧೨೦ |
| ತಾತ್ಪರ್ಯ | ೧೨೦ |
| ರಂಗರಾಮಾನುಜಭಾಷ್ಯ | ೧೨೦ |
| ಅನುವಾದ | ೧೨೦-೧೨೧ |
| ಭಾಷ್ಯಸಾರ | ೧೨೧ |


## ಮಂತ್ರ - ೮


| | |
|---|---|
| ಮಂತ್ರ | ೧೨೧-೧೨೨ |
| ಪ್ರತಿಪದಾರ್ಥ | ೧೨೨ |
| ತಾತ್ಪರ್ಯ | ೧೨೩ |
| ರಂಗರಾಮಾನುಜಭಾಷ್ಯ | ೧೨೩ |
| ಅನುವಾದ | ೧೨೩ |
| ಭಾಷ್ಯಸಾರ | ೧೨೩-೧೨೪ |

## ಮಂತ್ರ - ೯


| ವಿಷಯ | ಪುಟ |
| --- | --- |
| ಮಂತ್ರ | ೧೨೫ |
| ಪ್ರತಿಪದಾರ್ಥ | ೧೨೫ |
| ತಾತ್ಪರ್ಯ | ೧೨೫ |
| ರಂಗರಾಮಾನುಜಭಾಷ್ಯ (೮ನೇ ಮಂತ್ರದಲ್ಲಿ ಅಳವಡಿಸಿದೆ) | |
| ಅನುವಾದ (೮ನೇ ಮಂತ್ರದಲ್ಲಿ ಅಳವಡಿಸಿದೆ) | |
| ಭಾಷ್ಯಸಾರ | ೧೨೫-೧೨೬ |


## ಮಂತ್ರ - ೧೦


| | |
| --- | --- |
| ಮಂತ್ರ | ೧೨೬ |
| ಪ್ರತಿಪದಾರ್ಥ | ೧೨೬ |
| ತಾತ್ಪರ್ಯ | ೧೨೬ |
| ರಂಗರಾಮಾನುಜಭಾಷ್ಯ | ೧೨೬-೧೨೭ |
| ಅನುವಾದ | ೧೨೭ |
| ಭಾಷ್ಯಸಾರ | ೧೨೭ |


## ಮಂತ್ರ - ೧೧


| | |
| --- | --- |
| ಮಂತ್ರ | ೧೨೮ |
| ಪ್ರತಿಪದಾರ್ಥ | ೧೨೮ |
| ತಾತ್ಪರ್ಯ | ೧೨೮ |
| ರಂಗರಾಮಾನುಜಭಾಷ್ಯ | ೧೨೯ |
| ಅನುವಾದ | ೧೨೯ |
| ಭಾಷ್ಯಸಾರ | ೧೨೯ |


## ಪಂಚಮ ಪ್ರಶ್ನಃ
## ಮಂತ್ರ - ೧


| | |
| --- | --- |
| ಮಂತ್ರ | ೧೩೦ |
| ಪ್ರತಿಪದಾರ್ಥ | ೧೩೦ |
| ತಾತ್ಪರ್ಯ | ೧೩೦ |
| ರಂಗರಾಮಾನುಜಭಾಷ್ಯ | ೧೩೧ |
| ಅನುವಾದ | ೧೩೧ |
| ಭಾಷ್ಯಸಾರ | ೧೩೧ |

## ಮಂತ್ರ - ೨


| ವಿಷಯ | ಪುಟ |
|---|---|
| ಮಂತ್ರ | ೧೩೧-೧೩೨ |
| ಪ್ರತಿಪದಾರ್ಥ | ೧೩೨ |
| ತಾತ್ಪರ್ಯ | ೧೩೨ |
| ರಂಗರಾಮಾನುಜಭಾಷ್ಯ | ೧೩೨ |
| ಅನುವಾದ | ೧೩೨-೧೩೩ |
| ಭಾಷ್ಯಸಾರ | ೧೩೩ |


## ಮಂತ್ರ - ೩


| | |
|---|---|
| ಮಂತ್ರ | ೧೩೪ |
| ಪ್ರತಿಪದಾರ್ಥ | ೧೩೪ |
| ತಾತ್ಪರ್ಯ | ೧೩೪-೧೩೫ |
| ರಂಗರಾಮಾನುಜಭಾಷ್ಯ | ೧೩೫ |
| ಅನುವಾದ | ೧೩೫ |
| ಭಾಷ್ಯಸಾರ | ೧೩೫-೧೩೬ |


## ಮಂತ್ರ - ೪


| | |
|---|---|
| ಮಂತ್ರ | ೧೩೬-೧೩೭ |
| ಪ್ರತಿಪದಾರ್ಥ | ೧೩೭ |
| ತಾತ್ಪರ್ಯ | ೧೩೭ |
| ರಂಗರಾಮಾನುಜಭಾಷ್ಯ | ೧೩೭ |
| ಅನುವಾದ | ೧೩೮ |
| ಭಾಷ್ಯಸಾರ | ೧೩೮ |


## ಮಂತ್ರ - ೫


| | |
|---|---|
| ಮಂತ್ರ | ೧೩೯ |
| ಪ್ರತಿಪದಾರ್ಥ | ೧೩೯-೧೪೦ |
| ತಾತ್ಪರ್ಯ | ೧೪೦ |
| ರಂಗರಾಮಾನುಜಭಾಷ್ಯ | ೧೪೦-೧೪೧ |
| ಅನುವಾದ | ೧೪೧-೧೪೨ |
| ಭಾಷ್ಯಸಾರ | ೧೪೨ |

# ಪ್ರಸ್ತಾವನೆ

## ವೇದ

ಪ್ರಾಚೀನ ಪರಂಪರೆಯಲ್ಲಿ ಋಷಿಗಳು ಜ್ಞಾನಕ್ಕಾಗಿ ಹಂಬಲಿಸುತ್ತಿದ್ದರು· ಸ್ವಸಂಯಮದಿಂದ ತಪಸ್ಸುಮಾಡಿದರು· ಅವರ ನಿರಂತರ ಪರಿಶ್ರಮತಪಃಫಲವೇ ವೇದ· ಈ ಪದದ ಧಾತು ವಿದ್ ಎಂದು; ಎಂದರೆ ಜ್ಞಾನವೆಂದರ್ಥ· ಭಾರತೀಯ ಧರ್ಮ ಮತ್ತು ಸಂಸ್ಕೃತಿಗೆ ಈ ವೇದಗಳೇ ಆಧಾರಸ್ತಂಭಗಳು ಇವು ಅಪೌರುಷೇಯ ಎಂದು ಪರಿಗಣಿಸಲ್ಪಟ್ಟಿವೆ ·

ಆಧುನಿಕರ ದೃಷ್ಟಿಯಿಂದ ವಿಶ್ವಸಾಹಿತ್ಯದಲ್ಲಿ ಅತ್ಯಂತ ಪ್ರಾಚೀನವಾದುದು ವೇದ · ಇದು ಜ್ಞಾನಭಂಡಾರ · ಸಕಲಶಾಸ್ತ್ರಗಳ ನೆಲೆವೀಡು · ಆಧ್ಯಾತ್ಮಿಕತೆಗೆ ಭದ್ರಬುನಾದಿ · ಶಾಂತಿದಾಯಕ · ಭಾರತೀಯ ದರ್ಶನ ಶಾಸ್ತ್ರದಲ್ಲಿ ವ್ಯಷ್ಟಿಯಲ್ಲೂ ಸಮಷ್ಟಿಯುಂಟು · ವಿಶ್ಲೇಷ-ಸಂಶ್ಲೇಷಗಳ ಸಮತೋಲನವುಂಟು · ಇದಕ್ಕೆ ಕಾರಣ ವೇದಾಧ್ಯಯನವೆಂದೇ ಹೇಳಬೇಕು · ಭಾರತೀಯರು ತಪಸ್ವಿಗಳಾದುದಕ್ಕೆ ಇಡೀ ಭೂಮಂಡಲದಲ್ಲಿ ನಮ್ಮ ದೇಶವಿರುವ ಸ್ಥಾನ, ಭೌಗೋಳಿಕ, ಮತ್ತು ಪ್ರಾಕೃತಿಕ ಕಾರಣಗಳೂ ಬಹಳ ಮುಖ್ಯವಾದುವು·

ಹಿಂದೂಧರ್ಮಕ್ಕೆ ವಿಶ್ವಧರ್ಮವಾಗಬಲ್ಲ ಮಹಾಚೈತನ್ಯ ಉಂಟು · ಅದು ಬಂದದ್ದು ವೇದದಿಂದಲೇ ತಾನೇ! ಮೊದಲಿಗೆ ವೇದವು ಅಖಂಡವಾಗಿದ್ದಿತು · ಅಧ್ಯಯನಸೌಕರ್ಯಕ್ಕಾಗಿ ಅದರ ವಿಂಗಡಣೆ-ಯಾಯಿತು · ಇತ್ತೀಚೆಗೆ ಅದನ್ನು ಮಾಡಿದವರು ವೇದವ್ಯಾಸರು · ಅದರ ವಿಭಾಗಗಳು ಋಗ್ವೇದ, ಯಜುರ್ವೇದ, ಸಾಮವೇದ ಮತ್ತು ಅಥರ್ವವೇದಗಳು· ಪ್ರತಿಪ್ರಭೇದದಲ್ಲೂ ಶಾಖೋಪಶಾಖೆಗಳಿವೆ ಋಕ್ಕಿಗೆ ೨೧, ಯಜುಸ್ಸಿಗೆ ೧೦೧, ಸಾಮಕ್ಕೆ ಸಾಸಿರ ಮತ್ತು ಅಥರ್ವಕ್ಕೆ ನವಶಾಖೆಗಳಿವೆ · ವೇದದಲ್ಲಿ ಸಂಹಿತಾ, ಬ್ರಾಹ್ಮಣ, ಆರಣ್ಯಕ ಮತ್ತು ಉಪನಿಷತ್ತುಗಳೆಂಬ ಭಾಗಗಳಿವೆ · ಖಿಲವೆಂಬುದು ಮತ್ತೊಂದು·

ಸಂಹಿತೆಯಲ್ಲಿರುವುದು ಮಂತ್ರ ಸಂಚಯ · ಬ್ರಾಹ್ಮಣಗಳು ತಿಳಿಸುವುದು ಮಂತ್ರಪ್ರಯೋಗ, ಮಂತ್ರಾರ್ಥಗಳನ್ನು , ವೇದದಲ್ಲಡಗಿರುವ ನಿಗೂಢತತ್ವಗಳು ಆರಣ್ಯಕಗಳಲ್ಲೂ ಇವೆ · ಅವುಗಳ ಅಧ್ಯಯನ, ಅಧ್ಯಾಪನಗಳು ಅರಣ್ಯದಲ್ಲೇ ಆಗಬೇಕು ವೇದದ ಅಂತಿಮ ಭಾಗಗಳೇ ಉಪನಿಷತ್ತುಗಳು ಇವುಗಳಲ್ಲಡಗಿರುವುದು ಪರತತ್ವದ ವಿಚಾರ · ಖಿಲದಲ್ಲಿ ಶಾಖಾಂತರಗಳು ನಷ್ಟವಾಗಿವೆ · ಅವಶ್ಯಕವಾದಷ್ಟು ಮಾತ್ರ ಉಳಿದಿವೆ·

ವಿಷಯದ ದೃಷ್ಟಿಯಿಂದ ವೇದದಲ್ಲಿ ಕಾಂಡದ್ವಯಗಳಿವೆ. ಅವುಗಳೇ ಕರ್ಮಕಾಂಡ ಮತ್ತು ಜ್ಞಾನಕಾಂಡ. ಇದು ಕೇವಲ ಸ್ಥೂಲದೃಷ್ಟಿಗೆ ಮಾತ್ರ ಕಾಣುವ ವಿಭಾಗ. ಸೂಕ್ಷ್ಮಾವಲೋಕನದಲ್ಲಿ ಪ್ರಭೇದವೇ ತೋರಿಬರದು. ಸಂಹಿತೆ ಮತ್ತು ಬ್ರಾಹ್ಮಣಗಳು ಕರ್ಮಕಾಂಡಕ್ಕೆ ಸೇರುತ್ತವೆ. ಇಲ್ಲಿ ಯಜ್ಞಯಾಗಾದಿ ಕರ್ಮಗಳ ವಿವರಣೆ ಅಡಗಿದೆ. ಆರಣ್ಯಕ ಹಾಗೂ ಉಪನಿಷತ್ತುಗಳು ಜ್ಞಾನಕಾಂಡವೆನಿಸುತ್ತವೆ. ಇಲ್ಲಿ ಅಡಗಿರುವುದು ಪರಮಾತ್ಮಾನುಭವ, ಜಗತ್ಸೃಷ್ಟಿ ಮತ್ತು ಕಾರ್ಯಕಾರಣಗಳ ಹಿನ್ನೆಲೆ ಹಾಗೂ ರಹಸ್ಯ.

ಅಚ್ಚಾದ ಗ್ರಂಥಗಳು ಕಾಲನ ಕರಾಳಗರ್ಭದಲ್ಲಿ ಸಿಕ್ಕು ನಶಿಸಲೂಬಹುದು; ಎಂದೇ ವೇದಾಧ್ಯಯನವು ಅನೂಚಾನವಾಗಿ ನಡೆದುಬಂದಿದೆ. ಶ್ರೌತಪರಂಪರೆಯಿಂದಲೇ ಅದರ ರಕ್ಷಣೆ-ಯಾಗುತ್ತಾ ಬಂದಿದೆ. ಆಚಾರ್ಯರು ಅಂತೇವಾಸಿಗಳಿಗೆ ಸ್ವರಸಹಿತವಾಗಿ ಕಲಿಸುತ್ತಾರೆ. ಉದಾತ್ತ, ಅನುದಾತ್ತ ಮತ್ತು ಸ್ವರಿತ-(ಪ್ರಚಯ)ಗಳೇ ಆ ಸ್ವರಗಳು. ಸ್ವರವ್ಯತ್ಯಾಸವಾದಾಗ ಅರ್ಥವು ಅನರ್ಥವಾಗುವುದು ಎಂದೇ ಸ್ವರವು ಅತೀವ ಮುಖ್ಯವಾದುದು. ಸ್ಮರಣಾನುಕೂಲ್ಯಕ್ಕಾಗಿ ಪದ, ಕ್ರಮ, ಜಟಾ, ಘನವೆಂಬ ಆವೃತ್ತಿಗಳಿವೆ. ಪದಪಾಠದಲ್ಲಿ ಕಾಣುವ ಸ್ವರಭೇದವೂ ವೈದಿಕವ್ಯಾಕರಣನಿಯಮವನ್ನನುಸರಿಸಿಯೇ ಆಗಿದೆ.

ಹೀಗೆ ವೇದದಲ್ಲಿ ಶಬ್ದಾರ್ಥಗಳಷ್ಟೇ ಅಲ್ಲದೆ, ಅಣುಅಣುವಿನಲ್ಲೂ ನಾದ ತುಂಬಿದೆ. ನಾದಕ್ಕೆ ಶಕ್ತಿಯುಂಟು. ಇದನ್ನು ಆಧುನಿಕಭೌತವಿಜ್ಞಾನವೂ ಒಪ್ಪಿದೆ. ಇದು ಸಕಲಶಾಸ್ತ್ರಗಳ ನೆಲೆವನೆಯೆಂದು ಹಿಂದೆಯೇ ನುಡಿದದ್ದುಂಟು! ನಾದತರಂಗ ಅಥವಾ ಶಬ್ದತರಂಗಗಳ ಪರಸ್ಪರ ದೂರದ ಮೇಲೆ ಆ ಶಕ್ತಿಯ ಮೌಲ್ಯ ಅವಲಂಬಿಸಿರುತ್ತದೆ. ಶಕ್ತಿಯನ್ನು ಸೃಜಿಸಲೂ ಆಗದು. ಅದನ್ನು ನಾಶಪಡಿಸಲೂ ಸಾಧ್ಯವಿಲ್ಲ. ಆದರದು ರೂಪಾಂತರ ಹೊಂದಬಲ್ಲುದು. ವಿದ್ಯುತ್ತಿನಿಂದ ಶಾಖ ಮತ್ತು ಬೆಳಕನ್ನು ಪಡೆವಂತೆ. ಅದೇ ವಿದ್ಯುಚ್ಛಕ್ತಿಯ ಸಹಾಯದಿಂದಲೇ ಶಬ್ದತರಂಗಗಳನ್ನು ಧ್ವನಿಮುದ್ರಣಗಳಲ್ಲಿ ಸೆರೆಹಿಡಿಯಲಾಗುವುದಷ್ಟೆ.

ಅಂತೆಯೇ ವೇದವನ್ನು ಪರಿಪೂರ್ಣವಾಗಿ ಸ್ವರಬದ್ಧವಾಗಿ ಉಚ್ಚರಿಸಿದಾಗ, ನಾದತರಂಗದಲ್ಲಿ ಅಡಗಿರುವ ಅದ್ಭುತ ಶಕ್ತಿ ರೂಪಾಂತರ ಹೊಂದಬಲ್ಲುದು. ಅದಕ್ಕೆ ನಿದರ್ಶನಗಳೂ ಇಲ್ಲದಿಲ್ಲ. ೧೯೭೭ರಲ್ಲಿ ಓದಿದ ನೆನಪು. ದೆಹಲಿಯಲ್ಲಿ ವಿಜ್ಞಾನಿಗಳ ಮತ್ತು ಹಿರಿಯ ವಿದ್ವಜ್ಜನರ ಸಭೆ ಸೇರಿತ್ತು. ವೇದಮಂತ್ರೋಚ್ಚಾರಣೆ ಸ್ವರಸಹಿತವಾಗಿ ನಡೆದಿತ್ತು. ವೇದಾಧ್ಯಯನಸಂಪನ್ನರೊಬ್ಬರಿಂದ ಸ್ಥಳದಲ್ಲೇ ಯಜ್ಞೇಶ್ವರ ಸಮುದ್ಭೂತನಾಗಿದ್ದ. ಯಾವುದೇ ಮಾಯ-ಮಂತ್ರಗಳಿಂದಲ್ಲ. ಅದು ಕೇವಲ ವೇದದಿಂದ ಆಗಿತ್ತು. ಬೆಂಕಿಯನ್ನು ಉತ್ಪಾದಿಸುವ ಯಾವುದೇ ಉಪಕರಣಗಳನ್ನು ಅವರು ಬಳಸಿರಲಿಲ್ಲ. ವೇದಮಂತ್ರಶಕ್ತಿ ನಿದರ್ಶನಕ್ಕೂ ಸಿಕ್ಕಿದೆಯಲ್ಲವೆ?

ಉಳಿದ ಶಾಸ್ತ್ರಗಳ ಬಗ್ಗೆ ಎರಡು ನುಡಿಗಳನ್ನು ಹೇಳುವುದಾದರೆ ಸಂಗೀತವು ಸಾಮವೇದ-ಜನ್ಯವಾದುದು. ಅಂತೆಯೇ ಗಣಿತ, ಶಿಲ್ಪಶಾಸ್ತ್ರ ಮತ್ತು ನಾಟ್ಯ ಇತ್ಯಾದಿ ಅನೇಕ ಶಾಸ್ತ್ರಗಳಿಗೂ ವೇದವೇ

ತವರೂರು· ಅಥರ್ವಣದಲ್ಲಿ ರಾಜನೀತಿಯ ವಿಚಾರಗಳಿವೆ· ಅಂತೆಯೇ ಭೌತ ರಾಸಾಯನಾದಿ ನವೀನ ವಿಜ್ಞಾನಗಳು ಅಡಗಿರಲೂಬಹುದು · ಇವೆಲ್ಲವನ್ನೂ ಅರಿತಮೇಲೂ ಋಷಿಗಳು ತಮ್ಮ ತಪಸ್ಸನ್ನು ಮುಂದುವರೆಸುತ್ತಲೇ ಇದ್ದರು · ಅದಕ್ಕೆ ಕಾರಣವಿಲ್ಲದಿಲ್ಲ · ಉಳಿದೆಲ್ಲ ಶಾಸ್ತ್ರಗಳ ಅಧ್ಯಯನದಿಂದ ಈ ಲೋಕದ ಜೀವನದಲ್ಲಿ ಉತ್ತಮರಾಗುತ್ತೇವೆ · ಲೌಕಿಕಸುಖವೊಂದು · ಪಾರಲೌಕಿಕಹಿತ ಮತ್ತೊಂದು ಸೌಖ್ಯವಿದ್ದರೆ ಪ್ರೇಯಸ್ಸು · ಶಾಂತಿಯಿದ್ದರೆ ಶ್ರೇಯಸ್ಸು · ಇಷ್ಟೆಲ್ಲಕ್ಕೂ ಜ್ಞಾನನಿಧಿಯಂತಿರುವ ವೇದಕ್ಕೆ ಷಡಂಗಗಳಿವೆ ಎನ್ನುತ್ತಾರೆ·

'ಶಿಕ್ಷಾ ವ್ಯಾಕರಣಂ ಛಂದಃ ನಿರುಕ್ತಂ ಜ್ಯೋತಿಷಂ ತಥಾ ।
ಕಲ್ಪಶ್ಚೇತಿ ಷಡಂಗಾನಿ ವೇದಸ್ಯಾಹುರ್ಮನೀಷಿಣಃ ॥'

ಅದಕ್ಕೆ ಉಪಾಂಗಗಳು ನಾಲ್ಕು· ಪುರಾಣ, ನ್ಯಾಯ, ಮೀಮಾಂಸಾ ಮತ್ತು ಧರ್ಮಶಾಸ್ತ್ರ·

ವೇದಾಧ್ಯಯನಕ್ಕೆ ಎರಡು ಸಂಪ್ರದಾಯಗಳಿವೆ · ಒಂದು ಬ್ರಹ್ಮಸಂಪ್ರದಾಯ · ಮತ್ತೊಂದು ಆದಿತ್ಯಸಂಪ್ರದಾಯ·

ವೇದಾಭ್ಯಾಸದಿಂದ ನಮಗೆ ಶ್ರೇಯಸ್ಸು, ಶಾಂತಿ ದೊರಕಬೇಕು · ಆಗಲೇ ತಮೇವ ವಿದ್ವಾನ್ ಅಮೃತಮಿಹ ಭವತಿ · ಜಗತ್ತಿನ ಸೃಷ್ಟಿ-ಸ್ಥಿತಿ-ಲಯಗಳು ಕಾರ್ಯಗಳು · ಅದಕ್ಕೆ ಕಾರಣ ಅವುದು? ಅದರ ಹಿಂದೆ ಅಡಗಿರುವ ರಹಸ್ಯವೇನು? ತತ್ವತ್ರಯಗಳ ಅಸ್ತಿತ್ವ ಸರ್ವವಿದಿತ · ಅವು ಜಡ, ಜೀವ ಮತ್ತು ಪರಮಾತ್ಮ · ಪರಮಾತ್ಮ ಅನುಭವೈಕವೇದ್ಯ· ಆ ಅನುಭವವೇ ದಿವ್ಯಾನುಭವ· ಪರಬ್ರಹ್ಮ · ಇಂದ್ರಿಯಾ-ಗೋಚರ, ಇಂದ್ರಿಯಾತೀತ· ಎಂದೇ ನಲ್ನುಡಿಯೊಂದುಂಟು·

'ಏನಂ ವಿದಂತಿ ವೇದೇನ ತಸ್ಮಾತ್ ವೇದಸ್ಯ ವೇದತಾ' ॥

## ಉಪನಿಷತ್ತುಗಳು

ಇದನ್ನು ಅರಿತಾಗಲೇ ವೇದವೂ ಅನುಭವೈಕವೇದ್ಯವಾಗುತ್ತದೆ · ಯಾವುದನ್ನು? ಯಾವುದರ ತಿಳಿವಿನಿಂದ ಜ್ಞಾನವು ಪರಿಪೂರ್ಣವಾಗುತ್ತದೆ? ಏನನ್ನು ಅರಿತಾಗ ಉಳಿದೆಲ್ಲವೂ ಅರ್ಥವಾದೀತು?

ಇಂತಹ ಪ್ರಶ್ನೆಗಳು ಬಹುಶಃ ಎಲ್ಲ ವಿಚಾರವಾದಿಗಳನ್ನೂ ಬಡಿದೆಬ್ಬಿಸುತ್ತವೆ · ಭಾರತೀಯ ತತ್ತ್ವಜ್ಞಾನಿಗಳು ತಮ್ಮ ತಪೋಬಲದಿಂದ ಆ ಪ್ರಶ್ನೆಗಳಿಗೆ ಉತ್ತರವನ್ನು ಕಂಡುಹಿಡಿದರು · ಅವರೆಲ್ಲ ಸತ್ಯಾನ್ವೇಷಣೆಯತ್ತ ನಿರ್ಭೀಕರಾಗಿ ಹೋರಾಟವನ್ನು ನಡೆಸಿದವರು · ಅವರ ಆ ಅನುಭವವಾಣಿಯೇ ಉಪನಿಷದ್ವಾಣಿ · ಅದರಿಂದ ಮನನೀಯವಾದುದೇ ಪರಬ್ರಹ್ಮ · ಬ್ರಹ್ಮಶಬ್ದದ ಅರ್ಥ ಹಿರಿದು ಎಂದು· ಅದು ಎಲ್ಲಕ್ಕಿಂತಲೂ ಹಿರಿದಾದುದು· ಎಲ್ಲವನ್ನೂ ಹಿರಿದನ್ನಾಗಿಸುವ ಚೈತನ್ಯವೂ ಅದಕ್ಕುಂಟು·

ಸೃಷ್ಟಿಯ ಆದಿಯಲ್ಲಿ ಪರಬ್ರಹ್ಮವೊಂದೇ ಇತ್ತು. ಉಳಿದೆಲ್ಲವೂ ಅದರಲ್ಲೇ ಸೂಕ್ಷ್ಮರೂಪದಲ್ಲಿ ಅಡಕವಾಗಿದ್ದವು. ಬಳಿಕ ಕ್ರಮೇಣ ಪರಬ್ರಹ್ಮದ ಸೃಜನಶಕ್ತಿಯಿಂದಲೇ ಕಾಲಕ್ರಮದಲ್ಲಿ ಜಡ ಮತ್ತು ಜೀವಗಳು ಸೃಷ್ಟವಾದುವು. ಇದೆಲ್ಲವೂ ಉಪನಿಷಚ್ಛ್ರುತಿಪಾದ್ಯವಿಷಯಗಳು. ಉಪನಿಷದ್ರಹಸ್ಯವೇ ಬ್ರಹ್ಮಜ್ಞಾನ.

ಉಪನಿಷತ್ ಪದವು ಷದಲೃ ಧಾತು ಮೂಲವಾದುದು. ಉಪ ಮತ್ತು ನಿ ಗಳು ಉಪಸರ್ಗಗಳು. ವಿಶರಣಗತ್ಯವಸಾದನಾರ್ಥಕವಾದ ಶಬ್ದವದು. 'ಗಹನೇ ಬ್ರಹ್ಮಣಿ ಉಪನಿಷಣ್ಣೇತ್ಯುಪನಿಷತ್' ಬ್ರಹ್ಮದಲ್ಲಿ ಉಪನಿಷಣ್ಣವಾದುದು ಉಪನಿಷತ್ ಎಂದರ್ಥ. ಎಂದೇ ಉಪನಿಷತ್ತೆಂದರೆ ಬ್ರಹ್ಮವಿದ್ಯೆ.

ಉಪನಿಷತ್ತುಗಳ ಅರ್ಥಗಳು ಶಾರೀರಕಮೀಮಾಂಸೆಯಿಂದ ನಿರ್ಣೀತವಾಗಿವೆ. ಇಲ್ಲಿ ಪರಬ್ರಹ್ಮದ ವಿಚಾರವು ನೇರವಾಗಿ ಪ್ರತಿಪಾದಿತವಾಗಿದೆ. ಪರಬ್ರಹ್ಮವಿಚಾರವನ್ನು ಬೋಧಿಸುವಲ್ಲಿ ಉಪನಿಷತ್ತುಗಳಲ್ಲಿ ಭೇದಶ್ರುತಿಗಳಿವೆ. ಅಭೇದಶ್ರುತಿಗಳಿವೆ ಭೇದಾಭೇದಶ್ರುತಿಗಳೂ ಇವೆ. ಇವುಗಳು ಸಂಶಯಕ್ಕೆಡೆ ಕೊಡುತ್ತವೆ. ಸಂಶಯಪರಿಹಾರಕ್ಕೆಂದೇ ಬ್ರಹ್ಮಸೂತ್ರಗಳು ರಚಿತವಾದುವು. ಅಂತೆಯೇ ಉಪನಿಷತ್ಸಾರಸರ್ವಸ್ವವೂ ಭಗವದ್ಗೀತೆಯಲ್ಲಿ ಅಡಗಿದೆ.

ಪರಬ್ರಹ್ಮಸ್ವರೂಪವನ್ನು ಒಂದು ಬೆಟ್ಟದ ಮೇಲಿರುವ ದೇಗುಲದ ದೇವರಿಗೆ ಹೋಲಿಸಬಹುದು. ಆ ಗಿರಿಯ ಬಳಿ ಬರುವ ಭಕ್ತರು ತಮ್ಮ ಊರಿನಿಂದ ಸನಿಹವಾದ ಮಾರ್ಗದಲ್ಲಿ ಬರುತ್ತಾರೆ. ಗಿರಿಶಿಖರವೂ ಬೇರೆ ಬೇರೆ ದಿಕ್ಕಿನಿಂದ ಬೇರೆಬೇರೆಯಾಗಿಯೇ ಕಾಣುತ್ತದೆ. ಒಂದು ದಿಶೆಯಲ್ಲಿ ನಿಂತು ನೋಡಿದಾಗ ಬರೀ ಬೋಳುಗುಡ್ಡದಂತೆ, ಮತ್ತೊಂದು ಕಡೆಯಿಂದ ಕಂಡಾಗ ಅಲ್ಲಿರುವ ಮರಗಳ ಸಾಲು, ಮಗದೊಂದು ಕಡೆಯಿಂದ ಕಂಡಾಗ ಬಂಡೆಗಲ್ಲುಗಳನ್ನು ಜೋಡಿಸಿಟ್ಟಂತೆ ತೋರಬಹುದು ಹಲವರಿಗೆ ದೇಗುಲದ ದಾರಿಯಲ್ಲಿರುವ ಪಾವಟಿಗೆಗಳು ಕಾಣುತ್ತವೆ. ಗಿರಿಗೊಂದು ತಪ್ಪಲುಂಟು ಇದು ನಿಶ್ಚಿತ. ಆದರದನ್ನು ಕಂಡವರಿಲ್ಲ. ಅದು ಅರಿವಿಗೆ ಮಾತ್ರ ಗೋಚರವಾಗಿ ಬಲ್ಲುದು. ಆದರೆ ಇಡಿಯ ಗಿರಿಯನ್ನು ಸಂಪೂರ್ಣವಾಗಿ ಏಕಕಾಲದಲ್ಲೇ ಎಲ್ಲೆಡೆಯಿಂದಲೂ ಕಾಣುವುದು ಸಾಧ್ಯವಿಲ್ಲದ ಮಾತು. ಇದಮಿತ್ಥಂ ಎಂಬ ನಿರ್ಣಯಕ್ಕೆ ಬರುವುದೂ ದುಸ್ಸಾಧ್ಯ. ಯಾದೃಶೀ ಭಾವನಾ ಯಸ್ಯ ಸಿದ್ಧಿರ್ಭವತಿ ತಾದೃಶೀ. ಆದರೆ ಇಷ್ಟು ಮಾತ್ರ ದಿಟ. ಗಿರಿಯಿದೆ. ಅದಕ್ಕೆ ಎಲ್ಲ ಮುಖಗಳೂ ಇವೆ. ತಪ್ಪಲಿದೆ. ಶಿಖರವೂ ಉಂಟು. ಅಲ್ಲೊಂದು ದೇಗುಲ. ದೇಗುಲದಲ್ಲಿ ಗರ್ಭಗುಡಿ. ಅದರಲ್ಲಿ ಪ್ರತಿಷ್ಠಾಪಿತ ವಿಗ್ರಹದಲ್ಲೂ ಅಡಗಿರುವ ಸೂಕ್ಷ್ಮರೂಪೀ ಪರಬ್ರಹ್ಮ. ಇಡಿಯ ಗಿರಿಯನ್ನೂ ವ್ಯಾಪಿಸಿಕೊಂಡಿರುವ ಸರ್ವವ್ಯಾಪಿಯಾದ ಪರಬ್ರಹ್ಮ.

ಕಾಲಕ್ರಮದಲ್ಲಿ ಗಿರಿಯ ತರುಗಳು ಒಣಗುತ್ತವೆ. ಬಂಡೆಗಲ್ಲುಗಳೂ ಉರುಳುತ್ತವೆ. ಆಗ ಇವೆಲ್ಲ ಈಗ ಇರುವುದು ಸತ್ಯವಾದರೂ, ಕ್ರಮಶಃ ಅಂತ್ಯವೊಂದುಂಟಲ್ಲ ಎಂದೇ ಹುಟ್ಟಿದ ಬಳಿಕ ಬೆಳವಣಿಗೆ, ಕ್ರಮೇಣ ಕ್ಷೀಣವಾಗಿ ಸಂಪೂರ್ಣ ನಶಿಸುತ್ತವೆ ಎಲ್ಲ ವಸ್ತುಗಳೂ ಎಂದೇ ಇವೆಲ್ಲ ನಶ್ವರ. ಇವೆಲ್ಲವೂ

ಯಾವುದರ ಒಡೆತನದಲ್ಲಿರುವುವೋ ಅದೊಂದೇ ಶಾಶ್ವತ, ಪರತತ್ತ್ವ, ಸತ್ಯ, ಅನಂತ. ಅದೇ ಪರಮಾತ್ಮ, ಪರಬ್ರಹ್ಮ, ನಾರಾಯಣ. ಇದನ್ನೇ ಎಲ್ಲ ಉಪನಿಷತ್ತುಗಳು ಕೊಂಡಾಡುತ್ತವೆ. ಉಪನಿಷತ್ತುಗಳು ಬಹುಸಂಖ್ಯಾತವಾಗಿವೆ. ನೂರೆಂಟಕ್ಕೂ ಮಿಗಿಲಾಗಿದೆ ಅವುಗಳ ಸಂಖ್ಯೆ. ಅವುಗಳಲ್ಲಿ ಪ್ರಧಾನವಾದುವು ಹತ್ತು. ಅವುಗಳೇ ಈಶ, ಕೇನ, ಕಠ, ಪ್ರಶ್ನ, ಮುಂಡಕ, ಮಾಂಡೂಕ್ಯ, ತೈತ್ತಿರೀಯ, ಐತರೇಯ ಮತ್ತು ಬೃಹದಾರಣ್ಯಕಗಳು.

ಉಪನಿಷದಧ್ಯಯನಾರಂಭದಲ್ಲಿ ಗುರು-ಶಿಷ್ಯರು ಶಾಂತಿಗಾಗಿ ಮಂತ್ರಪಠಣೆಯನ್ನು ಮಾಡುತ್ತಾರೆ. ಇದೇ ಶಾಂತಿಮಂತ್ರ. ಶಾಂತಿಮಂತ್ರಗಳಿರುವುದು ಐದು ಮಾತ್ರ. ನಾಲ್ಕೂ ವೇದಗಳ ವಿವಿಧಶಾಖೆಗಳಿಗೆ ಸೇರಿವೆ ಈ ಮಂತ್ರಗಳು. 'ವಾಙ್ಮೇ ಮನಸಿ ಪ್ರತಿಷ್ಠಿತಾ' ಎಂದು ಪ್ರಾರಂಭವಾಗುವ ಶಾಂತಿಮಂತ್ರ ಋಗ್ವೇದದ ಕೌಷೀತಕಿ ಮೊದಲಾದ ಹತ್ತು ಉಪನಿಷತ್ತುಗಳಿಗೆ ಸೇರಿದೆ.

'ಪೂರ್ಣಮದಃ ಪೂರ್ಣಮಿದಂ' ಎಂಬುದು ಈಶಾದಿ ೧೯ ಉಪನಿಷತ್ತುಗಳಿಗೆ ಶಾಂತಿಮಂತ್ರ ಇವೆಲ್ಲ ಶುಕ್ಲಯಜುರ್ವೇದಕ್ಕೆ ಸೇರಿವೆ. ಕಠಾದಿ ೩೨ ಉಪನಿಷತ್ತುಗಳು ಕೃಷ್ಣಯಜುರ್ವೇದೀಯವಾಗಿವೆ. ಅವುಗಳಿಗೆಲ್ಲ ಒಂದೇ ಶಾಂತಿಮಂತ್ರ - 'ಸಹನಾವವತು' ಎಂಬುದು.

'ಆಪ್ಯಾಯಂತು ಮಮಾಂಗಾನಿ' ಎಂಬುದು ಸಾಮವೇದೀಯವಾದ ಕೇನಾದಿ ಷೋಡಶ ಉಪನಿಷತ್ತುಗಳಿಗೆ ಶಾಂತಿಪಾಠ. 'ಭದ್ರಂ ಕರ್ಣೇಭಿಃ ಶೃಣುಯಾಮದೇವಾಃ' ಇದು ಅಥರ್ವವೇದೀಯ-ವಾದ ಪ್ರಶ್ನೋಪನಿಷತ್ತು ಮೊದಲಾದ ೩೧ ಉಪನಿಷತ್ತುಗಳಿಗೆ ಶಾಂತಿಪ್ರಾರ್ಥನೆ. ಮೊದಲಿಗೆ ಶಾಂತಿಪಾಠ. ಬಳಿಕ ಉಪನಿಷದಧ್ಯಯನ.

ಪರಿಪೂರ್ಣತೆಯತ್ತ ಗಮನ ಸಾಧ್ಯ. ಆದರೆ ಪರಿಪೂರ್ಣರಾಗುವುದು ಮಾತ್ರ ಅಸಾಧ್ಯವಾದ ಮಾತು ಉಪನಿಷತ್ತುಗಳು ಪರಬ್ರಹ್ಮವು ಪರಿಪೂರ್ಣವೆಂದು ಸಾರುತ್ತವೆ. ಬಹುಸಂಖ್ಯಾತವಾಗಿವೆ ಉಪನಿಷತ್ತುಗಳು ನೂರೆಂಟಕ್ಕೂ ಮಿಗಿಲಾದುದು ಅವುಗಳ ಸಂಖ್ಯೆ. ಅದರಲ್ಲಿ ಪ್ರಧಾನವಾದುವು ಹತ್ತು. ಅವುಗಳಲ್ಲಿ ಈಶಾವಾಸ್ಯವು ಪರಮಾತ್ಮನ ಅಂತರ್ವ್ಯಾಪ್ತಿ, ಬಹಿರ್ವ್ಯಾಪ್ತಿಗಳನ್ನು ವಿವರಿಸುತ್ತದೆ. ಫಲಸಂಗಕರ್ತೃತ್ವ ತ್ಯಾಗಪೂರ್ವಕಕರ್ಮಾಚರಣೆ ಮೋಕ್ಷಪ್ರಾಪ್ತಿಗೆ ಹಾದಿ ಎನ್ನುತ್ತದೆ. ಮುಮುಕ್ಷುವಿಗೆ ವಿದ್ಯಾವಿದ್ಯೆಗಳ ಸಂಭೂತಿ-ಅಸಂಭೂತಿಗಳ ಸಮತೋಲನವಿರಬೇಕೆನ್ನುತ್ತದೆ.

ಕೇನೋಪನಿಷತ್ತಿನಲ್ಲಿ ಪ್ರಶ್ನೋತ್ತರ ಮೂಲಕ ತತ್ತ್ವಪ್ರತಿಪಾದನೆಯಿದೆ. ಸಾಮಾನ್ಯರಿಗೆ ತತ್ತ್ವೋಪದೇಶವು ನೀರಸವಾಗಿರುತ್ತದೆ. ಎಂದೇ ಕಥಾಮೂಲಕ ತತ್ತ್ವನಿರೂಪಣೆ ಇಲ್ಲುಂಟು. ದೇವಾಧಿದೇವತೆಗಳೂ ಪರಬ್ರಹ್ಮಶಕ್ತಿಯ ಮುಂದೆ ತಲೆಬಾಗಲೇಬೇಕೆನ್ನುತ್ತದೆ ಈ ಉಪನಿಷತ್ತು. ಜಗತ್ಕಾರಣ ಪರಮಾತ್ಮ. ಜಗತ್ತೇ ಕಾರ್ಯರೂಪ. ಎಲ್ಲದರ ಹಿಂದಿನ ಪ್ರೇರಕಶಕ್ತಿಯೇ ಪರಬ್ರಹ್ಮ.

ಕಠೋಪನಿಷತ್ತಿನಲ್ಲೂ ನಚೀಕೇತೋಪಾಖ್ಯಾನ ಉಂಟು· ಯಮ ಗುರು· ನಚೀಕೇತ ಶಿಷ್ಯ· ಶಿಷ್ಯನ ದಾರ್ಢ್ಯವನ್ನು ಪರೀಕ್ಷಿಸಲು ಗುರು ಅನೇಕ ಪ್ರಲೋಭನೆಗಳನ್ನೊಡ್ಡಿದ· ಆದರೆ ಆಮಿಷಗಳಿಗೆ ನಚೀಕೇತ ಬಾಗಲಿಲ್ಲ· ಈ ದೃಢಮನಸ್ಸು, ತ್ಯಾಗ, ವೈರಾಗ್ಯ ಅಂತೇವಾಸಿಗೆ ಅತ್ಯಗತ್ಯವಾದುದು· ಬಳಿಕ ಯಮ ಪರತತ್ತ್ವವನ್ನು ಬೋಧಿಸಿದ· ನಾಚಿಕೇತಾಗ್ನಿ ವಿಷಯವನ್ನೂ ಅರುಹಿದನು·

ಉಪನಿಷದ್ಗುರುವು ಶಿಷ್ಯನ ಸಹನೆಯ, ಆಸಕ್ತಿಯ ಪರೀಕ್ಷೆ ಮಾಡುತ್ತಿದ್ದುದು ಪ್ರಶ್ನೋಪನಿಷತ್ತಿನಲ್ಲಿ ಕಾಣುತ್ತದೆ· ಇಲ್ಲಿರುವುದು ಆರು ಪ್ರಶ್ನೆಗಳು· ಕೇಳುವವರು ಆರು ಜನ ಶಿಷ್ಯರು· ಪಿಪ್ಪಲಾದರು ಅವರ ಗುರುಗಳು· ಆರು ಪ್ರಶ್ನೆಗಳಿಗೆ ಆರು ಖಂಡಗಳಲ್ಲಿ ಮಹರ್ಷಿ ಪಿಪ್ಪಲಾದರು ಉತ್ತರಕೊಟ್ಟಿದ್ದಾರೆ· ಅದೆಲ್ಲವನ್ನೂ ವಿಸ್ತಾರವಾಗಿ ಪ್ರಶ್ನೋಪನಿಷದ್ವಿಚಾರದಲ್ಲಿ ನಿರೂಪಿಸಲಾಗಿದೆ·

ಉಪನಿಷತ್ ಪ್ರತಿಪಾದ್ಯ ಸತ್ಯವನ್ನು ಅರಿಯಲು ಸತತ ಚಿಂತನೆ ಇರಬೇಕು· ಅನ್ವೇಷಕರಲ್ಲಿ ತ್ಯಾಗವಿರಬೇಕು· ಇತರ ಶಾಸ್ತ್ರಗಳ ಇತಿ-ಮಿತಿಗಳ ತಿಳುವಳಿಕೆ ಇರಬೇಕು· ಮುಂಡಕೋಪನಿಷತ್ತಿನಲ್ಲಿ ಇದರ ಸುಸ್ಪಷ್ಟ ನಿರೂಪಣೆಯಿದೆ· ಇದು ಪರ ಮತ್ತು ಅಪರ ವಿದ್ಯೆಗಳ ವಿಚಾರಗಳನ್ನು ತಿಳಿಸುತ್ತದೆ·

## ಪ್ರಶ್ನೋಪನಿಷತ್ತು

ನಮ್ಮ ಪ್ರಾಚೀನ ಋಷಿಪರಂಪರೆಯಿಂದ ಜ್ಞಾನಯಜ್ಞವು ನಡೆದಿತ್ತು· ತಮ್ಮ ತಪಸ್ಸಿನಿಂದ ವಿಶ್ವದ ಸೃಷ್ಟಿ-ಸ್ಥಿತಿ-ಲಯಗಳ ಬಗ್ಗೆ ಅವರು ಅರಿತಿದ್ದರು· ಅವರು ಚಿಂತನೆಯಿಂದ ಜಗತ್ಕಾರಣವನ್ನು ಬಲ್ಲವರಾಗಿದ್ದರು· ಆದರ ಕಾರ್ಯರೂಪವೇ ಇಡೀ ಜಗತ್ತೆಂಬ ತಿಳುವಳಿಕೆಯೂ ಅವರಿಗೆ ಮೂಡಿತ್ತು· ತಾವು ಕಂಡುಕೊಂಡ ಪರಮಸತ್ಯದ ಅನುಭವವನ್ನು ಅರ್ಹರಾದ ಅಂತೇವಾಸಿಗಳಿಗೆ ಉಪದೇಶಿಸಿದರು· ಆ ಉಪದೇಶವೇ ಉಪನಿಷತ್ತು·

ಉಪನಿಷತ್ಪ್ರಪಂಚವು ವಿಶಾಲವಾದುದು· ಪ್ರಾಚೀನಾಚಾರ್ಯರು ದಶೋಪನಿಷತ್ತುಗಳನ್ನು ಪ್ರಮುಖವೆಂದರು· ಪ್ರಶ್ನೋಪನಿಷತ್ತು ಅವುಗಳಲ್ಲಿ ಒಂದು· ಇದು ಎಣಿಕೆಯಿಂದ ನಾಲ್ಕನೆಯದು· ಅದರಲ್ಲಿ ಗುರುಶಿಷ್ಯರಲ್ಲಿ ವಿಚಾರವಿನಿಮಯವು ಪ್ರಶ್ನೋತ್ತರರೂಪದಿಂದಾಗಿದೆ ಎಂದೇ ಅದರ ಹೆಸರು ಸೂಕ್ತವಾದುದು·

ಅಥರ್ವವೇದೀಯವಾದುದು ಪ್ರಶ್ನೋಪನಿಷತ್ತು· ಅದು ಪಿಪ್ಪಲಾದಶಾಖೆಗೆ ಸೇರಿದ್ದು· ಇದನ್ನು ಉಪದೇಶಿಸಿದವರು ಆಚಾರ್ಯ ಪಿಪ್ಪಲಾದರು· ಅವರು ಮಹಾಮಹಿಮರು· ಭಗವನ್! ಎಂಬ ಸಂಬೋಧನೆಯೇ ಅವರ ಹಿರಿಮೆಯನ್ನು ಸಾರುತ್ತದೆ·

ಆ ಮಹರ್ಷಿಗಳು ಪಿಪ್ಪಲಫಲವನ್ನು ತಿನ್ನುತ್ತಿದ್ದರು ಎಂದೇ ಅವರಿಗೆ ಆ ಹೆಸರು ಬಂದಿತ್ತು ಸಸ್ಯಜನ್ಯ ಫಲಮೂಲಗಳೇ ಅವರ ಆಹಾರ · ಅಂತೆಯೇ ಪಿಪ್ಪಲಾದರು ಅಶ್ವತ್ಥಮಹೀರುಹದ ಫಲಗಳನ್ನು ತಿನ್ನುತ್ತಿದ್ದರೋ ಏನೋ! ಆದರೆ ಭಗವದ್ಗೀತೆಯಲ್ಲಿ - 'ಊರ್ಧ್ವಮೂಲಮಧಃ ಶಾಖಮ್ ಅಶ್ವತ್ಥಂ ಪ್ರಾಹುರವ್ಯಯಮ್' ಎಂದಿದೆ · ಇಡೀ ವಿಶ್ವವೇ ಒಂದು ವೃಕ್ಷದಂತೆ · ಅದೇ ಅಶ್ವತ್ಥ · ಅದರ ಮೂಲವು ಊರ್ಧ್ವಮುಖವಾದುದು ಎಂದರೆ ಭಗವಂತನೆಂದರ್ಥ · ಅಧಃಶಾಖಮ್ ಎಂದರೆ ಅದರ ಶಾಖೋಪಶಾಖೆಗಳು ಕೆಳಮುಖವಾಗಿವೆ · ಎಲ್ಲೆಲ್ಲೂ ಹರಡಿವೆ · ಅದೇ ವಿಶ್ವ ಅಥವಾ ಈ ಸಂಸಾರ · ಈ ಸಂಸಾರ ತರುವೇ ಆ ಪಿಪ್ಪಲವೃಕ್ಷ · ಹೀಗೆ ರೂಪಕಾಲಂಕಾರರೂಪೇಣ ವಿಷಯವು ಪ್ರತಿಪಾದಿತವಾಗಿದೆ ಪಿಪ್ಪಲಫಲವೆಂದರೆ ಸಂಸಾರವೃಕ್ಷಬೀಜ · ಸಂಸಾರವೃಕ್ಷಬೀಜವೆಂದರೆ ಕರ್ಮಫಲವೇ ಆಗಿದೆ · 'ಅವಶ್ಯಂ ಅನುಭೋಕ್ತವ್ಯಮ್ ಕರ್ಮಫಲಮ್ ಇತ್ಯರ್ಥಃ' ಎಂದು ಪ್ರತಿಪದಾರ್ಥದೀಪಿಕೆಯ ಬೆಳಕು · ಇಲ್ಲಿ

'ದ್ವಾಸುಪರ್ಣಾ ಸಯುಜಾಸಖಾಯಾ ಸಮಾನಂ ವೃಕ್ಷಂ ಪರಿಷಸ್ವಜಾತೇ ।
ತಯೋರೇಕಃ ಪಿಪ್ಪಲಂ ಸ್ವಾದ್ವತ್ತಿ ಅನಶ್ನನ್ ಅನ್ಯಃ ಅಭಿಚಾಕಶೀತಿ ' ॥

ಎಂಬ ಉಪನಿಷದ್ವಾಕ್ಯ ನೆನಪಾಗುತ್ತದೆ · ಸಂಸಾರ ತರುವಿನಲ್ಲಿ ಕುಳಿತಿವೆ ಎರಡು ಹಕ್ಕಿಗಳು · ಅವುಗಳಲ್ಲಿ ಒಂದು ಕರ್ಮಫಲವನ್ನು ತಿನ್ನುತ್ತದೆ · ಅದೇ ಜೀವಾತ್ಮ · ಮತ್ತೊಂದು ಅದಕ್ಕೆ ಸಾಕ್ಷೀಭೂತವಾಗಿ ಉಜ್ವಲವಾಗಿರುತ್ತದೆ ಅದೇ ಪರಮಾತ್ಮ · 'ಭಗವತ್ಕೃಪಾಫಲತ್ವೇನ ಅತ್ತೀತಿ ಪಿಪ್ಪಲಾದಃ' ಈ ಕರ್ಮಫಲವೆನ್ನುವುದು ಒಳಿತೇ ಆಗಲಿ, ಕೆಡುಕೇ ಆಗಲಿ, ಭಗವಂತನ ಕೃಪೆ ಎಂಬ ದೃಷ್ಟಿಯಿಂದ ಇದ್ದವರು ಪಿಪ್ಪಲಾದರು·

ಆಚಾರ್ಯ ಪಿಪ್ಪಲಾದರ ಸಾನ್ನಿಧ್ಯ, ಸಾಮೀಪ್ಯಗಳಿಗಾಗಿ ಹಂಬಲಿಸುತ್ತ, ಅವರಲ್ಲಿ ಶಿಷ್ಯವೃತ್ತಿ ಮಾಡಬಂದವರು ಆರು ಮಂದಿ · ಅವರೆಲ್ಲರೂ ಋಷಿವಂಶಜರು · ಅವರೇ - ಭರದ್ವಾಜನ ಮಗ ಸುಕೇಶ · ಶಿಬಿಪುತ್ರ ಸತ್ಯಕಾಮ · ಗರ್ಗಗೋತ್ರಜ ಸೂರ್ಯಾಯಣತನಯ ಸೌರ್ಯಾಯಣೀ · ಭೃಗುವಂಶಜ ಅಶ್ವಲಸುತನಾದ ಕೌಸಲ್ಯ · ಕಾತ್ಯಾಯನಗೋತ್ರಜ ವಿದರ್ಭಾತ್ಮಜ ಕಬಂಧಿ · ಅವರೆಲ್ಲರ ಧಮನಿ-ಧಮನಿಗಳಲ್ಲೂ ಹರಿಯುತ್ತಿದ್ದ ನೆತ್ತರು ಋಷಿಗಳದ್ದು ಎಂದೇ ಜನ್ಮತಃ ಮೂಡಿಬಂದಿದ್ದ ಸಂಸ್ಕಾರದಿಂದಲೇ ಅವರಿಗೆ ಪರಬ್ರಹ್ಮವನ್ನು ಅರಿವಲ್ಲಿ ಅತೀವ ಆಸಕ್ತಿ, ಶ್ರದ್ಧೆ ಮತ್ತು ಕುತೂಹಲ · ಸಂಸ್ಕಾರದೊಂದಿಗೆ ಪ್ರಯತ್ನವೂ ಅವರಲ್ಲಿತ್ತು · ಅವರು ತಪಸ್ವಿಗಳೂ, ವೇದಾಧ್ಯಯನ ನಿರತರೂ, ಪರಬ್ರಹ್ಮಚಿಂತನೆಯಲ್ಲಿದ್ದವರೂ ಆಗಿದ್ದರು · ಭಗವತ್ ಪಿಪ್ಪಲಾದರ ಸಾನ್ನಿಧ್ಯಕ್ಕೆ ಅವರು ಸಮಿತ್ಪಾಣಿಗಳಾಗಿ ಬಂದಿದ್ದರು · 'ಸಮಿತ್ಪಾಣಿಃ ಶ್ರೋತ್ರಿಯಂ ಬ್ರಹ್ಮನಿಷ್ಠಮ್' ಎನ್ನುತ್ತದೆ ಮುಂಡಕ ಅದೂ ಅಲ್ಲದೆ - 'ರಿಕ್ತಹಸ್ತಸ್ತು ನೋಪೇಯಾತ್ ರಾಜಾನಂ ದೈವತಂ ಗುರುಮ್' ಅವರೆಲ್ಲ ಸಮಿತ್-ಕುಶ-ಫಲಗಳನ್ನು ಒಯ್ದರು · ಅದು ಅವರ ಗುರುಭಕ್ತಿಯನ್ನು, ಸಂಪ್ರದಾಯನಿಷ್ಠೆಯನ್ನೂ ಎತ್ತಿ ತೋರಿಸುತ್ತಿತ್ತು·

ಆಚಾರ್ಯರು ಶಿಷ್ಯರಿಗೆ ಗುರುಕುಲವಾಸ ವಿಧಿಸಿದರು · ಅದರವಧಿ ಒಂದು ಸಂವತ್ಸರ · ಶಿಷ್ಯರು ಆಚಾರ್ಯರ ಆಜ್ಞಾನುವರ್ತಿಗಳೂ, ಮನೋನುವರ್ತಿಗಳೂ ಆದರು · ಗುರುಕುಲವಾಸದ ಬಳಿಕ ತನಗೆ

ತಿಳಿದಷ್ಟನ್ನು ತಿಳಿಸುತ್ತೇನೆಂದರು ಪಿಪ್ಪಲಾದರು · ಇದು ಅವರ ವಿನಯದ್ಯೋತಕ · 'ವಿದ್ಯಾ ದದಾತಿ ವಿನಯಮ್' · ಗುರುಕುಲದಲ್ಲಿ ಶಿಷ್ಯರು ತಪೋನಿಷ್ಠರಾಗಿದ್ದರು · ನೈಷ್ಠಿಕಬ್ರಹ್ಮಚರ್ಯೆಯಲ್ಲಿದ್ದರು · ಇದು ಅವರಿಗೆ ಸತ್ವ ಪರೀಕ್ಷೆಯಾಗಿತ್ತು · ಅಂತೆಯೇ ಆತ್ಮಮೂಲ್ಯವಾದ ಉಪನಿಷತ್ತಿನಂತಹ ನಿಗೂಢ-ವಿಷಯವನ್ನು ಗುರುವೂ ಅನರ್ಹರಿಗೆ ತಿಳಿಸಬಾರದು · ಗುರುವು ಮೊಟ್ಟಮೊದಲು ಶಿಷ್ಯರ ಅರ್ಹತೆ-ಯನ್ನು ಪರೀಕ್ಷಿಸಬೇಕು · ಅನಂತರದಲ್ಲಿ ಉಪದೇಶದ ಮಾತು · ಅದೇ ಉಪನಿಷದ್ಗುರುವಿನ ಲಕ್ಷಣ · ಶಿಷ್ಯರು ವಿನೀತರಾಗಿರಬೇಕು · ಅವರಲ್ಲಿ ಶ್ರದ್ಧೆಯಿರಬೇಕು · 'ಶ್ರದ್ಧಾವಾನ್ ಲಭತೇ ಜ್ಞಾನಮ್' ಎಂದಿಲ್ಲವೇ? ಶ್ರದ್ಧಾವಂತರಾಗುವುದರೊಂದಿಗೆ ಶಿಷ್ಯರು ಅನಸೂಯರೂ, ತತ್ವಜಿಜ್ಞಾಸುಗಳೂ ಆಗಬೇಕು ಅವರ ಸತ್ಯ, ಸತ್ವ, ತತ್ವಪರೀಕ್ಷೆ ಮುಗಿದಿತ್ತು · ಮತ್ತು ವರುಷ ಕಳೆದಿತ್ತು· ಗಡುವು ಮುಗಿದಿತ್ತು·

## ಪ್ರಥಮ ಪ್ರಶ್ನ

ಭಾರ್ಗವಗೋತ್ರಜನಾದ ಕಬಂಧಿಯು ತನ್ನ ಸಹಾಧ್ಯಾಯಿಗಳ ಅಪ್ಪಣೆಯನ್ನು ಪಡೆದ · ಇದು ಆತನ ಪರಸಹಿಷ್ಣುತೆ ಅಥವಾ ಅನಸೂಯತೆಯನ್ನು ತೋರುತ್ತದೆ · ಮಚ್ಚರದ ಕಿಚ್ಚನ್ನು ಮಡಿಲಲ್ಲಿಟ್ಟುಕೊಂಡವರು ಬ್ರಹ್ಮವಿದ್ಯೆಗೆ ಅನರ್ಹರು · ಶಿಷ್ಯ ಕಬಂಧಿ ಆಚಾರ್ಯರನ್ನು ಸಮೀಪಿಸಿದ · ವಿಜಿಗೀಷುವಾಗಿ ಅಲ್ಲ, ಜಿಜ್ಞಾಸುವಾಗಿ ಪ್ರಶ್ನಿಸಿದ - 'ಪೂಜ್ಯರೇ! ಸೃಷ್ಟಿಕರ್ತ ಯಾರು?' ಆಚಾರ್ಯರು ಮರು ನುಡಿದರು · 'ಪ್ರಜಾಪತಿಯೇ ಸೃಷ್ಟಿಕರ್ತ · ಅವನ ಸಂಕಲ್ಪದಿಂದಲೇ ಜಗಜ್ಜನನ' · ಬಳಿಕ ವಿವರಿಸಿದರು

ಜಗದಲ್ಲಿ ಚೇತನ ಮತ್ತು ಅಚೇತನ ವಸ್ತುಗಳಿವೆ· ಚೇತನಗಳಲ್ಲಿ ದೇವ, ಮಾನವಾದಿ ಪಶುಪಕ್ಷಿಗಳಿವೆ ಇವೆಲ್ಲವೂ ಪಾಂಚಭೌತಿಕವಾಗಿವೆ · ಪೃಥಿವೀ, ಅಪ್, ತೇಜಸ್, ವಾಯು ಮತ್ತು ಆಕಾಶಗಳೇ ಪಂಚಭೂತಗಳು · ಇವುಗಳಲ್ಲಿ ಪೃಥಿವೀ, ಅಪ್ ಮತ್ತು ತೇಜಸ್ಸುಗಳು ಮೂರ್ತಗಳು · ಉಳಿದೆರಡೂ ಅಮೂರ್ತಗಳು · ಎಲ್ಲ ವಸ್ತುಗಳೂ ಪಂಚಭೂತಗಳಿಂದ ನಿರ್ಮಿತವಾಗಿವೆ · ಅವುಗಳ ಪ್ರಮಾಣಮಾತ್ರ ವಸ್ತುವಿನಿಂದ ವಸ್ತುವಿಗೆ ಭಿನ್ನವಾಗುತ್ತದೆ·

ಪಂಚಭೂತಗಳು ಮೊದಲಿಗೆ ಸೃಷ್ಟವಾದುವು · ಬಳಿಕ ಪ್ರಜಾಪತಿಯು ಪ್ರಾಣ ಮತ್ತು ರಯಿಗಳನ್ನು ಸೃಜಿಸಿದನು · ಇವುಗಳ ಮಿಲನವೇ ಸೃಜನಕಾರ್ಯ · ಫಲವೇ ಸೃಷ್ಟಿ · ಪ್ರಾಣ - ಪುರುಷ · ರಯಿ - ಪ್ರಕೃತಿ · ಆದಿತ್ಯನೇ ಪ್ರಾಣ · ರಯಿ ಚಂದ್ರಮಾ · ಆದಿತ್ಯನಿಗೆ ವೃದ್ಧಿ-ಕ್ಷಯಗಳಿಲ್ಲ · ಚಂದ್ರನಿಗುಂಟು · ಪ್ರಾಣ ಭೋಕ್ತೃ· ರಯಿ - ಭೋಗ್ಯ, ಅನ್ನ·

ಸಂವತ್ಸರದಲ್ಲಿ ಉತ್ತರಾಯಣ ಪ್ರಾಣ· ದಕ್ಷಿಣಾಯನ ರಯಿ· ಇವುಗಳೇ ಕ್ರಮವಾಗಿ ದೇವಯಾನ, ಪಿತೃಯಾನಗಳು · ಶುಕ್ಲಪಕ್ಷವು ಪ್ರಾಣವಾದರೆ, ಕೃಷ್ಣಪಕ್ಷವೇ ರಯಿಯಂತೆ · ಹಗಲು ಪ್ರಾಣ, ಇರುಳು ರಯಿಯಾಗುತ್ತದೆ·

ಪ್ರಾಣ-ರಯಿಗಳು ಸಾಂಕೇತ್ಕಪದಗಳಾಗಿವೆ· ಸೃಷ್ಟಿರಹಸ್ಯವಿಚಾರ ಹೇಳುವಲ್ಲಿ ನೇರವಾಗಿ ಹೇಳಬಾರದು ಎಂದೇ ಈ ಶಬ್ದಗಳ ಬಳಕೆ· ಇಲ್ಲಿ ಭಾಷಾಗಾಂಭೀರ್ಯವು ಮೆಚ್ಚುವಂತಹುದು· ಪ್ರಶಂಸನೀಯವಾದುದು.

ಸಂತತಿಯ ಎಳೆಯನ್ನು ಕತ್ತರಿಸದಿರು· ಇದು ಆದೇಶ· ಇದು ಉಪದೇಶ· ಇದೇ ವೇದೋಪ-ನಿಷತ್ತು · ಇದು ಆಜ್ಞೆ · ಇದನ್ನು ಪಾಲಿಸಲೇಬೇಕು; ಉಪಾಸಿಸಬೇಕು · 'ಪ್ರಜಾತಂತುಂ ಮಾ ವ್ಯವಚ್ಛೇತ್ಸೀಃ - - - ಏಷ ಆದೇಶಃ । ಏಷ ಉಪದೇಶಃ । ಏಷಾ ವೇದೋಪನಿಷತ್ । ಏತದನುಶಾಸನಮ್ । ಏವಮುಪಾಸಿತವ್ಯಮ್ । ಏವಮುಚೈತದುಪಾಸ್ಯಮ್ ।' ಎನ್ನುತ್ತದೆ ತೈತ್ತಿರೀಯೋಪನಿಷತ್ತು· ಅದರಂತೆ ಗೃಹಸ್ಥರು ಸ್ವಾಶ್ರಮಧರ್ಮವನ್ನು ಪಾಲಿಸಬೇಕು· ಅದು ಋತುಕಾಲದಲ್ಲಿ, ನಿಶೀಥದಲ್ಲಿ · ಆಗ ಅದು ದೋಷಭೂಯಿಷ್ಠವಾಗದು· ಬ್ರಹ್ಮಚರ್ಯದ ಗೆರೆಯನ್ನೂ ದಾಟದು·

ಅನ್ನದ ರೂಪಾಂತರವೇ ರೇತಸ್ಸು· ಅದು ಸ್ವಯೋಷಿತಿರತಿಯಲ್ಲಿ ಧರ್ಮಸಂತತಿಗೆ ಬೀಜಭೂತ-ವಾಗುತ್ತದೆ · ಗೃಹಸ್ಥರ ಈ ವ್ರತವೇ ಪ್ರಜಾಪತಿವ್ರತ · ಇದನ್ನನುಸರಿಸುವವರು ಬುಭುಕ್ಷುಗಳು · ತಪೋನಿರತರಾಗಿ, ನೈಷ್ಠಿಕಬ್ರಹ್ಮಚರ್ಯದಲ್ಲಿರುವವರು ಮುಮುಕ್ಷುಗಳು · ಇವರೆಲ್ಲರ, ಇವೆಲ್ಲದರ ಸೃಷ್ಟಿಕರ್ತನೇ ಪರಮಾತ್ಮ· ಅವನೇ ಪ್ರಾಣ, ಆದಿತ್ಯ, ವೈಶ್ವಾನರ, ವಿಶ್ವರೂಪ ಮತ್ತು ಅಗ್ನಿ ಶಬ್ದವಾಚ್ಯನು· ಪ್ರಾಣನೆಂದರೆ ಭೋಕ್ತ (ಜೀವ)· ಪ್ರಾಣರಕ್ಷಣೆ ಆದಿತ್ಯನ ಹೊಣೆ·

ಜೀವನು ಜ್ಞಾನಸ್ವರೂಪಿ, ಮತ್ತು ಜ್ಞಾನಾಶ್ರಯನು · ಆ ಜ್ಞಾನವೇ ಧರ್ಮಭೂತಜ್ಞಾನ · ಇದರ ವಿಕಾಸದ ತುತ್ತತುದಿಯೇ ಮುಕ್ತಿ · ವೈಶ್ವಾನರನೆಂದರೆ ವಿಶ್ವದ ಜನತೆಯನ್ನು ಮುನ್ನಡೆಸುವವನು ವೈಶ್ವಾನರ ಜಾಠರಾಗ್ನಿರೂಪೇಣ ಎಲ್ಲರಲ್ಲೂ ಇದ್ದಾನೆ· ವಿಶ್ವವೇ ಈತನ ಶರೀರ ಎಂದೇ ವಿಶ್ವರೂಪೀ ಜೀವಿಗಳನ್ನು ಊರ್ಧ್ವಲೋಕಕ್ಕೆ ಒಯ್ಯುವವನೇ ಅಗ್ನಿ · ಅಗ್ರಂ ನಯತಿ ಇತಿ ಅಗ್ನಿಃ · ಆದಿತ್ಯ ಪ್ರಾಣಪೋಷಕ · ಪ್ರಾಣ ಜಾಠರಾಗ್ನಿಯ ರಕ್ಷಕ · ಪರಮಾತ್ಮನೇ ಪ್ರಾಪ್ಯ · ಸೂರ್ಯನಿಗೂ ಪ್ರಕಾಶಕ · ತದ್ದೇವಾನಾಂ ಜ್ಯೋತಿಷಾಂ ಜ್ಯೋತಿಃ - ಪರಮಾತ್ಮ ಶರೀರಿ· ಜೀವ ಶರೀರ· ಪರಮಾತ್ಮನಿಗೆ ಅಧೀನ· ಜೀವ ಅನೇಕ ಜನ್ಮಗಳನ್ನು ಕರ್ಮಫಲವಾಗಿ ಪಡೆಯುತ್ತಾನೆ · ಇದೇ ರೀತಿ ಈಶಾವಾಸ್ಯದಲ್ಲೂ 'ಆದಿತ್ಯಾಂತರ್ಯಾಮಿ ಪರಮಾತ್ಮಾ! ನನ್ನನ್ನುದ್ಧರಿಸು' ಎಂದು ಸಾಧಕನು ಬೇಡುತ್ತಾನೆ · ಅಲ್ಲೂ ಸೂರ್ಯನು ಪರಮಾತ್ಮನ ಅಧೀನನೆಂದು ತಿಳಿಯುತ್ತದೆ·

ಕಾಲಭೇದವನ್ನನುಸರಿಸಿ, ಋತುವ್ಯವಸ್ಥೆ, ತನ್ಮೂಲಕ ಪ್ರಜಾಸೃಷ್ಟಿ· ಅದರಿಂದ ಪ್ರಪಂಚವಿಕಾಸ · ಕಾಮ್ಯಕರ್ಮಿಗಳು ದಕ್ಷಿಣಾಯನದಲ್ಲಿ ಹೋಗುವರು · ಪುಣ್ಯಸಂಚಯ ಮುಗಿದ ಮೇಲೆ 'ಕ್ಷೀಣೇ ಪುಣ್ಯೇ ಮರ್ತ್ಯಲೋಕಂ ವಿಶಂತಿ', ಪುನಃ ಭುವಿಯಲ್ಲಿ ಜನನ·

'ಪುನರಪಿ ಜನನಂ ಪುನರಪಿ ಮರಣಂ
ಪುನರಪಿ ಜನನೀ ಜಠರೇ ಶಯನಮ್ ' ಎಂಬಂತೆ·

ಆದರೆ ಆತ್ಮೋಪಾಸಕರು ಉತ್ತರಾಯಣದಲ್ಲಿ ನಡೆವರು. ಪರಮಪದವನ್ನು ಸೇರುವರು.

ಆತ್ಮೋಪಾಸಕರ ಲಕ್ಷಣವನ್ನೂ ಪಿಪ್ಪಲಾದರು ತಿಳಿಸುತ್ತಾರೆ. 'ಆತ್ಮೋಪಾಸಕರು ನೈಷ್ಠಿಕ ಬ್ರಹ್ಮಚರ್ಯದಲ್ಲಿರುತ್ತಾರೆ. ಆಸ್ತಿಕರವರು; ವಿದ್ಯಾವಂತರು; ಶ್ರದ್ಧೆಯಿಂದ, ವಿದ್ಯಾಬಲದಿಂದ ಪರಮಾತ್ಮೋಪಾಸನೆಯನ್ನು ಮಾಡುತ್ತಾರೆ. ಪರಮಪದವನ್ನು ಪಡೆಯುತ್ತಾರೆ. ಅಲ್ಲಿ ಸಾವಿನ ಭಯವಿಲ್ಲ. ಅವರು ಕಪಟ, ವಂಚನೆಗಳನ್ನರಿಯದವರು; ಸತ್ಯವಂತರು; ಬ್ರಹ್ಮಿಷ್ಠರು'. ಶಾಸ್ತ್ರಶ್ರವಣ-ಮನನ-ನಿಧಿ-ಧ್ಯಾಸನಗಳಿಂದ ಪರಮಪದಪ್ರಾಪ್ತಿ. ಅದೇ ಮುಕ್ತಿ. ಇದು ಪ್ರಥಮಪ್ರಶ್ನೆಗೆ ಉತ್ತರ.

## ದ್ವಿತೀಯ ಪ್ರಶ್ನ

ಕಬಂಧಿಗೆ ಜಗತ್ಸೃಷ್ಟಿರಹಸ್ಯದ ಅರಿವಾಯಿತು. ಸಮಾಧಾನ ಸಿಕ್ಕಿತು. ಬಳಿಕ ವೈದರ್ಭಿಯು ಆಚಾರ್ಯ ಪಿಪ್ಪಲಾದರನ್ನು ಸಮೀಪಿಸಿದನು. ನಮಿಸಿದನು. ವಿನೀತನಾಗಿ ಕೇಳಿದನು.

'ಪೂಜ್ಯರೇ! ಇಲ್ಲಿ ಚರಜೀವಿಗಳಿವೆ. ಸ್ಥಿರವಸ್ತುಗಳೂ ಇವೆ. ಅವೆಲ್ಲವನ್ನೂ ಧರಿಸಿ, ರಕ್ಷಿಸುವ ದೇವತೆಗಳು ಯಾರು ಯಾರು? ಅವರೆಷ್ಟು ಜನ? ಪ್ರಪಂಚವನ್ನು ಬೆಳಗುವ ಸುರರು ಯಾರು? ಆ ಸುಮನಸರಲ್ಲಿ ಯಾರು ಉತ್ಕೃಷ್ಟರು?'

ಮೊಟ್ಟಮೊದಲಿಗೆ ಸೃಷ್ಟಿಯ ಬಗ್ಗೆ ಪ್ರಶ್ನೋತ್ತರಗಳಾದುವು. ಬಳಿಕ ಸ್ಥಿತಿಯ ಪ್ರಶ್ನೆ. ಪೂಜ್ಯ ಪಿಪ್ಪಲಾದರು ಶಿಷ್ಯಪ್ರೇಮದಿಂದ ವಿಷಯವನ್ನು ಅರುಹಿದರು. ಜೀವಿಗಳೆಲ್ಲದರ ನೆಲೆ ಮುಖ್ಯಪ್ರಾಣ. ಪಂಚಭೂತಗಳು, ಪಂಚಕರ್ಮೇಂದ್ರಿಯ, ಪಂಚಜ್ಞಾನೇಂದ್ರಿಯಗಳು ಮತ್ತು ಮನ. ಇವೆಲ್ಲ ತಿಳಿದಿದ್ದುವು 'ನಾವೇ ಆಧಾರ - ಸರ್ವಾಧಾರ' ಎಂದು. ಆದರೀ ಅಭಿಮಾನವೇ ಅನರ್ಥಕ್ಕೆಡೆ ಕೊಟ್ಟಿತು.

ಆಗ ಮುಖ್ಯಪ್ರಾಣನು ಮರುನುಡಿದ. 'ಪ್ರಾಣ, ಅಪಾನ, ಸಮಾನ, ಉದಾನ ಮತ್ತು ವ್ಯಾನವಾಗಿ ಪಂಚಪ್ರಾಣಗಳಾಗಿದ್ದೇನೆ ನಾನು. ಮೋಹವಶರಾಗಬೇಡಿ'. ಆದರೂ ಆಕಾಶಾದಿಗಳು ಗರ್ವವಿದೂರರಾಗಲಿಲ್ಲ. ಮುಖ್ಯಪ್ರಾಣ ಉತ್ಕ್ರಮಿಸತೊಡಗಿದ. ಆಗ ಉಳಿದ ಪಂಚಪ್ರಾಣಗಳೂ ಅವನನ್ನು ಅನುಸರಿಸಿದುವು. ದೇಹಧಾರಣೆಗೆ ಮುಖ್ಯಪ್ರಾಣ ಸ್ವಸ್ಥಾನದಲ್ಲಿ ನೆಲೆಗೊಂಡ. ಉಳಿದವೂ ಅಂತೆಯೇ ಮಾಡಿದವು. ಆಗ ತಮ್ಮ ತಮ್ಮ ಇತಿ-ಮಿತಿಗಳರಿವು ಅವಕ್ಕೆ ಮೂಡಿದವು. ಇಲ್ಲಿ ರಾಣಿಜೇನಿನ ನಿದರ್ಶನ ನೀಡಲಾಗಿದೆ.

ಆಗ ಆಕಾಶಾದಿಗಳು ಸ್ತುತಿಸಿದವು. 'ಮುಖ್ಯಪ್ರಾಣ, ನೀನೇ ಜೀವಕಳೆಗೆ ಆಧಾರ. ಇಂದ್ರಾಗ್ನಿ, ಸೂರ್ಯ, ಪೃಥಿವೀ, ವಾಯುರೂಪೀ ನೀನು. ಇಳೆಗೆ ಮಳೆ-ಬೆಳೆಗಳನ್ನು ಕೊಡುತ್ತೀಯೆ. ಜಲಜಂತೂತ್ಪತ್ತಿಗೆ ಕಾರಣ ನೀ. ನೀನೇ ಅಮೃತಸ್ವರೂಪೀ, ಮೋಕ್ಷದಾಯಕ, ನೀನು ತ್ರಯಿರೂಪೀ,

ಆದರಿಂದುಕ್ತವಾದ ಚಾತುರ್ವರ್ಣ್ಯ, ವರ್ಣಧರ್ಮ ಎಲ್ಲವೂ ನಿನ್ನ ಅಧೀನ. ನೇಮಿಯ ಗುಂಭಕ್ಕೆ ಅರೆಗಳೂ ಅಧೀನವಾದಂತೆ.

ತಾಯ್ತಂದೆಯರಲ್ಲಿ, ಗರ್ಭಸ್ಥಶಿಶುವಿನಲ್ಲಿ ನೀನಿದ್ದೀಯೆ. ನೀನೇ ಪ್ರಜಾಪತಿ; ನಾಲ್ಮೊಗ, ಹವ್ಯ-ಕವ್ಯಗಳನ್ನೊಯ್ಯುವ ಅಗ್ನಿಯೂ ನೀನೇ. ನೀನೇ ಇಂದ್ರ, ಚಂದ್ರ, ಸೂರ್ಯ, ರುದ್ರ, ವಿಷ್ಣು, ಸರ್ವಶಬ್ದವಾಚ್ಯ. ನೀ ಮೇಘರೂಪೀ. ವಿಶ್ವದ ಲಯಕಾರಕ, ಪೋಷಕ.

ಇಲ್ಲಿಯ ಎಲ್ಲ ಭೋಗ್ಯ-ಭೋಗವಸ್ತುಗಳೂ ನಿನ್ನ ವಶ. ನೀ ಶೇಷಿ. ನಾವೆಲ್ಲ ಶೇಷರು.

## ತೃತೀಯ ಪ್ರಶ್ನ

ಬಳಿಕ ಬಳಿ ಬಂದ ಶಿಷ್ಯೋತ್ತಮನೇ ಕೌಸಲ್ಯ - ಆತನ ಪ್ರಶ್ನೆಯಿದು. 'ಮುಖ್ಯಪ್ರಾಣ ಹುಟ್ಟುವುದು ಯಾವುದರಿಂದ? ಹೇಗೆ? ದೇಹದಲ್ಲಿ ಹೇಗೆ ಸೇರುತ್ತಾನೆ? ಪಂಚಪ್ರಾಣಗಳಾಗಿ ಹೇಗೆ ವಿಭಕ್ತನಾಗುತ್ತಾನೆ? ಏಕೆ ಅವನ ಉತ್ಕ್ರಮಣವಾಗುತ್ತದೆ? ಉತ್ಕ್ರಮಣವು ಹೇಗೆ ಉಂಟಾಗುತ್ತದೆ?'

ಮುಖ್ಯಪ್ರಾಣನ ಮಹಿಮೆ ಸಾಪೇಕ್ಷ. ನಿತ್ಯಸಿದ್ಧವಲ್ಲ. ಇದಕ್ಕಿಂತಲೂ ಅತಿಶಯವಾದುದು ಯಾವುದು? ಈ ಪ್ರಶ್ನೆ ಕೌಸಲ್ಯನ ಮನದಲ್ಲಿ ಮೂಡಿತು. ಗುರುಗಳು ಉತ್ತರಿಸಿದರು. 'ಇದು ಪ್ರಶ್ನಾತೀತ. ಎಂದೇ ನೀನು ಬ್ರಹ್ಮಿಷ್ಠ. ನೀನು ಯೋಗ್ಯನು. ನಿನಗೆ ಉತ್ತರಿಸುವೆನು'. ಗುರುಗಳಿಗೆ ಮನತುಂಬಿ ಬಂದಿತ್ತು. ಶಿಷ್ಯನೂ ಅಷ್ಟೇ ಮನವಿಟ್ಟು ಆಲಿಸಿದ.

ಮುಖ್ಯಪ್ರಾಣನಿಗೆ ತಂದೆ ಭಗವಂತ. ಜೀವಾತ್ಮರು ಪಾಪ-ಪುಣ್ಯಗಳ ಕರ್ಮಫಲಗಳನ್ನು ಅನುಭವಿಸಬೇಕು. ಆಗ ಮುಖ್ಯಪ್ರಾಣನ ಪ್ರವೇಶವು ದೇಹದಲ್ಲಿ ಆಗುತ್ತದೆ. ಜೀವ-ಪ್ರಾಣರು ವ್ಯಕ್ತಿ-ನೆರಳುಗಳಂತೆ. ಮುಖ್ಯಪ್ರಾಣನು ಅರಸನಂತೆ. ಉಳಿದ ಪಂಚಪ್ರಾಣಗಳು ಕಿಂಕರರಂತೆ. ಇವುಗಳು ಶರೀರದ ವಿವಿಧ ಸ್ಥಾನಗಳಲ್ಲಿ ನೆಲೆ ನಿಲ್ಲುತ್ತವೆ. ಹೃದಿಪ್ರಾಣೋ ಗುದೇಽಪಾನಃ ಸಮಾನೋ ನಾಭಿಸಂಸ್ಥಿತಃ ಉದಾನಃ ಕಂಠದೇಶಸ್ಥಃ ವ್ಯಾನಃ ಸರ್ವಶರೀರಗಃ' ಎಂಬಂತೆ ಪ್ರಾಣವಾಯುವು ನೆಲೆಸಿರುವುದು ಹೃದಯದಲ್ಲಿ. ಉಪಸ್ಥದಲ್ಲಿ ಅಪಾನ. ವಿರೇಚನಕಾರ್ಯವಾಗುವುದು ಅದರಿಂದ. ಉದಾನವೇ ಕಣ್ಣು, ಕಿವಿ, ನಾಸಿಕಗಳಲ್ಲಿ ನೆಲೆಸಿ, ಕೆಲಸಮಾಡಿಸುತ್ತದೆ. ಸಮಾನವು ಜಾಠರಾಗ್ನಿ ಪ್ರಕಾಶಕವಾದುದು.

ಹೃದಯ ಜೀವನ ನೆಲೆ. ಹೃದಯವು ಪುಂಡರೀಕಾಕಾರವಾದುದು. ಅಲ್ಲಿರುವ ನಾಡಿಗಳು ೧೦೧. ಒಂದೊಂದರಲ್ಲೂ ೭೨ ಪ್ರಭೇದಗಳಿವೆ. ಅದರಲ್ಲಿ ಒಂದೊಂದರಲ್ಲೂ ೧೦೦೦ ನಾಡಿಗಳ ನೂರುನೂರು ಶಾಖೆಗಳಿವೆ. ಇಷ್ಟರಲ್ಲೂ ವ್ಯಾನವಾಯು ಸಂಚಾರವಾಗುವುದು. 'ವ್ಯಾನಃ ಸರ್ವಶರೀರಗಃ'

ಉದಾನವಾಯುವು ಊರ್ಧ್ವಮುಖವುಳ್ಳದ್ದು· ಅದು ಜೀವನ ಪುಣ್ಯದಿಂದ ಜೀವನನ್ನು ಸ್ವರ್ಗಕ್ಕೆ ಒಯ್ಯುತ್ತದೆ· ಪಾಪಿಯಾದಲ್ಲಿ ನರಕಕ್ಕೂ ತಳ್ಳುತ್ತದೆ· ಪುಣ್ಯ-ಪಾಪಗಳ ಸಂಚಯದಿಂದ ಜೀವನಿಗೆ ಭುವಿಯ ಪ್ರವೇಶ·

ಜಗತ್ತು ಗತಿಶೀಲ· ಗಚ್ಛತಿ ಇತಿ ಜಗತ್· ಜೀವಸಾಮಾನ್ಯವೆಲ್ಲ ಕ್ರಿಯಾಶೀಲ· ಪಾಪ-ಪುಣ್ಯಗಳೇ ಜೀವನ ಕ್ರಿಯಾಫಲಗಳು · ಅದಕ್ಕನುಗುಣವಾಗಿ ಉದಾನವು ಜೀವನನ್ನು ಊರ್ಧ್ವ ಅಥವಾ ಅಧೋಮುಖವಾಗಿ ಒಯ್ಯುತ್ತದೆ·

ಪಂಚಭೂತಗಳಿಗೂ ಪಂಚಪ್ರಾಣಗಳಿಗೂ ಅವಿಚ್ಛಿನ್ನ ಬಾಂಧವ್ಯವುಂಟು· ಆದಿತ್ಯ(ತೇಜಸ್ಸು) ಪ್ರಾಣ ಇದರಿಂದಲೇ ದೃಕ್‌ಶಕ್ತಿ· ಪೃಥಿವಿಯಲ್ಲಿ ಅಗ್ನಿ ಅಪಾನವಾಯುವನ್ನು ಅಧೋಮುಖವಾಗಿಸುತ್ತದೆ· ಪೃಥಿವೀ ಮತ್ತು ದ್ಯುಲೋಕಗಳ ನಡುವಣ ವಾಯುವು ಸಮಾನವಾಯು· ಸಮಾನ ಮತ್ತು ಆಕಾಶಗಳ ಮಧ್ಯೆ ವ್ಯಾನವಿದೆ·

ಬಾಹ್ಯತೇಜಸ್ಸು ಆರಿದಾಗ, ಉದಾನವಾಯು ಹೊರಡುತ್ತದೆ· ಜಾಠರಾಗ್ನಿಯ ಶಾಖ ಕುಂದುತ್ತದೆ· ಮನಸ್ಸು-ಇಂದ್ರಿಯಗಳೊಡಗೂಡಿ ಜೀವನನ್ನು ದೇಹಾಂತರಕ್ಕೆ ಒಯ್ಯುತ್ತದೆ· ಆದರೆ ಪ್ರಾಣೋಪಾಸಕನು ಮುಮುಕ್ಷು· ಆದ್ದರಿಂದವನಿಗೆ ಮುಕ್ತಿಪ್ರಾಪ್ತಿ· ಮುಕ್ತಿಯೇ ಅಮೃತತ್ವ· ಇದೇ ಪರಮ ಪ್ರಯೋಜನ ಇದೇ ಪಿಪ್ಪಲಾದರು ಕೌಸಲ್ಯನಿಗೆ ಕೊಟ್ಟ ಉತ್ತರದ ಸಂಗ್ರಹವಾಯಿತು·

## ಚತುರ್ಥ ಪ್ರಶ್ನ

ಕಬಂಧಿ, ವೈದರ್ಭಿ ಮತ್ತು ಕೌಸಲ್ಯರ ಪ್ರಶ್ನೆಗಳಿಗೆ ಪೂಜ್ಯ ಪಿಪ್ಪಲಾದರು ಉತ್ತರಿಸಿದರು· ಇದುವರೆಗೆ ನೀಡಿದ ಉತ್ತರಗಳಲ್ಲಿ ಜಗತ್ಸೃಷ್ಟಿ, ಚರಾಚರಗಳ ರಕ್ಷಣೆ ಅಥವಾ ಜಗತ್‌ಸ್ಥಿತಿ-ಗತಿಗಳು ಮತ್ತು ಪ್ರಾಣತತ್ತ್ವಗಳ ವಿವರಣೆಯಾಯಿತು·

ಗಾರ್ಗ್ಯನಾದ ಸೌರ್ಯಾಯಣಿಯು ಪಿಪ್ಪಲಾದರ ಬಳಿದಾರಿದ· ಅವರಿಗೆ ನಮಿಸಿದ· ಬಳಿಕ ಕೇಳಿದ· 'ಪೂಜ್ಯರೆ! ಜೀವನು ನಿದ್ರಿಸುವಾಗ ಯಾವ ಯಾವ ಇಂದ್ರಿಯಗಳು ನಿದ್ರಿಸುತ್ತವೆ? ಯಾವುವು ಜೀವನ ಜಾಗ್ರದವಸ್ಥೆಯಲ್ಲಿ ಎಚ್ಚರವಾಗಿರುತ್ತವೆ? ಜೀವನು ಎಂತು ಸ್ವಪ್ನಗಳನ್ನು ಕಾಣುತ್ತಾನೆ? ಸುಖ-ದುಃಖಗಳು ಯಾರವು? ಎಲ್ಲವೂ ಯಾರಲ್ಲಿ ಸೇರಿವೆ?'

ಈ ಪ್ರಶ್ನೆಯಲ್ಲಡಗಿರುವ ವೈಶಿಷ್ಟ್ಯ ಪರತತ್ತ್ವಪ್ರಕಾಶ· ಪ್ರಶ್ನೆಗಳು ಅದನ್ನೇ ಬೊಟ್ಟುಮಾಡಿ ತೋರುತ್ತಿವೆ ನೇಸರು ಬೆಳಕಿನ ಆಕರ· ಮೂಡಲದಲ್ಲಿ ನೇಸರು ಮೂಡಲು ಬೆಳ್ಗಿರಣಗಳು ಪಸರಿಸುತ್ತವೆ· ವಿಶ್ವ-ವನ್ನು ಬೆಳಗುತ್ತವೆ· ಪಡುವಲದೆಡೆಗೆ ಭಾನು ನಡೆದಾಗ, ಮುಳುಗುವಾಗ, ರಶ್ಮಿಗಳೆಲ್ಲವೂ ರವಿಯಲ್ಲೇ

ಸಂಪಿಂಡಿತವಾಗುತ್ತವೆ· ಅಂತೆಯೇ ಮನಸ್ಸು· ಎಚ್ಚರದಲ್ಲಿ ಇಂದ್ರಿಯಗಳತ್ತ ಗಮನ· ಇಂದ್ರಿಯಗಳೇ ಪ್ರಕಾಶಸಾಧನಗಳು· ನಿದ್ದೆಯಲ್ಲಿ ಬೇರೆ ರೀತಿ· ಆಗ ಇಂದ್ರಿಯಗಳೂ ಮಲಗುತ್ತವೆ· ಸುಷುಪ್ತಿಯಲ್ಲಿ ಜೀವಾತ್ಮನಿಗೆ ಪರಮಾತ್ಮನೊಡನೆ ಮಿಲನ·

ನಿದ್ದೆಯಲ್ಲಿ ದೇಹರಕ್ಷಣೆಯ ಹೊಣೆ ಪಂಚಪ್ರಾಣಗಳದ್ದು· ಇಲ್ಲೊಂದು ಸುಂದರವಾದ ಉಪಮೆಯುಂಟು· ದೇಹವೇ ನಗರ· ಇಂದ್ರಿಯಗಳು ಮುಖ್ಯದ್ವಾರಗಳು· ಅಪಾನವಾಯುವು ಗಾರ್ಹಪತ್ಯಾಗ್ನಿ· ಪ್ರಾಣವಾಯುವು ಆಹವನೀಯಾಗ್ನಿ· ವ್ಯಾನವೇ ದಕ್ಷಿಣಾಗ್ನಿ· ಹೃದಯದಲ್ಲಿ ಪಂಚ-ಸುಷಿರಗಳಿವೆ · ಅದರಲ್ಲಿ ದಕ್ಷಿಣದ ಬಲದಿಂದ ವ್ಯಾನ ನಿರ್ಗಮನ· ಉಚ್ಛ್ವಾಸ ನಿಶ್ವಾಸಗಳೇ ಆಹುತಿ· ಸಮಾನವು ಇದನ್ನು ಸಮದಲ್ಲಿರಿಸುತ್ತದೆ· ಮನ ಅಧಿಕಾರಿ· ಉದಾವ ಕರ್ಮಫಲ· ಇದೇ ಮನವನ್ನು ಬ್ರಹ್ಮದೊಂದಿಗೆ ಹೊಂದಿಸುತ್ತದೆ·

ಸರ್ವವ್ಯಾಪಕಬ್ರಹ್ಮದ ಸ್ಥಾನ ಪುರೀತತ್ ನಾಡಿಯಲ್ಲಿ· ನಿದ್ದೆಯಲ್ಲಿ ಜೀವನು ಬ್ರಹ್ಮೈಕದೊಡನೆ ಸೇರುತ್ತಾನೆ · ಮನಸ್ಸೂ ಸುಷುಪ್ತಿಯಲ್ಲಿ ಪುರೀತನ್ನಾಡಿಯನ್ನು ಸೇರುತ್ತದೆ · ಸುಷುಪ್ತಿ ಅವಸ್ಥೆಗೆ ಮುನ್ನವೇ ಸ್ವಪ್ನ· ಸ್ವಪ್ನದ ಅನುಭವಿ ಜೀವಾತ್ಮ · ಜಾಗ್ರದವಸ್ಥೆಯಲ್ಲಿ ಜೀವಾತ್ಮನೇ ಇಂದ್ರಿಯದ್ವಾರಾ ಪ್ರತ್ಯಕ್ಷಾನುಭವವನ್ನು ಪಡೆಯುತ್ತಾನೆ· ಆದರೆ ಸ್ವಪ್ನಾವಸ್ಥೆಯಲ್ಲಿ ಇಂದ್ರಿಯಗಳ ಸಹಾಯ ಬೇಕಿಲ್ಲ· ಸ್ವಪ್ನವು ಸುಖ· ಸುಷುಪ್ತಿ ಸುಖತರ ಸುಖತಮ· ಸುಷುಪ್ತಿಯಲ್ಲಿ ಸ್ವಪ್ನ ಕಾಣಲಾಗದು·

ಮತ್ತೊಂದು ದೃಷ್ಟಾಂತ ಹಕ್ಕಿಗಳದ್ದು· ಅವು ಹೊರಹೊರಟು, ಗೂಡಿಗೆ ಹಿಂದಿರುಗುತ್ತವೆ· ಅಂತೆಯೇ ಇಂದ್ರಿಯ ಮತ್ತು ಮನಸ್ಸು, ಪಂಚಪ್ರಾಣ, ಜೀವ ಎಲ್ಲವೂ ಸುಷುಪ್ತಿಯಲ್ಲಿ ಒಂದುಗೂಡಿರುತ್ತವೆ·

ಪಂಚಭೂತ, ಪಂಚತನ್ಮಾತ್ರೆ, ಪಂಚಜ್ಞಾನೇಂದ್ರಿಯ, ಕರ್ಮೇಂದ್ರಿಯ, ಮನಸ್ಸು, ಬುದ್ಧಿ, ಅಹಂಕಾರಾದಿ ಸಾಂಖ್ಯದರ್ಶಿತ ತತ್ತ್ವಗಳೂ ಪರಮಾತ್ಮನಲ್ಲಿ ನೆಲೆಗೊಂಡಿವೆ·

ಜೀವಾತ್ಮನು ದರ್ಶಕ, ಶ್ರೋತಾ, ಘ್ರಾತಾ, ರಸಯಿತಾ · ಇವನು ಮನನಮಾಡಬಲ್ಲ · ವಿಜ್ಞಾನಸ್ವರೂಪೀ · ನಾಶರಹಿತ ಭಗವಂತನಲ್ಲಿ ಸೇರಬಲ್ಲ · ಆದರೂ ಪಾರತಂತ್ರ್ಯದಲ್ಲಿರಬೇಕು · ಸ್ವತಂತ್ರನಂತೂ ಅಲ್ಲ·

ಪರಮಾತ್ಮ ಶುದ್ಧ, ಅಖಿಲಹೇಯಪ್ರತ್ಯನೀಕ, ಅವನಿಗೆ ನಾಶವೇ ಇಲ್ಲ· ಪರಮಾತ್ಮೋಪಾಸಕನಿಗೆ ಪರಬ್ರಹ್ಮಲಾಭ· ಉಪಾಯ ಉಪೇಯಗಳೆರಡೂ ಪರಮಾತ್ಮನೇ·

## ಪಂಚಮ ಪ್ರಶ್ನ

ಸೌರ್ಯಾಯಣಿಯ ಪ್ರಶ್ನೆಗೆ ಪಿಪ್ಪಲಾದರ ಪ್ರತಿವಚನ ಮುಗಿದಿತ್ತು. ಐದನೆಯ ಪ್ರಶ್ನೆಯನ್ನು ಕೇಳಿದವನು ಶೈಬ್ಯನಾದ ಸತ್ಯಕಾಮ. 'ಪ್ರಣವೋಪಾಸಕನ ಸಾಧನೆ ಏನು?' ಈ ಜಿಜ್ಞಾಸೆಯು ಗಂಭೀರವಾದುದು. ಆಚಾರ್ಯ ಶ್ರೇಷ್ಠರಾದ ಪಿಪ್ಪಲಾದರು ಉತ್ತರಿಸುತ್ತಾರೆ. ಪ್ರಣವವು ಬ್ರಹ್ಮವಾಚಿ ಪ್ರಣವವು ತ್ರಿವಿಧ. ಏಕಮಾತ್ರಾಕಾಲಿಕ, ದ್ವಿಮಾತ್ರಾಕಾಲಿಕ ಮತ್ತು ತ್ರಿಮಾತ್ರಾಕಾಲಿಕ. ಏಕ ಮತ್ತು ದ್ವಿಮಾತ್ರಾಕಾಲಿಕ ಓಂಕಾರಗಳು ಅಪರಬ್ರಹ್ಮವಾಚಕಗಳು. ಇವಕ್ಕೆ ಹ್ರಸ್ವಪ್ರಣವಗಳೆನ್ನುತ್ತಾರೆ.

ಏಕಮಾತ್ರ ಹ್ರಸ್ವಪ್ರಣವೋಪಾಸಕನು ಪುನರ್ಜನ್ಮದಲ್ಲಿ ಮರ್ತ್ಯಲೋಕ ಸೇರುತ್ತಾನೆ. ಋಙ್ಮಂತ್ರಗಳೇ ಅವಕ್ಕೆ ಕಾರಣ. ಮನುಷ್ಯ ಶರೀರಿಯಾಗುತ್ತಾನೆ. ಪ್ರಣವೋಪಾಸನೆಯ ಫಲದಿಂದ ತಪಸ್ವಿಯಾಗುತ್ತಾನೆ. ಬ್ರಹ್ಮಚರ್ಯನಿಷ್ಠನಾಗುತ್ತಾನೆ. ಆಸ್ತಿಕ್ಯನಾಗುತ್ತಾನೆ.

ದ್ವಿಮಾತ್ರಾಕಾಲಿಕ ಪ್ರಣವೋಪಾಸಕನನ್ನು ಯಜುರ್ಮಂತ್ರಗಳು ಸೋಮಲೋಕಕ್ಕೆ ಒಯ್ಯುತ್ತವೆ. ಪುಣ್ಯ ಕ್ಷಯಿಸಲು ಭೂಲೋಕಕ್ಕೆ ಮತ್ತೆ ಪ್ರವೇಶ.

ತ್ರಿಮಾತ್ರಾವಧಿಯ ಪ್ರಣವೋಪಾಸನೆಯು ಸಾಮಗಾನದಿಂದ ಸಾಧಕನನ್ನು ವೈಕುಂಠಕ್ಕೆ ಒಯ್ಯುತ್ತದೆ. ಅಲ್ಲಿ ಪರಬ್ರಹ್ಮಪ್ರಾಪ್ತಿ. ಇದೇ ಪ್ಲುತಪ್ರಣವೋಪಾಸನದ ಫಲ. ಪ್ರಣವೋಪಾಸನೆಗೆ ಸಾಧಕನಲ್ಲಿ ಮಾತ್ರಾ-ಮಾತ್ರೆಗಳ ವಿವೇಕವಿರಬೇಕು. ಸಮರ್ಪಕ ತಿಳಿವು ಮತ್ತು ಪ್ರಯೋಗ, ಸಮರ್ಥ ಫಲದಾಯಕ.

## ಷಷ್ಠ ಪ್ರಶ್ನ

ಆರನೆಯ ಪ್ರಶ್ನೆಯು ಸತ್ಯಕಾಮನದು. ಅವನು ಆಚಾರ್ಯರನ್ನು ನುತಿಸಿ ಕೇಳಿದನು. 'ಆರ್ಯರೇ! ಇದು ಹಿರಣ್ಯನಾಭಿಯ ಪ್ರಶ್ನೆ. ಅವನು ಕೋಸಲಾಧಿಪತಿ. ನನಗುತ್ತರ ತಿಳಿದಿಲ್ಲ. ದಯವಿಟ್ಟು ವಿವರಿಸಿ. ಹದಿನಾರು ಕಲೆಗಳುಳ್ಳ ಪುರುಷನಾರು? ಎಲ್ಲಿದ್ದಾನೆ?'

ಆಚಾರ್ಯರು ಉತ್ತರವನ್ನು ನೀಡಿದರು. 'ಷೋಡಶಕಲಾತ್ಮಕ ಪುರುಷನು ಈ ದೇಹದಲ್ಲೇ ಇದ್ದಾನೆ. ಆ ಕಲೆಗಳೇ ಸುಖದುಃಖಭೋಗಕ್ಕೆ ಸಹಾಯ ಮಾಡುತ್ತವೆ. ಭಗವಂತನ ಸೃಷ್ಟಿಯಲ್ಲಿ ಇದೂ ಒಂದು. ಆದರೆ ಜೀವನು ಭೋಗಿ.

ಮೊಟ್ಟಮೊದಲ ಕಲೆ ಮುಖ್ಯಪ್ರಾಣ. ಅದರ ಸೃಷ್ಟಿ ಮೊದಲಾಯಿತು. ಬಳಿಕ ಉಳಿದ ಹದಿನೈದು ಕಲೆಗಳೂ ಸೃಷ್ಟವಾದುವು. ಅವು ಶ್ರದ್ಧೆ, ಪಂಚಭೂತಗಳು, ಇಂದ್ರಿಯಗಳು, ಮನಸ್ಸು, ಅನ್ನ, ವೀರ್ಯ, ತಪ, ಮಂತ್ರ, ಕರ್ಮ, ಮತ್ತು ಲೋಕಗಳು. 'ನದೀನಾಂ ಸಾಗರೋ ಗತಿಃ' ಎಂಬಂತೆ

ಷೋಡಶಕಲೆಗಳೂ ಗಮ್ಯಸ್ಥಾನವಾದ ಸಹಸ್ರಶೀರ್ಷಪುರುಷನಲ್ಲಿಯೇ ಲಯಹೊಂದುತ್ತವೆ . ಇವುಗಳ ಮೂಲನೆಲೆ ಪರಬ್ರಹ್ಮ . ಇವನು ನಿಷ್ಕಲಂಕ, ಅಮೃತ.

ಪರಮಾತ್ಮ ರಥದ ಗುಂಭ . ಅರೆಕಾಲುಗಳು ಷೋಡಶಕಲೆಗಳು . ಪರಬ್ರಹ್ಮದರಿವು ಮೂಡಿದವನನ್ನು ಮೃತ್ಯುವೂ ಮುಟ್ಟಲಾರದು . ಆ ಪರಬ್ರಹ್ಮ ಸೀಮಾತೀತ, ಅಪರಿಚ್ಛಿನ್ನ, ಅನಂತ ಎಂಬರಿವೇ ಬ್ರಹ್ಮ ವಿಚಾರದಲ್ಲಿ ಪೂರ್ಣಜ್ಞಾನ . ಹೀಗೆ ಅರ್ಹರಾದ ಅಂತೇವಾಸಿಗಳಿಗೆ ಭಗವಾನ್ ಪಿಪ್ಪಲಾದರು ತಮ್ಮ ತಪಃಫಲವಾದ ಅನುಭವವನ್ನೇ ಧಾರೆಯೆರೆದರು . ಅವರ ಅವಿದ್ಯೆಯನ್ನು ದೂರೀಕರಿಸಿದರು . ಅವರಲ್ಲಿ ಅರಿವಿನ ನೇಸರು ಮೂಡಿತು . ಪಿಪ್ಪಲಾದರಂತಹ ಗುರುಗಳನ್ನು ಪಡೆದ ಶಿಷ್ಯರ ಜನ್ಮ ಸಾರ್ಥಕ. ಅಂತಹ ಶಿಷ್ಯರನ್ನು ಪಡೆದ ಗುರುಗಳೂ ಕೃತಕೃತ್ಯರು.

ಪೂಜ್ಯಪಿಪ್ಪಲಾದರ ಶಿಷ್ಯವಾತ್ಸಲ್ಯ ಮಾತೃವಾತ್ಸಲ್ಯಕ್ಕೆ ಸಮನಾದುದು . ಹಸು-ಕರುವಿನ ದೃಷ್ಟಾಂತವೇ ಇದಕ್ಕೆ ಸಾಕ್ಷಿ . ಶಿಸ್ತಿನಲ್ಲಿ ಆಚಾರ್ಯರು ತಂದೆಯಂತೆ ಇದ್ದರು . 'ಪಂಚೈತೇ ಪಿತರಃ ಸ್ಮೃತಾಃ' ಅಲ್ಲವೇ? ಜ್ಞಾನದಾತ ಗುರುದೇವನೂ ತಂದೆಯೇ!.

ಶಿಷ್ಯವರ್ಗ ಗಂಧಪುಷ್ಪಗಳಿಂದ ಗುರುವಿನ ಪಾದಾರ್ಚನೆ ಮಾಡಿದರು . ನಿಗಮಶಾಖಿಶಿಖಾ-ಪ್ರವಾಲದಂತಿದ್ದ ಅವರ ಅಂಘ್ರಿದ್ವಯಕ್ಕೆರಗಿದರು . ಗುರು-ಶಿಷ್ಯರೀರ್ವರೂ ಧನ್ಯತೆಯ ಕಡಲಲ್ಲಿ ಮುಳುಗಿದರು.

✡ ✱ ✡

## ವಿಭಿನ್ನ ದೃಷ್ಟಿಕೋನಗಳು

ಉಪನಿಷದ್ವ್ಯಾಖ್ಯಾನಗಳು ಹಲವು. ಆಚಾರ್ಯ ಶಂಕರರ ವ್ಯಾಖ್ಯಾನವು ಪ್ರಚಲಿತವಾಗಿದೆ. ಅವರು ನಿವೃತ್ತಿ ಮಾರ್ಗವನ್ನು ಉಪದೇಶಿಸಿದ್ದಾರೆ . ಆದರೆ ಭಗವದ್ರಾಮಾನುಜರ ದೃಷ್ಟಿಯೇ ಭಿನ್ನವಾದುದು . ಅವರು ಪ್ರವೃತ್ತಿ ಸಹಿತವಾದ ನಿವೃತ್ತಿಯನ್ನು ಬೋಧಿಸಿದ್ದಾರೆ . ಇದೇ ಅತೀವ ಮುಖ್ಯವಾದುದು . ಕಾರಣ ಎಲ್ಲೆಲ್ಲೂ ಪಾಶ್ಚಿಮಾತ್ಯ ಸಂಸ್ಕೃತಿಯ ನೆರಳು ಕಾಣುತ್ತಿದೆ . ಇಂದಿನ ಸಾಮಾಜಿಕ ಪರಿಸ್ಥಿತಿಗೆ ಆಚಾರ್ಯ ರಾಮಾನುಜರ ದೃಷ್ಟಿ ಬಹಳ ಉಪಯುಕ್ತವಾದುದು . ಅದರಂತೆ ನಡೆದರೆ ಪ್ರೇಯಶ್ರೇಯಗಳ ಸಾಮರಸ್ಯ ಮೂಡುತ್ತದೆ.

ದಶೋಪನಿಷದ್ಗ್ರಂಥಮಾಲೆಯನ್ನು ಸಹೃದಯವೃಂದಕ್ಕೆ ಒಪ್ಪಿಸುವ ಉದ್ದೇಶವೇ ಬದುಕಿನಲ್ಲಿ ಶಾಂತಿ ಮೂಡಿಸಲು . ಎಲ್ಲ ಉಪನಿಷತ್ತುಗಳಿಗೂ ವಿಮರ್ಶಾತ್ಮಕವಾದ ಕನ್ನಡ ಅವತರಣಿಕೆಯೂ ಪ್ರಕಟಿತವಾಗುತ್ತದೆ.

## ಪ್ರಶ್ನೋಪನಿಷತ್ ಶೈಲಿ

ಪ್ರಶ್ನೋಪನಿಷತ್ತಿನ ಶೈಲಿ ಗದ್ಯಾಪದ್ಯಾತ್ಮಕವಾದುದು. ಇಲ್ಲಿ ಶಿಷ್ಯರ ಪ್ರಶ್ನೆಗಳಿಗೆ ಆಚಾರ್ಯರ ಉತ್ತರ-ಮುಖೇನ ವಿಷಯ ಪ್ರತಿಪಾದನೆಯಿದೆ. ಆದ್ದರಿಂದಲೇ ಇದಕ್ಕೆ ಪ್ರಶ್ನೋಪನಿಷತ್ತೆಂದು ಹೆಸರು. ಇದೇ ರೀತಿಯ ಪ್ರತಿಪಾದನೆ ಕೇನೋಪನಿಷತ್ತಿನಲ್ಲೂ ಉಂಟು. ಪ್ರಾರಂಭದಲ್ಲಿ ಛಾಂದೋಗ್ಯದ ಶೈಲಿ ಕಂಡುಬರುತ್ತದೆ.

## ಪ್ರಶ್ನೋಪನಿಷತ್ ಸಾರ

ಜಗತ್ ಸೃಷ್ಟಿ, ಸ್ಥಿತಿ, ಮುಖ್ಯಪ್ರಾಣ, ಜಾಗ್ರತ್-ಸ್ವಪ್ನ-ಸುಷುಪ್ತಿ ಅವಸ್ಥಾತ್ರಯಗಳು, ಷೋಡಶಕಲಾತ್ಮಕಪುರುಷ, ಪರಬ್ರಹ್ಮ ವಿಚಾರಗಳೇ ಪ್ರಶ್ನೋಪನಿಷದ್ವಿಷಯಗಳು

ಸೃಷ್ಟಿಗೆ ಮೂಲ ಪ್ರಾಣ ಮತ್ತು ರಯಿಗಳು. ಇವುಗಳು ಸೃಷ್ಟವಾದದ್ದು ಪರಬ್ರಹ್ಮನಿಂದ ಪಂಚಪ್ರಾಣಗಳೂ ತಮ್ಮಿಂದಲೇ ಜೀವಿಗಳ ಇರುವಿಕೆ ಎಂದು ತಿಳಿದಿದ್ದುವು. ಆದರೆ ಮುಖ್ಯಪ್ರಾಣ ಅವೆಲ್ಲ ತನ್ನ ಅಧೀನವೆಂದು ತೋರಿದ. ಆ ಮುಖ್ಯಪ್ರಾಣನೂ ಪರಮಾತ್ಮಾಧೀನ

ಜಾಗ್ರದವಸ್ಥೆಯಲ್ಲಿ ಇಂದ್ರಿಯಗಳು ತಮ್ಮ ತಮ್ಮ ಕೆಲಸಗಳನ್ನು ಮಾಡುತ್ತವೆ. ಜೀವಾತ್ಮನೇ ಸ್ವಪ್ನವನ್ನು ಕಾಣುವನು. ಸುಷುಪ್ತಿಯಲ್ಲಿ ಜೀವ-ಬ್ರಹ್ಮರ ಮಿಲನ.

ಷೋಡಶಕಲಾತ್ಮಕಪುರುಷನು ಸೃಷ್ಟವಾದದ್ದೂ ಪರಬ್ರಹ್ಮಗಳೇ. ಷೋಡಶಕಲೆಗಳೆಂದರೆ ಷೋಡಶ ತತ್ತ್ವಗಳೆಂದರ್ಥ.

ಜಗತ್ತಿನ ಸೃಷ್ಟಿ-ಸ್ಥಿತಿ-ಲಯಕಾರಕ, ಕಾರಣ, ಅದರ ಕಾರ್ಯರೂಪಜಗತ್ತೆಲ್ಲವೂ ಪರಮಾತ್ಮಾಧೀನ ಇದೇ ಪ್ರಶ್ನೋಪನಿಷತ್ತಿನ ಸಾರ.

## ಪಿಪ್ಪಲಾದರ ವ್ಯಕ್ತಿತ್ವ

ಪೂಜ್ಯಪಿಪ್ಪಲಾದರು ಬ್ರಹ್ಮಜ್ಞಾನಿಗಳು. ಅವರಲ್ಲಿಗೆ ಶಿಷ್ಯವೃತ್ತಿಗೆ ಬಂದವರೂ ಬ್ರಹ್ಮಜಿಜ್ಞಾಸುಗಳು. ಗುರುಗಳು ತಕ್ಷಣವೇ ಪಾಠ ಹೇಳಲಿಲ್ಲ. ಅವರಿಗೆ ಗುರುಕುಲವಾಸವನ್ನು ವಿಧಿಸಿದರು. ಇದು ಶಿಷ್ಯರ ಅಂತಃಸತ್ವದ ಪರೀಕ್ಷೆಗಾಗಿ. ಉಪನಿಷತ್ತುಗಳನ್ನು ಅನರ್ಹರಿಗೆ ಉಪದೇಶಿಸಬಾರದು. ಗುರುವು ಶಿಷ್ಯರಿಗಾಗಿ ಹಾತೊರೆಯಲೂ ಬಾರದು. ಇದೇ ಅವರಲ್ಲಿರಬೇಕಾದ ಶಿಸ್ತು.

'ಸಂವತ್ಸರಾನಂತರ ನನಗೆ ತಿಳಿದಷ್ಟನ್ನು ತಿಳಿಸುವೆ' ಎಂಬುದು ಆ ವಿದ್ವಜ್ಜನರ ವಿನಯದ ಪ್ರತಿಬಿಂಬ · ಅದು ಜ್ಞಾನದ ವೈಶಾಲ್ಯದ ದ್ಯೋತಕವೂ ಹೌದು · ಬಳಿಕ ಅವರು ಶಿಷ್ಯರಿಗೆ ತಮ್ಮ ಸಾಕ್ಷಾತ್ಕರಣ ಶಕ್ತಿಯನ್ನೇ ಸಂಪೂರ್ಣವಾಗಿ ಧಾರೆಯೆರೆದರು · ಇದು ಅವರ ಸೌಲಭ್ಯ ಮತ್ತು ಸೌಜನ್ಯಗಳನ್ನು ತೋರುತ್ತದೆ · ಪಿಪ್ಪಲಾದರೊಬ್ಬರು ಆದರ್ಶಗುರುಗಳು · ಅವರ ಶಿಷ್ಯವಾತ್ಸಲ್ಯ, ಸ್ನಿಗ್ಧತೆಗೆ ಉಪಮಾನ ಕೊಟ್ಟಿರುವುದು ಹಸು-ಕರುಗಳದ್ದು·

ಜನ್ಮಕೊಟ್ಟ ತಂದೆಗಿಂತಲೂ ಅಂತಹ ಗುರುಗಳೇ ನಮನಾರ್ಹರು · ತಂದೆಯಿತ್ತ ದೇಹರುಧಿರಮಾಂಸಾದಿ ನಿರ್ಮಿತ · ಅದು ನಶ್ವರವಾದುದು · ಆಚಾರ್ಯರಿತ್ತ ಉಪದೇಶ ಸಂಸಾರ ಚಕ್ರದಿಂದಲೇ ನಮ್ಮನ್ನು ಮುಕ್ತರನ್ನಾಗಿಸುತ್ತದೆ·

## ಬ್ರಹ್ಮಜಿಜ್ಞಾಸುಗಳು

ವಿನಯ, ವಿಧೇಯತೆಗಳೇ ವಿದ್ಯಾರ್ಥಿಗಳ ಪ್ರಥಮ ಲಕ್ಷಣ· ಎರಡನೆಯದಾಗಿ ಸುಖದ ತ್ಯಾಗ·

ಸುಖಾರ್ಥಿನಃ ಕುತೋ ವಿದ್ಯಾ
ಕುತೋ ವಿದ್ಯಾರ್ಥಿನಃ ಸುಖಮ್?

ಎಂದೇ ಬ್ರಹ್ಮಚರ್ಯೆ ಅಧ್ಯಯನಪಟುಗಳಿಗೆ ಅತ್ಯವಶ್ಯಕವಾದುದು·

ಆಚಾರ್ಯ ಪಿಪ್ಪಲಾದರು ವಿಧಿಸಿದ ಗುರುಕುಲವಾಸದ ಅವಧಿಯಲ್ಲಿ ಅವರ ಶಿಷ್ಯರೆಲ್ಲರೂ ವಿನೀತರಾಗಿದ್ದರು · ಅವರಲ್ಲಿ ಶ್ರದ್ಧೆಯಿತ್ತು · ನೈಷ್ಠಿಕಬ್ರಹ್ಮಚರ್ಯೆಯಲ್ಲಿದ್ದರು · ಅಷ್ಟವಿಧವಾದ ಮೈಥುನತ್ಯಾಗ ಮಾಡಿದ್ದರು · ಮಿತಾಹಾರಿಗಳಾಗಿದ್ದರು · ಶಿಸ್ತು, ಸಂಯಮಗಳಿಂದ ಅವರ ಮನಸ್ಸು, ಬುದ್ಧಿ ಪಕ್ವವಾಗಿತ್ತು·

ಬಳಿಕ ಕಬಂಧಿ, ವೈದರ್ಭಿ, ಕೌಸಲ್ಯ, ಸೌರ್ಯಾಯಣಿ, ಸತ್ಯಕಾಮ, ಸುಕೇಶರು ಒಬ್ಬರಾದ ಮೇಲೆ ಒಬ್ಬರು ಜಿಜ್ಞಾಸುಗಳಾಗಿ ಆಚಾರ್ಯರನ್ನು ಪ್ರಶ್ನಿಸಿದರು · ಅವರಲ್ಲಿ ಪರಸ್ಪರ ಆಗ್ರಹವಿರಲಿಲ್ಲ · ಅನಸೂಯರಾಗಿದ್ದರು · ಶಿಷ್ಯರ ಪ್ರಶ್ನೆಗಳಿಗೆ ಆಚಾರ್ಯರು ನಿಷ್ಪಕ್ಷಪಾತವಾಗಿ ಉತ್ತರಿಸಿದರು · ಅವರ ಜ್ಞಾನದಾಹ ತಣಿವವರೆಗೆ, ಅವರೆಲ್ಲರೂ ಸಂತೃಪ್ತರಾಗುವಂತೆ ಉತ್ತರವನ್ನು ನೀಡಿದರು·

ಆದರೂ ಅತ್ಯುತ್ತಮವಾದ ಪ್ರಶ್ನೆ ಕೇಳಿದವನು ಕೌಸಲ್ಯ · ಅವನೇ ಅವರ ಶಿಷ್ಯೋತ್ತಮ · ಇತರರ ಪ್ರಶ್ನೆಗಳು ನಿಯಮಿತವಾಗಿ, ನೇರವಾಗಿ ಪರಮಾತ್ಮ ತತ್ವದಲ್ಲಿ ಕೇಂದ್ರೀಕೃತವಾಗಿಲ್ಲ · ಕೌಸಲ್ಯ ಮುಖ್ಯಪ್ರಾಣನ ಜನನ ಯಾವುದರಿಂದ ಎಂದು ಕೇಳುತ್ತಾನೆ · ಅದು ಪರಬ್ರಹ್ಮದಿಂದ ಅವನ ಪ್ರಶ್ನೆಯೇ ಅವನು ಬ್ರಹ್ಮವಿದ್ಯೆಗೆ ಅರ್ಹನೆಂದು ಸಾರುತ್ತದೆ · ಇದನ್ನು ಗುರುಗಳೂ ತಿಳಿಸುತ್ತಾರೆ · ಶಿಷ್ಯನು

ಶ್ಲಾಘ್ಯನೆನ್ನುತ್ತಾರೆ. ಅವನನ್ನು ಅಭಿನಂದಿಸುತ್ತಾರೆ. ಹೀಗೆ ಈ ಆದರ್ಶ ಆಚಾರ್ಯ ಮತ್ತು ಅರ್ಹ ಅಂತೇವಾಸಿಗಳ ನಡುವೆ ಇದ್ದ ವಿದ್ಯಾಸಂಧಿಯು ಜ್ಞಾನದಾಯಕವಾದುದು.

## ಪ್ರಶ್ನೋಪನಿಷತ್ತಿನ ವೈಶಿಷ್ಟ್ಯ

ಉಪನಿಷತ್ತುಗಳೆಲ್ಲ ಒಕ್ಕೊರಲಿನಿಂದ ಒಂದನ್ನೇ ನುಡಿಯುತ್ತವೆ. ಅಲ್ಲಿರುವ ಪುನರುಕ್ತಿಯು ಉಪನಿಷತ್ಪ್ರತಿಪಾದ್ಯವಾದ ವಿಷಯವು ಮನದಾಳಕ್ಕೆ ನಾಟುವಂತೆ ಮಾಡುತ್ತದೆ. ಎಲ್ಲ ಉಪನಿಷದ್ಗರ್ಭದಲ್ಲಡಗಿರುವುದೂ ಪರಬ್ರಹ್ಮಚಿಂತನೆಯೇ ಆಗಿದೆ. ಆದರೂ ಪ್ರತಿಪಾದನಾ ರೀತಿಯಲ್ಲಿ ಒಂದರಂತೆ ಮತ್ತೊಂದಿಲ್ಲ. ಈಶಾವಾಸ್ಯದಲ್ಲಿ ವಿಶ್ವಾಂತರ್ಯಾಮಿ ಮತ್ತು ವಿಶ್ವವ್ಯಾಪಿ ಪರಬ್ರಹ್ಮ ಎಂದು ನೇರವಾಗಿ ಹೇಳಿದೆ.

'ಈಶಾವಾಸ್ಯಂ ಇದಂ ಸರ್ವಂ' ಎಂದು ಪ್ರಾರಂಭವಾಗುತ್ತದೆ. ಫಲ-ಸಂಗ-ಕರ್ತೃತ್ವತ್ಯಾಗ ಪೂರ್ವಕವಾದ ಭೋಗವನ್ನು ಈ ಉಪನಿಷತ್ತು ಹೇಳುತ್ತದೆ. ಇಲ್ಲಿ ನೇರವಾದ ವಿಷಯ ಪ್ರತಿಪಾದನೆಯುಂಟು

ಕೇನ ಮತ್ತು ಕಠಗಳಲ್ಲಿ ಒಂದೊಂದು ಆಖ್ಯಾಯಿಕೆಯುಂಟು. ಅವುಗಳ ಮುಖೇನ ಪರತತ್ತ್ವದ ವಿಚಾರವು ವಿವೃತವಾಗಿದೆ. ಪ್ರಶ್ನೆಯಿಂದಲೇ ಆರಂಭವಾಗುತ್ತದೆ ಕೇನೋಪನಿಷತ್ತು 'ಕೇನೇಷಿತಂಪತತಿ ಪ್ರೇಷಿತಂ ಮನಃ' ಎಂದು ಇಲ್ಲಿ ಪರಬ್ರಹ್ಮವನ್ನು ತದ್ವನಮಿತ್ಯುಪಾಸಿತವ್ಯಮ್ ಎಂದಿದೆ ಇಲ್ಲಿ ವಿದ್ಯೋಪಾಸನೇಯ ವಿಚಾರವು ಉಕ್ತವಾಗಿದೆ. ಕಠದಲ್ಲಿ ನಾಚಿಕೇತಾಗ್ನಿಯ ವಿಚಾರವುಂಟು. ಹೀಗೆ ಆಖ್ಯಾಯಿಕಗಳು ಓದುಗರ ಆಸಕ್ತಿಯನ್ನು ಕೆರಳಿಸುತ್ತದೆ. ಪ್ರಶ್ನೋಪನಿಷತ್ತೂ ಕೇನದಂತೆ ಪ್ರಶ್ನೋತ್ತರ ರೂಪವಾಗಿದೆ ಇಲ್ಲಿ ಶಿಷ್ಯರ ಆರು ಪ್ರಶ್ನೆಗಳೂ ಹಂತಹಂತವಾಗಿ ಅವರ ಜ್ಞಾನದ ವಿಕಾಸವನ್ನು ತೋರಿಸುತ್ತದೆ ; ಈ ರೀತಿಯಾಗಿ ವಿವಿಧ ಹಂತಗಳಲ್ಲಿ ಕ್ರಮಬದ್ಧವಾಗಿ ವಿಷಯ ನಿರೂಪಣೆಯು ಇನ್ನಾವುದೇ ಉಪನಿಷತ್ತಿನಲ್ಲಿ ಇಲ್ಲವೆಂದೇ ಹೇಳಬಹುದು.

ಪ್ರಶ್ನದಲ್ಲಿ ಸೃಷ್ಟಿಗೆ ಕಾರಣವಾದ ಮೂಲಭೂತವಸ್ತುಗಳ ಬಗ್ಗೆ ಉಲ್ಲೇಖವಿದೆ. ಬಳಿಕ ಸ್ಥಿತಿಯ ವಿಚಾರ, ಮೂಲಭೂತವಸ್ತುಗಳ ಅಸ್ತಿತ್ವವು ಯಾವುದರಿಂದ? ಎಂಬುದು ಇನ್ನೊಂದು ಪ್ರಶ್ನೆ. ಆ ಅಸ್ತಿತ್ವವು ಮುಖ್ಯಪ್ರಾಣನಿಂದ. ಮುಖ್ಯಪ್ರಾಣನ ಇರುವಿಕೆಗೆ ಆಧಾರ ಯಾವುದು? ಅದೇ ಜೀವಾತ್ಮ ಜೀವನಿಗೆ ಅವಸ್ಥಾತ್ರಯಗಳಿವೆ - ಜಾಗ್ರತ್, ಸ್ವಪ್ನ, ಸುಷುಪ್ತಿಗಳು ಅವು. ಜಾಗ್ರದವಸ್ಥೆಯಲ್ಲಿ ಇಂದ್ರಿಯಗಳ ಪ್ರೇರಕ ಜೀವ. ಸ್ವಪ್ನಾವಸ್ಥೆಯಲ್ಲಿ ಸ್ವಪ್ನ ಕಾಣುವುದೂ ಜೀವನೇ. ಆದರೆ ಸುಷುಪ್ತಾವಸ್ಥೆಯಲ್ಲಿ ಜೀವಾತ್ಮನಿಗೂ ಆಧಾರಭೂತನಾದ ಪರಮಾತ್ಮನೊಡನೆ ಸಮ್ಮಿಲನ. ಆ ಪರಮಾತ್ಮ ಜಗತ್ಕಾರಣವಸ್ತು ಆ ಪರಬ್ರಹ್ಮದತ್ತ ನಮ್ಮನ್ನು ಒಯ್ಯುವುದು ಪ್ರಣವೋಪಾಸನೆ. ಹೀಗೆ ಕ್ರಮಕ್ರಮವಾಗಿ, ಹಂತ ಹಂತವಾಗಿ ವಿಷಯ ನಿರೂಪಣೆ ಇಲ್ಲುಂಟು. ಇದೇ ಪ್ರಶ್ನೋಪನಿಷತ್ತಿನ ವಿಷಯಪ್ರತಿಪಾದನಾ

ವೈಶಿಷ್ಟ್ಯ · ಮತ್ತೊಂದು ಮುಖ್ಯ ವಿಷಯವೆಂದರೆ ಷೋಡಶಕಲಾತ್ಮಕ ಪುರುಷ ಯಾರು? ಎಂಬುದು. ಆವನೇ ಪರಮಾತ್ಮ · ಪರಮಾತ್ಮನನ್ನು ಷೋಡಶಕಲಾತ್ಮಕನಾದ ಪುರುಷನೆಂದರಿತು ಉಪಾಸಿಸಬೇಕು · ಈ ರೀತಿಯ ವಿಚಾರಧಾರೆಯು ಇನ್ನಿತರ ಯಾವುದೇ ಉಪನಿಷತ್ತಿನಲ್ಲಿಲ್ಲ · ಇದೇ ಇದರ ವೈಶಿಷ್ಟ್ಯ ಪ್ರಶ್ನೋಪನಿಷತ್ತು ಗದ್ಯಪದ್ಯಾತ್ಮಕವಾದುದು · ಇದರ ಪ್ರಾರಂಭದಲ್ಲಿ ಛಾಂದೋಗ್ಯದ ಶೈಲಿ ಕಂಡು ಬರುತ್ತದೆ · ಪ್ರಶ್ನದಲ್ಲಿ ಪ್ರಾಣ-ರಯಿಯಂತಹ ಸಾಂಕೇತ್ಯ ಪದಗಳ ಬಳಕೆ ನುಡಿಯಲ್ಲಿನ ಗಂಭೀರ ನಿಲುವನ್ನು ಸೂಚಿಸುತ್ತವೆ · ನೇರನುಡಿಯಿಂದ ಅಶ್ಲೀಲವೆನಿಸಬಹುದಾದ ವಿಷಯಗಳು ಇಲ್ಲಿಯ ಸಮರ್ಥ ಪ್ರಯೋಗದಿಂದ ಶ್ಲೀಲವೆನಿಸಿವೆ · ಗಂಭೀರ ಪ್ರತಿಪಾದನೆಯು ಇಲ್ಲಿ ಸ್ತುತ್ಯಾರ್ಹವಾದುದು · ಇಂತಹ ಪ್ರತಿಪಾದನೆ ಸಾಮಾನ್ಯ ಓದುಗರನ್ನು ಪ್ರಶಮನಗೊಳಿಸುತ್ತದೆ·

ಇಲ್ಲಿ ಜಾಗ್ರತ್ - ಸ್ವಪ್ನ - ಸುಷುಪ್ತಿಗಳ ಬಗ್ಗೆ ಹೇಳುವಾಗ, ಜೀವನನ್ನು ಆದಿತ್ಯ ಎನ್ನಲಾಗಿದೆ ಉದಯಮಾನಸೂರ್ಯನು ಜೀವ · ಆ ಸೂರ್ಯರಶ್ಮಿಗಳು ಜೀವನ ಧರ್ಮಭೂತಜ್ಞಾನ · ಇದೊಂದು ಸುಂದರ ನಿದರ್ಶನ · ಮತ್ತೊಂದೆಡೆ ಸಮಯವನ್ನು ಪುರುಷನೆನ್ನಲಾಗಿದೆ · ಜಗಜ್ಜನಕ ಪ್ರಜಾಪತಿ ಸಂವತ್ಸರಾತ್ಮಕ · ಋತುಗಳೈದು ಪಂಚಪಾದಗಳು · ಹನ್ನೆರಡು ತಿಂಗಳುಗಳು ಅವಯವಗಳು ಸೂರ್ಯಾದಿ ಸಪ್ತಗ್ರಹಗಳು ಚಕ್ರಗಳು ಷಡೃತುಗಳು ಚಕ್ರಗಳ ಅರೆಕಾಲುಗಳು · ರಥಸ್ಥನೇ ಪರಮಾತ್ಮ · ಇದೊಂದು ಕಾವ್ಯಮಯ ನಿರೂಪಣೆ · ರಥಚಕ್ರದ ನಿದರ್ಶನಕ್ಕೆ ಇಲ್ಲಿ ಮಹತ್ವವುಂಟು · ಮತ್ತೊಂದೆಡೆಯಲ್ಲಿ ಚಕ್ರದ ಅರೆಕಾಲುಗಳು ವೇದತ್ರಯಗಳ, ಯಾಗಯಜನಕರ್ಮಗಳ, ವರ್ಣಾಶ್ರಮ-ಧರ್ಮಗಳ ಒಗ್ಗೂಡುವಿಕೆಯನ್ನು ತೋರುತ್ತವೆ · ಅವು ಒಂದಾಗಿರುವುದು ಗುಂಭದಲ್ಲಿ · ಗುಂಭವು ಇಲ್ಲಿ ಮುಖ್ಯಪ್ರಾಣ·

ಮತ್ತೊಂದು ಸುಂದರ ಉದಾಹರಣೆ ರಾಣಿಜೇನಿನದು · ಅದು ಮುಖ್ಯಪ್ರಾಣನಂತೆ · ಪಂಚಪ್ರಾಣಗಳಲ್ಲಿ ಅಹಂಕಾರ ಮೂಡಿತ್ತು · ಅದನ್ನು ಅಡಗಿಸಲು ಮುಖ್ಯಪ್ರಾಣ ರಾಣಿಜೇನಿನಂತೆ ಉತ್ಕ್ರಮಿಸಿದ · ಆಗ ರಾಣಿ ಜೇನನ್ನು ಉಳಿದ ಜೇನು ನೊಣಗಳನ್ನು ಹಿಂಬಾಲಿಸುವಂತೆ ಪಂಚಪ್ರಾಣಗಳೂ ಹಿಂಬಾಲಿಸತೊಡಗಿದುವು · ಇದು ಮತ್ತೊಂದು ಚೆಲುವಾದ ನಿದರ್ಶನ · ಮಾತೇವ ಪುತ್ರಾನ್ ರಕ್ಷಸ್ವ - ಎಂಬಲ್ಲಿ ಪಂಚಪ್ರಾಣಗಳಿಗೂ ರಕ್ಷಕ ಮುಖ್ಯ ಪ್ರಾಣನನ್ನು ತಾಯಿಗೆ ಹೋಲಿಸಲಾಗಿದೆ ಮತ್ತೊಂದೆಡೆಯಲ್ಲಿ ಮುಖ್ಯಪ್ರಾಣನು ತಂದೆಯಂತೆ · ಉಳಿದವುಗಳು ಕಿಂಕರರಂತೆ ಎಂದೂ ಉಲ್ಲೇಖವಿದೆ·

ನಾಲ್ಕನೆಯ ಪ್ರಶ್ನೆಯಲ್ಲಿರುವ ಮೂರನೆಯ ಮಂತ್ರದಲ್ಲಿ ದೇಹವು ನಗರ - ಅದಕ್ಕೆ ಇರುವ ಕದಗಳನೇಕ ಎಂದಿದೆ · ಇನ್ನೊಂದು ದೃಷ್ಟಾಂತ ಹಕ್ಕಿಗಳದ್ದು · ಇದು ೪-೭ರಲ್ಲಿದೆ · ಹಕ್ಕಿಗಳು ತಮ್ಮ ವಾಸತರುವಿನಿಂದ ಹೊರಹೊರಡುತ್ತವೆ · ಆಹಾರವನ್ನು ಸಂಗ್ರಹಿಸುತ್ತವೆ · ಮರಳಿಗೂಡಿಗೆ ಬರುತ್ತವೆ · ಆ ಮರವೇ ಅವುಗಳ ನೆಲೆ · ಭಗವಂತ ಆ ಮರದಂತೆ · ಜೀವಾತ್ಮರುಗಳೆಲ್ಲ ಆಶ್ರಿತಪಕ್ಷಿಗಳಂತೆ · ಹಕ್ಕಿಗಳು ಕೆಲಸ ಮಾಡುವಂತೆ ಇಂದ್ರಿಯ, ಮನಸ್ಸು, ಪಂಚಪ್ರಾಣಗಳು ಕೆಲಸ ಮಾಡುತ್ತವೆ · ಪ್ರಶ್ನೆ ೬-೫

ರಲ್ಲಿ ಷೋಡಶಕಲಾತ್ಮಕ ಪುರುಷನ ವಿವರಣೆಯುಂಟು. ನದಿಗಳೆಲ್ಲ ಸಾಗರ ಸೇರುತ್ತವೆ. ಅಂತೆಯೇ ಜೀವೋಪಭೋಗವಾದ ಷೋಡಶಕಲೆಗಳೂ ಪರಮಾತ್ಮನಲ್ಲಿ ಸೇರುತ್ತವೆ. ಎಂದಿದೆ.

ಹೀಗೆ ಸುಂದರವಾದ ದೃಷ್ಟಾಂತಗಳಿಂದ ಗುರುಗಳು ಗಹನವಾದ, ಕ್ಲಿಷ್ಟವಾದ ಪರತತ್ತ್ವ ವಿಚಾರವನ್ನು ಶಿಷ್ಯರ ಪಾಠಕರೆಲ್ಲರ ಮನಮುಟ್ಟುವಂತೆ ವಿವರಿಸುತ್ತಾರೆ. ಇದೇ ಪ್ರಶ್ನೋಪನಿಷತ್ತಿನ ಪ್ರತಿಪಾದನಾ ವೈಶಿಷ್ಟ್ಯ.

## ಹೊಸಪ್ರಕಾಶನದ ಬಗ್ಗೆ ಎರಡು ನುಡಿಗಳು

ಈ ಪ್ರಕಾಶನದಲ್ಲಿ ಪ್ರಶ್ನೋಪನಿಷನ್ಮಂತ್ರಗಳನ್ನು ದೇವನಾಗರೀ ಲಿಪಿಯಲ್ಲಿ ಮುದ್ರಿಸಲಾಗಿದೆ ಮಂತ್ರಗಳು ಕನ್ನಡ ಲಿಪಿಯಲ್ಲೂ ಅಚ್ಚಾಗಿವೆ. ಎಲ್ಲಮಂತ್ರಗಳಿಗೂ ಅನ್ವಯಾನುಕ್ರಮದಲ್ಲಿ ಅರ್ಥ ಬರೆಯಲಾಗಿದೆ. ಬಳಿಕ ತಾತ್ಪರ್ಯಲೇಖನವುಂಟು, ಇದರಿಂದ ಮಂತ್ರಾರ್ಥಗಳು ಸುಲಭವಾಗಿ ಅರಿವಾಗುತ್ತವೆ. ಸುಬೋಧಿನೀ ಮತ್ತು ಪ್ರತಿಪದಾರ್ಥ ದೀಪಿಕೆಯಿಂದ ವಿಶೇಷ ವಿಷಯಗಳನ್ನು ಟಿಪ್ಪಣಿಯಲ್ಲಿ ಕೊಡಲಾಗಿದೆ. ಬಳಿಕ ರುಗರಾಮಾನುಜಭಾಷ್ಯದ ಮೂಲವನ್ನು ಕನ್ನಡ ಲಿಪಿಯಲ್ಲಿ ಮುದ್ರಿಸಲಾಗಿದೆ. ಮುಂದಿನ ಹಂತದಲ್ಲಿ ಅದರ ಕನ್ನಡಾನುವಾದವಿದೆ. ಇದು ಮಂತ್ರದ ತಿರುಳನ್ನು ತಿಳಿಸುತ್ತದೆ. ಬಳಿಕ ಭಾಷ್ಯಸಾರದ ಕೊನೆಯಲ್ಲಿ ಅನುಬಂಧಗಳಿವೆ. ಭಾಷ್ಯಕಾರರ ಚರಿತ್ರೆಯುಂಟು ಅಕಾರಾದಿಯಲ್ಲಿ ಮಂತ್ರಸೂಚೀ, ಅಕಾರಾದಿಯಾಗಿ ಪ್ರಮಾಣಾಕರಗಳ ಸೂಚನೆ, ಭಗವನ್ನಾಮಗಳೆಲ್ಲವೂ ಇವೆ. ಸಂಸ್ಥೆಯ ಅಧ್ಯಕ್ಷರು ಶ್ರೀಯುತ ಎಂ. ಎ. ಎಸ್ ರಾಜನ್‌ರವರು, ಅವರ ಪರಿಶೀಲನೆ, ಅವರೊಡನೆ ಚರ್ಚೆ, ಮತ್ತು ಆಡಳಿತ ಸಮಿತಿಯ ಹಿರಿಯರ ಸೂಕ್ತ ಸಲಹೆಗಳು ನಮಗೆ ಪ್ರೋತ್ಸಾಹದಾಯಕ ಅವರಿಗೆ ನನ್ನ ಹಾರ್ದಿಕ ಧನ್ಯವಾದಗಳು. ಸಂಸತ್ತಿನಲ್ಲಿ ಈ ಗ್ರಂಥ ನಿರ್ಮಾಣಕ್ಕಾಗಿ ಕರ್ತವ್ಯನಿರತರಾಗಿ ಶ್ರಮಿಸಿದ ಎಲ್ಲಾ ವಿದ್ವಜ್ಜನರಿಗೂ ಮತ್ತು ಇತರ ಕಾರ್ಯಕರ್ತರಿಗೂ ನನ್ನ ಕೃತಜ್ಞತೆಗಳು . ಈ ಗ್ರಂಥವನ್ನು ಅಂದವಾಗಿ ಮುದ್ರಿಸಿಕೊಟ್ಟ ಶರದ್ ಎಂಟರ್‌ಪ್ರೈಸಸ್ ಮುದ್ರಣಾಲಯದವರಿಗೂ ನನ್ನ ಕೃತಜ್ಞತೆಗಳು.

ಈ ಗ್ರಂಥವು ಭಗವದ್ರಾಮಾನುಜರ ದೃಷ್ಟಿಕೋನವನ್ನರಿಯಲು ಸಾಧನವಾಗಲಿ ಅದರಿಂದ ಇತರ ದರ್ಶನಗಳ ತುಲನಾತ್ಮಕ ಅಧ್ಯಯನಕ್ಕೆ ಸಹಾಯಕವಾಗಲಿ. ಇದೇ ನನ್ನ ಅಭಿಲಾಷೆ. ಇದು ಈಡೇರಿದಲ್ಲಿ ಸಂಸತ್ತಿನ ಶ್ರಮಸಾರ್ಥಕವಾದಂತೆ

ಸಂ. ಸಂ. ಸಂ.

ಮೇಲುಕೋಟೆ

ಎಂ. ಎ ಲಕ್ಷ್ಮೀತಾತಾಚಾರ್

# ಪ್ರಶ್ನೋಪನಿಷತ್

## ಮೂಲ

# ಪ್ರ ಶ್ನೋ ಪ ನಿ ಷ ತ್

(ಅಥರ್ವವೇದೀಯೋಪನಿಷತ್)

**ಶಾಂತಿಮಂತ್ರ:**

ಭದ್ರಂ ಕರ್ಣೇಭಿಃ ಶೃಣುಯಾಮ ದೇವಾಃ ಭದ್ರಂ ಪಶ್ಯೇಮಾಕ್ಷಭಿರ್ಯಜತ್ರಾಃ ।
ಸ್ಥಿರೈರಂಗೈಸ್ತುಷ್ಟುವಾಗ್‌ಸಸ್ತನೂಭಿರ್ವ್ಯಶೇಮ ದೇವಹಿತಂ ಯದಾಯುಃ ।
ಸ್ವಸ್ತಿ ನ ಇಂದ್ರೋ ವೃದ್ಧಶ್ರವಾಃ ಸ್ವಸ್ತಿ ನಃ ಪೂಷಾ ವಿಶ್ವವೇದಾಃ ।
ಸ್ವಸ್ತಿ ನಸ್ತಾರ್ಕ್ಷ್ಯೋ ಅರಿಷ್ಟನೇಮಿಃ ಸ್ವಸ್ತಿ ನೋ ಬೃಹಸ್ಪತಿರ್ದಧಾತು ॥
॥ ಓಂ ಶಾಂತಿಃ ಶಾಂತಿಃ ಶಾಂತಿಃ ॥

**ಹರಿಃ ಓಮ್**

## ॥ ಪ್ರಥಮಃ ಪ್ರಶ್ನಃ ॥

ಸುಕೇಶಾ ಚ ಭಾರದ್ವಾಜಃ, ಶೈಬ್ಯಶ್ಚ ಸತ್ಯಕಾಮಃ, ಸೌರ್ಯಾಯಣೀ ಚ ಗಾರ್ಗ್ಯಃ, ಕೌಸಲ್ಯಶ್ಚಾಶ್ವಲಾಯನಃ, ಭಾರ್ಗವೋ ವೈದರ್ಭಿಃ, ಕಬಂಧೀ ಕಾತ್ಯಾಯನಃ, ತೇ ಹೈತೇ ಬ್ರಹ್ಮಪರಾಃ, ಬ್ರಹ್ಮನಿಷ್ಠಾಃ ಪರಂ ಬ್ರಹ್ಮಾನ್ವೇಷಮಾಣಾಃ, 'ಏಷ ಹ ವೈ ತತ್ಸರ್ವಂ ವಕ್ಷ್ಯತಿ' ಇತಿ ತೇ ಹ ಸಮಿತ್ಪಾಣಯೋ ಭಗವನ್ತಂ ಪಿಪ್ಪಲಾದಮುಪಸನ್ನಾಃ ॥ ೧ ॥

ತಾನ್ ಹ ಸ ಋಷಿರುವಾಚ - 'ಭೂಯ ಏವ ತಪಸಾ ಬ್ರಹ್ಮಚರ್ಯೇಣ ಶ್ರದ್ಧಯಾ ಸಂವತ್ಸರಂ ವತ್ಸ್ಯಥ । ಯಥಾಕಾಮಂ ಪ್ರಶ್ನಾನ್ ಪೃಚ್ಛತ । ಯದಿ ವಿಜ್ಞಾಸ್ಯಾಮಃ, ಸರ್ವಂ ಹ ವೋ ವಕ್ಷ್ಯಾಮಃ' ಇತಿ ॥ ೨ ॥

ಅಥ ಕಬಂಧೀ ಕಾತ್ಯಾಯನ ಉಪೇತ್ಯ ಪಪ್ರಚ್ಛ, 'ಭಗವನ್! ಕುತೋ ಹ ವಾ ಇಮಾಃ ಪ್ರಜಾಃ ಪ್ರಜಾಯಂತೇ' ಇತಿ ॥ ೩ ॥

ತಸ್ಮೈ ಸ ಹೋವಾಚ - ಪ್ರಜಾಕಾಮೋ ಹ ವೈ ಪ್ರಜಾಪತಿಃ ಸ ತಪೋಽತಪ್ಯತ ।
ಸ ತಪಸ್ತಪ್ತ್ವಾ ಸ ಮಿಥುನಮುತ್ಪಾದಯತೇ ರಯಿಂ ಚ ಪ್ರಾಣಂ ಚೇತಿ,
ಏತೌ ಮೇ ಬಹುಧಾ ಪ್ರಜಾಃ ಕರಿಷ್ಯತ ಇತಿ ॥ ೪ ॥

ಆದಿತ್ಯೋ ಹ ವೈ ಪ್ರಾಣೋ ರಯಿರೇವ ಚಂದ್ರಮಾಃ ।
ರಯಿರ್ವಾ ಏತತ್ಸರ್ವಂ ಯನ್ಮೂರ್ತಂ ಚಾಮೂರ್ತಂ ಚ ।
ತಸ್ಮಾನ್ಮೂರ್ತಿರೇವ ರಯಿಃ ॥ ೫ ॥

ಅಥ ಆದಿತ್ಯಃ । ಉದಯನ್ ಯತ್ ಪ್ರಾಚೀಂ ದಿಶಂ ಪ್ರವಿಶತಿ ತೇನ ಪ್ರಾಚ್ಯಾನ್
ಪ್ರಾಣಾನ್ ರಶ್ಮಿಷು ಸನ್ನಿಧತ್ತೇ । ಯತ್ ದಕ್ಷಿಣಾಂ ಯತ್ ಪ್ರತೀಚೀಂ
ಯದುದೀಚೀಂ ಯದಧೋ ಯದೂರ್ಧ್ವಂ ಯದಂತರಾ ದಿಶಃ, ಯತ್ ಸರ್ವಂ
ಪ್ರಕಾಶಯತಿ, ತೇನ ಸರ್ವಾನ್ ಪ್ರಾಣಾನ್ ರಶ್ಮಿಷು ಸನ್ನಿಧತ್ತೇ ॥ ೬ ॥

ಸ ಏಷ ವೈಶ್ವಾನರೋ ವಿಶ್ವರೂಪಃ ಪ್ರಾಣೋಽಗ್ನಿರುದಯತೇ ।
ತದೇತದೃಚಾಽಭ್ಯುಕ್ತಮ್ ॥ ೭ ॥

ವಿಶ್ವರೂಪಂ ಹರಿಣಂ ಜಾತವೇದಸಂ ಪರಾಯಣಂ ಜ್ಯೋತಿರೇಕಂ ತಪನ್ತಮ್ ।
ಸಹಸ್ರರಶ್ಮಿಃ ಶತಧಾ ವರ್ತಮಾನಃ ಪ್ರಾಣಃ ಪ್ರಜಾನಾಮುದಯತ್ಯೇಷ ಸೂರ್ಯಃ ॥ ೮ ॥

ಸಂವತ್ಸರೋ ವೈ ಪ್ರಜಾಪತಿಃ । ತಸ್ಯಾಯನೇ ದಕ್ಷಿಣಂ ಚೋತ್ತರಂ ಚ । ತತ್ ಯೇ ಹ ವೈ
ತದಿಷ್ಟಾಪೂರ್ತೇ ಕೃತಮಿತ್ಯುಪಾಸತೇ, ತೇ ಚಾಂದ್ರಮಸಮೇವ ಲೋಕಮಭಿಜಯಂತೇ;
ತ ಏವ ಪುನರಾವರ್ತಂತೇ । ತಸ್ಮಾದೇತೇ ಋಷಯಃ ಪ್ರಜಾಕಾಮಾ ದಕ್ಷಿಣಂ
ಪ್ರತಿಪದ್ಯಂತೇ । ಏಷ ಹ ವೈ ರಯಿರ್ಯಃ ಪಿತೃಯಾಣಃ ॥ ೯ ॥

ಅಥೋತ್ತರೇಣ, ತಪಸಾ ಬ್ರಹ್ಮಚರ್ಯೇಣ ಶ್ರದ್ಧಯಾ ವಿದ್ಯಯಾಽಽತ್ಮಾನಮನ್ವಿಷ್ಯ,
ಆದಿತ್ಯಮಭಿಜಯಂತೇ । ಏತದ್ವೈ ಪ್ರಾಣಾನಾಮಾಯತನಮ್ ಏತದಮೃತಮಭಯಮ್
ಏತತ್ ಪರಾಯಣಮ್; ಏತಸ್ಮಾನ್ನ ಪುನರಾವರ್ತಂತ ಇತ್ಯೇಷ ನಿರೋಧಃ ।
ತದೇಷ ಶ್ಲೋಕಃ ॥ ೧೦ ॥

ಪಂಚಪಾದಂ ಪಿತರಂ ದ್ವಾದಶಾಕೃತಿಂ ದಿವ ಆಹುಃ ಪರೇ ಅರ್ಧೇ ಪುರೀಷಿಣಮ್ ।
ಅಥೇಮೇ ಅನ್ಯ ಉಪರೇ ವಿಚಕ್ಷಣಂ ಸಪ್ತಚಕ್ರೇ ಷಡರ ಆಹುರರ್ಪಿತಮ್ ಇತಿ ॥ ೧೧ ॥

ಮಾಸೋ ವೈ ಪ್ರಜಾಪತಿಃ । ತಸ್ಯ ಕೃಷ್ಣಪಕ್ಷ ಏವ ರಯಿಃ ಶುಕ್ಲಃ ಪ್ರಾಣಃ ।
ತಸ್ಮಾದೇತೇ ಋಷಯಃ ಶುಕ್ಲ ಇಷ್ಟಂ ಕುರ್ವಂತಿ; ಇತರ ಇತರಸ್ಮಿನ್ ॥ ೧೨ ॥

ಅಹೋರಾತ್ರೋ ವೈ ಪ್ರಜಾಪತಿಸ್ತಸ್ಯಾಹರೇವ ಪ್ರಾಣೋ ರಾತ್ರಿರೇವ ರಯಿಃ ।
ಪ್ರಾಣಂ ವಾ ಏತೇ ಪ್ರಸ್ಕಂದಂತಿ, ಯೇ ದಿವಾ ರತ್ಯಾ ಸಂಯುಜ್ಯಂತೇ ।
ಬ್ರಹ್ಮಚರ್ಯಮೇವ ತತ್, ಯತ್ ರಾತ್ರೌ ರತ್ಯಾ ಸಂಯುಜ್ಯಂತೇ ॥ ೧೩ ॥

ಅನ್ನಂ ವೈ ಪ್ರಜಾಪತಿಃ । ತತೋ ಹ ವೈ ತದ್ರೇತಃ ।
ತಸ್ಮಾದಿಮಾಃ ಪ್ರಜಾಃ ಪ್ರಜಾಯಂತೇ ಇತಿ ॥ ೧೪ ॥

ತದ್ಯೇ ಹ ತತ್ ಪ್ರಜಾಪತಿವ್ರತಂ ಚರಂತಿ, ತೇ ಮಿಥುನಮುತ್ಪಾದಯಂತೇ ।
ತೇಷಾಮೇವೈಷ ಬ್ರಹ್ಮಲೋಕಃ । ಯೇಷಾಂ ತಪೋ ಬ್ರಹ್ಮಚರ್ಯಮ್, ಯೇಷು
ಸತ್ಯಂ ಪ್ರತಿಷ್ಠಿತಮ್ ॥ ೧೫ ॥

ತೇಷಾಮಸೌ ವಿರಜೋ ಬ್ರಹ್ಮಲೋಕಃ, ನ ಯೇಷು ಜಿಹ್ಮಮನೃತಂ ನ
ಮಾಯಾ ಚೇತಿ ॥ ೧೬ ॥

॥ ಇತಿ ಪ್ರಥಮಃ ಪ್ರಶ್ನಃ ॥

* * *

## ॥ ಅಥ ದ್ವಿತೀಯ ಪ್ರಶ್ನಃ ॥

ಅಥ ಹೈನಂ ಭಾರ್ಗವೋ ವೈದರ್ಭಿಃ ಪಪ್ರಚ್ಛ - 'ಭಗವನ್! ಕತ್ಯೇವ ದೇವಾಃ
ಪ್ರಜಾಂ ವಿಧಾರಯಂತೇ; ಕತರ ಏತತ್ ಪ್ರಕಾಶಯಂತೇ; ಕಃ ಪುನರೇಷಾಂ
ವರಿಷ್ಠಃ ಇತಿ ॥ ೧ ॥

ತಸ್ಮೈ ಸ ಹೋವಾಚ - ಆಕಾಶೋ ಹ ವಾ ಏಷ ದೇವೋ ವಾಯುರಗ್ನಿರಾಪಃ
ಪೃಥಿವೀ ವಾಙ್ಮನಶ್ಚಕ್ಷುಃ ಶ್ರೋತ್ರಂ ಚ । ತೇ ಪ್ರಕಾಶ್ಯಾಭಿವದಂತಿ,
ವಯಮೇತದ್ಬಾಣಮವಷ್ಟಭ್ಯ ವಿಧಾರಯಾಮಃ ಇತಿ ॥ ೨ ॥

ತಾನ್ ವರಿಷ್ಠಃ ಪ್ರಾಣ ಉವಾಚ - 'ಮಾ ಮೋಹಮಾಪದ್ಯಥಾಃ ।
ಅಹಮೇವೈತತ್ ಪಂಚಧಾಽಽತ್ಮಾನಂ ಪ್ರವಿಭಜ್ಯೈತದ್ಬಾಣಮವಷ್ಟಭ್ಯ ವಿಧಾರಯಾಮಿ'
ಇತಿ । ತೇಽಶ್ರದ್ದಧಾನಾ ಬಭೂವುಃ ॥ ೩ ॥

ಸೋಽಭಿಮಾನಾದೂರ್ಧ್ವಮುತ್ಕ್ರಮತ ಇವ । ತಸ್ಮಿನ್ನುತ್ಕ್ರಾಮತ್ಯಥೇತರೇ ಸರ್ವ
ಏವೋತ್ಕ್ರಾಮಂತೇ । ತಸ್ಮಿಂಸ್ತು ಪ್ರತಿಷ್ಠಮಾನೇ ಸರ್ವ ಏವ ಪ್ರತಿಷ್ಠಂತೇ ।
ತದ್ಯಥಾ ಮಕ್ಷಿಕಾ ಮಧುಕರರಾಜಾನಮುತ್ಕ್ರಾಮಂತಮ್ ಸರ್ವಾ ಏವೋತ್ಕ್ರಾಮಂತೇ ।
ತಸ್ಮಿಂಶ್ಚ ಪ್ರತಿಷ್ಠಮಾನೇ ಸರ್ವಾ ಏವ ಪ್ರತಿಷ್ಠಂತೇ ಏವಂ ವಾಙ್ಮನಶ್ಚಕ್ಷುಃ ಶ್ರೋತ್ರಂ ಚ
ತೇ ಪ್ರೀತಾಃ ಪ್ರಾಣಂ ಸ್ತುನ್ವಂತಿ ॥ ೪ ॥

ಏಷೋಽಗ್ನಿಸ್ತಪತ್ಯೇಷ ಸೂರ್ಯಃ ಏಷ ಪರ್ಜನ್ಯೋ ಮಘವಾನ್ ಏಷ ವಾಯುಃ ।
ಏಷ ಪೃಥಿವೀ ರಯಿರ್ದೇವಃ ಸದಸಚ್ಚಾಮೃತಂ ಚ ಯತ್ ॥ ೫ ॥

ಅರಾ ಇವ ರಥನಾಭೌ ಪ್ರಾಣೇ ಸರ್ವಂ ಪ್ರತಿಷ್ಠಿತಮ್ ।
ಋಚೋ ಯಜೂಂಷಿ ಸಾಮಾನಿ ಯಜ್ಞಃ ಕ್ಷತ್ರಂ ಬ್ರಹ್ಮ ಚ ॥ ೬ ॥

ಪ್ರಜಾಪತಿಶ್ಚರಸಿ ಗರ್ಭೇ ತ್ವಮೇವ ಪ್ರತಿಜಾಯಸೇ ।
ತುಭ್ಯಂ ಪ್ರಾಣ! ಪ್ರಜಾಸ್ತ್ವಿಮಾಃ ಬಲಿಂ ಹರಂತಿ ಯಃ ಪ್ರಾಣೈಃ ಪ್ರತಿತಿಷ್ಠಸಿ ॥ ೭ ॥

ದೇವಾನಾಮಸಿ ವಹ್ನಿತಮಃ ಪಿತೃಣಾಂ ಪ್ರಥಮಾ ಸ್ವಧಾ ।
ಋಷೀಣಾಂ ಚರಿತಂ ಸತ್ಯಮಥರ್ವಾಂಗಿರಸಾಮಸಿ ॥ ೮ ॥

ಇಂದ್ರಸ್ತ್ವಂ ಪ್ರಾಣ! ತೇಜಸಾ ರುದ್ರೋಽಸಿ ಪರಿರಕ್ಷಿತಾ ।
ತ್ವಮಂತರಿಕ್ಷೇ ಚರಸಿ ಸೂರ್ಯಸ್ತ್ವಂ ಜ್ಯೋತಿಷಾಂ ಪತಿಃ ॥ ೯ ॥
ಯದಾ ತ್ವಮಭಿವರ್ಷಸ್ಯಥೇಮಾಃ ಪ್ರಾಣ! ತೇ ಪ್ರಜಾಃ ।
ಆನಂದರೂಪಾಸ್ತಿಷ್ಠಂತಿ ಕಾಮಾಯಾನ್ನಂ ಭವಿಷ್ಯತೀತಿ ॥ ೧೦ ॥

ವ್ರಾತ್ಯಸ್ತ್ವಂ ಪ್ರಾಣೈಕ ಋಷಿರತ್ತಾ ವಿಶ್ವಸ್ಯ ಸತ್ಪತಿಃ ।
ವಯಮಾದ್ಯಸ್ಯ ದಾತಾರಃ ಪಿತಾ ತ್ವಂ ಮಾತರಿಶ್ವ ನಃ ॥ ೧೧ ॥

ಯಾ ತೇ ತನೂರ್ವಾಚಿ ಪ್ರತಿಷ್ಠಿತಾ ಯಾ ಶ್ರೋತ್ರೇ ಯಾ ಚ ಚಕ್ಷುಷಿ ।
ಯಾ ಚ ಮನಸಿ ಸಂತತಾ ಶಿವಾಂ ತಾಂ ಕುರುಮೋತ್ಕ್ರಮೀಃ ॥ ೧೨ ॥

ಪ್ರಾಣಸ್ಯೇದಂ ವಶೇ ಸರ್ವಂ ತ್ರಿದಿವೇ ಯತ್ ಪ್ರತಿಷ್ಠಿತಮ್ ।
ಮಾತೇವ ಪುತ್ರಾನ್ ರಕ್ಷಸ್ವ ಶ್ರೀಶ್ಚ ಪ್ರಜ್ಞಾಂ ವಿಧೇಹಿ ನಃ ಇತಿ ॥ ೧೩ ॥

॥ ಇತಿ ದ್ವಿತೀಯಃ ಪ್ರಶ್ನಃ ॥

※ ※ ※

॥ ಅಥ ತೃತೀಯಃ ಪ್ರಶ್ನಃ ॥

ಅಥ ಹೈನಂ ಕೌಸಲ್ಯಶ್ಚಾಽಽಶ್ವಲಾಯನಃ ಪಪ್ರಚ್ಛ - ಭಗವನ್!
ಕುತ ಏಷ ಪ್ರಾಣೋ ಜಾಯತೇ । ಕಥಮಾಯಾತ್ಯಸ್ಮಿನ್ ಶರೀರೇ । ಆತ್ಮಾನಂ
ವಾ ಪ್ರವಿಭಜ್ಯ ಕಥಂ ಪ್ರತಿತಿಷ್ಠತೇ । ಕೇನೋತ್ಕ್ರಮತೇ । ಕಥಂ ಬಾಹ್ಯ-
ಮಭಿಧತ್ತೇ ಕಥಮಧ್ಯಾತ್ಮಮಿತಿ ॥ ೧ ॥

ತಸ್ಮೈ ಸ ಹೋವಾಚ - ಅತಿಪ್ರಶ್ನಾನ್ ಪೃಚ್ಛಸಿ ಬ್ರಹ್ಮಿಷ್ಠೋಽಸೀತಿ
ತಸ್ಮಾತ್ ತೇಽಹಂ ಬ್ರವೀಮಿ ॥ ೨ ॥

ಆತ್ಮನ ಏಷ ಪ್ರಾಣೋ ಜಾಯತೇ । ಯಥೈಷಾ ಪುರುಷೇ ಛಾಯೈತಸ್ಮಿನ್
ಏತದಾತತಂ ಮನೋಽಕೃತೇನಾಯಾತ್ಯಸ್ಮಿನ್ ಶರೀರೇ ॥ ೩ ॥

ಯಥಾ ಸಮ್ರಾಡೇವಾಧಿಕೃತಾನ್ ವಿನಿಯುಂಕ್ತೇ ಏತಾನ್ ಗ್ರಾಮಾನೇತಾನ್ ಗ್ರಾಮಾನ್
ಅಧಿತಿಷ್ಠಸ್ವೇತಿ, ಏವಮೇವೈಷ ಪ್ರಾಣಃ ಇತರಾನ್ ಪ್ರಾಣಾನ್ ಪೃಥಕ್ಪೃಥಗೇವ
ಸನ್ನಿಧತ್ತೇ ॥ ೪ ॥

ಪಾಯೂಪಸ್ಥೇ ಅಪಾನಂ ಚಕ್ಷುಃಶ್ರೋತ್ರೇ ಮುಖನಾಸಿಕಾಭ್ಯಾಂ ಪ್ರಾಣಃ
ಸ್ವಯಂ ಪ್ರತಿತಿಷ್ಠತೇ, ಮಧ್ಯೇ ತು ಸಮಾನಃ । ಏಷ ಹ್ಯೇತದ್ಧುತಮನ್ನಂ ಸಮಂ
ನಯತಿ । ತಸ್ಮಾದೇತಾಃ ಸಪ್ತಾರ್ಚಿಷೋ ಭವಂತಿ ॥ ೫ ॥

ಹೃದಿ ಹ್ಯೇಷ ಆತ್ಮಾ । ಅತ್ರೈತದೇಕಶತಂ ನಾಡೀನಾಮ್ । ತಾಸಾಂ ಶತಂ ಶತಮೇ-
ಕೈಕಸ್ಯಾಂ ದ್ವಾಸಪ್ತತಿಂ ದ್ವಾಸಪ್ತತಿಂ ಪ್ರತಿಶಾಖಾನಾಡೀಸಹಸ್ರಾಣಿ ಭವಂತಿ ।
ಆಸು ವ್ಯಾನಶ್ಚರತಿ ॥ ೬ ॥

ಅಥೈಕಯೋರ್ಧ್ವ ಉದಾನಃ ಪುಣ್ಯೇನ ಪುಣ್ಯಂ ಲೋಕಂ ನಯತಿ; ಪಾಪೇನ ಪಾಪಮ್; ಉಭಾಭ್ಯಾಮೇವ ಮನುಷ್ಯಲೋಕಮ್ ॥ ೭ ॥

ಆದಿತ್ಯೋ ಹ ವೈ ಬಾಹ್ಯಃ ಪ್ರಾಣ ಉದಯತಿ ಏಷ ಹ್ಯೇನಂ ಚಾಕ್ಷುಷಂ ಪ್ರಾಣಮನುಗೃಹ್ಣಾನಃ; ಪೃಥಿವ್ಯಾಂ ಯಾ ದೇವತಾ, ಸೈಷಾ ಪುರುಷಸ್ಯಾಪಾನ-ಮವಷ್ಟಭ್ಯ । ಅಂತರಾ ಯದಾಕಾಶಃ ಸ ಸಮಾನಃ । ವಾಯುರ್ವ್ಯಾನಃ ॥ ೮ ॥

ತೇಜೋ ಹ ವಾ ಉದಾನಃ । ತಸ್ಮಾದುಪಶಾಂತತೇಜಾಃ ಪುನರ್ಭವಮಿಂದ್ರಿಯೈ-ರ್ಮನಸಿ ಸಂಪದ್ಯಮಾನೈಃ ॥ ೯ ॥

ಯಚ್ಚಿತ್ತಸ್ತೇನೈಷ ಪ್ರಾಣಮಾಯಾತಿ । ಪ್ರಾಣಸ್ತೇಜಸಾ ಯುಕ್ತಃ ।
ಸ ಹಾತ್ಮನಾ ಯಥಾಸಂಕಲ್ಪಿತಂ ಲೋಕಂ ನಯತಿ ॥ ೧೦ ॥

ಯ ಏವಂ ವಿದ್ವಾನ್ ಪ್ರಾಣಂ ವೇದ, ನ ಹಾಸ್ಯ ಪ್ರಜಾ ಹೀಯತೇ; ಅಮೃತೋ ಭವತಿ । ತದೇಷ ಶ್ಲೋಕಃ ॥ ೧೧ ॥

ಉತ್ಪತ್ತಿಮಾಯತಿಂ ಸ್ಥಾನಂ ವಿಭುತ್ವಂ ಚೈವ ಪಂಚಧಾ ।
ಅಧ್ಯಾತ್ಮಂ ಚೈವ ಪ್ರಾಣಸ್ಯ ವಿಜ್ಞಾಯಾಮೃತಮಶ್ನುತೇ
ವಿಜ್ಞಾಯಾಮೃತಮಶ್ನುತ ಇತಿ ॥ ೧೨ ॥

॥ ಇತಿ ತೃತೀಯಃ ಪ್ರಶ್ನಃ ॥

☆ ※ ☆

## ॥ ಅಥ ಚತುರ್ಥಃ ಪ್ರಶ್ನಃ ॥

ಅಥ ಹೈನಂ ಸೌರ್ಯಾಯಣೀ ಗಾರ್ಗ್ಯಃ ಪಪ್ರಚ್ಛ । ಭಗವನ್!
ಏತಸ್ಮಿನ್ ಕಾನಿ ಸ್ವಪಂತಿ? ಕಾನ್ಯಸ್ಮಿನ್ ಜಾಗ್ರತಿ? ಕತರ ಏಷ ದೇವಃ ಸ್ವಪ್ನಾನ್ ಪಶ್ಯತಿ? ಕಸ್ಯೈತತ್ ಸುಖಂ ಭವತಿ? ಕಸ್ಮಿನ್ನು ಸರ್ವೇ ಸಂಪ್ರತಿಷ್ಠಿತಾ ಭವಂತೀತಿ ॥ ೧ ॥

ತಸ್ಮೈ ಸ ಹೋವಾಚ - ಯಥಾ ಗಾರ್ಗ್ಯ! ಮರೀಚಯೋಽರ್ಕಸ್ಯಾಸ್ತಂ ಗಚ್ಛತಃ
ಸರ್ವಾ ಏತಸ್ಮಿಂಸ್ತೇಜೋಮಂಡಲೇ ಏಕೀಭವಂತಿ; ತಾಃ ಪುನರುದಯತಃ
ಪ್ರಚರಂತಿ - ಏವಂ ಹ ವೈ ತತ್ ಸರ್ವಂ ಪರೇ ದೇವೇ ಮನಸ್ಯೇಕೀಭವತಿ ।
ತೇನ ತರ್ಹಿ ಏಷ ಪುರುಷೋ ನ ಶೃಣೋತಿ, ನ ಪಶ್ಯತಿ, ನ ಜಿಘ್ರತಿ, ನ ರಸಯತೇ,
ನ ಸ್ಪೃಶತೇ, ನಾಭಿವದತೇ, ನಾದತ್ತೇ, ನಾನಂದಯತೇ, ನ ವಿಸೃಜತೇ,
ನೇಯಾಯತೇ; ಸ್ವಪಿತೀತ್ಯಾಚಕ್ಷತೇ ॥ ೨ ॥

ಪ್ರಾಣಾಗ್ನಯ ಏವ ಏತಸ್ಮಿನ್ ಪುರೇ ಜಾಗ್ರತಿ । ಗಾರ್ಹಪತ್ಯೋ ಹ ವಾ ಏಷೋಽ-
ಪಾನಃ ವ್ಯಾನೋಽನ್ವಾಹಾರ್ಯಪಚನಃ ಯತ್ ಗಾರ್ಹಪತ್ಯಾತ್ ಪ್ರಣೀಯತೇ,
ಪ್ರಣಯನಾದಾಹವನೀಯಃ ಪ್ರಾಣಃ ॥ ೩ ॥

ಯದುಚ್ಛ್ವಾಸನಿಶ್ವಾಸೌ, ಏತಾವಾಹುತೀ! ಸಮಂ ನಯತೀತಿ ಸಮಾನಃ! ಮನೋ ಹ
ವಾವ ಯಜಮಾನಃ! ಇಷ್ಟಫಲಮೇವೋದಾನಃ! ಸ ಏನಂ ಯಜಮಾನಮಹರಹ-
ರ್ಬ್ರಹ್ಮ ಗಮಯತಿ ॥ ೪ ॥

ಅತ್ರೈಷ ದೇವಃ ಸ್ವಪ್ನೇ ಮಹಿಮಾನಮನುಭವತಿ । ಯತ್ ದೃಷ್ಟಂದೃಷ್ಟಮನುಪಶ್ಯತಿ,
ಶ್ರುತಂಶ್ರುತಮೇವಾರ್ಥಮನುಶೃಣೋತಿ, ದೇಶದಿಗಂತರೈಶ್ಚ ಪ್ರತ್ಯನುಭೂತಂ ಪುನಃ ಪುನಃ
ಪ್ರತ್ಯನುಭವತಿ, ದೃಷ್ಟಂ ಚಾದೃಷ್ಟಂ ಚ ಶ್ರುತಂ ಚಾಶ್ರುತಂ ಚ ಅನುಭೂತಂ ಚಾನನುಭೂತಂ
ಚ ಸಚ್ಚಾಸಚ್ಚ ಸರ್ವಂ ಪಶ್ಯತಿ; ಸರ್ವಃ ಪಶ್ಯತಿ ॥ ೫ ॥

ಸ ಯದಾ ತೇಜಸಾಽಭಿಭೂತೋ ಭವತಿ, ಅತ್ರೈಷದೇವಃ ಸ್ವಪ್ನಾನ್ನ ಪಶ್ಯತಿ ।
ಅಥ ಯದೇತಸ್ಮಿನ್ ಶರೀರೇ ಏತತ್ ಸುಖಂ ಭವತಿ ॥ ೬ ॥

ಸ ಯಥಾ ಸೋಮ್ಯ ವಯಾಂಸಿ ವಾಸೋವೃಕ್ಷಂ ಸಂಪ್ರತಿಷ್ಠಂತೇ ।
ಏವಂ ಹ ವೈ ತತ್ ಸರ್ವಂ ಪರ ಆತ್ಮನಿ ಸಂಪ್ರತಿಷ್ಠತೇ ॥ ೭ ॥

ಪೃಥಿವೀ ಚ ಪೃಥಿವೀಮಾತ್ರಾ ಚ ಆಪಶ್ಚಾಪೋಮಾತ್ರಾ ಚ ತೇಜಶ್ಚ
ತೇಜೋಮಾತ್ರಾ ಚ ವಾಯುಶ್ಚ ವಾಯುಮಾತ್ರಾ ಚ ಆಕಾಶಶ್ಚಾಕಾಶಮಾತ್ರಾ
ಚ ಚಕ್ಷುಶ್ಚ ದ್ರಷ್ಟವ್ಯಂ ಚ ಶ್ರೋತ್ರಂ ಚ ಶ್ರೋತವ್ಯಂ ಚ ಘ್ರಾಣಂ ಚ ಘ್ರಾತವ್ಯಂ ಚ
ರಸನಂ ಚ ರಸಯಿತವ್ಯಂ ಚ ತ್ವಕ್ ಚ ಸ್ಪರ್ಶಯಿತವ್ಯಂ ಚ ವಾಕ್ ಚ ವಕ್ತವ್ಯಂ
ಚ ಹಸ್ತೌ ಚಾಽಽದಾತವ್ಯಂ ಚ ಉಪಸ್ಥಶ್ಚಾಽಽನಂದಯಿತವ್ಯಂ ಚ ಪಾಯುಶ್ಚ

ವಿಸರ್ಜಯಿತವ್ಯಂ ಚ ಪಾದೌ ಚ ಗನ್ತವ್ಯಂ ಚ .ಮನಶ್ಚ ಮಂತವ್ಯಂ ಚ
ಬುದ್ಧಿಶ್ಚ ಬೋದ್ಧವ್ಯಂ ಚ ಅಹಂಕಾರಶ್ಚಾಹಂಕರ್ತವ್ಯಂ ಚ ಚಿತ್ತಂ ಚ
ಚೇತಯಿತವ್ಯಂ ಚ ತೇಜಶ್ಚ ವಿದ್ಯೋತಯಿತವ್ಯಂ ಚ ಪ್ರಾಣಶ್ಚ
ವಿಧಾರಯಿತವ್ಯಂ ಚ ॥ ೮ ॥

ಏಷ ಹಿ ದ್ರಷ್ಟಾ ಸ್ಪ್ರಷ್ಟಾ ಶ್ರೋತಾ ಘ್ರಾತಾ ರಸಯಿತಾ ಮಂತಾ ಬೋದ್ಧಾ ಕರ್ತಾ
ವಿಜ್ಞಾನಾತ್ಮಾ ಪುರುಷಃ । ಸ ಪರೇಽಕ್ಷರೇ ಆತ್ಮನಿ ಸಂಪ್ರತಿಷ್ಠತೇ ॥ ೯ ॥

ಪರಮೇವಾಕ್ಷರಂ ಪ್ರತಿಪದ್ಯತೇ ಸ ಯೋ ಹ ವೈ ತದಚ್ಛಾಯಮಶರೀರಮ
ಲೋಹಿತಂ ಶುಭ್ರಮಕ್ಷರಂ ವೇದಯತೇ ಯಸ್ತು ಸೋಮ್ಯ, ಸ ಸರ್ವಜ್ಞಸ್ಸರ್ವೋ
ಭವತಿ! ತದೇಷಶ್ಲೋಕಃ ॥ ೧೦ ॥

ವಿಜ್ಞಾನಾತ್ಮಾ ಸಹ ದೇವೈಶ್ಚ ಸರ್ವೈಃ ಪ್ರಾಣಾಭೂತಾನಿ ಸಂಪ್ರತಿಷ್ಠಂತಿ ಯತ್ರ ।
ಶುಭ್ರಮಕ್ಷರಂ ವೇದಯತೇ ಯಸ್ತು ಸೋಮ್ಯ ಸ ಸರ್ವಜ್ಞಸ್ಸರ್ವಮೇವಾಽಽವಿವೇಶೇತಿ ॥೧೧ ॥

॥ ಇತಿ ಚತುರ್ಥಃ ಪ್ರಶ್ನಃ ॥

❋ ۞ ❋

## ॥ ಅಥ ಪಂಚಮಃ ಪ್ರಶ್ನಃ ॥

ಅಥಹೈನಂ ಶೈಬ್ಯಸ್ಸತ್ಯಕಾಮಃ ಪಪ್ರಚ್ಛ - ಸ ಯೋ ಹ ವೈ ತದ್ಭಗವನ್ !
ಮನುಷ್ಯೇಷು ಪ್ರಾಯಣಾಂತಮೋಂಕಾರಮಭಿಧ್ಯಾಯೀತ, ಕತಮಂ ವಾವ ಸ
ತೇನ ಲೋಕಂ ಜಯತೀತಿ ॥ ೧ ॥

ತಸ್ಮೈ ಸ ಹೋವಾಚ - ಏತದ್ವೈ ಸತ್ಯಕಾಮ! ಪರಂ ಚಾಪರಂ ಚ ಬ್ರಹ್ಮ
ಯದೋಂಕಾರಃ । ತಸ್ಮಾದ್ವಿದ್ವಾನ್ ಏತೇನೈವಾಯತನೇನೈಕತರಮನ್ವೇತಿ ॥ ೨ ॥

ಸ ಯದ್ಯೇಕಮಾತ್ರಮಭಿಧ್ಯಾಯೀತ, ಸ ತೇನೈವ ಸಂವೇದಿತಸ್ತೂರ್ಣಮೇವ
ಜಗತ್ಯಾಮಭಿಸಂಪದ್ಯತೇ । ತಮೃಚೋ ಮನುಷ್ಯಲೋಕಮುಪನಯಂತೇ । ಸ
ತತ್ರ ತಪಸಾ ಬ್ರಹ್ಮಚರ್ಯೇಣ ಶ್ರದ್ಧಯಾ ಸಂಪನ್ನೋ ಮಹಿಮಾನಮನುಭವತಿ ॥ ೩ ॥

ಅಥ ಯದಿ ದ್ವಿಮಾತ್ರೇಣ ಮನಸಿ ಸಂಪದ್ಯತೇ, ಸೋಽಂತರಿಕ್ಷಂ ಯಜುರ್ಭಿಃ ಉನ್ನೀಯತೇ ಸೋಮಲೋಕಮ್ । ಸ ಸೋಮಲೋಕೇ ವಿಭೂತಿಮನುಭೂಯ ಪುನರಾವರ್ತತೇ ॥ ೪ ॥

ಯಃ ಪುನರೇತಂ ತ್ರಿಮಾತ್ರೇಣೋಮಿತ್ಯೇತೇನೈವಾಕ್ಷರೇಣ ಪರಂ ಪುರುಷಮಭಿಧ್ಯಾಯೀತ, ಸ ತೇಜಸಿ ಸೂರ್ಯೇ ಸಂಪನ್ನಃ - ಯಥಾ ಪಾದೋದರಸ್ತ್ವಚಾ ವಿನಿರ್ಮುಚ್ಯತೇ ಏವಂ ಹ ವೈ ಸ ಪಾಪ್ಮನಾ ವಿನಿರ್ಮುಕ್ತಃ ಸ ಸಾಮಭಿರುನ್ನೀಯತೇ ಬ್ರಹ್ಮಲೋಕಮ್ । ಸ ಏತಸ್ಮಾಜ್ಜೀವಘನಾತ್ ಪರಾತ್ಪರಂ ಪುರಿಶಯಂ ಪುರುಷಮೀಕ್ಷತೇ । ತದೇತೌ ಶ್ಲೋಕೌ ಭವತಃ ॥ ೫ ॥

ತಿಸ್ರೋ ಮಾತ್ರಾ ಮೃತ್ಯುಮತ್ಯಃ ಪ್ರಯುಕ್ತಾಃ ಅನ್ಯೋನ್ಯಸಕ್ತಾ ಅನವಿಪ್ರಯುಕ್ತಾಃ ।
ಕ್ರಿಯಾಸು ಬಾಹ್ಯಾಂತರಮಧ್ಯಮಾಸು ಸಮ್ಯಕ್ ಪ್ರಯುಕ್ತಾಸು ನ ಕಂಪತೇ ಜ್ಞಃ ॥ ೬ ॥

ಋಗ್ಭಿರೇತಂ ಯಜುರ್ಭಿರಂತರಿಕ್ಷಂ ಸಾಮಭಿರ್ಯತ್ತತ್ ಕವಯೋ ವೇದಯಂತೇ ।
ತಮೋಂಕಾರೇಣೈವಾಯತನೇನಾನ್ವೇತಿ ವಿದ್ವಾನ್ ಯತ್ತಚ್ಛಾಂತಮಜರಮಮೃತಮಭಯಂ ಪರಂ ಚೇತಿ ॥ ೭ ॥

॥ ಇತಿ ಪಂಚಮಃ ಪ್ರಶ್ನಃ ॥

❈ ❈

## ॥ ಅಥ ಷಷ್ಠಃ ಪ್ರಶ್ನಃ ॥

ಅಥ ಹೈನಂ ಸುಕೇಶಾ ಭಾರದ್ವಾಜಃ ಪಪ್ರಚ್ಛ - ಭಗವನ್! ಹಿರಣ್ಯನಾಭಃ ಕೌಸಲ್ಯೋ ರಾಜಪುತ್ರೋ ಮಾಮುಪೇತ್ಯೈನಂ ಪ್ರಶ್ನಮಪೃಚ್ಛತ - ಷೋಡಶಕಲಂ ಭಾರದ್ವಾಜ! ಪುರುಷಂ ವೇತ್ಥ ಇತಿ । ತಮಹಂ ಕುಮಾರಮಬ್ರುವಮ್ - ನಾಹಮಿಮಂ ವೇದ; ಯದ್ಯಹಮಿಮಮವೇದಿಷಮ್, ಕಥಂ ತೇ ನಾವಕ್ಷ್ಯಮಿತಿ । ಸಮೂಲೋ ವಾ ಏಷ ಪರಿಶುಷ್ಯತಿ, ಯೋಽನೃತಮಭಿವದತಿ । ತಸ್ಮಾನ್ನಾರ್ಹಾಮ್ಯನೃತಂ ವಕ್ತುಮ್ । ಸ ತೂಷ್ಣೀಂ ರಥಮಾರುಹ್ಯ ಪ್ರವವ್ರಾಜ । ತಂ ತ್ವಾ ಪೃಚ್ಛಾಮಿ, ಕ್ವಾಸೌ ಪುರುಷ ಇತಿ ॥ ೧ ॥

ತಸ್ಮೈ ಸ ಹೋವಾಚ - ಇಹೈವಾಂತಶ್ಶರೀರೇ ಸೋಮ್ಯ ಸ ಪುರುಷಃ, ಯಸ್ಮಿನ್ನೇತಾಃ ಷೋಡಶ ಕಲಾಃ ಪ್ರಭವಂತೀತಿ ॥ ೨ ॥

ಸ ಈಕ್ಷಾಂಚಕ್ರೇ । ಕಸ್ಮಿನ್ನಹಮುತ್ಕ್ರಾಂತ ಉತ್ಕ್ರಾಂತೋ ಭವಿಷ್ಯಾಮಿ,
ಕಸ್ಮಿನ್ ವಾ ಪ್ರತಿಷ್ಠಿತೇ ಪ್ರತಿಷ್ಠಾಸ್ಯಾಮೀತಿ ॥ ೩ ॥

ಸ ಪ್ರಾಣಮಸೃಜತ ಪ್ರಾಣಾಚ್ಛ್ರದ್ಧಾಂ ಖಂ ವಾಯುರ್ಜ್ಯೋತಿರಾಪಃ ಪೃಥಿವೀಂ-
ದ್ರಿಯಮ್ ಮನೋಽನ್ನಮನ್ನಾದ್ವೀರ್ಯಂ ತಪೋ ಮಂತ್ರಾಃ ಕರ್ಮ ಲೋಕಾ
ಲೋಕೇಷು ಚ ನಾಮ ಚ ॥ ೪ ॥

ಸ ಯಥೇಮಾ ನದ್ಯಸ್ಸ್ಯಂದಮಾನಾಸ್ಸಮುದ್ರಾಯಣಾಸ್ಸಮುದ್ರಂ ಪ್ರಾಪ್ಯಾಸ್ತಂ
ಗಚ್ಛಂತಿ, ಭಿದ್ಯೇತೇ ತಾಸಾಂ ನಾಮರೂಪೇ, ಸಮುದ್ರ ಇತ್ಯೇವಂ ಪ್ರೋಚ್ಯತೇ -
ಏವಮೇವಾಸ್ಯ ಪರಿದ್ರಷ್ಟುರಿಮಾಃ ಷೋಡಶಕಲಾಃ ಪುರುಷಾಯಣಾಃ ಪುರುಷಂ
ಪ್ರಾಪ್ಯಾಸ್ತಂ ಗಚ್ಛನ್ತಿ: ಭಿದ್ಯೇತೇ ಚಾಸಾಂ ನಾಮರೂಪೇ, ಪುರುಷ ಇತ್ಯೇವಂ
ಪ್ರೋಚ್ಯತೇ । ಸ ಏಷೋಽಕಲೋಽಮೃತೋ ಭವತಿ । ತದೇಷ ಶ್ಲೋಕಃ ॥ ೫ ॥

ಅರಾ ಇವ ರಥನಾಭೌ ಕಲಾ ಯಸ್ಮಿನ್ ಪ್ರತಿಷ್ಠಿತಾಃ ।
ತಂ ವೇದ್ಯಂ ಪುರುಷಂ ವೇದ ಮಾ ವೋ ಮೃತ್ಯುಃ ಪರಿವ್ಯಥಾ ಇತಿ ॥ ೬ ॥

ತಾನ್ ಹೋವಾಚ - ಏತಾವದೇವಾಹಮೇತತ್ ಪರಂ ಬ್ರಹ್ಮ ವೇದ,
ನಾತಃ ಪರಮಸ್ತೀತಿ ॥ ೭ ॥

ತೇ ತಮರ್ಚಯಂತಃ ತ್ವಂ ಹಿ ನಃ ಪಿತಾ ಯೋಽಸ್ಮಾಕಮವಿದ್ಯಾಯಾಃ
ಪರಂ ಪಾರಂ ತಾರಯಸೀತಿ ॥ ನಮಃ ಪರಮಋಷಿಭ್ಯೋ ನಮಃ
ಪರಮಋಷಿಭ್ಯಃ ॥ ೮ ॥

॥ ಇತಿ ಷಷ್ಠಃ ಪ್ರಶ್ನಃ ॥

॥ ಇತಿ ಅಥರ್ವವೇದೀಯ ಪ್ರಶ್ನೋಪನಿಷತ್ ॥

# ಪ್ರ ಶ್ನೋ ಪ ನಿ ಷ ತ್

(ಸಂಸ್ಕೃತಮೂಲ-ಕನ್ನಡಮೂಲ-ಪ್ರತಿಪದಾರ್ಥ-ತಾತ್ಪರ್ಯ-
ರಂಗರಾಮಾನುಜಭಾಷ್ಯ-ಅನುವಾದ-ಭಾಷ್ಯಸಾರ ಸಹಿತ)

श्रीः

# प्रश्नोपनिषत्

(अथर्ववेदीयोपनिषत्)

भद्रं कर्णेभिः शृणुयाम देवाः भद्रं पश्येमाक्षभिर्यजत्राः ।
स्थिरैरङ्गैस्तुष्टुवाग्ंसस्तनूभिर्व्यशेम देवहितं यदायुः ।।
स्वस्ति न इन्द्रो वृद्धश्रवाः स्वस्ति नः पूषा विश्ववेदाः ।
स्वस्ति नस्ताक्ष्यों अरिष्टनेमिः स्वस्ति नो बृहस्पतिर्दधातु ।।
ओं शान्तिश्शान्तिश्शान्तिः

# ಪ್ರ ಶ್ನೋ ಪ ನಿ ಷ ತ್

(ಅಥರ್ವವೇದೀಯೋಪನಿಷತ್ ಶಾಂತಿಪಾಠ :)

ಭದ್ರಂ ಕರ್ಣೇಭಿಃ ಶ್ರುಣುಯಾಮ ದೇವಾಃ । ಭದ್ರಂ ಪಶ್ಯೇಮಾಕ್ಷಭಿರ್ಯಜತ್ರಾಃ ।
ಸ್ಥಿರೈರಂಗೈಸ್ತುಷ್ಟುವಾಗ್‌ಸಸ್ತನೂಭಿಃ ವ್ಯಶೇಮ ದೇವಹಿತಂ ಯದಾಯುಃ ।
ಸ್ವಸ್ತಿ ನ ಇಂದ್ರೋ ವೃದ್ಧಶ್ರವಾಃ । ಸ್ವಸ್ತಿ ನಃ ಪೂಷಾ ವಿಶ್ವವೇದಾಃ ।
ಸ್ವಸ್ತಿ ನಸ್ತಾರ್ಕ್ಷ್ಯೋ ಅರಿಷ್ಟನೇಮಿಃ । ಸ್ವಸ್ತಿ ನೋ ಬೃಹಸ್ಪತಿರ್ದಧಾತು ॥
॥ ಓಂ ಶಾಂತಿಃ ಶಾಂತಿಃ ಶಾಂತಿ : ॥

ತಾತ್ಪರ್ಯ

ಮೇಲೆ ಹೇಳಿದ ಶಾಂತಿಮಂತ್ರವು ಅಥರ್ವವೇದೀಯವಾದುದು · ಅಥರ್ವವೇದಕ್ಕೆ ಸೇರಿದ

ಪ್ರಶ್ನೋಪನಿಷತ್ತಿನ ಪ್ರಾರಂಭದಲ್ಲೂ ಇದನ್ನು ಅನುಸಂಧಾನ ಮಾಡುತ್ತೇವೆ· ಅಂತೆಯೇ ಮಾಂಡೂಕ್ಯೋಪನಿಷತ್ತಿನ ಅಧ್ಯಯನ ಪೂರ್ವದಲ್ಲೂ ಇದೇ ಶಾಂತಿಮಂತ್ರವಾಗುತ್ತದೆ·

ಋಷಿಗಳು ಶಾಂತಿಗಾಗಿ ಪ್ರಾರ್ಥಿಸುತ್ತಾರೆ ·ಮೊದಲನೆಯ ಋಕ್ಕಿನಲ್ಲಿ ದೇವತೆಗಳನ್ನು ಸಂಬೋಧಿಸುತ್ತಾರೆ· "ಎಲೈ ದೇವತೆಗಳೇ!" - ಎಂದು· ಇಲ್ಲಿ 'ದೇವಾಃ' ಎಂಬ ಪದವು ಮುಂದಿನ ಋಕ್ಕಿನಲ್ಲಿ ಹೇಳಿರುವ ಇಂದ್ರಾದಿದೇವತೆಗಳನ್ನೂ ಸೂಚಿಸುತ್ತದೆ·

ಶುಭವನ್ನುಂಟು ಮಾಡುವುವು ನಲ್ನುಡಿಗಳು· ಅವು ವೇದ, ವೇದಾಂಗ, ಇತಿಹಾಸ, ಪುರಾಣಾದಿಗಳಲ್ಲಿ ಅಡಗಿವೆ· ಅವು ಭಜನೀಯವಾದುವು ಎಂದೇ ನಮ್ಮೆಲ್ಲರ ಕಿವಿಗಳು ನಿರಂತರವಾಗಿ ಅವುಗಳನ್ನೇ ಕೇಳುತ್ತಿರಲಿ· ದೇವತಾನುಗ್ರಹದಿಂದ ಕೇಳ್ಮೆ ನಮಗೆ ಬರಲಿ· 'ನಮ್ಮೆಲ್ಲರ' ಎಂದರೆ ಆಚಾರ್ಯ - ಅಂತೇವಾಸಿಗಳ, ಋತ್ವಿಗ್ಯಜಮಾನರ ಎಂದರ್ಥ·

ಕಣ್ಣಿಗೆ ಮಂಗಳಕರವಾದ ದೃಶ್ಯಗಳೆಂದರೆ ಯಜ್ಞಯಾಗಾದಿ ದೇವತಾಕಾರ್ಯಗಳು· ನಮ್ಮ ಕಂಗಳು ಶುಭಪ್ರದವಾದ ಯಜನಕರ್ಮಗಳನ್ನೇ ಕಾಣುವಂತಾಗಲಿ· ದೇವರ ಆಶೀರ್ವಾದದಿಂದ ದೃಕ್‌ಶಕ್ತಿ ಹೆಚ್ಚಲಿ·

ನಾವು ವೇದಾಧ್ಯಾಯಿಗಳು· ಶ್ರುತಿಗಳನ್ನು ಕೇಳಿದ್ದೇವೆ ಎಂದೇ ಯಜನಾರ್ಹರು· ಅವನ್ನು ಕಾಣಲು ಅರ್ಹರು ಎಂದೇ ನಾವು ಯಜತ್ರಾಃ· ಈ ಪದಕ್ಕೆ ಮತ್ತೊಂದು ರೀತಿಯಲ್ಲೂ ಅರ್ಥ ನುಡಿವವರುಂಟು· ಅವರ ಅಭಿಪ್ರಾಯದಂತೆ ದೇವತೆಗಳು ಯಜನೀಯರು· ಅವರೇ ಇಲ್ಲಿ ಆಮಂತ್ರಿತರು·

ದೃಕ್-ಶ್ರವಣಶಕ್ತಿಗಳಿಗಾಗಿ ಪ್ರಾರ್ಥಿಸಿಯಾಯಿತು· ಅವು ಪ್ರಾಪ್ತವೂ ಆದುವು· ಈಗ ಬಿನ್ನವಿಸುತ್ತಾರೆ ನಮಗೆ ಅಂಗವೈಕಲ್ಯ ಬಾರದಿರಲಿ· (ಕೈ ಮೊದಲಾದ ಅಂಗಗಳು ಊನವಾದರೆ ಅಂಜಲಿ-ಮುದ್ರಾದಿಗಳಿಂದ ದೇವನನ್ನು ಭಜಿಸಲು ಆಗದು· ಕಾಯಕ ನಮನಾದಿಗಳಿಗೆ ನಾವು ದೃಢಕಾಯರಾಗಿರಬೇಕು)·

ನಮ್ಮ ಪಂಚೇಂದ್ರಿಯಗಳೂ, ಪಾಣಿ, ಪಾದಗಳೂ ಸುಸ್ಥಿತಿಯಲ್ಲಿರಲಿ· ಆದ್ದರಿಂದ ಸುದೃಢದೇಹಿಗಳಾದ ನಾವು ದೀರ್ಘಾಯುಗಳಾಗೋಣ· ನಮಗೆ ಸೃಷ್ಟಿಕರ್ತ ಚತುರ್ಮುಖ· ಅವನಿಂದ ನಮ್ಮ ಆಯಸ್ಸು ನಿಶ್ಚಿತವಾಗಿದೆ· ಅದರಂತೆ ನಮ್ಮ ಜೀವಿತ ಕಾಲವು ನೂರಹದಿನಾರು ಅಥವಾ ನೂರಿಪ್ಪತ್ತು ವರುಷಗಳು·

ದೈವಕೃಪೆಯಿಂದ ದೀರ್ಘಾಯುಗಳಾಗೋಣ· ದೀರ್ಘಾಯುಗಳಾಗಿ ಎಲ್ಲವನ್ನೂ ಪಡೆಯೋಣ ಎಲ್ಲವೂ ದೇವವಿಹಿತ· ಆ ದೇವನನ್ನು ಸ್ತುತಿಸೋಣ· ಆ ಸಾಮರ್ಥ್ಯವು ಅಧ್ಯಯನಾದಿಗಳಿಂದ ನಮಗುಂಟು· ಒಳ್ಳೆಯ ಕರ್ಮ ಮಾಡೋಣ· ಅದೆಲ್ಲವೂ ದೇವರಿಗರ್ಪಿತ·

ಮೊದಲಿಗೆ ನೇರವಾಗಿ ದೇವತಾಸ್ತುತಿಯಾಯಿತು · ಈಗ ಪರೋಕ್ಷದಲ್ಲಿ ಪ್ರತಿಯೊಂದು ದೇವತೆ-ಯನ್ನೂ ಋಷಿಗಳು ಪ್ರಾರ್ಥಿಸುತ್ತಾರೆ·

ನಮ್ಮ ಅಧ್ಯಯನವು ನಿರ್ವಿಘ್ನಸಮಾಪ್ತಿಯನ್ನು ಹೊಂದಲಿ· ಇದಕ್ಕೆ ತ್ರಿಲೋಕಾಧಿಪತಿಯಾದ ಇಂದ್ರನ ಆಶೀರ್ವಚನಬೇಕು · ಇಂದ್ರನು ನಿರಂತರವಾಗಿ ಸ್ತೋತ್ರಗಳನ್ನು ಕೇಳುವವನು ಎಂದೇ ವೃದ್ಧಶ್ರವನು · ಅವನ ವರ್ಣನೆಯನ್ನು ಮಹಾತ್ಮರು ಸದಾ ಕೇಳುತ್ತಿರುತ್ತಾರೆ · ಅಂತಹ ವೃದ್ಧಶ್ರವನು ನಮಗೆ ಶುಭದಾಯಕನಾಗಲಿ·

ಅಂತೆಯೇ ಜಗತ್ತಿಗೆಲ್ಲ ಬೆಳಕೀವ ದೇವನು ಪೂಷನು· ಆ ಪೂಷನು ನಮಗೆ ಮಂಗಳವನ್ನು ನೀಡಲಿ· ಯಾರಲ್ಲಿ ಎಲ್ಲ ವಿಶ್ವಗಳೂ, ಜ್ಞಾನಧನಗಳೂ ಅಡಗಿವೆಯೋ ಆ ಪೂಷನು ಶುಭಪ್ರದನಾಗಲಿ· ವಿಹಗರಾಜನಾದ ತಾರ್ಕ್ಷ್ಯನೂ ನಮಗೆ ಮುದ ನೀಡಲಿ · ತಾರ್ಕ್ಷ್ಯನೆಂದರೆ ಛಂದೋಮಯವಾದ ರಥವೆಂದೂ ಅರ್ಥವುಂಟು· ಬೃಹಸ್ಪತಿಯೂ ನಮಗೆ ಭಜನೀಯವಾದುದೆಲ್ಲವನ್ನೂ ಅನುಗ್ರಹಿಸಲಿ·

ಎಲ್ಲೆಡೆ ಶಾಂತಿನೆಲೆಸಲಿ·

॥ ಓಂ ಶಾಂತಿಃ ॥

ಶ್ರೀಃ

# ಪ್ರ ಶ್ನೋ ಪ ನಿ ಷ ತ್

## ಪ್ರಥಮಃ ಪ್ರಶ್ನಃ

### ಮಂತ್ರ - ೧

॥ हरिः ओम् ॥

सुकेशा च भारद्वाजः, शैब्यश्च सत्यकामः, सौर्यायणी च गार्ग्यः, कौसल्यश्चाऽऽश्वलायनः, भार्गवो वैदर्भिः, कबन्धी कात्यायनः, ते हैते ब्रह्मपराः ब्रह्मनिष्ठाः परं ब्रह्मान्वेषमाणाः 'एष ह वै तत् सर्वं वक्ष्यति' इति ते ह समित्पाणयो भगवन्तं पिप्पलादमुपसन्नाः ॥ 1 ॥

॥ ಹರಿಃ ಓಮ್ ॥

೧ಸುಕೇಶಾ ಚ ಭಾರದ್ವಾಜಃ, ಶೈಬ್ಯಶ್ಚ ಸತ್ಯಕಾಮಃ, ಸೌರ್ಯಾಯಣೀ ಚ ಗಾರ್ಗ್ಯಃ, ಕೌಸಲ್ಯಶ್ಚಾಽಽಶ್ವಲಾಯನಃ, ಭಾರ್ಗವೋ ವೈದರ್ಭಿಃ, ಕಬಂಧೀ ಕಾತ್ಯಾಯನಃ, ತೇ ಹೈತೇ ಬ್ರಹ್ಮಪರಾಃ ಬ್ರಹ್ಮನಿಷ್ಠಾಃ ಪರಂ ಬ್ರಹ್ಮಾನ್ವೇಷಮಾಣಾಃ 'ಏಷ ಹ ವೈ ತತ್ಸರ್ವಂ ವಕ್ಷ್ಯತಿ' ಇತಿ ತೇ ಹ ಸಮಿತ್ಪಾಣಯೋ ಭಗವಂತಂ ಪಿಪ್ಪಲಾದಮುಪಸನ್ನಾಃ ॥

#### ಪ್ರತಿಪದಾರ್ಥ

ಭಾರದ್ವಾಜಃ ಸುಕೇಶಾ ಚ - ಭರದ್ವಾಜನ ಮಗನಾದ ಸುಕೇಶನೂ, ಶೈಬ್ಯಃ ಸತ್ಯಕಾಮಶ್ಚ -

---

೧. ರಂಗರಾಮಾನುಜರ ಭಾಷ್ಯದಲ್ಲಿ ಈ ಮಂತ್ರವನ್ನು ಮೂರು ವಾಕ್ಯಗಳಾಗಿ ವಿಭಾಗಿಸಿ ವ್ಯಾಖ್ಯಾನ ಮಾಡಲಾಗಿದೆ.

ಶಿಬಿಯ ಮಗನಾದ ಸತ್ಯಕಾಮನೂ, **ಗಾರ್ಗ್ಯಃ ಸೌರ್ಯಾಯಣೀ ಚ** - ಗರ್ಗಗೋತ್ರದಲ್ಲಿ ಜನಿಸಿದ ಸೌರ್ಯಾಯಣಿಯೂ, **ಆಶ್ವಲಾಯನಃ ಕೌಸಲ್ಯಃ ಚ** - ಅಶ್ವಲನ ಮಗನಾದ ಕೌಸಲ್ಯನೂ, **ವೈದರ್ಭಿಃ ಭಾರ್ಗವಃ** - ಭೃಗುವಂಶದಲ್ಲಿ ಜನಿಸಿದ ವೈದರ್ಭಿಯೂ, **ಕಾತ್ಯಾಯನಃ ಕಬಂಧೀ** - ಕಾತ್ಯಾಯನಗೋತ್ರದಲ್ಲಿ ಜನಿಸಿದ ಕಬಂಧಿಯೂ, **ತೇ** - ಇಂತಹ, **ಏತೇ** - ಈ ಆರು ಜನರೂ, **ಬ್ರಹ್ಮಪರಾಃ** - ವೇದವೇ ಮುಖ್ಯ ಪ್ರಮಾಣವೆಂದು ತಿಳಿದು ಅನುಸರಿಸುವವರೂ ಆದ್ದರಿಂದಲೇ, **ಬ್ರಹ್ಮನಿಷ್ಠಾಃ** - ಪರಮಾತ್ಮನಲ್ಲಿ ನಂಬಿಕೆಯಿಟ್ಟು ತಪಸ್ಸಿನಲ್ಲಿ ನಿಷ್ಠರಾದವರೂ ಆದ್ದರಿಂದಲೇ, **ಪರಂ ಬ್ರಹ್ಮ ಅನ್ವೇಷಮಾಣಾಃ** - ಪರಮಾತ್ಮನ ಸ್ವರೂಪವನ್ನು ತಿಳಿಯುವ ಕುತೂಹಲವುಳ್ಳವರೂ, ಹ - ಅಲ್ಲವೇ! · **ಏಷ ಹ ವೈ**[೧] - ಈ ಪ್ರಸಿದ್ಧರಾದ ಪಿಪ್ಪಲಾದರೇ, **ತತ್ಸರ್ವಮ್** - ತಿಳಿಯಲು ಬಯಸಿದ ಆ ಎಲ್ಲಾ ವಿಷಯಗಳನ್ನೂ, **ವಕ್ಷ್ಯತಿ**[೨] - ಬೋಧಿಸಲಿರುವವರು, ಇತಿ - ಹೀಗೆಂದು ತಿಳಿದು, **ತೇ** - ಆ ಆರು ಜನರೂ, **ಸಮಿತ್ಪಾಣಯಃ** - ಗುರುಸೇವೆಗೆ ಉಪಯುಕ್ತವಾದ ಸಮಿತ್ತು, ಹಣ್ಣು, ಮೊದಲಾದವುಗಳನ್ನು ತೆಗೆದುಕೊಂಡು ಅಥವಾ ಕೈಮುಗಿದುಕೊಂಡು, **ಭಗವಂತಮ್**- ಪೂಜ್ಯರಾದ, **ಪಿಪ್ಪಲಾದಮ್** - ಪಿಪ್ಪಲಾದರನ್ನು, **ಉಪಸನ್ನಾಃ** - ಶಿಷ್ಯರಾಗಿ ಸಮೀಪಿಸಿದರು, ಹ - ಅಲ್ಲವೇ!

## ತಾತ್ಪರ್ಯ

ಸುಕೇಶ, ಸತ್ಯಕಾಮ, ಸೌರ್ಯಾಯಣಿ, ಕೌಸಲ್ಯ, ವೈದರ್ಭಿ, ಕಬಂಧೀ - ಈ ಆರು ಜನ ಋಷಿಗಳೂ ಒಳ್ಳೆಯ ಕುಲದಲ್ಲಿ ಹುಟ್ಟಿದವರು· ಇವರಿಗೆ ವೇದವೇ ಪ್ರಧಾನವಾದ ಪ್ರಮಾಣ· ವೇದಗಳು ವರ್ಣಿಸುವ ಪರಬ್ರಹ್ಮಸ್ವರೂಪದಲ್ಲಿಯೇ ಅಚಲ ವಿಶ್ವಾಸ, ಹಾಗಾಗಿ ಆ ಪರತತ್ತ್ವವನ್ನು ತಿಳಿಯುವ ಕುತೂಹಲ ಇವರಿಗೆ ಉಂಟಾಯಿತು · ಈ ಕುತೂಹಲವೇ ಇವರ ಪ್ರಸಿದ್ಧಿಗೆ ಕಾರಣ · ಇವರು ಪರಬ್ರಹ್ಮಸ್ವರೂಪವನ್ನು ತಿಳಿದ ಆಚಾರ್ಯರನ್ನು ಅರಸುತ್ತಾ ಹೊರಟರು · ಪೂಜ್ಯ ಪಿಪ್ಪಲಾದರನ್ನು ಕಂಡು, 'ಇವರೇ ಪರಬ್ರಹ್ಮಸ್ವರೂಪವನ್ನು ಬೋಧಿಸಲು ಸಮರ್ಥರು' ಎಂದು ತಿಳಿದು, ಅವರನ್ನು ಗುರುವಾಗಿ ಸ್ವೀಕರಿಸಿದರು · ಗುರುಗಳ ಬಳಿಗೆ ಬರಿಗೈಯಲ್ಲಿ ಹೋಗಬಾರದೆಂದು ಸಮಿತ್ತು ಮೊದಲಾದ ದ್ರವ್ಯಗಳನ್ನು ಕೈಯ್ಯಲ್ಲಿ ಹಿಡಿದೇ ಪೂಜ್ಯರಾದ ಪಿಪ್ಪಲಾದರ ಬಳಿಗೆ ಬಂದರು·

## ರಂಗರಾಮಾನುಜಭಾಷ್ಯ

**ಸುಕೇಶಾ ಚ ಭಾರದ್ವಾಜ ಇತಿ ।** ಭರದ್ವಾಜಸ್ಯ ಅಪತ್ಯಂ ಪುಮಾನ್ ಭಾರದ್ವಾಜಃ, ನಾಮತಃ ಸುಕೇಶಾ; ಶಿಬೇಃ ಅಪತ್ಯಂ ಶೈಬ್ಯಃ, ನಾಮತಃ ಸತ್ಯಕಾಮಃ; ಸೂರ್ಯಾಯಣಸ್ಯ ಅಪತ್ಯಂ ಸೌರ್ಯಾಯಣಿಃ, ಈಕಾರಃ ಛಾಂದಸಃ - ಗೋತ್ರತೋ ಗಾರ್ಗ್ಯಃ, ಕೌಸಲ್ಯೋ ನಾಮತಃ, ಆ(ಅ?)ಶ್ವಲಸ್ಯ ಅಪತ್ಯಮಾಶ್ವಲಾಯನಃ; ಭಾರ್ಗವೋ ಗೋತ್ರತಃ, ವಿದರ್ಭಸ್ಯ ಅಪತ್ಯಂ ವೈದರ್ಭಿಃ; ಕಬಂಧೀ ನಾಮತಃ, ಕಾತ್ಯಾಯನೋ ಗೋತ್ರತಃ । **ತೇ ಹ್ಯೇತೇ ಬ್ರಹ್ಮಪರಾ ಇತಿ । ತೇ ಹ**

---

೧· ಪ್ರತಿಪದಾರ್ಥದೀಪಿಕೆಯಲ್ಲಿ 'ಹ-ವಾ-ಏತತ್' ಎಂದು ಪದ ವಿಭಾಗವನ್ನು ಸೂಚಿಸಲಾಗಿದೆ·

೨· ಪ್ರತಿಪದಾರ್ಥದೀಪಿಕೆಯಲ್ಲಿ 'ಪ್ರತಿವಕ್ಷ್ಯತೀತಿ' ಎಂದು ಪ್ರತೀಕಧಾರಣೆ ಮಾಡಲಾಗಿದೆ·

ಪ್ರಸಿದ್ಧಾಃ । ಏತೇ ಉಕ್ತಾಃ ಸುಕೇಶ-ಸತ್ಯಕಾಮ-ಸೌರ್ಯಾಯಣಿ-ಕೌಸಲ್ಯ-ಭಾರ್ಗವ-ಕಬಂಧಿನಃ ಷಡೃಷಯಃ । **ಬ್ರಹ್ಮಪರಾಃ** - ವೇದಪರಾಃ; ವೇದೈಕಶರಣಾಃ ಇತ್ಯರ್ಥಃ । **ಬ್ರಹ್ಮನಿಷ್ಠಾಃ** - ವೇದಾರ್ಥತಾತ್ಪರ್ಯವಂತಃ । ಯದ್ವಾ - **ಬ್ರಹ್ಮಪರಾಃ** - ಬ್ರಹ್ಮಜ್ಞಾನತತ್ಪರಾಃ । **ಬ್ರಹ್ಮನಿಷ್ಠಾಃ**-ತಪೋನಿಷ್ಠಾಃ । 'ವೇದಸ್ತತ್ತ್ವಂ ತಪೋ ಬ್ರಹ್ಮ' ಇತ್ಯುಕ್ತೇಃ । **ಪರಂ ಬ್ರಹ್ಮ** — **ಪರಮ್** - ಉತ್ಕೃಷ್ಟಂ ನಿರುಪಚರಿತಮ್, **ಬ್ರಹ್ಮ** - ಸ್ವರೂಪತೋ ಗುಣತಶ್ಚ ಬೃಹದ್ಭೂತಂ ವಸ್ತು **ಅನ್ವೇಷಮಾಣಾಃ** - ಜಿಜ್ಞಾಸಮಾನಾಃ ಇತ್ಯರ್ಥಃ ।

**ಏಷ ಹ ವೈ ತದಿತಿ** । 'ಹ' ಶಬ್ದಃ ಪ್ರಸಿದ್ಧೌ । 'ವೈ' ಶಬ್ದೋಽವಧಾರಣೇ । **ಏಷಃ** - ಅಸ್ಮದ್ಬುದ್ಧೌ ವಿಪರಿವರ್ತಮಾನಃ ಪರಬ್ರಹ್ಮವೇತ್ತೃತ್ವೇನ ಪ್ರಸಿದ್ಧಃ ಪಿಪ್ಪಲಾದ ಏವ ಷಣ್ಣಾಮಸ್ಮಾಕಂ ಜಿಜ್ಞಾಸಿತಾನ್ ಅರ್ಥಾನ್ ವಕ್ತುಂ ಪ್ರಭವತಿ ಇತಿ ಪರ್ಯಾಲೋಚ್ಯ ಸಮಿದ್ಭಾರಾದ್ಯು-ಪಾಯನಪಾಣಯಃ ಶಾಸ್ತ್ರದೃಷ್ಟೇನ ವಿಧಿನಾ ಪೂಜ್ಯಂ ಪಿಪ್ಪಲಾದಮುಪಗತಾ ಇತ್ಯರ್ಥಃ ॥

## ಅನುವಾದ

**ಸುಕೇಶಾ ಚ ಭಾರದ್ವಾಜ ಇತಿ** । ಭರದ್ವಾಜನ ಮಗ ಭಾರದ್ವಾಜ, ಹೆಸರು ಸುಕೇಶ· ಶಿಬಿಯ ಮಗ ಶೈಬ್ಯ, ಹೆಸರು ಸತ್ಯಕಾಮ ಎಂದು· ಸೂರ್ಯಾಯಣನ ಮಗ ಸೌರ್ಯಾಯಣಿ, (ಸೌರ್ಯಾಯಣೀ ಎಂಬಲ್ಲಿ) 'ಈ' ವರ್ಣವು ೧ವೈದಿಕವು· (ಇವನು) ಗರ್ಗಗೋತ್ರದಲ್ಲಿ ಜನಿಸಿದವನು· ಕೌಸಲ್ಯ ಎಂಬ ಹೆಸರಿನ ಆಶ್ವಲಾಯನನು ಅಶ್ವಲನ ಮಗನು, ಭೃಗುವಂಶದಲ್ಲಿ ಹುಟ್ಟಿದವನು, ವಿದರ್ಭನ ಮಗ ವೈದರ್ಭಿ· ಕಬಂಧಿಯೆಂದು ಹೆಸರು, ಗೋತ್ರದಿಂದ ಕಾತ್ಯಾಯನನು· **ತೇ ಹ**-ಅವರೆಲ್ಲರೂ ಪ್ರಸಿದ್ಧರು· **ಏತೇ** - ಸುಕೇಶ, ಸತ್ಯಕಾಮ, ಸೌರ್ಯಾಯಣಿ, ಕೌಸಲ್ಯ, ಭಾರ್ಗವ, ಕಬಂಧಿ ಎಂಬ ಈ ಆರು ಋಷಿಗಳೂ, **ಬ್ರಹ್ಮಪರಾಃ** - ವೇದಪರರು, ವೇದವನ್ನು ಮಾತ್ರ ಅವಲಂಬಿಸಿರುವವರು **ಬ್ರಹ್ಮನಿಷ್ಠಾಃ** - ವೇದಾರ್ಥದಲ್ಲಿ (ಮುಖ್ಯ) ಅಭಿಪ್ರಾಯವುಳ್ಳವರು, ಅಥವಾ **ಬ್ರಹ್ಮಪರಾಃ** - ಬ್ರಹ್ಮಜ್ಞಾನದಲ್ಲಿ ಆಸಕ್ತಿಯುಳ್ಳವರು· **ಬ್ರಹ್ಮನಿಷ್ಠಾಃ** - 'ವೇದಸ್ತತ್ತ್ವಂ ತಪೋ ಬ್ರಹ್ಮ' ಎಂಬ ವಾಕ್ಯದಂತೆ ತಪಸ್ಸಿನಲ್ಲಿ ಶ್ರದ್ಧೆಯುಳ್ಳವರು· **ಪರಂಬ್ರಹ್ಮ** — **ಪರಮ್** - ಉತ್ತಮವಾದ, ಗೌಣವಲ್ಲದ, **ಬ್ರಹ್ಮ** - ಸ್ವರೂಪ ಹಾಗೂ ಗುಣಗಳಿಂದ ಹಿರಿದಾದ ಬ್ರಹ್ಮವಸ್ತುವನ್ನು, **ಅನ್ವೇಷಮಾಣಾಃ** - ತಿಳಿಯುವ ಇಚ್ಛೆಯುಳ್ಳವರು·

**ಏಷ ಹ ವೈ ತದಿತಿ** । 'ಹ' ಶಬ್ದವು೨ ಪ್ರಸಿದ್ಧಿಯನ್ನು ಸೂಚಿಸುತ್ತದೆ· 'ವೈ' ಶಬ್ದವು ಅವಧಾರಣವನ್ನು ಸೂಚಿಸುತ್ತದೆ· **ಏಷಃ** - ನಮ್ಮ ತಿಳುವಳಿಕೆಯಲ್ಲಿ ಅಚ್ಚಳಿಯದೇ ನೆಲೆ ನಿಂತ, ಬ್ರಹ್ಮವನ್ನು ತಿಳಿದವರು ಎಂದು ಪರಿಚಿತರಾದ ಈ ಪಿಪ್ಪಲಾದರೇ ನಮ್ಮ ಆರು ಮಂದಿಗೂ ತಿಳಿಯಲು

---

೧· ವೈದಿಕ ವ್ಯಾಕರಣಾನುಸಾರ ಇವೆಲ್ಲವೂ ಶುದ್ಧ, ಲೌಕಿಕ ವ್ಯಾಕರಣದ ದೃಷ್ಟಿಯಿಂದ ಅಶುದ್ಧವೆಸ್ನುವ ಆಕ್ಷೇಪ ಇಲ್ಲಿ ಸಲ್ಲದು·

೨· ಮತ್ತೊಂದರಿಂದ ಬೇರ್ಪಡಿಸುವುದು'

ಇಷ್ಟವಾದ ವಿಷಯಗಳನ್ನು ವಿವರಿಸಲು ಅರ್ಹರು ಎಂದು ವಿಚಾರ ಮಾಡಿ, ಸಮಿತ್ತು ಮುಂತಾದ ದರ್ಶನಕಾಣಿಕೆಗಳನ್ನು ಕೈಯಲ್ಲಿ ಹಿಡಿದು ಶಾಸ್ತ್ರಸಮ್ಮತವಾದ ವಿಧಾನದಿಂದ ಪೂಜ್ಯಪಿಪ್ಪಲಾದರನ್ನು ಗುರುವಾಗಿ ವರಿಸಿ ಹೊಂದಿದರು ಎಂದು ಅಭಿಪ್ರಾಯ·

## ಭಾಷ್ಯಸಾರ

ಬ್ರಹ್ಮವಿದ್ಯೆ ಬಹಳ ಗಹನವಾದುದು· ಇದನ್ನು ತಿಳಿಯುವುದೂ, ತಿಳಿಸುವುದೂ, ಸುಲಭವೇನಲ್ಲ ಆದ್ದರಿಂದ ಸಾಮಾನ್ಯರು ಈ ವಿದ್ಯೆಯನ್ನು ಪಡೆಯಲು ಮುಂದಾಗುವುದಿಲ್ಲ · ಅವರು ಹಿಮ್ಮುಖರಾಗದೇ ಈ ವಿದ್ಯೆಯಲ್ಲಿ ತೊಡಗಬೇಕಾದರೆ ಈ ವಿದ್ಯೆಯ ಮಹತ್ವದ ಅರಿವು ಉಂಟಾಗಬೇಕು· ಇದರ ಅರಿವಿಗೆ ವಿದ್ಯೆಯ [೧]ಪ್ರಶಂಸೆ ಅನಿವಾರ್ಯ· ಇದರೊಂದಿಗೆ ಬ್ರಹ್ಮವಿದ್ಯೆಯನ್ನು [೨]ಸುಲಭವಾಗಿ ತಿಳಿಯುವ ಹಾಗೂ ತಿಳಿಸುವ ಉಪಾಯವನ್ನು ಸಜ್ಜುಗೊಳಿಸಬೇಕು · ಈ ಉದ್ದೇಶಗಳಿಂದ ಇಲ್ಲಿ ಆಖ್ಯಾಯಿಕೆಯನ್ನು ಆರಂಭಿಸಲಾಗಿದೆ·

ಆಖ್ಯಾಯಿಕೆ ಒಂದು ನೈಜ ಘಟನೆ · ಇದರಲ್ಲಿ ಪಾಲ್ಗೊಂಡವರು ಸುಕೇಶ, ಸತ್ಯಕಾಮ, ಸೌರ್ಯಾಯಣಿ, ಕೌಸಲ್ಯ, ವೈದರ್ಭಿ, ಕಬಂಧೀ ಹಾಗೂ ಪಿಪ್ಪಲಾದರು· ಪಿಪ್ಪಲಾದರು ಆಚಾರ್ಯರು · ಸುಕೇಶ ಮುಂತಾದ ಆರು ಜನ ಋಷಿಗಳು ಶಿಷ್ಯರು · ಬ್ರಹ್ಮವಿದ್ಯೆಯ [೩]ಅಧಿಕಾರಿಗಳು · ಇವರು ವೇದೈಕಶರಣರು · ಇವರಿಗೆ ವೇದಾಧ್ಯಯನವೇ ಪ್ರಧಾನ · ಈ ವೇದಾಧ್ಯಯನದ ಕಾರಣದಿಂದಲೇ ವೇದಾರ್ಥಚಿಂತನೆಯಲ್ಲೂ ಪ್ರವೃತ್ತರಾಗಿದ್ದಾರೆ · ಇವರು ಬ್ರಹ್ಮದ ವಿಷಯದಲ್ಲಿ ಶ್ರದ್ಧೆಯುಳ್ಳವರು · ತಪೋನಿರತರೂ ಹೌದು · ಈ ಋಷಿಗಳು ಅಧ್ಯಯನ ಹಾಗೂ ಚಿಂತನದ ಫಲವಾಗಿ ಬ್ರಹ್ಮವಸ್ತುವಿನ ಸ್ಥೂಲವಾದ ಪರಿಚಯವನ್ನೂ ಪಡೆದಿದ್ದಾರೆ · ಆದರೆ ಇಷ್ಟರಿಂದಲೇ ಇವರಿಗೆ ತೃಪ್ತಿಯಾಗಿಲ್ಲ · ಪರಬ್ರಹ್ಮದ ಸ್ವರೂಪವನ್ನು ಇನ್ನೂ ಸೂಕ್ಷ್ಮವಾಗಿ ತಿಳಿಯಬೇಕೆಂಬ ಅಭಿಲಾಷೆಯುಂಟಾಗಿದೆ · ವ್ಯಾಸಂಗ ಹಾಗೂ ಚಿಂತನೆಗಳು ಹೆಚ್ಚಿದಂತೆ ಪರಬ್ರಹ್ಮವನ್ನು ಕುರಿತು ಜಿಜ್ಞಾಸೆಯೂ ತೀವ್ರವಾಗಿದೆ· ಪರತತ್ತ್ವವನ್ನು ಉಪದೇಶಿಸುವ ಸದ್ಗುರುವಿನ ಸುಳಿವಿಗಾಗಿ ಶೋಧನೆಯನ್ನು ಕೈಗೆತ್ತಿಕೊಂಡಿದ್ದಾರೆ · ಇದರ ಪರಿಣಾಮವೇ ಪಿಪ್ಪಲಾದರ ಪ್ರಾಪ್ತಿ·

[೪]ಪೂಜ್ಯರಾದ ಪಿಪ್ಪಲಾದರು ಬ್ರಹ್ಮಜ್ಞಾನಿಗಳೆಂದೇ ಪ್ರಸಿದ್ಧರು· ಬ್ರಹ್ಮ ಹಿರಿದಾದ ವಸ್ತು· ಸ್ವರೂಪ ಮತ್ತು ಗುಣಗಳಿಂದ ಎಲ್ಲಾ ವಸ್ತುಗಳನ್ನೂ ಮೀರಿ ಬೃಹತ್ವವನ್ನು ಹೊಂದಿದೆ ಎಂದು ಇವರು ನಿಶ್ಚಿತವಾಗಿ ತಿಳಿದಿದ್ದಾರೆ· [೫]ಬ್ರಹ್ಮ ಎಂದರೇನು? ಅದನ್ನು ಪಡೆಯುವ ಸಾಧನವಾವುದು? ಮುಂತಾಗಿ

---

೧· ವಿದ್ಯಾಸ್ತುತಯೇ ಆಖ್ಯಾಯಿಕಾ ಪ್ರಸ್ತೂಯತೇ – ಸುಬೋಧಿನೀ·

೨· ಸಾಕಲ್ಯೇನ ವಿದ್ಯಾಧಿಗಮಾಯಾಖ್ಯಾಯಿಕಾಮುಪಕ್ರಮತೇ – ಆನಂದಭಾಷ್ಯ

೩· ಆದೌ ಬ್ರಹ್ಮವಿದ್ಯಾಧಿಗಮಯೋಗ್ಯಾಧಿಕಾರಿಣ ಆಹ ಶ್ರುತಿಃ – ಪ್ರತಿಪದಾರ್ಥದೀಪಿಕಾ·

೪· ಬ್ರಹ್ಮಣಿ ಪರತತ್ತ್ವಂ ತು ಗುಣತಃ ಸ್ವರೂಪತಶ್ಚ ನಿರತಿಶಯಬೃಹತ್ವಸ್ವರೂಪಮ್ – ಆನಂದಭಾಷ್ಯ

೫· ಯತ್ ಪರಂ ಬ್ರಹ್ಮ ಯಚ್ಚ ತತ್ಪ್ರಾಪ್ತಿ ಸಾಧನಮ್ ತತ್ಸರ್ವಂ ವಕ್ಷ್ಯತಿ – ಸುಬೋಧಿನೀ·

ಎಲ್ಲಾ ವಿಷಯಗಳನ್ನೂ ಹೇಳಬಲ್ಲರು · ಆದ್ದರಿಂದ ಪಿಪ್ಪಲಾದರೇ ನಮಗೆ ಗುರುಗಳಾಗಬಲ್ಲರು · ಅವರು ನಾವು ಕೇಳುವ ಪ್ರಶ್ನೆಗಳಿಗೆ ಉತ್ತರವನ್ನು ಅನುಗ್ರಹಿಸುವರು ಎಂದು ಸುಕೇಶ ಮುಂತಾದ ಋಷಿಗಳು ಭಾವಿಸುತ್ತಾರೆ· ಅವರನ್ನೇ ಆಚಾರ್ಯರೆಂದು ಪರಿಗ್ರಹಿಸುತ್ತಾರೆ·

'ಸಮಿತ್ಪಾಣಿಃ ಶ್ರೋತ್ರಿಯಮ್ ಬ್ರಹ್ಮನಿಷ್ಠಮ್' ಎಂಬುದು ಮುಂಡಕಶ್ರುತಿ · 'ರಿಕ್ತಪಾಣಿರ್ನ ಗಚ್ಛೇತ್ತು ರಾಜಾನಂ ಶ್ರೋತ್ರಿಯಂ ಗುರುಮ್' ಎಂಬುದು ಸ್ಮೃತಿವಾಕ್ಯ · ಇವುಗಳ ಆಧಾರದ ಮೇಲೆ ಶಿಷ್ಯನಾದವನು ವೇದಾಧ್ಯಯನಸಂಪನ್ನರೂ, ಬ್ರಹ್ಮಜ್ಞಾನಿಗಳೂ ಆದ ಗುರುಗಳನ್ನು ರಿಕ್ತಹಸ್ತನಾಗಿ ಭೇಟಿಯಾಗಬಾರದು ಎಂಬ ನಿಯಮ ಸಿದ್ಧವಾಗುತ್ತದೆ · ಇಲ್ಲಿ ಪಿಪ್ಪಲಾದರು ಬ್ರಹ್ಮತತ್ತ್ವ ತಿಳಿದ ಶ್ರೋತ್ರಿಯರು · 'ಕರ್ಮಫಲಗಳು[೧] ಸಂಸಾರ ವೃಕ್ಷದ ಬೀಜಗಳು · ಅವು ಭಗವಂತನ ಕೃಪೆಯ ಫಲಗಳು · ಆದ್ದರಿಂದ ಅವುಗಳನ್ನು ಅವಶ್ಯವಾಗಿ ಅನುಭವಿಸಬೇಕು' ಎಂದು ತಿಳಿದು, ತಿಳಿದಂತೆ ಆಚರಿಸುವವರು · ಇಂತಹ ಆಚಾರ್ಯರನ್ನು ಸುಕೇಶ ಮೊದಲಾದ ಶಿಷ್ಯರು ಶಾಸ್ತ್ರೀಯವಾದ ವಿಧಾನದಿಂದ ಸಂದರ್ಶಿಸಿದ್ದಾರೆ · ಗುರುಸೇವೆಗೆ ಉಪಯುಕ್ತವಾದ ಸಮಿತ್ತು, ಹಣ್ಣು ಮೊದಲಾದ ದ್ರವ್ಯಗಳನ್ನು ತೆಗೆದುಕೊಂಡು ಪೂಜ್ಯರಾದ ಪಿಪ್ಪಲಾದರ ಬಳಿ ಸೇರಿದ್ದಾರೆ·

## ಮಂತ್ರ - ೨

तान् ह स ऋषिरुवाच, 'भूय एव तपसा
ब्रह्मचर्येण श्रद्धया संवत्सरं (सं)वत्स्यथ ।
यथाकामं प्रश्नान् पृच्छत(थ)। यदि विज्ञास्यामः,
सर्वं ह वो वक्ष्यामः' इति ॥ 2 ॥

ತಾನ್ ಹ ಸ ಋಷಿರುವಾಚ । ಭೂಯ ಏವ ತಪಸಾ
ಬ್ರಹ್ಮಚರ್ಯೇಣ ಶ್ರದ್ಧಯಾ ಸಂವತ್ಸರಂ [೨]ಸಂವತ್ಸ್ಯಥ ।
ಯಥಾಕಾಮಂ ಪ್ರಶ್ನಾನ್ [೩]ಪೃಚ್ಛಥ । ಯದಿ ವಿಜ್ಞಾಸ್ಯಾಮಃ
ಸರ್ವಂ ಹ ವೋ ವಕ್ಷ್ಯಾಮಃ ಇತಿ ॥

---

೧· ಪಿಪ್ಪಲಸ್ಯ ಫಲಮ್ – ಪಿಪ್ಪಲಮ್ – ಸಂಸಾರ ವೃಕ್ಷಬೀಜಮ್, ಅವಶ್ಯಾನುಭೋಕ್ತವ್ಯಕರ್ಮಫಲಮಿತ್ಯರ್ಥಃ । (ತತ್) ಭಗವತ್ಕೃಪಾಫಲತ್ವೇನ ಭೋಗ್ಯತಯಾ ಅತ್ತೀತಿ ಪಿಪ್ಪಲಾದಃ – ಪ್ರತಿಪದಾರ್ಥದೀಪಿಕಾ

೨· ರಂಗರಾಮಾನುಜಭಾಷ್ಯದಲ್ಲಿ 'ಸಮ್' ಉಪಸರ್ಗರಹಿತವಾದ ಪಾಠ ಇದೆ· ಇದು ಆಜ್ಞಾರ್ಥದಲ್ಲಿನ ಭವಿಷ್ಯತ್ ಪ್ರಯೋಗ·

೩· ರಂಗರಾಮಾನುಜಭಾಷ್ಯದಲ್ಲಿ 'ಪೃಚ್ಛತ' ಎನ್ನುವ ಪಾಠ ಇದೆ·

## ಪ್ರತಿಪದಾರ್ಥ

**ತಾನ್ ಹ** - ಅವರನ್ನು ಕುರಿತು, **ಸ ಋಷಿಃ** - ಋಷಿಗಳಾದ ಆ ಪಿಪ್ಪಲಾದರು, (ನೀವು ಈ ಮೊದಲೇ ತಪೋನಿರತರು: ಆದರೂ) **ಭೂಯ ಏವ** - ಮತ್ತೊಮ್ಮೆ, **ತಪಸಾ** - ದೇಹದಂಡನೆ ರೂಪವಾದ ಕೃಚ್ಛ್ರ, ಚಾಂದ್ರಾಯಣ ಮೊದಲಾದ ತಪಸ್ಸಿನಿಂದಲೂ, **ಬ್ರಹ್ಮಚರ್ಯೇಣ** - ಎಂಟು ವಿಧವಾದ ಮೈಥುನಗಳನ್ನು ಬಿಡುವ ಬ್ರಹ್ಮಚರ್ಯದಿಂದಲೂ, **ಶ್ರದ್ಧಯಾ** - ಆಸ್ತಿಕ್ಯಭಾವನೆ-ಯಿಂದಲೂ, **ಸಂವತ್ಸರಮ್** - ಒಂದು ವರ್ಷಕಾಲ, **ಸಂವತ್ಸ್ಯಥ** - ವಾಸ ಮಾಡಿರಿ · (ಒಂದು ವರ್ಷ ಕಳೆದ ಮೇಲೆ) **ಯಥಾಕಾಮಂ** - ಇಷ್ಟದಂತೆ, **ಪ್ರಶ್ನಾನ್** - ಕೇಳಬೇಕಾದ ವಿಷಯಗಳನ್ನು, **ಪೃಚ್ಛಥ** - ಕೇಳಿರಿ · **ಯದಿ ವಿಜ್ಞಾಸ್ಯಾಮಃ** - ನಿಮ್ಮ ಪ್ರಶ್ನೆಗಳಿಗೆ ಉತ್ತರವು ನಮಗೆ ತಿಳಿದಿದ್ದರೆ, **ತತ್ಸರ್ವಂ** - ಆ ಎಲ್ಲ ಪ್ರಶ್ನೆಗಳಿಗೆ ಉತ್ತರವನ್ನು, **ವಃ** - ನಿಮಗೆ, **ವಕ್ಷ್ಯಾಮಃ** - ಹೇಳುವೆವು · **ಇತಿ** - ಎಂದು, **ಉವಾಚ** - ಹೇಳಿದರು·

## ತಾತ್ಪರ್ಯ

ಬ್ರಹ್ಮಜಿಜ್ಞಾಸುಗಳಾದ ಪಿಪ್ಪಲಾದರು ಸುಕೇಶ ಮುಂತಾದವರಿಗೆ ಆ ಪಿಪ್ಪಲಾದರು ಈ ರೀತಿಯಾಗಿ ಆಜ್ಞಾಪಿಸಿದರು · ಋಷಿಗಳೇ! ನೀವು ಈಗಾಗಲೇ ತಪಸ್ಸು ಮಾಡಿರುತ್ತೀರಿ · ಆದರೂ ನಿಮಗೆ ಬ್ರಹ್ಮವಿದ್ಯೆಯ ಬಗ್ಗೆ ತೀವ್ರ ಅಭಿಲಾಷೆಯಿರುವುದಾದರೆ, ನೀವು ಇನ್ನೂ ಒಂದು ವರ್ಷಕಾಲ ಹೆಚ್ಚಿನ ತಪಸ್ಸನ್ನು ಆಚರಿಸಬೇಕು · ಬ್ರಹ್ಮಚರ್ಯೆಯನ್ನು ಪಾಲಿಸಬೇಕು · ಶ್ರದ್ಧೆಯಿಂದ ಗುರುಕುಲ-ದಲ್ಲಿ ವಾಸಮಾಡಬೇಕು· ಅನಂತರ ನೀವು ಬೇಕಾದ ಪ್ರಶ್ನೆಗಳನ್ನು ಕೇಳಿರಿ· ನನಗೆ ತಿಳಿದಿದ್ದರೆ ನಿಮ್ಮ ಪ್ರಶ್ನೆಗಳಿಗೆ ಉತ್ತರಿಸುತ್ತೇನೆ·

## ರಂಗರಾಮಾನುಜಭಾಷ್ಯ

**ತಾನ್ ಹ ಸ ಋಷಿರುವಾಚೇತಿ** - ಸ್ಪಷ್ಟೋಽರ್ಥಃ । **ಭೂಯ ಏವೇತಿ।** ಯದ್ಯಪಿ ಪೂರ್ವಮೇವ ಭವಂತಸ್ತಪೋಬ್ರಹ್ಮಚರ್ಯಾದಿಸಂಪನ್ನಾಃ, ತಥಾಽಪಿ ಬ್ರಹ್ಮವಿದ್ಯಾ-ಗ್ರಹಣಾರ್ಥಂ ಪುನರಪಿ ಶರೀರಶೋಷಣಾದಿಲಕ್ಷಣತಪಸಾ ಯೋಷಿತ್ಸ್ಮರಣ-ಕೀರ್ತನ-ಕೇಲಿಪ್ರೇಕ್ಷಣ-ಗುಹ್ಯಭಾಷಣ-ಸಂಕಲ್ಪಾಧ್ಯವಸಾಯಕ್ರಿಯಾನಿವೃತ್ತಿಲಕ್ಷಣಾಷ್ಟವಿಧ-ಮೈಥುನವರ್ಜನರೂಪ - ಬ್ರಹ್ಮಚರ್ಯೇಣ ಆಸ್ತಿಕ್ಯಬುದ್ಧಿಲಕ್ಷಣಯಾ ಶ್ರದ್ಧಯಾ ಯುಕ್ತಾಸ್ಸಂತಃ ಸಂವತ್ಸರ-ಮಾತ್ರಂ(ಮತ್ರ?) ವಾಸಂ **ಕರಿಷ್ಯಥ** - ವಾಸಂ ಕುರ್ವಂತ್ವಿತಿ ಯಾವತ್ । ತತಃ ಸ್ವೇಚ್ಛಾನುರೋಧೇನ ಪ್ರಷ್ಟವ್ಯಾನ್ ಅರ್ಥಾನ್ ಪೃಚ್ಛಥ । ಯದಿ ತಾನ್ ಅರ್ಥಾನ್ ವಯಂ ಜ್ಞಾಸ್ಯಾಮಃ, ತದಾ ವಚನಮಂತರೇಣ ಸರ್ವಂ ವಕ್ಷ್ಯಾಮಃ । ಯದ್ಯಸ್ಮಾಸು ಜ್ಞಾತೃತ್ವನಿಶ್ಚಯಾಭಾವೇನ ಸಂವತ್ಸರಬ್ರಹ್ಮಚರ್ಯತಪ ಆದೌ ಬಹುಕ್ಲೇಶಸಾಧ್ಯೇ ಪ್ರವೃತ್ತಿರ್ನ ಯುಷ್ಮಭ್ಯಂ ರೋಚತೇ, ತದಾ ಸುಖೇನ ಗಂತವ್ಯಮಿತಿ ಭಾವಃ । ತತಶ್ಚ ಗುರೋರ್ಜ್ಞಾತೃತ್ವಪರೀಕ್ಷಾಮಂತರೇಣೈವ ಶುಶ್ರೂಷಾ ಕಾರ್ಯೇತ್ಯಯಮರ್ಥಃ

ಶಿಕ್ಷಿತೋ ಭವತಿ । ತಥಾ ಗುರೋರಪಿ ಶಿಷ್ಯಸಂಗ್ರಹೇ ನಾತೀವಾಽಽದರಃ ಕರ್ತವ್ಯ ಇತ್ಯರ್ಥಶ್ಚ ಸೂಚಿತಃ ॥

## ಅನುವಾದ

ತಾನ್ ಹ ಸ ಋಷಿರುವಾಚ - ಅರ್ಥವು ಸ್ಪಷ್ಟವಾಗಿದೆ· ಭೂಯ ಏವೇತಿ । ಈ ಹಿಂದೆಯೇ ತಾವು ತಪಸ್ಸು, ಬ್ರಹ್ಮಚರ್ಯ ಮೊದಲಾದವುಗಳಿಂದ ಸಜ್ಜಾಗಿದ್ದೀರಿ· ಆದರೂ ಬ್ರಹ್ಮವಿದ್ಯೆಯ ಅರಿವಿಗಾಗಿ ಮತ್ತೊಮ್ಮೆ ಶರೀರ ಶೋಷಣೆಯೇ ಮೊದಲಾದ ತಪಸ್ಸಿನಿಂದಲೂ, ಸ್ತ್ರೀ-ಸ್ಮರಣ, ಕೀರ್ತನ, ಕೇಲಿ, ಪ್ರೇಕ್ಷಣ, ರಹಸ್ಯಭಾಷಣ, ಸಂಕಲ್ಪ, ಪ್ರಯತ್ನ ಹಾಗೂ ಕ್ರಿಯಾ-ನಿರ್ವೃತ್ತಿಗಳೆಂಬ ಎಂಟು ವಿಧದ ಮೈಥುನಗಳ ತ್ಯಾಗವೆಂಬ ಬ್ರಹ್ಮಚರ್ಯದಿಂದಲೂ, ಆಸ್ತಿಕ್ಯಬುದ್ಧಿರೂಪದ ಶ್ರದ್ಧೆಯಿಂದಲೂ ಕೂಡಿ ಒಂದು ವರ್ಷ ಪೂರ್ತಿ ವಾಸ ಮಾಡಿರಿ· ಅನಂತರ ತಮ್ಮ ಅಭಿಲಾಷೆಯಂತೆ ಪ್ರಶ್ನೆಗಳನ್ನು ಕೇಳಿರಿ· ಆ ವಿಷಯಗಳು ನಮಗೆ ತಿಳಿದಿದ್ದರೆ ವಂಚನೆಯಿಲ್ಲದೇ ಹೇಳುವೆವು· ಒಂದು ವೇಳೆ ನಮ್ಮಲ್ಲಿ 'ತಿಳಿದವರು' ಎಂಬ ಭರವಸೆಯಿಲ್ಲದೇ ಇರುವ ಕಾರಣ ವರ್ಷಪೂರ್ತಿ ಬ್ರಹ್ಮಚರ್ಯ, ತಪಸ್ಸು ಮುಂತಾದ ಕಠಿಣವಾದ ಕರ್ತವ್ಯಗಳಲ್ಲಿ ತೊಡಗುವುದು ನಿಮಗೆ ಹಿಡಿಸದಿದ್ದರೆ ಸುಖವಾಗಿ ನೀವು ಹಿಂದಿರುಗಬಹುದು ಎಂದು ಅಭಿಪ್ರಾಯ· ಅದರಿಂದ ಆಚಾರ್ಯನ ತಿಳುವಳಿಕೆಯನ್ನು ವಿಮರ್ಶಿಸಿ ನೋಡದೆ ಅವನ ಸೇವೆಯನ್ನು ಮಾಡಬೇಕು ಎಂಬ ವಿಷಯವನ್ನು ವಿಶೇಷವಾಗಿ ಕಲಿಸಿದಂತಾಯಿತು· ಹಾಗೆ ಗುರುವೂ ಶಿಷ್ಯಸಂಗ್ರಹಕ್ಕಾಗಿ ಹಾತೊರೆಯಬಾರದು ಎಂಬ ಅರ್ಥವನ್ನೂ ಸೂಚಿಸಲಾಯಿತು·

## ಭಾಷ್ಯಸಾರ

ಸುಕೇಶ, ಸತ್ಯಕಾಮ ಮೊದಲಾದ ಆರು ಜನ ಶಿಷ್ಯರು ಆಚಾರ್ಯ ಪಿಪ್ಪಲಾದರಲ್ಲಿ ತಮ್ಮ ಜಿಜ್ಞಾಸೆಗಳನ್ನು ತೋಡಿಕೊಂಡಿರಬೇಕು, ಅಥವಾ ತೋಡಿಕೊಳ್ಳುತ್ತಾರೆ· ಆದರೆ ಅವರು ಆಗಲೇ ಉತ್ತರಿಸಲು ಆರಂಭಿಸಲಿಲ್ಲ· ಶಿಷ್ಯರ ಜಿಜ್ಞಾಸೆಯ ಆಳ-ಅಗಲಗಳನ್ನು ತಿಳಿಯದೇ ಬ್ರಹ್ಮವಿದ್ಯೆಯನ್ನು ಉಪದೇಶಿಸುವುದು ಸರಿಯಲ್ಲ· ಅವರು ಪ್ರಶ್ನೆಗಳನ್ನು ಆಸಕ್ತಿಯಿಂದ ಕೇಳಿದ್ದಾರೆಯೇ? ಅಥವಾ ಚೇಷ್ಟೆಗಾಗಿ ಕೇಳಿದ್ದಾರೆಯೇ? ಪ್ರಶ್ನೆಗಳ ಉತ್ತರಗಳನ್ನು ಅರ್ಥ ಮಾಡಿಕೊಳ್ಳಬಲ್ಲರೇ? ಅವರಿಗೆ ಉತ್ತರಗಳನ್ನು ವಿಚಾರಪೂರ್ವಕವಾಗಿ ಸ್ವೀಕರಿಸುವ ತಾಳ್ಮೆಯಿದೆಯೇ? ತಿಳಿಯಬೇಕೆಂದಿರುವ ವಿದ್ಯೆಯಲ್ಲಿ ಆಳವಾದ ಆದರವಿದೆಯೇ? ಈ ರೀತಿಯಾಗಿ ಶಿಷ್ಯರ ಮಾನಸಿಕವಾದ ಹದವನ್ನು ಗುರುವಾದವನು ಗುರುತಿಸಿಕೊಳ್ಳಬೇಕು· ಆ ಬಗ್ಗೆ ಅವರನ್ನು ವಿಧವಿಧವಾದ ಪರೀಕ್ಷೆಗೆ ಅಳವಡಿಸಬೇಕು· [೧]ಶಿಷ್ಯನಾದವನು ಗುರುವು ಜ್ಞಾನಿಯೇ ಎಂಬುದನ್ನು ವಿಮರ್ಶೆಮಾಡಿ ನೋಡದೆಯೇ ಗುರುವಿನ

೧· ಗುರೋಃ ಜ್ಞಾತೃತ್ವಪರೀಕ್ಷಾಮಕೃತ್ವೈವ ಶಿಷ್ಯೇಣ ಗುರ್ವಾಜ್ಞಾ ಕಾರ್ಯೇತಿ, ಗುರುಣಾಪ್ಯತ್ಯಾದರೇಣ ಶಿಷ್ಯಸಂಗ್ರಹೋ ನ ಕಾರ್ಯ ಇತ್ಯಾಹ - ತಾನ್ ಸ ಹ ಋಷಿರಿತಿ - ಪ್ರತಿಪದಾರ್ಥದೀಪಿಕಾ·

ಆಜ್ಞೆಯನ್ನು ಪಾಲಿಸಬೇಕು· ಆದರೆ ಗುರುವು ಶಿಷ್ಯನಲ್ಲಿ ಅತಿ ಪ್ರೀತಿಯಿಂದ ಅವನನ್ನು ಪರೀಕ್ಷಿಸದೇ ಉಪದೇಶಿಸಬಾರದು ಎಂಬುದು ಉಪದೇಶದ ನಿಯಮ· ಇದನ್ನು ಪಿಪ್ಪಲಾದರು ಚೆನ್ನಾಗಿ ಅರಿತವರು ಹಾಗಾಗಿ ಆ ನಿಯಮವನ್ನು ಪಾಲಿಸುವ ಉದ್ದೇಶದಿಂದ ಶಿಷ್ಯರಾಗಿ ಬಂದ ಆ ಆರು ಋಷಿಗಳಿಗೆ ಒಂದು ವರ್ಷಕಾಲ ಗುರುಕುಲವಾಸಮಾಡಲು ಆಜ್ಞಾಪಿಸಿದರು·

ರಹಸ್ಯವಾದ ಆತ್ಮವಿದ್ಯೆಯನ್ನು ಅರ್ಥಮಾಡಿಕೊಳ್ಳಲು ಶಿಷ್ಯನು ಸೂಕ್ಷ್ಮವೂ, ಶಾಂತವೂ ಆದ ಮಾನಸಿಕ ಸ್ಥಿತಿಯನ್ನು ಪಡೆಯಬೇಕು · ತಪಸ್ಸು, ಬ್ರಹ್ಮಚರ್ಯೆ ಮತ್ತು ಶ್ರದ್ಧೆಗಳು ಇಂತಹ ವಿಶೇಷವಾದ ಮಾನಸಿಕ ಹದವನ್ನು ಸಿದ್ಧಪಡಿಸುವ ಸಾಮಗ್ರಿಗಳು · ಈ ಆರೂ ಋಷಿಗಳು ಮೊದಲೇ ತಪಸ್ವಿಗಳು, ಶ್ರದ್ಧಾವಂತರು ಮತ್ತು ಬ್ರಹ್ಮಚರ್ಯೆಯುಳ್ಳವರು · ಆದರೂ ಬ್ರಹ್ಮವಿದ್ಯೆಯ ಅರಿವಿಗೆ ಇಷ್ಟೇ ಅರ್ಹತೆ ಸಾಲದು· ಅವರು ಇನ್ನೂ ಒಂದು ವರ್ಷಕಾಲ ಗುರುಕುಲದಲ್ಲಿ ವಾಸ ಮಾಡಬೇಕು [೧]ಕಾರಣ ಗುರುಕುಲವಾಸ ಅಧ್ಯಯನ ನಿಯಮದ ಒಂದು ಅವಿಭಾಜ್ಯ ಅಂಗ· ವಾಸದ ಅವಧಿಯಲ್ಲಿ ಮೊದಲಿಗಿಂತಲೂ ಹೆಚ್ಚು ತಪಸ್ಸನ್ನು ಆಚರಿಸಬೇಕು · ಬ್ರಹ್ಮಚರ್ಯೆಯನ್ನು ಬೆಳೆಸಿಕೊಳ್ಳಬೇಕು ಹಾಗೂ ಶ್ರದ್ಧೆಯನ್ನು ಹೆಚ್ಚಿಸಿಕೊಳ್ಳಬೇಕು· [೨]ಶರೀರ ಪೋಷಣೆಗೆ ಎಷ್ಟುಬೇಕೋ ಅಷ್ಟೇ ಆಹಾರವನ್ನು ಸೇವಿಸುವುದು, ಶರೀರಪೋಷಣೆ ಮುಂತಾದವು ತಪಸ್ಸಿನ ಬೇರೆ ಬೇರೆ ಮುಖಗಳು· ಎಂಟು ವಿಧವಾದ ಮೈಥುನಗಳನ್ನು ತ್ಯಜಿಸುವುದು ಬ್ರಹ್ಮಚರ್ಯೆಯ ಪ್ರಧಾನ ಅಂಗ · ಗುರುಹಿರಿಯರ ಮಾತುಗಳಲ್ಲಿ ಭರವಸೆಯನ್ನಿಡುವುದೇ ಶ್ರದ್ಧೆ · ಈ ಗುಣಗಳು ತಮ್ಮಲ್ಲಿ ಪ್ರಬಲಿಸುವುದಕ್ಕಾಗಿ ಶಿಷ್ಯರು [೩]ಗುರುಸೇವೆಯನ್ನು ಮಾಡಬೇಕು · ಹೀಗೆ ವಿದ್ಯೋಪದೇಶಕ್ಕೆ ಅರ್ಹತೆಯನ್ನು ಶಿಷ್ಯರು ಪಡೆದು ತಮ್ಮ ಪ್ರಶ್ನೆಗಳನ್ನು ಕೇಳಬಹುದು· ಸರಿಯಾದ ಸ್ಫೂರ್ತಿಯಿಂದ ಉತ್ತರವನ್ನೂ ಪಡೆಯಬಹುದು·

ಒಂದು ವರ್ಷಕಾಲ ಗುರುಕುಲವಾಸವು ಮುಗಿದ ನಂತರ ಶಿಷ್ಯರು ತಮ್ಮ ಇಚ್ಛೆಯಂತೆ ಪಿಪ್ಪಲಾದರನ್ನು ಪ್ರಶ್ನಿಸಬಹುದು· ನಮಗೆ ತಿಳಿದಿದ್ದರೆ, ಉತ್ತರವನ್ನು ಹೇಳೋಣ ಎಂಬುದು ಪಿಪ್ಪಲಾದರ ನಿಲುವು· ಈ ಮಾತು ಅವರ [೪]ವಿನಯಕ್ಕೆ, ಜ್ಞಾನದ ಅನಂತತೆಗೆ ಸಂಕೇತವೇ ಹೊರತು ಸಂಶಯಕ್ಕಲ್ಲ ಅವರು ನಿರಹಂಕಾರಭಾವವನ್ನು ವ್ಯಕ್ತಪಡಿಸಿದ್ದಾರೆ · ಇದು ಮಹಾನುಭಾವರು ಮೆಚ್ಚಿ ಅನುಸರಿಸುವ ಶೈಲಿ·

* * * *

---

೧· ಬ್ರಹ್ಮವಿದ್ಯಾಗ್ರಹಣಾನಿಯಮಾನುರೋಧೇನೈಕಂ ಸಂವತ್ಸರಮತ್ರ ಸಂವತ್ಸ್ಯಥ । ಗುರುಕುಲೇ ವಾಸಸ್ಯ ನಿಯಮಾಂತರ್ಗತತ್ವಾತ್ - ಆನಂದಭಾಷ್ಯ·

೨· ಶರೀರಧಾರಣಮಾತ್ರೋಪಯಿಕಾಹಾರನಿಷೇವಣ ಸಹಿತ ಶರೀರಪರಿಶೋಷಣರೂಪಂ ಇಹ ತಪಃ - ಆನಂದಭಾಷ್ಯ·

೩· 'ಗುರುಶುಶ್ರೂಷಯಾ ವಿದ್ಯಾ' ಇತ್ಯುಕ್ತೇಃ ಶುಶ್ರೂಷಾಕರಣಂ - ಆವಶ್ಯಕಮ್ - ಆನಂದಭಾಷ್ಯ·

೪· ಇಯಂಚಾನುದ್ಧತೇಃ ನ ತು ಸಂಶಯಾತ್ । ಮಹತಾಮಿಯಮೇವ ಶೈಲೀ - ಸುಬೋಧಿನೀ·

## ಮಂತ್ರ - ೩

अथ कबन्धी कात्यायन उपेत्य पप्रच्छ ।
'भगवन् ! कुतो ह वा इमाः प्रजाः प्रजायन्ते' इति ।। ३ ।।

ಅಥ ಕಬಂಧೀ ಕಾತ್ಯಾಯನ ಉಪೇತ್ಯ ಪಪ್ರಚ್ಛ ।
'ಭಗವನ್! ಕುತೋ ಹ ವಾ ಇಮಾಃ ಪ್ರಜಾಃ ಪ್ರಜಾಯಂತೇ' ಇತಿ ॥

### ಪ್ರತಿಪದಾರ್ಥ

**ಅಥ** - ಒಂದುವರ್ಷಕಾಲ ಬ್ರಹ್ಮಚರ್ಯವ್ರತವಾದ ನಂತರ, **ಕಾತ್ಯಾಯನಃ ಕಬಂಧೀ** - ಕಾತ್ಯಾಯನ ಗೋತ್ರದ ಕಬಂಧಿಯು (ಆಚಾರ್ಯರ ಸಮೀಪಕ್ಕೆ) **ಉಪೇತ್ಯ** - ಹೋಗಿ, **ಭಗವನ್!** - ಪೂಜ್ಯರೇ! [೧]**ಕುತೋ ಹ ವಾ** - ಪ್ರಸಿದ್ಧವಾದ ಯಾವ ದೇವತೆಯಿಂದ, **ಇಮಾಃ** - ಕಾಣುವ ಈ **ಪ್ರಜಾಃ** - ದೇವ, ಮನುಷ್ಯ, ಪಶು-ಪಕ್ಷಿ ಮುಂತಾದ ಸಂತತಿಗಳು **ಪ್ರಜಾಯಂತೇ** - ಹುಟ್ಟುತ್ತವೆ· **ಇತಿ** - ಎಂದು, **ಪಪ್ರಚ್ಛ** - ಕೇಳಿದನು·

### ತಾತ್ಪರ್ಯ

ಕಬಂಧಿಯು ಒಂದು ವರ್ಷ ಪೂರ್ತಿಯಾಗಿ ಬ್ರಹ್ಮಚರ್ಯವ್ರತವನ್ನು ಪಾಲಿಸುತ್ತ ಗುರುಕುಲವಾಸ ಮಾಡಿದ್ದಾನೆ· ಅವಧಿ ಮುಗಿದ ನಂತರ ಸತೀರ್ಥ್ಯರಾದ ಸುಕೇಶ ಮೊದಲಾದವರ ಅನುಮತಿಯನ್ನು ಪಡೆದು, ಆಚಾರ್ಯ ಪಿಪ್ಪಲಾದರ ಬಳಿಗೆ ಬರುತ್ತಾನೆ· ತನ್ನ ಪ್ರಶ್ನೆಯನ್ನು ಅವರಲ್ಲಿ ಕೇಳಿಕೊಳ್ಳುತ್ತಾನೆ· ಲೋಕದಲ್ಲಿ ನಮ್ಮ ಕಣ್ಣಿಗೆ ದೇವ, ಮನುಷ್ಯ, ಪಶು, ಪಕ್ಷಿ ಹೀಗೆ ಅನೇಕ ಬಗೆಯ ಸಂತತಿಗಳು ಗೋಚರವಾಗುತ್ತವೆ· ಅವುಗಳನ್ನು ಹುಟ್ಟಿಸುವ ದೇವತೆ ಯಾರು? ಎಂಬುದೇ ಅವನ ಪ್ರಶ್ನೆ·

### ರಂಗರಾಮಾನುಜಭಾಷ್ಯ

**ಅಥ ಕಬಂಧೀತಿ** । ಸಂವತ್ಸರವಾಸಾನಂತರಮನ್ಯೈರನುಜ್ಞಾತಃ ಕಬಂಧೀ ಪಿಪ್ಪಲಾದಸ್ಯ ಸಮೀಪಂ ಯಥಾವಿಧ್ಯುಪಗಮ್ಯ ಪಪ್ರಚ್ಛ । ಕಿಮಿತಿ ಭಗವನ್ ಕುತೋ ಹ ವಾ ಇತಿ? ಸ್ಪಷ್ಟೋಽರ್ಥಃ -

---

೧· 'ಕುತಃ' ಎಂಬುದು ಕಾರಣವನ್ನು ಕುರಿತ ಪ್ರಶ್ನೆ· ಇದೆ 'ಕುತಃ' ಎಂಬ ಶಬ್ದವು ಸೃಷ್ಟಿಯ ಪ್ರಯೋಜನವನ್ನು ಕುರಿತ ಪ್ರಶ್ನೆಯನ್ನೂ ಸೂಚಿಸುತ್ತದೆ ಎಂದು ಭಾವಿಸಬೇಕು· ಏಕೆಂದರೆ ಮುಂದೆ ಉತ್ತರವನ್ನು ಹೇಳುವಾಗ ಭೋಗ್ಯ ಅಪವರ್ಗಗಳು ಸೃಷ್ಟಿಯ ಪ್ರಯೋಜನಗಳು ಎಂಬ ವಿವರಣೆಯಿದೆ·

## ಅನುವಾದ

ಅಥ ಕಬಂಧೀ ಕಾತ್ಯಾಯನ ಉಪೇತ್ಯ ಪಪ್ರಚ್ಛ । ಒಂದು ವರ್ಷಕಾಲ(ಗುರುಕುಲ) ವಾಸದ ನಂತರ [೧]ಉಳಿದ (ಸುಕೇಶ ಮೊದಲಾದ)ವರಿಂದ ಒಪ್ಪಿಗೆಯನ್ನು ಪಡೆದು ಕಬಂಧಿಯು ಪಿಪ್ಪಲಾದರ ಸಮೀಪಕ್ಕೆ ಶಾಸ್ತ್ರವನ್ನು ಮೀರದಂತೆ ಹೋಗಿ ಪ್ರಶ್ನಿಸಿದನು · ಏನೆಂದು (ಪ್ರಶ್ನಿಸಿದನು)? **'ಭಗವನ್ ಕುತೋ ಹ ವಾ' ಇತಿ** ॥ ಅರ್ಥವು ಸ್ಫುಟವಾಗಿದೆ·

## ಭಾಷ್ಯಸಾರ

ಆಚಾರ್ಯನ ಆಜ್ಞೆ ಶಿಷ್ಯನಿಗೆ ಶಿರೋಧಾರ್ಯವಾದುದು · ಆದಕ್ಕಾಗಿಯೇ ಪಿಪ್ಪಲಾದರ ಆಣತಿಯನ್ನು ಸುಕೇಶ ಮೊದಲಾದ ಶಿಷ್ಯರು ತಪ್ಪದೇ ಪಾಲಿಸಿದ್ದಾರೆ · ಒಂದು ವರ್ಷ ಪೂರ್ಣವಾಗಿ ಶ್ರದ್ಧೆ, ತಪಸ್ಸು ಹಾಗೂ ಬ್ರಹ್ಮಚರ್ಯಗಳಿಂದ ಗುರುಕುಲವಾಸವನ್ನು ಕೈಗೊಂಡಿದ್ದಾರೆ · ಆಮೇಲೆ, ಅವರಲ್ಲಿ ಒಂದು ರೀತಿಯ ಬುದ್ಧಿಯ ಹದ ಏರ್ಪಟ್ಟಿದೆ · ಆಗ ಕಬಂಧಿಯು ಉಳಿದ ಸತೀರ್ಥ್ಯರ [೨]ಅನುಮತಿಯನ್ನು ಪಡೆದು ಆಚಾರ್ಯರಲ್ಲಿ ತನ್ನ ಪ್ರಶ್ನೆಯನ್ನು ಇಡುತ್ತಾನೆ · ಪ್ರಾಯಶಃ ಅವನು ತನ್ನ ಜಿಜ್ಞಾಸೆಯ ವಿಷಯದಲ್ಲಿ ಇತರರೊಂದಿಗೆ ಸಮಾಲೋಚನೆಯನ್ನೂ ಮಾಡಿದ್ದಿರಬಹುದು·

ಈ ಪ್ರಪಂಚದಲ್ಲಿ ನಾನಾ ರೀತಿಯ ಪ್ರಾಣಿಗಳು ಜೀವಿಸುತ್ತವೆ· ಜೀವಿಗಳ ವೈವಿಧ್ಯವನ್ನು ಇಷ್ಟೆಂದು ನಿಗದಿಪಡಿಸುವುದು ಆ ಸರ್ವಜ್ಞನಿಗೆ ಅಸಾಧ್ಯವೇ ಆಗಿದೆ · ದೇವ, ದಾನವ, ಮಾನವ, ಪಶು, ಪಕ್ಷಿ, ಕ್ರಿಮಿ ಮುಂತಾಗಿ ಎಲ್ಲವೂ ತಮ್ಮ ತಮ್ಮ ಸಂತತಿಯನ್ನು ಮುಂದುವರಿಸಿಕೊಂಡು ಬರುತ್ತಿವೆ ನಮಗೆ ನಮ್ಮ ತಂದೆತಾಯಿಗಳಿಂದ ಹುಟ್ಟು ಸಂಭವಿಸಿದರೆ ನಮ್ಮ ತಂದೆತಾಯಿಯವರಿಗೆ ಅವರ ತಂದೆ ತಾಯಿಗಳಿಂದ ಎಂದು ಹೇಳಬಹುದು · ಆದರೆ ಈ ಜಗತ್ತಿನ [೩]ಮೊದಲ ಹುಟ್ಟಿಗೆ ಯಾರು ಕಾರಣವಿರಬಹುದು? ಈ ಹುಟ್ಟಿನಿಂದ ಅವರಿಗೆ ಏನು ಲಾಭವಾಗಿರಬಹುದು? ಎಂಬ ಪ್ರಶ್ನೆ ಜಿಜ್ಞಾಸುವಿನಲ್ಲಿ ಹುಟ್ಟಲೇಬೇಕು· ಆ ಪ್ರಶ್ನೆಯನ್ನೇ ಕಬಂಧಿಯು ಗುರುಗಳಲ್ಲಿ ಕೇಳುತ್ತಿದ್ದಾನೆ·

※ ☆ ※

---

೧· ಸುಕೇಶ ಸತ್ಯಕಾಮ ಮುಂತಾಗಿ ಮೊದಲನೇ ಮಂತ್ರದಲ್ಲಿ ಅಧಿಕಾರಿಗಳನ್ನು ಹೆಸರಿಸಲಾಗಿದ್ದರೂ ಪ್ರಶ್ನೆಯನ್ನು ಕೇಳುವಾಗ ಮೊದಲಿನ ಕ್ರಮಕ್ಕೆ ವಿರುದ್ಧ ಕ್ರಮವನ್ನು ಅನುಸರಿಸಲಾಗಿದೆ· ಪ್ರಾಯಶಃ ಈ ವಿರೋಧವನ್ನು ಸೂಚಿಸುವ ಸಲುವಾಗಿ ಭಾಷ್ಯಕಾರರು ಈ ರೀತಿ ಹೇಳಿರಬಹುದು·

೨· ಸಂವತ್ಸರವಾಸಾನಂತರಮನ್ಯೈರನುಜ್ಞಾತಃ ಕಬಂಧೀ - - - ಪಪ್ರಚ್ಛ - ರಂಗರಾಮಾನುಜಭಾಷ್ಯ·

೩· ಆದೌ ಪ್ರಜಾಸೃಷ್ಟಿಃ ತಸ್ಮಾದ್ದೇವಾದಭೂದಿತಿ ಪ್ರಶ್ನಃ - ಆನಂದಭಾಷ್ಯ·

## ಮಂತ್ರ - ೪

तस्मै स होवाच – प्रजाकामो ह वै प्रजापतिः स
तपोऽतप्यत । स तपस्तप्त्वा (स) मिथुनमुत्पादयते
रयिंच प्राणं चेति, एतौ मे बहुधा प्रजाः
करिष्यत इति ।। 4 ।।

ತಸ್ಮೈ ಸ ಹೋವಾಚ । ಪ್ರಜಾಕಾಮೋ ಹ ವೈ ಪ್ರಜಾಪತಿಃ ಸ
ತಪೋಽತಪ್ಯತ । ಸ ತಪಸ್ತಪ್ತ್ವಾ(ಸ) ಮಿಥುನಮುತ್ಪಾದಯತೇ
ರಯಿಂಚ ಪ್ರಾಣಂ ಚೇತಿ । ಏತೌ ಮೇ ಬಹುಧಾ ಪ್ರಜಾಃ
ಕರಿಷ್ಯತ ಇತಿ ॥

### ಪ್ರತಿಪದಾರ್ಥ

**ಸ ಹ** - ಬ್ರಹ್ಮಜ್ಞಾನಿಯೆಂದು ಪ್ರಸಿದ್ಧರಾದ ಪಿಪ್ಪಲಾದರು, **ತಸ್ಮೈ** - ಶಿಷ್ಯನಾದ ಕಬಂಧಿಗೆ, **ಉವಾಚ** - ಹೇಳಿದರು· **ಸಃ** - ಜಗತ್ಕಾರಣನೆಂದು ಪ್ರಸಿದ್ಧನಾದ, [೧]**ಪ್ರಜಾಪತಿಃ** - ಉತ್ತಮಜನ್ಮವುಳ್ಳ ಬ್ರಹ್ಮಾದಿಗಳಿಗೂ ಒಡೆಯನಾದ ಶ್ರೀಮನ್ನಾರಾಯಣನು, **ಪ್ರಜಾಕಾಮಃ ಸನ್** - ಸಂತತಿಗಳನ್ನು ಸೃಷ್ಟಿ ಮಾಡುವ ಅಭಿಲಾಷೆಯಿಂದ, **ತಪಃ** - ಸೃಷ್ಟಿಯ ಸಂಕಲ್ಪವನ್ನು, **ಅತಪ್ಯತ** - ಮಾಡಿದನು· **ಸಃ**- ಆ ಪರಮಾತ್ಮನು, **ತಪಃ ತಪ್ತ್ವಾ** - ಸಂಕಲ್ಪವನ್ನು ಮಾಡಿ, 'ರಯಿಂಚ ಪ್ರಾಣಂಚ ಇತಿ ಏತೌ' ರಯಿ ಹಾಗೂ ಪ್ರಾಣ ಎಂಬ ಶಬ್ದಗಳಿಂದ ಕರೆಯಲ್ಪಡುವ ಈ ಪ್ರಕೃತಿ ಪುರುಷರು, **ಮೇ** - ನನಗೆ, **ಬಹುಧಾ** - ಅನೇಕ ರೀತಿಯ (ದೇವ, ಮನುಷ್ಯ ಮುಂತಾದ) **ಪ್ರಜಾಃ** - ಸಂತತಿಗಳನ್ನು, **ಕರಿಷ್ಯತ ಇತಿ** - ಹುಟ್ಟಿಸಲು ಸಮರ್ಥರು ಎಂದು, **ಮಿಥುನಮ್** - ಪ್ರಕೃತಿ-ಪುರುಷರ ಜೋಡಿಯನ್ನು **ಉತ್ಪಾದಯತೇ** - ಸೃಷ್ಟಿಸಿದನು·

### ತಾತ್ಪರ್ಯ

ಅನಂತರ ಆಚಾರ್ಯ ಪಿಪ್ಪಲಾದರು ಶಿಷ್ಯನಾದ ಕಬಂಧಿಗೆ ಉತ್ತರವನ್ನು ಹೇಳುತ್ತಾರೆ· ಪ್ರಜಾಪತಿಯ ಸಂಕಲ್ಪದಿಂದ ಈ ಜಗತ್ತು ಉಂಟಾಗಿದೆ· ಪ್ರಜಾಪತಿಯು ಶ್ರಿಯಃಪತಿಯಾದ ನಾರಾಯಣನು· ಬ್ರಹ್ಮಾದಿ ದೇವತೆಗಳಿಗೂ ಒಡೆಯನು· ಅವನ ಸಂಕಲ್ಪದಿಂದಲೇ ವಿವಿಧ ಸಂತತಿ-

---

೧· ಪ್ರಕರ್ಷೇಣ ಜಾಯಂತ ಇತಿ ಪ್ರಜಾಃ ಬ್ರಹ್ಮಾದಯಃ, ತೇಷಾಂ ಬ್ರಹ್ಮಾದೀನಾಂ ಪತಿಃ - ರಕ್ಷಕಃ - ಪ್ರತಿಪದಾರ್ಥದೀಪಿಕಾ·

ಗಳನ್ನು ಸೃಷ್ಟಿಸುವ ಸಾಮರ್ಥ್ಯವುಳ್ಳ ಪ್ರಕೃತಿ ಮತ್ತು ಪುರುಷರೆಂಬ ಯುಗ್ಮವನ್ನು ಸೃಷ್ಟಿಸಿದನು· ರಯಿ ಹಾಗೂ ಪ್ರಾಣ ಎಂದು ಪ್ರಕೃತಿ ಪುರುಷರಿಗೇ ಮತ್ತೊಂದು ಹೆಸರು·

## ರಂಗರಾಮಾನುಜಭಾಷ್ಯ

**ತಸ್ಮೈ ಸ ಹೋವಾಚೇತಿ** । ಏವಂ ಪೃಷ್ಟವತೇ ಕಬಂಧಿನೇ ಪಿಪ್ಪಲಾದ ಉವಾಚ । **ಪ್ರಜಾಕಾಮೋ ಹ ವೈ ಇತಿ** । ಅತ್ರ ಪ್ರಜಾಪತಿಶಬ್ದಃ ಬ್ರಹ್ಮಪರಃ । ಅಸ್ಯ ಕಾರಣವಾಕ್ಯತ್ವಾತ್ । ವ್ಯಾಸಾರ್ಯೈಃ ಸರ್ವವ್ಯಾಖ್ಯಾನಾಧಿಕರಣೇsತ್ರತ್ಯ ಪ್ರಜಾಪತಿಶಬ್ದಸ್ಯ ಬ್ರಹ್ಮಪರತ್ವಸ್ಯ ಸಮರ್ಥಿತತ್ವಾತ್ । **ಸಃ** ಪ್ರಸಿದ್ಧಃ **ಪ್ರಜಾಪತಿಃ** - ಪರಮಾತ್ಮಾ ಪ್ರಜಾಸೃಷ್ಟಿ ಕಾಮನಯಾ ಸ್ರಷ್ಟವ್ಯಾಲೋಚನರೂಪಂ **ತಪಃ ಅತಷ್ಯತ** - ಕೃತವಾನ್ । (ಸ) **ತಪಸ್ತಪ್ತ್ವೈ** ಏವಂ ಸ್ರಷ್ಟವ್ಯಂ ಪರ್ಯಾಲೋಚ್ಯ ರಯಿಪ್ರಾಣಶಬ್ದಿತಪ್ರಕೃತಿಪುರುಷಾಖ್ಯಂ ಮಿಥುನಮುತ್ಪಾದಿತವಾನಿತ್ಯರ್ಥಃ । ಕೇನಾಭಿಪ್ರಾಯೇಣೇತ್ಯತ ಆಹ - **ಏತೌಮೇ ಇತಿ** ಪ್ರಜಾಕಾಮಸ್ಯ ಮಮ್ಯೆತೌ ರಯಿಪ್ರಾಣಾವನೇಕ-ಪ್ರಕಾರಾನ್ ಪ್ರಾಣಿನ ಉತ್ಪಾದಯಿಷ್ಯತಃ ಇತ್ಯಭಿಪ್ರಾಯೇಣೇತ್ಯರ್ಥಃ ।

## ಅನುವಾದ

**ತಸ್ಮೈ ಸ ಹೋವಾಚ** । ಹೀಗೆ ಪ್ರಶ್ನಿಸಿದ ಕಬಂಧಿಗೆ ಪಿಪ್ಪಲಾದರು ಹೇಳಿದರು· **ಪ್ರಜಾಕಾಮೋ ಹ ವೈ ಅತಷ್ಯತ** । ಈ ವಾಕ್ಯದಲ್ಲಿರುವ ಪ್ರಜಾಪತಿ ಪದವು ಬ್ರಹ್ಮಪರವು· ಏಕೆಂದರೆ ಇದು (ಜಗತ್) ಕಾರಣವನ್ನು ಬೋಧಿಸುವ ವಾಕ್ಯ· ವ್ಯಾಸರು [೧]ಸರ್ವವ್ಯಾಖ್ಯಾನಾಧಿಕರಣದಲ್ಲಿ ಈ ವಾಕ್ಯದಲ್ಲಿಯ ಪ್ರಜಾಪತಿ ಶಬ್ದಕ್ಕೆ ಬ್ರಹ್ಮದಲ್ಲಿಯೇ ತಾತ್ಪರ್ಯವೆಂದು (ಯುಕ್ತಿಗಳಿಂದ) ಸಾಧಿಸಿದ್ದಾರೆ · ಸಃ-ಪ್ರಸಿದ್ಧನಾದ **ಪ್ರಜಾಪತಿಃ** - ಪರಮಾತ್ಮನು ಜೀವಸೃಷ್ಟಿಯ ಅಭಿಲಾಷೆಯಿಂದ ಸೃಷ್ಟಿಸಬೇಕಾದುದರ ಬಗ್ಗೆ ಆಲೋಚನೆಯನ್ನೂ, **ತಪಃ** - ತಪಸ್ಸನ್ನೂ, **ಅತಷ್ಯತ** - ಮಾಡಿದನು·

**(ಸ) ತಪಸ್ತಪ್ತ್ವಾ ಇತಿ** । ಹೀಗೆ ಸೃಷ್ಟಿಸಬೇಕಾದ ವಿಷಯವನ್ನು ವಿವೇಚಿಸಿ ರಯಿ ಮತ್ತು ಪ್ರಾಣ ಎಂಬ ಶಬ್ದಗಳಿಂದ ಬೋಧಿಸಲ್ಪಡುವ ಪ್ರಕೃತಿ ಹಾಗೂ ಪುರುಷರ ಯುಗ್ಮವನ್ನು ಹುಟ್ಟಿಸಿದನು ಯಾವ ಅಭಿಪ್ರಾಯದಿಂದ (ಹುಟ್ಟಿಸಿದನು?) ಎನ್ನುವುದಕ್ಕಾಗಿ ಹೇಳುತ್ತದೆ · **ಏತೌ ಇತಿ** । ಸಂತತಿಯನ್ನು ಬಯಸಿದ ನನಗೆ ಈ ರಯಿ ಹಾಗೂ ಪ್ರಾಣಗಳು ನಾನಾ ಬಗೆಯ ಜೀವ ಜಂತುಗಳನ್ನು ಬೆಳೆಸಬಲ್ಲವು ಎಂಬ ಅಭಿಪ್ರಾಯದಿಂದ ಎಂದು ತಾತ್ಪರ್ಯ·

---

೧· 'ಏತೇನ ಸರ್ವೇ ವ್ಯಾಖ್ಯಾತಾ ವ್ಯಾಖ್ಯಾತಾಃ' (ವ್ಯಾ· ಸೂ· ೧-೪-೨೮) ಇದು ಈ ಅಧಿಕರಣದ ಮೂಲ ಶರೀರ· ಮೊದಲನೇ ಅಧ್ಯಾಯದಲ್ಲಿ ತಿಳಿಸಿದ ನಿಯಮಗಳಿಂದ ಜಗತ್ತಿನ ಕಾರಣವನ್ನು ವರ್ಣಿಸುವ ಎಲ್ಲ ವೇದವಾಕ್ಯಗಳು ಜಡಚೇತನಗಳಿಗಿಂತ ಬೇರೆಯೂ, ಸರ್ವಜ್ಞನೂ, ಸರ್ವಶಕ್ತನೂ ಆದ ನಾರಾಯಣನನ್ನು ಬೋಧಿಸುತ್ತವೆ ಎಂದು ಸಿದ್ಧವಾಗುತ್ತದೆ ಎಂಬುದು ಈ ಅಧಿಕರಣದ ಅಭಿಪ್ರಾಯ·

## ಭಾಷ್ಯಸಾರ

ತತ್ತ್ವಾರ್ಥವನ್ನು ಉಪದೇಶಿಸುವವನು ಗುರು· ಈ ತತ್ತ್ವಾರ್ಥವನ್ನು ತಿಳಿಯಬಯಸಿ ಅರ್ಹತೆ-ಯನ್ನು ಪಡೆದಿರುವವನು ಅಧಿಕಾರಿ· ಅಧಿಕಾರಿಯು ದೊರೆತಾಗ ಅವನಿಗೆ ವಿದ್ಯೆಯನ್ನು ಉಪದೇಶಿಸುವುದು ಗುರುವಿನ ಪವಿತ್ರ ವ್ರತ· ಇಲ್ಲಿ ಪೂಜ್ಯ ಪಿಪ್ಪಲಾದರು ಇಂತಹ ವ್ರತವನ್ನು ಕೈಗೆತ್ತಿಕೊಂಡ ಆಚಾರ್ಯರು· ಈ ಮಹಾತ್ಮರು ಜಿಜ್ಞಾಸುವೂ, ಅನಸೂಯಕನೂ ಆದ ಶಿಷ್ಯನು ತನ್ನ ಬಳಿಗೆ ಬಂದಾಗ ತತ್ತ್ವೋಪದೇಶವನ್ನು ಮಾಡದೇ ಉಳಿಯುತ್ತಾರೆಯೇ? ಅವನು ಕೇಳುವ ಪ್ರಶ್ನೆಗೆ ಉತ್ತರಿಸದೇ ಇರುತ್ತಾರೆಯೇ? ಶಿಷ್ಯ ಕಬಂಧಿಯು ಒಂದು ವರ್ಷದ ಗುರುಕುಲವಾಸ, ತಪಸ್ಸು ಮುಂತಾದ ನಿಯಮಗಳಿಂದ ಬ್ರಹ್ಮವಿದ್ಯೆಯ ಉಪದೇಶಕ್ಕೆ ಅರ್ಹತೆಯನ್ನು ಸಂಪಾದಿಸಿದ್ದಾನೆ· ಇವನು ತನ್ನ ಚಿಂತನೆಯ ಕಾಲದಲ್ಲಿ ರೂಪುಗೊಂಡ ಜಿಜ್ಞಾಸೆಯನ್ನು ಈ ಪ್ರಶ್ನೆಯ ರೂಪದಲ್ಲಿ ಮಂಡಿಸಿದ್ದಾನೆ· ವಸ್ತುತತ್ತ್ವದ ನೈಜ ಅರಿವಿನಿಂದ ವಿನೀತರಾದ ಪಿಪ್ಪಲಾದರು ಶಿಷ್ಯನ ಪ್ರಶ್ನೆಗೆ ಉತ್ತರಿಸಲು ಆರಂಭಿಸುತ್ತಾರೆ·

ಪ್ರಜಾಪತಿ ಈ ಜಗತ್ತಿನ ಸೃಷ್ಟಿಗೆ ಕಾರಣ· ಅವನ ಸಂಕಲ್ಪದಿಂದಲೇ ಪ್ರಪಂಚ ಹುಟ್ಟಿರುವುದು, ಬೆಳೆಯುತ್ತಿರುವುದು· ಪ್ರಜಾಪತಿ ಭಗವಂತನಾದ ಶ್ರೀಮನ್ನಾರಾಯಣನೇ ಹೊರತು ಬೇರೆ ಯಾರೂ ಅಲ್ಲ· ಉತ್ತಮ ಜನ್ಮವುಳ್ಳವರು ಬ್ರಹ್ಮಾದಿಗಳು - ಪ್ರಜೆಗಳು; ಅವರಿಗೆ ಪತಿ ಶ್ರೀಪತಿ· ಬಾಲಕರಿಂದ ಆರಂಭಿಸಿ ಬ್ರಹ್ಮಾದಿಗಳವರೆಗೆ ಎಲ್ಲರನ್ನೂ ರಕ್ಷಿಸುವ ಸಾಮರ್ಥ್ಯ ಸರ್ವೇಶ್ವರನಾದ ಹರಿಗೇ ಸೇರಿದೆ·

ಸೃಷ್ಟಿಯ ಸಮಯದಲ್ಲಿ ಭಗವಂತನಿಗೆ ಪ್ರಜಾಸೃಷ್ಟಿಯ ಅಭಿಲಾಷೆಯುಂಟಾಯಿತು· ಅದಕ್ಕಾಗಿ ಅವನು ತಪಸ್ಸನ್ನು ಆಚರಿಸಿದನು· ಇಲ್ಲಿ ಪರಮಾತ್ಮನ ೧ಜ್ಞಾನವೇ ತಪಸ್ಸು· ಅದು ಸೃಷ್ಟಿಸಬೇಕಾದ ವಸ್ತುವಿನ ಬಗ್ಗೆ ಉಂಟಾದ ಸಂಕಲ್ಪ· ಆದ್ದರಿಂದ ಶ್ರುತಿಯೇ 'ಯಸ್ಯ ಜ್ಞಾನಮಯಂ ತಪಃ' (ಯಾರ ತಪಸ್ಸು ಸಂಕಲ್ಪ ರೂಪವೋ) ಎಂಬುದಾಗಿ ತಿಳಿಸಿ ಮೊದಲು ಇದನ್ನು ಸೃಷ್ಟಿಸಬೇಕು, ಆಮೇಲೆ ಅದನ್ನು· ಎಂಬ ಆಲೋಚನೆಯೇ ಸಂಕಲ್ಪ· ಇದೇ ಎಲ್ಲ ಸೃಷ್ಟಿಯ ಮೂಲ ಸ್ರೋತ· ಇಂತಹ ಸಂಕಲ್ಪವನ್ನು ಮಾಡಿ ರಯಿ ಮತ್ತು ಪ್ರಾಣ ಎಂಬ ಯುಗ್ಮವನ್ನು ಹುಟ್ಟಿಸಿದನು·

ಪರಮಾತ್ಮನಿಗೆ ಅನೇಕ ಸಂತತಿಗಳನ್ನು ಹುಟ್ಟಿಸಲು ಇಚ್ಛೆಯುಂಟಾಗಿತ್ತು· ಆದರೂ ಅವನು ಪ್ರಕೃತಿ ಪುರುಷರನ್ನು ಮಾತ್ರ ಸೃಷ್ಟಿಸಿದ್ದಾನೆ· ಕಾರಣ ಪ್ರಕೃತಿ ಪುರುಷರು ಪರಮಾತ್ಮನ ಇಚ್ಛೆಯಂತೆ ಸೃಷ್ಟಿ ಕಾರ್ಯವನ್ನು ಮುಂದುವರಿಸಬಲ್ಲವು· ನಾನಾ ರೀತಿಯ ಜೀವ-ಜಂತುಗಳನ್ನು ಬೆಳೆಸಬಲ್ಲವು· ಆದ್ದರಿಂದ ಜಡ-ಚೇತನಾತ್ಮಕ ಸಂಸಾರವನ್ನೇ ಹುಟ್ಟಿಸಲು ಸಮರ್ಥರಾದ ೨ಪ್ರಕೃತಿ ಪುರುಷರನ್ನು ಬಿಟ್ಟು ಬೇರೆಯೇನು ಸೃಷ್ಟಿಸಬೇಕಾಗಿದೆ?

---

೧· ತಪೋಽತ್ರ ಜ್ಞಾನಮ್ । ತಚ್ಚ ಸಂಕಲ್ಪಾತ್ಮಕಂ ಸ್ರಷ್ಟವ್ಯವಸ್ತುವಿಷಯಕಮ್, ಪೂರ್ವಮಿದಂ ಸ್ರಕ್ಷ್ಯಾಮಿ ತತ ಇದಮಿತ್ಯೇವಾತ್ಮಕ ಮಾಲೋಚನಮ್ - ಆನಂದಭಾಷ್ಯ·

೨· ಏತೌ - - ಪ್ರಾಣಿನಃ ಕರಿಷ್ಯತಃ ಕಿಮನ್ಯತ್ ಸೃಷ್ಟ್ಯಾಮತ್ ಕೃತಯಾ - ಆನಂದಭಾಷ್ಯ·

## ಮಂತ್ರ - ೫

आदित्यो ह वै प्राणो रयिरेव चन्द्रमाः ।
रयिर्वा एतत् सर्वं यन्मूर्तं चामूर्तं च ।
तस्मान्मूर्तिरेव रयिः ॥ 5 ॥

ಆದಿತ್ಯೋ ಹ ವೈ ಪ್ರಾಣೋ ರಯಿರೇವ ಚಂದ್ರಮಾಃ ।
ರಯಿರ್ವಾ ಏತತ್ಸರ್ವಂ ಯನ್ಮೂರ್ತಂ ಚಾಮೂರ್ತಂ ಚ
ತಸ್ಮಾನ್ಮೂರ್ತಿರೇವ ರಯಿಃ ॥

### ಪ್ರತಿಪದಾರ್ಥ

[೧]**ಆದಿತ್ಯೋ ಹ ವೈ** - ಭೋಕ್ತೃವಾದ ಜೀವನೇ, **ಪ್ರಾಣಃ** - ಪ್ರಾಣಶಬ್ದದಿಂದ ಪರಿಚಯಿಸಲ್ಪಡುವವನು· **ಚಂದ್ರಮಾ ಏವ** - ಚಂದ್ರನೇ, [೨]ಭೋಗ್ಯವರ್ಗವೇ, **ರಯಿಃ** - ರಯಿಶಬ್ದವಾಚ್ಯವು· **ಯತ್** - ಯಾವ ಕಾರಣದಿಂದ, **ಮೂರ್ತಂ ಚ** - ಪೃಥಿವೀ, ಜಲ, ತೇಜಸ್ಸುಗಳೂ, **ಅಮೂರ್ತಂ ಚ** - ವಾಯು, ಆಕಾಶಗಳೂ, **ಏತತ್ ಸರ್ವಮ್** - ಇವೆಲ್ಲವೂ, **ರಯಿಃ** - ಭೋಗ್ಯವಸ್ತುಗಳು· **ತಸ್ಮಾತ್** - ಆ ಕಾರಣದಿಂದ, **ಮೂರ್ತಿರೇವ** - ಎಲ್ಲ ಭೌತಿಕ ಶರೀರಗಳೂ, **ರಯಿಃ**- ಭೋಗ್ಯವಸ್ತುಗಳು·

### ತಾತ್ಪರ್ಯ

ಆದಿತ್ಯನೇ ಪ್ರಾಣನು · ಇವನು ಭೋಕ್ತೃವೂ ಜೀವನೂ ಹೌದು · ರಯಿಯೆಂದರೆ ಭೋಗ್ಯವಾದದ್ದು, ಅನ್ನ ಪ್ರಕೃತಿಯೆಂದರ್ಥ · ಚಂದ್ರನೇ ರಯಿ · ಪಾಂಚಭೌತಿಕ ಶರೀರಗಳೆಲ್ಲವೂ ರಯಿಯೇ · ಮೂರ್ತ (ಆಕಾರವಿರುವ) ದ್ರವ್ಯಗಳಾದ ಪೃಥಿವೀ, ಜಲ, ತೇಜಸ್ಸುಗಳೂ, ಅಮೂರ್ತ (ಆಕಾರಶೂನ್ಯವಾದ) ದ್ರವ್ಯಗಳಾದ ಆಕಾಶ, ವಾಯುಗಳೂ ರಯಿಯಲ್ಲೇ ಸೇರಿವೆ·

### ರಂಗರಾಮಾನುಜಭಾಷ್ಯ

ರಯಿಪ್ರಾಣಶಬ್ದಾರ್ಥಮಾಹ - **ಆದಿತ್ಯೋ ಹ ವೈ ಇತಿ** । ಆದತ್ತ ಇತ್ಯಾದಿತ್ಯಃ - **ಭೋಕ್ತಾ**।

---

೧· ಅತ್ತಿ - ಭಕ್ಷಯತಿ ಇತಿ ಅದಿತಿಃ, ಅದಿತಿರೇವ ಆದಿತ್ಯಃ - ಜೀವಃ - ಪ್ರತಿಪದಾರ್ಥದೀಪಿಕಾ·

೨· ಆದಿತ್ಯಶಬ್ದಿತಭೋಕ್ತೃಪ್ರತಿದ್ವಂದ್ವಿತಯಾ ಭೋಗ್ಯವರ್ಗಸ್ಯ ಚಂದ್ರತ್ವೇನ ನಿರ್ದೇಶಃ - ರಂಗರಾಮಾನುಜಭಾಷ್ಯ·

ಸ ಏವ ಪ್ರಾಣ ಇತ್ಯರ್ಥಃ । ತಸ್ಯ ಪ್ರಾಣಶಬ್ದಿತತ್ವೇ ಹೇತುಃ ಸಮನಂತರಮೇವ ವಕ್ಷ್ಯತೇ । 'ರಯಿರೇವ ಚಂದ್ರಮಾಃ' ಇತ್ಯಸ್ಯಾಭಿಪ್ರೇತಮರ್ಥಮಾಹ - **ರಯಿರ್ವಾ ಇತಿ** । ಮೂರ್ತ ಶಬ್ದೇನ ಪೃಥಿವ್ಯಪ್ತೇಜಾಂಸಿ ಉಚ್ಯಂತೇ । **ಅಮೂರ್ತ**ಶಬ್ದೇನ ವಾಯ್ವಂತರಿಕ್ಷೆ ಉಚ್ಯೇತೇ । **ಸರ್ವ**ಮಪಿ ಭೂತಜಾತಂ **ರಯಿಃ** ಅನ್ನಂ ಭೋಗ್ಯಮಿತ್ಯರ್ಥಃ । ತಸ್ಮಾತ್ **ಮೂರ್ತಿ**ಶಬ್ದಿತಂ ಪಾಂಚಭೌತಿಕಂ ಶರೀರಂ ಸರ್ವಂ ಭೋಗ್ಯಮೇವೇತ್ಯರ್ಥಃ ॥

## ಅನುವಾದ

ರಯಿ ಪ್ರಾಣ ಶಬ್ದಗಳ ಅರ್ಥಗಳನ್ನು ಹೇಳುತ್ತಾರೆ - **ಆದಿತ್ಯೇತಿ** । **ಆದತ್ತೇ** - ತೆಗೆದುಕೊಳ್ಳುತ್ತಾನೆ (ತನ್ನದಾಗಿಸಿಕೊಳ್ಳುತ್ತಾನೆ) ಎಂದು **ಆದಿತ್ಯಃ** - ಭೋಕ್ತೃವು (ಅನುಭವಿಸುವವನು)· ಅವನೇ ಪ್ರಾಣ· (ಆದಿತ್ಯಶಬ್ದದಿಂದ ಸೂಚಿಸಲಾದ ಭೋಕ್ತೃವಿಗೆ ಅನುಗುಣವಾದ ಭೋಗ್ಯವರ್ಗವನ್ನು 'ಚಂದ್ರ' ಎಂದು ಕರೆಯಲಾಗಿದೆ· ಅವನನ್ನು 'ಪ್ರಾಣ' ಎಂದು ಕರೆಯಲು ಕಾರಣವನ್ನು ಕೂಡಲೇ ತಿಳಿಸಲಾಗುವುದು· **ರಯಿರೇವ ಚಂದ್ರಮಾಃ** ಎಂಬುದರ ಅಭಿಪ್ರಾಯವನ್ನು ತಿಳಿಸುತ್ತಾರೆ· **ರಯಿರ್ವಾ ಇತಿ** । **ರಯಿಃ** - ಮೂರ್ತ ಶಬ್ದದಿಂದ ಪೃಥಿವೀ, ಜಲ ಹಾಗೂ ತೇಜಸ್ಸುಗಳನ್ನು ಹೇಳಲಾಗಿದೆ· ಅಮೂರ್ತ ಪದದಿಂದ ವಾಯು ಮತ್ತು ಅಂತರಿಕ್ಷಗಳನ್ನು ತಿಳಿಸಲಾಗಿದೆ· ಎಲ್ಲ ಭೂತಗಳು **ರಯಿಃ** - ಅನ್ನವು ಭೋಗ್ಯವು· ಆದ್ದರಿಂದ ಮೂರ್ತಿಶಬ್ದದಿಂದ ಸಂಗ್ರಹಿಸಲ್ಪಟ್ಟ ಪಾಂಚಭೌತಿಕ ಶರೀರಗಳೆಲ್ಲವೂ ಭೋಗ್ಯ ಎಂದು ಅಭಿಪ್ರಾಯ·

## ಭಾಷ್ಯಸಾರ

ಪ್ರಜಾಪತಿಯ ಅಭಿಲಾಷೆಯಂತೆ ನಾನಾ ಸಂತತಿಗಳನ್ನು ಸೃಷ್ಟಿಮಾಡುವುವು ಪ್ರಾಣ ಹಾಗೂ ರಯಿ· ಇವುಗಳ ಯುಗ್ಮವನ್ನು ಅವನೇ ಸೃಷ್ಟಿಸಿದ್ದಾನೆ· ಈ ರಯಿ ಹಾಗೂ ಪ್ರಾಣಗಳು ಯಾವುವು? ಅವುಗಳ ಸ್ವರೂಪವೇನಿರಬಹುದು? ಇದನ್ನೇ ಪಿಪ್ಪಲಾದರು ವಿವರಿಸುತ್ತಾರೆ·

ಪ್ರಾಣವೆಂದರೆ ಅನುಭವಿಸುವವನು ಎಂದರ್ಥ· ಅನುಭವಿಸುವವನು ಭೋಕ್ತೃವು(ಜೀವನು) ಇವನು ಭೋಗ್ಯವಸ್ತುಗಳೆಲ್ಲವನ್ನು ತನಗಾಗಿ ಪರಿಗ್ರಹಿಸುತ್ತಾನೆ, ಸಂಗ್ರಹಿಸುತ್ತಾನೆ· ಇವನಿಗೆ ಎಲ್ಲ ಇಂದ್ರಿಯಗಳ ಮೇಲೂ ತಪ್ಪದ ಅಂಕೆಯಿದೆ· ಆದ್ದರಿಂದ [೨]ಪ್ರಾಣನು, ಪ್ರಾಣವನ್ನು ಪೋಷಿಸುವುದರಿಂದ ಇವನನ್ನು ಆದಿತ್ಯ(ಸೂರ್ಯ) ಎಂದು ಹೆಸರಿಸಲಾಗಿದೆ· ಪ್ರಾಣವನ್ನು ಕಾಪಾಡುವುದೇ ಜೀವ ಸೂರ್ಯರಿಬ್ಬರಿಗೂ ಸಮಾನವಾದ ಕಾರ್ಯ·

ಜೀವನಿಗೆ (ಭೋಕ್ತೃವಿಗೆ) ಮೈಕೊಟ್ಟು ಭೋಗವನ್ನು ಉಂಟುಮಾಡುವುದೇ ಭೋಗ್ಯ ಪ್ರಪಂಚದ

---

೧· ಆರನೆಯ ಮಂತ್ರದಲ್ಲಿ·

೨· ಸರ್ವೇಂದ್ರಿಯಾನ್ ಪ್ರಾಣಯತಿ - ಚಾಲಯತಿ ಇತಿ ಪ್ರಾಣಃ ಜೀವಃ । ಜೀವಾಧಿಷ್ಠಾನಂ ವಿನಾ ಇಂದ್ರಿಯಾಣಾಂ ಚಲನಾಭಾವಾತ್ - ಪ್ರತಿಪದಾರ್ಥದೀಪಿಕಾ·

ಕಾರ್ಯ · ಸ್ಥೂಲವೂ, ಸೂಕ್ಷ್ಮವೂ ಆದ ಅವಸ್ಥೆಗಳಲ್ಲಿಯೂ ಇದು ಭೋಗಾರ್ಹವಾಗಿದೆ · ಪೃಥಿವೀ, ಜಲ, ತೇಜಸ್ಸುಗಳು ಆಕಾರವನ್ನು ಪಡೆಯಬಲ್ಲ ದ್ರವ್ಯಗಳು · ಆಕಾಶ ಹಾಗೂ ವಾಯುಗಳಿಗೆ ಆಕಾರವಿಲ್ಲ · ಆದ್ದರಿಂದ ಅವು ಅಮೂರ್ತ ದ್ರವ್ಯಗಳು · ಇವೆಲ್ಲವೂ ರಯಿಯೆಂದೇ ಕರೆಯಲ್ಪಡುತ್ತವೆ · ರಯಿಯೆಂದರೆ ಧನ, ಸಂಪತ್ತು ಎಂದರ್ಥ · ಅವೂ ಭೋಗಾರ್ಹವಾಗಿವೆ · ರಯಿ ಅಥವಾ ಭೋಗ್ಯ ವಸ್ತುಗಳನ್ನೆಲ್ಲ 'ಚಂದ್ರ' ಎಂದು ಕರೆಯಲಾಗಿದೆ · ಕಾರಣ, ಭೋಕ್ತೃವನ್ನು 'ಸೂರ್ಯ' ಎಂದು ರೂಪಣೆ ಮಾಡಿ ಅದಕ್ಕನುಗುಣವಾಗಿ ಭೋಗ್ಯವರ್ಗವನ್ನು ಚಂದ್ರ ಎಂದು ರೂಪಿಸುವಲ್ಲಿ ಅವುಗಳ [೧]ಪ್ರತಿದ್ವಂದ್ವ ಸ್ವಭಾವವೇ ಪ್ರಧಾನವಾಗಿ ಪರಿಗಣಿಸಲ್ಪಟ್ಟಿದೆ·

## ಮಂತ್ರ - ೬

अथाऽऽदित्यः । उदयन् यत् प्राचीं दिशं
प्रविशति तेन प्राच्यान् प्राणान् रश्मिषु
सन्निधत्ते । यत् दक्षिणां यत् प्रतीचीं
यदुदीचीं यदधो यदूर्ध्वं
यदन्तरा दिशः, यत् सर्वं प्रकाशयति,
तेन सर्वान् प्राणान् रश्मिषु सन्निधत्ते ॥ 6 ॥

[೨]ಅಥಾಽಽದಿತ್ಯಃ । ಉದಯನ್ ಯತ್ ಪ್ರಾಚೀಂ ದಿಶಂ
ಪ್ರವಿಶತಿ ತೇನ ಪ್ರಾಚ್ಯಾನ್ ಪ್ರಾಣಾನ್ ರಶ್ಮಿಷು
ಸನ್ನಿಧತ್ತೇ । ಯತ್ ದಕ್ಷಿಣಾಂ ಯತ್ ಪ್ರತೀಚೀಂ
ಯದುದೀಚೀಂ ಯದಧೋ ಯದೂರ್ಧ್ವಂ
ಯದಂತರಾ ದಿಶಃ, ಯತ್ ಸರ್ವಂ ಪ್ರಕಾಶಯತಿ
ತೇನ ಸರ್ವಾನ್ ಪ್ರಾಣಾನ್ ರಶ್ಮಿಷು ಸನ್ನಿಧತ್ತೇ ॥

### ಪ್ರತಿಪದಾರ್ಥ

**ಅಥ** - ರಯಿ ಎಂಬ ಹೆಸರಿನ ಪ್ರಕೃತಿಯನ್ನು ವರ್ಣಿಸಿದ ಮೇಲೆ, **ಆದಿತ್ಯಃ** - ಆದಿತ್ಯ

---

೧· - - - - ಭೋಕ್ತೃಪ್ರತಿದ್ವಂದ್ವಿತಯಾ ಭೋಗ್ಯವರ್ಗಸ್ಯ ಚಂದ್ರತ್ವೇನ ನಿರ್ದೇಶಃ - ರಂಗರಾಮಾನುಜಭಾಷ್ಯ·

೨· ರಂಗರಾಮಾನುಜಭಾಷ್ಯದಲ್ಲಿ ಮಾತ್ರ ಇದನ್ನು ಪ್ರತ್ಯೇಕವಾಕ್ಯವಾಗಿ ಪರಿಗಣಿಸಿ ವ್ಯಾಖ್ಯಾನ ಮಾಡಲಾಗಿದೆ·

ಶಬ್ದದಿಂದ ಕರೆಯಲ್ಪಡುವ ಜೀವನು, **ಉದಯನ್** - [೧]ಸುಷುಪ್ತಿಯ ಸ್ಥಾನದಿಂದ ಮೇಲೆದ್ದು, **ಯತ್** - ಯಾವ ಕಾರಣದಿಂದ, **ಪ್ರಾಚೀಂ ದಿಶಮ್** - ಪೂರ್ವ ಭಾಗವನ್ನು, **ಪ್ರವಿಶತಿ** - ಪ್ರವೇಶಿಸುವನೋ, **ತೇನ** - ಆ ಕಾರಣದಿಂದ, **ಪ್ರಾಚ್ಯಾನ್** - ಪೂರ್ವದಿಕ್ಕಿನಲ್ಲಿರುವ, **ಪ್ರಾಣಾನ್** - ಪ್ರಾಣವೆಂದು ಕರೆಯಲಾದ ಕಣ್ಣು ಮುಂತಾದ ಇಂದ್ರಿಯಗಳನ್ನು, **ರಶ್ಮಿಷು**- [೨]ಧರ್ಮಭೂತಜ್ಞಾನವೆಂಬ ಕಿರಣಗಳ ಮೂಲಕ, **ಸನ್ನಿಧತ್ತೇ** - ಪ್ರೇರಿಸುತ್ತಾನೆ· **ಯತ್** - ಯಾವ ಕಾರಣದಿಂದ, **ದಕ್ಷಿಣಾಮ್** - ದಕ್ಷಿಣ ದಿಕ್ಕನ್ನು, **ಯತ್** - ಯಾವುದರಿಂದ, **ಪ್ರತೀಚೀಮ್**- ಪಶ್ಚಿಮದಿಕ್ಕನ್ನು, **ಯತ್** - ಯಾವುದರಿಂದ, **ಉದೀಚೀಮ್** - ಉತ್ತರದಿಕ್ಕನ್ನು, **ಯತ್** - ಯಾವ ಕಾರಣದಿಂದ, **ಅಧಃ** - ಕೆಳಭಾಗವನ್ನು, **ಯತ್** - ಯಾವ ಕಾರಣದಿಂದ, **ಊರ್ಧ್ವಮ್**- ಮೇಲುಭಾಗವನ್ನು, **ಯತ್** - ಯಾವ ಕಾರಣದಿಂದ, **ಅಂತರಾದಿಶಃ** - ಈ ದಿಕ್ಕುಗಳ ಮಧ್ಯಭಾಗವನ್ನೂ (ಹೀಗೆ ಈ ಎಲ್ಲ ದಿಕ್ಕುಗಳನ್ನೂ **ಪ್ರವಿಶ್ಯ** - ಪ್ರವೇಶಿಸಿ) **ಸರ್ವಂ ಪ್ರಕಾಶಯತಿ**- ಧರ್ಮಭೂತಜ್ಞಾನವೆಂಬ ಕಿರಣಗಳ ಮುಖಾಂತರ ಎಲ್ಲವನ್ನೂ ಬೆಳಗಿಸುವನೋ, **ತೇನ** - ಆ ಕಾರಣದಿಂದಲೇ, **ಸರ್ವಾನ್ ಪ್ರಾಣಾನ್** - ಎಲ್ಲ ದಿಗ್ಭಾಗಗಳಲ್ಲಿ ಇರುವ ಕಣ್ಣು ಮೊದಲಾದ ಇಂದ್ರಿಯಗಳನ್ನು, **ರಶ್ಮಿಷು** - ಧರ್ಮಭೂತಜ್ಞಾನವೆಂಬ ಕಿರಣಗಳಿಂದ, **ಸನ್ನಿಧತ್ತೇ** - ಪ್ರೇರಿಸುತ್ತಾನೆ

## ತಾತ್ಪರ್ಯ

ಉದಯಿಸಿ ಬಂದ ಸೂರ್ಯನು ತನ್ನ ಕಿರಣಗಳಿಂದ ಎಲ್ಲ ದಿಕ್ಕುಗಳಲ್ಲಿ ಇರುವ ವಸ್ತುಗಳನ್ನೂ ಪ್ರಕಾಶಪಡಿಸುತ್ತಾನೆ· ಇದರಂತೆ ಆದಿತ್ಯನೆಂದು ಹೆಸರು ಪಡೆದ ಜೀವನೂ ಸಹ ಸುಷುಪ್ತಿ ಸ್ಥಾನದಿಂದ ಎದ್ದು ಧರ್ಮಭೂತಜ್ಞಾನದ ಮೂಲಕ ಪೂರ್ವ, ಪಶ್ಚಿಮ, ಉತ್ತರ, ದಕ್ಷಿಣ, ಮೊದಲಾದ ಎಲ್ಲ ಪ್ರದೇಶಗಳಲ್ಲಿ ನೆಲೆಸಿರುವ ಇಂದ್ರಿಯಗಳನ್ನು ಪ್ರೇರಿಸುತ್ತಾನೆ· ಆ ದಿಗ್ಭಾಗಗಳಲ್ಲಿರುವ ವಸ್ತುಗಳನ್ನೂ ಪ್ರಕಾಶಪಡಿಸುತ್ತಾನೆ·

## ರಂಗರಾಮಾನುಜಭಾಷ್ಯ

**ಅಥಾऽऽದಿತ್ಯಃ** । ರಯಿನಿರೂಪಣಾನಂತರಮಾದಿತ್ಯಃ ವರ್ಣ್ಯತ ಇತಿ ಶೇಷಃ । ಆದಿತ್ಯ-ಶಬ್ದಿತಸ್ಯ ಭೋಕ್ತುಃ ಪ್ರಾಣಶಬ್ದಿತತ್ವೇ ಹೇತುರುಚ್ಯತ ಇತಿ ಯಾವತ್ । **ಉದಯನ್ ಯತ್ - ಪ್ರಾಚೀಂ ದಿಶಂ ಪ್ರವಿಶತಿ ಇತಿ** । ಅಯಂ ಜೀವಃ ಸುಷುಪ್ತಿಸ್ಥಾನಾತ್ ಪ್ರಬುಧ್ಯಮಾನ ಏವ ಸನ್ ಪ್ರಾಚೀಂ ದಕ್ಷಿಣಾಂ ಪ್ರತೀಚೀಮುದೀಚೀಮಧಶ್ಚೋರ್ಧ್ವಮಂತರಾದಿಶಶ್ಚ ಸರ್ವಂ

೧· 'ಪುರೀತತ್' ನಾಡಿ;
ಸುಷುಪ್ತಿ ಜೀವನು ಅನುಭವಿಸುವ ಒಂದು ಅವಸ್ಥೆ· ಈ ಅವಸ್ಥೆಯಲ್ಲಿ ಎಲ್ಲ ಇಂದ್ರಿಯಗಳೂ (ಮನಸ್ಸೂ ಸೇರಿ) ತಮ್ಮ ತಮ್ಮ ಕಾರ್ಯಗಳಿಂದ ಹಿಂದಿರುಗಿ ಪಡೆಯುತ್ತವೆ· ಜೀವನಲ್ಲಿಯೂ ಯಾವುದೇ ರೀತಿಯ ರಾಗದ್ವೇಷಗಳು ಇರಲಾರವು· ಅವನು ಸ್ವಪ್ನವನ್ನು ಕಾಣಲಾರನು· ಕೇವಲ 'ಅಹಮ್' ಎಂದು ಸ್ವಯಂಪ್ರಕಾಶನಾಗಿ ಬೆಳಗುವನು·

೨· ಜೀವನು ಜ್ಞಾನಸ್ವರೂಪನೂ, ಜ್ಞಾನಾಶ್ರಯನೂ ಆಗಿದ್ದಾನೆ 'ಅಹಮ್' 'ಅಹಮ್' ಎಂದು ಸ್ವಯಂ ವೇದ್ಯವಾದ ಜ್ಞಾನವೇ ಜೀವ ಇವನಲ್ಲಿ ಇರುವ ಮಡಕೆ ಮಣ್ಣು ಮೊದಲಾದ ವಸ್ತುಗಳನ್ನು ಕುರಿತ ತಿಳುವಳಿಕೆಯೇ ಧರ್ಮಭೂತಜ್ಞಾನ· ಜೀವನಲ್ಲಿ - (ಧರ್ಮಜ್ಞಾನದಲ್ಲಿ) ಬೇರ್ಪಡದ ಸಂಬಂಧವನ್ನು ಉಳಿಸಿಕೊಂಡಿರು· ಜ್ಞಾನವನ್ನೇ ಧರ್ಮಭೂತಜ್ಞಾನವೆಂದು ಕರೆಯಲಾಗಿದೆ· ಇದಕ್ಕೆ ಸಂಕೋಚ ವಿಕಾಸಗಳಿವೆ· ಈ ಧರ್ಮಭೂತಜ್ಞಾನದ ಚರಮವಿಕಾಸವೇ ಮುಕ್ತಿ

ಪ್ರಕಾಶಯನ್ ತತ್ತದ್ದಿಗ್ವರ್ತೀಂದ್ರಿಯಾಣಿ ಧರ್ಮಭೂತಜ್ಞಾನಾಖ್ಯರಶ್ಮಿದ್ವಾರಾ ಬಿಭರ್ತಿ । ತಸ್ಮಾತ್ ಸ ಏವ ಸರ್ವಪ್ರಾಣಶಬ್ದಿತೇಂದ್ರಿಯನಿರ್ವೋಢೃತ್ವಾತ್ ಪ್ರಾಣ ಇತ್ಯರ್ಥಃ । ಪ್ರಾಚೀಂ ದಿಶಂ **ಪ್ರವಿಶತಿ** - ಪ್ರಕಾಶಯತಿ; ಪ್ರಾಚ್ಯಾನ್ ಪದಾರ್ಥಾನ್ ಉಪಲಭತೇ ಇತಿ ಯಾವತ್ । **ತೇನ** - ತಸ್ಮಾದ್ಧೇತೋಃ॥ **ಪ್ರಾಚ್ಯಾನ್ ಪ್ರಾಣಾನ್ ರಶ್ಮಿಷು ಸನ್ನಿಧತ್ತೇ** - ಪೂರ್ವದಿಗ್ವರ್ತಿಪದಾರ್ಥಪ್ರಕಾಶಕಾನ್ ಚಕ್ಷುರಾದೀನ್ ಪ್ರಾಣಾನ್ ಧರ್ಮಭೂತಜ್ಞಾನಾಖ್ಯರಶ್ಮಿಮುಖೇನಾಧಿತಿಷ್ಠತಿ, ಪ್ರೇರಯತಿ । ಧರ್ಮಭೂತಜ್ಞಾನೇನ ತದಧಿಷ್ಠಾತೃತ್ವಲಕ್ಷಣಸಂನಿಧಾನಾಭಾವೇ ಚಕ್ಷುರಾದಿನಾ ಕರಣೇನ ರೂಪಾದ್ಯುಪಲಂಭೋ ನ ಸ್ಯಾತ್ । ಚೇತನಾನಧಿಷ್ಠಿತಸ್ಯ ಕರಣಸ್ಯ ಕಾರ್ಯಾಸಮರ್ಥತ್ವಾದಿತಿ ಭಾವಃ॥ **ಯದ್ದಕ್ಷಿಣಾಂ ಯತ್ಪ್ರತೀಚೀಮ್** ಇತ್ಯಾದೌ 'ಯದ್ದಕ್ಷಿಣಾಂ ಪ್ರವಿಶತಿ ತೇನ ದಾಕ್ಷಿಣಾತ್ಯಾನ್ ಪ್ರಾಣಾನ್ ರಶ್ಮಿಷು ಸನ್ನಿಧತ್ತೇ, ಯತ್ಪ್ರತೀಚೀಂಪ್ರವಿಶತಿ ತೇನ ಪ್ರತೀಚ್ಯಾನ್ ಪ್ರಾಣಾನ್ ರಶ್ಮಿಷು ಸನ್ನಿಧತ್ತೇ'' । ಇತ್ಯಾದಿಶೇಷಃ ಪೂರಣೀಯಃ । ಲಾಘವಾರ್ಥಂ ಪ್ರತಿ-ಪರ್ಯಾಯಂ ತದನುಕ್ತಿಃ । ಅತ್ರ ಪ್ರಜಾಃ ಸಿಸೃಕ್ಷುಃ ಪರಮಾತ್ಮಾ ಪ್ರಕೃತಿಂ ಪುರುಷಂ ಚ ಸಸರ್ಜ ಇತಿ ವಕ್ತವ್ಯೇ ಪರೋಕ್ಷರೂಪೇಣ ರಯಿಪ್ರಾಣಶಬ್ದಾಭ್ಯಾಂ ತದಭಿಲಾಪಃ, ರಯಿಪ್ರಾಣಯೋಃ ಚಂದ್ರಾದಿತ್ಯಶಬ್ದಾಭ್ಯಾಮಭಿಲಾಪಶ್ಚ 'ಪರೋಕ್ಷಪ್ರಿಯಾ ಇವ ಹಿ ದೇವಾಃ' (ಐ· ಉ ೧-೩) ಇತಿ· ರೀತ್ಯಾ ರಹಸ್ಯಾರ್ಥಸ್ಯ ಸ್ಫುಟತರೋಪದೇಶಾನರ್ಹತ್ವಸೂಚನಾರ್ಥಃ ॥

## ಅನುವಾದ

**ಅಥಾಽಽದಿತ್ಯಃ** - 'ರಯಿ'ಯ ನಿರೂಪಣೆ ಆದ ಮೇಲೆ ಆದಿತ್ಯನನ್ನು **ವರ್ಣ್ಯತೇ** - ವಿವರಿಸಲಾಗುವುದು ಎಂದು [೧]ಶೇಷಪೂರಣ ಮಾಡಿಕೊಳ್ಳಬೇಕು· ಆದಿತ್ಯ ಶಬ್ದದಿಂದ ತಿಳಿಯಲ್ಪಡುವ ಭೋಕ್ತೃವನ್ನು ಪ್ರಾಣ ಎಂದು ಕರೆಯಲು ಕಾರಣವನ್ನು ವಿವರಿಸಲಾಗುವುದು ಎಂಬುದು ಅಭಿಪ್ರಾಯ· **ಉದಯನ್ ಇತಿ** । ಜೀವನು ಸುಷುಪ್ತಿಸ್ಥಾನದಿಂದ ಎಚ್ಚರಗೊಂಡೇ ಪೂರ್ವ, ದಕ್ಷಿಣ, ಪಶ್ಚಿಮ, ಉತ್ತರ, ಮೇಲು, ಕೆಳಗು ಹಾಗೂ ಅವಾಂತರ ದಿಕ್ಕುಗಳನ್ನೆಲ್ಲ ಪ್ರಕಾಶಪಡಿಸುತ್ತ, ಆ ದಿಕ್ಕುಗಳಲ್ಲಿರುವ ಇಂದ್ರಿಯಗಳನ್ನು ಧರ್ಮಭೂತಜ್ಞಾನವೆಂಬ ಕಿರಣಗಳ ಮೂಲಕ ಧರಿಸುತ್ತಾನೆ· ಪ್ರಾಣಶಬ್ದದಿಂದ ಕರೆಯಲಾಗುವ ಎಲ್ಲ ಇಂದ್ರಿಯಗಳ ನಿಯಾಮಕನಾಗಿರುವ ಕಾರಣ ಇವನು ಪ್ರಾಣರೂಪನು· ಪೂರ್ವದಿಕ್ಕನ್ನು **ಪ್ರವಿಶತಿ** - ಪ್ರಕಾಶಪಡಿಸುತ್ತಾನೆ, ಪೂರ್ವಭಾಗದಲ್ಲಿ ಇರುವ ಪದಾರ್ಥಗಳನ್ನು ತಿಳಿಯುತ್ತಾನೆ· **ತೇನ** - ಆ ಕಾರಣದಿಂದ, **ಪ್ರಾಚ್ಯಾನ್ ಪ್ರಾಣಾನ್ ರಶ್ಮಿಷು ಸನ್ನಿಧತ್ತೇ** - ಪೂರ್ವದಿಕ್ಕಿನಲ್ಲಿರುವ ವಸ್ತುಗಳನ್ನು ಬೆಳಗಿಸುವ ಕಣ್ಣು ಮುಂತಾದ ಇಂದ್ರಿಯಗಳನ್ನು ಧರ್ಮಭೂತಜ್ಞಾನವೆಂಬ ಕಿರಣಗಳ ಮೂಲಕ ಆಶ್ರಯಿಸುತ್ತಾನೆ, ಪ್ರೇರಿಸುತ್ತಾನೆ· ಧರ್ಮಭೂತಜ್ಞಾನದ ಮೂಲಕ ಇಂದ್ರಿಯಗಳಲ್ಲಿ ನೆಲೆಸುವ ಸಂಬಂಧವಿಲ್ಲದಿದ್ದರೆ ಕಣ್ಣು ಮೊದಲಾದ ಇಂದ್ರಿಯಗಳಿಂದ ರೂಪಾದಿಗಳನ್ನು ಗ್ರಹಿಸುವುದು ಅಸಾಧ್ಯವಾದೀತು· ಕಾರಣ ಚೇತನನಿಂದ ಆಶ್ರಯಿಸಲ್ಪಡದ

---

೧· ಅರ್ಥಪೂರ್ತಿಗಾಗಿ ವಾಕ್ಯದ ಕೊನೆಯಲ್ಲಿ ಶಬ್ದಗಳನ್ನು ಸೇರಿಸಿಕೊಳ್ಳುವುದು

ಇಂದ್ರಿಯಗಳು ಕಾರ್ಯಕಾರಿಯಾಗಲಾರವು · 'ಯದ್ ದಕ್ಷಿಣಾಂ ಯತ್ ಪ್ರತೀಚೀಮ್' ಮುಂತಾದ ವಾಕ್ಯಗಳಲ್ಲಿ ಯದ್ ದಕ್ಷಿಣಾಂ ಇತಿ । ಈ ಮೊದಲಾಗಿ ಶೇಷಪೂರ್ತಿಯನ್ನು ಮಾಡಬೇಕು· ಪ್ರತಿಸಾರಿ ಅದನ್ನು ಹೇಳದಿರುವುದಕ್ಕೆ ಲಾಘವವೇ ಪ್ರಯೋಜನ· ಇಲ್ಲಿ ಸಂತತಿಯನ್ನು ಸೃಷ್ಟಿಸಬಯಸಿದ ಪರಮಾತ್ಮನು ಪ್ರಕೃತಿ ಪುರುಷರನ್ನು ಹುಟ್ಟಿಸಿದನು ಎಂದು ಹೇಳಬೇಕಿತ್ತು· ಆದರೆ ಪರೋಕ್ಷವಾಗಿ ರಯಿ ಮತ್ತು ಪ್ರಾಣ ಶಬ್ದಗಳಿಂದ ಅವುಗಳನ್ನು (ಪ್ರಕೃತಿ ಹಾಗೂ ಪುರುಷ) ಕರೆಯಲಾಗಿದೆ· ರಯಿ ಮತ್ತು ಪ್ರಾಣಗಳನ್ನು ಚಂದ್ರ-ಸೂರ್ಯ ಶಬ್ದಗಳಿಂದ ಹೇಳಲಾಗಿದೆ· (ಹೀಗೆ ಹೇಳಿರುವುದು) 'ಪರೋಕ್ಷಪ್ರಿಯಾ ಇವ ಹಿ ದೇವಾಃ' (ಐ · ಉ · ೧-೩) ಎಂಬ ವೇದ ವಾಕ್ಯದಂತೆ ರಹಸ್ಯವಾದ ವಿಷಯವನ್ನು ಸ್ಪಷ್ಟವಾಗಿ ಉಪದೇಶಿಸುವುದು ಸಾಧ್ಯವಿಲ್ಲವೆಂದು ಸೂಚಿಸುವ ಸಲುವಾಗಿ

## ಭಾಷ್ಯಸಾರ

ಪ್ರಕೃತಿ-ಪುರುಷರು ಪ್ರಪಂಚ ವಿಕಾಸಕ್ಕೆ ಕಾರಣವಾದ ತತ್ವಗಳು· ಪ್ರಕೃತಿಯನ್ನು ರಯಿಯೆಂದೂ, ಚಂದ್ರನೆಂದೂ ಕರೆಯುತ್ತಾರೆ· ಪುರುಷನನ್ನು ಪ್ರಾಣವೆಂದೂ, ಆದಿತ್ಯನೆಂದೂ ಹೆಸರಿಸುತ್ತಾರೆ· ಪ್ರಕೃತಿ-ಪುರುಷರು ಭೋಕ್ತ್ಯ-ಭೋಗ್ಯವರ್ಗಗಳಿಗೆ ಪ್ರತಿನಿಧಿಗಳು·

ಭೋಕ್ತವಾದ ಪುರುಷನು ಎಲ್ಲ ಪ್ರಾಣಗಳಿಗೂ ಉತ್ತೇಜಕನು · ಆದ್ದರಿಂದಲೇ ಇವನನ್ನು ಪ್ರಾಣನೆಂದು ಹೊಗಳಲಾಗಿದೆ · ಇವನು ಸೂರ್ಯನಂತೆಯೇ ಪ್ರಾಣಗಳ ಪರಿಪೋಷಕನು · ಸೂರ್ಯ ಹಾಗೂ ಪುರುಷರಲ್ಲಿ ಪ್ರಾಣಗಳನ್ನು ಪಾಲಿಸುವುದೇ ಪರಮಸಾಮ್ಯ · ಈ ಸಾಮ್ಯವೇ ಪುರುಷನನ್ನು ಆದಿತ್ಯನೆಂದು ರೂಪಣ ಮಾಡಲು ಕಾರಣವಾಗಿದೆ· ಇಂತಹ ಸಾಮ್ಯವನ್ನೇ ಈ ಮಂತ್ರವು ವಿಶದವಾಗಿ ತಿಳಿಸುತ್ತದೆ·

ಸೂರ್ಯನು ಮೂಡಣದಲ್ಲಿ ಮೂಡುತ್ತಾನೆ· ಮೂಡುತ್ತಲೇ ತನ್ನ ಕಿರಣಗಳಿಂದ ಎಲ್ಲ ದಿಕ್ಕನ್ನು ವ್ಯಾಪಿಸುತ್ತಾನೆ· ಅಲ್ಲಿರುವ ಪ್ರಾಣಿಗಳ ಪ್ರಾಣಗಳನ್ನು ತನ್ನ ಕಿರಣಗಳಿಂದ ಪೋಷಿಸುತ್ತಾನೆ· ಇದೇ ರೀತಿ ದಕ್ಷಿಣ, ಪಶ್ಚಿಮ, ಉತ್ತರ ಮುಂತಾದ ಎಲ್ಲ ದಿಕ್ಕು-ದೆಸೆಗಳನ್ನೂ ಬೆಳಗಿಸಿ ಅಲ್ಲಿರುವ ಪ್ರಾಣಿವರ್ಗವನ್ನು ಕಾಪಾಡುವುದು ನಿಚ್ಚಳವಾದ ಸಂಗತಿ · ಆದಿತ್ಯನು ಉದಯಿಸದಿದ್ದರೆ ಜೀವಕಳೆ ಎಲ್ಲಿಯೂ ಕುದುರಲಾರದು· ಪ್ರಾಣಿಗಳ ಉಸಿರಾಟವೂ ಇರಲಾರದು· ಇದೇ ರೀತಿ ಜೀವನೂ ಸುಷುಪ್ತಿಯ ಅವಸ್ಥೆಯಿಂದ ಎಚ್ಚೆತ್ತು ಬೇರೆ ಬೇರೆ ದಿಕ್ಕುಗಳಲ್ಲಿ ಇರುವ ಕಣ್ಣು ಮುಂತಾದ ಇಂದ್ರಿಯಗಳನ್ನು (ಪ್ರಾಣಗಳನ್ನು) ಪ್ರೇರಿಸುತ್ತಾನೆ· ಧರ್ಮಭೂತಜ್ಞಾನವೆಂಬ ಕಿರಣಗಳಿಂದ ಅವುಗಳನ್ನು ಬೆಳಗಿಸುತ್ತಾನೆ· ಜೀವನ ಸಂಬಂಧವಿಲ್ಲದೇ ಇಂದ್ರಿಯಗಳು ವಿಷಯವನ್ನು ಪ್ರಕಾಶಪಡಿಸಲಾರವು· ಚೇತನನ ಸಂಪರ್ಕ ಕಡಿದು ಹೋದರೆ ಕಣ್ಣುಗಳು ಕುರುಡಾಗುತ್ತದೆ · ಕಿವಿಗಳಲ್ಲಿ ಕಿವುಡು ಹೆಚ್ಚುತ್ತದೆ · ಎಲ್ಲ ಇಂದ್ರಿಯಗಳೂ ವ್ಯರ್ಥವಾಗುತ್ತವೆ· ಆದ್ದರಿಂದ ಚೇತನನೇ ಈ ಇಂದ್ರಿಯಗಳ ನಿರ್ವಾಹಕನೂ, ಏಕೈಕ ಪಾಲಕನೂ ಆಗಿದ್ದಾನೆ· ಆದ್ದರಿಂದಲೇ ಚೇತನನು (ಜೀವನು) ಪ್ರಾಣನೂ ಹೌದು, ಆದಿತ್ಯನೂ ಹೌದು

[೨]ಕೆಲವು ವಿದ್ವಾಂಸರು ಈ ಮಂತ್ರದ ಅಭಿಪ್ರಾಯವನ್ನು ಇನ್ನೊಂದು ರೀತಿಯಿಂದ ವಿವರಿಸುತ್ತಾರೆ ಜಗತ್ತು ಮೂರ್ತ ಮತ್ತು ಅಮೂರ್ತವೆಂದು ಇಬ್ಬಗೆಯಾಗಿದೆ· ಇಲ್ಲಿರುವ ವಸ್ತುಗಳು ಈ ಎರಡು ಗುಂಪುಗಳಲ್ಲಿಯೇ ಅಡಕವಾಗುತ್ತವೆ· ಮೂರ್ತವಸ್ತುಗಳಿಗೆ ನಿರ್ದಿಷ್ಟವಾದ ಆಕಾರವಿದೆ, ಕಾಠಿಣ್ಯವಿದೆ· ಆದರೆ ಅಮೂರ್ತವಸ್ತುಗಳಲ್ಲಿ ಆಕಾರವನ್ನಾಗಲೀ, ಕಾಠಿಣ್ಯವನ್ನಾಗಲೀ ಕಾಣಲಾರೆವು· [೩]ಸ್ಥೂಲವಾದ (ಮೂರ್ತ) ವಸ್ತುಗಳು ಸೂಕ್ಷ್ಮವಾದ ಅವಸ್ಥೆಯನ್ನು ಪಡೆದು ನಾಶವಾಗುತ್ತವೆ· ಸೂಕ್ಷ್ಮವಾದ ಪದಾರ್ಥಗಳು ಇನ್ನೂ ಸೂಕ್ಷ್ಮ ದೆಸೆಯನ್ನು ಹೊಂದಿ ಕಣ್ಮರೆಯಾಗುತ್ತವೆ· ಹೀಗೆ ಮೂರ್ತದಿಂದ ಆರಂಭಿಸಿ ಅಮೂರ್ತದವರೆಗೆ ಎಲ್ಲವೂ ಭೋಗ್ಯ ಪ್ರಪಂಚಕ್ಕೆ ಸೇರಿವೆ· ಭೋಗ್ಯ ಪ್ರಪಂಚಕ್ಕೇ ರಯಿಯೆಂದು ಇನ್ನೊಂದು ಹೆಸರು· ಈಗ ಭೋಕ್ತೃ-ಭೋಗ್ಯವೆಂಬ ವಿಭಾಗವನ್ನು ಮನಸಾ ಭಾವಿಸಿ, 'ಆದಿತ್ಯ ಪ್ರಾಣ, ಚಂದ್ರ ರಯಿ' ಎಂದು ಮಂತ್ರದಲ್ಲಿ ಹೇಳಿರುವುದು ಸಮರ್ಪಕವಾಗಲಾರದು· ಆದ್ದರಿಂದಲೇ, ಎಲ್ಲವೂ ರಯಿಯೇ ಆದರೂ [೪]ಮೂರ್ತವಸ್ತುಗಳನ್ನು ಮಾತ್ರ ರಯಿಯೆಂದು ಉಲ್ಲೇಖಿಸಲಾಗಿದೆ· ರಯಿಯೇ ಚಂದ್ರ· [೫]ಅವನು ಭೋಗ್ಯವರ್ಗದಲ್ಲಿ ಸೇರಿದ ಎಲ್ಲ ವನಸ್ಪತಿಗಳನ್ನೂ ಪೋಷಿಸುತ್ತಾನೆ· ಅವುಗಳ ರಸಗಳನ್ನೂ ಕಾಪಾಡುತ್ತಾನೆ· ಆದರೆ ಆದಿತ್ಯನು ಹೇಗೆ ಪ್ರಾಣವಾಗಬಲ್ಲನು? ಪ್ರಾಣವೂ ಹೇಗೆ ಭೋಕ್ತೃವಾಗಬಲ್ಲದು?

ಪ್ರಾಣದ ಸಹಕಾರವಿಲ್ಲದೇ ಆಹಾರ ಜೀರ್ಣವಾಗಲಾರದು· ಈ ಸಂಗತಿಯನ್ನು ನಾವು ಕೇಳಿ ತಿಳಿದಿದ್ದೇವೆ, ಕಂಡೂ ಅರಿತಿದ್ದೇವೆ· ಇದನ್ನೇ 'ಪ್ರಾಣಾಪಾನಸಮಾಯುಕ್ತಃ ಪಚಾಮ್ಯನ್ನಂ ಚತುರ್ವಿಧಮ್' 'ಪ್ರಾಣ ಹಾಗೂ ಅಪಾನಗಳಿಂದ ಕೂಡಿಕೊಂಡು ನಾಲ್ಕು ಬಗೆಯ ಆಹಾರವನ್ನು ಜೀರ್ಣಿಸುತ್ತೇನೆ ಎಂದು ಸ್ಮೃತಿಯೂ ಸಾರುತ್ತದೆ· ಪ್ರಾಣವು ಭೋಕ್ತೃವೆಂದು, 'ಸ ಹೋವಾಚ ಕಿಂ ಮೇಽನ್ನಮ್ ಭವಿಷ್ಯತೀತಿ ಯತ್ಕಿಂಚಿದಿದಮಾಶ್ವಭ್ಯ ಆಶಕುನಿಭ್ಯ ಇತಿ ಹೋಚುಃ' ಎಂಬ ವೇದವಾಕ್ಯವೇ ಅಪ್ಪಣೆ ಕೊಡಿಸಿದೆ· ಈ ಭೋಕ್ತೃ ಪ್ರಾಣವನ್ನು ಪೋಷಿಸುವುದು ಸೂರ್ಯನ ಕಾರ್ಯ· ಆದ್ದರಿಂದಲೇ ಆದಿತ್ಯನು ಪ್ರಾಣವೂ ಭೋಕ್ತೃವೂ ಆಗಿದ್ದಾನೆ· ಈ ಅಭಿಪ್ರಾಯವನ್ನೇ ಪ್ರಕೃತ ಮಂತ್ರವು ಸ್ಪಷ್ಟಗೊಳಿಸುತ್ತದೆ·

## ಮಂತ್ರ - ೭

**स एष वैश्वानरो विश्वरूपः प्राणोऽग्निरुदयते ।**
**तदेतदृचाऽभ्युक्तम् ॥ 7 ॥**

---

೧· ಸರ್ವಪ್ರಾಣಭೃತೇಂದ್ರಿಯ ನಿರ್ವೋಢೃತ್ವಾತ್ ಪ್ರಾಣಃ - ರಂಗರಾಮಾನುಜಭಾಷ್ಯ·

೨· ಪರೇಷು - - - ಅಥೇತೀತಿ ವ್ಯಾಚಕ್ಷತೇ - ಸುಬೋಧಿನೀ·

೩· ಸ್ಥೂಲಮಿಮಸೂಕ್ಷ್ಮೇಣ ಸೂಕ್ಷ್ಮಮಪಿ ತತೋಽಪಿ ಸೂಕ್ಷ್ಮೇಣ ವಿನಾಶ್ಯದೇವ - ಸುಬೋಧಿನೀ·

೪· ತಸ್ಮಾತ್ ಮೂರ್ತಿರೇವ ರಯಿಃ - ಪ್ರ· ಉ· ೧-೫

೫· ತತ್ರ ಚಂದ್ರಮಸೋಽನ್ನವರ್ಗಾಂತರ್ಗತ ಸಕಲೌಷಧಿರಸಪೋಷಕತ್ವೇನ ರಯಿತ್ವಂ ಸುವ್ಯಕ್ತಮ್ - ಸುಬೋಧಿನೀ·

ಸ ಏಷ ವೈಶ್ವಾನರೋ ವಿಶ್ವರೂಪಃ ಪ್ರಾಣೋಽಗ್ನಿರುದಯತೇ ।
ತದೇತದೃಚಾಽಭ್ಯುಕ್ತಮ್ ॥

## ಪ್ರತಿಪದಾರ್ಥ

**ಸ ಏಷಃ** - ಪ್ರಸಿದ್ಧನೂ, ಪ್ರಜಾಪತಿಶಬ್ದದಿಂದ ಹಿಂದೆ ಕರೆಯಲ್ಪಟ್ಟವನೂ ಆದ ನಾರಾಯಣನು, **ವೈಶ್ವಾನರಃ (ಇತಿ)** - ವೈಶ್ವಾನರನೆಂದೂ, **ವಿಶ್ವರೂಪಃ (ಇತಿ)** - ಪ್ರಪಂಚವೇ ಶರೀರವಾಗಿ ಇರುವವನೆಂದೂ, **ಪ್ರಾಣಃ (ಇತಿ)** - ಎಲ್ಲರಿಗೂ ಪ್ರಾಣರೂಪದಲ್ಲಿರುವವನೆಂದೂ, **ಅಗ್ನಿಃ (ಇತಿ)**- ಪರಮಪದ(ಮೋಕ್ಷ)ಕ್ಕೆ ಒಯ್ಯುವವನೆಂದೂ, **ಉದಯತೇ** - ಮುಖ್ಯ ವೃತ್ತಿಯಿಂದ(ನೇರವಾಗಿ) ಆಯಾ ಪದಗಳಿಂದ ಹೇಳಲ್ಪಡುತ್ತಾನೆ· **ತತ್** - ಈ ಪರತತ್ವದ ಬಗ್ಗೆ, **ಏತತ್** - ಇದನ್ನು, **ಋಚಾಽ-ಭ್ಯುಕ್ತಮ್** - ಮಂತ್ರವೇ ಹೇಳುತ್ತದೆ·

## ತಾತ್ಪರ್ಯ

ಪ್ರಜಾಕಾಮನಾದ ಪ್ರಜಾಪತಿಯು ಶ್ರೀಮನ್ನಾರಾಯಣನೇ· ಇವನನ್ನು ವೈಶ್ವಾನರ, ವಿಶ್ವರೂಪ, ಪ್ರಾಣ, ಅಗ್ನಿ ಎಂಬ ಶಬ್ದಗಳಿಂದಲೂ ಕರೆಯುತ್ತಾರೆ· ಶ್ರೀಪತಿಯು ವಿಶ್ವದ ಜನರನ್ನೆಲ್ಲ ಮುನ್ನಡೆಸುವವನು (ವೈಶ್ವಾನರ)· ಇವನು ಎಲ್ಲರಿಗೂ ಜೀವನವನ್ನು ಅನುಗ್ರಹಿಸುತ್ತಾನೆ (ಪ್ರಾಣ)· ಇವನಿಗೆ ಪ್ರಪಂಚವೇ ಶರೀರ (ವಿಶ್ವರೂಪ)· ಪ್ರಪಂಚಕ್ಕೆ ಬಂದ ಜೀವಿಗಳನ್ನು ಉತ್ತಮಲೋಕಕ್ಕೆ ಇವನು ಒಯ್ಯುವನು (ಅಗ್ನಿ)· ಈ ಪರತತ್ವವನ್ನು ಋಙ್ಮಂತ್ರವು ಪ್ರತಿಪಾದಿಸುತ್ತದೆ·

## ರಂಗರಾಮಾನುಜಭಾಷ್ಯ

ಆದಿತ್ಯೋ ಹ ವೈ ಪ್ರಾಣ ಇತಿ **ಪ್ರಾಣಾದಿತ್ಯ** ಶಬ್ದನಿರ್ದಿಷ್ಟಸ್ಯ ಭೋಕ್ತೃವರ್ಗಸ್ಯೋದಯ-ಮಾನಸ್ಯ ಪರಮಾತ್ಮಾತ್ಮಕತಾಮಾಹ - ಸ ಏಷ **ವೈಶ್ವಾನರೋ** ವಿಶ್ವರೂಪ ಇತಿ । ಯಃ ಪ್ರಾಕ್‌ಪ್ರಸ್ತುತಃ ಪ್ರಜಾಪತಿಶಬ್ದಿತಃ ವಿಶ್ವೇ ನರಾಣಾಂ ನೇತೃತ್ವೇನ **ವೈಶ್ವಾನರ**ಶಬ್ದವಾಚ್ಯಃ ಸರ್ವ-ಶರೀರತಯಾ ವಿಶ್ವರೂಪಶಬ್ದಿತಃ, ಅಗ್ರನೇತೃತ್ವಾದಿಗುಣಯೋಗೇನಾಗ್ನಿಶಬ್ದಿತಃ, ಸ **ಏಷಃ** **ಪ್ರಾಕ್‌ಪ್ರಜಾಪತಿ**ಶಬ್ದನಿರ್ದಿಷ್ಟಃ ಪರಮಾತ್ಮಾ 'ಆದಿತ್ಯೋ ಹ ವೈ ಪ್ರಾಣಃ' ಇತಿ ಪ್ರಾಣಶಬ್ದಿತ-ಭೋಕ್ತೃರೂಪಃ ಸನ್ ಉದಯತ ಇತ್ಯರ್ಥಃ । ಅಯಂ ಚ ಮಂತ್ರೋ ವೈಶ್ವಾನರಾಧಿಕರಣೇ ಪರಮಾತ್ಮಪರತಯಾ ಸಿದ್ಧವತ್ಕೃತ್ಯ **ಭಗವತಾ ಭಾಷ್ಯಕೃತಾ** ವ್ಯವಹೃತಃ । ಅತ ಏವಂ ವ್ಯಾಖ್ಯಾತಮಿತಿ ದ್ರಷ್ಟವ್ಯಮ್ । **ತದೇತದೃಚಾಽಭ್ಯುಕ್ತಮ್** । **ತದೇತತ್** ಬ್ರಹ್ಮಾಭಿಮುಖೀಕೃತ್ಯ ಋಙ್ಮಂತ್ರೇಣಾಪ್ಯುಕ್ತಮ್ ॥

## ಅನುವಾದ

'ಆದಿತ್ಯೋ ಹ ವೈ ಪ್ರಾಣಃ' ಎನ್ನುವ ವಾಕ್ಯದಲ್ಲಿಯ ಪ್ರಾಣಶಬ್ದದಿಂದ ಬೋಧಿಸಲ್ಪಟ್ಟ, ಹುಟ್ಟುತ್ತಿರುವ ಭೋಕ್ತೃಪರಿವಾರವು ಪರಮಾತ್ಮನೇ ಎಂದು ಹೇಳುತ್ತಾರೆ· [೧]'ಸ ಏಷ ವೈಶ್ವಾನರೋ ವಿಶ್ವರೂಪ ಇತಿ । ಯಾರು ಮೊದಲೇ ಸೂಚಿಸಲ್ಪಟ್ಟವನೋ, ಪ್ರಜಾಪತಿಯೆಂದು ಹೆಸರಿಸಲ್ಪಟ್ಟವನೋ, ಪ್ರಪಂಚದ ಎಲ್ಲ ಮನುಷ್ಯರನ್ನೂ ಮುನ್ನಡೆಸುವುದರಿಂದ ವೈಶ್ವಾನರ ಎಂದು ಕರೆಯಲ್ಪಟ್ಟವನೋ, ಎಲ್ಲವನ್ನು ಶರೀರವಾಗಿ ಪಡೆದಿರುವುದರಿಂದ ವಿಶ್ವರೂಪ ಎಂದೂ ಕರೆಯಲ್ಪಟ್ಟವನೋ, ಮುನ್ನಡೆಸುವುದರಿಂದ ಅಗ್ನಿ ಎಂಬ ಪದದಿಂದ ತಿಳಿಯಲ್ಪಟ್ಟವನೋ, ಆ ಪ್ರಜಾಪತಿಯೆಂದು ಕರೆಯಲ್ಪಟ್ಟ ಪರಮಾತ್ಮನೇ 'ಆದಿತ್ಯೋ ಹ ವೈ ಪ್ರಾಣಃ' ಎಂಬಲ್ಲಿರುವ ಪ್ರಾಣಶಬ್ದದಿಂದ ಬೋಧಿಸಲಾದ ಭೋಕ್ತೃವಾಗಿ ಹುಟ್ಟುತ್ತಾನೆ· ಈ ಮಂತ್ರವು ಪರಮಾತ್ಮನನ್ನು ಪ್ರತಿಪಾದಿಸುತ್ತದೆಯೆಂದು ಪೂಜ್ಯರಾದ ಭಾಷ್ಯಕಾರರು ವೈಶ್ವಾನರಾಧಿಕರಣದಲ್ಲಿ ನಿರ್ಣಯಿಸಿ ವ್ಯವಹಾರ ಮಾಡಿದ್ದಾರೆ· ಆದ್ದರಿಂದಲೇ ಹೀಗೆ ವ್ಯಾಖ್ಯಾನ ಮಾಡಲಾಗಿದೆ ತದೇತದೃಚಾಽಭ್ಯುಕ್ತಮ್ । ಇದನ್ನೇ ಬ್ರಹ್ಮವನ್ನು ಸಂಬೋಧಿಸಿ ಋಙ್ಮಂತ್ರವು ವರ್ಣಿಸುತ್ತದೆ·

## ಭಾಷ್ಯಸಾರ

ಈ ವಿಶಾಲ ವಿಶ್ವವನ್ನು ಸೃಜಿಸಿದವನು ಶ್ರೀಪತಿ· ಅವನೇ ಪ್ರಜಾಪತಿಯೆಂದು ವೇದವು ಕೊಂಡಾಡಿದೆ· ವೈಶ್ವಾನರ, ಪ್ರಾಣ, ಅಗ್ನಿ - ಇವೆಲ್ಲವೂ ಅವನನ್ನೇ ಕೈ ಮಾಡಿ ತೋರಿಸುವ ಶಬ್ದಗಳು· ರಯಿ ಪ್ರಾಣಗಳು ಪರಮಾತ್ಮನಿಂದ ಮೊದಲು ಉದಯಿಸಿ ಬಂದವು· ಇವೇ ಭೋಕ್ತೃ-ಭೋಗ್ಯಗಳು, ಆದಿತ್ಯ-ಚಂದ್ರರು· ಎಲ್ಲ ದಿಕ್ಕುಗಳನ್ನು ತನ್ನ ಕಿರಣಗಳಿಂದ ಬೆಳಗಿಸಿ, ಅಲ್ಲಿರುವ ಜೀವಗಳನ್ನು ಪೋಷಿಸುವವನು ಆದಿತ್ಯ· ಅವನನ್ನೂ ಇಲ್ಲಿ ಪ್ರಶಂಸಿಸಲಾಗಿದೆ· ಭೋಕ್ತೃವಾದ ಅವನು [೨]ಪರಮಾತ್ಮನೇ ಎಂದು ಪ್ರತಿಪಾದಿಸಲಾಗಿದೆ·

ಪರಮಾತ್ಮನು [೩]ಜಾಠರಾಗ್ನಿಯ ರೂಪದಲ್ಲಿ ಎಲ್ಲರಲ್ಲೂ ಮನೆ ಮಾಡಿದ್ದಾನೆ· ಜಾಠರಾಗ್ನಿಗೆ ವೈಶ್ವಾನರ ಎಂದು ಹೆಸರು· ಈ ಅಗ್ನಿಯು ಎಲ್ಲರ ಅನುಭವಕ್ಕೆ ಗೋಚರವಾಗಲೇಬೇಕು· ಪರಮಾತ್ಮನು ಈ ಅಗ್ನಿಯ ರೂಪದಲ್ಲಿ ಎಲ್ಲರ ಒಳಹೊಕ್ಕು ಮುನ್ನಡೆಸುವ ನೇತಾರನಾಗಿದ್ದಾನೆ· ಆದ್ದರಿಂದ ಅವನನ್ನು ವೈಶ್ವಾನರ ಎಂದು ಹೆಸರಿಸುತ್ತಾರೆ· ಇವನಿಗೆ ಚರಾಚರ ಜಗತ್ತು ಶರೀರವಾಗಿದೆ· ಅರ್ಥಾತ್ ಅದು ಇವನ ಅಂಕೆಗೆ ಒಳಪಟ್ಟಿದೆ· ಹಾಗಾಗಿ ಇವನು ವಿಶ್ವರೂಪನು· ಎಲ್ಲ ಪ್ರಾಣಿಗಳಿಗೆ ನಾರಾಯಣನೇ ಜೀವನವನ್ನು ಅನುಗ್ರಹಿಸುತ್ತಾನೆ· ಅವರಿಗೆ ಉತ್ತಮವಾದ ಲೋಕವನ್ನು ದೊರಕಿಸಿ-ಕೊಡುತ್ತಾನೆ· ಆದ್ದರಿಂದ ಇವನು ಅಗ್ನಿಯೂ, ಪ್ರಾಣವೂ ಹೌದು· ಇವನು (ಪ್ರಾಣದ)

---

೧· ಅಥಾದಿತ್ಯಂ ಸ್ತೌತಿ - ಸುಬೋಧಿನೀ

೨· ಭೋಕ್ತೃವರ್ಗಸ್ಯೋದಯಮಾನಸ್ಯ ಪರಮಾತ್ಮಾತ್ಮಕತಾಮಾಹ - ರಂಗರಾಮಾನುಜಭಾಷ್ಯ·

೩· ಪ್ರಜಾಪತಿಶಬ್ದೇನ ನಿರ್ದಿಷ್ಟಃ ಪರಮಾತ್ಮಾ ಶ್ರೀರಾಮ ಏಷ ವೈಶ್ವಾನರಃ ಜಾಠರಾಗ್ನಿರೂಪೇಣಾವಸ್ಥಿತಃ - ಆನಂದಭಾಷ್ಯ·

೧ಆದಿತ್ಯದ ರೂಪದಲ್ಲಿ ಉದಯಿಸುತ್ತಾನೆ · ಭೋಕ್ತೃವೂ, ಪ್ರಾಣವೂ ಆದ ಆದಿತ್ಯನು ಪರಮಾತ್ಮನೇ · ಪರಮಾತ್ಮನಿಗೆ ಸಲ್ಲುವ ವೈಶ್ವಾನರ, ವಿಶ್ವರೂಪ, ಪ್ರಾಣ, ಅಗ್ನಿ ಎಂಬ ಹೆಸರುಗಳು ಆದಿತ್ಯನಿಗೂ ಸಲ್ಲುತ್ತವೆ· ೨ಆದಿತ್ಯ ಪ್ರಾಣವನ್ನು ಪೋಷಿಸುತ್ತಾನೆ· ಪ್ರಾಣದ ಉಪಕಾರವನ್ನು ಜಾಠರಾಗ್ನಿ (ವೈಶ್ವಾನರ) ಪಡೆದೇ ಪಡೆಯುತ್ತದೆ · ಆದ್ದರಿಂದ ಆದಿತ್ಯನು ವೈಶ್ವಾನರನು · ಇವನು ಎಲ್ಲರ ಕಣ್ಣುಗಳಲ್ಲಿಯೂ ನಿಯಾಮಕನಾಗಿ ನೆಲೆ ನಿಲ್ಲುವಂಥವನು · ಹಾಗಾಗಿಯೇ ವಿಶ್ವರೂಪನು ತನ್ನ ಕಿರಣಗಳಿಂದ ಎಲ್ಲ ಜೀವಿಗಳನ್ನು ಧರಿಸುತ್ತಾನೆ · ಆದುದರಿಂದ ಪ್ರಾಣನು · ಇವನಿಗೆ ವಿಶ್ವವನ್ನು ಬೆಳಗುವ, ಜನರಿಗೆ ಸದ್ಗತಿಯನ್ನು ಕರುಣಿಸುವ ಸಾಮರ್ಥ್ಯವಿದೆ · ಆದ್ದರಿಂದ ಇವನು ಅಗ್ನಿಯು · ವೇದವೂ 'ಉದ್ಯಂತಂ ವಾऽऽದಿತ್ಯಮಗ್ನಿರನು ಸಮಾರೋಹತಿ' ಎಂದು ಈ ವಿಷಯವನ್ನು ಸಮ್ಮತಿಸುತ್ತದೆ · ಈ ಆದಿತ್ಯ ಸ್ವರೂಪವನ್ನೇ, ಪರತತ್ತ್ವವನ್ನೇ ಮುಂದಿನ ಋಙ್ಮಂತ್ರವು ವಿಶದವಾಗಿ ತಿಳಿಸುತ್ತದೆ· ·

## ಮಂತ್ರ - ೮

विश्वरूपं हरिणं जातवेदसं परायणं
ज्योतिरेकं तपन्तम् ।
सहस्ररश्मिश्शतधा वर्तमानः प्राणः प्रजानाम् -
मुदयत्येष सूर्यः ॥ ८ ॥

ವಿಶ್ವರೂಪಂ ಹರಿಣಂ ಜಾತವೇದಸಂ ಪರಾಯಣಂ
ಜ್ಯೋತಿರೇಕಂ ತಪನ್ತಮ್ ।
ಸಹಸ್ರರಶ್ಮಿಃ ಶತಧಾ ವರ್ತಮಾನಃ ಪ್ರಾಣಃ ಪ್ರಜಾನಾ -
ಮುದಯತ್ಯೇಷ ಸೂರ್ಯಃ ॥

## ಪ್ರತಿಪದಾರ್ಥ

**ವಿಶ್ವರೂಪಮ್** - ಪ್ರಪಂಚವೇ ಶರೀರವಾಗಿ ಉಳ್ಳ, **ಜಾತವೇದಸಮ್** - ವೇದಗಳಿಗೆ ಜನಕನಾದ, **ಪರಾಯಣಮ್** - ಬ್ರಹ್ಮಾದಿಗಳಿಗೂ ಪ್ರಾಪ್ಯನೆನಿಸಿದ, **ಜ್ಯೋತಿಃ** - ಜ್ಯೋತಿರ್ಮಯರಾದ ಸೂರ್ಯಾದಿಗಳಿಗೂ ಪ್ರಕಾಶಕನಾದ, **ಏಕಮ್** - ಸಮವೂ ಅಧಿಕವೂ ಆದ ಬೇರೊಂದು ವಸ್ತುವಿಲ್ಲದ,

೧· ಭೋಕ್ತೃರೂಪಃ ಸನ್ ಆದಿತ್ಯರೂಪಃ ಸನ್ನುದೇತಿ... — ಆನಂದಭಾಷ್ಯ

೨· ಯಸ್ತು ವೈಶ್ವಾನರೋ ಜಾಠರಾಗ್ನಿಃ ಸೋऽಪ್ಯಾದಿತ್ಯಾನುಗ್ರಾಹ್ಯಪ್ರಾಣಾನುಗ್ರಾಹ್ಯಃ — ಸುಬೋಧಿನೀ·

**ತಪನ್ತಮ್** - ಜಾಠರಾಗ್ನಿ, ಸೂರ್ಯ ಮುಂತಾದವುಗಳ ಮೂಲಕ ಜಗತ್ತೆಲ್ಲವನ್ನು ಕಾಯಿಸುವ, **ಹರಿಣಮ್** - ಶರಣರ ದುಃಖವನ್ನು ಬಗೆಹರಿಸುವ ಹರಿಯನ್ನು, **ವರ್ತಮಾನಃ** - (ಶರೀರದಂತೆ) ವಿಧೇಯತೆಯಿಂದ ಅನುಸರಿಸುವ, **ಸಹಸ್ರರಶ್ಮಿಃ** - ಕಿರಣಗಳಂತೆ ಅನೇಕ ವಿಷಯಗಳ ಬಗ್ಗೆ ತಿಳುವಳಿಕೆಯುಳ್ಳ, **ಸೂರ್ಯಃ** - ದೇಹದಿಂದ ದೇಹಕ್ಕೆ ಹೋಗಬಲ್ಲ, **ಏಷಃ** - ಹಿಂದೆ ಹೇಳಿದ, **ಪ್ರಜಾನಾಮ್ ಪ್ರಾಣಃ** - ಚರ-ಸ್ಥಿರಗಳನ್ನು ಧರಿಸುವ ಪ್ರಾಣನು ಅರ್ಥಾತ್ - ಜೀವನು, **ಶತಧಾ**- ದೇವ, ಮನುಷ್ಯ ಮುಂತಾಗಿ ನಾನಾ ಬಗೆಯ ದೇಹದ ಅಭಿಮಾನದಿಂದ ಸುಷುಪ್ತಿ ಸ್ಥಾನದಿಂದ, **ಉದಯತೇ** - ಮೇಲೇಳುತ್ತಾನೆ·

## ತಾತ್ಪರ್ಯ

ಪರಮಾತ್ಮನು ಸರ್ವರಿಗೂ ಪರಮ ಪ್ರಾಪ್ಯನಾದವನು· ಇವನು ವಿಶ್ವವನ್ನು ಶರೀರವಾಗಿ ಪಡೆದಿದ್ದಾನೆ ಜ್ಯೋತಿ ಸ್ವರೂಪರಾದ ಸೂರ್ಯ ಮುಂತಾದವರಿಗೂ ಪ್ರಕಾಶಕನು- ಇವನಿಗೆ ಸಮವೂ, ಅಧಿಕವೂ ಆದ ವಸ್ತು ಇಲ್ಲವೇ ಇಲ್ಲ · ಜಾಠರಾಗ್ನಿ, ಸೂರ್ಯ ಮುಂತಾದವುಗಳ ಮುಖಾಂತರ ಜಗತ್ತಿನಲ್ಲಿ ತಾಪವನ್ನು ಉಂಟುಮಾಡುತ್ತಾನೆ· ಆದರೆ ಆಶ್ರಿತರ ದುಃಖವನ್ನು ತಾನೇ ನಿವಾರಿಸುತ್ತಾನೆ·

ಇಂತಹ ಮಹಾಮಹಿಮನಾದ ಪರಮಾತ್ಮನಿಗೆ ಜೀವನು ಶರೀರವಾಗಿ ಅಧೀನನಾಗಿರುವನು· ಈ ಜೀವನು ದೇಹದಿಂದ ದೇಹಕ್ಕೆ ಹೋಗುತ್ತಾನೆ · ಅನೇಕ ದೇಹಗಳನ್ನು ಧರಿಸುತ್ತಾನೆ · ಇವನು ಶರೀರಾಭಿಮಾನದೊಂದಿಗೇ ಸುಷುಪ್ತಿಯ ಸ್ಥಾನದಿಂದ ಮೇಲೇಳುತ್ತಾನೆ · ಸೃಷ್ಟಿಯ ಸಮಯದಲ್ಲಿ ದೇವ, ಮನುಷ್ಯ ಮುಂತಾದ ರೂಪಗಳನ್ನು ಹೊಂದುತ್ತಾನೆ·

## ರಂಗರಾಮಾನುಜಭಾಷ್ಯ

**ವಿಶ್ವರೂಪಂ ಹರಿಣಮಿತಿ** । **ವಿಶ್ವರೂಪಂ** - ಸರ್ವಶರೀರಮ್ । ಜಾತಾನಿ ವೇದಾಂಸಿ ವೇದಾಃ, ಯಸ್ಮಾತ್ ಸಃ **ಜಾತವೇದಾಃ**, 'ಪ್ರಜ್ಞಾ ಚ ತಸ್ಮಾತ್ ಪ್ರಸೃತಾ ಪುರಾಣೀ' ಇತಿ ಸರ್ವಜ್ಞಾನೋತ್ಪಾದಕಮ್ । **ಪರಾಯಣಮ್** ಪರಂ (ಪರಮ) ಪ್ರಾಪ್ಯಮ್ **ಜ್ಯೋತಿಃ** ೧ಸರ್ವ- ಪ್ರಕಾಶಕದೀಪ್ತಿಮಂತಮ್ । **ಏಕಮ್** - ಅದ್ವಿತೀಯಮ್ । **ತಪಂತಮ್** - ಜಾಠರಾಗ್ನ್ಯಾದಿ- ರೂಪೇಣ ತಪಂತಮ್ ।

'ಸಂತಾಪಯತಿ ಸ್ವಂ ದೇಹಮಾಪಾದತಲಮಸ್ತಕಮ್' ।
ಅಹಂ ವೈಶ್ವಾನರೋ ಭೂತ್ವಾ ಪ್ರಾಣಿನಾಂ ದೇಹಮಾಶ್ರಿತಃ ।
ಪ್ರಾಣಾಪಾನಸಮಾಯುಕ್ತಃ ಪಚಾಮ್ಯನ್ನಂ ಚತುರ್ವಿಧಮ್ ॥'

ಇತಿ ಶ್ರುತಿಸ್ಮೃತಿಭ್ಯಾಮ್ । **ಹರಿಣಮ್** - ಹರಿಮಿತ್ಯರ್ಥಃ । ಹರಿಶಬ್ದಸ್ಯ ನಾಂತತ್ವಂ

---

೧· 'ತದ್ದೇವಾನಾಂ ಜ್ಯೋತಿಷಾಂ ಜ್ಯೋತಿಃ' ಎಂಬ ವಾಕ್ಯದಂತೆ ಪ್ರಕಾಶ ಕೊಡುವ ಸೂರ್ಯಾದಿಗಳಿಗೇ ಪ್ರಕಾಶಕನಾದವನು ಎಂಬ ಅರ್ಥವು ಜ್ಯೋತಿ ಶಬ್ದದಿಂದ ಬರುತ್ತದೆ·

ಛಾಂಧಸಮ್ । **ವರ್ತಮಾನಃ** - ಅನುವರ್ತಮಾನಃ । ತದ್ವಿಧೇಯತಯಾ ತಚ್ಛರೀರಭೂತ ಇತಿ ಯಾವತ್ । **ಸಹಸ್ರರಶ್ಮಿಃ** - ನಾನಾವಿಧವಿಷಯವಿಷಯಕಜ್ಞಾನವಾನ್ । **ಪ್ರಜಾನಾಮ್** ಸ್ಥಾವರಜಂಗಮಾತ್ಮಕಾನಾಂ ಪ್ರಾಣಾನಾಂ **ಪ್ರಾಣಃ** ಧಾರಕಃ **ಸೂರ್ಯಃ** ಸೂರ್ಯವತ್ ಪ್ರಕಾಶಕಃ। **ಏಷಃ** - ಜೀವಃ **ಶತಧಾ** - ದೇವಮನುಷ್ಯಾದಿನಾನಾವಿಧದೇಹಾತ್ಮಾಭಿಮಾನಶಾಲಿತಯಾ **ಉದಯತಿ** - ಸುಷುಪ್ತಿಸ್ಥಾನಾದುದಯತೇ, ಸರ್ಗಕಾಲೇ ಉದಯತೇ ಇತಿ ವಾಽರ್ಥಃ ॥

## ಅನುವಾದ

**ವಿಶ್ವರೂಪಂ ಇತಿ** । **ವಿಶ್ವರೂಪಮ್** - ಎಲ್ಲವೂ ಶರೀರವಾಗಿ ಸಂದವನನ್ನು, ಯಾರಿಂದ ಜ್ಞಾನಗಳು ಹುಟ್ಟಿರುವುವೋ ಅವನು ಜಾತವೇದಾಃ (**ತಮ್** - ಅವನನ್ನು) 'ಪ್ರಜ್ಞಾ ಚ ತಸ್ಮಾತ್ ಪ್ರಸೃತಾ ಪುರಾಣೀ' ಅವನಿಂದ ಪ್ರಾಚೀನವಾದ ಜ್ಞಾನವು ಪಸರಿಸಿದೆ ಎಂಬ ಮಾತಿನಂತೆ ಎಲ್ಲ ತಿಳುವಳಿಕೆಗಳ ಉತ್ಪಾದಕನನ್ನು, **ಪರಾಯಣಮ್** - ಹೊಂದಲು ಅರ್ಹನಾದವನನ್ನು, **ಜ್ಯೋತಿಃ** - ಎಲ್ಲವನ್ನು ಬೆಳಗುವ ಕಾಂತಿಯುಳ್ಳವನನ್ನು, **ಏಕಮ್** - ಇನ್ನೊಂದಿಲ್ಲದವನನ್ನು, **ತಪಂತಮ್**- 'ಸಂತಾಪಯತಿ ಸ್ವಂ ದೇಹಮಾಪಾದತಲಮಸ್ತಕಮ್' ಅಡಿಯಿಂದ ಮುಡಿಯವರೆಗೆ ತನ್ನ ದೇಹವನ್ನು ಕಾಯಿಸುತ್ತಿರುವವನನ್ನು ಮತ್ತು 'ಅಹಂ ವೈಶ್ವಾನರೋ ಭೂತ್ವಾ ಪ್ರಾಣಿನಾಂ ದೇಹಮಾಶ್ರಿತಃ । ಪ್ರಾಣಾಪಾನಸಮಾಯುಕ್ತಃ ಪಚಾಮ್ಯನ್ನಂ ಚತುರ್ವಿಧಮ್' ॥ ವೈಶ್ವಾನರನಾಗಿ ಪ್ರಾಣಿಗಳ ದೇಹವನ್ನು ಆಶ್ರಯಿಸಿದ ನಾನು ಪ್ರಾಣ, ಅಪಾನಗಳಿಂದ ಕೂಡಿ ನಾಲ್ಕು ರೀತಿಯ ಆಹಾರಗಳನ್ನು ಜೀರ್ಣಿಸುತ್ತೇನೆ ಎಂಬ ಶ್ರುತಿಸ್ಮೃತಿ ವಾಕ್ಯಗಳ ಮೇರೆಗೆ ಜಾಠರಾಗ್ನಿಯ ರೂಪದಲ್ಲಿ ತಾಪವನ್ನುಂಟು ಮಾಡುವವನನ್ನು **ಹರಿಮ್** - ಹರಿಯನ್ನು ಎಂದರ್ಥ · ಹರಿ ಶಬ್ದವು ನಕಾರಾಂತವಾಗಿರುವುದು ಛಾಂದಸವು · **ವರ್ತಮಾನಃ** - ಅನುಸರಿಸುವವನು · ಅವನಿಗೆ (ಪರಮಾತ್ಮನಿಗೆ) ವಿಧೇಯನಾಗಿರುವುದರಿಂದ ಅವನ ಶರೀರವಾಗಿರುವವನು ಎಂದು ಅಭಿಪ್ರಾಯ · **ಸಹಸ್ರರಶ್ಮಿಃ** - ಅನೇಕ ವಿಷಯಗಳ ಬಗ್ಗೆ ತಿಳುವಳಿಕೆಯುಳ್ಳವನು · **ಪ್ರಜಾನಾಮ್** - ಸ್ಥಾವರ-ಜಂಗಮ ಜೀವಿಗಳನ್ನು **ಪ್ರಾಣಃ** - ಧರಿಸುವವನು, **ಸೂರ್ಯಃ** - ಸೂರ್ಯನಂತೆ ಪ್ರಕಾಶಿಸುವವನು · **ಏಷಃ** - ಈ ಜೀವನು, **ಶತಧಾ** - ದೇವ, ಮನುಷ್ಯ ಮೊದಲಾದ ಅನೇಕ ಬಗೆಯ ದೇಹಗಳಲ್ಲಿ ಆತ್ಮಾಭಿಮಾನವುಳ್ಳವನಾಗಿ ಸುಷುಪ್ತಿಸ್ಥಾನದಿಂದ, **ಉದಯತೇ** - ಮೇಲೇಳುತ್ತಾನೆ· ಅಥವಾ ಸೃಷ್ಟಿಯ ಸಮಯದಲ್ಲಿ ಜನಿಸುತ್ತಾನೆ·

## ಭಾಷ್ಯಸಾರ

ಚರ ಹಾಗೂ ಸ್ಥಿರವಾದ ಜೀವಿಗಳನ್ನು ಪೋಷಿಸುವ ಆದಿತ್ಯನೇ ಭೋಕ್ತೃ· ಇವನಲ್ಲಿ ನಾನಾ ಬಗೆಯ ವಿಷಯಗಳ ಬಗ್ಗೆ ತಿಳುವಳಿಕೆಯು (ಧರ್ಮಭೂತಜ್ಞಾನ) ಉಂಟಾಗುತ್ತದೆ · ಇವನು ಸಕಲ ಚಿದಚಿಚ್ಛರೀರಕನೂ, ವಿವಿಧ ಜ್ಞಾನಗಳ ಉತ್ಪಾದಕನೂ, ಸರ್ವೋತ್ಕೃಷ್ಟ ಪ್ರಾಪ್ಯಸ್ವರೂಪನೂ, ಪ್ರಕಾಶ

ಕೊಡುವ ಸೂರ್ಯಾದಿಗಳಿಗೇ ಪ್ರಕಾಶಕನೂ, ಅದ್ವಿತೀಯನೂ, ಪ್ರಪಂಚಕ್ಕೆ ಶಾಖವನ್ನು ಒದಗಿಸುವವನೂ ಆದ ಪರಮಾತ್ಮನನ್ನು ಅನುಸರಿಸುವವನಾಗಿದ್ದಾನೆ· ಅಂತಹ ಪರಮಾತ್ಮನಿಗೆ ವಿಧೇಯನಾಗಿದ್ದರಿಂದಲೇ ಅವನಿಗೆ ಶರೀರವಾಗಿ ಸಂದಿದ್ದಾನೆ· ಇವನು ಸೃಷ್ಟಿಯ ಸಮಯದಲ್ಲಿ ಅಥವಾ ಸುಷುಪ್ತಿಯ ನಂತರ ದೇಹಾಭಿಮಾನದಿಂದ ಮೇಲೇರಿ ಬರುತ್ತಾನೆ· ಉದಯಿಸುತ್ತಾನೆ· ಇದೇ ರೀತಿ ಸಹಸ್ರರಶ್ಮಿಯಾದ ಸೂರ್ಯನೂ ಸಹ ದಿನವೂ ಉದಯಿಸುತ್ತಾನೆ· [೧]ಭೋಕ್ತೃವಾದ ಜೀವನಿಗೂ ಸೂರ್ಯನಿಗೂ ಇರುವ ಸಾಮ್ಯವನ್ನೇ ಇಲ್ಲಿಯೂ ತಿಳಿಸಲಾಗಿದೆ· ಏಕೆಂದರೆ ಅವರಿಬ್ಬರೂ ಪರಮಾತ್ಮನಿಗೆ ಅಧೀನರು· ಅವನನ್ನೇ ಅನುಸರಿಸುವವರು·

ಆದಿತ್ಯನೂ ಪರಮಾತ್ಮನೇ· ಆದ್ದರಿಂದ ವಿಶ್ವರೂಪ ಮುಂತಾದವು ಅವನಿಗೂ ಸಲ್ಲುತ್ತವೆ· ಸೂರ್ಯನು ವಿಶ್ವವನ್ನು ಬೆಳಗುವ ಸಾಮರ್ಥ್ಯವುಳ್ಳವನಾದುದರಿಂದ ವಿಶ್ವರೂಪನು· ಇವನು ನಾನಾ [೨]ಕಿರಣಗಳುಳ್ಳವನು· ಆದ್ದರಿಂದಲೇ ಹರಿಯೆಂದು ಇವನಿಗೆ ಹೆಸರು· 'ಉದುತ್ಯಂ ಜಾತವೇದಸಂ ದೇವಂ ವಹಂತಿ ಕೇತವ' ಎಂದು ವೇದವಾಕ್ಯವೇ ಆದಿತ್ಯನನ್ನು ಜಾತವೇದಸ ಎಂಬುದಾಗಿ ಸಾರಿದೆ· ಇವನು ಉನ್ನತವಾದ ಲೋಕಕ್ಕೆ ಹೋಗಲು ದ್ವಾರವಾಗಿದ್ದವನು· ಇವನೇ [೩]ಅದ್ವಿತೀಯನಾದ ಜ್ಯೋತಿಯು· ಕಾರಣ ಉಳಿದ ಲೌಕಿಕ ದೀಪಗಳು ಇವನಿಗಿಂತಲೂ ಕೀಳಾಗಿವೆ· ಇವನು ಶಾಖವನ್ನೊದಗಿಸುವ ಶಕ್ತಿ· [೪]ಇವನನ್ನು ಆತ್ಮಜ್ಞಾನಿಗಳು ಸೇರುತ್ತಾರೆ· ಇಂತಹ ಸಹಸ್ರರಶ್ಮಿಯಾದ ಸೂರ್ಯನು ಪ್ರತಿದಿನವೂ ಮೂಡಣದಲ್ಲಿ ಮೂಡಿ ಬರುತ್ತಾನೆ·

## ಮಂತ್ರ - ೯

संवत्सरो वै प्रजापतिः । तस्यायने दक्षिणं
चोत्तरं च । तत् ये ह वै तदिष्टापूर्ते
कृतमित्युपासते, ते चान्द्रमसमेव
लोकमभिजयन्ते ; त एव पुनरावर्तन्ते ।
तस्मादेते ऋषयः प्रजाकामा दक्षिणं
प्रतिपद्यन्ते । एष ह वै रयिर्यः पितृयाणः ॥ ९ ॥

---

೧· ಅನೇನಾಪಿ ಭೋಕ್ತುರಾದಿತ್ಯ - ಶಬ್ದವ್ಯಪದೇಶೇ ಸಾದೃಶ್ಯರೂಪಂ ನಿಮಿತ್ತಮುಕ್ತಮಿತಿ ಧ್ಯೇಯಮ್ । ಆದಿತ್ಯಸ್ಯಾಪಿ ಪರಮಾತ್ಮಾನುವರ್ತಿತ್ವಾತ್ - ಆನಂದಭಾಷ್ಯ·

೨· ಹರಯೋ ರಶ್ಮಯೋ ಯಸ್ಯ - ಸುಬೋಧಿನೀ·

೩· ಅದ್ವಿತೀಯಂ ಜ್ಯೋತಿಃ, ಇತರೇಷಾಂ ಲೌಕಿಕಾನಾಂ ಜ್ಯೋತಿಷಾಂ ಇತೋಽಪ್ಯಪಕೃಷ್ಟತ್ವಾತ್ - ಸುಬೋಧಿನೀ·

೪· ಅಭಿಗಚ್ಛಂತ್ಯಾತ್ಮವಿದಃ ಇತಿ ಶೇಷಃ - ಸುಬೋಧಿನೀ·

ಸಂವತ್ಸರೋ ವೈ ಪ್ರಜಾಪತಿಃ ತಸ್ಯಾಯನೇ ದಕ್ಷಿಣಂ
ಚೋತ್ತರಂ ಚ । ತತ್ ಯೇ ಹ ವೈ ತದಿಷ್ಟಾಪೂರ್ತೇ
ಕೃತಮಿತ್ಯುಪಾಸತೇ, ತೇ ಚಾಂದ್ರಮಸಮೇವ
ಲೋಕಮಭಿಜಯಂತೇ, ತ ಏವ ಪುನರಾವರ್ತಂತೇ ।
ತಸ್ಮಾದೇತೇ ಋಷಯಃ ಪ್ರಜಾಕಾಮಾ ದಕ್ಷಿಣಂ
ಪ್ರತಿಪದ್ಯಂತೇ । ಏಷ ಹ ವೈ ರಯಿರ್ಯಃ ಪಿತೃಯಾಣಃ ॥

## ಪ್ರತಿಪದಾರ್ಥ

**ಸಂವತ್ಸರೋ ವೈ** - ವರ್ಷವೆಂಬ ಕಾಲವೇ, **ಪ್ರಜಾಪತಿಃ** - ಪರಮಾತ್ಮನು, **ತಸ್ಯ** - ಆ ಸಂವತ್ಸರದಲ್ಲಿ, **ದಕ್ಷಿಣಂ ಚ ಉತ್ತರಂ ಚ** - ದಕ್ಷಿಣ ಹಾಗೂ ಉತ್ತರ ಎಂಬ, **ಅಯನೇ** - ಎರಡು ಅಯನಗಳು· (**ಸ್ತಃ** - ಇವೆ· ) **ಯೇ** - ಯಾರು, **ತತ್** - ಪ್ರಸಿದ್ಧವಾದ, **ಇಷ್ಟಾಪೂರ್ತೇ** - ಯಾಗ ಮೊದಲಾದ ವೈದಿಕ ಕರ್ಮಗಳನ್ನು (ಇಷ್ಟ) ಬಾವಿ, ಕೊಳ ಮುಂತಾದವುಗಳನ್ನು ತೋಡಿಸುವ ಪುಣ್ಯ ಕಾರ್ಯಗಳನ್ನೂ, (ಪೂರ್ತ) **ಕೃತಂ** - ಪ್ರಯೋಜನಾಭಿಲಾಷೆಯಿಂದಲೇ ಮಾಡಲಾಗಿದೆಯೆಂದು, **ಉಪಾಸತೇ** - ಕರ್ಮಾನುಷ್ಠಾನವನ್ನು ಮಾಡುತ್ತಾರೆಯೋ, **ತೇ** - ಅವರು, **ಚಾಂದ್ರಮಸಮೇವ ಲೋಕಮ್** - ಚಂದ್ರಲೋಕವನ್ನೇ, **ಅಭಿಜಯಂತೇ** - ಹೊಂದುತ್ತಾರೆ· **ತೇ ಏವ** - ಅವರೇ, **ಪುನರಾವರ್ತಂತೇ** - (ಪುಣ್ಯವು ಕ್ಷೀಣಿಸಲು) ಭೂಮಿಗೆ ಹಿಂದಿರುಗುತ್ತಾರೆ· **ತಸ್ಮಾತ್**- ಆದ್ದರಿಂದ, **ಪ್ರಜಾಕಾಮಾಃ** - ಸ್ವರ್ಗಾದಿ ಅಲ್ಪ ಪ್ರಯೋಜನಗಳ ಅಭಿಲಾಷೆಯುಳ್ಳ, **ಏತೇ ಋಷಯಃ** - ಈ ಋಷಿಗಳು, **ದಕ್ಷಿಣಂ** - ಧೂಮಾದಿ ಮಾರ್ಗದಿಂದ ಪಿತೃಲೋಕವನ್ನು, **ಪ್ರತಿಪದ್ಯಂತೇ**- ಹೊಂದುತ್ತಾರೆ **ಏಷ ಹ ವೈ ಪಿತೃಯಾಣಃ** - ಈ ಪಿತೃಯಾನವೇ, **ರಯಿಃ** - ವಿಷಯ ಸುಖವನ್ನು ಕೊಡುವಂತಹದು·

## ತಾತ್ಪರ್ಯ

ಪರಮಾತ್ಮನು ಸಂವತ್ಸರ ಸ್ವರೂಪನು· ಈ ಸಂವತ್ಸರದಲ್ಲಿ ದಕ್ಷಿಣ ಮತ್ತು ಉತ್ತರ ಎಂಬ ಅಯನಗಳಿವೆ· ಅಲ್ಪಾಸ್ಥಿರ ಫಲಗಳಲ್ಲಿ ಅಭಿಲಾಷೆಯುಳ್ಳ ಜನರು ಯಜ್ಞಯಾಗಾದಿಗಳನ್ನು ನೆರವೇರಿಸುತ್ತಾರೆ· ಇದರಿಂದ ಚಂದ್ರಲೋಕವನ್ನು ಹೊಂದುತ್ತಾರೆ· ಆದರೆ ಚಂದ್ರಲೋಕವನ್ನು ಸೇರಿದ ಮೇಲೆ ನಿರಂತರವಾಗಿ ಪುಣ್ಯಫಲವನ್ನು ಅನುಭವಿಸುತ್ತ ಪುಣ್ಯವು ವ್ಯಯವಾಗಲು, ತಿರುಗಿ ಮರ್ತ್ಯಲೋಕಕ್ಕೇ ಬರುತ್ತಾರೆ· ಇಂತಹ ಋಷಿಗಳು ಧೂಮ ಮೊದಲಾದ ಮಾರ್ಗಗಳ ಮುಖಾಂತರ ಪಿತೃಲೋಕಕ್ಕೆ ತೆರಳುತ್ತಾರೆ· ಪಿತೃಯಾನವೇ ದಕ್ಷಿಣಾಯನ ಮಾರ್ಗ· ಇದು ಇಂದ್ರಿಯ ಸುಖವನ್ನು ಕೊಡುತ್ತದೆ· ಇದು ರಯಿಯೇ·

## ರಂಗರಾಮಾನುಜಭಾಷ್ಯ

ಏವಂ ಸೂಕ್ಷ್ಮಪ್ರಕೃತಿಜೀವಶರೀರಕಸ್ಯ ಪ್ರಜಾಪತೇಃ, ರಯಿಪ್ರಾಣಶಬ್ದಿತಪ್ರಕೃತಿಪುರುಷರೂಪ-ಭೋಗ್ಯಭೋಕ್ತ್ರಾತ್ಮನಾ ವಿಭಾಗಮುಪವರ್ಣ್ಯ ತಸ್ಯೈವ ಪರಮಾತ್ಮನಃ (ಅಖಂಡಕಾಲರೂಪೇಣ ಸ್ಥಿತಸ್ಯ) ಖಂಡಕಾಲರೂಪೇಣ ವಿಭಾಗಂ ಪ್ರದರ್ಶಯಿಷ್ಯನ್ ಚಿತ್ತಾವತರಣಾಯ ವಾ ಉಪಾಸನಾರ್ಥಂ ವಾ ಸಂವತ್ಸರಾಖ್ಯಪ್ರಜಾಪತೇಃ ದಕ್ಷಿಣೋತ್ತರಾಯಣಾತ್ಮಕಂ ರಯಿಪ್ರಾಣರೂಪಂ ವಿಭಾಗಮ್, ತಥಾ ಮಾಸಾಖ್ಯಪ್ರಜಾಪತೇಃ ರಯಿಪ್ರಾಣಶಬ್ದಿತಂ ಕೃಷ್ಣಶುಕ್ಲಪಕ್ಷಾತ್ಮಕಂ ವಿಭಾಗಮ್, ಅಹೋರಾತ್ರಾತ್ಮಕಕಾಲರೂಪಪ್ರಜಾಪತೇಃ ರಯಿಪ್ರಾಣಾತ್ಮಕಂ ರಾತ್ರ್ಯಹರಾತ್ಮಕಂ ವಿಭಾಗಮ್, ತತ್ಪ್ರಸಂಗೇನ ರಯಿಶಬ್ದಾರ್ಥದಕ್ಷಿಣಾಯನಕೃಷ್ಣಪಕ್ಷರಾತ್ರ್ಯಪೇಕ್ಷಯಾ ಪ್ರಾಣ-ಶಬ್ದಾರ್ಥಭೂತೋತ್ತರಾಯಣ ಶುಕ್ಲಪಕ್ಷ ದಿವಸಾನಾಮುತ್ಕರ್ಷಂ ಚ ವಕ್ತುಮಾರಭತೇ - **ಸಂವತ್ಸರೋ ವೈ ಇತಿ** । ತಸ್ಯ ಸಂವತ್ಸರಾಖ್ಯಕಾಲರೂಪಸ್ಯ ಪ್ರಜಾಪತೇರ್ದಕ್ಷಿಣೋತ್ತರಶಬ್ದಿತೇ ಅಯನೇ ಸೂರ್ಯಗತ್ಯಾಧಾರಭೂತೇ ದ್ವೇ ರೂಪೇ ಸ್ತಃ । **ತದ್ಯೇ ಹ ವೈ ಇತಿ** । ಹ ವಾ ಇತಿ ಪ್ರಸಿದ್ಧೌ; ಸ್ಮರಣೇ ವಾ । ಅಯಮರ್ಥಃ - **ತತ್** - ತತ್ರ **ಯೇ** ಪುರುಷಾಃ ಇಷ್ಟಾಪೂರ್ತೇ ದತ್ತಮಿತಿ **ತತ್** ಕರ್ಮೋಪಾಸತೇ ಇತ್ಯರ್ಥಃ । 'ಯ ಇಮೇಗ್ರಾಮೇ ಇಷ್ಟಾಪೂರ್ತೇ ದತ್ತಮಿತ್ಯುಪಾಸತೇ' ಇತಿ ಶ್ರುತ್ಯಂತರೈಕಾರ್ಥ್ಯಾತ್ ಕೃತಶಬ್ದೋ ದತ್ತಪರಃ । **ಇಷ್ಟಮ್** -- ಯಾಗಾದಿ, ಶ್ರೌತಮ್ । **ಪೂರ್ತಮ್** — ಖಾತಾದಿ । ಇತಿ ಶಬ್ದಃ ಪ್ರಕಾರವಚನಃ । ಯಾಗದಾನವಾಪೀಕೂಪಾದಿಕಂ ಕರ್ಮ ಯೇಽನುತಿಷ್ಠಂತಿ, ತೇ ಚಂದ್ರಮ-ಸ್ಸಂಬಂಧಿನಂ **ಲೋಕಮಭಿಜಯಂತೇ** -- ಅಭಿಜಯಂತಿ, ಪ್ರಾಪ್ನುವಂತಿ । ತ ಏವ ಪುನರಾವರ್ತಂತೇ; ನ ತ್ವಾತ್ಮೋಪಾಸಕಾ ಉತ್ತರಮಾರ್ಗೇಣ ಗತಾ ಇತ್ಯರ್ಥಃ ॥ **ತಸ್ಮಾದೇತೇ ಇತಿ**। ತಸ್ಮಾದ್ಧೇತೋಃ, ಏತೇ ಕರ್ಮಿಣಃ ಪ್ರಜಾಸ್ವರ್ಗಾದಿಲಕ್ಷಣಕ್ಷುದ್ರಫಲಕಾಮಾಃ **ಋಷಯಃ** -- ಕ್ಷುದ್ರಫಲದ್ರಷ್ಟಾರಃ ದಕ್ಷಿಣಂ ಪಂಥಾನಂ ಪಿತೃಯಾಣಶಬ್ದಿತಂ ಪ್ರತಿಪದ್ಯಂತೇ । ಏಷ ಏವ ಪಿತೃಯಾಣಃ **ರಯಿಃ** -- ಅನ್ನಪ್ರಧಾನೋ ವೈಷಯಿಕಭೋಗಾತ್ಮಕ ಇತಿ ಯಾವತ್ । ಯದ್ಯಪಿ, 'ಧೂಮೋ ರಾತ್ರಿಸ್ತಥಾ ಕೃಷ್ಣಃ' ಇತ್ಯಾದಿ ಪ್ರಮಾಣಪ್ರತಿಪನ್ನಃ ಪುರಾಣೇಷು ದಕ್ಷಿಣಮಾರ್ಗ-ನಿರ್ದಿಷ್ಟಃ ಧೂಮಾದಿಶ್ಚಂದ್ರಾಂತಃ ಪಿತೃಯಾಣೋಽ(ಪ್ಯ)ನ್ಯಃ । ಸಂವತ್ಸರಾವಯವಭೂತ-ಷಣ್ಮಾಸಾತ್ಮ ದಕ್ಷಿಣಾಯನ ನಿರ್ದಿಷ್ಟೋಽಪ್ಯನ್ಯಃ । ತಥಾಪಿ ದಕ್ಷಿಣಾಯನ ಶಬ್ದೇನ ದ್ವಯೋರಪಿ ವ್ಯವಹ್ರಿಯಮಾಣತ್ವಾತ್ ಕಾಲಮಾರ್ಗಯೋರೇಕೀಕೃತ್ಯ ವ್ಯವಹಾರ ಉಪಪದ್ಯತೇ ಇತಿ ದ್ರಷ್ಟವ್ಯಮ್॥

## ಅನುವಾದ

ಹೀಗೆ ಸೂಕ್ಷ್ಮವಾದ ಪ್ರಕೃತಿ ಮತ್ತು ಜೀವರನ್ನು ದೇಹವಾಗಿ ಹೊಂದಿದ ಪ್ರಜಾಪತಿಯಲ್ಲಿ, ರಯಿ - ಪ್ರಾಣ ಶಬ್ದಗಳಿಂದ ಕರೆಯಲಾದ ಪ್ರಕೃತಿ-ಪುರುಷರು, ಭೋಗ್ಯ-ಭೋಕ್ತೃಗಳೆಂಬ ವಿಭಾಗವನ್ನು ವಿವರಿಸಿ,

(ಅಖಂಡಕಾಲಸ್ವರೂಪನಾದ) ಅದೇ ಪರಮಾತ್ಮನ ಖಂಡಾತ್ಮಕಕಾಲರೂಪದ ವಿಭಾಗವನ್ನು ತೋರಿಸು-ವವನಾಗಿ, ಮನಸ್ಸನ್ನು ತೊಡಗಿಸುವುದಕ್ಕಾಗಿ (ಚಿತ್ತಾವತರಣಕ್ಕಾಗಿ) ಅಥವಾ ಉಪಾಸನೆಗಾಗಿ ಸಂವತ್ಸರಾತ್ಮಕ ಪ್ರಜಾಪತಿಯಲ್ಲಿ ದಕ್ಷಿಣಾಯನ, ಉತ್ತರಾಯಣಗಳೆಂಬ ರಯಿಪ್ರಾಣಗಳ ವಿಭಾಗವನ್ನೂ, ಹಾಗೆಯೇ ಮಾಸಾತ್ಮಕಪ್ರಜಾಪತಿಯಲ್ಲಿ ರಯಿಪ್ರಾಣ ಶಬ್ದಗಳಿಂದ ಗುರುತಿಸುವ ಕೃಷ್ಣಪಕ್ಷ ಮತ್ತು ಶುಕ್ಲಪಕ್ಷಗಳೆಂಬ ವಿಭಾಗವನ್ನೂ, ದಿವಸವೆಂಬ ಪ್ರಜಾಪತಿಯಲ್ಲಿ ರಯಿಪ್ರಾಣಗಳೆಂಬ ರಾತ್ರಿ - ಹಗಲುಗಳ ವಿಭಾಗವನ್ನೂ, ಅದೇ ಸಂದರ್ಭದಲ್ಲಿ ರಯಿಪದಾರ್ಥಗಳಾದ ದಕ್ಷಿಣಾಯನ ಕೃಷ್ಣಪಕ್ಷ ಹಾಗೂ ರಾತ್ರಿಗಳಿಗಿಂತ ಪ್ರಾಣಪದಾರ್ಥಗಳಾದ ಉತ್ತರಾಯಣ ಶುಕ್ಲಪಕ್ಷ ಹಾಗೂ ಹಗಲುಗಳೇ ಉತ್ಕೃಷ್ಟ ಎಂತಲೂ ನಿರೂಪಿಸಲು ಆರಂಭಿಸುತ್ತಾನೆ -- **ಸಂವತ್ಸರೋ ಹ ವೈ ಇತಿ । ತಸ್ಯ** - ವರ್ಷಾತ್ಮಕ-ಕಾಲರೂಪದಲ್ಲಿರುವ ಪ್ರಜಾಪತಿಗೆ, ದಕ್ಷಿಣ ಮತ್ತು ಉತ್ತರ ಎಂಬ ಹೆಸರುಳ್ಳ **ಅಯನೇ** - ಸೂರ್ಯಗತಿಯೇ ಆಧಾರವಾಗಿರುವ ಎರಡು ರೂಪಗಳು ಇವೆ·

**ತದ್ಯೇ ಹ ವೈ ಇತಿ ।** 'ಹ' ಮತ್ತು 'ವಾ' ಶಬ್ದಗಳು ಪ್ರಸಿದ್ಧಿ ಅಥವಾ ಸ್ಮೃತಿ ಎಂಬ ಅರ್ಥದಲ್ಲಿ (ಪ್ರಯೋಗಿಸಲ್ಪಟ್ಟಿವೆ) · ಇದು ಅಭಿಪ್ರಾಯ - **ತತ್** - ಅಲ್ಲಿಯೇ ಯಾವ ಜನರು ಇಷ್ಟ ಮತ್ತು ಪೂರ್ತಗಳನ್ನು 'ದತ್ತಮ್ - ಕೊಡಲ್ಪಟ್ಟಿದೆ' ಎಂದು ತತ್ - ಕರ್ಮವನ್ನು ಉಪಾಸಿಸುವರೋ ಎಂದು ಅರ್ಥ · 'ಕೃತ' ಪದವು, 'ಯ ಇಮೇ ಗ್ರಾಮೇ ಇಷ್ಟಾಪೂರ್ತೇ ದತ್ತಮಿತ್ಯುಪಾಸತೇ' - ಗ್ರಾಮದಲ್ಲಿ ಯಾರು ಇಷ್ಟಾಪೂರ್ತಗಳನ್ನು 'ದತ್ತಮ್' ಎಂದು ಉಪಾಸಿಸುತ್ತಾರೆಯೋ ಎಂದು ಇನ್ನೊಂದು ವೇದವಾಕ್ಯವೂ ತಿಳಿಸುವಂತೆ 'ದತ್ತ - ದಾನ' ಎಂಬ ಅರ್ಥವನ್ನು ಕೊಡುತ್ತದೆ· **ಇಷ್ಟಮ್** - ಯಾಗ ಮೊದಲಾದ ವೈದಿಕ ಕರ್ಮಗಳು· **ಪೂರ್ತಮ್** - ಕೆರೆ ಕಂದರಾದಿಗಳು· ಇತಿ ಶಬ್ದವು ಪ್ರಕಾರವಾಚಿ· ಯಾಗ, ದಾನ, ಕೆರೆ, ಬಾವಿ ತೋಡಿಸುವುದು ಇವೇ ಮೊದಲಾದ ಕಾರ್ಯಗಳನ್ನು ಯಾರು ನೆರವೇರಿಸುತ್ತಾರೆಯೋ ಅವರು ಚಂದ್ರಸಂಬಂಧಿಯಾದ ಲೋಕವನ್ನು ಸೇರುತ್ತಾರೆ· (ಪಡೆಯುತ್ತಾರೆ)· ಅವರೇ ತಿರುಗಿ ಬರುತ್ತಾರೆಯೇ ಹೊರತು ಆತ್ಮೋಪಾಸನೆ ಮಾಡಿ ಉತ್ತರ ಮಾರ್ಗದಿಂದ ಹೋದವರಲ್ಲ **ತಸ್ಮಾದೇತೇ ಇತಿ ।** ಆ ಕಾರಣದಿಂದ **ಏತೇ** - ಸಂತತಿ, ಸ್ವರ್ಗ ಮೊದಲಾದ ಕ್ಷುಲ್ಲಕ ಪ್ರಯೋಜನಗಳ ಅಭಿಲಾಷೆಯುಳ್ಳ ಕರ್ಮಠರು **ಋಷಯಃ** - ಕ್ಷುದ್ರಫಲದರ್ಶನದಿಂದ ಪಿತೃಯಾಣ ಶಬ್ದದಿಂದ ಕರೆಯಿಸಿಕೊಳ್ಳುವ ದಕ್ಷಿಣ ಮಾರ್ಗವನ್ನು ಹೊಂದುತ್ತಾರೆ· ಈ ಪಿತೃಯಾಣವೇ ರಯಿಃ-ಅನ್ನಪ್ರಧಾನವಾದ ವಿಷಯಭೋಗವು ಎಂದು ತಾತ್ಪರ್ಯ· 'ಧೂಮೋ ರಾತ್ರಿಸ್ತಥಾ ಕೃಷ್ಣಃ' - ಹೊಗೆ, ರಾತ್ರಿ ಹಾಗೂ ಕೃಷ್ಣಪಕ್ಷ ಮೊದಲಾದ ಪ್ರಮಾಣ ವಾಕ್ಯಗಳಿಂದ ಸಿದ್ಧವೂ, ಪುರಾಣಗಳಲ್ಲಿ ದಕ್ಷಿಣಮಾರ್ಗ ಎಂದು ಉಲ್ಲೇಖಿತವೂ ಆದ ಧೂಮದಿಂದ ಆರಂಭಿಸಿ ಚಂದ್ರನವರೆಗಿನ ಪಿತೃಯಾಣವು ಬೇರೆ · ಸಂವತ್ಸರದ ಭಾಗವೂ, ಆರು ತಿಂಗಳುಗಳ ಅವಧಿಯೂ ಆಗಿ ದಕ್ಷಿಣಾಯನ ಎಂದು ಗುರುತಿಸಲಾದ ಪಿತೃಯಾಣವೂ ಬೇರೆ ಎನ್ನುವುದು ನಿಜ · ಆದರೂ ದಕ್ಷಿಣಾಯನ ಶಬ್ದದಿಂದ ಎರಡನ್ನೂ (ಧೂಮದಿಂದ ಚಂದ್ರನವರೆಗಿನ ಮಾರ್ಗ ಮತ್ತು ಆರು ತಿಂಗಳುಕಾಲ) ವ್ಯವಹಾರ ಮಾಡಿರುವುದರಿಂದ, ಕಾಲ ಹಾಗೂ ಮಾರ್ಗಗಳನ್ನು ಒಂದಾಗಿಸಿ ಪ್ರಯೋಗಿಸಿದ ಶಬ್ದವು ಯುಕ್ತಿಯುಕ್ತವಾಗಿದೆ ಎಂದು ತಿಳಿಯಬೇಕು·

## ಭಾಷ್ಯಸಾರ

ಪ್ರಜಾಪತಿಯಾದ ಪರಮಾತ್ಮನು ಪ್ರಜಾಭಿಲಾಷೆಯಿಂದ ಪ್ರಕೃತಿ-ಪುರುಷರ ಮಿಥುನವನ್ನು ಸೃಷ್ಟಿಸಿದನಷ್ಟೇ! ಈ ಪ್ರಕೃತಿ ಪುರುಷರೇ ಸೂರ್ಯ-ಚಂದ್ರರು. ಇವರು ನಿಯತವೂ, ನೈಸರ್ಗಿಕವೂ ಆದ ಚಲನೆಯನ್ನು ಹೊಂದಿರುತ್ತಾರೆ · ಸೂರ್ಯಚಂದ್ರರ ನಿಯತಗತಿ ದಕ್ಷಿಣಾಯನ-ಉತ್ತರಾಯಣ, ಕೃಷ್ಣಪಕ್ಷ-ಶುಕ್ಲಪಕ್ಷ ಮತ್ತು ದಿನ-ರಾತ್ರಿಗಳೆಂಬ ಕಾಲವಿಭಾಗಕ್ಕೆ ಒದಗುವ ಏಕೈಕ ಆಧಾರ· ಲೋಕದಲ್ಲಿ ಕಾಲವಿಭಾಗದಿಂದ ಋತುವ್ಯವಸ್ಥೆಯೂ, ಋತುವ್ಯವಸ್ಥೆಯಿಂದ ಆಹಾರ ಸಮೃದ್ಧಿಯೂ, ಆಹಾರ ಸಮೃದ್ಧಿಯಿಂದ ಪ್ರಜಾವೃದ್ಧಿಯೂ ಉಂಟಾಗುತ್ತವೆ· ಈ ರೀತಿ [೧]ಕಾಲಭೇದದಿಂದ ಆರಂಭಿಸಿ, ಅನ್ನ, ರೇತಸ್ಸು ಮೊದಲಾದವುಗಳ ಮೂಲಕ ಪ್ರಜಾಸೃಷ್ಟಿಯವರೆಗಿನ ಕಾರ್ಯಕಾರಣಬದ್ಧವಾದ ಕ್ರಮವೇ ಪ್ರಪಂಚ ವಿಕಾಸದ ನೈಜ ಪ್ರಕ್ರಿಯೆಯಾಗಿದೆ· ಆಹಾರವನ್ನು ಸೇವಿಸುವ ಪ್ರಾಣಿಗಳ ಪ್ರಾಣವನ್ನು ಆದಿತ್ಯನು (ಪ್ರಾಣ) ಕಾಪಾಡಿದರೆ, ಆ ಪ್ರಾಣಿಗಳು ಸೇವಿಸುವ ಆಹಾರವಸ್ತುಗಳನ್ನು ಚಂದ್ರನು (ರಯಿಯು) ಹೆಚ್ಚಿಸುತ್ತಾನೆ· ಆದ್ದರಿಂದ ಚಂದ್ರಾದಿತ್ಯರು ಪ್ರಜಾಪತಿಯ ಸೃಷ್ಟಿಸಂಕಲ್ಪವನ್ನು ಕಾರ್ಯರೂಪಕ್ಕೆ ತರುವ ಎರಡು ಸಾಧನಗಳು ಎಂಬ ಅಂಶವು ಸ್ಪಷ್ಟವಾಗುತ್ತದೆ·

ಸೂರ್ಯಚಂದ್ರರಲ್ಲಿ ಪ್ರಾಣನೆಂದು ಕರೆಯಿಸಿಕೊಳ್ಳುವ ಸೂರ್ಯನು ರಯಿಯೆಂಬ ಹೆಸರನ್ನು ಪಡೆದ ಚಂದ್ರನಿಗಿಂತಲೂ ಮೇಲಾದವನು · ಹಾಗಾಗಿಯೇ [೨]ರಯಿಶಬ್ದದಿಂದ ಗುರುತಿಸಲಾಗುವ ದಕ್ಷಿಣಾಯನ, ಕೃಷ್ಣಪಕ್ಷ ಹಾಗೂ ರಾತ್ರಿಗಳಿಗಿಂತಲೂ ಪ್ರಾಣಪದಾರ್ಥಗಳಾದ ಉತ್ತರಾಯಣ, ಶುಕ್ಲಪಕ್ಷ ಮತ್ತು ಹಗಲುಗಳು ಶ್ರೇಯಸ್ಕರವಾಗಿವೆ · ಹೀಗೆ ಲೋಕವಿಕಾಸ ಕ್ರಮದ ಸೂಚನೆಯೂ ಪ್ರಾಣಪದಾರ್ಥಗಳ ಪ್ರಶಂಸೆಯೂ ಈ ಮಂತ್ರಾವತರಣದ ಮೂಲ ಧೋರಣೆಗಳಾಗಿವೆ·

ಸಂವತ್ಸರ ಒಂದು ವಿಶಿಷ್ಟಕಾಲವು · ಇದು ಉತ್ತರಾಯಣ ಮತ್ತು ದಕ್ಷಿಣಾಯನಗಳ ಸಂಕಲನರೂಪವಾಗಿದೆ· ಇದರಲ್ಲಿ ಹನ್ನೆರಡು ಮಾಸಗಳೆಂಬ ಘಟಕಗಳಿವೆ· ಈ ವರ್ಷಾತ್ಮಕ ಕಾಲವೇ ಪ್ರಜಾಪತಿ · ಪ್ರಜಾಭಿಲಾಷೆಯಿಂದ ಚಂದ್ರಾದಿತ್ಯರನ್ನು ಸೃಷ್ಟಿ ಮಾಡಿದ ಪರಮಾತ್ಮ · ಪರಮಾತ್ಮನು ವರ್ಷವೆಂಬ ಖಂಡಕಾಲಕ್ಕಿಂತಲೂ ಭಿನ್ನನೆಂಬುದೇನೋ ನಿಜ · ಆದರೂ ಅವನನ್ನು ಸಂವತ್ಸರವೆಂದು [೩]ಔಪಚಾರಿಕವಾಗಿ ಕರೆಯಲಾಗಿದೆ · ಕಾರಣ ವರ್ಷಾತ್ಮಕ ಕಾಲವು ಎಲ್ಲ ಜೀವಿಗಳ ಜನ್ಮಕ್ಕೆ ಹೆಬ್ಬಾಗಿಲಿನಂತಿದೆ·

ಸಂವತ್ಸರಕ್ಕೆ ದಕ್ಷಿಣಾಯನ ಹಾಗೂ ಉತ್ತರಾಯಣ ಎಂಬ· ಎರಡು ಅವಯವಗಳಿವೆ · ಜ್ಯೇಷ್ಠಮಾಸದಿಂದ ಆರಂಭಿಸಿ ಕಾರ್ತೀಕಮಾಸದವರೆಗೆ [೪]ದಕ್ಷಿಣಾಯನ ಕಾಲವೂ, ಮಾರ್ಗಶೀರ್ಷ

---

೧· - - - - ದಕ್ಷಿಣೋತ್ತರರೂಪಾಯನಸ್ವರೂಪಕಾಲವಿಭಾಗಾದ್ವಾರಾನ್ನರೇತಃಕ್ರಮೇಣ ಪ್ರಜಾಸೃಷ್ಟಿಃ ಅಭೂತ್ - ಆನಂದಭಾಷ್ಯ·

೨· ರಯಿಶಬ್ದಾರ್ಥದಕ್ಷಿಣಾಯನಕೃಷ್ಣಪಕ್ಷರಾತ್ರ್ಯಪೇಕ್ಷಯಾಪ್ರಾಣಶಬ್ದಾರ್ಥಭೂತೋತ್ತರಾಯಣಶುಕ್ಲಪಕ್ಷದಿವಸಾನಾಮುತ್ಕರ್ಷಂ ಚ ವಕ್ತುಮಾರಭತೇ - ಪ್ರತಿಪದಾರ್ಥದೀಪಿಕಾ·

೩· ಪ್ರಜಾಸೃಷ್ಟಿದ್ವಾರಭೂತೇ ಸಂವತ್ಸರಾದ್ ಪ್ರಜಾಪತಿತ್ವಮುಪಚರ್ಯತೇ - ಸುಬೋಧಿನೀ· ಔಪಚಾರಿಕವಾಗಿ - ಮುಖ್ಯವಲ್ಲದ ಅರ್ಥ·

೪· ಜ್ಯೇಷ್ಠಮಾಸಾದಾರಭ್ಯ ಕಾರ್ತೀಕಮಾಸಪರ್ಯಂತಂ ವತ್ಸರಪ್ರಜಾಪತೇಃ ಸ್ವರೂಪಂ ದಕ್ಷಿಣಾಯನಶಬ್ದವಾಚ್ಯಮ್ । ಮಾರ್ಗಶೀರ್ಷಮಾಸಾದಾರಭ್ಯ ವೈಶಾಖಮಾಸಪರ್ಯಂತಸ್ವರೂಪಮುತ್ತರಾಯಣ ಶಬ್ದವಾಚ್ಯಮ್ - ಆನಂದಭಾಷ್ಯ·

ಮಾಸದಿಂದ ವೈಶಾಖಮಾಸದವರೆಗೆ ಉತ್ತರಾಯಣಕಾಲವೂ ಇರುತ್ತವೆ · ಇವೆರಡೂ ಅಯನಗಳು ಸಂವತ್ಸರ ಪ್ರಜಾಪತಿಯ ಎರಡು ಮುಖಗಳು ಅಥವಾ ರೂಪಗಳು · ದಕ್ಷಿಣಾಯನವು ರಯಿಯೆಂದೇ ಪ್ರಸಿದ್ಧವಾಗಿದೆ·

ದಕ್ಷಿಣಾಯನ ಮಾರ್ಗವೇ ಪಿತೃಯಾಣವು, ಇದು ರಯಿಯೂ ಹೌದು · ಏಕೆಂದರೆ ರಯಿಯೆಂದು ರೂಪಣ ಮಾಡಿದ ಚಂದ್ರನನ್ನು ತಲುಪಿಸುತ್ತದೆ · ಇದು ಪುನರಾವೃತ್ತಿಯನ್ನು ಸಹಿಸುತ್ತದೆ · ಹಾಗಾಗಿ ಕೆಳಮಟ್ಟದ್ದಾಗಿದೆ · ಈ ಮಾರ್ಗವು ಭೋಗಪ್ರಧಾನವಾದದ್ದು · ದಕ್ಷಿಣಾಯನವು ಪಿತೃಯಾಣದಲ್ಲಿ ಸೇರಿದೆ ಎಂಬ [೧]ವಿಷಯದಲ್ಲಿ ಸ್ಮೃತಿಯೇ ಪ್ರಮಾಣ · ಆ ಸ್ಮೃತಿಯಂತೆ, ಧೂಮ, ರಾತ್ರಿ, ಕೃಷ್ಣಪಕ್ಷ, ದಕ್ಷಿಣಾಯನ, ಹಾಗೂ ಚಂದ್ರಲೋಕಗಳೆಂಬ ಪಿತೃಯಾಣವನ್ನು ಸೇರಿದ ಕರ್ಮಠರು ಹಿಂತಿರುಗಿ ಪೃಥ್ವಿಗೆ ಬರಲೇಬೇಕು·

ದಕ್ಷಿಣಾಯನ ಮಾರ್ಗದಲ್ಲಿ ಹೋಗುವ ಕರ್ಮಠರು ಕ್ಷುಲ್ಲಕವಾದ ಪ್ರಯೋಜನಗಳನ್ನು ಬಯಸಿದವರು· ಇವರು [೨]ಪುಣ್ಯದ ಉಪಾಸಕರೇ ಹೊರತು ಶಾಶ್ವತವಾದ ಆತ್ಮಸ್ವರೂಪದ ಉಪಾಸಕರಲ್ಲ. ಇವರು 'ಇಷ್ಟ' ಹಾಗೂ 'ಪೂರ್ತ' ಕರ್ಮಗಳನ್ನು ಪುಣ್ಯವೆಂದು ಭಾವಿಸಿ ಆಚರಿಸುತ್ತಾರೆ· [೩]ಅಗ್ನಿಹೋತ್ರ, ತಪಸ್ಸು, ಸತ್ಯ, ವೇದಪಾಲನೆ, ಆತಿಥ್ಯ ವೈಶ್ವದೇವ ಮುಂತಾದ ಕಾರ್ಯಗಳು 'ಇಷ್ಟ' ಕರ್ಮಗಳು · [೪]ಬಾವಿ, ಕೆರೆ, ಕೊಳಾದಿಗಳನ್ನು ತೋಡಿಸುವುದು, ದೇವಪೂಜೆ, ಅನ್ನದಾನ, ಉದ್ಯಾನಾದಿಗಳನ್ನು ನಿರ್ಮಾಣ ಮಾಡುವುದು ಮುಂತಾದವು 'ಪೂರ್ತ' ಕಾರ್ಯಗಳು · ಇವುಗಳನ್ನು ಆಚರಿಸಿ ಉಂಟಾದ ಪುಣ್ಯದಿಂದ ಕರ್ಮಠರು ಚಂದ್ರಲೋಕಕ್ಕೆ ಹೋಗುತ್ತಾರೆ· ಭೋಗಪ್ರಧಾನವಾದ ಆ ಲೋಕದಲ್ಲಿ ಪುಣ್ಯ ತೀರುವವರೆಗೆ ವಿಷಯ ಸುಖವನ್ನು ಅನುಭವಿಸಿ ಪುನಃ ಮರ್ತ್ಯಲೋಕಕ್ಕೆ ಬರುತ್ತಾರೆ·

## ಮಂತ್ರ - ೧೦

अथोत्तरेण, तपसा ब्रह्मचर्येण श्रद्धया
विद्ययाऽऽत्मानमन्विष्य, आदित्यमभिजयन्ते ।
एतद्वै प्राणानामायतनम् एतदमृतमभयम्
एतत् परायणम् ; एतस्मान्न पुनरावर्तन्त इत्येष निरोधः ।।
तदेष श्लोकः ।। 10 ।।

---

೧· ಧೂಮೋರಾತ್ರಿಸ್ತಥಾಕೃಷ್ಣಃ ಷಣ್ಮಾಸಾ ದಕ್ಷಿಣಾಯನಮ್ । ತತ್ರ ಚಾಂದ್ರಮಸಂ ಜ್ಯೋತಿಃ ಯೋಗೀ ಪ್ರಾಪ್ಯ ನಿವರ್ತತೇ ॥

೨· ಕೃತೋಪಾಸಕಾ ಹ್ಯೇತೇ, ನ ನಿತ್ಯಾತ್ಮಸ್ವರೂಪೋಪಾಸಕಾಃ - ಸುಬೋಧಿನೀ·

೩· ಅಗ್ನಿಹೋತ್ರಂ ತಪಸ್ಸತ್ಯಂ ವೇದಾನಾಂಚಾನುಪಾಲನಂ ।
ಆತಿಥ್ಯಂ ವೈಶ್ವದೇವಶ್ಚ ಇಷ್ಟಮಿತ್ಯಭಿಧೀಯತೇ - ಮನುಸ್ಮೃತಿ·

೪· ವಾಪೀಕೂಪತಟಾಕಾದಿ ದೇವಾಯತನಾನಿ ಚ । ಅನ್ನಪ್ರಧಾನಮಾರಾಮಃ ಪೂರ್ತಮಿತ್ಯಭಿಧೀಯತೇ - ಮನುಸ್ಮೃತಿ·

ಅಥೋತ್ತರೇಣ, ತಪಸಾ ಬ್ರಹ್ಮಚರ್ಯೇಣ ಶ್ರದ್ಧಯಾ
ವಿದ್ಯಯಾऽऽತ್ಮಾನಮನ್ವಿಷ್ಯ, ಆದಿತ್ಯಮಭಿಜಯಂತೇ ।
ಏತದ್ವೈ ಪ್ರಾಣಾನಾಮಾಯತನಮ್ ಏತದಮೃತಮಭಯಮ್
ಏತತ್ಪರಾಯಣಮ್; ಏತಸ್ಮಾನ್ನ ಪುನರಾವರ್ತಂತ ಇತ್ಯೇಷ ನಿರೋಧಃ ॥
ತದೇಷ ಶ್ಲೋಕಃ ॥

## ಪ್ರತಿಪದಾರ್ಥ

**ಅಥ** - ಕರ್ಮಿಠರಿಗೆ ಚಂದ್ರಲೋಕಪ್ರಾಪ್ತಿಯನ್ನು ವರ್ಣಿಸಿದನಂತರ, **ತಪಸಾ** - ದೇಹ ದಂಡನೆಯೇ ಪ್ರಧಾನವಾದ ಕೃಚ್ಛ್ರ, ಚಾಂದ್ರಾಯಣ ಮುಂತಾದವುಗಳಿಂದಲೂ, **ಬ್ರಹ್ಮಚರ್ಯೇಣ** - ಸ್ತ್ರೀಸಂಗತ್ಯಾಗ ಮುಂತಾದ ಎಂಟು ಬಗೆಯ ಬ್ರಹ್ಮಚರ್ಯದಿಂದಲೂ, **ಶ್ರದ್ಧಯಾ** - ಆಸ್ತಿಕ್ಯ-ಬುದ್ಧಿಯಿಂದಲೂ, **ವಿದ್ಯಯಾ** - ಬ್ರಹ್ಮವನ್ನು ಬೋಧಿಸುವ ವಿದ್ಯೆಯಿಂದಲೂ (ಕೂಡಿದ ಬ್ರಹ್ಮ-ಜ್ಞಾನಿಗಳು) **ಆತ್ಮಾನಮ್** - ಪರಮಾತ್ಮನನ್ನು, **ಅನ್ವಿಷ್ಯ** - ಉಪಾಸಿಸಿ, **ಉತ್ತರೇಣ** - ಉತ್ತರಾಯಣ ಮಾರ್ಗದಲ್ಲಿ, **ಆದಿತ್ಯಮ್** - ಆದಿತ್ಯ ಲೋಕವನ್ನು (ಆದಿತ್ಯನ ಮುಖಾಂತರ ವಿರಜಾ ನದಿಯನ್ನು ದಾಟಿ ಬ್ರಹ್ಮಲೋಕವನ್ನು), **ಅಭಿಜಯಂತೇ** - ಪಡೆಯುತ್ತಾರೆ· **ಏತತ್ ವೈ** - ಈ ಸ್ಥಾನವು, **ಪ್ರಾಣಾನಾಮ್** - ಅರ್ಚಿರಾದಿ ಮಾರ್ಗದಿಂದ ಹೋದ ಜೀವರಿಗೆ, **ಆಯತನಮ್** - ಆಧಾರವಾಗಿದೆ· **ಏತತ್** - ಇದು, **ಅಮೃತಮ್** - ಮುಕ್ತರಾದವರಿಗೆ ಅತ್ಯಂತ ಭೋಗ್ಯವಾಗಿದೆ· **ಅಭಯಮ್**-ಸಂಸಾರ ಭಯವಿಲ್ಲದ್ದಾಗಿದೆ· **ಏತತ್** - ಇದು, **ಪರಾಯಣಮ್** - ಪರಗತಿಯನ್ನು ಹೊಂದಿಸುವುದಾಗಿದೆ· **ಏತಸ್ಮಾತ್** - ಪರಬ್ರಹ್ಮಲೋಕದಿಂದ, **ನ ಪುನರಾವರ್ತಂತೇ** - ಜನ್ಮ ಮರಣರೂಪವಾದ ದೇವ ಮನುಷ್ಯಾದಿ ಲೋಕಗಳಿಗೆ ಹಿಂತಿರುಗಿ ಬರುವುದಿಲ್ಲ· **ಇತಿ** - ಎಂದು, **ಏಷಃ** - ಪ್ರಜಾಪತಿಯು ಪರಮಾತ್ಮನು, **ನಿರೋಧಃ** - ಹಿಂತಿರುಗುವುದಕ್ಕೆ ಅಡ್ಡಿಯಾಗಿದ್ದಾನೆ· **ತದೇಷ ಶ್ಲೋಕಃ** - ಇಂತಹ ಪ್ರಜಾಪತಿಯನ್ನು ಕುರಿತ ಶ್ಲೋಕ ಹೀಗಿದೆ·

## ತಾತ್ಪರ್ಯ

ದಕ್ಷಿಣಮಾರ್ಗದಲ್ಲಿ ತೊಡಗಿದ ಕರ್ಮಿಠರಿಗೆ ವಿಷಯಭೋಗವೇ ಸಿಕ್ಕುವ ಫಲ· ಆದರೆ ಉತ್ತರಾಯಣ ಮಾರ್ಗದಲ್ಲಿ ಹೋದ ಆತ್ಮೋಪಾಸಕರು ಪುನರ್ಜನ್ಮವಿಲ್ಲದ ಪರಮಪದವನ್ನು ಪಡೆಯುತ್ತಾರೆ·

ಆತ್ಮೋಪಾಸಕರು ತಪಸ್ವಿಗಳು· ಇವರು ಶರೀರವನ್ನು ದಂಡಿಸುವರು· ಸ್ತ್ರೀಸಂಗವನ್ನು ವರ್ಜಿಸಿ ಬ್ರಹ್ಮಚರ್ಯೆಯನ್ನು ಪಾಲಿಸುವರು · ಇವರು ಆಸ್ತಿಕ್ಯಬುದ್ಧಿಯಿಂದಲೂ, ವಿದ್ಯೆಯಿಂದಲೂ

ಕೂಡಿರುತ್ತಾರೆ · ಈ ಬ್ರಹ್ಮಜ್ಞಾನಿಗಳು ತಪಸ್ಸು, ಬ್ರಹ್ಮಚರ್ಯೆ, ಶ್ರದ್ಧೆ, ವಿದ್ಯೆಗಳಿಂದ ಪರಮಾತ್ಮನ ಉಪಾಸನೆ ಮಾಡಿ, ವಿರಜಾನದಿಯನ್ನು ದಾಟಿ, ಪುನರಾವೃತ್ತಿಯಿಲ್ಲದ ಪರಮಗತಿಯನ್ನು ಪಡೆಯುತ್ತಾರೆ ಇಂತಹ ಪರಮಗತಿಯಲ್ಲಿ (ಅಮೃತದಲ್ಲಿ) ಸಂಸಾರ ಭಯವೇ ಇಲ್ಲ · ಇದು ಅರ್ಚಿರಾದಿ ಮಾರ್ಗ-ದಲ್ಲಿ ಮುನ್ನಡೆಯುವ ಜೀವರಿಗೆ ಆಧಾರವಾದದ್ದು · ಅವರನ್ನು ಪರಮಪದಕ್ಕೆ ಸೇರಿಸುವಂತಹದೂ ಹೌದು· ಇಲ್ಲಿಗೆ ಹೋದವನು ಹಿಂತಿರುಗಲಾರ· ಪುನರಾವೃತ್ತಿಗೆ ಪರಮಾತ್ಮನೇ ಪ್ರತಿಬಂಧಕ··

## ರಂಗರಾಮಾನುಜಭಾಷ್ಯ

**ಅಥೋತ್ತರೇಣೇತಿ** । ಅಥ ಶಬ್ದೋ ವಾಕ್ಯಾಂತರೋಪಕ್ರಮೇ । ಯೇ ತಾವತ್ 'ಕಿಂ ಪ್ರಜಯಾ ಕರಿಷ್ಯಾಮಃ' ಇತಿ ವಿರಕ್ತಾ ಋಷಯಃ ಕಾಯಕ್ಲೇಶಾದಿಲಕ್ಷಣೇನ ತಪಸಾ, ಸ್ತ್ರೀಸಂಗರಾಹಿತ್ಯಲಕ್ಷಣೇನ ಬ್ರಹ್ಮಚರ್ಯೇಣ, ಆಸ್ತಿಕ್ಯಬುದ್ಧಿಲಕ್ಷಣಯಾ ಶ್ರದ್ಧಯಾ, ಪ್ರತ್ಯಗಾತ್ಮ-ವಿದ್ಯಯಾ ಪರಮಾತ್ಮಾನಮುಪಾಸ್ಯ ಅರ್ಚಿರಾದಿನಾ **ಉತ್ತರೇಣಾಯನೇನ** 'ಆದಿತ್ಯಾಚ್ಚಂದ್ರಮಸಂ ಚಂದ್ರಮಸೋ ವಿದ್ಯುತಮ್ ತತ್ಪುರುಷೋಽಮಾನವಃ ಸ ಏನಾನ್ ಬ್ರಹ್ಮ ಗಮಯತಿ' ಇತ್ಯುಕ್ತಪ್ರಕಾರೇಣ ಬ್ರಹ್ಮಪ್ರಾಪ್ತಿದ್ವಾರಭೂತಮಾದಿತ್ಯಮಭಿಜಯಂತೇ - ಪ್ರಾಪ್ನುವಂತೀತ್ಯರ್ಥಃ । ಅನ್ವೇಷ್ಟವ್ಯತಯಾ ನಿರ್ದಿಷ್ಟಮಾತ್ಮಾನಂ ಸ್ತುವನ್ ತೇಷಾಮಪುನರಾವೃತ್ತಿಂ ದರ್ಶಯತಿ - **ಏತದ್ವೈ ಪ್ರಾಣಾನಾಮಿತಿ** । ಆಯತನಶಬ್ದಾಪೇಕ್ಷಯಾ ಏತದಿತಿ ನಪುಂಸಕಲಿಂಗನಿರ್ದೇಶಃ । **ಪ್ರಾಣಾನಾಂ** - ಪ್ರಾಣಭೃತಾಮ್, **ಆಯತನಮ್** - ಆಧಾರಭೂತಮ್; 'ತದ್ಯಥಾ ರಥಸ್ಯಾರೇಷು ನೇಮಿರರ್ಪಿತಾ ನಾಭಾವರಾ ಅರ್ಪಿತಾಃ ಏವಮೇವೈತಾ ಭೂತಮಾತ್ರಾಃ ಪ್ರಜ್ಞಾಮಾತ್ರಾ-ಸ್ವರ್ಪಿತಾಃ ಪ್ರಜ್ಞಾಮಾತ್ರಾಃ ಪ್ರಾಣೇಽರ್ಪಿತಾಃ' ಇತಿ ಪರಮಾತ್ಮನಃ ಸಕಲ ಚೇತನಾಧಾರತ್ವೋಕ್ತೇಃ । **ಏತತ್ ಪರಾಯಣಮ್** - ಪರಮಂ (ಪರಂ) ಪ್ರಾಪ್ಯಮಿತ್ಯರ್ಥಃ । **ಏತಸ್ಮಾನ್ನ ಪುನರಾ-ವರ್ತಂತೇ** । ಉಪಾಸಕಾ ಇತಿ ಶೇಷಃ । ಉತ್ತರೇಣ ಮಾರ್ಗೇಣ ಗತಾಃ, 'ಮಾಮುಪೇತ್ಯ ತು ಕೌಂತೇಯ ಪುನರ್ಜನ್ಮ ನ ವಿದ್ಯತೇ' ಇತ್ಯುಕ್ತರೀತ್ಯಾ ಪರಮಾತ್ಮಾನಂ ಪ್ರಾಪ್ಯ ನ ನಿವರ್ತಂತೇ ಇತ್ಯರ್ಥಃ । **ಏಷ ನಿರೋಧಃ** । **ಏಷಃ** - 'ಪ್ರಜಾಕಾಮೋ ವೈ ಪ್ರಜಾಪತಿಃ' ಇತಿ ಪ್ರಾಕ್ ಪ್ರಜಾಪತಿಶಬ್ದನಿರ್ದಿಷ್ಟಃ ಪರಮಾತ್ಮಾ ಸ್ವಂ ಪ್ರಾಪ್ತಸ್ಯ ಪುನರಾವೃತ್ತಿನಿರೋಧಕಾರೀ । ಅತಸ್ತಂ ಪರಮಾತ್ಮಾನಂ ಪ್ರಜಾಪತಿಶಬ್ದಿತಂ ಪ್ರಾಪ್ತಸ್ಯ ತದುಪಾಸಕಸ್ಯಾಪುನರಾವೃತ್ತಿರುಪಪದ್ಯತೇ ಇತಿ ಭಾವಃ । ಅತ್ರ ಏಷಃ ಇತ್ಯೇತಚ್ಛಬ್ದೇನ ಪ್ರಜಾಪತಿಪರಾಮರ್ಶಾತ್ ಆತ್ಮಾನಮನ್ವಿಷ್ಯೇತ್ಯಾತ್ಮಶಬ್ದೋಽಪಿ ಪ್ರಜಾಪತಿಪರ ಏವ । ಅತ ಏವೈತತ್ ಸರ್ವಮಭಿಪ್ರೇತ್ಯ ಸರ್ವವ್ಯಾಖ್ಯಾನಾಧಿಕರಣೇ (೧-೪-೮) ವ್ಯಾಸಾರ್ಯೈಃ, 'ತಪಸಾ ಬ್ರಹ್ಮಚರ್ಯೇಣ ಶ್ರದ್ಧಯಾ ವಿದ್ಯಯಾಽಽತ್ಮಾನಮನ್ವಿಷ್ಯಾಽಽದಿತ್ಯಮಭಿ-ಜಯಂತೇ ಏತಸ್ಮಾನ್ನ ಪುನರಾವರ್ತಂತೇ' ಇತ್ಯರ್ಚಿರಾದಿಗತ್ಯಾ ಅಪುನರಾವೃತ್ತಿ ಪ್ರತಿಪಾದನಾತ್, 'ಪ್ರಜಾಕಾಮೋ ಹ ವೈ ಪ್ರಜಾಪತಿಃ' ಇತಿ ಪ್ರಜಾಪತಿಶಬ್ದನಿರ್ದಿಷ್ಟಃ ಪರಂ ಬ್ರಹ್ಮೇತಿ ಪ್ರತಿಪಾದಿತಮ್

ಇತಿ ದ್ರಷ್ಟವ್ಯಮ್ । (ತತಶ್ಚ ಪ್ರಜಾಪತಿಮುಪಾಸೀನಸ್ಯಾರ್ಚಿರಾದಿಗತ್ಯಪ್ರತಿಪಾದನಾತ್ ಕಥಂ ಪ್ರಜಾಪತೇಃ ಬ್ರಹ್ಮತ್ವಮಿತಿ ಶಂಕಾ ಪರಾಕೃತಾ)

## ಅನುವಾದ

**ಅಥೋತ್ತರೇಣೇತಿ** । ಅಥಶಬ್ದವು ಮತ್ತೊಂದು ವಾಕ್ಯದ ಆರಂಭವನ್ನು ತಿಳಿಸುತ್ತದೆ· 'ಕಿಂ ಪ್ರಜಯಾ ಕರಿಷ್ಯಾಮಃ' ಸಂತತಿಯಿಂದ ಏನು ಮಾಡೋಣ? ಎಂದು ವಿರಕ್ತರಾದ ಯಾವ ಋಷಿಗಳು (ಇರುವರೋ ಅವರು) ಕಾಯಕ್ಲೇಶವೆಂಬ ತಪಸ್ಸಿನಿಂದಲೂ, ಸ್ತ್ರೀಸಂಗ ತ್ಯಾಗವೆಂಬ ಬ್ರಹ್ಮಚರ್ಯೆಯಿಂದಲೂ, ಆಸ್ತಿಕ್ಯ ಬುದ್ಧಿಯೆಂಬ ಶ್ರದ್ಧೆಯಿಂದಲೂ, [೧]ಪ್ರತ್ಯಗಾತ್ಮವಿದ್ಯೆಯಿಂದಲೂ ಪರಮಾತ್ಮನನ್ನು ಉಪಾಸನೆ ಮಾಡಿ ಅರ್ಚಿರಾದಿಯಿಂದ ಉತ್ತರಾಯಣ ಮಾರ್ಗವಾಗಿ, **ಆದಿತ್ಯಾಚ್ಚಂದ್ರಮಸಮ್ ಇತಿ।** ಸೂರ್ಯನಿಂದ ಚಂದ್ರನಲ್ಲಿಗೆ, ಚಂದ್ರನಿಂದ ವಿದ್ಯುಲ್ಲೋಕಕ್ಕೆ, ಮನುಷ್ಯನಲ್ಲದ ಆ ಪುರುಷನು ಇವರನ್ನು ಬ್ರಹ್ಮನಲ್ಲಿಗೆ ಕಳುಹಿಸಿಕೊಡುತ್ತಾನೆ ಎಂಬ ಕ್ರಮದಂತೆ ಬ್ರಹ್ಮಪ್ರಾಪ್ತಿಯ ಹೆಬ್ಬಾಗಿಲಿನಂತಿರುವ ಆದಿತ್ಯನನ್ನು ಪಡೆಯುತ್ತಾರೆ·

ಉಪಾಸ್ಯನೆಂದು ನಿರ್ದೇಶಿಸಿದ ಪರಮಾತ್ಮನನ್ನು ಹೊಗಳುತ್ತ, ಅವರು ಹಿಂತಿರುಗುವುದಿಲ್ಲ ಎಂದು ತೋರಿಸಿ ಕೊಡುತ್ತಾನೆ· **ಏತದ್ವೈಪ್ರಾಣಾನಾಮಾಯತನಮ್** । [೨]ಆಯತನ ಶಬ್ದವನ್ನು ಲಕ್ಷಿಸಿ 'ಏತತ್' ಎಂದು ನಪುಂಸಕಲಿಂಗದಿಂದ ನಿರ್ದೇಶ ಮಾಡಲಾಗಿದೆ· **ಪ್ರಾಣಾನಾಮ್** ಪ್ರಾಣವಿರುವ ಜೀವಿಗಳಿಗೆ (ಜೀವಾತ್ಮರಿಗೆ) **ಆಯತನಮ್** - ಆಧಾರವಾಗಿರುವವನು· ಕಾರಣ **ತದ್ಯಥಾ ಇತಿ** - ಹೇಗೆ ರಥಗಾಲಿಯ ಹಲ್ಲುಗಳಲ್ಲಿ [೩]ನೇಮಿಯು ನೆಲೆಗೊಂಡಿದೆಯೋ, ಹೇಗೆ ಹಲ್ಲುಗಳು ಗುಂಭದಲ್ಲಿ ನೆಲೆಸಿವೆಯೋ ಹಾಗೆಯೇ ಭೂತಮಾತ್ರಗಳು ಪ್ರಜ್ಞಾಮಾತ್ರಗಳಲ್ಲಿಯೂ, ಪ್ರಜ್ಞಾಮಾತ್ರಗಳು ಪ್ರಾಣದಲ್ಲಿಯೂ ತಮ್ಮನ್ನು ಒಪ್ಪಿಸಿಕೊಂಡಿವೆ ಎಂದು ಪರಮಾತ್ಮನ ಎಲ್ಲ ಚೇತನಗಳಿಗೂ ಆಧಾರ ಎಂದು ಹೇಳಲಾಗಿದೆ· ಇವನು **ಪರಾಯಣಮ್** - ಪರಮಪದವು· **ಏತಸ್ಮಾನ್ನ ಪುನರಾವರ್ತಂತೇ** । ಉಪಾಸಕರು ಎಂದು ಸೇರಿಸಿಕೊಳ್ಳಬೇಕು· ಉತ್ತರಾಯಣದಿಂದ ಸಾಗಿದವರು· **'ಮಾಮುಪೇತ್ಯತು ಕೌಂತೇಯ ಪುನರ್ಜನ್ಮ ನ ವಿದ್ಯತೇ'** - ಅರ್ಜುನ! ನನ್ನನ್ನು ಸೇರಿದ ನಂತರ ಪುನರ್ಜನ್ಮವಿಲ್ಲ ಎಂದು ಹೇಳಿರುವಂತೆ ಪರಮಾತ್ಮನನ್ನು ಹೊಂದಿ ಹಿಂದಿರುಗುವುದಿಲ್ಲ ಎಂದು ಅಭಿಪ್ರಾಯ·

**ಏಷಃ ನಿರೋಧಃ** । ಪ್ರಜಾಕಾಮನಾದ ಪ್ರಜಾಪತಿಯೆಂದು ಹಿಂದೆ ಪ್ರಜಾಪತಿ ಶಬ್ದದಿಂದ ಕರೆಯಿಸಿಕೊಂಡ ಪರಮಾತ್ಮನು ತನ್ನನ್ನು ಹೊಂದಿದ ಉಪಾಸಕನ ಪುನರಾವೃತ್ತಿಗೆ ಪ್ರತಿಬಂಧಕನು·

---

೧· ಪ್ರತ್ಯಗಾತ್ಮವಿದ್ಯೆ (ಪ್ರತ್ಯಗಾತ್ಮ - ಜೀವ ಬಗ್ಗೆ) ಜೀವಾತ್ಮನ ನೈಜ ಅರಿವು· ಜೀವಾತ್ಮನನ್ನು ಶರೀರಕ್ಕಿಂತಲೂ, ಪ್ರಕೃತಿಗಿಂತಲೂ ಭಿನ್ನ ಎಂದು ಸಾಕ್ಷಾತ್ಕಾರ ಪಡೆಯುವುದು ಎಂದರ್ಥ· ಇದು ದಹರವಿದ್ಯೆಗೆ (ಬ್ರಹ್ಮವಿದ್ಯೆಗೆ) ಅಂಗವಾಗಿದೆ·

೨· ವಿಶೇಷ್ಯ-ವಿಶೇಷಣವಾಚಕ ಶಬ್ದಗಳ ಲಿಂಗ, ವಿಭಕ್ತಿ ಹಾಗೂ ವಚನಗಳು ಒಂದೇ ಆಗಿರಬೇಕು ಎಂದು ಸಾಮಾನ್ಯ ನಿಯಮ·

೩· ರಥ ಚಕ್ರದ ಅಂಚು (ಹಳಿ)

ಆದ್ದರಿಂದಲೇ ಆ ಪ್ರಜಾಪತಿ ಶಬ್ದದಿಂದ ಕರೆಯಲಾಗುವ ಪರಮಾತ್ಮನನ್ನು ಹೊಂದಿದವನು ಹಿಂದಿರುಗಲಾರ ಎಂಬ ಮಾತೂ ಹೊಂದಿಕೊಳ್ಳುತ್ತದೆ· ಇಲ್ಲಿ 'ಏಷಃ' ಎಂದು 'ಏತತ್' ಶಬ್ದದಿಂದ ಪ್ರಜಾಪತಿಯನ್ನು ಪರಾಮರ್ಶಿಸಿರುವುದರಿಂದ 'ಆತ್ಮಾನಮನ್ವಿಷ್ಯ' ಎಂಬ ವಾಕ್ಯದಲ್ಲಿಯೂ ಆತ್ಮಶಬ್ದವೂ ಕೂಡ ಪ್ರಜಾಪತಿಪರವೇ ಆಗಿದೆ· ಆದ್ದರಿಂದಲೇ ಇವೆಲ್ಲವನ್ನೂ ಆಲೋಚಿಸಿ, ವ್ಯಾಸಾರ್ಯರು (ಶ್ರುತಪ್ರಕಾಶಿಕಾಚಾರ್ಯರು) ೧ಸರ್ವವ್ಯಾಖ್ಯಾನಾಧಿಕರಣದಲ್ಲಿ 'ತಪಸಾ ಬ್ರಹ್ಮಚರ್ಯೇಣ ಶ್ರದ್ಧಯಾ ವಿದ್ಯಯಾಽಽತ್ಮಾನಮನ್ವಿಷ್ಯಽಽತ್ಮಾನಮಭಿಜಯಂತೇ । 'ಏತಸ್ಮಾನ್ನ ನಿವರ್ತಂತೇ' । ಎಂಬ ಮಂತ್ರದಲ್ಲಿ ಅರ್ಚಿರಾದಿ ಮಾರ್ಗದಿಂದ (ಹೋದವರು) ಹಿಂದಿರುಗಲಾರರು ಎಂದು ಉಪಪಾದಿಸಿರುವುದರಿಂದ 'ಪ್ರಜಾಕಾಮೋ ಹ ವೈ ಪ್ರಜಾಪತಿಃ' ಎಂಬ ವಾಕ್ಯದಲ್ಲಿ ಪ್ರಜಾಪತಿ ಶಬ್ದದಿಂದ ಪರಬ್ರಹ್ಮವನ್ನೇ ಉಲ್ಲೇಖಿಸಲಾಗಿದೆ ಎಂದು ತಿಳಿಯಬೇಕು· (ಆದ್ದರಿಂದ ಪ್ರಜಾಪತಿಯ ಉಪಾಸನೆಯನ್ನು ಮಾಡುವವನಿಗೆ ಅರ್ಚಿರಾದಿ ಮಾರ್ಗವನ್ನು ನಿರೂಪಿಸದೇ ಇರುವುದರಿಂದ ಪ್ರಜಾಪತಿಯು ಹೇಗೆ ಬ್ರಹ್ಮವಾಗಬಲ್ಲದು? ಎಂಬ ಸಂಶಯವನ್ನು ನಿವಾರಿಸಿದಂತಾಯಿತು)·

## ಭಾಷ್ಯಸಾರ

ದಕ್ಷಿಣಾಯನ ಹಾಗೂ ಉತ್ತರಾಯಣಗಳು ಸಂವತ್ಸರದ ಎರಡು ಅವಯವಗಳು· ಇವುಗಳಲ್ಲಿ ದಕ್ಷಿಣಾಯನವು ರಯಿಯೆಂದೂ, ಪಿತೃಯಾಣವೆಂದೂ ಕರೆಸಿಕೊಂಡಿದೆ· ಉತ್ತರಾಯಣವು ದಕ್ಷಿಣಾಯನ ಮಾರ್ಗಕ್ಕಿಂತಲೂ ಬೇರೆಯಾದುದು· ೨ಇದನ್ನು ಪ್ರಾಣವೆಂದು ಗುರುತಿಸಲಾಗಿದೆ· ಕಾರಣ, ಇದಕ್ಕೆ ಪ್ರತಿಮಾರ್ಗವಾದ ೨ದಕ್ಷಿಣಾಯನವನ್ನು ರಯಿಯೆಂದೇ ಸ್ಪಷ್ಟವಾಗಿ ಉಲ್ಲೇಖ ಮಾಡಿದ್ದು, ಮುಂದೆ ಶುಕ್ಲ-ಕೃಷ್ಣಪಕ್ಷಗಳನ್ನೂ, ಹಗಲು-ರಾತ್ರಿಗಳನ್ನೂ 'ಇದು ಪ್ರಾಣ, ಇದು ರಯಿ' ಎಂದು ಶಬ್ದತಃ ವಿಭಾಗವನ್ನು ನಿರ್ದೇಶಿಸಲಾಗಿದೆ· ಈ ಉತ್ತರಾಯಣವು ದೇವಯಾನವು·

ಉಪಾಸಕರಲ್ಲಿ ಎರಡುಬಗೆಯನ್ನು ಕಾಣಬಹುದು· ಹಲವು ಉಪಾಸಕರು ಪಶು, ಪುತ್ರ, ಐಶ್ವರ್ಯ, ಸ್ವರ್ಗ ಮುಂತಾದ ಕ್ಷುಲ್ಲಕ ಫಲಾಪೇಕ್ಷೆಯಿಂದಲೇ ಕಾರ್ಯ ಪ್ರವೃತ್ತರಾಗುವರು· ಅವರು ದಕ್ಷಿಣಾಯನಮಾರ್ಗದಲ್ಲಿ ಮುನ್ನಡೆಯಬೇಕಾದದ್ದು ಅನಿವಾರ್ಯ· ಆದರೆ ಕೆಲವು ಉಪಾಸಕರು ಈ ರೀತಿಯ ಅಲ್ಪಾಸ್ಥಿರಪ್ರಯೋಜನಗಳ ಸೆಳೆತಕ್ಕೆ ಒಳಗಾಗಲಾರರು· ಅಂಥವರು ಪ್ರಕೃತಿಯ ಭೋಗ-ದಿಂದಲೇ ವಿರಕ್ತರು, ಮಹಾತ್ಮರು· ಅವರ ಮನಸ್ಸು ಕಾಮಬಲೆಯಿಂದ ಸದಾ ಮುಕ್ತ· ಅವರ ಸತತ ಹೋರಾಟ, ಮುಕ್ತಿಗಾಗಿಯೇ ಹೊರತು ಭುಕ್ತಿಗಾಗಿ ಅಲ್ಲ· ಅವರು ತಪಸ್ಸಿನಿಂದ ದೇಹವನ್ನು ದಂಡಿಸುತ್ತಾರೆ· ಹೆಣ್ಣಿನ ವ್ಯಾಮೋಹವನ್ನು ಹೊರಗಿರಿಸಿ, ಬ್ರಹ್ಮಚರ್ಯೆಯನ್ನು ರೂಢಿಸಿಕೊಳ್ಳುತ್ತಾರೆ· ಅಂತಹ ಋಷಿಗಳಿಗೆ ಪರಮಾತ್ಮನಲ್ಲಿ ಶ್ರದ್ಧೆ ನೂರ್ಮಡಿಯಾಗಿ ವೃದ್ಧಿಸುತ್ತದೆ· ಅವರು

---

೧· ನಾಲ್ಕನೆಯ ಮಂತ್ರದ ಟಿಪ್ಪಣಿಯನ್ನು ಗಮನಿಸಿರಿ·

೨· ದಕ್ಷಿಣಾಯನಸ್ಯ ರಯಿತ್ವನಿರ್ದೇಶೇನ್ನೈವೋತ್ತರಾಯಣಸ್ಯ ಪ್ರಾಣತ್ವಂ ನಿರ್ದಿಷ್ಟಪ್ರಾಯಮೇವ ।
ಶ್ರೂಯತೇ ಽೋತ್ತರತ್ರ ಶುಕ್ಲಕೃಷ್ಣಯೋಃ ರಯಿಪ್ರಾಣವಿಭಾಗಸ್ತಥಾಹೋರಾತ್ರಯೋರಪಿ - ಸುಬೋಧಿನೀ·

ಆತ್ಮವಿದ್ಯೆಯನ್ನು ಸಾಧಿಸಿ ಭಗವದುಪಾಸನೆಯಲ್ಲಿ ಸಿದ್ಧಿಯನ್ನೇ ಪಡೆಯುತ್ತಾರೆ· [೧]ಶ್ರವಣ, ಮನನ, ನಿದಿಧ್ಯಾಸನಗಳೆಂಬ ಉಪಾಯಗಳಿಂದ ಪರತತ್ತ್ವವನ್ನು ಸಾಕ್ಷಾತ್ಕರಿಸಿಕೊಳ್ಳುತ್ತಾರೆ·

ಅವರು ದೇವಯಾನದ ಮುಖಾಂತರವೇ ಪಯಣ ಬೆಳೆಸುವರು· [೨]ಜನ್ಮಾಂತರದ ಕರ್ಮಗಳಿಂದ ಸಂದಾಯವಾದ ದೇಹವು ಮಸಣಿಸಲು, ಆದಿತ್ಯಲೋಕವನ್ನೇ ಪಡೆಯುತ್ತಾರೆ· ಆದಿತ್ಯನು ಪ್ರಾಣಿಗಳಿಗೆ ಶ್ರೇಷ್ಠವಾದ ಆಶ್ರಯವಾಗಿರುತ್ತಾನೆ· ಇವನನ್ನು ಹೊಂದಿದವರಿಗೆ ಸಾವಿನ ಭಯ ಮತ್ತು ಪರಿಣಾಮಗಳು ತಪ್ಪುತ್ತವೆ· ಇವನನ್ನು ಸೇರಿ ಯಾರೂ ಹಿಂದಿರುಗುವುದಿಲ್ಲ· ಅವರೆಲ್ಲರೂ ಬ್ರಹ್ಮವನ್ನು ಪಡೆದೇ ಪಡೆಯುತ್ತಾರೆ· ಕಾರಣ ಚಂದ್ರನಂತೆ ಇವನು ವೃದ್ಧಿ-ಕ್ಷಯಗಳು ಇಲ್ಲದವನು· ಆದ್ದರಿಂದಲೇ ಆಶ್ರಿತರ ವೃದ್ಧಿ-ಕ್ಷಯಗಳನ್ನು ಹೋಗಲಾಡಿಸಿ ಸ್ಥಿರವಾದ ಸ್ಥಾನವನ್ನು ಕಲ್ಪಿಸಿಕೊಡುತ್ತಾನೆ· ಆದ್ದರಿಂದ ವೇದಗಳು ಹೀಗೆ ಸಾರುತ್ತಿವೆ· 'ಆದಿತ್ಯಾಚ್ಚಂದ್ರಮಸಮ್, ಚಂದ್ರಮಸೋ ವಿದ್ಯುತಮ್, ವಿದ್ಯುತೋಽಮಾನವಃ ಸ ಏನಾನ್ ಬ್ರಹ್ಮ ಗಮಯತಿ'· ಆದಿತ್ಯನಿಂದ ಆರಂಭಿಸಿ ವಿಷ್ಣು ಪದಕ್ಕೆ (ಸಾಕೇತಕ್ಕೆ) ಮುಂದುವರಿಯುವುದನ್ನು 'ಶ್ರೀರಾಮಪ್ರಾಪ್ತಿಪದ್ಧತಿ'ಯಲ್ಲಿ ಶ್ರೀರಾಮೇಶ್ವರಾನಂದರು ವಿಶದವಾಗಿ ತಿಳಿಸುತ್ತ, [೩]ಅರ್ಚಿರಾದಿ ಮಾರ್ಗಗಳನ್ನು ಸ್ಪಷ್ಟವಾಗಿ ಉಲ್ಲೇಖಿಸಿದ್ದಾರೆ·

## ಮಂತ್ರ - ೧೧

पंचपादं पितरं द्वादशाकृतिं दिव आहुः
पर अर्द्धे पुरीषिणम् ।
अथेमे अन्य उपरे विचक्षणं सप्तचक्रे
षडर आहुरर्पितम् इति ।। 11 ।।

---

೧· ಆತ್ಮಾನಂ - ಪರಮಾತ್ಮಾನಮ್ ಅನ್ವಿಷ್ಯ - ಶ್ರವಣ-ಮನನ-ನಿದಿಧ್ಯಾಸನೈಃ ವಿಜ್ಞಾಯ ಸಾಕ್ಷಾತ್ ಕೃತ್ಯ - ಆನಂದಭಾಷ್ಯ·

೨· ಪ್ರಾರಬ್ಧದೇಹಾವಸಾನಸಮಯೇ ಉತ್ತರೇಣಾಯನೇನ ದೇವಯಾನರೂಪೇಣ, ಆದಿತ್ಯಂ - ದೇವಯಾನಮಾರ್ಗಂ ಪ್ರಾಪ್ನುವಂತಿ - ಸುಬೋಧಿನೀ·

೩· ದಿನಂ ತತ್ರಾರ್ಚಿಷೋಽಹ್ನಶ್ಚ ಶುಕ್ಲಂ ಪಕ್ಷಂ ಚ ಗಚ್ಛತಿ ।
ಸಮೇತಿ ಶುಕ್ಲಪಕ್ಷಾತ್ ಸ ಉತ್ತರಾಯಣಮೇವ ಹಿ ॥ ೧ ॥
ತಸ್ಮಾತ್ಸಂವತ್ಸರಂ ತಸ್ಮಾದ್ವಾಯುಂ ವಾಯೋಶ್ಚ ಭಾಸ್ಕರಮ್ ।
ಸೂರ್ಯಾದ್ವಿಧುಂ ವಿಧೋಶ್ಚಾಥ ವಿದ್ಯುತಂ ವರುಣಂತತಃ ॥ ೨ ॥
ತತಶ್ಚೇಂದ್ರಂ ತತೋ ಧಾತೃಲೋಕಂ ಗಚ್ಛತ್ಯುಪಾಸಕಃ ।
ಅತಿಕ್ರಾಮತಿ ಪಶ್ಚಾತ್ ಭೂಮ್ಯಾದ್ಯಾವರಣಸಪ್ತಕಮ್ ॥ ೩ ॥
ಉಲ್ಲಂಘ್ಯ ಪ್ರಕೃತಿಂ ಸೋಽಥ ವಿರಜಾಮವಗಾಹತೇ ।
ತತಃ ಸೂಕ್ಷ್ಮಾತ್ ಶರೀರಾದ್ಧಿ ವಿಶ್ಲಿಷ್ಟಶ್ಚ ಭವತ್ಯಸೌ ॥ ೪ ॥

ಪಂಚಪಾದಂ ಪಿತರಂ ದ್ವಾದಶಾಕೃತಿಂ ದಿವ ಆಹುಃ
ಪರೇ ಅರ್ಧೇ ಪುರೀಷಿಣಮ್ ।
ಅಥೇಮೇ ಅನ್ಯ ಉಪರೇ ವಿಚಕ್ಷಣಂ ಸಪ್ತಚಕ್ರೇ
ಷಡರ ಆಹುರರ್ಪಿತಮ್ ಇತಿ ॥

## ಪ್ರತಿಪದಾರ್ಥ

**ಪಂಚಪಾದಮ್** - (ಅಳತೆಯ ವ್ಯತ್ಯಾಸದಿಂದ) ವತ್ಸರ, ಸಂವತ್ಸರ, ಇಡಾವತ್ಸರ, ಅನುವತ್ಸರ ಎಂಬ ಐದು ಪಾದಗಳುಳ್ಳ ಅಥವಾ ಐದು ಋತುಗಳು ಪಾದಗಳಾಗಿರುವ, **ಪಿತರಮ್** - ಜಗತ್ತಿನ ಹುಟ್ಟಿಗೆ ಕಾರಣನಾದ, **ದ್ವಾದಶಾಕೃತಿಮ್** - ಹನ್ನೆರಡು ತಿಂಗಳುಗಳು ಅವಯವಗಳಾಗಿ ಇರುವ, **ದಿವಃ ಪರೇ** - ಸ್ವರ್ಗದಿಂದ ಬ್ರಹ್ಮಲೋಕದವರೆಗಿನ ಲೋಕಗಳಿಗಿಂತಲೂ ಶ್ರೇಷ್ಠವಾದ, **ಅರ್ಧೇ** - ಸ್ಥಾನದಲ್ಲಿರುವ ಪ್ರಜಾಪತಿಯಾದ (ಶ್ರೀಪತಿಯನ್ನು, **ಪುರೀಷಿಣಮ್** - ಬ್ರಹ್ಮಗೋಲದಲ್ಲಿ ಒಂದು ಪುರದಲ್ಲಿ ಇರುವಂತೆ ಇರುವವನು ಎಂದು, **ಆಹುಃ** - ಕಾಲವನ್ನು ತಿಳಿದವರು ಹೇಳುತ್ತಾರೆ· ಅಥವಾ **ಅನ್ಯ ಉಪರೇ ಇಮೇ** - ಹಿಂದೆ ಹೇಳಲಾದವರಿಗಿಂತಲೂ ಬೇರೆಯವರಾದ ಈ ಕಾಲತತ್ವವಿರುವ, **ಸಪ್ತಚಕ್ರೇ** - ಆದಿತ್ಯ ಮೊದಲಾದ ಏಳು ಗ್ರಹಗಳು ಚಕ್ರಗಳಾಗಿ ಸಂದ, **ಷಡರೇ** - ಆರು ಋತುಗಳೇ ಹಲ್ಲುಗಳಾಗಿರುವ ಸಂವತ್ಸರವೆಂಬ ರಥದಲ್ಲಿ, **ವಿಚಕ್ಷಣಮ್** - ಈ ಜಗತ್ತೆಲ್ಲವೂ ನಿಶ್ಚಲವಾಗುವಂತೆ (ಕುಶಲವಾಗಿರುವಂತೆ), **ಪ್ರಜಾಪತಿಃ** - ಪರಮಾತ್ಮನಿಂದ, **ಅರ್ಪಿತಮ್** - ಸ್ಥಾಪಿಸಲ್ಪಟ್ಟಿದೆ ಎಂದು, **ಆಹುಃ** - ಹೇಳುತ್ತಾರೆ·

## ತಾತ್ಪರ್ಯ

ಕಾಲತತ್ವವನ್ನು ತಿಳಿದ ಮಹನೀಯರು, ಸಂವತ್ಸರಾತ್ಮಕನಾದ ಪ್ರಜಾಪತಿಯು ಜಗತ್ತಿಗೆ ಜನಕನು; ಇವನಿಗೆ ಐದು ಋತುಗಳೇ ಪಾದಗಳು, ಹನ್ನೆರಡು ತಿಂಗಳುಗಳೇ ಅವಯವಗಳು · ಇವನು ಸ್ವರ್ಗಾದಿ ಬ್ರಹ್ಮಲೋಕಗಳಿಗೂ ಉತ್ತಮವಾದ ಸ್ಥಾನದಲ್ಲಿ - ಬ್ರಹ್ಮಾಂಡದಲ್ಲಿ ಒಂದು ನಗರದಲ್ಲಿರುವಂತೆ ಇರುವ ಪರಮಾತ್ಮನು ಎಂದು ಹೇಳುತ್ತಾರೆ · ಮತ್ತೆ ಕೆಲವರು, ಸೂರ್ಯ ಮುಂತಾದ ಏಳು ಗ್ರಹಗಳು ಚಕ್ರಗಳಾಗಿರುವ, ಷಡೃತುಗಳು ಹಲ್ಲು(ಅರೆಕಾಲು)ಗಳಾಗಿರುವ ರಥದಲ್ಲಿ ಪರಮಾತ್ಮನು ಜಗತ್ತೆಲ್ಲವನ್ನೂ ಕುಶಲದಿಂದ ನೆಲೆಗೊಳಿಸುತ್ತಾನೆ ಎಂದು ಹೇಳುತ್ತಾರೆ·

## ರಂಗರಾಮಾನುಜಭಾಷ್ಯ

**ಪಂಚಪಾದಂ ಪಿತರಮಿತಿ ।** ವತ್ಸರ-ಸಂವತ್ಸರ-ಪರಿವತ್ಸರ-ಇದಾವತ್ಸರ-ಅನುವತ್ಸರರೂಪಾಃ ಪಂಚಪಾದಾಯಸ್ಯ ಸಃ ಪಂಚಪಾದಃ, ಅಥವಾ ಹೇಮಂತ ಶಿಶಿರಯೋರೇಕೀಕರಣಾತ್ ಷಡೃತವಃ ಪಂಚರ್ತವಃ ಸಂಪದ್ಯಂತೇ । ತೇ ಪಾದಾ ಯಸ್ಯ ಸಃ ಪಂಚಪಾದಃ ತಮ್ । **ಪಿತರಮ್**

ಸರ್ವಸ್ಯ ಜನಕಮ್ । ದ್ವಾದಶಾಕೃತಿಮ್ ದ್ವಾದಶಮಾಸಾಕೃತಿಮ್ । **ದಿವಃ** ಸ್ವರ್ಗಾತ್ **ಪರೇ** ಪರಸ್ಮಿನ್ **ಅರ್ಧೇ** ಸ್ಥಾನೇ । **ಪುರೀಷಿಣಮ್** । ಪುರೀಷಶಬ್ದೇನ ಸ್ವರ್ಣಭೂಮಿ ಸನ್ನಿಹಿತಂ ಬ್ರಹ್ಮಾಂಡಗೋಲಕಾವರಣಮುಚ್ಯತೇ । ಸೋಽಸ್ಯ ಸ್ಥಾನತ್ವೇನಾಸ್ತೀತಿ ಪುರೀಷಿಣಮಾಹುರಿತ್ಯನ್ವಯಃ । 'ಅಥ' ಶಬ್ದಃ ಪಕ್ಷಾಂತರಪರಿಗ್ರಹೇ । 'ಉ' ಶಬ್ದೋಽವಧಾರಣೇ । 'ಪರ' ಶಬ್ದಃ ಉತ್ಕೃಷ್ಟವಚನಃ । ಪೂರ್ವೋಕ್ತೇಭ್ಯೋಽನ್ಯೇ ಉತ್ಕೃಷ್ಟಾಃ ಇಮೇ ಕಾಲತತ್ತ್ವವಿದಃ ಆದಿತ್ಯಾದಿಗ್ರಹಸಪ್ತಕಲಕ್ಷಣಚಕ್ರಯುಕ್ತೇ ಋತುಲಕ್ಷಣಾರಷಟ್ಕಯುಕ್ತೇ ಸಂವತ್ಸರಾಖ್ಯೇ ರಥೇ ಜಗತ್ ಸರ್ವಂ ವಿಚಕ್ಷಣಮ್ ಕುಶಲಂ ನಿಶ್ಚಲಂ ಯಥಾ ಭವತಿ ತಥಾ ಅರ್ಪಿತಮಿತ್ಯಾಹುಃ ।

## ಅನುವಾದ

**ಪಂಚಪಾದಂ ಪಿತರಮಿತಿ** । ಯಾರಿಗೆ ವತ್ಸರ, [೧]ಸಂವತ್ಸರ, ಪರಿವತ್ಸರ, ಇದಾವತ್ಸರ ಮತ್ತು ಅನುವತ್ಸರ ಎಂಬ ಐದು ಪಾದಗಳು ಇವೆಯೋ ಅವನು ಪಂಚಪಾದನು· ಅಥವಾ ಹೇಮಂತ ಹಾಗೂ ಶಿಶಿರ ಋತುಗಳನ್ನು ಒಂದಾಗಿ ಭಾವಿಸುವುದರಿಂದ ಆರು ಋತುಗಳು ಐದು ಋತುಗಳಾಗುತ್ತವೆ · ಅವು (ಐದು ಋತುಗಳು) ಪಾದಗಳಾಗಿ ಯಾರಿಗಿವೆಯೋ ಅವನು ಪಂಚಪಾದನು· ಅವನನ್ನು **ಪಿತರಮ್** - ಎಲ್ಲಕ್ಕೂ ತಂದೆಯಾದ (ಕಾರಣನಾದ) **ದ್ವಾದಶಾಕೃತಿಮ್**- ಹನ್ನೆರಡು ತಿಂಗಳುಗಳು ಅವಯವಗಳಾಗಿ ಇರುವ **ದಿವಃ** - ಸ್ವರ್ಗಕ್ಕಿಂತಲೂ **ಪರೇ** - ಉತ್ತಮವಾದ **ಅರ್ಧೇ** - ತಾಣದಲ್ಲಿ **ಪುರೀಷಿಣಮ್** - ಪುರೀಷ ಪದವು ಸ್ವರ್ಣಭೂಮಿಗೆ ಸನಿಹವಾದ ಬ್ರಹ್ಮಾಂಡ-ವರ್ತುಲದ ಆವರಣವನ್ನು ಬೋಧಿಸುತ್ತದೆ · ಅದು ಇವನಿಗೆ ಸ್ಥಾನವಾಗಿದ್ದುದರಿಂದ 'ಪುರೀಷೀ' ಎಂದು ಕರೆಯುತ್ತಾರೆ·

**ಅಥೇಮೇ ಅನ್ಯ ಉ ಪರೇ ಇತಿ** । ಅಥ ಶಬ್ದವು ಇನ್ನೊಂದು ಪಕ್ಷವನ್ನು ಹಿಡಿಯುವುದನ್ನು ಸೂಚಿಸುತ್ತದೆ· 'ಉ' ಪದಕ್ಕೆ ಅವಧಾರಣವು ಅರ್ಥವಾಗಿದೆ· ಪರಶಬ್ದಕ್ಕೆ ಉತ್ಕೃಷ್ಟ ಎಂದು ಅಭಿಪ್ರಾಯ ಹಿಂದೆ ಹೇಳಲಾದವರಿಗಿಂತಲೂ ಭಿನ್ನರೂ, ಉತ್ಕೃಷ್ಟರೂ ಆದ **ಇಮೇ** - ಕಾಲತತ್ತ್ವವನ್ನು ತಿಳಿದವರು ಸೂರ್ಯ ಮೊದಲಾದ ಸಪ್ತಗ್ರಹಗಳೆಂಬ ಚಕ್ರಗಳನ್ನು ಹೊಂದಿದ, ಋತುಗಳೆಂಬ ಆರು ಅರೆಕಾಲು-ಗಳಿಂದ ಕೂಡಿದ ಸಂವತ್ಸರವೆಂಬ ರಥದಲ್ಲಿ ಜಗತ್ತೆಲ್ಲವೂ **ವಿಚಕ್ಷಣಮ್** - ಕ್ಷೇಮವಾಗಿಯೂ, ಸ್ಥಿರವಾಗಿಯೂ ಹೇಗಿರಬಹುದೋ ಹಾಗೆ ನೆಲೆಗೊಳಿಸಲ್ಪಟ್ಟಿದೆಯೆಂದು ಹೇಳುತ್ತಾರೆ·

## ಭಾಷ್ಯಸಾರ

ಪ್ರಜಾಪತಿಯಾದ ಶ್ರೀಪತಿಯು ಚರಾಚರ ಜಗತ್ತಿಗೆಲ್ಲ ತಂದೆಯು· ಇವನ ಸಂಕಲ್ಪ ಮಾತ್ರದಿಂದ ಪ್ರಪಂಚದಲ್ಲಿ ಜೀವಕಳೆ ತಲೆಯೆತ್ತಿದೆ· ಸೂಕ್ಷ್ಮವು ಸ್ಥೂಲವಾಗಿ ಪರಿಣಮಿಸಿದೆ· ಇವನು ಸಂವತ್ಸರ

---

೧· ವತ್ಸರ, ಸಂವತ್ಸರ ಮೊದಲಾದ ಐದು ಬಗೆಯ ವರ್ಷವನ್ನು ವಿಷ್ಣುಪುರಾಣದಲ್ಲಿ ವಿವರಿಸಲಾಗಿದೆ

ಸ್ವರೂಪನು. ಇವನಿಗೆ ವಸಂತ, ಗ್ರೀಷ್ಮ, ವರ್ಷ, ಶರತ್ ಹಾಗೂ ಹೇಮಂತ - ಶಿಶಿರ ಎಂಬ ಐದು ಋತುಗಳೇ ಪಾದಗಳು. [೧]ಹೇಮಂತ ಹಾಗೂ ಶಿಶಿರ ಋತುಗಳು ವಸ್ತುತಃ ಬೇರೆ ಬೇರೆಯಾದರೂ ಈ ಋತುಗಳ ಕಾಲದಲ್ಲಿ ಶೀತವು ಅಧಿಕವಾಗಿರುವುದರಿಂದ ಇವುಗಳನ್ನು ಒಂದಾಗಿ ಭಾವಿಸಲಾಗಿದೆ. ಆದ್ದರಿಂದ ಋತುಗಳು ಆರೇ ಆಗಿದ್ದರೂ ಐದಾಗಿ ಸಲ್ಲುತ್ತವೆ.

ಪರಮಾತ್ಮನಿಗೆ ಮೇಷ, ವೃಷಭ, ಮಿಥುನ, ಕರ್ಕ, ಸಿಂಹ, ಕನ್ಯಾ, ತುಲಾ, ವೃಶ್ಚಿಕ, ಧನು, ಮಕರ, ಕುಂಭ, ಮತ್ತು ಮೀನಗಳೆಂಬ ಹನ್ನೆರಡು ಮಾಸಗಳೇ ಅವಯವಗಳು. [೨]ನೂಲುಗಳಿಂದ ಬಟ್ಟೆ ಸಿದ್ಧವಾಗಿ ಅದರಲ್ಲಿ ಅವಯವವೆಂಬ ವ್ಯವಹಾರವುಂಟಾಗುತ್ತದೆ. ಹಾಗೆಯೇ ಸಂವತ್ಸರವೆಂಬ ಪ್ರಜಾಪತಿಯಲ್ಲಿಯೂ ಹನ್ನೆರಡು ಮಾಸಗಳೆಂಬ ಅವಯವಗಳಿಂದಲೇ ಅವಯವತ್ವವು ಸಿದ್ಧವಾಗುತ್ತದೆ ಇವನು ಅಂತರಿಕ್ಷದಲ್ಲಿ ಸ್ವರ್ಗಾದಿಲೋಕಕ್ಕಿಂತಲೂ ಉತ್ತಮವಾದ ಲೋಕದಲ್ಲಿ ನೆಲೆಸಿರುತ್ತಾನೆ. ಇವನಿಲ್ಲದೇ ಲೋಕದಲ್ಲಿ ಮಳೆಯೂ, ಅದರಿಂದ ಬೆಳೆಯೂ, ಅದರಿಂದ ಜೀವಕಳೆಯೂ ಇರಲಾರದು ಇದು ಕೆಲವು ಮಹಾತ್ಮರ ವಿವರಣೆ. ಇನ್ನು ಹಲವು ಮಹನೀಯ ಕಾಲತತ್ವಜ್ಞಾನಿಗಳು ಬೇರೆ ಬಗೆಯ ಮಂಡನೆಯನ್ನು ಮುಂದಿಡುತ್ತಾರೆ. ಸಂವತ್ಸರವೇ ರಥ. ಸೂರ್ಯ ಮುಂತಾದ ಸಪ್ತಗ್ರಹಗಳೇ ರಥಚಕ್ರಗಳು. ಆರು ಋತುಗಳೇ ಅರೆಕಾಲುಗಳು. ಇಂತಹ ರಥದಲ್ಲಿ ಸಮಸ್ತ ಜಗತ್ತನ್ನೂ ಪರಮಾತ್ಮನು ಕುಶಲವಾಗಿ ನೆಲೆಗೊಳಿಸಿ ಕಾಪಾಡುತ್ತಾನೆ. ಈ ಎರಡೂ ಪಕ್ಷಗಳಲ್ಲಿ [೩]ಕಲ್ಪನೆಯು ಭಿನ್ನವಾಗಿದೆಯೇ ಹೊರತು ರೂಪಿಸಲ್ಪಡುವ ವಸ್ತುವು ಒಂದೇ ಆಗಿದೆ.

ಪ್ರಜಾಪತಿಯಾದ ಪರಮಾತ್ಮನಿಗೆ ಸಲ್ಲುವ ವಿಶೇಷಣಗಳು ಆದಿತ್ಯನಿಗೂ ಹೊಂದುತ್ತವೆ. [೪]ಆದಿತ್ಯನು ಮೇಷ ಮೊದಲಾದ ಹನ್ನೆರಡು ರಾಶಿಗಳಲ್ಲಿ ಸಂಚರಿಸುತ್ತಾನೆ. ಇದರಿಂದ ಹನ್ನೆರಡು ಮಾಸಗಳ, ಆರು ಋತುಗಳ ವಿಭಾಗಕ್ಕೆ ಕಾರಣನಾಗುತ್ತಾನೆ. ಆದ್ದರಿಂದ ಇವನಿಗೆ ಹನ್ನೆರಡು ಅವಯವಗಳೂ, ಐದು ಪಾದಗಳೂ ಇವೆ. ಇವನು ಅಂತರಿಕ್ಷದ ಮೇಲ್ಭಾಗದಲ್ಲಿದ್ದು ಮಳೆಸುರಿಸುತ್ತಾನೆ ಹಾಗಾಗಿ ಜೀವಿ ಮಾತ್ರಕ್ಕೆ ತಂದೆಯು.

[೫]ಚಕ್ರಗಳು ರಥದ ಚಲನೆಗೆ ಸಾಧನಗಳು. ಇಲ್ಲಿ ಅಶ್ವಗಳನ್ನು ಸೂಚಿಸಲಾಗಿದೆ. ಕಾರಣ ಅವುಗಳಿಲ್ಲದೇ ರಥವು ಚಲಿಸಲಾರದು. ಇಂತಹ ಏಳು ಕುದುರೆಗಳಿಂದ ಕೂಡಿದ ರಥವುಳ್ಳ, ಆರು

---

೧. ಹೇಮಂತಶಿಶಿರಯೋಃ ಶೀತಬಾಹುಲ್ಯಸ್ಯ ತುಲ್ಯತ್ವಾದೇಕತ್ವಮಭಿಪ್ರೇತ್ಯ ಪಂಚರ್ತುಪಾದೋಽಯಮ್ ಸಂವತ್ಸರಾಖ್ಯಃ ಪ್ರಜಾಪತಿಃ ಇತ್ಯುಕ್ತಮ್ - ಆನಂದಭಾಷ್ಯ.

೨. ಅವಯವೈರೇವ ತಂತುಭಿಃ ಪಟಸ್ಯಾವಯವಿತ್ವಂ ಕ್ರಿಯತೇ, ಸಂವತ್ಸರಾಖ್ಯ ಪ್ರಜಾಪತೇರಪ್ಯವಯವಿತ್ವಂ ದ್ವಾದಶಮಾಸೈರವಯವೈರೇವ ಸಂಪಾದ್ಯತೇ - ಆನಂದಭಾಷ್ಯ.

೩. ಉಭಯತ್ರ ಕಲ್ಪನಾಭೇದೇಽಪಿ ವಸ್ತು ನ ಭಿದ್ಯತೇ - ಆನಂದಭಾಷ್ಯ.

೪. ಮೇಷಾದಿರಾಶಿಷು ಪ್ರವಿಶನ್ನಾದಿತ್ಯಃ ಮಾಸಭೇದಾಪಾದನದ್ವಾರಾ ಸಂವತ್ಸರವ್ಯವಹಾರೇ ಋತುವ್ಯವಹಾರೇ ಚ ಹೇತುರ್ಭವತಿ - ಸುಬೋಧಿನೀ.

೫. ಚಕ್ರಾಣಿ ರಥಗತಿ ಸಾಧನಾನಿ, ಪ್ರಕೃತೇ ಅಶ್ವಾ ವಿವಕ್ಷಿತಾಃ - ಸುಬೋಧಿನೀ.

ಋತುಗಳನ್ನು ನಿರ್ವಹಿಸುವ ಶಕ್ತಿಯುಳ್ಳ ಸೂರ್ಯನಲ್ಲಿ ಪ್ರಾಣಿವರ್ಗವು ನೆಲೆಗೊಂಡಿದೆ· ಆದ್ದರಿಂದ [೧]ಸೂರ್ಯನಿಂದಲೇ ಈ ಎಲ್ಲ ಪ್ರಾಣಿಗಳ ಅಸ್ತಿತ್ವವೂ ಇರುವುದು··

## ಮಂತ್ರ - ೧೨

मासो वै प्रजापतिः । तस्य कृष्णपक्ष एव रयिः
शुक्लः प्राणः । तस्मादेत ऋषयश्शुक्ल
इष्टिं कुर्वन्ति; इतर इतरस्मिन् ।। 12 ||

ಮಾಸೋ ವೈ ಪ್ರಜಾಪತಿಃ । ತಸ್ಯ ಕೃಷ್ಣಪಕ್ಷ ಏವ ರಯಿಃ
ಶುಕ್ಲಃ ಪ್ರಾಣಃ । [೨]ತಸ್ಮಾದೇತೇ ಋಷಯಃ ಶುಕ್ಲೇ
[೩]ಇಷ್ಟಿಂ ಕುರ್ವಂತಿ, ಇತರ ಇತರಸ್ಮಿನ್ ॥

### ಪ್ರತಿಪದಾರ್ಥ

**ಪ್ರಜಾಪತಿಃ** - ಪರಮಾತ್ಮನು, **ಮಾಸೋ ವೈ** - ಮಾಸಶರೀರನೇ ಆಗಿದ್ದಾನೆ· **ತಸ್ಯ** - ಆ ಪರಮಾತ್ಮನ, **ಕೃಷ್ಣಪಕ್ಷ ಏವ** - ಕೃಷ್ಣಪಕ್ಷವೇ, **ರಯಿಃ** - ಸ್ವರ್ಗ ಮುಂತಾದ ಕ್ಷುಲ್ಲಕ ಫಲಭೂತವಾದ ಭೋಗ್ಯವಸ್ತು, **ಶುಕ್ಲಃ** - ಶುಕ್ಲಪಕ್ಷವೇ, **ಪ್ರಾಣಃ** - ಭರದಿಂದ ಪರಮಪದವನ್ನು ಹೊಂದಿಸುವುದು· **ತಸ್ಮಾತ್** - ಆದುದರಿಂದ, **ಏತೇ ಋಷಯಃ** - ಅತೀಂದ್ರಿಯವಾದ ಪರತತ್ವವನ್ನು ತಿಳಿದ ಜ್ಞಾನಿಗಳು, **ಶುಕ್ಲೇ** - ಶುಕ್ಲಪಕ್ಷದಲ್ಲಿಯೇ, **ಇಷ್ಟಿಂ ಕುರ್ವಂತಿ** - ಪರಮಾತ್ಮನ ಆರಾಧನೆಯೆಂಬ ಯಾಗವನ್ನು ಮಾಡುತ್ತಾರೆ· **ಇತರೇ** - ಇತರರಿಗಿಂತ ಬೇರೆಯವರು, **ಇತರಸ್ಮಿನ್** - ಕೃಷ್ಣಪಕ್ಷದಲ್ಲಿ (**ಇಷ್ಟಿಂ** - ಭಗವದಾರಾಧನೆಯನ್ನು, **ಕುರ್ವಂತಿ** - ಮಾಡುತ್ತಾರೆ)·

### ತಾತ್ಪರ್ಯ

ಪರಮಾತ್ಮನಿಗೆ ಮಾಸಗಳು ಶರೀರವಾಗಿವೆ· ಪ್ರತಿ ಮಾಸದಲ್ಲಿಯೂ ಎರಡು ಘಟಕಗಳಿವೆ· ಅವು ಕೃಷ್ಣಪಕ್ಷ ಹಾಗೂ ಶುಕ್ಲಪಕ್ಷಗಳು· ಇವು ಪರಮಾತ್ಮನ ಅವಯವಗಳು· ಇಂತಹ ಕೃಷ್ಣಪಕ್ಷ ಮತ್ತು

---

೧· ಸೂರ್ಯೇಣೈವಾಸ್ಯ ಪ್ರಾಣಿಜಾತಸ್ಯ ಸತ್ತಾ - ಸುಬೋಧಿನೀ·

೨· ರಂಗರಾಮಾನುಜಭಾಷ್ಯವನ್ನು ಉಳಿದು ಬೇರೆ ಎಲ್ಲ ಕಡೆಗಳಲ್ಲಿಯೂ 'ತಸ್ಮಾದೇತ ಋಷಯಃ' ಎಂಬ ಪಾಠವೇ ಇದೆ·

೩· ರಂಗರಾಮಾನುಜಭಾಷ್ಯದಲ್ಲಿ "ಇಷ್ಟಮ್" ಎಂಬ ಪಾಠ ವ್ಯಾಖ್ಯಾನದಲ್ಲಿದೆ·

ಶುಕ್ಲಪಕ್ಷಗಳೇ ರಯಿ ಹಾಗೂ ಪ್ರಾಣಗಳು· ಪರತತ್ವವನ್ನು ತಿಳಿದ ಮಹಾತ್ಮರು ಈ ಶುಕ್ಲಪಕ್ಷದಲ್ಲಿಯೇ ಭಗವದುಪಾಸನೆಯನ್ನು ಮಾಡಿ, ಪರಮಪದವನ್ನು ಸೇರುತ್ತಾರೆ· ಸ್ವರ್ಗ ಮುಂತಾದ ಕ್ಷುದ್ರಫಲಾಭಿಲಾಷಿಗಳು ಮಾತ್ರ ಕೃಷ್ಣಪಕ್ಷದಲ್ಲಿ ಆರಾಧನೆ ಮಾಡಿ ಕ್ಷಣಿಕ ಪ್ರಯೋಜನಗಳನ್ನು ಪಡೆಯುತ್ತಾರೆ·

## ರಂಗರಾಮಾನುಜಭಾಷ್ಯ

ಯಥಾ ಸಂವತ್ಸರೋ ರಯಿಪ್ರಾಣಾತ್ಮನಾ ವಿಭಕ್ತಃ, ಏವಂ ಮಾಸೋಽಪಿ ವಿಭಕ್ತ ಇತ್ಯುಪಾಸನಾರ್ಥಂ ಪ್ರದರ್ಶಯತಿ - **ಮಾಸೋ ವೈ ಪ್ರಜಾಪತಿರಿತಿ** । ಸ್ಪಷ್ಟೋಽರ್ಥಃ । **ತಸ್ಮಾದೇತೇತಿ** । ಯಸ್ಮಾಚ್ಛುಕ್ಲಃಪಕ್ಷಃ ಪ್ರಾಣತಯೋತ್ಕೃಷ್ಟಃ, ತಸ್ಮಾತ್ **ಋಷಯಃ** ಅತೀಂದ್ರಿಯಾರ್ಥದ್ರಷ್ಟಾರಃ ಸರ್ವೇಽಪಿ ಶುಕ್ಲಪಕ್ಷ ಏವ ಶೋಭನಾನಿ ಕರ್ಮಾಣಿ ಕುರ್ವಂತಿ । **ಇತರೇ** ಅನೃಷಯೋಽಜ್ಞಾಃ ಪುನರಪ್ರಾಣತಯಾ ಅಸಾರಭೂತೇ ಕೃಷ್ಣಪಕ್ಷೇ ಕುರ್ವಂತೀತ್ಯರ್ಥಃ ॥

## ಅನುವಾದ

ವರ್ಷವು ಹೇಗೆ ರಯಿ - ಪ್ರಾಣಗಳಾಗಿ ವಿಭಾಗಿಸಲ್ಪಟ್ಟಿದೆಯೋ ಹಾಗೆ ತಿಂಗಳೂ ವಿಭಾಗಿಸಲ್ಪಟ್ಟಿದೆ ಎಂದು ಉಪಾಸನೆಯ ಸಲುವಾಗಿ ವಿವರಿಸುತ್ತಾನೆ· **ಮಾಸೋ ವೈ ಪ್ರಜಾಪತಿರಿತಿ** । ಶುಕ್ಲಪಕ್ಷವು ಪ್ರಾಣವಾಗಿದ್ದು, ಉತ್ತಮವಾಗಿರುವುದರಿಂದಲೇ **ಋಷಯಃ** ಅತೀಂದ್ರಿಯವಸ್ತುವನ್ನು ಕಾಣಬಲ್ಲ ಋಷಿಗಳೆಲ್ಲರೂ ಶುಕ್ಲಪಕ್ಷದಲ್ಲಿಯೇ ಶುಭಕಾರ್ಯಗಳನ್ನು ನೆರವೇರಿಸುತ್ತಾರೆ· **ಇತರೇ** ಅಜ್ಞರೂ, ಋಷಿಗಳಲ್ಲದವರೂ ಆದ ಜನರಾದರೋ ಪ್ರಾಣವಲ್ಲದ ಅಸಾರವಾದ ಕೃಷ್ಣಪಕ್ಷದಲ್ಲಿ (ಅವುಗಳನ್ನು) ಮಾಡುತ್ತಾರೆ ಎಂದು ಅಭಿಪ್ರಾಯ·

## ಭಾಷ್ಯಸಾರ

ಪ್ರಜಾಪ್ರತಿಯು ಸಂವತ್ಸರ ಸ್ವರೂಪನು· ಸಂವತ್ಸರದ ಅವಯವಗಳಾದ ಹನ್ನೆರಡು ಮಾಸಗಳು ಇವನಿಗೆ ಶರೀರ· ಆದುದರಿಂದ ಅವನು ಅವುಗಳ [೧]ರೂಪದಲ್ಲಿಯೂ ಇರುತ್ತಾನೆ· ಈ ಮಾಸ ಪ್ರಜಾಪತಿಯಲ್ಲಿ ಎರಡು ಭಾಗಗಳಿವೆ· ಅವು ಕೃಷ್ಣಪಕ್ಷ ಹಾಗೂ ಶುಕ್ಲಪಕ್ಷಗಳು· ಕೃಷ್ಣಪಕ್ಷವು ರಯಿಯೂ, ಪಿತೃಯಾಣವೂ, ಭೋಗ್ಯವೂ ಆಗಿದೆ· ಆದರೆ ಶುಕ್ಲಪಕ್ಷವು ಪ್ರಾಣವು· ಹಾಗಾಗಿಯೇ ದೇವಯಾನವೂ ಹೌದು·

ಅತೀಂದ್ರಿಯವಾದ ಪರತತ್ವವನ್ನು ತಿಳಿಯಬಲ್ಲ ಮಹನೀಯರು ಋಷಿಗಳು· ಇವರು ಶುಕ್ಲಪಕ್ಷವು ಪ್ರಾಣವೂ, ದೇವಯಾನವೂ ಆಗಿದೆ ಎಂದು ಬಲ್ಲವರು· ಆದ್ದರಿಂದಲೇ ಈ ಕಾಲದಲ್ಲಿ ಭಗವದಾರಾಧನೆಯನ್ನು ಮಾಡುತ್ತಾರೆ· ಅದಕ್ಕೆ ಪ್ರತಿಫಲವಾಗಿ ಪರಮಪದವನ್ನೂ ಹೊಂದುತ್ತಾರೆ· ಆದರೆ ಉಳಿದ ಹಲ-ಕೆಲವರು ಸ್ವರ್ಗ ಮುಂತಾದ ಕ್ಷುದ್ರಪ್ರಯೋಜನಗಳನ್ನು ಬಯಸುತ್ತಾರೆ· ಅವರು ಅಸಾರವಾದ ಕೃಷ್ಣಪಕ್ಷದಲ್ಲಿಯೇ ಪರಮಾತ್ಮನ ಅರ್ಚನೆಯನ್ನು ಮಾಡಲು ಹವಣಿಸುತ್ತಾರೆ· ಅಭಿಲಾಷೆಗೆ

---

೧· ಯಃ ಪ್ರಜಾಪತಿಃ ಸಂವತ್ಸರಾತ್ಮಾ ಸ ಏವ ತದವಯವಭೂತಮಾಸಾತ್ಮಕೋಽಪಿ ಭವತಿ - ಸುಬೋಧಿನೀ·

ತಕ್ಕ ಫಲವನ್ನು ಪಡೆಯುತ್ತಾರೆ· ಇವರು ಅಜ್ಞರು, ಅನ್ಯಟಿಗಳು, ಇವರಿಗೆ ಅತೀಂದ್ರಿಯ ಪರತತ್ವದ ದರ್ಶನವಾಗಿಲ್ಲ· ಯಾವುದು ಸಕಾಲ, ಯಾವುದು ಅಕಾಲವೆಂಬ ಕಾಲ ವಿವೇಕವೂ ಇಲ್ಲ·

ಮಾಸಪ್ರಜಾಪತಿಯ ವಿಭಾಗವನ್ನು ತೋರಿಸಿದ್ದು [೧]ಉಪಾಸನೆಯ ಸಿದ್ಧಿಗಾಗಿ, ನಿರ್ದೇಶನಕ್ಕಾಗಿ ಈ ವಿಭಾಗದಿಂದ ಉಪಾಸನೆಯ ಸ್ವರೂಪವನ್ನು ಉಪಾಸಕನೇ ನಿರ್ಧರಿಸಿಕೊಳ್ಳಬಹುದು·

## ಮಂತ್ರ - ೧೩

अहोरात्रो वै प्रजापतिस्तस्याहरेव प्राणो
रात्रिरेव रयिः । प्राणं वा एते प्रस्कन्दन्ति,
ये दिवा रत्या संयुज्यन्ते । ब्रह्मचर्यमेव
तत्, यत् रात्रौ रत्या संयुज्यन्ते ।। 13 ।।

ಅಹೋರಾತ್ರೋ ವೈ ಪ್ರಜಾಪತಿಸ್ತಸ್ಯಾಹರೇವ ಪ್ರಾಣೋ
ರಾತ್ರಿರೇವ ರಯಿಃ । ಪ್ರಾಣಂ ವಾ ಏತೇ ಪ್ರಸ್ಕಂದಂತಿ,
ಯೇ ದಿವಾ ರತ್ಯಾ ಸಂಯುಜ್ಯಂತೇ । ಬ್ರಹ್ಮಚರ್ಯಮೇವ
ತತ್, ಯತ್ ರಾತ್ರೌ ರತ್ಯಾ ಸಂಯುಜ್ಯಂತೇ ॥

### ಪ್ರತಿಪದಾರ್ಥ

**ಪ್ರಜಾಪತಿಃ** - ಪರಮಾತ್ಮನು, **ಅಹೋರಾತ್ರೋ ವೈ** - ಹಗಲು-ರಾತ್ರಿಗಳೇ ಶರೀರವಾಗಿ ಇರುವವನು· **ತಸ್ಯ** - ಆ ಪರಮಾತ್ಮನ (ಅವಯವವಾದ), **ಅಹರೇವ** - ಹಗಲೇ, **ಪ್ರಾಣಃ**- ಪ್ರಾಣವು, ಪರಮಪದಪ್ರಾಪಕವು · **ರಾತ್ರಿರೇವ** - ರಾತ್ರಿಯೇ, **ರಯಿಃ** - ರಯಿಯು, ಅಲ್ಪಭೋಗ-ಪ್ರದವು · **ಯೇ** - ಯಾರು, **ದಿವಾ** - ಪ್ರಾಣಭೂತವಾದ ಹಗಲಿನಲ್ಲಿ, **ರತ್ಯಾ ಸಂಯುಜ್ಯಂತೇ**-ಸ್ತ್ರೀಸಂಗ ಮಾಡುತ್ತಾರೆಯೋ, **ಏತೇ** - ಇವರು, **ಪ್ರಾಣಂ ಪ್ರಸ್ಕಂದಂತಿ** - ಪ್ರಾಣವನ್ನೇ ನಾಶ-ಮಾಡಿಕೊಳ್ಳುತ್ತಾರೆ **ಯತ್** - ಏಕೆಂದರೆ, **ರಾತ್ರೌ** - ರಾತ್ರಿಯ ಸಮಯದಲ್ಲಿ, **ರತ್ಯಾ ಸಂಯುಜ್ಯಂತೇ**-ಸ್ತ್ರೀಸಂಗವನ್ನು ಯಾರು ಮಾಡುತ್ತಾರೋ, **ತತ್** - (ಅವರು ಮಾಡಿದ) ಸಂಗವು, **ಬ್ರಹ್ಮಚರ್ಯಮೇವ** - ಬ್ರಹ್ಮಚರ್ಯವೇ ಆಗಿದೆ·

---

೨· ರಯಿಪ್ರಾಣಾತ್ಮನಾ ವಿಭಾಗಂ ಪ್ರದರ್ಶಯತ್ಯುಪಾಸನಾಸಿದ್ಧಯೇ - ಆನಂದಭಾಷ್ಯ·

## ತಾತ್ಪರ್ಯ

ಪರಮಾತ್ಮನಿಗೆ ಹಗಲು-ಇರುಳುಗಳೇ ಶರೀರವು. ಹಗಲು ಪ್ರಾಣವು. ರಾತ್ರಿ ರಯಿಯು. ಹಗಲು ಪ್ರಾಣವಾಗಿರುವುದರಿಂದ ಉತ್ತಮವಾಗಿದೆ. ಇದು ಪರಮಾತ್ಮನ ಲೋಕವನ್ನು ಹೊಂದಲು ಅನುಕೂಲವಾಗಿದೆ. ಇಂತಹ ಹಗಲಿನಲ್ಲಿ ಯಾರು ಸ್ತ್ರೀಸಂಗವನ್ನು ಮಾಡುತ್ತಾರೆಯೋ ಅವರು ತಮ್ಮ ಪ್ರಾಣವನ್ನೇ ನಾಶ ಮಾಡಿಕೊಳ್ಳುವರು. ಆದರೆ ಗೃಹಸ್ಥರಾದವರು ರಾತ್ರಿ ವೇಳೆಯಲ್ಲಿ ಋತುಕಾಲದಲ್ಲಿ ತಮ್ಮ ಹೆಂಡತಿಯರನ್ನು ಅನುಭವಿಸುವುದು ಬ್ರಹ್ಮಚರ್ಯವೇ ಆಗಿದೆ.

## ರಂಗರಾಮಾನುಜಭಾಷ್ಯ

ಅಮುಮೇವ ವಿಭಾಗಮಹೋರಾತ್ರೇಽಪ್ಯುಪಾಸನಾಯ ದರ್ಶಯತಿ - **ಅಹೋರಾತ್ರೋ ವೈ ಪ್ರಜಾಪತಿರಿತಿ** । ಸ್ಪಷ್ಟೋಽರ್ಥಃ । **ಪ್ರಾಣಂ ವಾ ಏತೇ ಇತಿ** । ಯಸ್ಮಾದ್ಧೇತೋರಹ್ನಃ ಪ್ರಾಣ ರೂಪತ್ವಂ, ಅತ ಏವ **ರತ್ಯಾ** ರತ್ಯರ್ಥಮ್ । ಪ್ರಯೋಜನಸ್ಯ ಹೇತುತ್ವ ವಿವಕ್ಷಯಾ ತೃತೀಯಾ । ಪ್ರಾಣಭೂತೇಽಹ್ನಿ ಸ್ತ್ರೀಭಿರ್ಯೇ ಸಂಯುಜ್ಯಂತೇ, ತ ಏತೇ ಪ್ರಾಣಮೇವ **ಪ್ರಸ್ಕಂದಂತಿ** ಪ್ರಕರ್ಷೇಣ ಶೋಷಯಂತಿ । ಪ್ರಾಣಾಪಚಾರಾತ್ ಪ್ರಾಣಮೇವ ನಿಘ್ನಂತೀತ್ಯರ್ಥಃ । ನನು ತರ್ಹಿ ಸ್ವಯೋಷಿದ್ಗಮನಂ ಗೃಹಸ್ಥೈರ್ನಕಾರ್ಯಮಿತ್ಯಾಶಂಕ್ಯ ರಾತ್ರೌ ಕಾರ್ಯಮಿತ್ಯಾಹ - **ಬ್ರಹ್ಮಚರ್ಯಮೇವೇತಿ** । ರತ್ಯರ್ಥಂ ರಾತ್ರೌ ಸ್ತ್ರೀಸಂಪ್ರಯೋಗೋ ಬ್ರಹ್ಮಚರ್ಯಮೇವ । ಮೈಥುನಮೇವ ಸ ಭವತೀತ್ಯರ್ಥಃ । ತನ್ನ ದೋಷಾಯೇತಿ ಯಾವತ್ ॥

## ಅನುವಾದ

ಇದೇ ವಿಭಾಗವನ್ನು ದಿನದಲ್ಲಿಯೂ ಉಪಾಸನೆಗಾಗಿ ತೋರಿಸುತ್ತಾನೆ. **ಅಹೋರಾತ್ರೋ ವೈ ಇತಿ** । ತಾತ್ಪರ್ಯ ತಾನೆ ತಿಳಿಯುವಂತಿದೆ. **ಪ್ರಾಣಂ ವಾ ಏತೇ ಇತಿ** । ಹಗಲು ಪ್ರಾಣಸ್ವರೂಪವೇ ಆಗಿರುವುದರಿಂದ ರತ್ಯಾ ಸಂಭೋಗಕ್ಕಾಗಿ. ಫಲವನ್ನು ಹೇತುವಾಗಿ ಭಾವಿಸಿದುದರಿಂದ (ಫಲವಾಚಿ ಶಬ್ದಕ್ಕೆ) ೧ತೃತೀಯಾವಿಭಕ್ತಿ ಬಂದಿದೆ. ಪ್ರಾಣರೂಪದ ಹಗಲಿನಲ್ಲಿ ಯಾರು ಸ್ತ್ರೀಯರನ್ನು ಕೂಡುತ್ತಾರೆಯೋ, ಅವರು ಪ್ರಾಣವನ್ನೇ **ಪ್ರಸ್ಕಂದಂತಿ** - ಹೆಚ್ಚು ಬಳಲಿಸುತ್ತಾರೆ. ಪ್ರಾಣಕ್ಕೆ ಅಪಚಾರ ಮಾಡಿ ಪ್ರಾಣವನ್ನೇ ಕಳೆದುಕೊಳ್ಳುತ್ತಾರೆ. ಹಾಗಿದ್ದರೆ ಗೃಹಸ್ಥರು ತಮ್ಮ (ಹೆಂಡತಿಯರನ್ನು) ಸತಿಯರನ್ನು ಕೂಡಬಾರದೇ? ಎಂದು ಸಂಶಯ ವ್ಯಕ್ತಪಡಿಸಿ, 'ರಾತ್ರಿಯ ಸಮಯದಲ್ಲಿ ಕೂಡಬೇಕು' ಎಂದು ಉತ್ತರಿಸುತ್ತಾನೆ. **ಬ್ರಹ್ಮಚರ್ಯಮೇವ ತತ್ ಇತಿ** । ಸಂಭೋಗಕ್ಕಾಗಿ ರಾತ್ರಿ ಹೆಂಡತಿ-ಯನ್ನು ಕೂಡುವುದು ಬ್ರಹ್ಮಚರ್ಯವೇ. ಅದು ಮೈಥುನವೇ ಆಗಲಾರದು. ಆದರಿಂದ ದೋಷವೇನೂ ಇಲ್ಲವೆಂದು ಅಭಿಪ್ರಾಯ.

---

೧. ಸ್ತ್ರೀಸಂಗಕ್ಕೆ ರತಿಯೇ - ಸಂಭೋಗವೇ ಪ್ರಯೋಜನ. ರತಿಯು ಸ್ತ್ರೀಸಂಗದ ಪ್ರಯೋಜನವೇ ಆಗಿದ್ದರೂ ಸ್ತ್ರೀಸಂಗಕ್ಕೆ ಹೇತುವೂ ಆಗಬಲ್ಲದು. ಕಾರಣ ರತಿಯ ಬಯಕೆಯಿಲ್ಲದೇ ಯಾವುದೇ ವ್ಯಕ್ತಿಯು ಸ್ತ್ರೀಸಂಗಕ್ಕೆ ಅಣಿಯಾಗುವುದಿಲ್ಲ. ಆದ್ದರಿಂದ ಸ್ತ್ರೀಸಂಗವಾಸಕ್ಕೆ ಕಾರಣವಾದ ಬಯಕೆಯಲ್ಲಿ ರತಿಯು ತೋರಿಬರುವುದರಿಂದ ಅದೂ ಕಾರಣವೇ ಆಗುತ್ತದೆ. 'ಹೇತೌ' (೨-೩-೨೩) ಪಾಣಿನೀಯ ಸೂತ್ರದಂತೆ ಆಗ ತೃತೀಯಾವಿಭಕ್ತಿ ಪ್ರತ್ಯಯ ಬಂದು 'ರತ್ಯಾ' ಎಂಬ ರೂಪವುಂಟಾದರೂ ಚತುರ್ಥೀವಿಭಕ್ತಿಯ ಅರ್ಥವೇ ಉಪಲಬ್ಧವಾಗುತ್ತದೆ.

## ಭಾಷ್ಯಸಾರ

ಪರಮಾತ್ಮನು ಅಖಂಡಕಾಲ ಸ್ವರೂಪನು· ಆದರೂ ಸಂವತ್ಸರ, ಮಾಸ ಹಾಗೂ ದಿವಸಗಳು ಅವನ ಶರೀರವೇ ಆಗಿವೆ· ದಿವಸಾತ್ಮಕ ಪ್ರಜಾಪತಿಗೆ ಎರಡು ಅವಯವಗಳಿವೆ· ಅದು ಹಗಲು ಹಾಗೂ ಇರುಳು· ಹಗಲೇ ಪ್ರಾಣವು· ರಾತ್ರಿ ರಯಿ· ಹಗಲು ಪ್ರಾಣವಾಗಿರುವುದರಿಂದ ಉತ್ಕೃಷ್ಟವಾಗಿದೆ· ಆದ್ದರಿಂದ ಪ್ರಾಣಕ್ಕೆ ಅಪಚಾರ ಮಾಡಬಾರದು· ಪ್ರಾಣಕ್ಕೆ ಅಪಾಯವನ್ನೂ ಕರೆ ತರಬಾರದು· ಆದರೆ ಕೆಲವು ಅನ್ಯಷಿಗಳು ಹಗಲೇ ಸ್ತ್ರೀಸಂಭೋಗಕ್ಕೆ ಮುಂದಾಗಿ ಪ್ರಾಣಾಪಾಯವನ್ನು ತಂದುಕೊಳ್ಳುತ್ತಾರೆ· ಪ್ರಾಣವನ್ನು ಬಳಲಿಸುತ್ತಾರೆ·

ಸ್ತ್ರೀಭೋಗ ಸರ್ವಥಾ ನಿಷಿದ್ಧವಲ್ಲ· ಗೃಹಸ್ಥರಾದವರು ತಮ್ಮ ಪತ್ನಿಯನ್ನು ರಾತ್ರಿಯ ವೇಳೆ, ಋತು ಕಾಲದಲ್ಲಿ ಸೇರಿ ರತಿಯನ್ನು ಪಡೆಯಬಹುದು· ಇಂತಹ ವಿಧಿ-ವಿಧಾನಗಳನ್ನು ಮೀರದ ಭೋಗ ಮೈಥುನವಾಗದು· ಆದರಿಂದ ಯಾವ ದೋಷವೂ ಉಂಟಾಗಲಾರದು· ಅದು ಬ್ರಹ್ಮಚರ್ಯವೆಂದೇ ಋಷಿಗಳು ಶ್ಲಾಘನೆ ಮಾಡಿದ್ದಾರೆ·

## ಮಂತ್ರ - ೧೪

अन्नं वै प्रजापतिः । ततो ह वै तद्रेतः ।
तस्मादिमाः प्रजाः प्रजायन्त इति ॥ 14 ॥

ಅನ್ನಂ ವೈ ಪ್ರಜಾಪತಿಸ್ತತೋ ಹ ವೈ ತದ್ರೇತಃ ।
ತಸ್ಮಾದಿಮಾಃ ಪ್ರಜಾಃ ಪ್ರಜಾಯಂತ ಇತಿ ॥

## ಪ್ರತಿಪದಾರ್ಥ

ಪ್ರಜಾಪತಿಃ - ಪರಮಾತ್ಮನು, ಅನ್ನಂ ವೈ - ಅನ್ನವು ಶರೀರವಾಗಿ ಇರುವವನು· ತತೋ ಹ ವೈ - ಪರಮಾತ್ಮನ ಶರೀರವಾದ ಅನ್ನದಿಂದ, ತದ್ರೇತಃ - ರೇತಸ್ಸು ಉಂಟಾಗುತ್ತದೆ· ತಸ್ಮಾತ್- ರೇತಶರೀರಕನಾದ ಪರಮಾತ್ಮನಿಂದ, ಇಮಾಃ - ಈ ಕಣ್ಣಿಗೆ ಕಾಣುವ, ಪ್ರಜಾಃ - ದೇವ, ಮನುಷ್ಯ ಮುಂತಾದ ಸಂತತಿಗಳು, ಪ್ರಜಾಯಂತ ಇತಿ - ಹುಟ್ಟುತ್ತವೆ ಎಂದು·

## ತಾತ್ಪರ್ಯ

ಅನ್ನವೂ, ಅದರಿಂದ ಉಂಟಾಗುವ ರೇತಸ್ಸೂ ಪ್ರಜಾಪತಿಯ ಶರೀರವೇ ಆಗಿವೆ· ಈ ಅನ್ನರೇತಸ್ಸುಗಳನ್ನು ಶರೀರವಾಗಿ ಪಡೆದ ಪರಮಾತ್ಮನೇ (ಕಣ್ಣಿಗೆ ಕಾಣುವ) ನಮಗೆ ಗೋಚರಿಸುವ ಸಂತತಿಗಳಿಗೆಲ್ಲ ಜನಕನು· ಪರಮಾತ್ಮನೇ ಪ್ರಜೆಗಳ ತಂದೆ·

## ರಂಗರಾಮಾನುಜಭಾಷ್ಯ

ನನು ಪ್ರಕೃತಿಪುರುಷಕಾಲಾತ್ಮಕಂ ಬ್ರಹ್ಮ ಕಥಂ ಪ್ರಜಾನಾಮುಪಾದಾನಮಿತ್ಯುಚ್ಯತೇ; ಅನ್ನ ಪರಿಣಾಮಭೂತಸ್ಯ ರೇತಸ ಏವ ಪ್ರಜೋಪಾದಾನತ್ವದರ್ಶನಾದಿತ್ಯಾಶಂಕ್ಯಾಹ - **ಅನ್ನಂ ಹ ವೈ ಪ್ರಜಾಪತಿರಿತಿ** । ಅನ್ನಾವಸ್ಥಂ ತದುತ್ಪನ್ನರೇತೋಽವಸ್ಥಂ ಚ ಯತಃ ಪ್ರಜಾಪತಿಶಬ್ದಿತಂ ಬ್ರಹ್ಮೈವ, ಅತಃ ಪ್ರಕೃತಿಪುರುಷಸಂವತ್ಸರಮಾಸಾದಿಕಾಲಾನ್ನರೇತೋಽವಸ್ಥಾ(ರೂಪಾ)ದ್ಬ್ರಹ್ಮಣಃ ಸರ್ವಾಃ ಪ್ರಜಾಃ ಪ್ರಜಾಯಂತ ಇತಿ ಪ್ರಜಾಪತಿಶಬ್ದಿತಸ್ಯ ಬ್ರಹ್ಮಣಃ ಉಪಾದನತ್ವಮುಪಪದ್ಯತಂ ಇತಿ ಭಾವಃ॥

## ಅನುವಾದ

ಅನ್ನದ ರೂಪಾಂತರವಾದ ರೇತಸ್ಸೇ (ಧಾತುವೇ) ಸಂತತಿಗೆ ಮೂಲ ಕಾರಣವೆಂದು ಕಂಡು ಬರುವುದರಿಂದ ಪ್ರಕೃತಿ-ಪುರುಷ-ಕಾಲಸ್ವರೂಪನಾದ ಪರಮಾತ್ಮನು ಪ್ರಜೆಗಳ ಜನಕ ಹೇಗೆ ಆಗುತ್ತಾನೆ? ಎಂದು ಸಂದೇಹ ವ್ಯಕ್ತಪಡಿಸಿ ವಿವರಿಸುತ್ತಾನೆ. **ಅನ್ನಂ ವೈ ಪ್ರಜಾಪತಿಃ ಇತಿ** । ಯಾವ ಕಾರಣದಿಂದ ಅನ್ನದ ರೂಪದಲ್ಲಿಯೂ ರೇತಸ್ಸಿನ ರೂಪದಲ್ಲಿಯೂ ಇರುವುದು ಪ್ರಜಾಪತಿ ಎಂದು ಕರೆಯಲಾದ ಬ್ರಹ್ಮವೇ ಆಗಿರುವುದೋ, ಅದೇ ಕಾರಣದಿಂದ, ಪ್ರಕೃತಿ, ಪುರುಷ, ಸಂವತ್ಸರ, ಮಾಸ ಮುಂತಾದ ಕಾಲ, ಅನ್ನ ಹಾಗೂ ಧಾತುವಿನ ರೂಪದಲ್ಲಿರುವ ಬ್ರಹ್ಮದಿಂದಲೇ ಎಲ್ಲ ಸಂತತಿಗಳು ಹುಟ್ಟುತ್ತವೆ ಎಂಬ ಅಭಿಪ್ರಾಯದಿಂದ ಪ್ರಜಾಪತಿಯೆಂಬ ಬ್ರಹ್ಮವು (ಎಲ್ಲದರ) ಮೂಲಕಾರಣ ಎಂಬ ಮಾತು ಯುಕ್ತವಾಗುತ್ತದೆ.

## ಭಾಷ್ಯಸಾರ

ಅನ್ನದ ರೂಪಾಂತರ ರೇತಸ್ಸು. ಇದು ಸಂತತಿಯು ಕವಲುಕವಲಾಗಿ ಲೋಕದಲ್ಲಿ ಬೆಳೆಯಲು ಮೂಲ ಕಾರಣವು. ಸ್ತ್ರೀಯಲ್ಲಿ ರೇತಸ್ಸನ್ನು ನಿಷೇಧ ಮಾಡಿ ಜನರು ಮಕ್ಕಳನ್ನು ಪಡೆಯುತ್ತಾರೆ. ಪ್ರಪಂಚದಲ್ಲಿ ಗೋಚರಿಸುವ ದೇವ, ಮನುಷ್ಯ, ಪಶು, ಪಕ್ಷಿ ಮುಂತಾದ ಎಲ್ಲ ಪ್ರಾಣಿಗಳು ಈ ಅನ್ನ, ರೇತಸ್ಸು ಸಂತತಿಯ ಪ್ರಕ್ರಿಯೆಯಿಂದಲೇ ಹುಟ್ಟುತ್ತವೆ.

ಪರಮಾತ್ಮನು ಅನ್ನವೂ, ಅದರಿಂದ ಹುಟ್ಟುವ ಧಾತುವೂ ಆಗಿರುತ್ತಾನೆ. ಪ್ರಕೃತಿ, ಪುರುಷ, ಸಂವತ್ಸರಾದಿಕಾಲ, ಅನ್ನ ಹಾಗೂ ರೇತಸ್ಸುಗಳು ಅವನ ಶರೀರವೇ ಆಗಿವೆ. ಆದ್ದರಿಂದಲೇ ಅವು ಪರಮಾತ್ಮನ ವಿಶೇಷಣಗಳು. ಈ ವಿಶೇಷ [1]ಧರ್ಮಗಳನ್ನು ತನ್ನೊಳಗೆ ಸೇರಿಸಿಕೊಂಡ ಪರಬ್ರಹ್ಮವೇ ಎಲ್ಲೆಡೆ, ಎಲ್ಲ ಸಂತತಿಗಳಿಗೂ ಉಪಾದಾನವಾಗಿದೆ. ಪರಮಾತ್ಮನನ್ನು ಉಳಿದು, ಅವು ತಾವೇ ತಾವಾಗಿ ಯಾವುದನ್ನು ಹುಟ್ಟಿಸಲಾರವು. ಆದ್ದರಿಂದಲೇ ಪ್ರಜೆಗಳ ಹುಟ್ಟು ಸಂಪೂರ್ಣವಾಗಿ ಪ್ರಜಾಪತಿಯ ಸರಹದ್ದಿಗೇ ಸೇರಿದೆ.

---

೧. ತತ್ತದ್ವಿಶಿಷ್ಟಸ್ಯ ಪರಮಾತ್ಮನಃ ಸರ್ವತ್ರ ಹೇತುತ್ವಂ ಜ್ಞಾಪಿತಂ ಭವತಿ - ಸುಬೋಧಿನೀ.

## ಮಂತ್ರ - ೧೫ ಮತ್ತು ೧೬

तद्ये ह तत् (?) प्रजापतिव्रतं चरन्ति,ते मिथुन-
मुत्पादयन्ते । तेषामेवैष ब्रह्मलोकः ।
येषां तपो ब्रह्मचर्यम्, येषु सत्यं प्रतिष्ठितम् ॥ 15 ॥

तेषामसौ विरजो ब्रह्मलोकः, न येषु
जिह्ममनृतं न माया चेति ॥16 ॥

ತದ್ಯೇ ಹ ವೈ ಪ್ರಜಾಪತಿವ್ರತಂ ಚರಂತಿ ತೇ ಮಿಥುನ-
ಮುತ್ಪಾದಯಂತೇ । ತೇಷಾಮೇವೈಷ ಬ್ರಹ್ಮಲೋಕಃ ।
ಯೇಷಾಂ ತಪೋ ಬ್ರಹ್ಮಚರ್ಯಮ್, ಯೇಷು ಸತ್ಯಂ
ಪ್ರತಿಷ್ಠಿತಮ್ ॥

ತೇಷಾಮಸೌ ವಿರಜೋ ಬ್ರಹ್ಮಲೋಕಃ, ನ ಯೇಷು
ಜಿಹ್ಮಮನೃತಂ ನ ಮಾಯಾ ಚೇತಿ ॥

### ಪ್ರತಿಪದಾರ್ಥ

[೧]**ತತ್** - ಆದಕಾರಣ, **ಯೇ** - ಯಾವ ಗೃಹಸ್ಥರು (ಬದ್ಧರಾದ ಜೀವಿಗಳು) **ಪ್ರಜಾಪತಿ-ವ್ರತಮ್** - ಅನ್ನವೆಂಬ ಪ್ರಜಾಪತಿಯ ವ್ರತವನ್ನು, ಅನ್ನವನ್ನು ತಿನ್ನುವುದನ್ನು, **ಚರಂತಿ**- ಆಚರಿಸುತ್ತಾರೆಯೋ, **ತೇ** - ಅವರು, **ಮಿಥುನಮ್** - ಮಕ್ಕಳನ್ನು, **ಉತ್ಪಾದಯಂತೇ**- ಹುಟ್ಟಿಸುತ್ತಾರೆ · **ತೇಷಾಮೇವ** - ಅವರಿಗೇ, **ಏಷಃ** - ಕಾಣುವ, **ಬ್ರಹ್ಮಲೋಕಃ** - ಪುತ್ರ-ಪಶ್ವಾದಿಗಳಿಂದ ಕೂಡಿದ ಪ್ರಪಂಚ ವಾಸವು ಉಂಟಾಗುತ್ತದೆ · **ಯೇಷಾಂ** - ಯಾವ ಮುಮುಕ್ಷುಗಳಲ್ಲಿ, **ತಪಃ** - ಶರೀರ ಶೋಷಣೆಯು, **ಬ್ರಹ್ಮಚರ್ಯಮ್** - ಬ್ರಹ್ಮಚರ್ಯೆಯೂ ಇವೆಯೋ, **ಯೇಷು** - ಯಾರಲ್ಲಿ, **ಸತ್ಯಮ್** - ಸತ್ಯವು, **ಪ್ರತಿಷ್ಠಿತಮ್** - ಸ್ಥಿರವಾಗಿರುವುದೋ, **ಯೇಷು** - ಯಾರಲ್ಲಿ, **ಜಿಹ್ಮಮ್** - ಕುಟಿಲತೆಯು, **ನ ವಿದ್ಯತೇ** - ಇಲ್ಲವೋ, **ಅನೃತಮ್**-

೧· 'ತತ್' ಪಾಠಾಂತರ·

ಅಸತ್ಯವೂ, **ಮಾಯಾ ಚ** - ವಂಚನೆಯೂ ಇಲ್ಲವೋ, **ತೇಷಾಮ್** - ಅವರಿಗೆ, **ಅಸೌ** - ವಿಷ್ಣು ಸ್ಥಾನವೆನಿಸಿದ, ಮುಕ್ತರಿಗೆ ಭೋಗ್ಯವಾದ, **ವಿರಜಃ** - ಕಾಮ ಮುಂತಾದ ದೋಷಗಳಿಲ್ಲದ, **ಬ್ರಹ್ಮಲೋಕಃ** - ಪರಬ್ರಹ್ಮನ ನೆಲೆಯಾದ, ವೈಕುಂಠ ವು - ಪರಮಪದವು ಉಂಟಾಗುತ್ತದೆ·

## ತಾತ್ಪರ್ಯ

ಅನ್ನವೇ ಬ್ರಹ್ಮವೆಂದು ತಿಳಿದು ಅದನ್ನು ಸೇವಿಸುವವರು ಪ್ರಜಾಪತಿ ವ್ರತವನ್ನು ಪಾಲಿಸುವವರು· ಇವರಿಗೆ ಪುತ್ರ-ಪುತ್ರಿಯರೆಂಬ ಸಂತತಿಯು ಲಭಿಸುತ್ತದೆ· ಪುತ್ರ, ಪಶು ಮುಂತಾದ ಕ್ಷಣಿಕ ಭೋಗ ಪ್ರಪಂಚದಲ್ಲಿಯೇ ಇವರು ವಾಸಿಸುತ್ತಾರೆ· ಪ್ರಜಾಪತಿ ವ್ರತವನ್ನು ಹಿಡಿಯದೇ, ಬ್ರಹ್ಮಚರ್ಯವನ್ನು ಪಾಲಿಸುವವರು ಮುಮುಕ್ಷುಗಳು· ಇವರು ತಪೋನಿಷ್ಠರು· ಸದಾ ಸತ್ಯವನ್ನೇ ನುಡಿಯುವವರು ಇವರ ಜೀವನದಲ್ಲಿ ಅಸತ್ಯಕ್ಕಾಗಲೀ, ವಂಚನೆಗಾಗಲೀ ಕೊಂಚವೂ ಇಂಬು ದೊರೆಯಲಾರದು· ಇಂತಹ ಮಹಾತ್ಮರು ಪರಮಪದವಾದ ವೈಕುಂಠ ದಲ್ಲಿ ವಾಸಮಾಡುವ ಭಾಗ್ಯಶಾಲಿಗಳು·

## ರಂಗರಾಮಾನುಜಭಾಷ್ಯ

ಪ್ರಸಂಗಾದಮುಮುಕ್ಷುನಿಂದಾಪೂರ್ವಕಂ ಮುಮುಕ್ಷೂನ್ ಸ್ತೌತಿ **ತದ್ಯೇ ಹ ವೈ ಇತಿ** । ತೇಷಾಮೇವೈವ ಬ್ರಹ್ಮಲೋಕಃ (ವೈಷ ಲೋಕಃ) । ತಸ್ಮಾತ್ ಯೇ, 'ಅನ್ನಂ ವೈ ಪ್ರಜಾಪತಿಃ' ಇತಿ ಪ್ರಜಾಪತಿಶಬ್ದಿತಸ್ಯಾನ್ನಸ್ಯವ್ರತಂ ಭಕ್ಷಣಂ ವ್ರತತ್ವೇನಾನುತಿಷ್ಠಂತಿ, ಯೇಽನ್ನಭಕ್ಷಣ-ಶೀಲಾ ಬ್ರಹ್ಮಚರ್ಯರಹಿತಾಃ, ತ ಏವ ಪ್ರಜಾಃ ಉತ್ಪಾದಯಂತೇ । **ಏಷ ಬ್ರಹ್ಮಲೋಕಃ** ಪುತ್ರ ಪಶ್ವಾದಿಲಕ್ಷಣಃ ಕಾರ್ಯಭೂತಬ್ರಹ್ಮರೂಪೋ ಲೋಕಃ (ಏಷ ಲೋಕಃ ಪುತ್ರಪಶ್ವನ್ನಾದಿಲಕ್ಷಣೋ ಲೋಕಃ) ।

**ಯೇಷಾಂ ತಪೋ ಬ್ರಹ್ಮಚರ್ಯಮಿತಿ** । ಯೇಷಾಂ ಕಾಯಶೋಷಣಾಖ್ಯಂ ತಪಃ, ನ ಭಕ್ಷಣಶೀಲತಾ, ಮೈಥುನವರ್ಜನಮ್; ಯೇಷು ಚ ಸತ್ಯವಚನಂ ಪ್ರತಿಷ್ಠಿತಮ್ ಯೇಷು ಚ 'ಮನಸ್ಯನ್ಯದ್ವಚಸ್ಯನ್ಯತ್ ಕರ್ಮಣ್ಯನ್ಯಥ್ ದುರಾತ್ಮನಾಮ್' । ಇತ್ಯುಕ್ತ ಕೌಟಿಲ್ಯ ಲಕ್ಷಣಜಿಹ್ಮತ್ವಂ ನಾಸ್ತಿ ಭೂತಾಹಿತವಚನಲಕ್ಷಣಮಸತ್ಯವಚನಂ ನಾಸ್ತಿ, ತೇಷಾಮಸೌ ವಿರಜೋ ನಿರ್ದೋಷಃ ಬ್ರಹ್ಮೈವ ಲೋಕೋ ಬ್ರಹ್ಮಲೋಕಃ ಪರಬ್ರಹ್ಮರೂಪಂ ಫಲಮಿತ್ಯರ್ಥಃ । ತಥೈವ ವ್ಯಾಸಾರ್ಯೈಃ ಸರ್ವವ್ಯಾಖ್ಯಾನಾಧಿಕರಣೇ ವಿವೃತತ್ವಾದಿತಿ ದ್ರಷ್ಟವ್ಯಮ್ । ಇತಿ ಶಬ್ದಃ ಪ್ರತಿವಚನಸಮಾಪ್ತೌ ॥

## ಅನುವಾದ

ಸಾಂದರ್ಭಿಕವಾಗಿ ಮುಮುಕ್ಷುವಲ್ಲದ ಗೃಹಸ್ಥನನ್ನು ನಿಂದಿಸುವುದರ ಮುಖಾಂತರ ಮುಮುಕ್ಷು-ವನ್ನು ಹೊಗಳುತ್ತಾನೆ· **ತದ್ಯೇ ಹ ವೈ ಇತಿ** । ಆದ್ದರಿಂದಲೇ ಯಾರು 'ಅನ್ನಂ ವೈ ಪ್ರಜಾಪತಿಃ'

ಎಂಬ ವಾಕ್ಯದಿಂದ ಪ್ರಜಾಪತಿಯೆಂದು ಹೆಸರಿಸಲಾದ ಅನ್ನವನ್ನು ಊಟಮಾಡುವುದನ್ನೇ ವ್ರತವಾಗಿ ನಡೆಸುತ್ತಾರೆಯೋ, ಯಾರು ಬ್ರಹ್ಮಚರ್ಯವಿಲ್ಲದೇ ಊಟಮಾಡುವ ಶೀಲವುಳ್ಳವರೋ, ಅವರು ಪ್ರಜೆಗಳನ್ನು ಹುಟ್ಟಿಸುತ್ತಾರೆ · **ಏಷ ಬ್ರಹ್ಮಲೋಕಃ** - ಮಗ, ಪಶು ಮುಂತಾದ ಕಾರ್ಯರೂಪದ ಬ್ರಹ್ಮವೆಂಬ ಲೋಕವು (ಅವರಿಗೆ ಸಲ್ಲುತ್ತದೆ)·

**ಯೇಷಾಂ ತಪೋ ಬ್ರಹ್ಮಚರ್ಯಂ ಇತಿ ।** ಯಾರಲ್ಲಿ ಕಾಯಶೋಷಣೆ ತಪಸ್ಸು ಇದೆಯೇ ಹೊರತು ಹೊಟ್ಟೆಬಾಕತನವಾಗಲೀ, ಮೈಥುನವಾಗಲೀ, ಇಲ್ಲವೋ; ಯಾರಲ್ಲಿ ಸತ್ಯದ ಮಾತು ನೆಲೆ ಮಾಡಿರುವುದೋ, ಯಾರಲ್ಲಿ ಮನಸ್ಸಿನಲ್ಲೊಂದು, ಮಾತಿನಲ್ಲೊಂದು, ಕಾಯಕದಲ್ಲಿ ಮತ್ತೊಂದು ಎಂಬಂತೆ ಕಾಪಟ್ಯವಿಲ್ಲವೋ; ಅವರಿಗೇ ಈ ದೋಷವಿಲ್ಲದ ಬ್ರಹ್ಮವೆಂಬ ಸ್ಥಾನವು, **ಬ್ರಹ್ಮಲೋಕಃ** - ಪರಬ್ರಹ್ಮವೆಂಬ ಲಾಭವು ದೊರೆಯುತ್ತದೆ ಹಾಗೆಯೇ [೧]ಸುದರ್ಶನಸೂರಿಗಳೂ ಸರ್ವವ್ಯಾಖ್ಯಾನಾಧಿಕರಣದಲ್ಲಿ ವಿವರಿಸಿದ್ದಾರೆ · 'ಇತಿ' ಶಬ್ದವು ಉತ್ತರದ ಮುಕ್ತಾಯವನ್ನು ಸೂಚಿಸುತ್ತದೆ

## ಭಾಷ್ಯಸಾರ

ಜಗತ್ತಿನಲ್ಲಿ ಎರಡುಬಗೆಯ ಜೀವರುಗಳನ್ನು ಕಾಣಬಹುದು · ಅವರಲ್ಲಿ ಕೆಲವರು ಮುಮುಕ್ಷು-ಗಳು, ಮೋಕ್ಷವನ್ನು ಬಯಸಿದವರು · ಇನ್ನು ಹಲವರು ಬುಭುಕ್ಷುಗಳು, ಭೋಗಕ್ಕಾಗಿ ಹಾತೊರೆಯುವರು · ಭೋಗಾಭಿಲಾಷಿಗಳು ಪ್ರಜಾಪತಿವ್ರತವನ್ನು ಅವಲಂಬಿಸುತ್ತಾರೆ · ಇವರು ಅನ್ನ-ಆಹಾರಗಳನ್ನು ಯಥೇಷ್ಟವಾಗಿ ಸೇವಿಸುತ್ತಾರೆ· ಬ್ರಹ್ಮಚರ್ಯದತ್ತ ಲಕ್ಷ್ಯವನ್ನು ಹರಿಸುವುದಿಲ್ಲ · ಕೇವಲ ಗೃಹಸ್ಥಾಶ್ರಮಿಗಳಾಗಿ ತಮ್ಮ ತಮ್ಮ ಪತ್ನಿಯರನ್ನು ಕೂಡಿ ಸುಖವನ್ನು ಪಡೆಯುತ್ತಾರೆ · ಪ್ರಾಣಿಗಳಂತೆ ಕಾಮಪರವಶರಾಗದೇ ವಿಧಿ-ವಿಧಾನಗಳನ್ನು ಅನುಸರಿಸಿ ಸ್ತ್ರೀಸಂಗ ಮಾಡುವುದರಿಂದ ಸ್ತ್ರೀ-ಪುರುಷರ ಧರ್ಮಸಂತತಿಯನ್ನೂ ಪಡೆಯುತ್ತಾರೆ · ಸಂತಾನಲಾಭ ದೃಷ್ಟಪ್ರಯೋಜನ · ಗೃಹಸ್ಥರಾದವರಿಗೆ ಅದೃಷ್ಟ ಪ್ರಯೋಜನವೂ ಉಂಟು · ಇವರಿಗೆ ಚಂದ್ರಲೋಕದಿಂದ ಆರಂಭಿಸಿ ಹಿರಣ್ಯಗರ್ಭನ ಲೋಕದವರೆಗೆ ಮುಕ್ತವಾದ ಅವಕಾಶವಿದೆ · ಏಕೆಂದರೆ ಆ ಅರ್ವಾಕ ಲೋಕಗಳು ಅಗ್ನಿಹೋತ್ರ ಮುಂತಾದ ಕರ್ಮಗಳಿಂದಲೇ ನಿರ್ದಿಷ್ಟವಾದ ಅಧಿಕಾರಿಗಳಿಗಾಗಿ ಸಿದ್ಧವಾಗಿದೆ·

ಸಾಮಾನ್ಯ ಗೃಹಸ್ಥರು ಪಡೆಯುವ ದೃಷ್ಟಾದೃಷ್ಟ ಫಲಗಳು ಅಷ್ಟೇನೂ ಪ್ರಶಸ್ತವಲ್ಲ · ಕಾರಣ ಅವು ಪಿತೃಯಾಣದ ಮೂಲಕ ತಲುಪುವ ಲೋಕಗಳಾಗಿವೆ · ಭೋಗವನ್ನು ಅನುಭವಿಸಿ ಪುಣ್ಯವು ಮುಗಿದಾಗ, ಎಲ್ಲರೂ ಹಿಂತಿರುಗಲೇ ಬೇಕು· ಆದ್ದರಿಂದ ಪತನಭೀತಿ ತಪ್ಪಲಾರದು·

---

೧· ಶ್ರುತಪ್ರಕಾಶಿಕಾಚಾರ್ಯರು·

[೧]ಮುಮುಕ್ಷುಗಳು ಪ್ರಶಸ್ತವಾದ ಪ್ರಯೋಜನವನ್ನೇ ಪಡೆಯುತ್ತಾರೆ· ಹಾಗಾಗಿಯೇ ಅವರು ಸ್ತುತ್ಯರ್ಹರಾಗಿದ್ದಾರೆ· ಇವರ ಮಹಿಮೆ ಅಗಾಧವಾಗಿದೆ· ಕಾಯಶೋಷಣೆ ಇವರ ನಿತ್ಯಕರ್ತವ್ಯ· ಮೈಥುನವರ್ಜನ ಪ್ರತಿಕ್ಷಣದ ಉಸಿರಾಟ· ಸತ್ಯದೊಂದಿಗೆ ಇವರಿಗೆ ಸದಾ ಸಖ್ಯ· ಕಾಪಟ್ಯಕ್ಕೆ ಕೊಂಚವೂ ಇಂಬು ಸಿಗಲಾರದು· ವಂಚನೆ ಇವರ ಬಳಿ ಸುಳಿಯಲೂ ಆರದು· ಇಂತಹ ಋಷಿಗಳು ನಿಷ್ಕಲಂಕವಾದ ಪರಬ್ರಹ್ಮವನ್ನೇ ಪರಮ ಪ್ರಯೋಜನವಾಗಿ ಪಡೆಯುತ್ತಾರೆ· ಈ ಜ್ಞಾನಿಗಳು ಪುನರಾವೃತ್ತಿಯಿಲ್ಲದ ಪರಮಪದವನ್ನು ಪಡೆದು ಅಮರರಾಗುತ್ತಾರೆ·

## ಮೊದಲನೇ ಪ್ರಶ್ನೆ ಮುಗಿದುದು

** ** **

೧· ಅಪ್ರಶಸ್ತಪ್ರಶಸ್ತಫಲಭಾಗಿತಾ ಪ್ರದರ್ಶನದ್ವಾರಾಽಮುಮುಕ್ಷೋರ್ನಿಂದಾಂ ಮುಮುಕ್ಷೋಃ ಸ್ತುತಿಂ ಚ ದರ್ಶಯತಿ - ಆನಂದಭಾಷ್ಯ

# ದ್ವಿತೀಯ ಪ್ರಶ್ನಃ

## ಮಂತ್ರ - ೧

अथ हैनं भार्गवो वैदर्भिः पप्रच्छ,
'भगवन् कत्येव देवाः प्रजां विधारयन्ते ;
कतर एतत् प्रकाशयन्ते कः पुनरेषां वरिष्ठः ?
इति ॥ 1 ॥

ಅಥ ಹೈನಮ್ ಭಾರ್ಗವೋ ವೈದರ್ಭಿಃ ಪಪ್ರಚ್ಛ,
ಭಗವನ್! ಕತ್ಯೇವ ದೇವಾಃ ಪ್ರಜಾಃ ವಿಧಾರಯಂತೇ;
ಕತರ ಏತತ್ಪ್ರಕಾಶಯಂತೇ; ಕಃ ಪುನರೇಷಾಂ ವರಿಷ್ಠಃ
ಇತಿ ॥

### ಪ್ರತಿಪದಾರ್ಥ

ಅಥ - ಅನಂತರ (ಕಬಂಧಿಯ ಪ್ರಶ್ನೆಯಾದ ಮೇಲೆ), **ಭಾರ್ಗವೋ ವೈದರ್ಭಿಃ** - ಭೃಗುವಂಶದಲ್ಲಿ ಜನಿಸಿದ ವೈದರ್ಭಿಯು, **ಪಿಪ್ಪಲಾದಮ್** - ಆಚಾರ್ಯ ಪಿಪ್ಪಲಾದರನ್ನು, **"ಭಗವನ್!** - ಪೂಜ್ಯರೇ! **ಕತಿ ಏವ ದೇವಾಃ** - ಎಷ್ಟು ದೇವತೆಗಳು, **ಪ್ರಜಾಃ** - ಕಾಣುವ ಸ್ಥಾವರ ಜಂಗಮಜೀವಿಗಳನ್ನು, **ವಿಧಾರಯಂತೇ** - ಧರಿಸುತ್ತಾರೆ, ಕಾಪಾಡುತ್ತಾರೆ · **ಏತತ್** - ಈ ಪ್ರಪಂಚವನ್ನು, **ಅರ್ಥಾತ್** - ಈ ಶರೀರ ಹಾಗೂ ಅದರ ಕಾರ್ಯವನ್ನು, **ಕತರೇ** - ಎಷ್ಟು ದೇವತೆಗಳು, **ಪ್ರಕಾಶಯಂತೇ** - ಪ್ರಕಾಶಗೊಳಿಸುತ್ತಾರೆ **ಏಷಾಮ್** - ಇವರಲ್ಲಿ, **ಪುನಃ ಕಃ** - ಮತ್ತೆ ಯಾರು, **ವರಿಷ್ಠಃ** - ಶ್ರೇಷ್ಠರು?" **ಇತಿ** - ಎಂದು, **ಪಪ್ರಚ್ಛ** - ಪ್ರಶ್ನಿಸಿದನು·

### ತಾತ್ಪರ್ಯ

ಕಬಂಧಿಯ ಪ್ರಶ್ನೆಗಳಿಗೆ ಆಚಾರ್ಯ ಪಿಪ್ಪಲಾದರು ಉತ್ತರವನ್ನು ಅನುಗ್ರಹಿಸಿದ ನಂತರ, ಭಾರ್ಗವ ವಂಶಜನಾದ ವೈದರ್ಭಿಯು ಗುರುಗಳನ್ನು ಸಮೀಪಿಸಿ ಪ್ರಶ್ನಿಸುತ್ತಾನೆ· ಈ ಪ್ರಪಂಚದಲ್ಲಿ ಗೋಚರಿಸುವ ಚರ-ಸ್ಥಿರ ಜೀವಿಗಳನ್ನು ಎಷ್ಟು ದೇವತೆಗಳು ಧರಿಸಿ ಕಾಪಾಡುತ್ತಾರೆ? ಈ ಪ್ರಪಂಚವನ್ನು ಬೆಳಗಿಸುವ ದೇವತೆಗಳು ಯಾರು? ಆ ದೇವತೆಗಳಲ್ಲಿ ಯಾರು ಶ್ರೇಷ್ಠರು?

## ರಂಗರಾಮಾನುಜಭಾಷ್ಯ

ದೇಹೇಂದ್ರಿಯಮನಃಪ್ರಾಣಾದಿವಿಲಕ್ಷಣಪ್ರತ್ಯಗಾತ್ಮಶೋಧನಾಯ ಪ್ರಶ್ನಾನ್ ಅವತಾರಯತಿ । ಉಕ್ತಂ ಚ ವ್ಯಾಸಾರ್ಯೈಃ "ಉತ್ತರೇಷು ಖಂಡೇಷು ಪ್ರತ್ಯಗಾತ್ಮ ವಿಶೋಧ್ಯತೇ" ಇತಿ । **ಅಥ ಹೈನಮಿತಿ** ಕಬಂಧಿಪ್ರಶ್ನಾನಂತರಂ ಪಿಪ್ಪಲಾದಂ ಭಾರ್ಗವೋ ವೈದರ್ಭಿಃ ಪೃಷ್ಟವಾನ್ । ಕಿಮಿತಿ - **ಭಗವನ್ನಿತಿ** । ಹೇ ಭಗವನ್! ಕಿಂಸಂಖ್ಯಾಕಾ ದೇವಾಃ ಸ್ಥಾವರಜಂಗಮಾತ್ಮಿಕಾಂ ಪ್ರಜಾಂ ಬಿಭ್ರತಿ। ಏಷ್ವೇವ ದೇವೇಷು ಕತರೇ ದೇವಾಃ ಏತತ್ ಶರೀರಂ ತತ್ಕಾರ್ಯಂ ಪ್ರಕಾಶಯಂತೇ । ಕಃ ಪುನರೇತೇಷಾಂ ಶ್ರೇಷ್ಠ ಇತಿ ॥

## ಅನುವಾದ

ಶರೀರ, ಇಂದ್ರಿಯಗಳು, ಮನಸ್ಸು ಮತ್ತು ಪ್ರಾಣ ಮೊದಲಾದವುಗಳಿಂದ ವ್ಯತಿರಿಕ್ತನಾದ, (ಬೇರೆಯಾದ) ಜೀವನ ಪರಿಶೀಲನೆಗಾಗಿ ಪ್ರಶ್ನೆಗಳನ್ನು ಪ್ರಸ್ತಾಪಿಸುತ್ತಾನೆ · ಸುದರ್ಶನಸೂರಿಗಳೂ **'ಉತ್ತರೇಷು ಖಂಡೇಷು ಪ್ರತ್ಯಗಾತ್ಮಾ ವಿಶೋಧ್ಯತೇ'** ಮುಂದಿನ ಖಂಡಗಳಲ್ಲಿ ಜೀವಾತ್ಮನನ್ನು ಪರಿಶೀಲಿಸಲಾಗುವುದು" ಎಂದು ಹೇಳಿದ್ದಾರೆ · **ಅಥ ಹೈನಂ ಇತಿ** । ಕಬಂಧಿಯ ಪ್ರಶ್ನೆ ಮುಗಿದ ಮೇಲೆ, ಭೃಗುವಂಶದಲ್ಲಿ ಜನಿಸಿದ ವೈದರ್ಭಿಯು ಪಿಪ್ಪಲಾದರನ್ನು ಕೇಳಿದನು · ಏನೆಂದು (ಕೇಳಿದನು)? - **ಭಗವನ್! ಕತ್ಯೇವ ದೇವಾಃ ಇತಿ** । ಪೂಜ್ಯನೇ! ಎಷ್ಟು (ಯಾವ ಸಂಖ್ಯೆಯ) ದೇವತೆಗಳು ಸ್ಥಾವರ-ಜಂಗಮಪ್ರಜೆಗಳನ್ನು ಪೊರೆಯುತ್ತಾರೆ? ಈ ದೇವತೆಗಳಲ್ಲಿಯೇ ಎಷ್ಟು ದೇವತೆಗಳು ಈ ಶರೀರವನ್ನೂ, ಅದರ ಕಾರ್ಯಗಳನ್ನೂ ಪ್ರಕಾಶಪಡಿಸುತ್ತಾರೆ? ಅವರಲ್ಲಿ ಯಾರು ಉತ್ತಮರು? ಎಂದು·

## ಭಾಷ್ಯಸಾರ

ಜಗತ್ತಿನ ಜನ್ಮ-ವಿಕಾಸಗಳು ಹೇಗೆ ಸಂಭವಿಸಿದವು? ಎಂಬುದು ಅತ್ಯಂತ ವಿಸ್ಮಯಕಾರಿಯಾದ ಸಂಗತಿ · ಸೃಷ್ಟಿಯ ಆರಂಭದಿಂದಲೂ ಮಾನವನು ಬಿಡಿಸಲಾರದ ಒಗಟು · ಈ ಸಮಸ್ಯೆ ಕಬಂಧಿಯನ್ನೂ ಕಾಡಿತ್ತು · ಹಾಗಾಗಿಯೇ ಅವನು ಬ್ರಹ್ಮಜ್ಞಾನಿಗಳಾದ ಪಿಪ್ಪಲಾದರ ಬಳಿಗೆ ಬಂದು ತನ್ನ ಜಿಜ್ಞಾಸೆಯನ್ನು ತೋಡಿಕೊಂಡಿದ್ದಾನೆ · ಆಚಾರ್ಯ ಪಿಪ್ಪಲಾದರು ಶಿಷ್ಯ ವಾತ್ಸಲ್ಯದಿಂದ ತಮ್ಮ ಚಿಂತನೆಯ (ಮನನದ) ಫಲವನ್ನು ಧಾರೆಯೆರೆದರು · ಸದುಪದೇಶವನ್ನು ಅನುಗ್ರಹಿಸಿದರು · ಅವರ ಉಪದೇಶದಂತೆ, ಈ ಸಂಸಾರದ ಸೃಷ್ಟಿ-ವಿಕಾಸಗಳಿಗೆ ಪ್ರಜಾಪತಿಯು ಮೂಲಕಾರಣನು· ಅವನು ಪ್ರಕೃತಿ-ಪುರುಷರು, ಸಂವತ್ಸರಾದಿ ಕಾಲಭೇದಗಳು, ಅನ್ನ, ರೇತಸ್ಸು, ಮೊದಲಾದ ವಿವಿಧ ರೂಪಗಳಲ್ಲಿ ಜೀವ-ಜಂತುಗಳನ್ನು ಸೃಷ್ಟಿಸಿದ್ದಾನೆ · ಆದ್ದರಿಂದ ಅವನ ಸಂಕಲ್ಪದಿಂದಲೇ ಈ ಲೋಕ ಹುಟ್ಟಿದೆ; ಹರಡಿದೆ.

ಶಿಷ್ಯ ಕಬಂಧಿಯ ಪ್ರಶ್ನೆಯೂ, ಆಚಾರ್ಯಪಿಪ್ಪಲಾದರ ಪ್ರತಿವಚನವೂ ಮುಗಿದ ಮೇಲೆ, ವೈದರ್ಭಿಯು ಗುರುಗಳನ್ನು ಸಮೀಪಿಸುತ್ತಾನೆ · ಇವನು ಭೃಗುವಂಶದಲ್ಲಿ ಜನಿಸಿದವನು · ಇವನ

ಜಿಜ್ಞಾಸೆ ಕಬಂಧಿಯ ಜಿಜ್ಞಾಸೆಗಿಂತ ಮುಂದಿನದು. ಆದರೆ ಅದನ್ನು ಅವಲಂಬಿಸಿದ್ದು ಕಬಂಧಿಗೆ ಸಂಸಾರಸೃಷ್ಟಿಯ ಕಾರಣವನ್ನು ತಿಳಿಯುವ ಕುತೂಹಲವಾದರೆ ವೈದರ್ಭಿಗೆ ಅದರ ಸ್ಥಿತಿಯ ಕಾರಣವನ್ನು ಅರಿಯುವ ಹಂಬಲ. ಆದರೆ [೧]ಉತ್ಪತ್ತಿಯಕಾರಣ ತಿಳಿಯದೇ ಇರುವುದಕ್ಕೆ ಕಾರಣ ಯಾವುದು ಎಂಬ ಜಿಜ್ಞಾಸೆ ಹುಟ್ಟುತ್ತದೆ. ಹಾಗೆ ಜಿಜ್ಞಾಸೆ ಹುಟ್ಟುವುದೇ ಸ್ವಾಭಾವಿಕ ನಡೆ. ಇದು ಲೋಕಸ್ಥಿತಿಯ ಕಾರಣವನ್ನು ವಿವೇಚಿಸುವ ನೈಜ ಅವಸರ. ಈ ನಡೆಯನ್ನು ಅತಿಕ್ರಮಿಸದೆ ವೈದರ್ಭಿಯು ಆಚಾರ್ಯರಲ್ಲಿ ಪ್ರಶ್ನೆ ಮಾಡುತ್ತಿದ್ದಾನೆ.

ಪ್ರಜೆಗಳೆಲ್ಲರೂ ಪ್ರಜಾಪತಿಯಿಂದ ಹುಟ್ಟಿದವರಷ್ಟೇ! ಹುಟ್ಟಿದ ಜೀವಿಗಳು ಬದುಕುತ್ತವೆ. ಹಾಗಿಲ್ಲದಿದ್ದರೆ ಅವುಗಳ ಹುಟ್ಟು ವ್ಯರ್ಥವಾದೀತು! ಈ ಪ್ರಜಾಸಂತತಿ ಹುಟ್ಟಿ ಬೆಳೆದು, ಬದುಕಬೇಕಾದರೆ ಅದಕ್ಕೆ ಸೂಕ್ತ ಸಂರಕ್ಷಣೆ ಒದಗಬೇಕು. ಆದ್ದರಿಂದ ಅದನ್ನು ಕಾಪಾಡುವ ದೇವತೆಗಳು (ಸಮರ್ಥರು) ಯಾರು? ಅವರ ಸಂಖ್ಯೆಯೂ ಎಷ್ಟು? [೨]'ಪ್ರಜಾ' ಎಂದರೆ ಹುಟ್ಟಿದ್ದು; ಹುಟ್ಟುವುದು ಶರೀರ. ಪ್ರಜಾ ಶಬ್ದದಿಂದ ಗುರುತಿಸಬಹುದಾದ ಈ ಶರೀರವು ಸ್ಥಾವರ-ಜಂಗಮಾತ್ಮಕವಾಗಿದೆ. ಇಂತಹ ದೇಹವನ್ನು ಯಾರು ಧರಿಸುತ್ತಾರೆ? ಶರೀರಧಾರಣೆಯ ಕಾರ್ಯವನ್ನು ಯಾರು ತಿಳಿಯಪಡಿಸುತ್ತಾರೆ? ಶರೀರಧಾರಣೆ-ಯನ್ನು ಅನೇಕ [೩]ದೇವತೆಗಳು ನಿರ್ವಹಿಸುವುದಾದರೆ ಅವರಲ್ಲಿ ಯಾರು ಶ್ರೇಷ್ಠರು?

ಈ ಪ್ರಶ್ನೆಗಳು, [೪]ಜೀವಾತ್ಮನು ಶರೀರ, ಇಂದ್ರಿಯ, ಅಂತಃಕರಣ ಮತ್ತು ಪ್ರಾಣಗಳಿಗಿಂತ ವಿಲಕ್ಷಣನು ಎಂದು ಪರಿಶೀಲಿಸಲು ಅನುಕೂಲವಾದ ಭೂಮಿಕೆಯನ್ನು ಸಿದ್ಧಪಡಿಸುತ್ತವೆ.

## ಮಂತ್ರ - ೨

तस्मै स होवाच आकाशो ह वा एष देवो
वायुरग्निरापः पृथिवी वाङ्मनश्चक्षुः श्रोत्रंच ।
ते प्रकाश्याभिवदन्ति, वयमेतद्बाणमवष्टभ्य
विधारयामः इति ॥ 2 ॥

---

೧. ಉತ್ಪತ್ತಿಹೇತಾವವಧೃತೇ ಸಪದಿ ಸ್ಥಿತಿಹೇತುಃ ಕಂ ಇತಿ ಜಿಜ್ಞಾಸಾ ಭವೇತ್ - ಸುಬೋಧಿನೀ.

೨. ಪ್ರಜಾಂ ಶರೀರಸ್ವರೂಪಾಂ ವಿಧಾರಯಂತೇ ವಿಶೇಷೇಣ ಧಾರಯಂತಿ ಯೇನೈತತ್ಚ್ಛರೀರಂ ನ ಪತತಿ । ಶರೀರಂ ಚ ಸ್ಥಾವರಜಂಗಮೋಭಯಾತ್ಮಕಮಿಹಾಭಿಪ್ರೇತಮ್ - ಆನಂದಭಾಷ್ಯ.

೩. ಇಲ್ಲಿ 'ದೇವ'ಶಬ್ದವು ಮುಂದಿನ ಮಂತ್ರದಲ್ಲಿ ಹೇಳುವ ಆಕಾಶಾದಿಗಳನ್ನೇ ಹೇಳುತ್ತದೆ. ಆಕಾಶ ಮುಂತಾದವು ಅಚೇತನವಾದರೂ ದೇವ ಶಬ್ದವು ಆಕಾಶಾದಿ - ಅಭಿಮಾನೀ ದೇವತೆಗಳನ್ನು ಸೂಚಿಸುತ್ತದೆ. ಇದರಿಂದ ಮುಂದೆ ಹೇಳುವ ನಮಸ್ಕಾರ ಮೊದಲಾದ ಕಲಾಪಗಳು ಸಂಗತವಾಗುತ್ತವೆ.

೪. ದೇಹೇಂದ್ರಿಯಪ್ರಾಣಾದಿವೈಲಕ್ಷಣ್ಯಮಾತ್ಮನಿಸುಖೇನ ಗ್ರಾಹಯಿತುಮಿತ್ಥಮಾರಂಭಃ - ಸುಬೋಧಿನೀ.

ತಸ್ಮೈ ಸ ಹೋವಾಚ । ಆಕಾಶೋ ಹ ವಾ ಏಷ ದೇವೋ
ವಾಯುರಗ್ನಿರಾಪಃ ಪೃಥಿವೀ ವಾಙ್ಮನಶ್ಚಕ್ಷುಃ ಶ್ರೋತ್ರಂಚ ।
ತೇ ಪ್ರಕಾಶ್ಯಾಭಿವದಂತಿ "ವಯಮೇತದ್ಬಾಣಮವಷ್ಟಭ್ಯ
ವಿಧಾರಯಾಮಃ" ಇತಿ ॥

## ಪ್ರತಿಪದಾರ್ಥ

**ಸ ಹ** - ಆ ಪಿಪ್ಪಲಾದರು, **ತಸ್ಮೈ** - ವೈದರ್ಭಿಗೆ, **ಏಷಃ** - ಪ್ರಸಿದ್ಧವಾದ ಈ, **ಆಕಾಶಃ**-ಆಕಾಶವೂ, **ದೇವೋ ವಾಯುಃ** - ದಿವ್ಯಸ್ಥಾನಕ್ಕೆ ಕರೆದೊಯ್ಯುವ ಮುಖ್ಯ ಪ್ರಾಣವೂ, **ಅಗ್ನಿಃ** - ಅಗ್ನಿಯೂ, **ಆಪಃ** - ಜಲವೂ, **ಪೃಥಿವೀ** - ಭೂಮಿಯೂ, **ವಾಕ್** - ವಾಕ್ಕು ಮೊದಲಾದ ಕರ್ಮೇಂದ್ರಿಯಗಳು, **ಮನಃ** - ಮನಸ್ಸೂ, **ಚಕ್ಷುಃ** - ಕಣ್ಣೂ, **ಶ್ರೋತ್ರಂ ಚ** - ಕಿವಿ ಮುಂತಾದ ಜ್ಞಾನೇಂದ್ರಿಯಗಳೂ, **ತೇ** - ಇವೆಲ್ಲವೂ (ಪಂಚಭೂತಗಳು, ಕರ್ಮೇಂದ್ರಿಯಗಳು ಹಾಗೂ ಜ್ಞಾನೇಂದ್ರಿಯಗಳು) **ಪ್ರಕಾಶ್ಯ**-ತಮ್ಮ ತಮ್ಮ ಸಾಮರ್ಥ್ಯಗಳನ್ನು ಪ್ರಕಾಶಪಡಿಸಿ, '**ವಯಮ್** - ನಾವು, **ಏತತ್** - ಈ, **ಬಾಣಮ್**-ಶರೀರವನ್ನು (ಕಾರ್ಯ ಪ್ರಪಂಚವನ್ನು), **ಅವಷ್ಟಭ್ಯ** - ಅವಲಂಬಿಸಿ, **ವಿಧಾರಯಾಮಃ** - ಧರಿಸುತ್ತೇವೆ (ಎತ್ತಿ ಹಿಡಿಯುತ್ತೇವೆ), **ಅಭಿವದಂತಿ** - ಹೇಳುತ್ತವೆ **ಇತಿ** - ಎಂದು, **ಉವಾಚ** - ಹೇಳಿದರು·

## ತಾತ್ಪರ್ಯ

ಶಿಷ್ಯ ವೈದರ್ಭಿಯ ಪ್ರಶ್ನೆಗಳಿಗೆ ಆಚಾರ್ಯ ಪಿಪ್ಪಲಾದರು ಉತ್ತರವನ್ನು ನೀಡತೊಡಗುತ್ತಾರೆ· ಪ್ರಸಿದ್ಧವಾದ ಆಕಾಶಾದಿಪಂಚಮಹಾಭೂತಗಳೂ, ವಾಗಾದಿಕರ್ಮೇಂದ್ರಿಯಗಳೂ, ಮನಸ್ಸು ಮುಂತಾದ ಜ್ಞಾನೇಂದ್ರಿಯಗಳೂ ತಮ್ಮ ತಮ್ಮ ಸಾಮರ್ಥ್ಯವನ್ನು ಸಾದರಪಡಿಸಿ, 'ನಾವು ಈ ಕಾರ್ಯಪ್ರಪಂಚವನ್ನು ಧರಿಸುತ್ತೇವೆ ಎಂದು ಹೇಳಿದವು·

## ರಂಗರಾಮಾನುಜಭಾಷ್ಯ

**ತಸ್ಮೈ ಸ ಹೋವಾಚ** । ಸ್ಪಷ್ಟೋಽರ್ಥಃ । ಮುಖ್ಯ ಪ್ರಾಣಸ್ಯಾವಧಾರತ್ವಪ್ರಕಾಶತ್ವಶ್ರೇಷ್ಠತ್ವಾನಿ ವಕ್ತುಮಾಖ್ಯಾಯಿಕಾಮಾಹ - **ಆಕಾಶೋ ಹ ವಾ ಇತಿ** । ಹ ವಾ ಇತಿ ಪ್ರಸಿದ್ಧ್ಯತಿಶಯೇ । ಏಷಃ ಪ್ರಸಿದ್ಧಃ ಆಕಾಶಃ । ದೀವ್ಯತಿ ಗಚ್ಛತೀತಿ ದೇವಃ ಗಮನಶೀಲಃ ತಾದೃಶೋ ವಾಯುಶ್ಚ **ಅಗ್ನಿರಾಪಃ ಪೃಥಿವೀ** । ಸ್ಪಷ್ಟೋಽರ್ಥಃ । ವಾಕ್ಛಬ್ದೇನ ಕರ್ಮೇಂದ್ರಿಯಾಣಿ ಸರ್ವಾಣ್ಯುಪ-ಲಕ್ಷ್ಯಂತೇ; ಚಕ್ಷುಃಶ್ರೋತ್ರಶಬ್ದೇನ ಜ್ಞಾನೇಂದ್ರಿಯಾಣಿ । **ತೇ ಪ್ರಕಾಶ್ಯಾಭಿವದಂತೀತಿ** । ಆಕಾಶಾದಯಃ ಸರ್ವೇಮಿಲಿತ್ವಾ(ತಾಃ) ಪುರೋವರ್ತಿಶರೀರಂ ಪ್ರದರ್ಶ್ಯ ಅಭಿತಃ ಸ್ಥಿತ್ವಾ ವದಂತಿಸ್ಮ ।

ಕಿಮಿತಿ ವಯಂ ಬಾಣವತ್ಸಂಚಾರಶೀಲಮೇತತ್ ಪುರೋವರ್ತಿಶರೀರಮವಲಂಬ್ಯ ವಿಧಾರಯಾಮಃ । ಅವಕಾಶಾದಿವಿವಿಧಕಾರ್ಯಕ್ಷಮತಯಾ ಧಾರಯಾಮ ಇತ್ಯರ್ಥಃ ॥

## ಅನುವಾದ

**ತಸ್ಮೈ ಸ ಹೋವಾಚ** - (ಅವರು ಅವನಿಗೆ ಹೇಳಿದರು) ತಾತ್ಪರ್ಯವು ಸ್ಪಷ್ಟವಾಗಿದೆ ಮುಖ್ಯಪ್ರಾಣವೇ ಧರಿಸಬಲ್ಲದೂ, ಪ್ರಕಾಶಪಡಿಸಬಲ್ಲದೂ, ಶ್ರೇಷ್ಠವೂ ಆಗಿದೆ ಎಂದು ತಿಳಿಸಲು ಕಥೆಯನ್ನು ಹೇಳುತ್ತಾರೆ - **ಆಕಾಶೋ ಹ ವಾ ಇತಿ ।** 'ಹ' ಮತ್ತು 'ವಾ' ಶಬ್ದಗಳು ಪ್ರಸಿದ್ಧಿಯ ಪರಾಕಾಷ್ಠೆಯನ್ನು ಸೂಚಿಸುತ್ತವೆ· **ಏಷಃ** - ಎಲ್ಲರಿಗೂ ತಿಳಿದಿರುವ ಆಕಾಶವು ದೀವ್ಯತಿ ಗಚ್ಛತಿ - ಚಲಿಸುತ್ತದೆ ಎಂಬಂತೆ (ವ್ಯುತ್ಪತ್ತಿಯಂತೆ) **ದೇವಃ** - ಗತಿಶೀಲವು· ಹಾಗಿರುವ ವಾಯುವು **ಅಗ್ನಿರಾಪಃ ಪೃಥಿವೀ ।** (ಅಗ್ನಿಯೂ, ಜಲವೂ, ಭೂಮಿಯು) ಅರ್ಥವು ಸ್ಫುಟವಾಗಿದೆ: 'ವಾಕ್' ಶಬ್ದವು ಎಲ್ಲ ಕರ್ಮೇಂದ್ರಿಯಗಳಿಗೂ, 'ಚಕ್ಷುಃ' ಮತ್ತು 'ಶ್ರೋತ್ರ' ಶಬ್ದಗಳು ಎಲ್ಲ ಜ್ಞಾನೇಂದ್ರಿಯಗಳಿಗೂ ಉಪಲಕ್ಷಕಗಳಾಗಿವೆ·

**ತೇ ಪ್ರಕಾಶ್ಯಾಭಿವದಂತಿ ಇತಿ ।** ಆಕಾಶ ಮೊದಲಾದವುಗಳೆಲ್ಲ ಸೇರಿ ಮುಂದೆ (ಸಮ್ಮುಖದಲ್ಲಿ) ಇರುವ ಶರೀರವನ್ನು ತೋರಿಸಿ, (ಅದನ್ನು) ಸುತ್ತುವರಿದು ನಿಂತು ಮಾತನಾಡುತ್ತಿದ್ದವು ಏನೆಂದು (ಮಾತನಾಡುತ್ತಿದ್ದವು)? ನಾವು ಬಾಣದಂತೆ ಸಂಚರಿಸುವ ಸ್ವಭಾವವುಳ್ಳ ಮುಂದಿರುವ ಈ ದೇಹವನ್ನು ಆಶ್ರಯಿಸಿ **ವಿಧಾರಯಾಮಃ** - ಅವಕಾಶ ಮುಂತಾದ ಅನೇಕ ಕಾರ್ಯಗಳಲ್ಲಿ ಸಮರ್ಥರಾಗಿರುವುದರಿಂದ ಧರಿಸೋಣ (ಕಾಪಾಡುತ್ತೇವೆ) ಎಂದು·

## ಭಾಷ್ಯಸಾರ

ಶಿಷ್ಯನ ಪ್ರಶ್ನೆ ಸಹಜವಾಗಿದೆ· ವಸ್ತುವಿನ ಉತ್ಪತ್ತಿಯನ್ನು ಅರಿತ ಮೇಲೆ ಅದರ ಸ್ಥಿತಿ-ಗತಿಗಳನ್ನು ಚಿಂತಿಸಬೇಕಾದುದು ಸಮಂಜಸವೂ ಹೌದು· ಇದರಿಂದ ಆಚಾರ್ಯ ಪಿಪ್ಪಲಾದರಿಗೆ ಆನಂದವುಂಟಾಗಿರಬೇಕು· ಶಿಷ್ಯನ ಮನಸ್ಸನ್ನು ಬೆಳಸಿ ಬೆಳಗಿಸುವುದು ಆಚಾರ್ಯನ ಪರಮ ಧ್ಯೇಯವಲ್ಲವೇ? ಹಾಗಾಗಿಯೇ ಅವರು ಶಿಷ್ಯಪ್ರೇಮದಿಂದ ವೈದರ್ಭಿಯ ಪ್ರಶ್ನೆಗಳನ್ನು ಉತ್ತರಿಸಲು ಮುಂದಾಗುತ್ತಾರೆ· [೧]ವಿಷಯ ನಿರ್ಣಯಕ್ಕಾಗಿ ಕಥೆಯೊಂದನ್ನು ಆರಂಭಿಸಿದ್ದಾರೆ·

[೨]ಆಕಾಶ, ವಾಯು, ಅಗ್ನಿ, ಜಲ ಹಾಗೂ ಭೂಮಿಗಳು ಶರೀರವನ್ನುಂಟುಮಾಡುವ ಮಹಾಭೂತಗಳು· ವಾಕ್, ಪಾಣಿ, ಪಾದ, ಪಾಯು ಹಾಗೂ ಉಪಸ್ಥಗಳು ಐದು ಕರ್ಮೇಂದ್ರಿಯಗಳು· ಮನಸ್ಸು, ಕಣ್ಣು, ಮೂಗು, ಕಿವಿ, ನಾಲಿಗೆ, ತ್ವಕ್‌ಗಳು ಜ್ಞಾನೇಂದ್ರಿಯಗಳು ಇವೆಲ್ಲವೂ ಸೇರಿಯೇ

---

೧· ಆಖ್ಯಾಯಿಕಾಮವತಾರಯತಿ ಸ್ಪಷ್ಟವಸ್ತುನಿರ್ಣಯಾಯ - ಆನಂದಭಾಷ್ಯ·

೨· ಆಕಾಶಾದೀನಿ ಶರೀರಾರಂಭಕಾಣಿ ಭೂತಾನೀ - ಸುಬೋಧಿನೀ·

ಶರೀರವನ್ನು ಅಷ್ಟೇಕೆ, ಸಮಸ್ತ ಕಾರ್ಯಪ್ರಪಂಚವನ್ನೇ ಬೀಳಗೊಡದೇ ಕಾಪಾಡುತ್ತದೆ· ಧಾರಣೆ ಮಾಡುತ್ತವೆ ವಸ್ತುತಃ ಆಕಾಶಾದಿಗಳು ಜಡ ಪದಾರ್ಥಗಳು· ಆದರೂ ಅವು ಅಭಿಮಾನಿದೇವತೆಗಳಿಗೆ ಆಶ್ರಯವಾಗಿವೆ· ಆದ್ದರಿಂದ ಅವುಗಳನ್ನು 'ದೇವ' ಎಂದೇ ಹೊಗಳಲಾಗಿದೆ· ಶರೀರವು ಬಾಣದಂತೆ ಚಲನಸ್ವಭಾವವುಳ್ಳದ್ದು· ಇದನ್ನು ಆಕಾಶಾದಿಗಳು ಸಾಮೂಹಿಕವಾಗಿ ಧರಿಸುತ್ತವೆ· ಸೃಷ್ಟಿಯಲ್ಲಿ ಅವುಗಳ ಧಾರಣೆ ಆಂಶಿಕವೆಂದೇ ಹೇಳಬೇಕು· ಕಾರಣ ಅವು ಅವಕಾಶ, (ದಾನ) ಮುಂತಾದ ತಮ್ಮ ತಮ್ಮ ಕಾರ್ಯಗಳನ್ನು ಮಾತ್ರ ಪ್ರಕಾಶಪಡಿಸುತ್ತವೆ· ಆದರೆ ಅವುಗಳು ತಮ್ಮ ಸೀಮಿತ ಕಾರ್ಯವನ್ನು ಮರೆಮಾಡಿ ಅಥವಾ ಮನಮುಟ್ಟ ತಿಳಿಯದೆ ಸ್ಪರ್ಧೆಯಿಂದ ಮಾತಾಡಿಕೊಳ್ಳುತ್ತವೆ· [೧]ಯಾರ ಸಹಾಯವೂ ಇಲ್ಲದೇ ತಾನೊಬ್ಬನೇ ಶರೀರವನ್ನು ಕಾಪಾಡುತ್ತೇನೆ ಎಂದು ಅವುಗಳಲ್ಲಿ ಅಭಿಮಾನ ಹುಟ್ಟಿದೆ· ಈ ಅಭಿಮಾನವೇ ಅನರ್ಥಕಾರಿಯಾದ ಸ್ಪರ್ಧೆಗೆ ನಾಂದಿಯಾಯಿತು·

## ಮಂತ್ರ - ೩

तान् वरिष्ठः प्राण उवाच, 'मा मोहमा-
पद्यथ(थाः)। अहमेवैतत् पंचधाऽऽत्मानं
प्रविभज्यैतद्बाणमवष्टभ्य विधारयामि' इति
तेऽश्रद्दधाना बभूवुः ॥ 3 ॥

ತಾನ್ ವರಿಷ್ಠಃ ಪ್ರಾಣ ಉವಾಚ । 'ಮಾ ಮೋಹಮಾ-
ಪದ್ಯಥ(ಥಾಃ) । ಅಹಮೇವೈತತ್ ಪಂಚಧಾऽऽತ್ಮಾನಂ
ಪ್ರವಿಭಜ್ಯೈತದ್ಬಾಣಮವಷ್ಟಭ್ಯ ವಿಧಾರಯಾಮಿ' ಇತಿ ।
ತೇऽಶ್ರದ್ದಧಾನಾ ಬಭೂವುಃ ॥

## ಪ್ರತಿಪದಾರ್ಥ

**ವರಿಷ್ಠಃ** - ಶ್ರೇಷ್ಠನಾದ, **ಪ್ರಾಣಃ** - ಪ್ರಾಣನು, (ಮುಖ್ಯಪ್ರಾಣನು) **ತಾನ್** - ಆಕಾಶಾದಿಗಳಿಗೆ, "(ಎಲೈ ಆಕಾಶಾದಿಗಳೇ;) **ಮೋಹಮ್** - ವಿಪರೀತ ಬುದ್ಧಿಯನ್ನು, [೨]**ಮಾऽऽಪದ್ಯಥಾಃ** - ಹೊಂದಬೇಡಿರಿ· **ಅಹಮೇವ** - ನಾನೇ, **ಆತ್ಮಾನಂ** - ನನ್ನನ್ನು, **ಪಂಚಧಾ** - (ಪ್ರಾಣ, ಅಪಾನ, ವ್ಯಾನ,

---

೧· ಅಸಹಾಯೋಹಮೇಕ ಏವೇದಂ ಶರೀರಮವಷ್ಟಭ್ಯ ವಿಶೇಷತೋ ಧಾರಯಾಮೀತಿ - ಸುಬೋಧಿನೀ

೨· ಸುಬೋಧಿನೀಕಾರರು ಈ ವಾಕ್ಯವನ್ನು ನಾಲ್ಕನೇ ಮಂತ್ರದಲ್ಲಿ ವ್ಯಾಖ್ಯಾನಮಾಡುತ್ತಾರೆ·

ಉದಾನ, ಮತ್ತು ಸಮಾನ ಎಂದು) ಐದಾಗಿ, **ಪ್ರವಿಭಜ್ಯ** - ವಿಭಾಗಿಸಿ, **ಏತತ್ ಬಾಣಮ್** - ಈ ಗತಿಶೀಲವಾದ ದೇಹವನ್ನು **ಅವಷ್ಟಭ್ಯ** - ಅವಲಂಬಿಸಿ, **ವಿಧಾರಯಾಮಿ** - ವಿಶೇಷವಾಗಿ ಧರಿಸುತ್ತೇವೆ'', **ಇತಿ** - ಎಂದು · **ತೇ** - ವಾಗಾದಿಗಳು, **ಅಶ್ರದ್ದಧಾನಾಃ** - (ಮುಖ್ಯ ಪ್ರಾಣನ ಮಾತುಗಳಲ್ಲಿ) ವಿಶ್ವಾಸವಿಲ್ಲದವುಗಳಾಗಿ, **ಬಭೂವುಃ** - ಆದವು·

## ತಾತ್ಪರ್ಯ

ಆಕಾಶ ಮೊದಲಾದ ದೇವತೆಗಳನ್ನು ಉದ್ದೇಶಿಸಿ ಮುಖ್ಯಪ್ರಾಣನು ಹೇಳಿದನು· ಹೇ ಆಕಾಶಾದಿಗಳೇ, ನೀವು ಮೋಹಪರವಶರಾಗಬೇಡಿ· ಈ ಶರೀರವನ್ನು ಕಾದಿಟ್ಟು ಬೀಳಗೊಡದೇ ರಕ್ಷಿಸುವವನು ನಾನೇ· ನಾನು ಈ ಕಾರ್ಯಕ್ಕಾಗಿ ನನ್ನನ್ನು ಪ್ರಾಣ, ಅಪಾನ, ವ್ಯಾನ, ಉದಾನ ಮತ್ತು ಸಮಾನ ಎಂಬ ಐದು ಭಾಗಗಳಾಗಿ ಹಂಚಿಕೊಳ್ಳುತ್ತೇನೆ· ನಾನು ಈ ಶರೀರವನ್ನು ವ್ಯಾಪಿಸಿ ಇರದಿದ್ದಲ್ಲಿ ನೀವು ಯಾರೂ ಯಾವ ಕೆಲಸವನ್ನು ನಿರ್ವಹಿಸಲು ಶಕ್ತರಲ್ಲ · ಆದರೆ ಆಕಾಶಾದಿಗಳು ಅಭಿಮಾನದಿಂದ ಅಂಧವಾಗಿವೆ · ಆದ್ದರಿಂದ ಮುಖ್ಯಪ್ರಾಣನ ಮಾತುಗಳಲ್ಲಿ ಅವುಗಳಿಗೆ ಭರವಸೆ ಮೂಡಲಿಲ್ಲ·

## ರಂಗರಾಮಾನುಜಭಾಷ್ಯ

**ತಾನ್ ವರಿಷ್ಠಃ ಪ್ರಾಣ ಉವಾಚ** - ಮುಖ್ಯಃಪ್ರಾಣ ಉವಾಚೇತ್ಯರ್ಥಃ । ಕಿಮಿತಿ - **'ಮಾ ಮೋಹಮಾಪದ್ಯಥಾಃ'** ಇತಿ । 'ಹೇ ಆಕಾಶಾದಯಃ ಈದೃಶೀಂ ವಿಪರೀತಬುದ್ಧಿಮ್ ಮಾ ಗಚ್ಛತ । ಅಹಮೇವ ಸ್ವಾತ್ಮಾನಂ ಪ್ರಾಣಾಪಾನವ್ಯಾನಸಮಾನೋದಾನರೂಪೇಣ ಪಂಚಧಾ ವಿಭಜ್ಯ ಧಾರಯಾಮಿ' ಇತಿ । ಏವಂ ವದತೋ ಮುಖ್ಯಪ್ರಾಣಸ್ಯಾಯಂ ಭಾವಃ - ಹೇ ಆಕಾಶಾದಯಃ! ಭವಂತಃ ಅವಕಾಶಾದಿಪ್ರಾತಿಸ್ವಿಕಕಾರ್ಯಕ್ಷಮಾಃ, ನ ತು ಸರ್ವಕಾರ್ಯಕ್ಷಮಾಃ । ಅಹಂ ತು ಭವತಾಮಪಿ ಕಾರ್ಯನಿಮಿತ್ತತ್ವಾತ್ ಭವತ್ಕಾರ್ಯಕ್ಷಮಃ । ಮಯ್ಯಾಕ್ರಿ(ಮಯ್ಯಾಽಕ್ರಿ)ಯಮಾಣೇ ಜೀವನೇ ತು ಭವತ್ಸು ನ ಕೋಽಪಿ ಸಮರ್ಥಃ (ಕ್ಷಮಃ) ಇತಿ । **ತೇ ಅಶ್ರದ್ದಧಾನಾ ಬಭೂವುಃ**। ತೇ ತದ್ವಾಕ್ಯೇ ವಿಶ್ವಾಸಂ ನ ಕೃತವಂತಃ ॥

## ಅನುವಾದ

**ತಾನ್ ವರಿಷ್ಠಃ ಪ್ರಾಣ ಉವಾಚ** । ಮುಖ್ಯಪ್ರಾಣನು (ಆಕಾಶಾದಿಗಳಿಗೆ) ಹೇಳಿದನು ಎಂದರ್ಥ ಏನೆಂದು (ಹೇಳಿದನು)?- **ಮಾ ಮೋಹಮಾಪದ್ಯಥಾಃ** ಇತಿ । - 'ಆಕಾಶಾದಿಗಳೇ; ಈ ರೀತಿಯ [೧]ವಿಪರೀತಜ್ಞಾನವನ್ನು ಹೊಂದಬೇಡಿರಿ · ನಾನೇ ನನ್ನನ್ನು ಪ್ರಾಣ, ಅಪಾನ, ವ್ಯಾನ, ಸಮಾನ, ಉದಾನ ಎಂದು ಐದು ವಿಭಾಗ ಮಾಡಿ ಧರಿಸುತ್ತೇನೆ' ಎಂದು · ಹೀಗೆ ಹೇಳುತ್ತಿರುವ ಮುಖ್ಯ ಪ್ರಾಣನ

---

೧· ವಿಪರೀತಜ್ಞಾನಭ್ರಾಂತಿ - ತಪ್ಪು ತಿಳಿವು· ಇರುವ ವಸ್ತುವನ್ನು ಇಲ್ಲವೆಂದಾಗಲೀ, ಇಲ್ಲದಿರುವ ವಸ್ತುವನ್ನು ಇದೆ ಎಂದಾಗಲೀ ಅರಿಯುವುದು· ಉದಾ:- ಮರೀಚಿಕೆಯಲ್ಲಿ ನೀರಿದೆ ಎಂಬ ಅರಿವು·

ಆಶಯವಿದು - ಆಕಾಶಾದಿಗಳೇ! ನೀವು ಅವಕಾಶ(ದಾನ) ಮೊದಲಾದ ಪ್ರತ್ಯೇಕ ಕಾರ್ಯಗಳನ್ನು ಮಾಡಲು ಸಮರ್ಥರೇ ಹೊರತು ಎಲ್ಲ ಕಾರ್ಯಗಳನ್ನು ಮಾಡಲು ಸಮರ್ಥರಲ್ಲ ನಾನಾದರೋ ನಿಮ್ಮ ಕೆಲಸಗಳಿಗೂ ನಿಮಿತ್ತವಾಗಿರುವುದರಿಂದ ನಿಮ್ಮ ಕೆಲಸಗಳನ್ನೂ ಮಾಡಲು ಶಕ್ತನು · ನಾನು ನಿರ್ವಹಿಸುವ ಜೀವನ-ಕಾರ್ಯದಲ್ಲಿ ಮಾತ್ರ ನಿಮ್ಮಲ್ಲಿ ಯಾರೂ ದಕ್ಷರಲ್ಲ ಎಂದು · **ತೇಽಶ್ರದ್ದಧಾನಾ ಬಭೂವುಃ** ಅವುಗಳು (ಮುಖ್ಯಪ್ರಾಣನಮಾತುಗಳಲ್ಲಿ) ನಂಬಿಕೆಯಿಲ್ಲದವುಗಳಾದವು · (ಆಕಾಶಾದಿಗಳು ಮುಖ್ಯ ಪ್ರಾಣನ ಮಾತುಗಳನ್ನು ನಂಬಲಿಲ್ಲ)·

## ಭಾಷ್ಯಸಾರ

ಜೀವನ ಸಂರಕ್ಷಣೆ ಮುಖ್ಯಪ್ರಾಣನ ಪ್ರಧಾನ ಕಾರ್ಯ · ಈ ಕಾಯಕದಿಂದಲೇ ಅವನಲ್ಲಿ ಶ್ರೇಷ್ಠತೆಯು ಸಿದ್ಧಿಸುತ್ತದೆ · ಆದರೆ ಆಕಾಶ ಮೊದಲಾದ ಪ್ರಾಣಗಳು ಜೀವನಧಾರಣೆ ತಮ್ಮಿಂದಲೇ ಸಾಧ್ಯವೆಂದು ಭಾವಿಸಿವೆ · ವಸ್ತುತಃ ಇದು ಅವುಗಳ ಅವಿವೇಕ · ತಮ್ಮ ತಿಳಿವು · ಇದರಿಂದ ಅವರಲ್ಲಿ ಅಹಂಕಾರವೂ ತಲೆಯೆತ್ತಿದೆ · ಮುಖ್ಯಪ್ರಾಣನಿಗೆ ಈ ಸಂಗತಿಯು ತಿಳಿದಾಗ, ಅವುಗಳನ್ನು ಎಚ್ಚರಿಸಲು ಮುಂದಾಗುತ್ತಾನೆ· ವಾಸ್ತವ ಸ್ಥಿತಿಯನ್ನು ವಿವರಿಸುತ್ತಾನೆ·

ಆಕಾಶಾದಿಗಳೇ! ಮೋಹಕ್ಕೆ ಒಳಗಾಗಬೇಡಿ · ದೇಹಧಾರಣೆಯ ಕಾರ್ಯ ನಿಮ್ಮಿಂದಾಗದು · 'ನಾವೇ ಶರೀರವನ್ನು ಬೀಳದಂತೆ ಕಾದಿಟ್ಟವರು' ಎಂಬುದು ನಿಮಗುಂಟಾದ ಭ್ರಮೆ · ಏಕೆಂದರೆ ನಾನೇ ನನ್ನನ್ನು ಪ್ರಾಣ, ಅಪಾನ, ವ್ಯಾನ, ಉದಾನ ಹಾಗೂ ಸಮಾನ ಎಂದು ಕಾರ್ಯಗಳಿಗೆ ಅನುಗುಣವಾಗಿ ಮಾಡಿದೆನು · ನೀವು [೧]ಅವಕಾಶ, ದಾನ, ಮುಂತಾದ ಕೆಲವುಕರ್ತವ್ಯಗಳನ್ನು ನಿರ್ವಹಿಸುವುದೇನೋ ನಿಜ, ಆದರೂ ನಾನಿಲ್ಲದೇ ನಿಮ್ಮ ಕಾರ್ಯಗಳು ಘಟಿಸಲಾರವು · ಆದ್ದರಿಂದ ನೈಜವನ್ನು ಮರೆಮಾಡುವ ಮೋಹವನ್ನು ತ್ಯಜಿಸಿರಿ·

ಮುಖ್ಯಪ್ರಾಣನ ಯಥಾರ್ಥ ವಿವರಣೆ ಆಕಾಶಾದಿಗಳಿಗೆ ರುಚಿಸಲಿಲ್ಲ · ಆಕಾಶಾದಿ ಪ್ರಾಣಗಳಲ್ಲಿ ಆವಿರ್ಭವಿಸಿದ್ದ ಗರ್ವವು ಅವುಗಳನ್ನು ಸಂದೇಹದ ಕಂದರಕ್ಕೆ ದೂಡಿತ್ತು · ಮುಖ್ಯಪ್ರಾಣನು ಹೇಗೆ ಶರೀರ ಧರಿಸಿಯಾನು? ಇದು ಹೇಗೆ ಸಾಧ್ಯ? ಮುಂತಾಗಿ ಸಂಶಯಗಳು ಹುಟ್ಟಿದವು · ಆದ್ದರಿಂದ ಅವು ಮುಖ್ಯಪ್ರಾಣನ ವಾಕ್ಯಗಳಲ್ಲಿ ವಿಶ್ವಾಸವನ್ನು ತಳೆಯಲಿಲ್ಲ·

---

೧· ಭವತಾಮಪಿ ಕಾರ್ಯಮವಕಾಶಪ್ರದಾನಾದಿ ಮದಭಾವೇ ನೋಪಪದ್ಯೇತ - ಆನಂದಭಾಷ್ಯ·

## ಮಂತ್ರ - ೪

सोऽभिमानादूर्ध्वमुत्क्र(त्क्रा)मत इव ।
तस्मिन्नुत्क्रामत्यथेतरे सर्व एवोत्क्रामन्ते ।
तस्मिंश्च (स्मिंस्तु) प्रतिष्ठमाने सर्व एव प्रतिष्ठन्ते ।
तद्यथा मक्षिका मधुकरराजानमुत्क्रामन्तं
सर्वा एवोत्क्रामन्ते । तस्मिंश्च प्रतिष्ठमाने
सर्वा एव प्रतिष्ठन्ते एवं वाङ्मनश्चक्षुः-
श्रोत्रं च ।। ते प्रीताः प्राणं स्तुन्वन्ति ।। 4 ।।

ಸೋऽಭಿಮಾನಾದೂರ್ಧ್ವಮುತ್ಕ್ರ(ತ್ಕ್ರಾ)ಮತ ಇವ ।
ತಸ್ಮಿನ್ನುತ್ಕ್ರಾಮತ್ಯಥೇತರೇ ಸರ್ವ ಏವೋತ್ಕ್ರಾಮಂತೇ ।
ತಸ್ಮಿಂಶ್ಚ (ಸ್ಮಿಂಸ್ತು) ಪ್ರತಿಷ್ಠಮಾನೇ ಸರ್ವ ಏವ ಪ್ರತಿಷ್ಠಂತೇ ।
ತದ್ಯಥಾ ಮಕ್ಷಿಕಾ ಮಧುಕರರಾಜಾಮುತ್ಕ್ರಾಮಂತಂ
ಸರ್ವಾ ಏವೋತ್ಕ್ರಾಮಂತೇ । ತಸ್ಮಿಂಶ್ಚ ಪ್ರತಿಷ್ಠಮಾನೇ
ಸರ್ವಾ ಏವ ಪ್ರತಿಷ್ಠಂತೇ ಏವಂ ವಾಙ್ಮನಶ್ಚಕ್ಷುಃ-
ಶ್ರೋತ್ರಂ ಚ ॥ ತೇ ಪ್ರೀತಾಃ ಪ್ರಾಣಂ ಸ್ತುನ್ವಂತಿ ॥

### ಪ್ರತಿಪದಾರ್ಥ

**ಸಃ** - ಮುಖ್ಯಪ್ರಾಣನು, **ಅಭಿಮಾನಾತ್** - (ಆಕಾಶಾದಿ ಪ್ರಾಣಿಗಳ ಗರ್ವವನ್ನು ಕಂಡು ಉಂಟಾದ) ಆತ್ಮಗೌರವದಿಂದ, **ಊರ್ಧ್ವಮ್** - (ತನ್ನ ಸ್ಥಾನದಿಂದ) ಮೇಲಕ್ಕೆ, **ಉತ್ಕ್ರಾಮತ ಇವ**- ಸ್ವಲ್ಪ ಚಲಿಸುವಂತೆ ಮಾಡಿದನು· **ಅಥ** - ಅನಂತರ, **ತಸ್ಮಿನ್ ಉತ್ಕ್ರಾಮತಿ** (ಸತಿ) - ಮುಖ್ಯಪ್ರಾಣನು ಮೇಲಕ್ಕೇಳಲು, **ಇತರೇ** - ಅವನನ್ನು ಉಳಿದು, **ಸರ್ವೇ ಏವ** - ಆ ವಾಗಾದಿಗಳೆಲ್ಲವೂ, **ಉತ್ಕ್ರಮಂತೇ** - ಉತ್ಕ್ರಮಣ ಮಾಡುತ್ತವೆ· **ತಸ್ಮಿಂಶ್ಚ ಪ್ರತಿಷ್ಠಮಾನೇ** - ಆ ಮುಖ್ಯಪ್ರಾಣನು (ತನ್ನ ಸ್ಥಾನದಲ್ಲಿ) ನೆಲೆಸಲು, **ಸರ್ವೇ** - ವಾಗಾದಿಗಳೆಲ್ಲವೂ, **ಪ್ರತಿಷ್ಠಂತೇ** - (ತಮ್ಮ ತಮ್ಮ ಸ್ಥಾನದಲ್ಲಿ) ನೆಲೆಸುತ್ತವೆ· **ಯಥಾ** - ಹೇಗೆ (ಯಾವ ರೀತಿಯಿಂದ), **ಮಕ್ಷಿಕಾಃ** - ಜೇನುನೊಣಗಳು **ಉತ್ಕ್ರಾಮಂತಂ** - ಹೊರ ಹೊರಡುತ್ತಿರುವ, [೧]**ಮಧುಕರರಾಜಾನಮ್** - ರಾಣಿ ಹುಳುವನ್ನು, **ಸರ್ವಾಏವ** - ಎಲ್ಲವೂ (ಸೇರಿಯೇ), **ಉತ್ಕ್ರಾಮಂತೇ** - (ಅನುಸರಿಸಿ) ಹಾರುವುವೋ, **ತಸ್ಮಿನ್ ಪ್ರತಿಷ್ಠಮಾನೇ ಚ** - ಆ ರಾಣಿ ಹುಳುವು ಕುಳಿತುಕೊಳ್ಳಲು, **ಸರ್ವಾ ಏವ** - ಎಲ್ಲ ಹುಳುಗಳೂ,

---

೧· ಮಧುಕರರಾಜಾ - ರಾಣಿಹುಳು·
ರಾಣಿಹುಳುವಿನ ಪ್ರಭುತ್ವವನ್ನು ಲಕ್ಷ್ಯದಲ್ಲಿಟ್ಟು 'ಮಧುಕರರಾಜಾ' ಎಂದು ಪುಲ್ಲಿಂಗನಿರ್ದೇಶ ಮಾಡಲಾಗಿದೆ·

ಪ್ರತಿಷ್ಠಂತೇ - ಕುಳಿತುಕೊಳ್ಳುವುವೋ; ಏವಂ - ಹಾಗೆ (ಅದೇ ರೀತಿಯಿಂದ) -ವಾಕ್, ಮನಃಚಕ್ಷುಃ ಶ್ರೋತ್ರಂಚ - ಮಾತು ಮೊದಲಾದ ಕರ್ಮೇಂದ್ರಿಯಗಳೂ, ಮನಸ್ಸು ಮುಂತಾದ ಜ್ಞಾನೇಂದ್ರಿಯ-ಗಳೂ (ಮಾಡುತ್ತವೆ)· ತೇ - ಆ ಪ್ರಾಣಗಳು, ಪ್ರೀತಾಃ - ಸಂತೋಷಗೊಂಡು, ಪ್ರಾಣಮ್ - ಮುಖ್ಯ-ಪ್ರಾಣನನ್ನು, ಸ್ತುನ್ವಂತಿ - ಸ್ತೋತ್ರ ಮಾಡುತ್ತವೆ·

## ತಾತ್ಪರ್ಯ

ಜೇನುನೊಣಗಳಲ್ಲಿ ರಾಣಿ ಹುಳುವು ಹಾರಲು ಅಣಿಯಾದರೆ ಇತರ ಎಲ್ಲ ಹುಳುಗಳೂ ಅದನ್ನು ಅನುಸರಿಸಿ ಹಾರಲು ಸಿದ್ಧವಾಗುವುವು· ರಾಣಿಹುಳುವು ಮರಳಿ ತನ್ನ ಸ್ಥಾನದಲ್ಲಿ ನೆಲೆಗೊಂಡರೆ, ಅವೂ ಹಾಗೆಯೇ ಮಾಡುವುವು · ಅದರಂತೆ, ಮುಖ್ಯಪ್ರಾಣನು ಉತ್ಕ್ರಮಣೋನ್ಮುಖನಾದ ಕೂಡಲೇ ವಾಗಾದಿಗಳೂ ಉತ್ಕ್ರಮಣಕ್ಕೆ ಸಿದ್ಧವಾದವು · ಮುಖ್ಯಪ್ರಾಣನು ಸ್ವಸ್ಥಾನದಲ್ಲಿ ನೆಲೆಸಿದೊಡನೆಯೇ ವಾಗಾದಿಗಳೂ ತಮ್ಮ ತಮ್ಮ ತಾಣಗಳಲ್ಲಿ ನೆಲೆಸಿದವು · ಇದರಿಂದ ಅವುಗಳು ಸಂತೋಷಗೊಂಡು ಮುಖ್ಯ ಪ್ರಾಣವನ್ನು ಹೊಗಳಲು ಆರಂಭಿಸಿದವು·

## ರಂಗರಾಮಾನುಜಭಾಷ್ಯ

**ಸೋಽಭಿಮಾನಾದೂರ್ಧ್ವಮುತ್ಕ್ರಮತ** ಇವ । ತತಃ ಸಃ ಪ್ರಾಣಃ ಏಷಾಂ ಗರ್ವಮವಲೋಕ್ಯ ಅಹಂಕಾರಾವೇಶಾದಷ್ಟೋತ್ತರಶತಮರ್ಮಸ್ಥಾನಾನಾಮುಪರಿ ಸ್ವಸಾಮರ್ಥ್ಯಂ ಪ್ರಕಟಯಿತುಂ ಸ್ವಸ್ಥಾನಾತ್ ಕಿಂಚಿದುದಚಲದಿವ । ಇವಶಬ್ದಃ ಅಲ್ಪಾರ್ಥೇ । ಸಾಕ್ಷಾದುತ್ಕ್ರಮಣೇ ಅಪ್ರತಿಸಮಾಧೇಯಃ ಶರೀರವಿನಾಶಃ ಸ್ಯಾದಿತಿ ಮತ್ವಾ ಉತ್ಕ್ರಮಣಮಿವ ಕೃತವಾನಿತಿ ಭಾವಃ । ತಸ್ಮಿನ್ ಉತ್ಕ್ರಾಮತ್ಯಥೇತರೇ ಸರ್ವ ಏವೋತ್ಕ್ರಾಮಂತೇ । ತಸ್ಮಿನ್ ಮುಖ್ಯಪ್ರಾಣೇ ಉತ್ಕ್ರಾಮತಿ ಇತರೇ ಸರ್ವೇ ಪ್ರಾಣಾ ಉದಕ್ರಾಮನ್ - ತಸ್ಮಿಂಸ್ತು ಪ್ರತಿಷ್ಠಮಾನೇ ಸರ್ವ ಏವ ಪ್ರತಿಷ್ಠಂತೇ ! ಶರೀರಪಾತಭೀತ್ಯಾ ಪುನಃ ಪ್ರತಿಷ್ಠಾಂ ಪ್ರಾಪ್ನೋತಿ ಸತಿ ಇತರೇಽಪಿ ಪ್ರತಿಷ್ಠಿತಾ ಇತ್ಯರ್ಥಃ । ತತ್ರ ದೃಷ್ಟಾಂತಮಾಹ - **ತದ್ಯಥಾ ಮಕ್ಷಿಕಾ ಇತಿ** । ಯಥಾ ಮಧುಕರಮಕ್ಷಿಕಾಃ ತತ್ರ ಶ್ರೇಷ್ಠಾಂ ಮಕ್ಷಿಕಾಂ ಉತ್ಕ್ರಾಮಂತೀಮ್ ಅನುತ್ಕ್ರಾಮಂತಿ; ಪ್ರತಿಷ್ಠಿತಾಯಾಂ ತಸ್ಯಾಂ ಸ್ವಯಂ ಪ್ರತಿಷ್ಠಿತಾ ಭವಂತಿ - ಏವಂ ವಾಗಾದ್ಯಾಃ ಪ್ರಾಣಾಃ ಮುಖ್ಯಪ್ರಾಣಾನು ವಿಧಾಯಿನೋಽಭವನ್ನಿತ್ಯರ್ಥಃ । **ತೇ ಪ್ರೀತಾಃ ಪ್ರಾಣಂ ಸ್ತುನ್ವಂತಿ** । ಮುಖ್ಯಪ್ರಾಣಮಾಹಾತ್ಮ್ಯದರ್ಶನಪ್ರೀತಾ ವಾಗಾದ್ಯಾಃ ಪ್ರಾಣಾಃ ಮುಖ್ಯಪ್ರಾಣಂ ತುಷ್ಟುವುರಿತ್ಯರ್ಥಃ । ಸ್ತೌತೇರ್ವ್ಯತ್ಯಯಾತ್ ಶ್ನುಃ ॥

## ಅನುವಾದ

**ಸೋಽಭಿಮಾನಾದೂರ್ಧ್ವಮುತ್ಕ್ರಮತ** ಇವ - ಆಮೇಲೆ ಆ ಮುಖ್ಯಪ್ರಾಣನು ಅವುಗಳ (ಆಕಾಶಾದಿಗಳ) ಗರ್ವವನ್ನು ಮನಗಂಡು, ಹೆಮ್ಮೆಯ ಆವೇಶದಿಂದ ನೂರೆಂಟು [೧]ಮರ್ಮಸ್ಥಾನಗಳ

---

೧· ಮರ್ಮಸ್ಥಾನಗಳು - ಜೀವಸ್ಥಾನಗಳು·

ಮೇಲೆ ತನ್ನ ಪ್ರಭಾವವನ್ನು ತೋರಿಸಲು ತನ್ನ ಸ್ಥಾನದಿಂದ ಸ್ವಲ್ಪ ಚಲಿಸಿದನು. 'ಇವ' ಶಬ್ದವು ಅಲ್ಪ ಎಂಬ ಅರ್ಥದಲ್ಲಿದೆ. ಸಾಕ್ಷಾತ್ (ನೇರವಾಗಿ) ಉತ್ಕ್ರಮಣಮಾಡಿದರೆ ದೇಹವಿನಾಶವು ಅನಿವಾರ್ಯ-ವಾದೀತು ಎಂದು ವಿಚಾರಮಾಡಿ ಮೇಲಕ್ಕೆ ಚಿಮ್ಮಿದಂತೆ ಮಾಡಿದನು ಎಂದು ಅಭಿಪ್ರಾಯ.

ತಸ್ಮಿನ್ನುತ್ಕ್ರಾಮತ್ಯಥೇತರೇ ಸರ್ವ ಏವೋತ್ಕ್ರಾಮಂತೇ - ಆ ಮುಖ್ಯಪ್ರಾಣನು ಉತ್ಕ್ರಮಣ ಮಾಡಲು, ಉಳಿದ ಎಲ್ಲ ಪ್ರಾಣಗಳು ಹೊರಟುಹೋದವು. ತಸ್ಮಿಂಸ್ತು ಪ್ರತಿಷ್ಠಮಾನೇ ಸರ್ವ ಏವ ಪ್ರತಿಷ್ಠಂತೇ - ದೇಹನಾಶವುಂಟಾಗುವ ಆತಂಕದಿಂದ ಮುಖ್ಯಪ್ರಾಣನು ತಿರುಗಿ ನೆಲೆಸಿರಲು, ಉಳಿದ ಪ್ರಾಣಗಳೂ ನೆಲೆಗೊಳ್ಳುತ್ತವೆ. ಈ ವಿಷಯದಲ್ಲಿ ಉದಾಹರಣೆಯನ್ನು ಕೊಡುತ್ತಾರೆ.

ತದ್ಯಥಾ ಇತಿ । ಜೇನುಹುಳುಗಳು ಹೇಗೆ ರಾಣಿಹುಳುವು ಹೊರಹೊರಟರೆ ಅದನ್ನು ಅನುಸರಿಸು-ವುವೋ, ಅದು ನೆಲೆಸಿದರೆ ತಾವೂ ನೆಲೆಸುವುವೋ ಹಾಗೆಯೇ, ವಾಕ್ಕು ಮೊದಲಾದ ಪ್ರಾಣಗಳು ಮುಖ್ಯ-ಪ್ರಾಣನಿಂದ ನಿಯಂತ್ರಿಸಲ್ಪಟ್ಟಿದೆ.

ತೇ ಪ್ರೀತಾಃ ಪ್ರಾಣಂ ಸ್ತುನ್ವಂತಿ । ಮುಖ್ಯಪ್ರಾಣದ ಹಿರಿಮೆಯನ್ನು ಕಂಡು ಸಂತೋಷಗೊಂಡ ವಾಗಾದಿ ಪ್ರಾಣಗಳು ಮುಖ್ಯಪ್ರಾಣನನ್ನು ಹೊಗಳಿದವು. 'ಸ್ತು' [೧]ಧಾತುವಿಗೆ ವ್ಯತ್ಯಾಸದಿಂದ 'ಶ್ನು' ಎಂಬ ವಿಕರಣ ಪ್ರತ್ಯಯ ಬಂದಿದೆ.

## ಭಾಷ್ಯಸಾರ

ಮುಖ್ಯಪ್ರಾಣನಿಗೆ ಆಕಾಶಾದಿಗಳ ಅಪನಂಬಿಕೆಯು ತಿಳಿದು ಬಂತು. ಈ ತಿಳಿವಿನಿಂದ ಅವನ ಆತ್ಮಗೌರವ ಕೆರಳಿತು. ಹೆಮ್ಮೆ ಹೊರಹೊಮ್ಮಿತು. [೨]ತಾನು ಇರುವುದರಿಂದಲೇ ಕಾರ್ಯಮಾಡಲು ಅರ್ಹವಾದರೂ ಇವು ನನ್ನ ವಾಕ್ಯದಲ್ಲಿ ಭರವಸೆ ಇಡಲಿಲ್ಲ. ನಾನಿಲ್ಲದಿದ್ದಾಗ ತಮ್ಮ ಸ್ಥಿತಿ-ಗತಿಗಳನ್ನು ತಾವೇ ಕಂಡು ತಿಳಿಯಲಿ ಎಂಬ ಅಭಿಮಾನ ತಲೆಯೆತ್ತಿತು. ಈ ಅಭಿಮಾನದಿಂದ ಮುಖ್ಯಪ್ರಾಣನು ತನ್ನ ಸ್ಥಾನದಿಂದ ಮೇಲಕ್ಕೆ ಸ್ವಲ್ಪ ಚಲಿಸಿದನೋ ಇಲ್ಲವೋ ಅಷ್ಟರಲ್ಲಿಯೇ, ಉಳಿದ ಪ್ರಾಣಗಳು ತಮ್ಮ ತಮ್ಮ ಸ್ಥಾನದಿಂದ ಕದಲಿಬಿಟ್ಟವು.

ಆದರೆ ಮುಖ್ಯಪ್ರಾಣನ ಈ ಪ್ರಯೋಗದಿಂದ ಶರೀರಪಾತವೇ ಆಗುವ ಸನ್ನಿವೇಶ ಒದಗಿತು. ಉಳಿದ ಪ್ರಾಣಗಳಿಗೆ ಮಾಡಲೆನಿಸಿದ ಶಾಸ್ತಿ ದೇಹಕ್ಕಾದಗಿದರೆ ವಿಪತ್ತು ಖಂಡಿತ. ಆ ಆತಂಕದಿಂದಲೇ ಮುಖ್ಯ-ಪ್ರಾಣನು ಮೊದಲಿನಂತೆ ಸ್ವಸ್ಥಾನದಲ್ಲಿ ನೆಲೆಗೊಂಡಾಗ ಇತರ ಪ್ರಾಣಗಳೂ ತಮ್ಮ ತಮ್ಮ ಸ್ಥಾನಗಳಲ್ಲಿ

೧. 'ಸ್ತು' ಧಾತುವು ಅದಾದಿಗಣಕ್ಕೆ ಸೇರಿದೆ. ಆದ್ದರಿಂದ ಸ್ವಾದಿಗಣದ ಧಾತುಗಳಿಗೇ ಬರುವ 'ಶ್ನು' ವಿಕರಣ ಪ್ರತ್ಯಯವು ಈ ಧಾತುವಿಗೆ ಬರಲಾರದು. ಆದ್ದರಿಂದ ಲೌಕಿಕ ಸಂಸ್ಕೃತದಲ್ಲಿ 'ಸ್ತುವಂತಿ' ಎಂದೇ ಪ್ರಯೋಗವಿದೆ.

೨. ಮತ್ಸಾನ್ನಿಧ್ಯಾಧೀನವ್ಯಾಪಾರಾ ಅಪ್ಯೇತೇ ಮದ್ವಾಕ್ಯೇ ಅಶ್ರದ್ದಧಾನಾ ಭವಂತಿ, ತತಃ ಪಶ್ಯಂತು ಮದಭಾವೇ ಸ್ವಕೀಯಾಂ ಗತಿಮಿತ್ಯೇವಂವಿಧಾಹಂಕಾರಾತ್ ಊರ್ಧ್ವಂ ಶರೀರೋರ್ಧ್ವಭಾಗ ಉತ್ಕ್ರಮತೇ - ಆನಂದಭಾಷ್ಯ.

ನೆಲೆಸಿ ಮೊದಲಿನಂತಾದವು · ಈಗ ಮುಖ್ಯಪ್ರಾಣನಮಹಿಮೆ ಆಕಾಶಾದಿಪ್ರಾಣಗಳ ಮನಮುಟ್ಟಿರಬೇಕು ·

ಇದು ಲೋಕದಲ್ಲಿ ಕಂಡರಿಯದ ಸಂಗತಿಯೇನಲ್ಲ · ಗುಂಪು ಗುಂಪಾಗಿ ಹುಟ್ಟುಕಟ್ಟುವ ಜೇನು-ಹುಳುಗಳು ರಾಣಿಹುಳು ಹೊರಹೊರಟಾಗ ಅದನ್ನು ಅನುಸರಿಸಿ ಹಾರುತ್ತವೆ · ಆ ರಾಣಿಹುಳು ಎಲ್ಲಿ ವಿಶ್ರಮಿಸುತ್ತದೆಯೋ, ಅಲ್ಲೇ ಅವೆಲ್ಲವೂ ನೆಲೆ ನಿಲ್ಲುತ್ತವೆ · ಇದೇ ಪ್ರಭುವಿನ ಪ್ರಭಾವ · ಇದರಂತೆ ಪ್ರಧಾನವಾದ ಮುಖ್ಯಪ್ರಾಣನ ಸಾಮರ್ಥ್ಯವೂ ಅಗಾಧ · ಇದನ್ನು ಅರ್ಥೈಸಿಕೊಂಡ ವಾಗಾದಿಪ್ರಾಣಗಳು ತಮ್ಮ ಮಿತಿ-ಯನ್ನು ತಿಳಿಯುತ್ತವೆ · ಪರೀಕ್ಷೆಗೆ ಒಳಪಟ್ಟಿರಲ್ಲವೇ ತನ್ನತನದ ಹರವು ಅರಿವಿಗೆ ದೊರೆಯುವುದು· ಅವು ಸಂತೋಷದಿಂದ ಮುಖ್ಯಪ್ರಾಣನನ್ನು ಸ್ತುತಿಸಲಾರಂಭಿಸಿವೆ·

## ಮಂತ್ರ - ೫

एषोऽग्निस्तपत्येष सूर्य एष पर्जन्यो मघवान् एष वायुः ।
एष पृथिवी रयिर्देवः सदसच्चामृतं च यत् ॥ 5 ॥

ಏಷೋಽಗ್ನಿಸ್ತಪತ್ಯೇಷ ಸೂರ್ಯ ಏಷ ಪರ್ಜನ್ಯೋ
ಮಘವಾನ್ ಏಷ ವಾಯುಃ ।
ಏಷ ಪೃಥಿವೀ ರಯಿರ್ದೇವಃ ಸದಸಚ್ಚಾಽಮೃತಂ ಚ ಯತ್ ॥

### ಪ್ರತಿಪದಾರ್ಥ

**ಏಷಃ** - ಈ ಮುಖ್ಯಪ್ರಾಣನು, **ಅಗ್ನಿಃ** - ಅಗ್ನಿಯ ರೂಪದಲ್ಲಿದ್ದು, **ತಪತಿ** - ತಾಪವನ್ನು (ಶೀತ ನಿವಾರಣೆಯನ್ನು) ಉಂಟು ಮಾಡುತ್ತಾನೆ · **ಏಷಃ** - ಈ ಮುಖ್ಯಪ್ರಾಣನು, **ಸೂರ್ಯಃ**-ಸೂರ್ಯನ ರೂಪದಲ್ಲಿದ್ದು ನೀರನ್ನು ತೆಗೆದುಕೊಳ್ಳುತ್ತಾನೆ · **ಏಷಃ** - ಮುಖ್ಯಪ್ರಾಣನು, **ಪರ್ಜನ್ಯಃ** - ಮೋಡದ ರೂಪದಲ್ಲಿ ಮಳೆ ಸುರಿಸುತ್ತಾನೆ · **ಏಷಃ** - ಮುಖ್ಯಪ್ರಾಣನು, **ಮಘವಾನ್** - ಇಂದ್ರನ ರೂಪದಲ್ಲಿ ಪ್ರಜೆಗಳನ್ನು ಪಾಲಿಸುತ್ತಾನೆ · **ಏಷಃ** - ಮುಖ್ಯಪ್ರಾಣನು, **ವಾಯುಃ** - ವಾಯುವಾಗಿ ಎಲ್ಲವನ್ನು ಒಯ್ಯುತ್ತಾನೆ · **ಏಷಃ** - ಮುಖ್ಯಪ್ರಾಣನು, **ಪೃಥಿವೀ** - ಪೃಥ್ವಿಯ ರೂಪದಲ್ಲಿ ಎಲ್ಲವನ್ನೂ ಧರಿಸು-ತ್ತಾನೆ, **ರಯಿರ್ದೇವಃ** - ಜಲರೂಪದ ದೇವತೆಯಾಗಿದ್ದಾನೆ · **ಯತ್ ಸತ್ ಅಸತ್ ಚ**- **ಕಾರ್ಯ**-

ಕಾರಣರೂಪದ, ಜಡ-ಚೇತನಗಳೆಲ್ಲವೂ, ಸ ಏವ **ಅಮೃತಮ್** - ಅವನೇ, ಅಮೃತ ಸ್ವರೂಪನು·

## ತಾತ್ಪರ್ಯ

ಈ ಮುಖ್ಯಪ್ರಾಣನು ಅಗ್ನಿಯಾಗಿ ಶೀತನಿವಾರಣೆಯನ್ನು ಮಾಡುತ್ತಾನೆ · ಇವನೇ ಸೂರ್ಯನಾಗಿ ಭೂಮಿಯ ನೀರನ್ನು ಹೀರಿ, ಮೇಘರೂಪದಲ್ಲಿ ಮಳೆ ಸುರಿಸುವನು · ಇವನು ಇಂದ್ರ, ಪೃಥಿವೀ ಮತ್ತು ವಾಯುಗಳಾಗಿ ಪ್ರಪಂಚವನ್ನು ಧರಿಸಿ ಕಾಪಾಡುವನು · ಜಲಜಂತುಗಳ ಉತ್ಪತ್ತಿಕಾರಣನು · ಮುಖ್ಯಪ್ರಾಣನು ಅಮೃತಸ್ವರೂಪನು, ಮೋಕ್ಷವನ್ನು ದಯಪಾಲಿಸುವವನು·

## ರಂಗರಾಮಾನುಜಭಾಷ್ಯ

ಸ್ತುತಿಮೇವಾಹ - **ಏಷೋಽಗ್ನಿಸ್ತಪತೀತಿ** । ಏಷ ಮುಖ್ಯಪ್ರಾಣೋಽಗ್ನಿರೂಪೇಣ ತಪತಿ । **ಏಷಃ** ಪ್ರಾಣ ಏವ ಸೂರ್ಯಃ । ಸರ್ವೇಷಾಂ ಪ್ರಾಣಾಯತ್ತಸ್ಥಿತಿಕತ್ವಾತ್, 'ಯದಧೀನಾ ಯಸ್ಯ ಸತ್ತಾ ತತ್ತದಿತ್ಯೇವ (ಭ)ಗಣ್ಯತ ಇತಿ ರೀತಿಮನುಸೃತ್ಯ ಸಾಮಾನಾಧಿಕರಣ್ಯೇನ ವ್ಯಪದೇಶೋ ದ್ರಷ್ಟವ್ಯಃ । **ರಯಿರ್ದೇವಃ** - ಅನ್ನಭೂತೋ ದೇವಃ । ಚಂದ್ರಮಾ ಇತಿ ಯಾವತ್ । **ಸದಸಚ್ಛಬ್ದೌ** ವರ್ತಮಾನಾವರ್ತಮಾನಪರೌ ವಾ ಪ್ರತ್ಯಕ್ಷಾಪ್ರತ್ಯಕ್ಷಪರೌ ವಾ ಸ್ಥೂಲಸೂಕ್ಷ್ಮಪರೌ ವಾ ಚೇತನಾ-ಚೇತನಾಪರೌ ವಾ । **ಅಮೃತ ಶಬ್ದೋ** ಮೋಕ್ಷಪರಃ; ತಸ್ಯಾಪಿ ತದಧೀನತ್ವಾದಿತಿ ಭಾವಃ ॥

## ಅನುವಾದ

ಸ್ತುತಿಯನ್ನೇ ಹೇಳುತ್ತಾನೆ - **ಏಷೋಽಗ್ನಿಸ್ತಪತ್ಯೇಷ ಇತಿ** । ಏಷಃ ಈ ಮುಖ್ಯಪ್ರಾಣನು ಅಗ್ನಿಯ ರೂಪದಲ್ಲಿ ಶಾಖವನ್ನು ಉಂಟು ಮಾಡುತ್ತಾನೆ · ಈ ಮುಖ್ಯ ಪ್ರಾಣನೇ ಸೂರ್ಯ · ಎಲ್ಲದರ ಸ್ಥಿತಿಯೂ ಪ್ರಾಣಾಧೀನವೇ ಆಗಿದ್ದರಿಂದ **'ಯದಧೀನಾ ಯಸ್ಯ ಸತ್ತಾ ತತ್ತದಿತ್ಯೇವ (ಭ)ಗಣ್ಯತೇ'** - 'ಯಾವುದರ ಅಸ್ತಿತ್ವವು ಯಾವುದರ ಅಂಕೆಗೊಳಪಟ್ಟಿದೆಯೋ ಅದನ್ನು ಅದೇ ಎಂದು ಹೇಳಲಾಗುತ್ತದೆ' ಎಂಬ ರೀತಿಯನ್ನು ಅನುಸರಿಸಿ ಒಂದೇ ವಿಭಕ್ತಿಯಿಂದ (ಪ್ರಾಣ, ಸೂರ್ಯ ಮುಂತಾದ ಶಬ್ದಗಳನ್ನು) ಉಲ್ಲೇಖಿಸಲಾಗಿದೆ · **ರಯಿರ್ದೇವಃ** - ಅನ್ನವೆಂಬ ದೇವತೆ · ಚಂದ್ರ-ನೆಂದು ಭಾವ · ಸತ್, ಅಸತ್ ಶಬ್ದಗಳು ಇರುವ-ಇಲ್ಲದಿರುವ ಅಥವಾ ಕಾಣುವ-ಕಾಣದಿರುವ, ಅಥವಾ ಸ್ಥೂಲ-ಸೂಕ್ಷ್ಮ, ಅಥವಾ ಸಜೀವ ವಸ್ತು ಸೂಚಕಗಳು · ಅಮೃತ ಶಬ್ದವು ಮೋಕ್ಷಪರವು · ಕಾರಣ ಮೋಕ್ಷವೂ ಅವನ ಅಂಕೆಯಲ್ಲಿಯೇ ಇವೆ·

## ಭಾಷ್ಯಸಾರ

ಸ್ತುತಿ ವ್ಯಕ್ತಿಯಲ್ಲಿರುವ ಗುಣಗಳ ವರ್ಣನೆ · ವ್ಯಕ್ತಿಯನ್ನು ಗುಣಶಾಲಿಯೆಂದು ಪರಿಚಯಿಸುವ ಪ್ರಕ್ರಿಯೆ · ಮುಖ್ಯಪ್ರಾಣನ ಮಹಿಮೆಯನ್ನು ಮನಸಾರೆ ತಿಳಿದ ವಾಗಾದಿಪ್ರಾಣಗಳು ಅವನಲ್ಲಿರುವ ಸಾಮರ್ಥ್ಯವನ್ನೂ, ಗುಣಗಳನ್ನೂ ವಿವರಿಸಲು ಆರಂಭಿಸಿವೆ · ಅವು ಅವನನ್ನು ಸ್ತೋತ್ರ ಮಾಡುತ್ತಿವೆ·

ಅಗ್ನಿಯು ಲೋಕದಲ್ಲಿ ಶಾಖವನ್ನು ಉಂಟು ಮಾಡುತ್ತಾ ಮೀರಿದ ಶೀತವನ್ನು ಉಪಶಮನ ಮಾಡಿ, ಜೀವರಾಶಿಯನ್ನು ಉಪಕರಿಸಿದರೆ, ಸೂರ್ಯನು ತನ್ನ ಪ್ರಖರ ಕಿರಣಗಳಿಂದ ನೀರನ್ನು ಮೇಲಕ್ಕೇರಿಸಿ ಮೇಘರಾಶಿಯನ್ನುಂಟುಮಾಡಿ ಸರ್ವಸಮೃದ್ಧಿಯನ್ನು ಕರುಣಿಸುತ್ತಾನೆ · ಪೃಥಿವೀ, ವಾಯುಗಳು ಎಲ್ಲ ಜಡ-ಚೇತನಗಳನ್ನು ಧರಿಸಿದರೆ, ಇಂದ್ರ-ಚಂದ್ರರು ಅವುಗಳೆಲ್ಲವನ್ನೂ ಪೋಷಿಸುತ್ತಾರೆ ಆದರೆ ಮುಖ್ಯಪ್ರಾಣನು ಕಾಯುವ ಅಗ್ನಿಗಿಂತಲೂ, ಸುಡುವ ಸೂರ್ಯನಿಗಿಂತಲೂ ಬೇರೆ-ಯಲ್ಲ; ಇವನು ಹೊರುವ ಭೂಮಿಯೂ, ಬೀಸುವ ವಾಯುವೂ, ಬೀಳುವ ಮಳೆಯೂ ಹೌದು ಸಸ್ಯಪೋಷಕ ಚಂದ್ರನಿಗಿಂತಲೂ, ಇವನು ಮಿಗಿಲಾಗಿಲ್ಲ · ಇವನನ್ನು ಪ್ರಾಣಿ ಮಾತ್ರವನ್ನೇ ಪಾಲಿಸುವ ಇಂದ್ರನೂ ಮೀರಿಲ್ಲ · ಈ ದೇವತೆಗಳ ಪ್ರಧಾನ ಸಾಮರ್ಥ್ಯದೊಂದಿಗೆ ಮೋಕ್ಷವನ್ನು ದಯಪಾಲಿಸುವ ಸರ್ವಶ್ರೇಷ್ಠವಾದ ಕಾಯಕವೂ ಮುಖ್ಯಪ್ರಾಣನಿಗೇ ಮೀಸಲು · ಈ ಪ್ರಪಂಚದ ಎಲ್ಲ ದೇವ-ಮನುಷ್ಯಾದಿ ಚರಾಚರ ವಸ್ತು-ಪ್ರಾಣಿಗಳ ಅಸ್ತಿತ್ವವೂ ಮುಖ್ಯಪ್ರಾಣನಿಗೆ ಅಧೀನವೇ ಆಗಿದೆ·

## ಮಂತ್ರ - ೬

अरा इव रथनाभौ प्राणे सर्वं प्रतिष्ठितम् ।
ऋचो यजूंषि सामानि यज्ञः क्षत्रं (च) ब्रह्म च ।। 6 ।।

ಅರಾ ಇವ ರಥನಾಭೌ ಪ್ರಾಣೇ ಸರ್ವಂ ಪ್ರತಿಷ್ಠಿತಮ್ ।
ಋಚೋ ಯಜೂಂಷಿ ಸಾಮಾನಿ ಯಜ್ಞಃ ಕ್ಷತ್ರಂ(ಚ)
ಬ್ರಹ್ಮ ಚ ॥

### ಪ್ರತಿಪದಾರ್ಥ

**ರಥನಾಭೌ** - ರಥಚಕ್ರದ ಗುಂಭದಲ್ಲಿ, **ಅರಾಃ ಇವ** - ಅರೆಕಾಲುಗಳಂತೆ (ಚಕ್ರಮಧ್ಯದ ಸಲಾಕೆ ಅಥವಾ ಹಲ್ಲುಗಳಂತೆ), **ಪ್ರಾಣೇ** - ಮುಖ್ಯ ಪ್ರಾಣನಲ್ಲಿ, **ಋಚಃ** - ಋಙ್ಮಂತ್ರಗಳು, **ಯಜೂಂಷಿ**- ಯಜುರ್ಮಂತ್ರಗಳು, **ಸಾಮಾನಿ** - ಸಾಮಮಂತ್ರಗಳು, **ಯಜ್ಞಃ** - (ಈ ಮಂತ್ರಗಳಿಂದ ಸಾಧ್ಯವಾದ) ಯಜ್ಞಗಳು, **ಕ್ಷತ್ರಂ ಬ್ರಹ್ಮ ಚ** - (ಯಜ್ಞಪಾಲಕರಾದ) ಬ್ರಾಹ್ಮಣರು, ಕ್ಷತ್ರಿಯರು (ಹಾಗೂ ಇವರ ಪರಿಚಾರಕರಾದ ವೈಶ್ಯರು ಮತ್ತು ಶೂದ್ರರು) ಈ ರೀತಿ, **ಸರ್ವಂ** - ಈ ಸ್ಥಾವರ-ಜಂಗಮಾದಿ ಜಗತ್ತೆಲ್ಲವೂ, **ಪ್ರತಿಷ್ಠಿತಮ್** - ನೆಲೆಸಿವೆ·

## ತಾತ್ಪರ್ಯ

ರಥ ಚಕ್ರದ ಗುಂಭದಲ್ಲಿ ಗಾಲಿಯ ಎಲ್ಲ ಅರೆಕಾಲುಗಳು ಒಂದುಗೂಡುತ್ತವೆ· ಇದರಂತೆ ಮುಖ್ಯ-ಪ್ರಾಣನಲ್ಲಿ ವೇದತ್ರಯವೂ, ಅದರಿಂದ ಸಾಧ್ಯವಾದ ಯಾಗಾದಿ ಕರ್ಮಗಳು, ಅವುಗಳ ಫಲವನ್ನು ಅನುಭವಿಸುವ ಬ್ರಾಹ್ಮಣಾದಿ ಪ್ರಜೆಗಳೂ, ಹೆಚ್ಚೇಕೆ ಸಮಸ್ತ ಜಗತ್ತೂ ನೆಲೆಸಿವೆ; ಒಂದುಗೂಡಿವೆ·

## ರಂಗರಾಮಾನುಜಭಾಷ್ಯ

**ಅರಾ ಇವೇತಿ ।** ಚಕ್ರಸ್ಯ ನಾಭಿನೇಮ್ಯಂತರಾಲವರ್ತೀನಿ ಕಾಷ್ಠಾನಿ ಅರಶಬ್ದೇನೋಚ್ಯಂತೇ । ಚಕ್ರಸ್ಯ ಮಧ್ಯಪ್ರದೇಶೋ ನಾಭಿಶಬ್ದೇನೋಚ್ಯತೇ । ಯಥಾ ಅರಾ ನಾಭಾವರ್ಪಿತಾಃ, ಏವಮಸ್ಮಿನ್ ಪ್ರಾಣೇ ಸರ್ವಂ ಪ್ರತಿಷ್ಠಿತಮಿತ್ಯರ್ಥಃ । ಸರ್ವಶಬ್ದಾರ್ಥಂ ಸ್ಪಷ್ಟಯತಿ - **ಋಚೋ ಯಜೂಂಷೀತಿ ।** ಅತ್ರ ಬ್ರಹ್ಮಕ್ಷತ್ರ ಶಬ್ದೌ ಸ್ಥಾವರಜಂಗಮಾತ್ಮಕಪ್ರಾಣಿಮಾತ್ರೋಪಲಕ್ಷಕೌ ॥

## ಅನುವಾದ

**ಅರಾ ಇವೇತಿ ।** ರಥಚಕ್ರದ ಗುಂಭ ಹಾಗೂ ಹಳಿ (ನೇಮಿಗಳ) ನಡುವೆ ಇರುವ ಕಟ್ಟಿಗೆಯ ತುಂಡುಗಳನ್ನು ಅರವೆಂದು ಕರೆಯುತ್ತಾರೆ · ಚಕ್ರದ ಮಧ್ಯಭಾಗವನ್ನು ನಾಭಿಗುಂಭವೆಂದು ಕರೆಯುತ್ತಾರೆ· ಅರೆಕಾಲುಗಳು ಹೇಗೆ ಗುಂಭದಲ್ಲಿ ಕೂಡಿಕೊಳ್ಳುವುವೋ ಹಾಗೆಯೇ ಮುಖ್ಯಪ್ರಾಣ-ನಲ್ಲಿ ಎಲ್ಲವೂ ನೆಲೆಸಿವೆ · ಸರ್ವಶಬ್ದದ ಅಭಿಪ್ರಾಯವನ್ನು ಸ್ಪಷ್ಟಪಡಿಸುತ್ತಾನೆ, - **ಋಚೋ ಯಜೂಂಷೀತಿ ।** ಇಲ್ಲಿ ಬ್ರಹ್ಮಕ್ಷತ್ರ ಶಬ್ದಗಳು ಚರ-ಸ್ಥಿರ ಪ್ರಾಣಗಳೆಲ್ಲವನ್ನು ಸಂಗ್ರಹಿಸುತ್ತವೆ·

## ಭಾಷ್ಯಸಾರ

ರಥಚಕ್ರದ ಮಧ್ಯದಲ್ಲಿ ಇರುವ ಅವಯವವು ರಥನಾಭಿ (ಗುಂಭ) ಭೂಮಿಯನ್ನು ಮುಟ್ಟಿ ಉರುಳುವ ಅಂಚು (ನೇಮಿ ಪಟ್ಟಿ) · ಈ ನೇಮಿ-ನಾಭಿಗಳನ್ನು ಒಂದುಗೂಡಿಸುವ ಮರದ ಅವಯವಗಳನ್ನು ಅರ(ಹಲ್ಲು)ಗಳೆಂದು ಕರೆಯುತ್ತಾರೆ · ಇಂತಹ ಅರಗಳು ಚಕ್ರದಲ್ಲಿ ಅನೇಕ-ವಿರುತ್ತವೆ · ನೇಮಿಗೆ ಒತ್ತುಕೊಟ್ಟು ಉರುಳುವ ಚಕ್ರವನ್ನು ಕಾಪಾಡುವ ಅರಗಳೆಲ್ಲವೂ ಗುಂಭದಲ್ಲಿ ಒಂದಾಗುತ್ತವೆ · ಇದರಂತೆ ಲೋಕಯಾತ್ರೆಯನ್ನು ನಿರ್ವಹಿಸುವ ನಾನಾ ಚರ-ಸ್ಥಿರ ವಸ್ತುಗಳು ಮುಖ್ಯ-ಪ್ರಾಣನಲ್ಲಿಯೇ ನೆಲೆಗೊಳ್ಳುತ್ತವೆ·

ಶ್ರುತಿ ಲೋಕಯಾತ್ರೆಯ ಮೂಲಾಧಾರ · ಋಕ್, ಯಜುಸ್, ಸಾಮಗಳೆಂದು ಇದು ಮೂರು ವಿಧವಾಗಿದೆ · ಆದ್ದರಿಂದ 'ತ್ರಯೀ' ಎಂಬುದು ಇದರ ನಾಮಾಂತರ · ಈ ತ್ರಯೀ ವಿವಿಧ ವಿಧಿವಿಧಾನಗಳನ್ನು ಬೋಧಿಸಿ, ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಹಾಗೂ ಶೂದ್ರರೆಂಬ ಅಧಿಕಾರಗಳನ್ನು ಅನುಗ್ರಹಿಸುತ್ತದೆ · ಇದು ತ್ರಯೀ, ಇದರಲ್ಲಿ ವಿಹಿತವಾದ ಯಾಗಾದಿಕ್ರಿಯೆಗಳು, ಅವುಗಳ ಫಲವನ್ನು ಅನುಭವಿಸುವ ಪ್ರಜೆಗಳು, ಒಟ್ಟಿನಲ್ಲಿ ಸಮಸ್ತಜಗತ್ತೂ ಮುಖ್ಯಪ್ರಾಣನಲ್ಲಿಯೇ ನೆಲೆಸಿವೆ · ಅವನಲ್ಲಿಯೇ

ಒಂದಾಗುತ್ತವೆ· ಕಾರಣ ಎಲ್ಲರೂ, ಎಲ್ಲವೂ ಪ್ರಾಣವಶರೇ ಪ್ರಾಣವಶವೇ· ಪ್ರಾಣವಿರದೇ ತೃಣವೂ ಇರಲಾರದು· ಆದ್ದರಿಂದ ಎಲ್ಲವೂ ಮುಖ್ಯಪ್ರಾಣನಿಗೆ ಅಧೀನವಾಗಿದೆ·

## ಮಂತ್ರ - ೭

प्रजापतिश्चरसि गर्भे त्वमेव प्रतिजायसे ।
तुभ्यं प्राण ! प्रजास्त्विमाः (बलिं हरन्ति) यः
प्राणैः प्रतितिष्ठसि ॥ ७ ॥

ಪ್ರಜಾಪತಿಶ್ಚರಸಿ ಗರ್ಭೇ ತ್ವಮೇವ ಪ್ರತಿಜಾಯಸೇ ।
ತುಭ್ಯಂ ಪ್ರಾಣ! ಪ್ರಜಾಸ್ತ್ವಿಮಾಃ (ಬಲಿಂ ಹರಂತಿ) ಯಃ
ಪ್ರಾಣೈಃ ಪ್ರತಿತಿಷ್ಠಸಿ ॥

### ಪ್ರತಿಪದಾರ್ಥ

**(ಹೇ) ಪ್ರಾಣ!** - ಪ್ರಾಣನೇ! **ತ್ವಮೇವ ಪ್ರಜಾಪತಿಃ** - ನೀನೇ ಪ್ರಜಾರಕ್ಷಕನಾಗಿ, **ಗರ್ಭೇ**- (ಪ್ರಾಣಾಪಾನಾದಿ ರೂಪದಿಂದ) ಶರೀರದೊಳಗೆ, **ಚರಸಿ** - ಚಲಿಸುತ್ತೀಯೇ? **ಗರ್ಭೇ** - ಗರ್ಭದಲ್ಲಿ **ಪ್ರತಿಜಾಯಸೇ** - (ತಂದೆಯ ರೂಪದಲ್ಲಿ ರಕ್ಷಕನಾಗಿದ್ದು) ಪುತ್ರರೂಪದಿಂದ ಹುಟ್ಟುತ್ತೀಯೆ· **ಯಃ** - ಯಾವ ನೀನು, **ಪ್ರಾಣೈಃ** - ಎಲ್ಲ ಪ್ರಾಣಿಗಳೊಡನೆ, **ಪ್ರತಿತಿಷ್ಠಸಿ** - ಪೋಷಕನಾಗಿರುವೆಯೋ, **ತುಭ್ಯಮ್** - ಅಂತಹ ನಿನಗೆ, **ಇಮಾಃ ಪ್ರಜಾಃ** - ಈ ಚರ-ಸ್ಥಿರ ಪ್ರಜೆಗಳೆಲ್ಲರೂ, **ಬಲಿಂ ಹರಂತಿ**- ಅನ್ನವನ್ನು (ಬಲಿಯನ್ನು) ಅರ್ಪಿಸುತ್ತಾರೆ· (ಪೂಜೆ ಮಾಡುತ್ತಾರೆ)·

### ತಾತ್ಪರ್ಯ

ಮುಖ್ಯಪ್ರಾಣನೇ! ನೀನೇ ಎಲ್ಲ ಪ್ರಜೆಗಳ ಪಾಲಕನು· ತಂದೆಯಂತೆ ನೀನು ಅವರನ್ನು ಪೋಷಿಸುತ್ತೀಯೆ · ಮಕ್ಕಳರೂಪದಲ್ಲಿ ಗರ್ಭವಾಸವನ್ನೂ ಮಾಡುತ್ತೀಯೆ · ಎಲ್ಲ ಪ್ರಾಣಗಳ ಪೋಷಕನಾಗಿ ಪ್ರಾಣಾಪಾನಾದಿ ರೂಪದಲ್ಲಿ ಚಲಿಸುತ್ತೀಯೆ· ಆದ್ದರಿಂದ ನಿನ್ನಿಂದ ಪಾಲಿಸಲಾದ ಪ್ರಜೆಗಳೆಲ್ಲರೂ ನಿನಗೆ ಬಲಿಯನ್ನು ಅರ್ಪಿಸುತ್ತಾರೆ·

### ರಂಗರಾಮಾನುಜಭಾಷ್ಯ

ಏವಂ **ಏಷ** ಇತ್ಯಂಗುಲ್ಯಾ ನಿರ್ದಿಶ್ಯ ಪರಸ್ಪರಂ ದರ್ಶಯಿತ್ವಾ ತದ್ಗುಣಾನ್ ಸಂಕೀರ್ತ್ಯ

ಪಶ್ಚಾತ್ತಮೇವ ಮುಖ್ಯಪ್ರಾಣಮಭಿಮುಖೀಕೃತ್ಯ ಸ್ತುವಂತಿ - **ಪ್ರಜಾಪತಿಶ್ಚರಸೀತಿ** । ತ್ವಂ ಪ್ರಜಾನಾಂ ರಕ್ಷಕಸ್ಸನ್ ಪ್ರಾಣಾದಿ ವಾಯುರೂಪೇಣ ಗರ್ಭೇ ಸಂಚರಸಿ । ತಥಾ ಗರ್ಭೋತ್ಪಾದಕ-ತಯಾ ತತ್ಪೋಷಕತಯಾ ಚ ಪಿತೃರೂಪ ಏವ ವರ್ತಮಾನ ಏವ ತ್ವಮುತ್ಪಾದಕತ್ವ-ಪ್ರಾತಿಲೋಮ್ಯೇನ ಪುತ್ರಾದಿರೂಪೇಣ ಜಾಯಸೇ । ಹೇ ಪ್ರಾಣ! ಸ್ಥಾವರಜಂಗಮಾತ್ಮಿಕಾ **ಇಮಾಃ ಪ್ರಜಾಃ ತುಭ್ಯಂ** ತ್ವದರ್ಥಾಃ ತ್ವಚ್ಛೇಷಭೂತಾಃ । (ಯತೋ ಬಲಿಮನ್ನಾದಿಕಂ ತೇ ಉಪಹರಂತಿ) ಯಸ್ತ್ವಂ ಪ್ರಾಣನಾದಿವ್ಯಾಪಾರೈಃ ಸರ್ವತ್ರ ಪ್ರಾಣಿಷು ಪ್ರತಿಷ್ಠಿತೋಽಸೀತ್ಯರ್ಥಃ ॥

## ಅನುವಾದ

ಹೀಗೆ 'ಇವನು' ಎಂದು ಬೆರಳಿಟ್ಟು ತಮ್ಮ ತಮ್ಮಲ್ಲಿ ತೋರಿಸಿಕೊಂಡು, ಅವನ ಗುಣಗಳನ್ನು ಎತ್ತಿ ಹೇಳಿ ಆಮೇಲೆ ಆ ಮುಖ್ಯಪ್ರಾಣನನ್ನೇ ಸಂಬೋಧಿಸಿ ಸ್ತುತಿ ಮಾಡುತ್ತಾರೆ. - **ಪ್ರಜಾಪತಿಶ್ಚರಸಿ** - **ಇತಿ** । ನೀನು ಪ್ರಜೆಗಳನ್ನು ಕಾಪಾಡುತ್ತ ಪ್ರಾಣಾದಿ ವಾಯುವಿನ ರೂಪದಿಂದ ಗರ್ಭದಲ್ಲಿ ಸಂಚರಿಸು-ತ್ತೀಯೆ. ಹಾಗೆ ಬಸಿರನ್ನು ಉಂಟು ಮಾಡುವುದರಿಂದಲೂ, ಅದನ್ನು ಪೋಷಿಸುವುದರಿಂದಲೂ ತಂದೆಯ ರೂಪದಲ್ಲಿಯೇ ಇರುವನೇ. ಆದರೂ ನೀನು ಹುಟ್ಟಿಗೆ ಬಂಧಿತ-ನಾದುದರಿಂದ ಮಗನಾಗಿ ಹುಟ್ಟುತ್ತೀಯೇ! **ತುಭ್ಯಂ ಪ್ರಾಣ! ಇತಿ** । ಪ್ರಾಣವೇ! ಚರ-ಸ್ಥಿರ ಪ್ರಜೆಗಳು **ತುಭ್ಯಮ್** - ನಿನಗಾಗಿ, ನಿನಗೆ ಶರಣರು. (ಏಕೆಂದರೆ ಅವರು ಅನ್ನಾದಿ ಬಲಿಯನ್ನು ಅರ್ಪಿಸುತ್ತಾರೆ). ಎಲ್ಲ ಪ್ರಾಣಿಗಳಲ್ಲಿಯೂ ಉಸಿರಾಟ ಮೊದಲಾದ ಕ್ರಿಯೆಗಳ ಮೂಲಕ ನೀನು ನೆಲೆಸಿದ್ದೀಯೆ ಎಂದು ಅರ್ಥ.

## ಭಾಷ್ಯಸಾರ

ಈ ತನಕ ಆಕಾಶ ಮುಂತಾದ ಪ್ರಾಣಗಳು ಮುಖ್ಯಪ್ರಾಣನ ಗುಣಗಳನ್ನು ಗುಣಿಸುತ್ತ ಅವನನ್ನು ಕೊಂಡಾಡಿದವು. ಆದರೆ ಇಷ್ಟರಿಂದ ಅವಕ್ಕೆ ತೃಪ್ತಿಯಿಲ್ಲ. ಪರಸ್ಪರ ಬೆರಳಿಟ್ಟು ಇವನು ಹೀಗೆ - ಹಾಗೆ ಎಂದ ಮಾತ್ರಕ್ಕೆ ಅವರ ಭಾವಸ್ಫೂರ್ತಿ ಹೇಗೆ ಕಡಿಮೆಯಾದೀತು? ಎಲ್ಲವೂ ಸೇರಿ ಮುಖ್ಯ-ಪ್ರಾಣನನ್ನೇ ಅಭಿಮುಖ ಮಾಡಿವೆ. ಅವನ ಸಮ್ಮುಖದಲ್ಲಿಯೇ ಅವನನ್ನು ಸ್ತುತಿಸತೊಡಗಿವೆ.

ಹೇ, ಮುಖ್ಯಪ್ರಾಣನೇ! ನೀನು ಪ್ರಜಾಪತಿಯು, ಚತುರ್ಮುಖನು. ಪ್ರಾಣಾಪಾನಾದಿ ರೂಪದಲ್ಲಿ ಪ್ರಜೆಗಳ ಗರ್ಭವನ್ನು ಸೇರುತ್ತೀಯೆ. ಅಲ್ಲಿದ್ದು ಅದನ್ನು ಸಲಹುತ್ತೀಯೆ. ಆದ್ದರಿಂದ ನೀನು ಪ್ರಜಾ-ಸಮೂಹಕ್ಕೆ [೧]ತಂದೆಯೂ, ತಾಯಿಯೂ ಆದವನು. ಅದರೊಂದಿಗೆ ತಂದೆ-ತಾಯಿಯರಿಗೆ ಅನುರೂಪದ ಮಗನೂ ಹೌದು. ನಿನ್ನ ಈ ಮರಳಿಸಲಾರದ ಅನುಗ್ರಹಕ್ಕಾಗಿ ಜಗತ್ತಿನ ಪ್ರಜೆಗಳೆಲ್ಲರೂ ಕೃತಜ್ಞರಾಗಿದ್ದಾರೆ. ಅವರು ನಿನಗೆ ಅರ್ಪಿಸುವ ನಿತ್ಯ [೨]ಬಲಿಯೇ ಇದಕ್ಕೆ ಸಮರ್ಥ ಸಾಕ್ಷಿ.

---

೧. ಗರ್ಭೋತ್ಪಾದಕತಯಾ ಪಿತೃರೂಪಸ್ತ್ವಮ್ ಗರ್ಭಪೋಷಕತಯಾ ಮಾತೃಸ್ವರೂಪಶ್ಚ ತ್ವಂ ಯದ್ಯಪಿ ವರ್ತಸ ಏವ ತಥಾಪಿ ಪಿತೃಮಾತ್ರನುರೂಪೇಣ ಪುತ್ರರೂಪೇಣಾಪಿ ತ್ವಮೇವ ಭವಸಿ - ಆನಂದಭಾಷ್ಯ.

೨. ಬಲಿ - ಆಹುತಿ - ಉಪಹಾರ.

## ಮಂತ್ರ - ೮

देवानामसि वह्नितमः पितॄणां प्रथमा स्वधा ।
ऋषीणां चरितं सत्यमथर्वाङ्गिरसामसि ॥ 8 ॥

ದೇವಾನಾಮಸಿ ವಹ್ನಿತಮಃ ಪಿತೃಣಾಂ ಪ್ರಥಮಾ ಸ್ವಧಾ ।
ಋಷೀಣಾಂ ಚರಿತಂ ಸತ್ಯಮಥರ್ವಾಂಗಿರಸಾಮಸಿ ॥

### ಪ್ರತಿಪದಾರ್ಥ

(**ಪ್ರಾಣಃ** - ಹೇ ಪ್ರಾಣವೇ!), **ದೇವಾನಾಮ್** - ಬ್ರಹ್ಮಾದಿದೇವತೆಗಳಿಗೆ, **ವಹ್ನಿತಮಃ ಅಸಿ**- ಹವಿಸ್ಸನ್ನು ಒಯ್ಯುವವನು ಆಗಿದ್ದೀಯೆ· **ಅಪಿ** - ಅಷ್ಟಲ್ಲದೇ, **ಪಿತೃಣಾಂ** - ಪಿತೃಗಳಿಗೆ, **ಪ್ರಥಮಾ ಸ್ವಧಾ** - ಮುಖ್ಯವಾದ 'ಸ್ವಧಾ' ಎಂದು ಅರ್ಪಿಸುವ ಕವ್ಯವನ್ನು ಒಯ್ಯುವನು ಆಗಿದ್ದೀಯೇ, **ಅಥರ್ವಾಂಗಿರಸಾಮ್** - ಅಥರ್ವಾಂಗಿರಸನೇ ಮೊದಲಾದ, **ಋಷೀಣಾಂ** - ಋಷಿಗಳ, **ಸತ್ಯಂ ಚರಿತಮ್** - ಶ್ರೇಷ್ಠಚರಿತ್ರೆಯೂ, (ನಿತ್ಯ-ನೈಮಿತ್ತಿಕವಾದ ದೈನಂದಿನ ಜೀವನವೂ) ನಿನ್ನದೇ ಆಗಿದೆ·

### ತಾತ್ಪರ್ಯ

ಹೇ ಪ್ರಾಣನೇ! ಬ್ರಹ್ಮಾದಿ ದೇವತೆಗಳಿಗೆ ಹವಿಸ್ಸನ್ನು ತಲುಪಿಸುವವನು ನೀನು· ನೀನೇ ಪಿತೃಗಳಿಗೆ ಕವ್ಯವನ್ನು ಕಳುಹಿಸುತ್ತೀಯೆ· ಅಥರ್ವಾಂಗಿರಸ ಮುಂತಾದ ಋಷಿಗಳ ದೈನಂದಿನ ನಡವಳಿಕೆಯು ನಿನಗೆ ಸೇರಿದೆ·

### ರಂಗರಾಮಾನುಜಭಾಷ್ಯ

**ದೇವಾನಾಮಸೀತಿ** । **ವಹ್ನಿತಮಃ** - ಹವಿಷಾಂ ವಾಹಕತಮಃ । **ಪಿತೃಣಾಮಿತಿ**- ಮುಖ್ಯಃ ಪಿತೃಪ್ರೀತಿಹೇತುಭೂತಸ್ತ್ವಮೇವೇತ್ಯರ್ಥಃ । **ಋಷೀಣಾಂ ಚರಿತಮಿತಿ** । ಅಥರ್ವಾಂಗಿರಸಾಮೃಷೀಣಾಂ ಸತ್ಯಮುತ್ಕೃಷ್ಟಂ ಚರಿತಂ ನಿತ್ಯನೈಮಿತ್ತಿಕಾದಿಲಕ್ಷಣಂ ಕರ್ಮ ತ್ವಮಸೀತ್ಯರ್ಥಃ ॥

### ಅನುವಾದ

**ದೇವಾನಾಮಸಿ ವಹ್ನಿತಮಃ** - (ದೇವತೆಗಳಿಗೆ ಹವಿಸ್ಸನ್ನು ಒಯ್ಯುವವನಾಗಿದ್ದೀಯೆ) **ವಹ್ನಿತಮಃ** - ಹವಿರ್ವಾಹಕದಲ್ಲಿ ಉತ್ತಮನು, **ಪಿತೃಣಾಂ ಪ್ರಥಮಾ ಸ್ವಧಾ** - ಪಿತೃಗಳಿಗೆ ಮುಖ್ಯ

ಸ್ವಧಾಕಾರನಾಗಿರುವವನು ಆಗಿದ್ದೀಯೇ· ನೀನೇ! ಪಿತೃಗಳ ಪ್ರೀತಿಗೆ ಕಾರಣನೂ ಮುಖ್ಯನೂ ಆಗಿದ್ದೀಯೇ **ಋಷೀಣಾಂ ಇತಿ** । ಅಥರ್ವಾಂಗಿರಸ ಋಷಿಗಳ **ಸತ್ಯಮ್** - (ನಿಜವಾದ) ಉತ್ಕೃಷ್ಟವಾದ **ಚರಿತಮ್** - ನಿತ್ಯ-ನೈಮಿತ್ತಿಕಕಾರ್ಯಗಳು ನೀನಾಗಿದ್ದೀಯೆ ಎಂದು ಭಾವ·

## ಭಾಷ್ಯಸಾರ

ಹೇ ಪ್ರಾಣನೇ! ದೇವತೆಗಳಿಗೆ ಹವಿಸ್ಸನ್ನೂ, ಪಿತೃಗಳಿಗೆ ಕವ್ಯವನ್ನೂ ಅರ್ಪಿಸುವುದು ಅಧಿಕಾರಿಯಾದ ಮಾನವನ ಕರ್ತವ್ಯ· ಈ ಕರ್ತವ್ಯಗಳನ್ನು ನಿತ್ಯ-ನೈಮಿತ್ತಿಕವಾಗಿ ವೇದವೇ ವಿಧಿಸುತ್ತದೆ· ಇಂದ್ರಾದಿ ದೇವತೆಗಳಿಗೆ ಹವಿರ್ಭಾಗವನ್ನು ತಲುಪಿಸಿ, ದೇವಯಜ್ಞವನ್ನು ಸಾಂಗವಾಗಿ ನೆರವೇರಿಸುವ ಮಾಧ್ಯಮ ನೀನು· ಪಿತೃಗಳಿಗೆ ಕವ್ಯವನ್ನು ಕೊಡಿಸುವವನೂ ನೀನೆ· 'ಸ್ವಾಹಾ' ಶಬ್ದದಿಂದ ದೇವತೆಗಳು ಹವಿಸ್ಸನ್ನು ಪಡೆಯುತ್ತಾರೆ· ಪಿತೃಗಳಿಗೆ ಪಿಂಡಪ್ರಧಾನ ಮಾಡುವಾಗ 'ಸ್ವಧಾ' ಎಂದು ಘೋಷಿಸಬೇಕು ದೇವಯಾಗ-ಕ್ಕಿಂತಲೂ ಮೊದಲು ಪಿತೃಗಳಿಗೆ ನಾಂದಿಶ್ರಾದ್ಧ ಮಾಡುವುದು ಶಾಸ್ತ್ರವಿಹಿತವಾದ ಮಾರ್ಗವಾಗಿದೆ ಆದ್ದರಿಂದ ಸ್ವಾಹಾಕಾರಕ್ಕಿಂತಲೂ ಸ್ವಧಾಕಾರಕ್ಕೆ ಆದ್ಯತೆಯನ್ನು ಒಪ್ಪಿಕೊಂಡಂತಾಯಿತು · ಪ್ರಾಣನೇ! ನೀನು ಅಥರ್ವಾಂಗಿರಸ ಮೊದಲಾದ ಮಹರ್ಷಿಗಳ ಸದಾಚಾರ ಸ್ವರೂಪನೂ ಆಗಿದ್ದೀಯೆ ಮಹರ್ಷಿಗಳ ಜೀವನ ಪರಮಪಾವನ· ಅವರ ಚರಿತ್ರೆ ನಿತ್ಯವೂ ಪವಿತ್ರವೂ ಹೌದು· ಅದೆಲ್ಲವೂ ನೀನೆ·

## ಮಂತ್ರ - ೯

इन्द्रस्त्वं प्राण ! तेजसा रुद्रोऽसि परिरक्षिता ।
त्वमन्तरिक्षे चरसि सूर्यस्त्वं ज्योतिषां पतिः ।। 9 ।।

ಇಂದ್ರಸ್ತ್ವಂ ಪ್ರಾಣ! ತೇಜಸಾ ರುದ್ರೋऽಸಿ ಪರಿರಕ್ಷಿತಾ ।
ತ್ವಮಂತರಿಕ್ಷೇ ಚರಸಿ ಸೂರ್ಯಸ್ತ್ವಂ ಜ್ಯೋತಿಷಾಂ ಪತಿಃ ॥

## ಪ್ರತಿಪದಾರ್ಥ

**ಪ್ರಾಣ!** - ಹೇ ಪ್ರಾಣನೇ! **ತ್ವಂ** - ನೀನು, **ಇಂದ್ರಃ** - ಪರಮೈಶ್ವರ್ಯವುಳ್ಳವನು, **ತೇಜಸಾ**- (ಎಲ್ಲವನ್ನೂ ಸಂಹರಿಸುವ) ಶಕ್ತಿಯಿರುವುದರಿಂದ, **ರುದ್ರಃ ಅಸಿ** - ರುದ್ರನಾಗಿದ್ದೀಯೆ · **ಪರಿರಕ್ಷಿತಾ**- (ಎಲ್ಲಲೋಕಗಳನ್ನು) ಕಾಪಾಡುವವನಾಗಿದ್ದೀಯೆ · **ಜ್ಯೋತಿಷಾಂ ಪತಿಃ ಸೂರ್ಯಃ** - ಜ್ಯೋತಿಗಳಲ್ಲಿ ಶ್ರೇಷ್ಠನಾದ ಸೂರ್ಯನಾಗಿದ್ದು, **ಅಂತರಿಕ್ಷೇ** - ಆಕಾಶದಲ್ಲಿ, **ಚರಸಿ** - ಚಲಿಸುತ್ತೀಯೆ·

## ತಾತ್ಪರ್ಯ

ಹೇ ಪ್ರಾಣನೇ! ನೀನು ಪರಮೈಶ್ವರ್ಯ ಹೊಂದಿದ ಇಂದ್ರನು · ಎಲ್ಲವನ್ನು ಸಂಹರಿಸುವ ರುದ್ರನೂ ನೀನೇ · ನೀನು ಎಲ್ಲರನ್ನು ಕಾಪಾಡುತ್ತೀಯೆ · ನೀನು ಆಕಾಶದಲ್ಲಿ ಇರುವ ಗ್ರಹ-ನಕ್ಷತ್ರಗಳಿಗೆ ಒಡೆಯನಾದ ಸೂರ್ಯನೇ ಆಗಿದ್ದು ಅಲ್ಲಿ ಸಂಚರಿಸುತ್ತೀಯೆ·

## ರಂಗರಾಮಾನುಜಭಾಷ್ಯ

**ಇಂದ್ರಸ್ತ್ವಮಿತಿ** । ಹೇ ಪ್ರಾಣ! ತ್ವಮಿಂದ್ರಃ ಪರಮೇಶ್ವರ ಇತ್ಯರ್ಥಃ । 'ಇದಿ ಪರಮೈಶ್ವರ್ಯೆ' ಇತಿಃ ಧಾತುಃ । **ತೇಜಸಾ** ಸರ್ವಸಂಹರಣಸಾಮರ್ಥ್ಯಲಕ್ಷಣೇನ ತೇಜಸಾ ತ್ವಂ **ರುದ್ರಃ** ರೋದನಹೇತುಃ । ಸ್ಥಿತಿಕಾಲೇ ಪರಿರಕ್ಷಕಶ್ಚೇತ್ಯರ್ಥಃ । **ತ್ವಮಂತರಿಕ್ಷೇ ಇತಿ** । **ಜ್ಯೋತಿಷಾಂ** - ಪ್ರಕಾಶಕಾನಾಂ **ಪತಿಃ** - ಶ್ರೇಷ್ಠಃ ಸೂರ್ಯೋಽಭೂತ್ವಾಽಂತರಿಕ್ಷೇ ಚರಸಿ ॥

## ಅನುವಾದ

**ಇಂದ್ರಸ್ತ್ವಂ ಇತಿ** । ಪ್ರಾಣನೇ! ನೀನು ಇಂದ್ರ · ಪರಮೇಶ್ವರ ಎಂದರ್ಥ · 'ಇದಿ' ಎಂಬ ಧಾತು ಪರಮೈಶ್ವರ್ಯ ಎಂಬರ್ಥದಲ್ಲಿ ಇದೆಯಷ್ಟೇ! **ತೇಜಸಾ** - ಎಲ್ಲವನ್ನೂ ಸಂಹರಿಸುವ ಸಾಮರ್ಥ್ಯದಿಂದ ನೀನು ರುದ್ರ, ರೋದನ ಕಾರಣನಾಗಿದ್ದೀಯೆ · ಸ್ಥಿತಿಕಾಲದಲ್ಲಿ ಕಾಪಾಡುವವನೂ ಆಗಿದ್ದೀಯೆ · **ತ್ವಮಂತರಿಕ್ಷೇ ಇತಿ** । **ಜ್ಯೋತಿಷಾಂ** - ಬೆಳಗುವವರಲ್ಲಿ, **ಪತಿಃ** - ಶ್ರೇಷ್ಠನಾದ ಸೂರ್ಯನಾಗಿ ಅಂತರಿಕ್ಷದಲ್ಲಿ ಚಲಿಸುತ್ತೀಯೆ·

## ಭಾಷ್ಯಸಾರ

ಹೇ ಪ್ರಾಣನೇ! ನಿನ್ನಲ್ಲಿ ಅಪರಿಮಿತವಾದ ಐಶ್ವರ್ಯವಿದೆ· ಹಾಗಾಗಿ ನೀನು ಸಾಕ್ಷಾತ್ ಪರಮೇಶ್ವರನು ಸರ್ವ ವಸ್ತುಗಳನ್ನು ಉಪಸಂಹರಿಸುವ ಸಮರ್ಥ ನೀನು · ಆದ್ದರಿಂದ ಲೋಕ-ವನ್ನು ಅಳಿಸುವ ರುದ್ರ-ನಾಗಿದ್ದೀಯೆ · ಪ್ರಪಂಚವನ್ನು ಆಳುವ ಪ್ರಭುವೂ ನೀನೇ · ಬೆಳಗುವ ಎಲ್ಲ ಜ್ಯೋತಿರ್ವಸ್ತುಗಳಿಗೂ ಅಧಿಪತಿಯಾದ ಸೂರ್ಯನೂ ಆಗಿ ಆಕಾಶದಲ್ಲಿ ಸಂಚರಿಸುತ್ತೀಯೆ · ಈ ಎಲ್ಲ ಕಾರಣಗಳಿಂದ ನಿನ್ನನ್ನು ಇಂದ್ರ, ಸೂರ್ಯ, ರುದ್ರ, ವಿಷ್ಣು ಮುಂತಾದ ಶಬ್ದಗಳಿಂದ ಕರೆಯಬಹುದು · ಆದ್ದರಿಂದ ನೀನು ಸರ್ವಶಬ್ದವಾಚ್ಯನಾಗಿದ್ದೀಯೆ·

## ಮಂತ್ರ - ೧೦

यदा त्वमभिवर्षस्यथेमाः प्राण ! ते प्रजाः ।
आनन्दरूपास्तिष्ठन्ति कामायान्नं भविष्यतीति ।। 10 ।।

ಯದಾ ತ್ವಮಭಿವರ್ಷಸ್ಯಥೇಮಾಃ ೧ಪ್ರಾಣ! ತೇ ಪ್ರಜಾಃ ।
ಆನಂದರೂಪಾಸ್ತಿಷ್ಠಂತಿ ಕಾಮಾಯಾನ್ನಂ ಭವಿಷ್ಯತೀತಿ ॥

### ಪ್ರತಿಪದಾರ್ಥ

**ಯದಾ** - ಯಾವಾಗ, **ತ್ವಮ್** - ನೀನು, **ಅಭಿವರ್ಷಸಿ** - (ಪರ್ಜನ್ಯರೂಪದಲ್ಲಿ) ಮಳೆಯನ್ನು ಸುರಿಸುತ್ತೀಯೋ, **ಅಥ** - ಅನಂತರ, **ಇಮಾಃ ಪ್ರಜಾಃ** - ಈ ಎಲ್ಲ ಪ್ರಜೆಗಳೂ, **ಪ್ರಾಣತೇ**- ಜೀವಿಸುತ್ತಾರೆ · **ಕಾಮಾಯ** - ಇಷ್ಟವಾದವುಗಳನ್ನು ಪಡೆಯಲು ಅನುಕೂಲವಾದ, **ಅನ್ನಮ್**- ಅನ್ನವು, **ಭವಿಷ್ಯತಿ ಇತಿ** - ಉಂಟಾಗುವುದು ಎಂದು, **ಆನಂದರೂಪಾಃ ತಿಷ್ಠಂತಿ** - ಆನಂದದಿಂದ ಕೂಡಿದವರಾಗುತ್ತಾರೆ·

### ತಾತ್ಪರ್ಯ

ಹೇ ಪ್ರಾಣನೇ! ನೀನು ಮಳೆ ಸುರಿಸಿದಾಗಲೇ ಪ್ರಜೆಗಳು ತಮ್ಮ ಇರುವಿಕೆವನ್ನು ಪಡೆಯುತ್ತಾರೆ (ಜೀವಿಸುತ್ತಾರೆ) · ಮಳೆಸುರಿದಾಗ ತಮ್ಮ ಇಷ್ಟವಾದ ಅನ್ನವು ಸಮೃದ್ಧವಾಗುವುದೆಂದು ಹರ್ಷಿಸುತ್ತಾರೆ

### ರಂಗರಾಮಾನುಜಭಾಷ್ಯ

**ಯದಾ ತ್ವಮಭಿವರ್ಷಸೀತಿ** । ಹೇ ಪ್ರಾಣ! ತ್ವಂ ಯದಾ ಮೇಘರೂಪೀ ಅಭಿತೋ ವರ್ಷಸಿ, ತದಾ ತೇ ತ್ವದೀಯಾಃ ಇಮಾಃ ಪ್ರಜಾಃ ಆನನ್ದಿನ್ಯೋ ಭವಂತಿ । ಕಸ್ಯ ಹೇತೋಃ? ಕಾಮಾಯ - ಅಭಿಲಷಿತಾರ್ಥಾಯ ಪರ್ಯಾಪ್ತಮನ್ನಂ ಭವಿಷ್ಯತೀತಿ । "ತದ್ಯದಾಸುವೃಷ್ಟಿರ್ಭವತಿ, ಆನಂದಿನಃ ಪ್ರಜಾಭವನ್ತ್ಯನ್ನಂ ಬಹು ಭವಿಷ್ಯತೀತಿ" ಇತಿ ಛಾಂದೋಗ್ಯೇ ಶ್ರವಣಾದಿತಿ ದ್ರಷ್ಟವ್ಯಮ್॥

### ಅನುವಾದ

**ಯದಾ ತ್ವಮಭಿವರ್ಷಸ್ಯ ಇತಿ** । ಹೇ ಪ್ರಾಣ! ಯಾವಾಗ ನೀನು ಮೋಡಗಳ ರೂಪದಲ್ಲಿ ಪಸರಿಸಿ ಮಳೆಗರೆಯುತ್ತೀಯೋ ಆಗ ನಿನ್ನವರಾದ ಪ್ರಜೆಗಳು ಹರ್ಷಿಸುತ್ತಾರೆ · ಏಕೆ? ಕಾಮಾಯ-

---

೧· ಪ್ರತಿಪದಾರ್ಥದೀಪಿಕೆಯಲ್ಲಿ 'ಪ್ರಾಣತೇ' ಎಂದು ಒಂದೇ ಪದವಾಗಿ ಸ್ವೀಕರಿಸಿ ಕ್ರಿಯಾಪದದಂತೆ ವ್ಯಾಖ್ಯಾನ ಮಾಡಲಾಗಿದೆ·

ಬಯಸಿದ ಸುಖಗಳಿಗಾಗಿ ಸಾಕಷ್ಟು ಅನ್ನವು (ಆಹಾರ) ಉಂಟಾಗುವುದೆಂದು · 'ತತ್ ಯದಾ ಸುವೃಷ್ಟಿರ್ಭವತಿ' ಇತಿ । 'ಯಾವಾಗ ಪುಷ್ಕಲವಾಗಿ ಮಳೆ ಬೀಳುವುದೋ ಆಗ ಆಹಾರವು ಹೆಚ್ಚುವುದೆಂದು, ಆದರಿಂದ ಪ್ರಾಣಗಳು ಆನಂದ ಪಡೆಯುತ್ತವೆ' ಎಂದು ಛಾಂದೋಗ್ಯೋಪನಿಷತ್ತಿನಲ್ಲಿಯೂ ಮಾತಿದೆಯೆಂದು ತಿಳಿಯಬೇಕು·

## ಭಾಷ್ಯಸಾರ

ಮಳೆಯು ಪುಷ್ಕಳವಾಗಿ ಬಿದ್ದರೇ ಸಸ್ಯಗಳು ಹುಲುಸಾಗಿ ಬೆಳೆಯುತ್ತವೆ· ಒಳ್ಳೆಯ ಬೆಳೆಯೂ ಬರುತ್ತದೆ· ಆದ್ದರಿಂದ ಮಳೆಯಂತೆ ಬೆಳೆ ಎಂಬುದು ಸರ್ವಸಮ್ಮತವಾದ ಮಾತು· ಉತ್ತಮ ಬೆಳೆ ಕೈಸೇರಿದಾಗ ಜನರು ಸಂತಸಪಡುತ್ತಾರೆ· ವರ್ಷವಿಡೀ ಉಣಲಿಕ್ಕೆ ಆಹಾರ ದೊರೆತಾಗ ಅವರಿಗೆ ಪ್ರಾಣನೇ ಸ್ತುತ್ಯರ್ಹನು·

## ಮಂತ್ರ - ೧೧

व्रात्यस्त्वं प्राणैक (प्राण एक) ऋषिरत्ता विश्वस्य सत्पतिः ।
वयमाद्यस्य दातारः पिता त्वं मातरिश्व नः ।। ११ ।।

ವ್ರಾತ್ಯಸ್ತ್ವಂ ಪ್ರಾಣೈಕ (ಪ್ರಾಣ ಏಕ) ಋಷಿರತ್ತಾವಿಶ್ವಸ್ಯ ಸತ್ಪತಿಃ ।
ವಯಮಾದ್ಯಸ್ಯ ದಾತಾರಃ ಪಿತಾ ತ್ವಂ ಮಾತರಿಶ್ವ ನಃ ॥

## ಪ್ರತಿಪದಾರ್ಥ

ಪ್ರಾಣಃ - ಎಲೈ ಪ್ರಾಣನೇ! ತ್ವಮ್ - ನೀನು, ವ್ರಾತ್ಯಃ - ಸಂಸ್ಕಾರಹೀನ ಬ್ರಾಹ್ಮಣನು ಆಗಿದ್ದೀಯೆ. ಏಕಃ - ಮುಖ್ಯನಾದ ಋಷಿಃ ಅಸಿ - ಮಂತ್ರದ್ರಷ್ಟಾರಕನಾಗಿದ್ದೀಯೆ· ಅತ್ತಾ - ಸರ್ವ ಭಕ್ಷಕನೂ, ವಿಶ್ವಸ್ಯಪತಿಃ - ಜಗತ್ಪಾಲಕನೂ ಆಗಿದ್ದೀಯೆ· ಆದ್ಯಸ್ಯ - ಅನುಭವಿಸಲು ಯೋಗ್ಯವಾಗಿರುವುದನ್ನು, ದಾತಾರಃ - ಕರಕೊಡುವ, ವಯಮ್ - ನಾವು ನಿನ್ನ ಶೇಷಭೂತರು · ಮಾತರಿಶ್ವ - ಎಲೈ ವಾಯುವೇ ತ್ವಮ್ - ನೀನು, ನಃ - ನಮ್ಮ ಪಿತಾ - ತಂದೆಯು (ಪಾಲಕನು).

## ತಾತ್ಪರ್ಯ

ಹೇ ಪ್ರಾಣನೇ! ನೀನು ಸಂಸ್ಕಾರವಿಲ್ಲದ ಬ್ರಾಹ್ಮಣನೂ ಹೌದು; ಬ್ರಹ್ಮವಿದ್ಯೆಯನ್ನು ಬಲ್ಲ ಮಹರ್ಷಿಯೂ ಹೌದು· ನೀನು ಜಗದ್ಭಕ್ಷಕನು· ಹಾಗೆಂದೇ ಲೋಕಪಾಲಕನೂ ಆಗಿರುವ ನಿನಗೆ

ನಾವು ಶೇಷಭೂತರು· ನಮ್ಮೆಲ್ಲರ ಪಾಲಕನಾದ ನೀನು ನಮಗೆ ತಂದೆಯಾಗಿರುವೆ·

## ರಂಗರಾಮಾನುಜಭಾಷ್ಯ

**ವ್ರಾತ್ಯಸ್ತ್ವಂ ಪ್ರಾಣೈಕ ಇತಿ** । ಹೇ ಪ್ರಾಣ! ಸಂಸ್ಕಾರಹೀನೋ ಬ್ರಾಹ್ಮಣೋಽಪಿ ತ್ವಮೇವ। ಮುಖ್ಯೋ ಮಂತ್ರದ್ರಷ್ಟಾ ಋಷಿರಪಿ ತ್ವಮೇವ । ವಿಶ್ವಸ್ಯ ಅತ್ತಾ ಸಂಹರ್ತಾ ಚ ತ್ವಮೇವ । **ಸತಾಂ** - ಸಾಧೂನಾಮ್ ರಕ್ಷಕೋಽಪಿ ತ್ವಮೇವ । **ವಯಮಾದ್ಯಸ್ಯ ಇತಿ** । ವಯಂ ತೇ ಅದ್ಯಸ್ಯ - ಅದನೀಯಸ್ಯ ಭೋಗ್ಯಸ್ಯ **ದಾತಾರಃ** - ಕರಪ್ರದಾಃ, ಕಿಂಕರಾ ಇತಿ ಯಾವತ್ । ಹೇ ಮಾತರಿಶ್ವನ್! ತ್ವಂ ನಃ ಪಿತಾಽಸಿ, ಪೋಷಕೋಽಸೀತ್ಯರ್ಥಃ । ಮಾತರಿಶ್ವ ನ ಇತ್ಯತ್ರ ನಕಾರದ್ವಿತ್ವಾ-ಶ್ರವಣಂ ಛಾಂದಸತ್ವಾದಿತಿ ದ್ರಷ್ಟವ್ಯಮ್ ॥

## ಅನುವಾದ

**ವ್ರಾತ್ಯಸ್ತ್ವಂ ಪ್ರಾಣೈಕ ಇತಿ** । ಹೇ ಪ್ರಾಣನೇ! ಸಂಸ್ಕಾರಗಳಿಲ್ಲದ ಬ್ರಾಹ್ಮಣನೂ ನೀನೇ· ಪ್ರಧಾನನೂ ಮಂತ್ರಸಾಕ್ಷಾತ್ಕಾರವನ್ನು ಮಾಡಿರುವವನೂ ಆದ ಮಹರ್ಷಿಯೂ ನೀನೇ · ಜಗತ್ತನ್ನು ಅತ್ತಾ-ಸಂಹರಿಸುವವನೂ ನೀನೇ · ಸಾಧುಗಳನ್ನು ಕಾಪಾಡುವವನೂ ನೀನೇ · **ವಯಮಾದ್ಯಸ್ಯ ಇತಿ** । ನಾವು ನಿನಗೆ **ಅದ್ಯಸ್ಯ** - ಭೋಗ್ಯವಾದ **ದಾತಾರಃ** - ಕಪ್ಪವನ್ನು ಕೊಡುವವರು, ಕಿಂಕರರು ಎಂದರ್ಥ ಎಲೈ ವಾಯುವೇ! ನೀನು ನಮ್ಮ ತಂದೆಯಾಗಿರುವೆ, ಪೋಷಕ ಎಂದು ಭಾವ 'ಮಾತರಿಶ್ವ ನಃ' ಎಂಬಲ್ಲಿ ಎರಡು 'ನ' ಕಾರಗಳು ಕೇಳದಿರುವುದು ವೈದಿಕವು·

## ಭಾಷ್ಯಸಾರ

ಹೇ ಪ್ರಾಣನೇ! ಪ್ರಪಂಚದ ಉಚ್ಚ-ನೀಚ ಪ್ರಾಣಿಗಳೆಲ್ಲ ನಿನಗೆ ಶರೀರಗಳು; ಶೇಷಭೂತವಾದವು · ಆದುದರಿಂದ ಅವು ನಿನಗಿಂತ ಬೇರೆಯಲ್ಲ · ನೀನು ಸಂಸ್ಕಾರಗಳಿಲ್ಲದ ವ್ರಾತ್ಯನು · ಶ್ರುತಿಯಲ್ಲಿ ವಿಧಿಸಿದ, ಕಾಲ-ಕಾಲಕ್ಕೆ ಮಾಡುವ ಸಂಸ್ಕಾರಕರ್ಮಗಳಿಲ್ಲದಿರುವ ಬ್ರಾಹ್ಮಣನು · [೧]ಹದಿನಾರುವರ್ಷಗಳ-ವರೆಗೆ ಸಾವಿತ್ರಿಯ ಉಪದೇಶ ಪಡೆಯದ ಬ್ರಾಹ್ಮಣನು ವ್ರಾತ್ಯನು· ಹೀಗೆ ಕಾಲಪ್ರಾಪ್ತ ಸಂಸ್ಕಾರವಿಲ್ಲದ ಕ್ಷತ್ರಿಯ-ವೈಶ್ಯರೂ ಈ ಕಕ್ಷೆಗೆ ಸೇರುತ್ತಾರೆ · ಹಾಗೆಂದು, ಪ್ರಾಣನೇ! ಅತೀಂದ್ರಿಯ ವಸ್ತುವನ್ನು ತಿಳಿಯಲು ಶಕ್ತನಾದ ಮಹರ್ಷಿಯೂ ನೀನಾಗಿದ್ದೀಯೆ · ಒಂದು ದೃಷ್ಟಿಯಿಂದ ವಿಶ್ವದ ಸಂಹಾರಕನು ನೀನೇ · ಸಾಧು-ಸಂತರ ಪೋಷಕನೂ ನೀನೇ · ನಾವೆಲ್ಲ ನಿನಗೆ ಕಿಂಕರರು · ಕರ ತಂದೊಪ್ಪಿಸುವ ಸೇವಕರು· ನೀನು ನಮ್ಮೆಲ್ಲರಿಗೂ ತಂದೆಯಾಗಿದ್ದೀಯೆ·

---

೧· ಆಷೋಡಶವರ್ಷಾತ್ ಸಾವಿತ್ರೀಗ್ರಹಣಂ ನ ಚೇತ್ ಸ್ಯಾತ್ತದಾ ಸ ಬ್ರಾಹ್ಮಣೋ ವ್ರಾತ್ಯ ಇತ್ಯುಚ್ಯತೇ, ತಥಾ ಕ್ಷತ್ರಿಯ-ವೈಶ್ಯಯೋರಪಿ ಸಾವಿತ್ರೀಗ್ರಹಣಕಾಲಾತಿಕ್ರಮೇ ವ್ರಾತ್ಯತಾ ಭವತೀತಿ ಧ್ಯೇಯಮ್ - ಆನಂದಭಾಷ್ಯ·

## ಮಂತ್ರ - ೧೨

या ते तनूर्वाचि प्रतिष्ठिता या श्रोत्रे या च चक्षुषि ।
या च मनसि संतता शिवां तां कुरु मोत्क्रमीः ।। 12 ।।

ಯಾ ತೇ ತನೂರ್ವಾಚಿ ಪ್ರತಿಷ್ಠಿತಾ ಯಾ ಶ್ರೋತ್ರೇ ಯಾ ಚ ಚಕ್ಷುಷಿ ।
ಯಾ ಚ ಮನಸಿ ಸಂತತಾ ಶಿವಾಂ ತಾಂ ಕುರು ಮೋತ್ಕ್ರಮೀಃ ॥

### ಪ್ರತಿಪದಾರ್ಥ

**ಯಾ** - ಯಾವ, **ತೇ ತನೂಃ** - ನಿನ್ನ (ಅಪಾನರೂಪ) ಶಕ್ತಿಯು, **ವಾಚಿ** - ವಾಕ್‌ನಲ್ಲಿ, **ಪ್ರತಿಷ್ಠಿತಾ** - ನೆಲೆಸಿರುವುದೋ, **ಯಾ** - ಯಾವುದು, **ಶ್ರೋತ್ರೇ ಚ** - ಕಿವಿಯಲ್ಲಿಯೂ ನೆಲೆಸಿವೆಯೋ, **ಯಾ ಚ** - ಯಾವ ಶಕ್ತಯು, **ಚಕ್ಷುಷಿ** - ಕಣ್ಣಿನಲ್ಲಿಯೂ, **ಯಾ ಚ** - ಯಾವ ಶಕ್ತಿಯು, **ಮನಸಿ** - ಮನಸ್ಸಿನಲ್ಲಿಯೂ, **ಪ್ರತಿಷ್ಠಿತಾ** - ನೆಲೆಸಿದೆಯೋ, **ತಾಮ್** - ಆ ಶಕ್ತಿಯನ್ನು, **ಶಿವಾಮ್** - ಶುಭಪ್ರದವನ್ನಾಗಿ, **ಕುರು**- ಮಾಡು, **ಮಾ ಉತ್ಕ್ರಮೀಃ** - (ನಮ್ಮನ್ನು) ಬಿಟ್ಟು ಹೋಗಬೇಡ·

### ತಾತ್ಪರ್ಯ

ಎಲೈ ಪ್ರಾಣನೇ! ನಿನ್ನ ಅಪಾನಾದಿಶಕ್ತಿಯು ಮಾತು, ಕಿವಿ, ಕಣ್ಣು, ಮನಸ್ಸುಗಳಲ್ಲಿ ನೆಲೆಗೊಂಡಿದೆ· ಆ ಶಕ್ತಿಯು ಆಯಾಯಾ ಇಂದ್ರಿಯಗಳ ವ್ಯಾಪಾರಗಳನ್ನು ಪ್ರೇರಿಸುವಂತೆ ಮಾಡು · ಅವುಗಳನ್ನು ಬಿಟ್ಟು ಬೇರೆಡೆ ಹೋಗಬೇಡ·

### ರಂಗರಾಮಾನುಜಭಾಷ್ಯ

ಯಾ ತೇ ತನೂರ್ವಾಚೀತಿ । ವಾಗಾದೀಂದ್ರಿಯೇಷು ತತ್ತದಿಂದ್ರಿಯನಿಯಮಾನುಕೂಲಾ ಯಾ ಶಕ್ತಿಃ ಸತತಂ ಪ್ರತಿಷ್ಠಿತಾ, ತಾಂ ಶಿವಾಂ ಶೋಭನಾಂ ಕುರು ಉತ್ಕ್ರಮಣೇನಾಶಿವಾಂ ಮಾ ಕುರು । ಉತ್ಕ್ರಮಣಂ ಮಾ ಕಾರ್ಷೀರಿತ್ಯರ್ಥಃ ॥

### ಅನುವಾದ

ಯಾ ತೇ ತನೂರ್ವಾಚೀತಿ । ಮಾತು ಮೊದಲಾದ ಇಂದ್ರಿಯಗಳಲ್ಲಿ ಆಯಾಯಾ ಇಂದ್ರಿಯಗಳ ನಿಯಮಕ್ಕೆ ಒಪ್ಪಿದ ಯಾವ ಶಕ್ತಿಯು ನೆಲೆಗೊಂಡಿದೆಯೋ, ಆ ಶಕ್ತಿಯನ್ನು

ಶುಭವನ್ನಾಗಿ ಮಾಡು · ಉತ್ಕ್ರಮಣ ಮಾಡುವುದರ ಮೂಲಕ ಅಶುಭವನ್ನು ಉಂಟು ಮಾಡಬೇಡ ಉತ್ಕ್ರಮಣ ಮಾಡಬೇಡ ಎಂದು ತಾತ್ಪರ್ಯ·

## ಭಾಷ್ಯಸಾರ

ವಾಗಿಂದ್ರಿಯದಲ್ಲಿ ಅಪಾನವೆಂಬ ಶಕ್ತಿಯಿದೆ · ಶ್ರೋತ್ರೇಂದ್ರಿಯದಲ್ಲಿ ವ್ಯಾನವೆಂಬ ಶಕ್ತಿಯೂ, ಕಣ್ಣುಗಳಲ್ಲಿ ಪ್ರಾಣವೆಂಬ ಶಕ್ತಿಯೂ, ಮನಸ್ಸಿನಲ್ಲಿ ಸಮಾನವೆಂಬ ಶಕ್ತಿಯೂ ಹುದುಗಿದೆ · ಇವೆಲ್ಲವೂ ನಿನ್ನವೇ ಆಗಿವೆ· ಆದುದರಿಂದಲೇ ಶ್ರುತಿ ಹೀಗೆ ಹಾಡಿದೆ -- 'ಸ ಪ್ರಾಣಸ್ತಚ್ಚಕ್ಷುಃ, ಸ ವ್ಯಾನಸ್ತಚ್ಛ್ರೋತ್ರಮ್, ಸೋಽಪಾನಃ ಸಾವಾತ್, ಸ ಸಮಾನಸ್ತನ್ಮನಃ' - ಹೀಗೆ ಎಲ್ಲ ಇಂದ್ರಿಯಗಳ ವ್ಯಾಪಾರಗಳೂ ನಿನ್ನ ಅಂಕೆಗೆ ಒಳಪಟ್ಟಿರುವುದರಿಂದ ನೀನು ನಿನ್ನ ಸಾಮೀಪ್ಯದಿಂದ ಅವುಗಳನ್ನು ಮಂಗಳಪ್ರದವನ್ನಾಗಿ ಮಾಡು · ದೇಹೋತ್ಕ್ರಮಣ ಮಾಡಿ ಅಮಂಗಳವನ್ನುಂಟು ಮಾಡಬಾರದು ಎಂದು ಪ್ರಾರ್ಥಿಸುತ್ತೇನೆ · ನಿನ್ನ ಉತ್ಕ್ರಮಣದಿಂದ ನಮಗೆ ಆಶಾಭಂಗವಾಗಬಹುದು·

## ಮಂತ್ರ - ೧೩

प्राणस्येदं वशे सर्वं त्रिदिवे यत् प्रतिष्ठितम् ।
मातेव पुत्रान् रक्षस्व श्रीश्च(श्रियश्च) प्रज्ञां
(वि) धेहि नः इति ।। 13 ।।

ಪ್ರಾಣಸ್ಯೇದಂ ವಶೇ ಸರ್ವಂ ತ್ರಿದಿವೇ ಯತ್ ಪ್ರತಿಷ್ಠಿತಮ್ ।
ಮಾತೇವ ಪುತ್ರಾನ್ ರಕ್ಷಸ್ವ ಶ್ರೀಶ್ಚ (ಶ್ರಿಯಶ್ಚ)ಪ್ರಜ್ಞಾಂ
(ವಿ)ಧೇಹಿ ನಃ ಇತಿ ॥

## ಪ್ರತಿಪದಾರ್ಥ

ಇದಮ್ - ಈ ಭೂಮಿಯಲ್ಲಿ ಕಂಡು ಬರುವ, ತ್ರಿದಿವೇ - ಸ್ವರ್ಗದಲ್ಲಿಯೂ, ಯತ್ [illegible]ಮ್ - ಯಾವುದು ಪ್ರತಿಷ್ಠಿತವಾಗಿದೆಯೋ, ತತ್ ಸರ್ವಂ - ಆ ಎಲ್ಲವೂ, ಪ್ರಾಣಸ್ಯ- ಎಲ್ಲ [illegible]ಗೂ, ಪ್ರಾಣಭೂತವಾಗಿರುವ ನಿನ್ನ, ವಶೇ - ಅಧೀನದಲ್ಲಿ ಇರುವುದು· ಆದಕಾರಣ ಮಾತಾ - [illegible]ಯು, ಪುತ್ರಾನಿವ - ಮಕ್ಕಳನ್ನು ಕಾಪಾಡುವಂತೆ, ರಕ್ಷಸ್ವ - ಕಾಪಾಡು · ಶ್ರೀಶ್ಚ - ನಮ್ಮ

ನಮ್ಮ ಕಾರ್ಯಗಳಲ್ಲಿ ರಕ್ಷತೆಯನ್ನೂ, ಪ್ರಜ್ಞಾಂ ಚ - ಬುದ್ಧಿಯನ್ನೂ, ನಃ - ನಮಗೆ, ವಿಧೇಹಿ- ಕೊಡು, ಇತಿ - ಎಂದು·

## ತಾತ್ಪರ್ಯ

ಅವನಿಯಿಂದ ಆರಂಭಿಸಿ ಅಂಬರದವರೆಗೆ ಗೋಚರಿಸುವ ಎಲ್ಲ ವಸ್ತುಗಳಿಗೂ, ಪ್ರಾಣಗಳಿಗೂ ಪ್ರಾಣನಾದ ನಿನಗೇ ಸೇರಿರುವುದರಿಂದ, ತಾಯಿಯು ಮಕ್ಕಳನ್ನು ಕಾಪಾಡುವಂತೆ ನಮ್ಮನ್ನು ಪೋಷಿಸು ನಮ್ಮ ನಮ್ಮ ಕಾರ್ಯಗಳನ್ನು ನಿರ್ವಹಿಸುವ ಶಕ್ತಿ ಹಾಗೂ ತಿಳಿವುಗಳನ್ನು ನೀಡು·

## ರಂಗರಾಮಾನುಜಭಾಷ್ಯ

**ಪ್ರಾಣಸ್ಯೇದಂ ವಶೇ ಸರ್ವಮಿತಿ** । ಜಗದಿದಂ ಸರ್ವಂ ಪ್ರಾಣಸ್ಯ ವಶೇ ವರ್ತತೇ । ವಶಃ ಇಚ್ಛಾ; ತದಧೀನಮಿತಿ ಯಾವತ್ ಯಚ್ಚ **ತ್ರಿದಿವೇ** ಸ್ವರ್ಗಾದಿಲೋಕೇ ಪ್ರತಿಷ್ಠಿತಮ್, ತದಪಿ ಪ್ರಾಣಾಧೀನಮ್ । ತಸ್ಮಾತ್, ಪುತ್ರಾನ್ ಮಾತೇವ ಅಸ್ಮಾನ್ ರಕ್ಷಸ್ವ । ಅಸ್ಮಾಕಂ ಸ್ವಸ್ವಕಾರ್ಯನಿಷ್ಪಾದನಸಾಮರ್ಥ್ಯಲಕ್ಷಣಾಃ ಶ್ರಿಯಃ, ತದನುಕೂಲ ಪ್ರಜ್ಞಾಂ ಚ ವಿಧತ್ಸ್ವ ॥

## ಅನುವಾದ

**ಪ್ರಾಣಸ್ಯೇದಂ ವಶೇತಿ** । ಈ ಪ್ರಪಂಚವೆಲ್ಲವೂ ಪ್ರಾಣದ ವಶದಲ್ಲಿದೆ· ವಶವೆಂದರೆ ಇಚ್ಛೆ· ಪ್ರಾಣಾಧೀನವೆಂದರ್ಥ· ಯಾವುದು **ತ್ರಿದಿವೇ** - ಸ್ವರ್ಗ ಮುಂತಾದ ಲೋಕಗಳಲ್ಲಿಯೂ ಇರುವುದೋ ಅದೂ ಪ್ರಾಣಕ್ಕೆ ಅಧೀನವೇ· ಆದ್ದರಿಂದ ತಾಯಿ ಮಕ್ಕಳನ್ನು ಪಾಲಿಸುವ ಹಾಗೆ ನಮ್ಮನ್ನು ಕಾಪಾಡು· ನಮಗೆ ನಮ್ಮ ನಮ್ಮ ಕಾರ್ಯಗಳನ್ನೂ, ಉಳಿದ ನಿರ್ವಹಿಸುವ ಸಾಮರ್ಥ್ಯವನ್ನೂ, ಅದಕ್ಕೆ ಅನುಕೂಲವಾದ ವಿವೇಕವನ್ನೂ ಅನುಗ್ರಹಿಸು·

## ಭಾಷ್ಯಸಾರ

ಈ ಲೋಕದ ಭೋಗ್ಯ-ಭೋಗವಸ್ತುಗಳೂ, ದೇವ-ಗಂಧರ್ವಾದಿ ಪ್ರಜೆಗಳೂ ನಿನ್ನ ವಶರಾಗಿದ್ದಾರೆ· ಇವರನ್ನು ನೀನು ಸಂರಕ್ಷಿಸು · ತಾಯಿ ಮಕ್ಕಳ ತಪ್ಪನ್ನೂ ಮರೆತು ಅವರನ್ನು ಸಲಹುತ್ತಾಳೆ (ಬೆಳೆಸುತ್ತಾಳೆ)· ಹಾಗೆ ನಮ್ಮ ಅಪನಂಬಿಕೆಯ ಅಪರಾಧವನ್ನೂ ಮನ್ನಿಸಿ ನೀನು ನಮ್ಮನ್ನು ಕ್ಷಮಿಸು ನಮ್ಮ ನಮ್ಮ ಕಾರ್ಯಗಳಲ್ಲಿ ನೆರವಾಗುವ ಶಕ್ತಿ-ಯುಕ್ತಿಗಳನ್ನು ದಯಪಾಲಿಸು· ಈ ರೀತಿಯಾಗಿ ವಾಕ್ ಮೊದಲಾದ ಪ್ರಾಣಗಳಿಂದ ಸ್ತುತಿಸಲಾದ ಮುಖ್ಯಪ್ರಾಣನ ಮಹಿಮೆಯು ಸ್ಫುಟವಾಯಿತು· ಪ್ರಜಾಪತಿ ಪ್ರಾಣನ ಆತ್ಮಾ ಸ್ವರೂಪವೂ ನಿಶ್ಚಿತವಾಯಿತು·

ಎರಡನೇ ಪ್ರಶ್ನೆ ಮುಗಿದುದು

* *

# ತೃತೀಯ ಪ್ರಶ್ನಃ

## ಮಂತ್ರ - ೧

अथ हैनं कौसल्यश्चाऽऽश्वलायनः पप्रच्छ ।
भगवन् ! कुत एष प्राणो जायते ।
कथमायात्यस्मिन् शरीरे । आत्मानं वा प्रविभज्य
कथं प्रतितिष्ठते । केनोत्क्रमते । कथं
बाह्यमभिधत्ते । कथमध्यात्ममिति ।। 1 ।।

ಅಥ ಹೈನಂ ಕೌಸಲ್ಯಶ್ಚಾಽಽಶ್ವಲಾಯನಃ ಪಪ್ರಚ್ಛ
ಭಗವನ್! ಕುತ ಏಷ ಪ್ರಾಣೋ ಜಾಯತೇ!
ಕಥಮಾಯಾತ್ಯಸ್ಮಿನ್ ಶರೀರೇ । ಆತ್ಮಾನಂ ವಾ ಪ್ರವಿಭಜ್ಯ
ಕಥಂ ಪ್ರತಿತಿಷ್ಠತೇ । ಕೇನೋತ್ಕ್ರಮತೇ । ಕಥಂ
ಬಾಹ್ಯಮಭಿಧತ್ತೇ । ಕಥಮಧ್ಯಾತ್ಮಮಿತಿ ॥

### ಪ್ರತಿಪದಾರ್ಥ

**ಅಥ** - ಭಾರ್ಗವನ ಪ್ರಶ್ನೆಗೆ ಉತ್ತರವನ್ನು ಕೊಟ್ಟ ಮೇಲೆ, **ಆಶ್ವಲಾಯನಃ ಕೌಸಲ್ಯಃ** - ಆಶ್ವಲಾಯನನ ಮಗನಾದ ಕೌಸಲ್ಯನು, **ಹ ಏನಮ್** - ಪ್ರಸಿದ್ಧರಾದ ಪಿಪ್ಪಲಾದರನ್ನು, **ಪಪ್ರಚ್ಛ**- ಪ್ರಶ್ನಿಸಿದನು · **'ಭಗವನ್!** - ಪೂಜ್ಯರೇ!, **ಏಷಃ** - ಹಿಂದೆ ಹೇಳಲಾದ, **ಪ್ರಾಣಃ** - ಮುಖ್ಯಪ್ರಾಣನು, **ಕುತಃ** - ಯಾವುದರಿಂದ, **ಜಾಯತೇ** - ಹುಟ್ಟುತ್ತಾನೆ? **ಕಥಮ್** - ಹೇಗೆ (ಯಾವ ರೀತಿಯಲ್ಲಿ), **ಅಸ್ಮಿನ್ ಶರೀರೇ** - ಈ ದೇಹದಲ್ಲಿ, **ಆಯಾತಿ** - ಬಂದು ಸೇರುತ್ತಾನೆ? **ಆತ್ಮಾನಂ ವಾ** - ತನ್ನನ್ನೇ, **ಪ್ರವಿಭಜ್ಯ** - ವಿಭಾಗಿಸಿಕೊಂಡು, **ಕಥಮ್** - ಯಾವ ರೀತಿಯಲ್ಲಿ, **ಪ್ರತಿತಿಷ್ಠತೇ** - ನೆಲೆಸುತ್ತಾನೆ? **ಕೇನ** - ಯಾವ ಕಾರಣದಿಂದ (ಈ ದೇಹವನ್ನು ಬಿಟ್ಟು), **ಉತ್ಕ್ರಮತೇ** - ಹೊರ ಹೊರಡುತ್ತಾನೆ?, **ಕಥಮ್** - ಹೇಗೆ, [೧]**ಬಾಹ್ಯಮ್** - ಅಧಿಭೂತ ಮತ್ತು ಅಧಿದೈವಗಳನ್ನು, **ಅಭಿಧತ್ತೇ**-

---

೧· ಪ್ರತಿಪದಾರ್ಥದೀಪಿಕೆಯನ್ನು ಬಿಟ್ಟು ಉಳಿದ ಮೂರೂ ಭಾಷ್ಯಗಳಲ್ಲಿ 'ಬಾಹ್ಯಮ್' ಮತ್ತು 'ಅಧ್ಯಾತ್ಮಮ್' ಎಂಬ ಪದಗಳನ್ನು ಕ್ರಿಯಾವಿಶೇಷಣಗಳಿಂದು ವ್ಯಾಖ್ಯಾನ ಮಾಡಲಾಗಿದೆ·

ಧರಿಸುತ್ತಾನೆ?, **ಕಥಮ್** - ಹೇಗೆ, **ಅಧ್ಯಾತ್ಮಮ್** - (ಮನಸ್ಸು, ಇಂದ್ರಿಯ ಮುಂತಾದ) ಅಧ್ಯಾತ್ಮ-ವನ್ನು, **ಅಭಿಧತ್ತೇ** - ಧರಿಸುತ್ತಾನೆ?' **ಇತಿ** - ಎಂದು·

## ತಾತ್ಪರ್ಯ

ಭಾರ್ಗವನು ತನ್ನ ಪ್ರಶ್ನೆಗಳಿಗೆ ಉತ್ತರವನ್ನು ಪಡೆದ ನಂತರ ಅಶ್ವಲಾಯನನ ಕುಮಾರನಾದ ಕೌಸಲ್ಯನು ಪಿಪ್ಪಲಾದರ ಬಳಿ ಬಂದು ಈ ರೀತಿಯಾಗಿ ಪ್ರಶ್ನೆಗಳನ್ನು ಕೇಳಿದನು · ಮುಖ್ಯಪ್ರಾಣನು ಯಾವುದರಿಂದ ಹುಟ್ಟುತ್ತಾನೆ? ಅವನು ದೇಹವನ್ನು ಸೇರುವ ಬಗೆ ಯಾವುದು? ಅವನು ತನ್ನನ್ನೇ ಹಂಚಿಕೊಟ್ಟು ಹೇಗೆ ಇರುತ್ತಾನೆ? ದೇಹದಿಂದ ಹೇಗೆ ಹೊರ ಹೊರಡುತ್ತಾನೆ? ಅಧಿಭೌತಿಕ, ಅಧಿದೈವಿಕ ಹಾಗೂ ಆಧ್ಯಾತ್ಮಿಕ ಪ್ರಪಂಚವನ್ನು ಹೇಗೆ ಧರಿಸುತ್ತಾನೆ?

## ರಂಗರಾಮಾನುಜಭಾಷ್ಯ

**ಅಥ ಹೈನಂ ಕೌಸಲ್ಯ ಇತಿ** । ಸ್ಪಷ್ಟೋಽರ್ಥಃ । **ಪ್ರತಿತಿಷ್ಠತೇ** - ಪ್ರತಿತಿಷ್ಠತೀತ್ಯರ್ಥಃ । **ಬಾಹ್ಯಮಭಿಧತ್ತೇ** - ಬಾಹ್ಯರೂಪೇಣ ಸನ್ನಿಧತ್ತೇ ಇತ್ಯರ್ಥಃ; ಬಾಹ್ಯಮಿತ್ಯಸ್ಯ ಸನ್ನಿಧಾನಕ್ರಿಯಾ-ವಿಶೇಷಣತ್ವಾತ್ ॥

## ಅನುವಾದ

**ಅಥ ಹೈನಂ ಕೌಸಲ್ಯ ಇತಿ** । (ಆಮೇಲೆ ಪಿಪ್ಪಲಾದರನ್ನು ಅಶ್ವಲಾಯನಕುಮಾರನಾದ ಕೌಸಲ್ಯನು ಪ್ರಶ್ನಿಸಿದನು) ಅರ್ಥವು ನಿಚ್ಚಳವಾಗಿದೆ · **ಭಗವನ್! ಇತಿ** । (ಪೂಜ್ಯರೇ ಮುಖ್ಯಪ್ರಾಣನು ಯಾವುದರಿಂದ ಹುಟ್ಟುತ್ತಾನೆ? ಈ ದೇಹಕ್ಕೆ ಹೇಗೆ ಬರುತ್ತಾನೆ? ತನ್ನನ್ನು ವಿಭಾಗಿಸಿಕೊಂಡು ಹೇಗೆ ನೆಲೆಸುತ್ತಾನೆ? ಹೇಗೆ ಬಾಹ್ಯವನ್ನು ಧರಿಸುತ್ತಾನೆ? ಹೇಗೆ ಅಧ್ಯಾತ್ಮವನ್ನು ಧರಿಸುತ್ತಾನೆ?) **ಪ್ರತಿತಿಷ್ಠತೇ**-ನೆಲೆಸುತ್ತದೆ · **ಬಾಹ್ಯಮಭಿಧತ್ತೇ** - ಹೊರರೂಪದಲ್ಲಿ ಇರುತ್ತದೆ ಎಂದರ್ಥ · ಏಕೆಂದರೆ 'ಬಾಹ್ಯಮ್' ಎಂಬುದು ಸನ್ನಿಧಾನ ಕ್ರಿಯೆಯ ವಿಶೇಷಣವಾಗಿದೆ·

## ಭಾಷ್ಯಸಾರ

ವೈದರ್ಭಿಯು ಕೇಳಿದ ಪ್ರಶ್ನೆಗಳಿಗೆ ಉತ್ತರವನ್ನು ಅನುಗ್ರಹಿಸುತ್ತಾ ಪೂಜ್ಯ ಪಿಪ್ಪಲಾದರು ಈ ರೀತಿಯಾಗಿ ಉಪದೇಶಿಸಿದರು · ಪ್ರಜಾ ಸಂರಕ್ಷಣೆಯ ಅಥವಾ ದೇಹಧಾರಣೆಯ ಹೊಣೆ ಆಕಾಶ ಮುಂತಾದ ಪ್ರಾಣಗಳಿಗೆ ಸೇರಿದೆ· ಸಾಮೂಹಿಕವಾಗಿ ಎಲ್ಲ ಪ್ರಾಣಗಳಿಗೂ ಹೊಣೆಯಿದ್ದರೂ ಅವುಗಳಲ್ಲಿ ಮುಖ್ಯ ಪ್ರಾಣನೇ ವರಿಷ್ಠನು · ಆದ್ದರಿಂದ ಮುಖ್ಯಪ್ರಾಣನು ದೇಹವನ್ನು ಪಾಲಿಸುತ್ತಾನೆ · ಶರೀರಧಾರಣೆ-ಯೆಂಬ ವಿಶೇಷವು ಆಕಾಶಾದಿಗಳಿಗಿಂತ ವ್ಯತಿರಿಕ್ತವಾಗಿ ಇವನಲ್ಲಿಯೇ ಇದೆ ಇತ್ಯಾದಿ·

ಇಂತಹ ವಿವರಣೆಯಿಂದ ವೈದರ್ಭಿಯ ಜಿಜ್ಞಾಸೆಯು ಉಪಶಮನಗೊಂಡಿತು · ಆದರೆ ಈ

ವಿವರಣೆಯೇ ಆಶ್ವಲಾಯನನ ಕುಮಾರ ಕೌಸಲ್ಯನಿಗೆ ಅನೇಕ ಪ್ರಶ್ನೆಗಳು ಹುಟ್ಟಲು ಎಡೆಮಾಡಿಕೊಟ್ಟಿತು· ಪ್ರಾಣದ ಸಾಮರ್ಥ್ಯದ ಬಗ್ಗೆ ಸಂದೇಹವು ತಲೆದೋರಲು ಅನುವುಮಾಡಿಕೊಟ್ಟಿತು· [೧]ಸಂಘಾತರೂಪನು ಮುಖ್ಯಪ್ರಾಣನು· ಅವನ ಶರೀರಧಾರಣವೆಂಬ [೨]ಮಹಿಮೆಯು ಸಾಪೇಕ್ಷವೇ ಹೊರತು ನಿತ್ಯಸಿದ್ಧವಲ್ಲ· ಆದ್ದರಿಂದ ಇವನಿಗಿಂತಲೂ ಅತಿಶಯವಾದ ಕಾರಣವಸ್ತುವೊಂದು ಇರಲೇಬೇಕು ಎಂಬ ಅಭಿಪ್ರಾಯ ಅವನ ಮನಸ್ಸಿನಲ್ಲಿ ಮೂಡಿತು·

ಕೌಸಲ್ಯನು ಆಚಾರ್ಯ ಪಿಪ್ಪಲಾದರನ್ನು ವಂದಿಸಿ ತನ್ನ ಪ್ರಶ್ನೆಗಳನ್ನು ತೋಡಿಕೊಳ್ಳುತ್ತಾನೆ , - "ಪೂಜ್ಯರೇ! ಮುಖ್ಯಪ್ರಾಣನು ಧಾರಕನೂ, ಶ್ರೇಷ್ಠನೂ ಎಂದು ನಿರ್ಣಯವಾಗಿದೆ · ಆದರೆ ಮುಖ್ಯಪ್ರಾಣನು ಯಾರಿಂದ ಹುಟ್ಟುತ್ತಾನೆ? ಹುಟ್ಟಿನಿಂದ ಕೆಲವು ಸಾಮರ್ಥ್ಯಗಳು, ಗುಣಗಳು ಬಳುವಳಿಯಾಗಿ ಬರುತ್ತವೆ · ಅಂತಹ ಜನ್ಮಜಾತಗುಣಸಾಮರ್ಥ್ಯಗಳನ್ನೊಳಗೊಂಡ ಮುಖ್ಯಪ್ರಾಣನು ಯಾವ ರೀತಿಯಲ್ಲಿ ಈ ಸ್ಥೂಲದೇಹವನ್ನು ಪ್ರವೇಶಿಸುತ್ತಾನೆ? ಸ್ಥೂಲವಾದ ಕಾಯವನ್ನು ಸೇರಿ ಅದನ್ನು ಬೀಳದಂತೆ ಕಾಯುವ ಕಾಯಕವನ್ನು ನೆರವೇರಿಸಲೋಸ್ಕರ ತನ್ನನ್ನೇ ಐದು ವಿಭಾಗಗಳನ್ನಾಗಿ ಮಾಡಿಕೊಳ್ಳುತ್ತಾನೆ ಎಂದು ತಿಳಿಸಿದರಷ್ಟೇ! ಈ ಶರೀರದಲ್ಲಿ ತನ್ನನ್ನು ಬೇರೆ-ಬೇರೆಯಾಗಿ ಹಂಚಿಕೊಂಡು ಹೇಗೆ ಅವನು ನೆಲೆಸಿರಲು ಸಾಧ್ಯ? ಪ್ರಾಣೋತ್ಕ್ರಮಣ ಹೇಗೆ ಸಂಭವಿಸುತ್ತದೆ? ಮುಖ್ಯಪ್ರಾಣನು ವಾಯುವು · ಇವನು ದೇಹದ ಒಳಗೂ ಹೊರಗೂ ಇದ್ದು ಅದನ್ನು ಕಾಪಾಡುತ್ತಾನೆ · ಆ ಪ್ರಕ್ರಿಯೆ ಏನು?

ಈ ರೀತಿಯಾಗಿ ಕೌಸಲ್ಯನಿಗೆ ಪ್ರಾಣಕಾರ್ಯದ ಸೋಜಿಗವನ್ನು ಅರಿಯುವ ವಿಶೇಷ ಜಿಜ್ಞಾಸೆಯುಂಟಾಗಿದೆ · ಹಾಗಾಗಿಯೇ ಮುಖ್ಯಪ್ರಾಣನನ್ನು ಕುರಿತು ಮೇಲಿನ ಆರು ಪ್ರಶ್ನೆಗಳನ್ನು ಪೂಜ್ಯ ಆಚಾರ್ಯರಲ್ಲಿ ಕೇಳುತ್ತಿದ್ದಾನೆ··

## ಮಂತ್ರ - ೨

तस्मै स होवाच - अतिप्रश्नान् पृच्छसि
ब्रह्मिष्ठोऽसीति तस्मात् तेऽहं ब्रवीमि ।। 2 ।।

ತಸ್ಮೈ ಸ ಹೋವಾಚ । ಅತಿಪ್ರಶ್ನಾನ್ ಪೃಚ್ಛಸಿ
ಬ್ರಹ್ಮಿಷ್ಠೋಽಸೀತಿ ತಸ್ಮಾತ್ತೇಽಹಂ ಬ್ರವೀಮಿ ॥

---

೧· ಸಂಘಾತರೂಪೋ ಹ್ಯಯಮ್ - ಸುಬೋಧಿನೀ·

೨· ಸಾಪೇಕ್ಷ ಏವಾಯಂ (ಶರೀರಧಾರಣಲಕ್ಷಣಃ) ಮಹಿಮಾ, ನ ಹ್ಯಯಂ ನಿತ್ಯಸಿದ್ಧಃ - ಸುಬೋಧಿನೀ·

## ಪ್ರತಿಪದಾರ್ಥ

**ಸಃ** - ಪಿಪ್ಪಲಾದರು, **ತಸ್ಮೈ** - ಕೌಸಲ್ಯನಿಗೆ, **ಉವಾಚ** - ಹೇಳಿದರು, [೧]**ಅತಿಪ್ರಶ್ನಾನ್** - ಕೇಳಲು ಅನರ್ಹವಾದ (ಅತಿರಹಸ್ಯವಾದ) ವಿಷಯಗಳನ್ನು, **ಪೃಚ್ಛಸಿ** - ನೀನು ಕೇಳುತ್ತೀಯೇ, **ತಸ್ಮಾತ್** - ಆದ್ದರಿಂದ, **ಬ್ರಹ್ಮಿಷ್ಠಃ** - ಬ್ರಹ್ಮಜ್ಞಾನಿಯು, **ಅಸಿ** - ಆಗಿರುವೆ· (**ಅತಃ** - ಆದಕಾರಣ), **ಅಹಮ್** - ನಾನು, **ತೇ** - ನಿನಗೆ, **ಬ್ರವೀಮಿ** - ಉತ್ತರವನ್ನು ಹೇಳುವೆನು·

## ತಾತ್ಪರ್ಯ

ಶಿಷ್ಯನಾದ ಕೌಸಲ್ಯನು ಇಟ್ಟ ಪ್ರಶ್ನೆಗಳನ್ನು ಕೇಳಿ ಪೂಜ್ಯ ಪಿಪ್ಪಲಾದರು ಹೀಗೆ ಹೇಳಲಾರಂಭಿಸಿದರು· ಕೌಸಲ್ಯ! ನೀನು ಅತಿರಹಸ್ಯವಾದ ವಿಷಯಗಳನ್ನು ಪ್ರಶ್ನೆಮಾಡುತ್ತಿರುವೆ · ಆದುದರಿಂದ ಬ್ರಹ್ಮಜ್ಞಾನಿಯಂತೆಯೇ ತೋರುವೆ · ಈ ಪ್ರಶ್ನೆಯನ್ನು ಕೇಳಿ ನೀನು ಬ್ರಹ್ಮವಿದ್ಯೆಯ ಉಪದೇಶಕ್ಕೆ ಅರ್ಹನೆಂದು ಖಚಿತಗೊಳಿಸಿರುವೆ· ಆದ್ದರಿಂದ ನಿನಗೆ ಉಪದೇಶ ಮಾಡುವೆನು·

## ರಂಗರಾಮಾನುಜಭಾಷ್ಯ

**ತಸ್ಮೈ ಸ ಹೋವಾಚೇತಿ** । ಸ್ಪಷ್ಟೋಽರ್ಥಃ । **ಅತಿಪ್ರಶ್ನಾನ್ ಪೃಚ್ಛಸಿ ಇತಿ** । ಪ್ರಶ್ನಮತಿಕ್ರಮ್ಯ ವರ್ತಮಾನಾನ್ ಪ್ರಶ್ನಾಯೋಗ್ಯಾನ್ ರಹಸ್ಯಾನ್ ಅರ್ಥಾನ್ ಪೃಚ್ಛಸಿ । ತಸ್ಮಾತ್ ತ್ವಂ ಬ್ರಹ್ಮಿಷ್ಠೋಽಸಿ । ಪ್ರಾಯೇಣ ಬ್ರಹ್ಮವಿದಸಿ । ನ ಪ್ರಾಕೃತ ಇತಿ ಯಾವತ್ । ಅತಸ್ತೇಽಹಂ ಯೋಗ್ಯತ್ವಾತ್ ಬ್ರವೀಮೀತ್ಯರ್ಥಃ ।

## ಅನುವಾದ

**ತಸ್ಮೈ ಸ ಹೋವಾಚ** । (ಅವನಿಗೆ ಅವರು ಹೇಳಿದರು) ಅಭಿಪ್ರಾಯವು ಸ್ಪಷ್ಟವಾಗಿದೆ · **ಅತಿಪ್ರಶ್ನಾನ್ ಪೃಚ್ಛಸಿ ಇತಿ** । ಪ್ರಶ್ನಾತೀತವಾದ ಪ್ರಶ್ನೆ ಮಾಡಲು ಅರ್ಹವಲ್ಲದ ರಹಸ್ಯವಿಷಯಗಳನ್ನು ಕುರಿತು ಪ್ರಶ್ನಿಸುತ್ತಿದ್ದೀಯೆ? ಆದ್ದರಿಂದ ನೀನು ಬ್ರಹ್ಮಿಷ್ಠನಾಗಿದ್ದೀಯೆ · ಬಹುತೇಕವಾಗಿ ಬ್ರಹ್ಮವನ್ನು ತಿಳಿದಿರುವೆ, ಪಾಮರನಲ್ಲ ಎಂದು ಅಭಿಪ್ರಾಯ · ಹಾಗಾಗಿ ಯೋಗ್ಯನಾಗಿರುವುದರಿಂದ ನಾನು ನಿನಗೆ (ಉತ್ತರವನ್ನು) ಹೇಳುತ್ತೇನೆ·

## ಭಾಷ್ಯಸಾರ

ಶಿಷ್ಯನ ವಿದ್ಯಾರ್ಹತೆ ಬೆಳೆದಂತೆ ಆಚಾರ್ಯನಿಗೆ ಮಹದಾನಂದವುಂಟಾಗುತ್ತದೆ · ಅವನಲ್ಲಿ ವಿದ್ಯಾರ್ಥಿಯ ಬುದ್ಧಿಯನ್ನು ಬೆಳೆಸಿ - ಬೆಳಗಿಸಿದೆನು ಎಂಬ ಧನ್ಯತೆಯ ತೃಪ್ತಿಯು ತಲೆಯೆತ್ತುತ್ತದೆ · ತನ್ನಲ್ಲಿರುವ ವಿದ್ಯೆಯನ್ನು ಪೂರ್ಣವಾಗಿ ಧಾರೆಯೆರೆಯುವ ಸಂಕಲ್ಪವು ಬಲಿಷ್ಠವಾಗುತ್ತದೆ · ಅದರಂತೆ ಕೌಸಲ್ಯನ ಕುಶಾಗ್ರಬುದ್ಧಿಯನ್ನು ಕಂಡು, ಕೌಶಲ್ಯಪೂರ್ಣಪ್ರಶ್ನೆಗಳನ್ನು ಕೇಳಿ, ಆಚಾರ್ಯಪಿಪ್ಪಲಾದರಿಗೆ

---

೧· ಅತಿಕ್ರಮ್ಯ ವರ್ತಮಾನಾಃ ಪ್ರಶ್ನಾಃ - ಅತಿಪ್ರಶ್ನಾಃ (ಪ್ರಷ್ಟವ್ಯ ವಿಷಯಗಳನ್ನು ಮೀರಿರುವ ಪ್ರಶ್ನೆಗಳು - ಸುಬೋಧಿನೀ·

ಆಶ್ಚರ್ಯ-ಆನಂದಗಳುಂಟಾಗಿವೆ · ಶಿಷ್ಯನ ಪ್ರಶ್ನೆಯ ಆಳ-ನೀಳಗಳನ್ನು ತಿಳಿದು ಒಂದು ರೀತಿಯ ಬೆರಗು ಅವರನ್ನು ಆವರಿಸಿದೆ · ಪ್ರೀತಿಯಿಂದ ಶಿಷ್ಯನನ್ನು ಸಮೀಪಕ್ಕೆ ಕರೆದು ಉಪದೇಶವನ್ನು ಅನುಗ್ರಹಿಸುತ್ತಾರೆ

"ಕೌಸಲ್ಯ! ನೀನು ಕಬಂಧಿ ಮತ್ತು ವೈದರ್ಭಿಗಳು ಕೇಳಿದ ಪ್ರಶ್ನೆಗಳಿಗಿಂತಲೂ ಮೀರಿದ ಪ್ರಶ್ನೆಗಳನ್ನು ಕೇಳುತ್ತಿರುವಿ · ಕಬಂಧಿಯು ಕೇಳಿದ ಪ್ರಶ್ನೆಯು ನಿಯಮಿತವಾಗಿ - ನೇರವಾಗಿ ಪರಮಾತ್ಮನನ್ನು ಅರಿಯುವಲ್ಲಿ ಅನುಕೂಲವಾಗಿಲ್ಲ · ಕಾರಣ ಅದು ಆದಿತ್ಯ, ರಯಿ ಮುಂತಾದವುಗಳ ಉತ್ಪತ್ತಿಯ ವಿವರಣೆಯಿಂದಲೇ ಉತ್ತರವನ್ನು ಪಡೆಯುತ್ತದೆ · ಎರಡನೇ ಪ್ರಶ್ನೆಯಂತೂ ಪ್ರಾಣನು ದೇಹವನ್ನು ಧರಿಸುತ್ತಾನೆ ಎಂಬಲ್ಲಿಯೇ ಕೊನೆಗೊಳ್ಳುತ್ತದೆ · ಆದ್ದರಿಂದ ನಿನ್ನ ಪ್ರಶ್ನೆಗಳು ಮೊದಲ ಎರಡು ಪ್ರಶ್ನೆ-ಗಳನ್ನೂ ದಾಟಿ, ರಹಸ್ಯವಾದ ವಿಷಯದತ್ತ ಮುಖಮಾಡಿವೆ · ಪರಮಾತ್ಮನನ್ನು ನೇರವಾಗಿ ಅರಿಯಲು ಅನುವಾಗಿವೆ·

ರಹಸ್ಯತತ್ತ್ವವಾದ ಪರಬ್ರಹ್ಮವನ್ನು ಕುರಿತು ಪ್ರಶ್ನೆಗಳನ್ನು ತಿಳಿಸುವ ಕಾರ್ಯ ಸುಲಭವೇನಲ್ಲ · ಆ ವಿಷಯದ ಬಗ್ಗೆ ಸ್ವಲ್ಪವಾದರೂ ತಿಳಿವು ಪೂರ್ವಭಾವಿಯಾಗಿ ಇರಲೇಬೇಕು · ಆದುದರಿಂದ ನೀನು ಈಗಾಗಲೇ ಬ್ರಹ್ಮನಿಷ್ಠನಾಗಿರಬೇಕು, ಸಂತೋಷ· ಬ್ರಹ್ಮವಿದ್ಯೆಯನ್ನು ನಿನಗಲ್ಲದೇ ಇನ್ಯಾರಿಗೆ ಅನುಗ್ರಹಿಸಲಿ ನೀನು ಕೇಳಿದ ಎಲ್ಲ ಪ್ರಶ್ನೆಗಳಿಗೂ ಉತ್ತರಿಸುತ್ತೇನೆ"·

ಪೂಜ್ಯ ಪಿಪ್ಪಲಾದರು ಮನಮುಟ್ಟಿ ಉತ್ತರಿಸಲು ಆರಂಭಿಸುತ್ತಾರೆ·

## ಮಂತ್ರ - ೩

आत्मन एवैष प्राणो जायते । यथैषा
पुरुषे छायैतस्मिन् एतदाततं मनोकृते
नायात्यस्मिन् शरीरे ॥ 3 ॥

ಆತ್ಮನ ಏವೈಷ ಪ್ರಾಣೋ ಜಾಯತೇ । ಯಥೈಷಾ
ಪುರುಷೇ ಛಾಯೈತಸ್ಮಿನ್ ಏತದಾತತಂ ಮನೋಕೃತೇ
ನಾಯಾತ್ಯಸ್ಮಿನ್ ಶರೀರೇ ॥

## ಪ್ರತಿಪದಾರ್ಥ

**ಏಷಃ** - ಈ ಹಿಂದೆ ಹೇಳಲಾದ, **ಪ್ರಾಣಃ** - ಮುಖ್ಯಪ್ರಾಣನು, **ಆತ್ಮನಃ** - ಪರಮಾತ್ಮನಿಂದ, **ಜಾಯತೇ** - ಹುಟ್ಟುತ್ತಾನೆ, **ಯಥಾ** - ಹೇಗೆ, **ಪುರುಷೇ (ಗಚ್ಛತಿ ಸತಿ)** - ವ್ಯಕ್ತಿಯು (ಹೋಗುತ್ತಿರಲು), **ಏಷಾ ಛಾಯಾ** - ಈ ನೆರಳು (ಅವನನ್ನು ಅನುಸರಿಸುತ್ತದೆಯೋ, ಮತ್ತೂ) **ಏತಸ್ಮಿನ್** - ಈ ಜೀವನದಲ್ಲಿ, **ಏತತ್ ಮನಃ** - ಈ ಮನಸ್ಸು, **ಅಕೃತೇನ** - ಪ್ರಯತ್ನವಿಲ್ಲದೆಯೇ, **ಆತತಮ್**- ವ್ಯಾಪ್ತವಾಗಿದೆಯೋ, (ಸಂಬದ್ಧವಾಗಿದೆಯೋ), (**ತಥಾ** - ಹಾಗೆಯೇ), **ಪ್ರಾಣಃ** - ಮುಖ್ಯಪ್ರಾಣನು, **ಅಸ್ಮಿನ್ ಶರೀರೇ** - ಈ ದೇಹದಲ್ಲಿ, **ಆಯಾತಿ** - ಬರುತ್ತಾನೆ·

## ತಾತ್ಪರ್ಯ

ಮುಖ್ಯಪ್ರಾಣನು ಪರಮಾತ್ಮನಿಂದಲೇ ಹುಟ್ಟುತ್ತಾನೆ· ಇವನು ಈ ಶರೀರವನ್ನು ಯಾವ ಪ್ರಯತ್ನವೂ ಇಲ್ಲದೆಯೇ ಪ್ರವೇಶಿಸುತ್ತಾನೆ· ನೆರಳು ಹೇಗೆ ಪುರುಷನನ್ನು ಹಿಂಬಾಲಿಸುತ್ತದೆಯೋ, ಮನಸ್ಸು ಹೇಗೆ ಜೀವನಲ್ಲಿ ಅವಿನಾಭೂತವಾದ ಸಂಬಂಧವನ್ನು ಪಡೆದಿದೆಯೋ, ಹಾಗೆ ಮುಖ್ಯಪ್ರಾಣನೂ ಜೀವನೊಂದಿಗೆ ಬೇರ್ಪಡಿಸಲಾರದ ಸಂಬಂಧವನ್ನು ಹೊಂದಿದ್ದಾನೆ · ಅವನೊಂದಿಗೆ ಯತ್ನವಿಲ್ಲದೆಯೇ ಶರೀರಕ್ಕೆ ಬರುತ್ತಾನೆ·

## ರಂಗರಾಮಾನುಜಭಾಷ್ಯ

ಪ್ರಥಮಸ್ಯ ಪ್ರಶ್ನಸ್ಯೋತ್ತರಮಾಹ **ಆತ್ಮನ ಏಷ್ಮೆಷ ಪ್ರಾಣ** ಇತಿ । ಪರಮಾತ್ಮನ ಏಷ್ಮೆಷ ಪ್ರಾಣೋ ಜಾಯತ ಇತ್ಯರ್ಥಃ । 'ಏತಸ್ಮಾಜ್ಜಾಯತೇ ಪ್ರಾಣೋ ಮನಃ ಸರ್ವೇಂದ್ರಿಯಾಣಿ ಚ' ಇತಿ ಶ್ರುತೇರಿತಿ ದ್ರಷ್ಟವ್ಯಮ್ ।

'ಕಥಮಾಯಾತ್ಯಸ್ಮಿನ್ ಶರೀರೇ' ಇತ್ಯಸ್ಯೋತ್ತರಮಾಹ - **ಯಥೈಷಾ ಪುರುಷೇತಿ** । ಯಥಾ ಪುರುಷೇ ಗಚ್ಛತಿ ಛಾಯಾಽಪಿ ಸಹೈವ ಗಚ್ಛತಿ; ನ ಹಿ ಛಾಯಾಗಮನೇ ಸಾಮಗ್ರ್ಯಂತರಮಸ್ತಿ - ಏವಮ್ **ಏತಸ್ಮಿನ್** ಪುರುಷೇ ಜೀವೇ, ಏತನ್ಮನಃ । **ಅಕೃತೇನ** - ಅಯತ್ನೇನ । ಕೃತಶಬ್ದೋ ಯತ್ನಾರ್ಥಕಃ ಯತ್ನ ಮಂತರೇಣ **ಆತತಮ್** - ಅವಿನಾಭಾವೇನ ಸಂಶ್ರಿತಮ್ - ಏವಮೇವ ಪ್ರಾಣೋಽಪ್ಯಕೃತೇನ ಅಯತ್ನೇನ ಅಸ್ಮಿನ್ ಶರೀರೇ ಆಯಾತಿ । ಮನಃಪ್ರಾಣಯೋಃ ಪುರುಷಚ್ಛಾಯಾವತ್ ಪುರುಷಾವಿನಾಭೂತತ್ವಾತ್ ಪುರುಷೇಣ ಸಹೈವ ಪ್ರಾಣಸ್ಯ ಸಂಬಂಧಃ । ಅತಃ ನ ಪ್ರಾಣಾನಾಂ ಗಮನೇ ಮನಸ್ಯೆವ ಪೃಥಕ್ಕಾರಣಮಪೇಕ್ಷಿತಮಿತಿ ಭಾವಃ ॥

## ಅನುವಾದ

ಮೊದಲ ಪ್ರಶ್ನೆಗೆ ಉತ್ತರವನ್ನು ಹೇಳುತ್ತಾರೆ - ಆತ್ಮನ ಏಷ್ಮೆಷ ಪ್ರಾಣೋ ಜಾಯತೇ।

ಹೇಳುತ್ತಾರೆ - **ಆತ್ಮನ ಏಷ ಪ್ರಾಣೋ ಜಾಯತೇ।** ಪರಮಾತ್ಮನಿಂದಲೇ ಈ ಮುಖ್ಯಪ್ರಾಣನು ಹುಟ್ಟುತ್ತಾನೆ· ಕಾರಣ **'ಏತಸ್ಮಾ ಜ್ಜಾಯತೇ ಇತಿ ।** ಇವನಿಂದಲೇ ಪ್ರಾಣ, ಮನಸ್ಸು ಹಾಗೂ ಎಲ್ಲ ಇಂದ್ರಿಯಗಳೂ ಹುಟ್ಟುತ್ತವೆ ಎಂಬ (ಮತ್ತೊಂದು) ವೇದವಾಕ್ಯವೂ ಹೀಗೆ ಹೇಳುವುದೆಂದು ತಿಳಿಯಬೇಕು·

(ಮುಖ್ಯಪ್ರಾಣನು) ಈ ಶರೀರದಲ್ಲಿ ಹೇಗೆ ಬರುತ್ತಾನೆ? ಎಂಬ ಪ್ರಶ್ನೆಗೆ ಉತ್ತರವನ್ನು ಹೇಳುತ್ತಾರೆ - **ಯಥೈಷಾ ಪುರುಷೇತಿ ।** ಹೇಗೆ ಪುರುಷನು ಹೋಗುತ್ತಿರಲು ನೆರಳೂ ಸಂಗಡವೇ ಹೋಗುತ್ತದೆಯೋ ನೆರಳು (ಅವನೊಟ್ಟಿಗೆ) ಹೋಗುವಲ್ಲಿ ಕಾರಣಾಂತರಗಳಿಲ್ಲವಷ್ಟೇ! ಹಾಗೆ **ಏತಸ್ಮಿನ್** - ಜೀವನಲ್ಲಿ ಈ ಮನಸ್ಸು **ಅಕೃತೇನ** - ಯತ್ನವಿಲ್ಲದೆಯೇ, 'ಕೃತ' ಶಬ್ದಕ್ಕೆ ಯತ್ನವೆಂದರ್ಥ ಯತ್ನವನ್ನು ಬಿಟ್ಟು **ಆತತಮ್** - ಅವಿನಾಭೂತವಾಗಿ ಸಂಬಂಧಿಸಿದೆ· ಹೀಗೆಯೇ ಪ್ರಾಣವೂ ಸಹ ಯತ್ನವಿಲ್ಲದೆಯೇ ಈ ಶರೀರದಲ್ಲಿ ಬರುತ್ತದೆ · ಮನಸ್ಸು ಮತ್ತು ಪ್ರಾಣಗಳು ಪುರುಷ-ಛಾಯೆಗಳಂತೆ ಪುರುಷನಿಂದ ಬೇರ್ಪಡಿಸಲಾರದವುಗಳಾದ್ದರಿಂದ ಪುರುಷನೊಟ್ಟಿಗೇ ಪ್ರಾಣನ ಸಂಬಂಧವಿದೆ · ಆದ್ದರಿಂದ (ದೇಹಕ್ಕೆ) ಪ್ರಾಣನು ಬರುವಲ್ಲಿ ಬೇರೆ ಕಾರಣದ ಅಗತ್ಯವಿಲ್ಲ ಎಂದು ಅಭಿಪ್ರಾಯ·

## ಭಾಷ್ಯಸಾರ

ಮುಖ್ಯಪ್ರಾಣನ ಹುಟ್ಟು ಯಾರಿಂದ? ಇದು ಅಶ್ವಲಾಯನಕುಮಾರ ಕೌಸಲ್ಯನು ಆಚಾರ್ಯರ ಮುಂದಿಟ್ಟ ಮೊದಲ ಪ್ರಶ್ನೆ · ಇದಕ್ಕೆ ಅವರು ನೇರವಾಗಿ ಉತ್ತರವನ್ನು ಕೊಡಲು ಆರಂಭಿಸಿದ್ದಾರೆ · ಮಹಾಮಹಿಮನಾದ ಭಗವಂತನೇ ಸಕಲಲೋಕಕ್ಕೆ ಮೂಲಕಾರಣನು · ಆದುದರಿಂದ ಅವನೇ ಮುಖ್ಯ-ಪ್ರಾಣನಿಗೂ ತಂದೆ· ಮುಖ್ಯಪ್ರಾಣನು ದೇಹಧಾರಣೆಯಂತಹ ಅಸಾಧಾರಣ ಕಾರ್ಯವನ್ನು ನಿರ್ವಹಿಸುವ ದಕ್ಷತೆಯುಳ್ಳವನು · ಇಂತಹವನ ಹುಟ್ಟು ಸರ್ವಶಕ್ತನಾದ ಪರಮಾತ್ಮನಿಂದಲ್ಲದೇ ಬೇರಾರಿಂದ ಸಾಧ್ಯ? ಕಾರ್ಯವಸ್ತುವಿಗಿಂತಲೂ ಕಾರಣವಸ್ತುವಿನಲ್ಲಿ ಅತಿಶಯ ಹೆಚ್ಚಿರಬೇಕಾಗಿರುವುದು ನಿಸರ್ಗವೇ ನಿರ್ಮಿಸಿ-ಕೊಂಡ ನಿಯಮ· ಹಾಗಾಗಿ ಪರಮಾತ್ಮ ಮುಖ್ಯಪ್ರಾಣನ ಜನ್ಮದಾತ ಎಂಬ ಮಾತು ಎಲ್ಲರೂ ಒಪ್ಪಲೇ-ಬೇಕಾದ ಸಂಗತಿ·

ಪರಮಾತ್ಮನಿಂದ ಈ ಪ್ರಪಂಚಕ್ಕೆ ಬಂದ ಮುಖ್ಯಪ್ರಾಣನು ಈ ಪಿಂಡಪ್ರಪಂಚಕ್ಕೆ (ದೇಹಕ್ಕೆ) ಹೇಗೆ ಬಂದನು? ಈ ಪ್ರಶ್ನೆ ಕೌಸಲ್ಯನ ಮನಸ್ಸಿನಲ್ಲಿ ತಲೆದೋರಿದುದು ತೀರಾ ಸಹಜವಾಗಿದೆ· ಮುಖ್ಯಪ್ರಾಣನು ಪರಮಾತ್ಮನಿಂದ ಜನಿಸುವಂತೆ, ಆದರೆ ಈ ದೇಹಕ್ಕೆ ಅವನ ಬರವೆಂತು? ದೇಹಕ್ಕೆ ಬಂದ ಅವನಿಗೆ ದೇಹಧಾರಣೆಯ ಕಾರ್ಯನಿರ್ವಹಣೆಯ ಬವಣೆ ಏಕೆ? ಈ ಬಗೆಯ ಸಂದೇಹಗಳು ಕೌಸಲ್ಯನಂತಹವರ ಜಿಜ್ಞಾಸು ಮನಸ್ಸಿನಲ್ಲಿ ಸುಳಿದರೆ ಆಶ್ಚರ್ಯವೇನಿಲ್ಲ · ಶಿಷ್ಯನ ಸಹಜ ಪ್ರಶ್ನೆಗೆ ಆಚಾರ್ಯರ ಸಹಜ ಉತ್ತರ· ಆದರೆ ದೃಷ್ಟಾಂತದೊಂದಿಗಿನ ವಿಷಯ ವಿಶ್ಲೇಷಣೆ ಇದರ ವಿಶೇಷ·

[೧]ಪುಣ್ಯ-ಪಾಪಗಳೆಂಬ ಕರ್ಮಗಳು, ಮನಸ್ಸಿನಲ್ಲಿ ಸುಳಿದು ಸಂಸ್ಕಾರದ ಆಳಕ್ಕೆ ಇಳಿಯುವ ಸಂಕಲ್ಪಕ್ಕೆ ಅಧೀನವಾಗಿವೆ· ಇವುಗಳಿಗೆ [೨]'ಮನಃಕೃತ' ಎಂದು ಮತ್ತೊಂದು ಹೆಸರು· ಕಾರಣ ಮಮತೆ-ಮತ್ಸರ-ಗಳಿಂದ ಕೂಡಿದ ಮನವೇ ಮನುಷ್ಯನನ್ನು ಆಯಾಯಾ ಕಾರ್ಯಗಳಲ್ಲಿ ತೊಡಗಿಸುತ್ತದೆ· ಕಾರ್ಯ-ಪ್ರವೃತ್ತನಾದಾಗ ಅವನಿಗೆ ಅವುಗಳಿಂದ ದೊರಕುವ ಫಲಗಳ ಭೋಗ ಅನಿವಾರ್ಯ· ಹೀಗೆ ಜೀವನು ಪುಣ್ಯಪಾಪಗಳ ಕಾರ್ಯಫಲವನ್ನು ಅನುಭವಿಸಲೇಬೇಕಾದಾಗ ಗತಿಯಿಲ್ಲದೇ ಕಾಯಪ್ರವೇಶ ಮಾಡಬೇಕು ಈ ದೃಷ್ಟಿಯಿಂದ ಪುಣ್ಯಪಾಪಗಳ ಕರ್ತೃವಾದ ಜೀವನ ಶರೀರ ಪ್ರವೇಶ ಯುಕ್ತ· ಆದರೆ ಪ್ರಾಣತತ್ತ್ವವು ಶರೀರವನ್ನು ಸೇರುವಲ್ಲಿ ಕಾರಣವೇನು?

ಪ್ರಾಣತತ್ತ್ವವು ಜೀವ ಪರತಂತ್ರವು· ಅದು ಅವನಲ್ಲಿ ಪ್ರತಿಷ್ಠಿತವಾಗಿದೆ· ಅವನು ಬಂದಲ್ಲಿ ಬರುತ್ತದೆ, ಹೋದಲ್ಲಿ ಹೋಗುತ್ತದೆ· ಜೀವ-ಪ್ರಾಣರ ಸಂಬಂಧ ವ್ಯಕ್ತಿ-ನೆರಳುಗಳ ಸಂಬಂಧದಷ್ಟು ಅನ್ಯೋನ್ಯ ಅವಿಚ್ಛಿನ್ನ · ವ್ಯಕ್ತಿಯನ್ನು ನೆರಳು ಆಶ್ರಯಿಸುತ್ತದೆ, (ಅನುಸರಿಸುತ್ತದೆ) ಆದರೆ ಅದು ಸ್ವಯಂ ಪೂರ್ಣ ವಸ್ತುವಲ್ಲ · ಬಿಸಿಲು ಮುಂತಾದ [೩]ಉಪಾಧಿಗಳಿಂದ ಏರ್ಪಟ್ಟದುದು · ಈ ಛಾಯಾಸಂಬಂಧದಂತೆ ಪ್ರಾಣಸಂಬಂಧವೂ ಕರ್ಮ ಅಥವಾ ಮನಃಕೃತವೆಂಬ ಉಪಾಧಿಯಿಂದ ಉಂಟಾಗಿರುವುದು · ಆದ್ದರಿಂದ ಅದು ಸ್ವಾಭಾವಿಕವಲ್ಲ ವ್ಯಕ್ತಿಯನ್ನು ನೆರಳು ಅನುಸರಿಸುವಂತೆ, ಜೀವನನ್ನು ಬಿಟ್ಟಿರಲಾರದ ಮುಖ್ಯಪ್ರಾಣನೂ ಅವನೊಂದಿಗೆ ಕರ್ಮಫಲಭೋಗಕ್ಕಾಗಿ ದೇಹಗುಹೆಯನ್ನು ಹೊಗುತ್ತಾನೆ·

ಈ ಬಗೆಯ ಚಿಂತನೆಯನ್ನು ಕೆಲವು ದಾರ್ಶನಿಕರು ಮನ್ನಿಸುವುದಿಲ್ಲ · ಕಾರಣ ಅವರ ಅನುಭವ ಬೇರೆ, ಅಂಬೋಣವೂ ಬೇರೆ · ಅವರ ದರ್ಶನ ಪದ್ಧತಿಯಂತೆ ಪರಬ್ರಹ್ಮವೇ ಪರಮಾರ್ಥ · ಅದೊಂದೇ ನಿತ್ಯಸತ್ಯ · ಮಿಕ್ಕ ಜಗತ್ತೆಲ್ಲ [೪]ಮಿಥ್ಯೆಯಾದುದು · ವ್ಯಾವಹಾರಿಕಲೋಕದಲ್ಲಿಯೂ ವ್ಯಕ್ತಿ ಸತ್ಯವಾದರೆ ಅವನಿಗಿಂತ ಬೇರೆಯಾಗಿ ತೋರುವ ನೆರಳು(ಛಾಯೆ) ಇಲ್ಲದ-ಸಲ್ಲದ ವಸ್ತು · ಅದರ ಪ್ರತ್ಯೇಕ ತೋರಿಕೆ ಭ್ರಾಂತಿ · ಇದರಂತೆ ಸತ್ಯಬ್ರಹ್ಮಕ್ಕಿಂತ ಜಗತ್ತು ಬೇರೆಯಾಗಿ ತೋರುವುದು ಅವಿದ್ಯೆಯಿಂದಲೇ · ಇಂತಹ ಅವಿದ್ಯಾಕಲ್ಪಿತವಾದ ಈ ಪ್ರಪಂಚವು ಮಿಥ್ಯಾಭೂತವಾದದ್ದು · ಹಾಗಾಗಿ ಈ ಪ್ರಪಂಚದಲ್ಲಿ ಅಡಕವಾದ ಪ್ರಾಣತತ್ತ್ವವೂ ಮಿಥ್ಯೆಯೇ ಆಗಿದೆ·

---

೧· ಮನೋಜನ್ಯಸಂಕಲ್ಪಾಧೀನಂ ಹಿ ಕರ್ಮ ಪುಣ್ಯಪಾಪರೂಪಂ ಮನೋಕೃತಮಿತ್ಯುಕ್ತಮ್ - ಆನಂದಭಾಷ್ಯ

೨· ಮನಃಕೃತಮಿತಿ ಕರ್ಮೋಚ್ಯತೇ । ಮನೋಕೃತೇನೇತಿ ಛಾಂದಸಃ ಪ್ರಯೋಗಃ - ಸುಬೋಧಿನೀ·

೩· ಇನ್ನೊಂದು ವಸ್ತುವಿನ ಸಮೀಪದಲ್ಲಿದ್ದು ತನ್ನ ಗುಣಧರ್ಮಗಳನ್ನು ಅದರಲ್ಲಿ ಸಂಕ್ರಮಿಸುವಂತೆ ಮಾಡುವ ವಸ್ತು· ಉದಾಃ ಹವಳವು ಶುದ್ಧವಾದ ಸ್ಫಟಿಕಮಣಿಯ ಸಮೀಪದಲ್ಲಿದ್ದಾಗ ತನ್ನ ಗುಣಧರ್ಮವಾದ ಕೆಂಪನ್ನು ಅದರಲ್ಲಿ ಸಂಕ್ರಮಿಸುವಂತೆ ಮಾಡುತ್ತದೆ· ಸ್ಫಟಿಕದಲ್ಲಿ ಕೆಂಪು ತೋರುವಂತೆ ಮಾಡಿರುವುದರಿಂದ ಹವಳ ಉಪಾಧಿ·

೪ ಸುಳ್ಳು - ಸಟೆ· ಕಲ್ಪಿತವಸ್ತುವೆಂದರ್ಥ· ಇಲ್ಲದ-ಸಲ್ಲದ ವಸ್ತು ಇದೆಯೆಂದು ತೋರುವುದು ಭ್ರಾಂತಿ (ಮಿಥ್ಯಾಜ್ಞಾನ)· ಈ ಬಗೆಯ ಭ್ರಾಂತಿಯಲ್ಲಿ ಗೋಚರಿಸುವ ಬಾಧಿತವಾಗುವ ವಿಷಯಕ್ಕೆ ಮಿಥ್ಯೆ ಎಂದು ಹೆಸರು·

ಈ ಅಭಿಪ್ರಾಯವು ಯುಕ್ತಿಯುಕ್ತವೆನಿಸಲಾರದು· ಕಾರಣ ಪ್ರಕೃತ ಮಂತ್ರದಲ್ಲಿ ಛಾಯಾದೃಷ್ಟಾಂತ-ವನ್ನು ಮಂಡಿಸುವಾಗ ನೆರಳಿಗೆ ಆಶ್ರಯವಾದ ವಸ್ತುವನ್ನು 'ಮೂರ್ತ' ಎಂದು ಸಾಮಾನ್ಯವಾಗಿ ಹೆಸರಿಸದೇ 'ಪುರುಷ' ಎಂದು ವಿಶೇಷವಾಗಿ ನಿರ್ದೇಶಿಸಿದ್ದಾರೆ· ನೆರಳು ಮಿಥ್ಯೆಯೆಂಬ ತಾತ್ಪರ್ಯ-ವನ್ನು ಕಲ್ಪಿಸುವ ಪಕ್ಷದಲ್ಲಿ ಪುರುಷ ಶಬ್ದದ ಸ್ವಾರಸ್ಯವು ನಷ್ಟವಾಗುತ್ತದೆ· ನೆರಳಾಗಲೀ, ಪ್ರಪಂಚವಾಗಲೀ ಎಂದೆಂದಿಗೂ ಮಿಥ್ಯೆಯಾಗಲಾರದು ಎಂದು ಆಚಾರ್ಯರು [೧]ಶ್ರೀಭಾಷ್ಯದಲ್ಲಿ ವಿಸ್ತೃತವಾಗಿ ನಿರೂಪಿಸಿದ್ದಾರೆ·

ಹಲವು [೨]ವಿದ್ವಾಂಸರು - ವ್ಯಕ್ತಿಯನ್ನು ನೆರಳು ಅನುಸರಿಸುವಂತೆ, ಮನವು ಜೀವನ ಬೆಂಬತ್ತಿ ಆವನೊಂದಿಗೆ ದೇಹವನ್ನು ಸೇರುತ್ತದೆ· ಇದೇ ರೀತಿ ಪ್ರಾಣನೂ ಯಾವ ಪ್ರಯತ್ನವನ್ನೂ ಅಪೇಕ್ಷಿಸದೆ ಕಾಯಪ್ರವೇಶ ಮಾಡುತ್ತಾನೆ ಎಂದು ವಿವರಿಸುತ್ತಾರೆ· ಆದರೆ ಇವರ ವಿವರಣೆ ಸುಸಂಗತವೆನಿಸಲಾರದು· ಕೌಸಲ್ಯನ ಪ್ರಶ್ನೆ ಪ್ರಾಣನ ದೇಹಪ್ರವೇಶವನ್ನು ಕುರಿತದ್ದು· ಆದ್ದರಿಂದ ಆಚಾರ್ಯರ ಉತ್ತರದಲ್ಲಿ ಮನಸ್ಸು, ದೇಹಗಳ ಸಂಬಂಧದ ನಿರೂಪಣೆ ಸೇರಿಕೊಳ್ಳುವುದು ವಿಸಂಗತವಾಗುತ್ತದೆ· ಛಾಯಾ-ದೃಷ್ಟಾಂತದಂತೆ ಇದೂ ಒಂದು ದೃಷ್ಟಾಂತ ಎಂಬ ಅಭಿಪ್ರಾಯ ಇನ್ನೂ ಕಳಪೆಯಾದುದು· ಏಕೆಂದರೆ ಮನಸ್ಸು ಮುಖ್ಯಪ್ರಾಣನನ್ನು ಆಶ್ರಯಿಸಿದ ಪ್ರಾಣಗಳಲ್ಲೊಂದು· ಆದ್ದರಿಂದ ಇದು ಮುಖ್ಯಪ್ರಾಣನಿಗೆ ಅಧೀನ· ಈ ಅಂಶವನ್ನು ಎರಡನೆಯ ಪ್ರಶ್ನೆಯಲ್ಲಿಯೇ ವಿಶದೀಕರಿಸಲಾಗಿದೆ· ಹಾಗಾಗಿ ಮನಸ್ಸು - ಶರೀರಗಳ ಸಂಬಂಧವು ಖಂಡಿತ ದೃಷ್ಟಾಂತವಾಗಲಾರದು·

## ಮಂತ್ರ - ೪

यथा सम्राडेवाधिकृतान् विनियुंक्ते एतान्
ग्रामानेतान् ग्रामान् अधितिष्ठस्वेति,
एवमेवैष प्राणः इतरान् प्राणान् पृथक्
पृथगेव सन्निधत्ते ॥ 4 ॥

---

೧· ಶ್ರೀಭಾಷ್ಯದ ಜಿಜ್ಞಾಸಾಧಿಕರಣದಲ್ಲಿ·

೨· ರಂಗರಾಮಾನುಜರು, ಪ್ರತಿಪದಾರ್ಥದೀಪಿಕಾಕಾರರು ಮತ್ತು ಇವರ ಅನುಯಾಯಿಗಳು

ಯಥಾ ಸಮ್ರಾಡೇವಾಧಿಕೃತಾನ್ ವಿನಿಯುಂಕ್ತೇ ಏತಾನ್
ಗ್ರಾಮಾನೇತಾನ್ ಗ್ರಾಮಾನ್ ಅಧಿತಿಷ್ಠಸ್ವೇತಿ,
ಏವಮೇವೈಷ ಪ್ರಾಣಃ ಇತರಾನ್ ಪ್ರಾಣಾನ್ ಪೃಥಕ್
ಪೃಥಗೇವ ಸನ್ನಿಧತ್ತೇ ॥

## ಪ್ರತಿಪದಾರ್ಥ

**ಯಥಾ** - ಹೇಗೆ, **ಸಮ್ರಾಡ್** - ಮಹಾರಾಜನು, **ಅಧಿಕೃತಾನ್** - ತನ್ನಿಂದಲೇ ತೊಡಗಿಸಲ್ಪಟ್ಟ ಸೇವಕರನ್ನು, **ಏತಾನ್ ಗ್ರಾಮಾನ್ ಏತಾನ್ ಗ್ರಾಮನ್ ಅಧಿತಿಷ್ಠಸ್ವ** - ಈ ಈ ಗ್ರಾಮಗಳನ್ನು ಆಳಿರಿ, **ಇತಿ** - ಎಂದು, **ವಿನಿಯುಂಕ್ತೇ** - ನಿಯಮಿಸುತ್ತಾನೆಯೋ, **ಏವಮ್** - ಅದೇ ರೀತಿ, **ಏಷಃ ಪ್ರಾಣಃ** - ಈ ಮುಖ್ಯಪ್ರಾಣನು, **ಇತರಾನ್** - ಬೇರೆ, **ಪ್ರಾಣಾನ್** - ಪ್ರಾಣಗಳನ್ನು (ಪ್ರಾಣಾಪಾನಾದಿಗಳನ್ನೂ, ಚಕ್ಷುರಾದಿ ಇಂದ್ರಿಯಗಳಲ್ಲಿ), **ಪೃಥಕ್ ಪೃಥಕ್ ಏವ** - ಬೇರೆ ಬೇರೆಯಾಗಿಯೇ, **ಸನ್ನಿಧತ್ತೇ** - ನಿಯಮಿಸುತ್ತಾನೆ·

## ತಾತ್ಪರ್ಯ

ಚಕ್ರವರ್ತಿಯು ಜನಪದಗಳ ಆಳ್ವಿಕೆಗಾಗಿ ತನ್ನ ಭೃತ್ಯರನ್ನು ಪ್ರತ್ಯೇಕ-ಪ್ರತ್ಯೇಕವಾಗಿ ನೇಮಿಸುತ್ತಾನೆ · ಅದರಂತೆ ಮುಖ್ಯಪ್ರಾಣನು ಪ್ರಾಣ, ಅಪಾನ, ವ್ಯಾನ, ಉದಾನ ಹಾಗೂ ಸಮಾನವೆಂಬ ಇತರ ಪ್ರಾಣಗಳನ್ನು ಗ್ರಾಮಸ್ಥಾನೀಯವಾದ ಕಣ್ಣು ಮುಂತಾದ ಇಂದ್ರಿಯಗಳಲ್ಲಿ ನಿಯಮಿಸುತ್ತಾನೆ, ನೆಲೆಸುವಂತೆ ಮಾಡುತ್ತಾನೆ·

## ರಂಗರಾಮಾನುಜಭಾಷ್ಯ

'ಆತ್ಮಾನಂ ಪ್ರವಿಭಜ್ಯ ಕಥಂ ಪ್ರತಿತಿಷ್ಠತೇ?' ಇತಿ ತೃತೀಯಪ್ರಶ್ನಸ್ಯೋತ್ತರಮಾಹ- **ಯಥಾ ಸಮ್ರಾಡೇವೇತಿ** । ಯಥಾ ರಾಜಾ ಕಾರ್ಯೇಷ್ವಧಿಕೃತಾನ್ ಸ್ವಸೇವಕಾನ್, 'ಇಮಾನ್ ಗ್ರಾಮಾನ್ ಅಧಿತಿಷ್ಠ', 'ಇಮಾನ್ ಗ್ರಾಮಾನಧಿತಿಷ್ಠ ' ಇತಿ ಪೃಥಕ್-ಪೃಥಗ್ವಿನಿಯುಜ್ಯ ತನ್ಮುಖೇನ ತೇಷು ಗ್ರಾಮೇಷು ಯಥಾ ಸನ್ನಿಧತ್ತೇ, ಏವಮೇವೈಷ ಮುಖ್ಯಪ್ರಾಣಃ ಇತರೇಷು ಪ್ರಾಣೇಷು ಗ್ರಾಮಸ್ಥಾನೀಯೇಷು ಸ್ವಾಂಶಭೂತಾಪಾನವ್ಯಾನಾದಿಮುಖೇನ ಸನ್ನಿಧತ್ತೇ, ಅಧಿತಿಷ್ಠತೀತಿ ಯಾವತ್ ॥

## ಅನುವಾದ

(ಮುಖ್ಯಪ್ರಾಣನು) ತನ್ನನ್ನು ವಿಭಾಗಿಸಿಕೊಂಡು ಹೇಗೆ ನೆಲೆಸುತ್ತಾನೆ? ಎಂಬ ಮೂರನೆಯ ಪ್ರಶ್ನೆಗೆ ಉತ್ತರವನ್ನು ಹೇಳುತ್ತಾರೆ - **ಯಥಾ ಸಮ್ರಾಡೇವೇತಿ** । ಯಾವ ರೀತಿಯಿಂದ ಚಕ್ರವರ್ತಿಯು

ಕಾರ್ಯಗಳಲ್ಲಿ ತೊಡಗಿದ ತನ್ನ ಸೇವಕರನ್ನು ' ಇಷ್ಟು ಗ್ರಾಮಗಳನ್ನು ಆಳು' 'ಇಷ್ಟು ಗ್ರಾಮಗಳನ್ನು ಆಳು' ಎಂದು ಬೇರೆ-ಬೇರೆಯಾಗಿ ನೇಮಿಸುತ್ತಾನೆಯೋ, ಅದೇ ರೀತಿ ಈ ಮುಖ್ಯಪ್ರಾಣನು ಗ್ರಾಮಸ್ಥಾನೀಯವಾದ ಉಳಿದ ಪ್ರಾಣಗಳಲ್ಲಿ ತನ್ನ ಅಂಶಗಳೇ ಆದ ಅಪಾನ, ವ್ಯಾನ ಮುಂತಾದ ರೂಪಗಳಲ್ಲಿ ನೆಲೆಸಿರುತ್ತಾನೆ ಎಂದು ತಾತ್ಪರ್ಯ·

## ಭಾಷ್ಯಸಾರ

ಶರೀರವು ಭೋಗಾಯತನವು · ಜೀವನು ಕರ್ಮಫಲಗಳನ್ನು ಭೋಗದಿಂದ ಸವೆಸುವುದಕ್ಕಾಗಿ ಈ ಕಾರ್ಯವನ್ನು ಅವಲಂಬಿಸಬೇಕು · ಇವನ ಭೋಗಾದೃಷ್ಟ ತೀರುವವರೆಗೆ ಶರೀರ ಸಂರಕ್ಷಣೆ ಅತ್ಯಗತ್ಯ ಆ ಹೊಣೆ ಮುಖ್ಯಪ್ರಾಣನಿಗೆ ಸೇರಿದುದು · ಅದಕ್ಕಾಗಿ ಅವನು ದೇಹವನ್ನು ಸೇರಿ ತನ್ನನ್ನು ಐದಾಗಿ ಹಂಚಿಕೊಟ್ಟು ಕಾರ್ಯನಿರ್ವಹಣೆ ಮಾಡುತ್ತಾನೆ ಎಂದು ಹಿಂದೆಯೇ ತಿಳಿಸಲಾಯಿತಷ್ಟೇ! ಹಾಗಿದ್ದರೆ ಮುಖ್ಯಪ್ರಾಣನು ಯಾವ ಕ್ರಮದಿಂದ ತನ್ನನ್ನೇ ವಿಭಾಗಿಸಿಕೊಂಡು ನೆಲೆಸಿರುತ್ತಾನೆ? (ಎಂಬ ಪ್ರಶ್ನೆ ಹುಟ್ಟಲೇಬೇಕು)·

ಚಕ್ರವರ್ತಿಯಾದವನು ಎಷ್ಟೇ ಸಮರ್ಥನಾಗಿರಬಹುದು, ಆದರೆ ಅವನು ಏಕಾಕಿಯಾಗಿ ವಿಸ್ತಾರವಾದ ಸಾಮ್ರಾಜ್ಯವನ್ನು ನಿಯಂತ್ರಿಸಲಾರನು · ಹಾಗಾಗಿಯೇ ಅನೇಕ ಮಂತ್ರಿ-ಮಂಡಲಿಕರನ್ನೂ, ಸೇವಕ-ಸಿಬ್ಬಂದಿಗಳನ್ನೂ ಆಡಳಿತಸೌಕರ್ಯಕ್ಕಾಗಿ ನಿಯಮಿಸಿಕೊಳ್ಳುತ್ತಾನೆ ತನ್ನ ಸೇವೆಗೆ ಅಣಿಯಾದ ಮಾಂಡಲಿಕರಿಗೆ 'ನೀವಿಷ್ಟು ಜನಪದಗಳನ್ನೂ ಆಳಿ, ನೀವಿಷ್ಟು' ಎಂದು ಪ್ರತ್ಯೇಕ-ಪ್ರತ್ಯೇಕವಾಗಿ ಆಜ್ಞೆಯನ್ನು ವಿಧಿಸುತ್ತಾನೆ · ಇದೇ ರೀತಿ ಮುಖ್ಯಪ್ರಾಣನೂ ತನ್ನ ಅಂಶಗಳಾದ ಪ್ರಾಣ, ಅಪಾನ, ವ್ಯಾನ, ಉದಾನ. ಸಮಾನಗಳನ್ನು ಚಕ್ಷುರಾದಿಸ್ಥಾನಗಳಲ್ಲಿ ನಿಯಮಿಸಿ ದೇಹಸಂರಕ್ಷಣೆಯ ಭಾರವನ್ನು ನಿರ್ವಹಿಸುತ್ತಾನೆ·

[೧]ಮಾತು ಮೊದಲಾದವುಗಳು ಗ್ರಾಮಸ್ಥಾನೀಯವಾದ ಗೌಣ ಪ್ರಾಣಗಳು · ಪ್ರಾಣ, ಅಪಾನ, ವ್ಯಾನ, ಉದಾನ, ಸಮಾನಗಳು ಮುಖ್ಯಪ್ರಾಣನ ಅಂಶಗಳಾಗಿದ್ದು ಅಧಿಕಾರಿಯ ಸ್ಥಾನದಲ್ಲಿವೆ · ಮುಖ್ಯಪ್ರಾಣನು ಸಮ್ರಾಟನ ಸ್ಥಾನದಲ್ಲಿದ್ದಾನ· [೨]ಅಧಿಕಾರಿಗಳು ಅಧಿಕಾರವು ಪರಸ್ಪರ ಅಸಂಕೀರ್ಣವಾದಂತೆ ಪ್ರಾಣ, ಅಪಾನ ಮುಂತಾದವುಗಳ ಅಧಿಕಾರವು ಪ್ರತ್ಯೇಕ-ಪ್ರತ್ಯೇಕವೇ ಆಗಿದೆ·

---

೧· ಗ್ರಾಮಸ್ಥಾನೀಯಾ ಅಮುಖ್ಯಾಃ ಪ್ರಾಣಾ ವಾಗಾದಯಃ । ಅಧಿಕಾರಿಪುರುಷಸ್ಥಾನೀಯಾಃ ಪ್ರಾಣಾಪಾನವ್ಯಾನಸಮಾನೋದಾನಾ ಮುಖ್ಯಪ್ರಾಣಾಂಶಾಃ । ಮುಖ್ಯಪ್ರಾಣಸ್ತು ಸಮ್ರಾಟಸ್ಥಾನೀಯ ಇತಿ ವಿವೇಕಃ - ಆನಂದಭಾಷ್ಯ·

೨· ಅಧಿಕಾರಿಪುರುಷಾಣಾಮಧಿಕಾರೋ ಯಥಾ ಪರಸ್ಪರಂ ಸಂಕೀರ್ಣೋ ನ ಭವತಿ ತಥಾ ಪ್ರಾಣಾಪಾನಾದೀನಾಮಪಿ ನ ಸಂಕೀರ್ಣೋಧಿಕಾರ ಇತಿ ದ್ವಿರುಕ್ತೇನ ಪೃಥಕ್ ಪದೇನ ಸೂಚ್ಯತೇ - ಆನಂದಭಾಷ್ಯ·

## ಮಂತ್ರ - ೫

पायूपस्थे अपानं चक्षुश्श्रोत्रे मुखनासिकाभ्यां
प्राणः स्वयं प्रा(प्रति)तिष्ठते, मध्ये तु समानः ।
एष ह्येतद्धुतमन्नं समं नयति । तस्मादेताः
सप्तार्चिषो भवन्ति ॥ 5 ॥

ಪಾಯೂಪಸ್ಥೇ ಅಪಾನಂ ಚಕ್ಷುಶ್ಶ್ರೋತ್ರೇ ಮುಖನಾಸಿಕಾಭ್ಯಾಂ
ಪ್ರಾಣಃ ಸ್ವಯಂ ಪ್ರಾ (ಪ್ರತಿ) ತಿಷ್ಠತೇ, ಮಧ್ಯೇ ತು ಸಮಾನಃ
ಏಷ ಹ್ಯೇತದ್ಧುತಮನ್ನಂ ಸಮಂ ನಯತಿ । ತಸ್ಮಾದೇತಾಃ
ಸಪ್ತಾರ್ಚಿಷೋ ಭವಂತಿ ॥

### ಪ್ರತಿಪದಾರ್ಥ

**ಅಪಾನಮ್** - ಅಪಾನವಾಯುವು, **ಪಾಯೂಪಸ್ಥೇ** - ಪಾಯು ಮತ್ತು ಉಪಸ್ಥಗಳಲ್ಲಿ, **ಪ್ರಾತಿಷ್ಠತೇ** - ನೆಲೆಗೊಳ್ಳುತ್ತದೆ · **ಪ್ರಾಣಃ** - ಪ್ರಾಣವಾಯುವು, **ಮುಖನಾಸಿಕಾಭ್ಯಾಮ್** - ಮೂಗು ಬಾಯಿಗಳಿಂದ, (**ನಿರ್ಗತಃ ಸನ್** - ಹೊರಬಂದು) **ಚಕ್ಷುಃಶ್ರೋತ್ರೇ** - ಕಣ್ಣು -ಕಿವಿಗಳಲ್ಲಿ, **ಸ್ವಯಮ್** - ತಾನು, **ಪ್ರಾತಿಷ್ಠತೇ** - ನೆಲೆಸುತ್ತಾನೆ · **ಮಧ್ಯೇ** - ಮಧ್ಯದಲ್ಲಿ, (ನಾಭಿಪ್ರದೇಶದಲ್ಲಿ) **ಸಮಾನಃ** - ಸಮಾನವಾಯುವು, **ಪ್ರಾತಿಷ್ಠತೇ** - ನೆಲೆಸುತ್ತದೆ · **ಏಷಃ** - ಈ ಸಮಾನ ವಾಯುವು, **ಹುತಮ್** - ಊಟಮಾಡಿದ, **ಅನ್ನಮ್** - ಅನ್ನ-ಪಾನಾದಿಗಳನ್ನು, **ಸಮಂ ನಯತಿ** - ಸಮಗೊಳಿಸುತ್ತಾನೆ, **ತಸ್ಮಾತ್** - ಸಮಾನ ವಾಯುವಿನಿಂದ ಪ್ರಜ್ವಲಿತವಾದ ಜಾಠರಾಗ್ನಿಯಿಂದ, **ಏತಾಃ**- ಈ, (ಕಾಳೀ, ಕರಾಳೀ, ಮನೋಜವಾ, ಸುಲೋಹಿತಾ, ಸುಧೂಮ್ರವರ್ಣಾ ಇತ್ಯಾದಿ) **ಸಪ್ತ ಅರ್ಚಿಷಃ**-ಏಳು ಜ್ವಾಲೆಗಳು, **ಭವಂತಿ** - ಉಂಟಾಗುತ್ತವೆ · (**ಯದ್ವಾ** - ಅಥವಾ) **ತಸ್ಮಾತ್** - ಸಮಾನವಾಯು-ಪ್ರಕಾಶಿತವಾದ ಜಾಠರಾಗ್ನಿಯಿಂದ, **ಏತಾಃ** - ಕಾಣುವ, **ಸಪ್ತಾರ್ಚಿಷಃ** - ಚಕ್ಷುಶ್, ಶ್ರೋತ್ರ, ನಾಸಿಕಾ, ಮುಖ ಮುಂತಾದ ಏಳು ಶೀರ್ಷಗಳಿಂದ ಬರುವ ಜ್ಞಾನರೂಪ ಜ್ವಾಲೆಗಳು, **ಭವಂತಿ** ಹುಟ್ಟುತ್ತವೆ·

### ತಾತ್ಪರ್ಯ

ಮುಖ್ಯಪ್ರಾಣನ ಅಂಶವಾದ ಅಪಾನ ವಾಯುವು ಪಾಯು ಮತ್ತು ಉಪಸ್ಥಗಳಲ್ಲಿ ನೆಲೆಸಿದ್ದು

ಮಲ-ಮೂತ್ರ-ವಿರೇಚನ ಕಾರ್ಯವನ್ನು ಮಾಡಿಸುತ್ತದೆ· ಮುಖ್ಯಪ್ರಾಣನು ಸ್ವಯಂ ಮುಖನಾಸಿಕ-ಗಳಿಂದ ಹೊರಬರುತ್ತ ಕಣ್ಣು ಮತ್ತು ಕಿವಿಗಳಲ್ಲಿ ನೆಲೆಸಿರುತ್ತಾನೆ· ಅಲ್ಲಿದ್ದು ಕಣ್ಣಿನ ಮೂಲಕ ಕಾಣುವ ಕೆಲಸವನ್ನೂ, ಕಿವಿಯ ಮೂಲಕ ಕೇಳುವ ಕೆಲಸವನ್ನೂ ಮಾಡಿಸುತ್ತಾನೆ· ನಾಭಿಯಲ್ಲಿ ನೆಲೆಸಿದ ಸಮಾನ-ವಾಯುವು ಸೇವಿಸಿದ ಆಹಾರವನ್ನು ಸಮರಸಕ್ಕೆ ತಿರುಗಿಸಿ, ಜಾಠರಾಗ್ನಿಯನ್ನು ಪ್ರಕಾಶಿಸುತ್ತದೆ ಆದರಿಂದ ಜಾಠರಾಗ್ನಿಯ ಏಳು ಜ್ವಾಲೆಗಳು ಹುಟ್ಟುತ್ತವೆ·

## ರಂಗರಾಮಾನುಜಭಾಷ್ಯ

**ಪಾಯೂಪಸ್ಥೇಽಪಾನಂ** ಇತಿ । ತತ್ರ - ಪಾಯುಶ್ಚೋಪಸ್ಥಂ ಚ [೧]ಪಾಯೂಪಸ್ಥಮ್, ತಸ್ಮಿನ್ । **ಅಪಾನಂ** ಮೂತ್ರಪುರೀಷಾಪಕರ್ಷಣಂ ಕುರ್ವಂಸ್ತಸ್ಮಿನ್ ಪ್ರತಿತಿಷ್ಠತೇ ಪ್ರತಿಷ್ಠಿತೋ ಭವತಿ, ತದಧಿಷ್ಠಾತಾ ಭವತೀತ್ಯರ್ಥಃ । ಮುಖನಾಸಿಕಾಭ್ಯಾಂ ನಿರ್ಗತೋ ವಾಯುಃ ಪ್ರಾಣರೂಪಃ ಸನ್ **ಚಕ್ಷುಃಶ್ರೋತ್ರೇ** - ಚಕ್ಷುಶ್ಚ ಶ್ರೋತ್ರಂಚ ಚಕ್ಷುಃಶ್ರೋತ್ರಂ ತಸ್ಮಿನ್ **ಪ್ರತಿತಿಷ್ಠತೇ** ಪ್ರತಿಷ್ಠಿತೋ ಭವತಿ; ತದಧಿಷ್ಠಾತಾ ಭವತೀತ್ಯರ್ಥಃ । ಮಧ್ಯೇ ತು ಸಮಾನಃ ಸನ್ನವತಿಷ್ಠತೇ । **ಏಷ ಹಿ** ಸಮಾನೋ ಹುತಂ ಭುಕ್ತಮನ್ನಾದಿಕಂ । **ಸಮಂ ನಯತಿ** । ಸಪ್ತಧಾತುಸಾಮ್ಯಂ ನಯತಿ । ಸಪ್ತಧಾತುರೂಪೇಣ ವಿಭಾಗಂ ಕರೋತೀತಿ ಯಾವತ್ । **ತಸ್ಮಾತ್** ಸಮಾನ-ವಾಯೋರ್ಹೇತೋಃ, ಜಾಠರಾಗ್ನೇಃ ಸಪ್ತಾರ್ಚಿಷಃ ಜ್ವಾಲಾಃ ಕಾಲೀ ಕರಾಲೀ ಇತ್ಯೇವಮಾದ್ಯಾಃ ಪ್ರಾದುರ್ಭವಂತಿ ॥

## ಅನುವಾದ

**ಪಾಯೂಪಸ್ಥೇತಿ** । ದೇಹದಲ್ಲಿ ಪಾಯುವೂ, ಉಪಸ್ಥವೂ, ಪಾಯೂಪಸ್ಥಗಳು, ಅವು-ಗಳಲ್ಲಿ **ಅಪಾನಮ್** - ಮಲ-ಮೂತ್ರ ವಿಸರ್ಜನೆಯನ್ನು ಮಾಡುತ್ತ ಅಲ್ಲಿ **ಪ್ರತಿತಿಷ್ಠತೇ** - ಆಶ್ರಯಿಸಿರುತ್ತಾನೆ (ನೆಲೆಗೊಳ್ಳುತ್ತಾನೆ)· ಮೂಗು-ಮುಖಗಳಿಂದ ಹೊರಬಿದ್ದ ವಾಯುವು ಪ್ರಾಣನ ರೂಪದಲ್ಲಿ **ಚಕ್ಷುಃಶ್ರೋತ್ರೇ** - ಕಣ್ಣುಗಳಲ್ಲಿಯೂ, ಕಿವಿಗಳಲ್ಲಿಯೂ **ಪ್ರತಿತಿಷ್ಠತೇ** - ನೆಲೆಸುತ್ತದೆ· ಅದನ್ನೇ ಆಶ್ರಯವಾಗಿ ಪಡೆಯುತ್ತದೆ· ಮಧ್ಯದಲ್ಲಿ (ನಾಭಿಯಲ್ಲಿ) ಸಮಾನವಾಗಿ ನೆಲೆಸುತ್ತದೆ· **ಏಷ ಹಿ** - ಸಮಾನವಾಯುವು, **ಹುತಮ್** - ಸೇವಿಸಿದ ಅನ್ನಪಾನಾದಿಗಳನ್ನು, **ಸಮಂ ನಯತಿ** - ಏಳು-ಧಾತುಗಳ ರೂಪಕ್ಕೆ ಒಯ್ಯುತ್ತದೆ· ಏಳುಧಾತುಗಳಾಗಿ ಹಂಚುತ್ತದೆಯೆಂದು ಅರ್ಥ· **ತಸ್ಮಾತ್** - ಸಮಾನವಾಯುವಿನ ಕಾರಣದಿಂದ (ಪ್ರಕಾಶಿತವಾದ) ಜಾಠರಾಗ್ನಿಯಿಂದ ಕಾಲೀ, ಕರಾಲೀ ಮುಂತಾದ ಏಳು ಜ್ವಾಲೆಗಳು ಹುಟ್ಟುತ್ತವೆ·

---

೧· ವಾಯು ಹಾಗೂ ಉಪಸ್ಥಗಳು ಪ್ರಾಣಿಯ ಅವಯವಗಳಾದ್ದರಿಂದ, 'ದ್ವಂದ್ವಶ್ಚ ಪ್ರಾಣಿತೂರ್ಯಸೇನಾಂಗಾನಾಮ್' ಎಂಬ ಪಾಣಿನಿ ಸೂತ್ರದಂತೆ 'ಪಾಯೂಪಸ್ಥಮ್' (ದ್ವಂದ್ವಸಮಾಸ) ಎಂಬ ಪದವು ಏಕವಚನಾಂತವಾಗಿದೆ·

## ಭಾಷ್ಯಸಾರ

ಪ್ರಾಣ, ಅಪಾನ, ವ್ಯಾನ, ಉದಾನ, ಸಮಾನಗಳು ಮುಖ್ಯಪ್ರಾಣನ ಐದು ಅಂಶಗಳು· ಇವು ದೇಹದ ನಾನಾ ಭಾಗಗಳಲ್ಲಿದ್ದು ನಿರ್ದಿಷ್ಟವಾದ ಕಾರ್ಯಗಳನ್ನು ನಿರ್ವಹಿಸುತ್ತವೆ· ಮುಖ್ಯಪ್ರಾಣನು ಸಾಮ್ರಾಟನಂತೆ ಕಣ್ಣು ಹಾಗೂ ಕಿವಿಗಳೆಂಬ ಗ್ರಾಮಗಳಲ್ಲಿ ತಾನೇ ನೆಲೆಸಿರುತ್ತಾನೆ· ಇವನ ಸಂಚಾರಕ್ಕೆ ಮೂಗು-ಮುಖಗಳೇ ಪ್ರಧಾನ ದ್ವಾರಗಳು ·ಇವನ ಅಂಶವಾದ ಅಪಾನವಾಯುವು ಗುದಪ್ರದೇಶ ಹಾಗೂ ಮೂತ್ರೇಂದ್ರಿಯಗಳಲ್ಲಿ ನೆಲೆಗೊಂಡಿದ್ದು, ಮಲ-ಮೂತ್ರವಿರೇಚನ ಕಾರ್ಯವನ್ನು ಜರುಗಿಸು-ತ್ತದೆ· ಈ ಕಾರ್ಯಕ್ಕೆ ಅಪಾನ ವ್ಯಾಪಾರವೆಂದೂ ಹೆಸರು·

ಪ್ರಾಣ ಮತ್ತು ಅಪಾನಸ್ಥಾನಗಳ ನಡುವೆ ನಾಭಿಪ್ರದೇಶದಲ್ಲಿ ಸಮಾನವಾಯುವು ಇರುತ್ತದೆ· ಇದು ನಾವು ಸೇವಿಸಿದ ಅನ್ನ-ಆಹಾರಾದಿಗಳನ್ನು ಜೀರ್ಣಿಸಿ, ಆಹಾರಸಾರವನ್ನು ಸಪ್ತಧಾತುಗಳಲ್ಲಿ ಹಂಚಿಕೊಡು-ತ್ತದೆ· ಈ ಆಹಾರರಸದಿಂದ ಪೋಷಿಸಲ್ಪಟ್ಟ ಇಂದ್ರಿಯಗಳು ತಮ್ಮ ತಮ್ಮ ಕಾರ್ಯಪಟುತ್ವದಿಂದ ಮೆರೆಯಬಲ್ಲವು · ಇದರಿಂದ ಉಜ್ಜೀವಿತವಾದ ಕಣ್ಣುಗಳೆರಡು, ಕಿವಿಗಳೆರಡು, ಮೂಗಿನಹೊಳ್ಳೆ-ಗಳೆರಡೂ ಹಾಗೂ ಬಾಯಿಯೊಂದು ಏಳು ಅರ್ಚಿಗಳು ಬೆಳಗುತ್ತವೆ· ಈ ಇಂದ್ರಿಯಗಳು ಶಬ್ದ ಮುಂತಾದ ವಿಷಯಗಳನ್ನು ಪ್ರಕಾಶಪಡಿಸುವುದರಿಂದ ಇವುಗಳನ್ನು ಅರ್ಚಿಗಳು(ಕಿಡಿಗಳು) ಎಂದು ಭಾವಿಸಲಾಗಿದೆ·

## ಮಂತ್ರ - ೬

हृदि ह्येष आत्मा अत्रैतदेकशतं नाडीनाम् ।
तासां शतं शतमेकैकस्या (स्यां) द्वासप्ततिं(तिः)
द्वासप्ततिं(तिः) प्रतिशाखानाडीसहस्राणि
भवन्ति । आसु व्यानश्चरति ।। 6 ।।

ಹೃದಿ ಹ್ಯೇಷ ಆತ್ಮಾ ೧ಅತ್ರೈತದೇಕಶತಂ ನಾಡೀನಾಮ್ ।
ತಾಸಾಂ ಶತಂ ಶತಮೇಕೈಕಸ್ಯಾ (ಸ್ಯಾಂ) ದ್ವಾಸಪ್ತತಿಂ
(ತಿಃ) ದ್ವಾಸಪ್ತತಿಂ (ತಿಃ) ಪ್ರತಿಶಾಖಾನಾಡೀಸಹಸ್ರಾಣಿ
ಭವಂತಿ । ಆಸು ವ್ಯಾನಶ್ಚರತಿ ॥

---

೧· ಏತತ ಎಂಬ ಪದವು ರಂಗರಾಮಾನುಜ ಭಾಷ್ಯದಲ್ಲಿ ಉಲ್ಲೇಖಿತವಾದ ಮಂತ್ರದಲ್ಲಿ ಕಂಡು ಬರುವುದಿಲ್ಲ·

## ಪ್ರತಿಪದಾರ್ಥ

**ಹೃದಿ** - (ಮುಖ್ಯಪ್ರಾಣನೂ ಇರುವ) ಹೃದಯಾಕಾಶದಲ್ಲಿ, **ಏಷಆತ್ಮಾ** - ಈ ಜೀವಾತ್ಮನೂ, (**ಆಸ್ತೇ** - ಇದ್ದಾನೆ), **ಅತ್ರ** - ಈ ಹೃದಯಪ್ರದೇಶದಲ್ಲಿ, **ನಾಡೀನಾಮ್** - ನಾಡಿಗಳ, **ಏಕಶತಮ್**- ನೂರರ ಗುಂಪು ಇದೆ· **ತಾಸಾಮ್** - ಆ ನಾಡಿಗಳ ನಡುವೆ, **ಏಕೈಕಸ್ಯಾಮ್** - ಒಂದೊಂದು ನಾಡಿಯಲ್ಲಿಯೂ, ■**ದ್ವಾಸಪ್ತತಿಃ ದ್ವಾಸಪ್ತತಿಃ** - ಎಪ್ಪತ್ತೆರಡು ಎಪ್ಪತ್ತೆರಡು ಪ್ರಭೇದಗಳಿವೆ· ಅಂತಹ ಎಪ್ಪತ್ತೆರಡು ಭೇದಗಳ, **ಪ್ರತಿಶಾಖಾನಾಡೀ ಸಹಸ್ರಾಣಿ** - ಪ್ರತಿಶಾಖೆಯಲ್ಲಿಯೂ ಸಾವಿರನಾಡಿಗಳ, **ಶತಂ ಶತಂ** - ನೂರು ನೂರು ಭೇದಗಳು, **ಭವಂತಿ** - ಉಂಟಾಗುತ್ತವೆ· **ತಾಸು** - ಅಂತಹ ನಾಡಿಗಳಲ್ಲಿ, **ವ್ಯಾನಃ** - ವ್ಯಾನರೂಪದ ಮುಖ್ಯಪ್ರಾಣನು, **ಚರತಿ** - ಸಂಚರಿಸುತ್ತಾನೆ·

## ತಾತ್ಪರ್ಯ

ಕರ್ಮಫಲವನ್ನು ಭೋಗಿಸುವ ಜೀವನು ಪುಂಡರೀಕಾಕಾರವಾದ ಹೃದಯಾಕಾಶದಲ್ಲಿ ನೆಲೆಸಿದ್ದಾನೆ ಆ ಹೃದಯ ಪ್ರದೇಶದಲ್ಲಿ ನೂರೊಂದು ನಾಡಿಗಳಿವೆ· ಆ ನಾಡಿಗಳಲ್ಲಿ ಒಂದೊಂದು ಎಪ್ಪತ್ತೆರಡು ಪ್ರಭೇದಗಳನ್ನು ಹೊಂದಿದೆ· ಆ ಎಪ್ಪತ್ತೆರಡು ಪ್ರಭೇದಗಳಲ್ಲಿಯ ಒಂದೊಂದರಲ್ಲಿಯೂ ಸಾವಿರ ನಾಡಿ-ಗಳ ನೂರು ನೂರು ಶಾಖೆಗಳಿವೆ· ಇಷ್ಟು ನಾಡಿಗಳಲ್ಲಿ ಪ್ರಾಣನು ವ್ಯಾನರೂಪದಲ್ಲಿ ವಿಹರಿಸುತ್ತಾನೆ·

## ರಂಗರಾಮಾನುಜಭಾಷ್ಯ

**ಹೃದಿ ಹ್ಯೇಷ ಆತ್ಮಾ ಇತಿ** । **ಏಷಃ** ಜೀವಾತ್ಮಾ **ಹೃದಿ** ಹೃದಯೇ, ಯತ್ರ ಸಮಾನ-ರೂಪೇಣ ಪ್ರಾಣ ಆಸ್ತೇ ತತ್ರ, ಸ್ವಯಮಪಿ ವರ್ತತೇ । **ಅತ್ರ** ಹೃದಯೇ ನಾಡೀನಾಮೇಕಾಧಿಕಂ ಶತಂ ವರ್ತತೇ । ತಾಸಾಂ ನಾಡೀನಾಂ ಮಧ್ಯೇ ಏಕೈಕಸ್ಯಾಃ ದ್ವಾಸಪ್ತತಿಃ ದ್ವಾಸಪ್ತತಿಃ ಪ್ರಭೇದಾ ಭವಂತಿ । ಏಕೈಕಂ ದ್ವಾಸಪ್ತತಿಪ್ರಭೇದಂ ಪ್ರತಿಶಾಖಾಭೂತನಾಡೀಸಹಸ್ರಾಣಿ ಶತಂ ಶತಂ ಭವಂತಿ । ತಾಸು ವ್ಯಾನಶ್ಚರತಿ । ತಾಸು ನಾಡೀಷು ವ್ಯಾನರೂಪಪ್ರಾಣಶ್ಚರತೀತ್ಯರ್ಥಃ ॥

## ಅನುವಾದ

**ಹೃದಿ ಹ್ಯೇಷ ಆತ್ಮಾ ಇತಿ** । **ಏಷಃ** - ಜೀವಾತ್ಮನು, **ಹೃದಿ** - ಹೃದಯದಲ್ಲಿ, ಸಮಾನ-ವಾಯುವಾಗಿ ಮುಖ್ಯಪ್ರಾಣನು ಎಲ್ಲಿ ಇರುತ್ತಾನೆಯೋ ಅಲ್ಲಿ, ತಾನೂ ಇರುತ್ತಾನೆ· **ಅತ್ರ** - ಹೃದಯ-ದಲ್ಲಿ ನೂರೊಂದು ನಾಡಿಗಳಿವೆ· ಆ ನಾಡಿಗಳ ನಡುವೆ ಒಂದೊಂದರಲ್ಲಿಯೂ ಎಪ್ಪತ್ತೆರಡು ಎಪ್ಪತ್ತೆರಡು ಶಾಖೆಗಳಿವೆ· ಎಪ್ಪತ್ತೆರಡು ಶಾಖೆಗಳಲ್ಲಿ ಒಂದೊಂದರಲ್ಲಿಯೂ ಸಾವಿರ ಶಾಖೋಪಶಾಖೆಗಳು ನೂರು ನೂರು ಇವೆ· ಇಷ್ಟು ನಾಡಿಗಳಲ್ಲಿ ವ್ಯಾನರೂಪದ ಪ್ರಾಣನು ಸಂಚರಿಸುತ್ತಾನೆ

---

■ 'ದ್ವಾಸಪ್ತತಿಃ' ಹಾಗೂ 'ಶತಮ್' ಶಬ್ದಗಳ ದ್ವಿರುಚ್ಚಾರಣೆಯು ಪ್ರತ್ಯೇಕ-ಪ್ರತ್ಯೇಕವಾಗಿ ಆಯಾಯಾ ನಾಡಿಗಳ ಸಂಬಂಧವನ್ನು ಸೂಚಿಸುತ್ತದೆ

## ಭಾಷ್ಯಸಾರ

ಪುಂಡರೀಕಾಕಾರದ ಹೃದಯಾಕಾಶವೇ ಜೀವನವಾಸಸ್ಥಾನ · ಇಲ್ಲಿಯೇ ಪ್ರಧಾನವಾದ ನೂರೊಂದು-ನಾಡಿಗಳು ಇರುವುವು · ಇವುಗಳಲ್ಲಿ ಒಂದೊಂದರಲ್ಲಿಯೂ ನೂರು ನೂರು ಶಾಖಾನಾಡಿಗಳಿವೆ · ಒಟ್ಟು ಶಾಖಾನಾಡಿಗಳ ಸಂಖ್ಯೆ ಹತ್ತುಸಾವಿರದ ಒಂದು ನೂರು · ಪ್ರತಿಯೊಂದು ಶಾಖಾನಾಡಿ-ಯಲ್ಲಿಯೂ ಎಪ್ಪತೆರಡು ಸಾವಿರ ಎಪ್ಪತ್ತೆರಡು ಸಾವಿರ ಪ್ರತಿಶಾಖಾನಾಡಿಗಳು ಇರುತ್ತವೆ · ಹೀಗೆ ನೂರೊಂದು ಶಾಖಾನಾಡಿಗಳು ಹತ್ತು ಸಾವಿರದ ಒಂದುನೂರು ಶಾಖಾನಾಡಿಗಳು ಹಾಗೂ [೧]ಎಪ್ಪತ್ತೆರಡು ಕೋಟಿ ಎಪ್ಪತ್ತೆರಡು ಲಕ್ಷ ಪ್ರತಿಶಾಖಾನಾಡಿಗಳು ಸೇರಿ ಒಟ್ಟು ೭೨,೭೨,೧೦,೨೦೧ ನಾಡಿಗಳು ನಮ್ಮ ದೇಹದಲ್ಲಿ ಇವೆ· ಈ ಎಲ್ಲ ನಾಡಿಗಳಲ್ಲಿಯೂ ವ್ಯಾನವಾಯುವು ಸಂಚರಿಸುತ್ತದೆ·

## ಮಂತ್ರ - ೭

अथैकयोर्ध्व उदानः पुण्येन पुण्यं लोकं नयति;
पापेन पापम्; उभाभ्यामेव मनुष्यलोकम् ॥ ७ ॥

ಅಥೈಕಯೋರ್ಧ್ವ ಉದಾನಃ ಪುಣ್ಯೇನ ಪುಣ್ಯಂ ಲೋಕಂ
ನಯತಿ, ಪಾಪೇನ ಪಾಪಮ್; ಉಭಾಭ್ಯಾಮೇವ ಮನುಷ್ಯ-
ಲೋಕಮ್ ॥

## ಪ್ರತಿಪದಾರ್ಥ

**ಅಥ** - ಅನಂತರ, **ಏಕಯಾ** - ಯಾವುದಾದರೊಂದು ನಾಡಿಯಿಂದ, **ಉದಾನಃ** - ಉದಾನವಾಯುವು, **ಊರ್ಧ್ವಃ** - ಮೇಲ್ಮುಖವಾಗಿ ಹೊರಟು, **ಪುಣ್ಯೇನ** - (ಜೀವನು ಮಾಡಿದ) ಪುಣ್ಯದಿಂದ, **ಪುಣ್ಯಲೋಕಮ್** - ಪುಣ್ಯಲೋಕಕ್ಕೆ (ಸ್ವರ್ಗಾದಿಲೋಕಕ್ಕೆ), **ನಯತಿ** - ಜೀವನನ್ನು ಒಯ್ಯುತ್ತದೆ, **ಪಾಪೇನ** - (ಜೀವನು ಮಾಡಿದ) ಪಾಪದಿಂದ, **ಪಾಪಲೋಕಮ್** - ನರಕಲೋಕಕ್ಕೆ ಜೀವನನ್ನು ಒಯ್ಯುತ್ತದೆ · **ಉಭಾಭ್ಯಾಮೇವ** - ಪುಣ್ಯಪಾಪಗಳೆರಡರಿಂದಲೂ, **ಮನುಷ್ಯಲೋಕಮ್** - ಮನುಷ್ಯಲೋಕಕ್ಕೆ ಜೀವನನ್ನು ಒಯ್ಯುತ್ತದೆ·

## ತಾತ್ಪರ್ಯ

ಜೀವನು ಜಗತ್ತಿಗೆ ಬಂದಾಗ ಪುಣ್ಯಪಾಪಗಳನ್ನು ಸಂಪಾದಿಸುತ್ತಾನೆ · ಉದಾನವಾಯುವು

---

೧· ಮೂಲನಾಡ್ಯಃ ಶಾಖಾನಾಡ್ಯಃ ಪ್ರತಿಶಾಖಾನಾಡ್ಯಶ್ಚ ಸರ್ವಾ ಮಿಲಿತ್ವಾ ದ್ವಾಸಪ್ತತಿಕೋಟಯೋ ದ್ವಾಸಪ್ತತಿಲಕ್ಷಾಣಿ ದಶಸಹಸ್ರಾಣಿ ಶತದ್ವಯ ಮೇಕಾ ಚ ಭವಂತಿ - ಆನಂದಭಾಷ್ಯ·

ದೇಹದಿಂದ ಮೇಲಕ್ಕೆ ಹೊರಟು, ಜೀವನುಮಾಡಿದ ಪುಣ್ಯದ ಸಹಾಯದಿಂದ ಅವನನ್ನು ಪುಣ್ಯಲೋಕವಾದ ಸ್ವರ್ಗಕ್ಕೆ ಒಯ್ಯುತ್ತದೆ· ಜೀವನುಮಾಡಿದ ಪಾಪದ ಸಹಾಯದಿಂದ ಪಾಪಲೋಕವಾದ ನರಕಕ್ಕೆ ಕರೆದೊಯ್ಯುತ್ತದೆ · ಉದಾನವು ಪುಣ್ಯಪಾಪಗಳೆರಡರಿಂದ ಕೂಡಿದ ಜೀವನನ್ನು ಮರ್ತ್ಯಲೋಕಕ್ಕೆ ಸೇರಿಸುತ್ತದೆ·

## ರಂಗರಾಮಾನುಜಭಾಷ್ಯ

**ಅಥೈಕಯೋರ್ಧ್ವ ಉದಾನಃ ಇತಿ** । **ಅಥೇತಿ** ವಾಕ್ಯೋಪಕ್ರಮೇ । ಏಕಯಾ ಕಯಾಚಿನ್ನಾಡ್ಯೋರ್ಧ್ವಮುಖ ಉದಾನಃ ಪುಣ್ಯೇನ ಹೇತುನಾ ಪುಣ್ಯಂ ಸ್ವರ್ಗಾದಿಲೋಕಮ್, ಪಾಪೇನ ಹೇತುನಾ ಪಾಪಂ ನರಕಾದಿಲೋಕಮ್, ಪುಣ್ಯಪಾಪಾಭ್ಯಾಮೇವ ಮನುಷ್ಯಲೋಕಂ ನಯತಿ ।·

ಅತ್ರ, 'ಆತ್ಮಾನಂ ವಾ ಪ್ರವಿಭಜ್ಯ ಕಥಂ ಪ್ರತಿತಿಷ್ಠತಿ' ಇತಿ ಪ್ರಶ್ನಸ್ಯ 'ಯಥಾ ಸಮ್ರಾಡೇವ' ಇತ್ಯಾರಭ್ಯ 'ಉಭಾಭ್ಯಾಮೇವ ಮನುಷ್ಯಲೋಕಮ್' ಇತ್ಯೇತದಂತಂ ಪ್ರತಿವಚನಮ್ । ತನ್ಮಧ್ಯೇ 'ಅಥೈಕಯೋರ್ಧ್ವ ಉದಾನಃ ಇತ್ಯನೇನ 'ಕೇನೋತ್ಕ್ರಮತೇ' ಇತಿ ಚತುರ್ಥಪ್ರಶ್ನಸ್ಯೋತ್ತರಮುಕ್ತಂ ಭವತಿ ॥

## ಅನುವಾದ

**ಅಥೈಕಯೋರ್ಧ್ವಮಿತಿ** । [೧]ಅಥಶಬ್ದವು ವಾಕ್ಯಾರಂಭಸೂಚಕವು . **ಏಕಯಾ** ಯಾವುದೋ ಒಂದು ನಾಡಿಯಿಂದ ಮೇಲ್ಮುಖವಾಗಿ ಉದಾನವಾಯುವು ಪುಣ್ಯದ ಕಾರಣದಿಂದ ಪುಣ್ಯಲೋಕವಾದ ಸ್ವರ್ಗ ಮುಂತಾದ ಲೋಕಗಳಿಗೆ, ಪಾಪದ ಕಾರಣದಿಂದ ಪಾಪಲೋಕವಾದ ನರಕ ಮೊದಲಾದ ಲೋಕಗಳಿಗೆ, ಪುಣ್ಯಪಾಪಗಳಿಂದಲೇ ಮನುಷ್ಯಲೋಕಕ್ಕೆ (ಜೀವನನ್ನು) ಒಯ್ಯುತ್ತದೆ·

ಇಲ್ಲಿ 'ಆತ್ಮಾನಂ ವಾ ಪ್ರವಿಭಜ್ಯ ಕಥಂ ಪ್ರತಿತಿಷ್ಠತಿ?' ಎಂಬ ಪ್ರಶ್ನೆಗೆ 'ಯಥಾ ಸಮ್ರಾಡೇವ' ಎಂದು ಆರಂಭಿಸಿ 'ಉಭಾಭ್ಯಾಮೇವ ಮನುಷ್ಯಲೋಕಮ್' ಎನ್ನುವವರೆಗೆ ಉತ್ತರವು ಅದರ ನಡುವೆ, 'ಅಥೈಕಯೋರ್ಧ್ವ ಉದಾನಃ' ಎಂಬ ವಾಕ್ಯದಿಂದ 'ಕೇನೋತ್ಕ್ರಮತೇ?' ಎಂಬ ನಾಲ್ಕನೆಯ ಪ್ರಶ್ನೆಗೆ ಉತ್ತರವನ್ನು ಹೇಳಿದಂತಾಯಿತು·

## ಭಾಷ್ಯಸಾರ

ಮುಖ್ಯಪ್ರಾಣನ ಐದು ಪ್ರಭೇದಗಳಲ್ಲಿ ಒಂದಾದ ಉದಾನವಾಯುವು ದೇಹದಲ್ಲಿ ಜರುಗಿಸುವ

---

೧· ಈ ಅಭಿಪ್ರಾಯದಿಂದಲೇ ಮಂತ್ರದಮೊದಲ ಶಬ್ದವಾಗಿ ಪ್ರಯುಕ್ತವಾದ 'ಅಥ' ಎಂಬ ಅವ್ಯಯವು ಮತ್ತೊಂದು ಪ್ರಶ್ನೆಯ ಉತ್ತರದ ಆರಂಭವನ್ನು ಸೂಚಿಸುತ್ತದೆ·

ವ್ಯಾಪಾರ ಪ್ರಕೃತವಿಷಯ · ಈ ವಿಷಯಕ್ಕೆ ದೇಹೋತ್ಕ್ರಮಣವನ್ನು ಮುಖ್ಯಪ್ರಾಣನು ಯಾವುದರ ಮುಖಾಂತರ ಮಾಡಬಲ್ಲನು? ಎಂಬ ನಾಲ್ಕನೆಯ ಪ್ರಶ್ನೆಯ ಉತ್ತರವು ತೀರ ಹತ್ತಿರವಾಗಿದೆ · ಆದ್ದರಿಂದ ಆಚಾರ್ಯ ಪಿಪ್ಪಲಾದರು ಮುಖ್ಯಪ್ರಾಣನು ತನ್ನನ್ನೇ ಐದಾಗಿ ಕಲ್ಪಿಸಿ ದೇಹದಲ್ಲಿ ನೆಲೆಸುವ ಬಗೆಯನ್ನು ಬಣ್ಣಿಸುವಾಗಲೇ, ಅದಕ್ಕೆ ಸಂಗತವೂ ಉಪೋದ್ಬಲಕವೂ ಆದ ಪ್ರಾಣೋತ್ಕ್ರಮಣದ ಸಂಗತಿಯನ್ನು ವಿವರಿಸಲು ಆರಂಭಿಸುತ್ತಾರೆ·

ಜಗತ್ತು ಗತಿಶೀಲವಾದಂತೆ ಅಲ್ಲಿ ತನ್ನ ಬದುಕನ್ನು ಕಂಡುಕೊಳ್ಳುವ ಜೀವಸಾಮಾನ್ಯವೂ ಕ್ರಿಯಾಶೀಲವಾಗಿದೆ · ಕ್ರಿಯೆಯೆಂದ ಮೇಲೆ ಅದಕ್ಕೊಂದು ಫಲವಿರಲೇಬೇಕು · ಜೀವನು ಹಮ್ಮಿಕೊಳ್ಳುವ ಕಾಯಕ ಶಾಸ್ತ್ರಸಮ್ಮತವಾದರೆ ಅದರಿಂದ ಸಿದ್ಧವಾಗುವ ಫಲ ಸುಕೃತವೆಂದಾಗುತ್ತದೆ · ಒಂದು ವೇಳೆ ಅವನ ಕಾರ್ಯಗಳಿಗೆ ಶಾಸ್ತ್ರಸಮ್ಮತಿಯಿಲ್ಲದಿದ್ದರೆ ಅವುಗಳ ಫಲವು ದುಷ್ಕೃತವೆನಿಸಿಕೊಳ್ಳುತ್ತದೆ ಉದಾನವಾಯುವು ನೂರೊಂದು ಪ್ರಧಾನನಾಡಿಗಳಲ್ಲಿ ಒಂದಾದ ಸುಷುಮ್ನಾ ಎಂಬ ಮೇಲ್ಮುಖವಾಗಿ ಹರಡಿದ ನಾಡಿಯಮುಖಾಂತರ ಮೇಲಕ್ಕೆ ಚಲಿಸಿ, ಜೀವನನ್ನು ಅವನ ಸುಕೃತದ ಸಹಾಯದಿಂದ ಸ್ವರ್ಗಾದಿಲೋಕಗಳಿಗೆ ಒಯ್ಯುತ್ತದೆ·

ಜೀವನ ಪಾಪದ ಮೊತ್ತ ಹಿರಿದಾದರೆ ಅವನನ್ನು ಉದಾನವೇ ನರಕಕ್ಕೂ ಒಯ್ಯಬಲ್ಲದು · ಪುಣ್ಯ-ಪಾಪಗಳ ಸಮಪರಿಮಾಣವು ಅವನು ಮನುಷ್ಯ ಲೋಕಕ್ಕೆ ಬರಲು ಕಾರಣವಾಗುವುದು · ಹೀಗೆ ಜನ್ಮಾಂತರ-ಲೋಕಾಂತರಗಳ ನಿಯೋಜನೆಯಲ್ಲಿ ಉದಾನವಾಯುವಿನ ಪಾತ್ರ ಹಿರಿದು ಎಂದು ವ್ಯಕ್ತವಾಗುತ್ತದೆ·

## ಮಂತ್ರ - ೮

आदित्यो ह वै बाह्यः प्राण उदयति एष ह्येनं
चाक्षुषं प्राणमनुगृह्णानः ; पृथिव्यां या
देवता, सैषा पुरुषस्यापानमवष्टभ्य । अन्तरा
यदाकाशस्स समानः । वायुर्व्यानः ।। ८ ।।

**ಆದಿತ್ಯೋ ಹ ವೈ ಬಾಹ್ಯಃ ಪ್ರಾಣ ಉದಯತ್ಯೇಷ ಹ್ಯೇನಂ ಚಾಕ್ಷುಷಂ ಪ್ರಾಣಮನುಗೃಹ್ಣಾನಃ; ಪೃಥಿವ್ಯಾಂ ಯಾ ದೇವತಾ, ಸೈಷಾ ಪುರುಷಸ್ಯಾಪಾನಮವಷ್ಟಭ್ಯ । ಅಂತರಾ ಯದಾಕಾಶಃ ಸ ಸಮಾನಃ । ವಾಯುರ್ವ್ಯಾನಃ ॥**

## ಪ್ರತಿಪದಾರ್ಥ

**ಬಾಹ್ಯಃ** - ಹೊರಗಿನ, **ಪ್ರಾಣಃ** - ಪ್ರಾಣನು, ಆದಿತ್ಯೋ ಹ **ವೈ** - ಸೂರ್ಯನಷ್ಟೇ! ಏಷಃ - ಈ ಆದಿತ್ಯನು, **ಉದಯತಿ** - ಉದಯಿಸುತ್ತ, ಏನಮ್ - ಈ, **ಚಾಕ್ಷುಷಮ್ ಪ್ರಾಣಮ್** - ಕಣ್ಣಿನಲ್ಲಿರುವ ಪ್ರಾಣವನ್ನು, **ಅನುಗೃಹ್ಣಾನಃ** - ರೂಪವನ್ನು ನೋಡುವಂತೆ ಅನುಗ್ರಹಿಸುತ್ತಾನೆ · (**ತಥಾ** - ಹಾಗೆಯೇ), **ಪೃಥಿವ್ಯಾಮ್** - ಪೃಥ್ವಿಯಲ್ಲಿ, **ಯಾ ದೇವತಾ** - ಯಾವ ದೇವತೆಯು (ಅಗ್ನಿ-ರೂಪದಲ್ಲಿ) ಇರುವುದೋ, **ಸಾ ದೇವತಾ** - ಆ ದೇವತೆಯು, **ಪುರುಷಸ್ಯ** - ಪುರುಷನ ದೇಹ-ದಲ್ಲಿರುವ, **ಅಪಾನಮ್** - ಅಪಾನವಾಯುವನ್ನು, **ಅವಷ್ಟಭ್ಯ** - ಆಶ್ರಯಿಸಿ (ಕೆಳಭಾಗಕ್ಕೆ ಒಯ್ಯುವ ಅನುಗ್ರಹವನ್ನು ಮಾಡುತ್ತದೆ) · **ಅಂತರಾ** - ಭೂಮಿ-ಗಗನಗಳ ನಡುವೆ, **ಯದಾಕಾಶಃ** - ಯಾವ ಅವಕಾಶವಿದೆಯೋ (ಅಲ್ಲಿರುವ ವಾಯುವೇ), **ಸಮಾನಃ** - ಸಮಾನವಾಯುವು · ಸಮಾನವಾಯು-ವಿನ ನಡುವೆ ಇರುವ ಆಕಾಶದಲ್ಲಿರುವ, **ವಾಯುಃ** - ವಾಯುವು, **ವ್ಯಾನಃ** - ವ್ಯಾನವು·

## ತಾತ್ಪರ್ಯ

ಬಾಹ್ಯಪ್ರಾಣನೇ ಆದಿತ್ಯನು; ಅಧಿದೈವತನಾದ ಈ ಆದಿತ್ಯನು ಉದಯಿಸಿ ಕಣ್ಣುಗಳಿಗೆ ಬೆಳಕಿನ ಸಹಾಯವನ್ನು ಒದಗಿಸಿ ನೋಡುವಂತೆ ಅನುಗ್ರಹಿಸುತ್ತಾನೆ · ಪೃಥಿವಿಯಲ್ಲಿರುವ ಅಗ್ನಿದೇವತೆಯೇ ಪುರುಷದೇಹದ ಅಪಾನವಾಯುವನ್ನು ಕೆಳಮುಖವಾಗಿ ಆಕರ್ಷಿಸುತ್ತದೆ · ದ್ಯುಲೋಕ ಹಾಗೂ ಪೃಥಿವಿ-ಗಳ ಮಧ್ಯೆ ಇರುವ ವಾಯುವು ಸಮಾನವಾಯುವು · ಸಮಾನವಾಯು ಹಾಗೂ ಆಕಾಶಗಳ ನಡುವೆ ಇರುವ ವಾಯುವಿಗೆ ವ್ಯಾನವೆಂದು ಹೆಸರು·

## ರಂಗರಾಮಾನುಜಭಾಷ್ಯ

**'ಕಥಂ ಬಾಹ್ಯಮಭಿದತ್ತೇ'** ಇತ್ಯಸ್ಯೋತ್ತರಮಾಹ - **ಆದಿತ್ಯೋ ಹ ವೈ ಬಾಹ್ಯಃ** ಇತಿ **ಚಾಕ್ಷುಷಂ ಪ್ರಾಣಂ** ಚಕ್ಷುರ್ಗೋಲಕವರ್ತೀಂದ್ರಿಯಮ್ ಆಲೋಕಾಖ್ಯಸಹಕಾರಿಪ್ರದಾನೇ ನಾನುಗೃಹ್ಣಾನಃ ಬಹಿರಾದಿತ್ಯರೂಪೇಣೋದೇತಿ । ಯದ್ಯಪಿ ಪ್ರಾಣಸ್ಯಾದಿತ್ಯಾತ್ಮಕತ್ವಂ ನ ಸಂಭವತಿ; ತಯೋರ್ಭೇದಾತ್ - ತಥಾಪಿ ಪ್ರಾಣಕಲಾಯಾಃ ಸರ್ವತ್ರಸತ್ತ್ವೇನ ಅಭೇದೋಪಚಾರಾದ್ವಾ ಉಪಾಸನಾರ್ಥತಯಾ ವಾ ಬಾಹ್ಯಾನಾಮಾದಿತ್ಯಾದೀನಾಂ ಪ್ರಾಣಾತ್ಮಕತ್ವೋಕ್ತಿರಿತಿ ದ್ರಷ್ಟವ್ಯಮ್ । **ಪೃಥಿವ್ಯಾಂ ಯಾ ದೇವತಾ ಇತಿ** । ಪೃಥಿವ್ಯಾಂ ಯಾ ಪ್ರಾಣಕಲಾರೂಪಾ ದೇವತಾ, ಸಾ

ಪುರುಷಸ್ಯಾಪಾನವಾಯ್ವಧಿಷ್ಠಿತಪಾಯೂಪಸ್ಥೇಂದ್ರಿಯೇ ಅನುಗೃಹ್ಣಾನಾ ವರ್ತತೇ ಇತ್ಯರ್ಥಃ । ಅಂತರಾ ಯದಾಕಾಶಃ ಸ ಸಮಾನಃ । ಆಕಾಶಾಧಿಷ್ಠಾತ್ರ್ಯ ಪ್ರಾಣಕಲಯಾ ಆಕಾಶಸ್ಯೌಪಚಾರಿಕೀ ಅಭೇದೋಕ್ತಿರ್ದ್ರಷ್ಟವ್ಯಾ । ಏವಮುತ್ತರತ್ರಾಪಿ । 'ಮಧ್ಯೇ ತು ಸಮಾನಃ । ಏಷ ಹ್ಯೇತದ್ಧುತಂ ನಯತಿ' ಇತ್ಯಧ್ಯಾತ್ಮಂ ಪ್ರಾಣಾಪಾನಸ್ಥಾನ ಮಧ್ಯವರ್ತಿತಯಾ ಹಿ ಸಮಾನೋ ನಿರ್ದಿಷ್ಟಃ । ಬಾಹ್ಯಾಕಾಶಸ್ಯಾಪಿ, ಬಾಹ್ಯಪ್ರಾಣರೂಪಸ್ಯ ಆದಿತ್ಯಸ್ಯ ಬಾಹ್ಯಾಪಾನರೂಪಪೃಥಿವ್ಯಾಶ್ಚ ಮಧ್ಯವರ್ತಿತಯಾ ಸಮಾನತ್ವಂ ಯುಜ್ಯತೇ ಇತಿ ಭಾವಃ । **ವಾಯುರ್ವ್ಯಾನಃ** । ಬಾಹ್ಯೋ ವಾಯುಃ ತ್ವಗಿಂದ್ರಿಯಾದ್ಯನುಗ್ರಹತೋ ವ್ಯಾನರೂಪಃ ।

## ಅನುವಾದ

(ಮುಖ್ಯಪ್ರಾಣನು) ಹೊರಗಿದ್ದು ಹೇಗೆ ಧರಿಸುತ್ತಾನೆ? ಎಂಬ ಪ್ರಶ್ನೆಗೆ ಉತ್ತರವನ್ನು ಹೇಳುತ್ತಾರೆ - **ಆದಿತ್ಯೋ ಹ ವೈ ಚಾಕ್ಷುಷಂ ಪ್ರಾಣಮ್** - ಕಣ್ಣುಗುಡ್ಡೆಯಲ್ಲಿ ಇರುವ ಇಂದ್ರಿಯವನ್ನು ಬೆಳಕೆಂಬ ಸಹಕಾರಿಕಾರಣವನ್ನು ಕೊಡುವುದರ ಮೂಲಕ ಅನುಗ್ರಹಿಸುತ್ತ ಹೊರಗೆ ಸೂರ್ಯನ ರೂಪದಲ್ಲಿ ಉದಯಿಸುತ್ತಾನೆ· ಪ್ರಾಣ ಹಾಗೂ ಸೂರ್ಯರಲ್ಲಿ ಭಿನ್ನತೆಯಿರುವುದರಿಂದ ಪ್ರಾಣನು ಸೂರ್ಯನಾಗಲು ಸಾಧ್ಯವಿಲ್ಲ· ಹಾಗಾದರೂ ಪ್ರಾಣಕಲೆಯು ಎಲ್ಲ ಕಡೆ ಇದ್ದು, ಅವರಿಬ್ಬರೂ ಒಂದು ಎಂದು ಭಾವಿಸುವುದರಿಂದ ಅಥವಾ ಉಪಾಸನೆಗಾಗಿ ಸೂರ್ಯ ಮುಂತಾದ ಬಾಹ್ಯಪ್ರಾಣ-ಗಳನ್ನು ಪ್ರಾಣನೆಂದು ಹೇಳಿರುವುದರಿಂದ ಅವರಿಬ್ಬರೂ ಒಂದಾಗಬಲ್ಲರು ಎಂದು ತಿಳಿಯಬೇಕು **ಪೃಥಿವ್ಯಾಂ ಯಾ ದೇವತಾ ಇತಿ** । ಭೂಮಿಯಲ್ಲಿ ಪ್ರಾಣಕಲೆಯರೂಪದಲ್ಲಿ ಯಾವ ದೇವತೆಯಿರುವಳೋ, ಅವಳು ಪುರುಷನ ಅಪಾನವಾಯುವಿಗೆ ಆಶ್ರಯವಾದ ಗುದ ಹಾಗೂ ಮೂತ್ರೇಂದ್ರಿಯಗಳನ್ನು ಅನುಗ್ರಹಿಸುವವಳಾಗಿದ್ದಾಳೆ· **ಅಂತರಾ ಯಥಾಕಾಶಃ ಸ ಸಮಾನಃ** । ಆಕಾಶವನ್ನು ಆಶ್ರಯಿಸಿರುವ ಪ್ರಾಣಕಲೆಯೊಂದಿಗೆ ಆಕಾಶದ ಅಭೇದವು ಔಪಚಾರಿಕವಾದುದು· ಮುಂದೆಯೂ ಹೀಗೆಯೇ ತಿಳಿಯಬೇಕು· 'ಮಧ್ಯೆ ಸಮಾನವಾಯುವಿದೆ· ಇದು ಸೇವಿಸಿದ ಆಹಾರವನ್ನು ಸಪ್ತಧಾತುಗಳಲ್ಲಿ ಸಮವಾಗಿ ಹಂಚುತ್ತದೆ' ಎಂದು ಸಮಾನವು ದೇಹದಲ್ಲಿ ಪ್ರಾಣಾಪಾನ ಸ್ಥಾನಗಳ ನಡುವೆಯಿದೆ ಎಂದು ನಿರ್ದಿಷ್ಟವಾಗಿದೆ· ಬಾಹ್ಯಾಕಾಶವೂ ಬಾಹ್ಯಪ್ರಾಣನಾದ ಆದಿತ್ಯ ಮತ್ತು ಬಾಹ್ಯಾಪಾನವಾದ ಪೃಥ್ವಿಗಳ ನಡುವೆ ಇರುವುದರಿಂದ ಸಮಾನವೆಂದು ಎನಿಸಿಕೊಳ್ಳಲು ಯೋಗ್ಯವಾಗಿದೆ· **ವಾಯುರ್ವ್ಯಾನಃ** ಬಾಹ್ಯವಾಯುವು ತ್ವಗಿಂದ್ರಿಯಕ್ಕೆ ಅನುಗ್ರಹಕಾರಿಯಾದುದರಿಂದ ವ್ಯಾನರೂಪವಾಗಿದೆ

## ಭಾಷ್ಯಸಾರ

ಮುಖ್ಯಪ್ರಾಣನು ಹೇಗೆ ಹೊರಗಿನಿಂದ ಹಾಗೂ ಒಳಗಡೆಯಿಂದ ದೇಹಧಾರಣೆ ಮಾಡುತ್ತಾನೆ? ಈ ಪ್ರಶ್ನೆಯು ನಮ್ಮ ದೇಹದಲ್ಲಿರುವ ಪ್ರಾಣಿಗಳಿಗೂ ದೇಹದಹೊರಗೆ ಇರುವ ಪ್ರಾಣಿಗಳಿಗೂ ಏರ್ಪಟ್ಟ ಸಂಬಂಧದ ಮೇಲೆ ಬೆಳಕನ್ನು ಬೀರುತ್ತದೆ· ಕಾರಣ ಸೂರ್ಯ, ಭೂಮಿ, ಬಾಹ್ಯಾಕಾಶ ಮತ್ತು ವಾಯು-

ಗಳೇ ಪ್ರಾಣಾಪಾನ ಸಮಾನ ವ್ಯಾನಗಳು · ಈ ಬಾಹ್ಯಪ್ರಾಣಗಳು ಆಯಾಯಾ ಇಂದ್ರಿಯಗಳ ಕಾರ್ಯಕ್ಕೆ ನೆರವಾಗಿ ದೇಹವನ್ನು ಬೀಳಗೊಡದೇ ರಕ್ಷಿಸುತ್ತವೆ·

ಆದಿತ್ಯನು ಬಾಹ್ಯಪ್ರಾಣನು · ಇವನು ಕಣ್ಣಿನಲ್ಲಿರುವ ಆಧ್ಯಾತ್ಮಿಕ ಪ್ರಾಣವಾಯುವನ್ನು ಬೆಳಕು ಕೊಡುವುದರ ಮೂಲಕ ಅನುಗ್ರಹಿಸಿದರೆ, ಪೃಥಿವೀ ಅಭಿಮಾನಿದೇವತೆಯು ಆಧ್ಯಾತ್ಮಿಕ ಅಪಾನವಾಯು-ವನ್ನು ಕೆಳಮುಖವಾಗಿ ಆಕರ್ಷಿಸಿ ಸಹಕರಿಸುತ್ತದೆ· ಆದ್ದರಿಂದ ಶರೀರಪಾತದ ಭೀತಿಗೆ ಅವಕಾಶವಿಲ್ಲ· ಪೃಥಿವಿಯು ಧಾರಣಶಕ್ತಿಯಿಂದ ಅದನ್ನು ಒಡೆಯುತ್ತದೆ · ಅವನಿ-ಅಂಬರಗಳ ನಡುವಿನ ಆಕಾಶವೇ ಸಮಾನ· ಇದು ಸಮಾನವಾಯುವಿಗೆ ಉಪಕಾರಿ· ಅಲ್ಲಿರುವ ವಾಯುವು ಆಧ್ಯಾತ್ಮಿಕ ವ್ಯಾನವಾಯು-ವನ್ನು ಅನುಗ್ರಹಿಸುವುದರಿಂದ ವ್ಯಾನವೆಂದೇ ಕರೆಯಲ್ಪಟ್ಟಿದೆ·

## ಮಂತ್ರ - ೯

तेजो ह वा उदानः । तस्मादुपशान्ततेजाः
पुनर्भवमिन्द्रियैर्मनसि संपद्यमानैः ।। 9 ।।

ತೇಜೋ ಹ ವಾ ಉದಾನಃ । ತಸ್ಮಾದುಪಶಾಂತತೇಜಾಃ
ಪುನರ್ಭವಮಿಂದ್ರಿಯೈರ್ಮನಸಿ ಸಂಪದ್ಯಮಾನೈಃ ॥

### ಪ್ರತಿಪದಾರ್ಥ

**ತೇಜಃ ಹ ವೈ** - ಪ್ರಸಿದ್ಧವಾದ ತೇಜಸ್ಸೇ, **ಉದಾನಃ** - ಉದಾನವು, **ತಸ್ಮಾತ್** - ಆದ್ದರಿಂದ, **ಉಪಶಾಂತತೇಜಾಃ** - ದೇಹದ ಔಷ್ಣ್ಯವು ಕಡಿಮೆಯಾಗಲು ಜೀವನು, **ಮನಸಿ** - ಮನಸ್ಸಿನಲ್ಲಿ, **ಸಂಪದ್ಯಮಾನೈಃ** - ಒಂದುಗೂಡುತ್ತಿರುವ, **ಇಂದ್ರಿಯೈಃ** - ಇಂದ್ರಿಯಗಳೊಂದಿಗೆ, **ಪುನರ್ಭವಮ್** - ದೇಹಾಂತರವನ್ನು, **ಪ್ರಾಪ್ನೋತಿ** - ಪಡೆಯುತ್ತಾನೆ·

### ತಾತ್ಪರ್ಯ

ಬಾಹ್ಯತೇಜಸ್ಸು ಉದಾನವು · ಇದೇ ಉನ್ನಯನಕ್ಕೆ ಕಾರಣ · ಆದ್ದರಿಂದ ದೇಹದ ಬಿಸಿ ಆರುತ್ತಿರಲು, ಜೀವನು ಮನಸ್ಸಿನೊಂದಿಗೆ ಒಂದುಗೂಡಿದ ಇಂದ್ರಿಯಗಳೊಂದಿಗೆ ಪುನರ್ಜನ್ಮವನ್ನು ಪಡೆಯುತ್ತಾನೆ·

## ರಂಗರಾಮಾನುಜಭಾಷ್ಯ

**ತೇಜೋ ಹ ವಾ ಉದಾನಃ** । ಬಾಹ್ಯಂ ತೇಜಃ ಉನ್ನಯನ ಹೇತುತ್ವಾದುದಾನಃ **ತಸ್ಮಾದುಪಶಾಂತತೇಜಾಃ** ಇತಿ । ಯಸ್ಮಾದ್ಧೇತೋಃ ತೇಜಸ ಏವೋದಾನಶಬ್ದಿತೋನ್ನಯನಹೇತುತ್ವಮ್, ತಸ್ಮಾದೇವ **ಉಪಶಾಂತತೇಜಾಃ** ಅಪಗತದೇಹೌಷ್ಣ್ಯಸ್ಸನ್ **ವಿಷಮುಮೂರ್ಷುರ್ಜೀವಃ** **ಯಚ್ಚಿತ್ತಃ** - ಯಸ್ಮಿಂಶ್ಚಿತ್ತಂ ಯಸ್ಯ ಸಃ ಯಚ್ಚಿತ್ತಃ - ಯತ್ಕಾಮ ಇತಿ ಯಾವತ್ - ಯಾದೃಶ ಮನುಷ್ಯದೇವಾದಿಜನ್ಮಕಾಮೋ ಭವತಿ, ತತ್ಕಾಮನಾವಶೇನ ಪುನರ್ಭವಶಬ್ದಿತಾಂ ಪುನರುತ್ಪತ್ತಿಂ ಪ್ರಾಪ್ತುಮ್, 'ವಾಙ್ಮನಸಿ ಸಂಪದ್ಯತೇ', 'ವಾಙ್ಮನಸಿ ದರ್ಶನಾಚ್ಛಬ್ದಾಚ್ಚ' ಇತಿ ಶ್ರುತಿಸೂತ್ರತದ್ಭಾಷ್ಯೋಕ್ತರೀತ್ಯಾ ಮನಸಾ ಸಂಶ್ಲೇಷವಿಶೇಷಮಾಪನ್ನೈರ್ವಾಗಾದಿಭಿಃ ದಶಭಿರಿಂದ್ರಿಯೈಃ ಸಹಿತಂ ಪ್ರಾಣಂ ಸಂಮುಮೂರ್ಷುರ್ಜೀವ ಆಯಾತಿ ।

ಯದ್ಯಪಿ 'ಇಮಮಾತ್ಮಾನಮಂತಕಾಲೇ ಸರ್ವೇ ಪ್ರಾಣಾ ಅಭಿಸಮಾಯಂತಿ' ಇತಿ ಮುಖ್ಯಾಮುಖ್ಯಪ್ರಾಣಾನಾಂ ಜೀವೋಪಗಮ ಏವ ಶ್ರೂಯತೇ; ನ ತು ಜೀವಸ್ಯ ಪ್ರಾಣೋಪಗಮಃ । ಸೂತ್ರಿತಂ ಚ 'ಸೋಧ್ಯಕ್ಷೇ ತದುಪಗಮಾದಿಭ್ಯ' ಇತಿ । ತದರ್ಥಸ್ತು ತದಧಿಕರಣಭಾಷ್ಯೇ ಉಕ್ತಃ । ತತ್ರ ಹಿ - 'ಯಥಾ ವಾಙ್ಮನಸಿ ಸಂಪದ್ಯತೇ ಮನಃ ಪ್ರಾಣ' ಇತಿ ವಚನಾನುರೋಧೇನ ಮನಃಪ್ರಾಣಯೋರೇವ ವಾಙ್ಮನಸಯೋಃ ಸಂಪತ್ತಿಃ । ತಥಾ, 'ಪ್ರಾಣಸ್ತೇಜಸಿ' ಇತಿವಚನಾತ್ ತೇಜಸ್ಯೇವ ಪ್ರಾಣಃ ಸಂಪದ್ಯತೇ ಇತಿಪ್ರಾಪ್ತೇ - ಉಚ್ಯತೇ - ಸೋಧ್ಯಕ್ಷ ಇತಿ । ಸಃ - ಪ್ರಾಣಃ ಅಧ್ಯಕ್ಷೇ - ಕರಣಾಧಿಪೇ ಜೀವೇ ಸಂಪದ್ಯತೇ । ಕುತಃ? ತದುಪಗಮಾದಿಭ್ಯಃ । ಪ್ರಾಣಸ್ಯ ಜೀವೋಪಗಮಸ್ತಾವತ್ ಶ್ರೂಯತೇ । 'ಏವಮೇವಮಾತ್ಮನ ಮಂತಕಾಲೇ ಸರ್ವೇ ಪ್ರಾಣಾಃ ಅಭಿಸಮಾಯಂತಿ' ಇತಿ । ತಥಾಜೀವೇನ ಸಹ ಪ್ರಾಣಸ್ಯೋತ್ಕ್ರಾಂತಿಃ ಶ್ರೂಯತೇ, ॥ ತಮುತ್ಕ್ರಾಮಂತಂ ಪ್ರಾಣೋಽನೂತ್ಕ್ರಾಮತೀತಿ । ಪ್ರತಿಷ್ಠಾ ಚ ಜೀವೇನ ಸಹ ಶ್ರೂಯತೇ ಕಸ್ಮಿನ್ನುತ್ಕ್ರಾಂತೇ ಉತ್ಕ್ರಾಂತೋ ಭವಿಷ್ಯಾಮಿ । ಕಸ್ಮಿನ್ವಾ ಪ್ರತಿಷ್ಠಿತೇ ಪ್ರತಿಷ್ಠಾಸ್ಯಾಮಿ' ಇತಿ । ಏವಂ ಜೀವೇನ ಸಂಯುಜ್ಯ ತೇನ ಸಹ ತೇಜಸ್ಸಂಪತ್ತಿರಿಹ - 'ಪ್ರಾಣಸ್ತೇಜಸಿ' ಇತ್ಯುಚ್ಯತೇ । ತತಶ್ಚ ಪ್ರಾಣೋ ಜೀವೇನ ಸಂಯುಜ್ಯೈವ ತೇಜಸಿ ಸಂಬಧ್ಯತೆ । ಯಥಾ ಯಮುನಾಯಾಃ ಗಂಗಯಾ ಸಂಯುಜ್ಯ ಸಾಗರಗಮನೇಽಪಿ, ಯಮುನಾ ಸಾಗರಂ ಗಚ್ಛತೀತಿ ವಚೋಽನವಿರುಧ್ಯತೇ ತದ್ವತ್' ಇತಿ ಭಾಷಿತಮ್ - ತಥಾಪಿ ಅಸ್ಯ ಪ್ರಾಣಪ್ರಶಂಸಾಪರತ್ವಾಜ್ಜೀವಸ್ಯ ಪ್ರಾಣೋಪಗಮೋಕ್ತಿರುಪಪದ್ಯತ ಇತಿ ದ್ರಷ್ಟವ್ಯಮ್ !

**ಪ್ರಾಣಸ್ತೇಜಸಾ** ಇತಿ । ಅನಂತರಮ್ 'ಪ್ರಾಣಸ್ತೇಜಸಿ ತೇಜಃ ಪರಸ್ಯಾಂ ದೇವತಾಯಾಮ್' ಇತಿ ಶ್ರುತ್ಯುಕ್ತರೀತ್ಯಾ ತೇಜಸಾ ಪರಮಾತ್ಮನಾ ಚ ಸಂಯುಕ್ತಃ ಪ್ರಾಣಃ ತತ್ತಜ್ಜೀವಾತ್ಮ ಸಂಕಲ್ಪಾನುಸಾರೇಣ ತಂ ತಂ ಲೋಕಂ ಮ್ರಿಯಮಾಣಂ ನಯತಿ । ತತಶ್ಚ ತೇಜಸಾ ಸಹಿತಸ್ಯೈವ

ಪ್ರಾಣಸ್ಯೋಽನ್ನಯನಹೇತುತ್ವಾತ್ತೇಜಸೋಽಪ್ಯುನ್ನಯನಹೇತುತ್ವೇನೋದಾನತ್ವಂ ಯುಕ್ತಮಿತಿ ಭಾವಃ। ಯದ್ಯಪಿ, 'ಪ್ರಾಣಸ್ತೇಜಸಿ' ಇತ್ಯತ್ರ ತೇಜಶ್ಶಬ್ದೇನ ಸರ್ವಾಣಿ ಭೂತಾನ್ಯುಚ್ಯಂತೇ, ನ ತೇಜೋ-ಮಾತ್ರಮಿತಿ 'ಭೂತೇಷು ತಚ್ಛ್ರುತೇಃ' 'ನೈಕಸ್ಮಿನ್ ದರ್ಶಯತೋ ಹಿ' ಇತಿ ಸೂತ್ರಭಾಷ್ಯಯೋಃ ಪ್ರತಿಪಾದಿತಮ್ ತಥಾಪಿ, 'ಭೂತಾಂತರ ಸಂಸೃಷ್ಟಮೇವ ತೇಜಃ ತೇಜಶ್ಶಬ್ದೇನಾಭಿಧೀಯತೇ' ಇತಿ ಭಾಷ್ಯೋಕ್ತೇಃ ತೇಜಸಃ ಪ್ರಾಧಾನ್ಯಾತ್ ತದುಕ್ತಿರುಪಪದ್ಯತೇ ಇತಿ ದ್ರಷ್ಟವ್ಯಮ್ ॥

## ಅನುವಾದ

**ತೇಜೋ ಹ ವಾ ಉದಾನಃ** । ಬಾಹ್ಯತೇಜಸ್ಸನ್ನು ಮೇಲೆ ಒಯ್ಯುವುದರಿಂದ ಇದು ಉದಾನವಾಯುವು · **ತಸ್ಮಾದುಪಶಾಂತತೇಜಾಃ ಪ್ರಾಣಮಾಯಾತಿ** । ಉದಾನ ಶಬ್ದದಿಂದ ಕರೆಯಲಾದ ತೇಜಸ್ಸೇ ಉತ್ಕ್ರಮಣಕ್ಕೆ ಕಾರಣವು · ಆ ಕಾರಣದಿಂದಲೇ - **ಉಪಶಾಂತ ತೇಜಾಃ** ಶರೀರದಶಾಖವು ಹೊರಟುಹೋಗಿ ಸಾವನ್ನಪ್ಪಲು ಅಣಿಯಾದ ಈ ಜೀವನು ಯಚ್ಚಿತ್ತಃ ಯಾವುದರಲ್ಲಿ ಮನಸ್ಸುಳ್ಳವನಾಗಿದ್ದಾನೆಯೋ, ಯಾವರೀತಿಯ ಮನುಷ್ಯದೇವಾದಿಜನ್ಮಗಳಲ್ಲಿ ಅಭಿಲಾಷೆಯುಳ್ಳವ-ನಾಗಿದ್ದಾನೆಯೋ; ಆ ಇಚ್ಛೆಗೆ ವಶನಾಗಿ 'ಪುನರ್ಭವ' ಎಂದು ಕರೆಯಲಾಗುವ ಜನ್ಮಾಂತರವನ್ನು ಪಡೆಯಲು, 'ವಾಙ್ಮನಸಿ ಸಂಪದ್ಯತೇ' ಎಂಬ ಶ್ರುತಿಯ ಮತ್ತು 'ವಾಙ್ಮನಸಿ ದರ್ಶನಾಚ್ಛಬ್ದಾಚ್ಚ' ಎಂಬ ಸೂತ್ರದ ಭಾಷ್ಯಗಳಲ್ಲಿ ಹೇಳಿದ ಪ್ರಕಾರವಾಗಿ ಮನಸ್ಸಿನೊಂದಿಗೆ ವಿಶಿಷ್ಟವಾದ ಸಂಬಂಧವನ್ನು ಹೊಂದಿದ ಮಾತು ಮೊದಲಾದ ಹತ್ತುಇಂದ್ರಿಯಗಳಿಂದ ಪ್ರಾಣನನ್ನು ಮರಣೋನ್ಮುಖನಾದ ಜೀವನು ಸೇರುತ್ತಾನೆ

ವಾಸ್ತವಿಕವಾಗಿ, 'ಇಮಮಾತ್ಮಾನಮಂತಕಾಲೇ ಸರ್ವೇಪ್ರಾಣಾ ಅಭಿಸಮಾಯಂತಿ' 'ಮರಣಕಾಲದಲ್ಲಿ ಈ ಜೀವನನ್ನು ಎಲ್ಲ ಪ್ರಾಣಗಳು ಬಂದು ಸೇರುತ್ತವೆ' ಎಂಬ ಶ್ರುತಿಯಲ್ಲಿ ಜೀವನಲ್ಲಿ ಮುಖ್ಯಾಮುಖ್ಯ ಪ್ರಾಣಗಳ ಸೇರ್ಪಡೆಯನ್ನು ತಿಳಿಸಲಾಗಿಯೇ ವಿನಃ ಪ್ರಾಣಗಳಲ್ಲಿ ಜೀವನ ಸೇರುವಿಕೆಯನ್ನಲ್ಲ · (ವ್ಯಾಸರೂ ಇದನ್ನೇ) 'ಸೋಽಧ್ಯಕ್ಷೇ ತದುಪಗಮಾದಿಭ್ಯಃ' ಎಂಬ ಸೂತ್ರದಲ್ಲಿ ಸೂಚಿಸಿದ್ದಾರೆ· ಈ ಸೂತ್ರದ ಅರ್ಥವು ಆ ಅಧಿಕರಣದ ಭಾಷ್ಯದಲ್ಲಿ ವಿವರಿಸಲ್ಪಟ್ಟಿದೆ · ಅಲ್ಲಿ 'ಯಥಾ ವಾಙ್ಮನಸಿ ಸಂಪದ್ಯತೇ ಮನಃಪ್ರಾಣೇ' ಎಂಬ ಶ್ರುತಿವಾಕ್ಯದಂತೆ ವಾಗೀಂದ್ರಿಯವು ಮನಸ್ಸಿನಲ್ಲಿಯೂ, ಮನಸ್ಸು ಪ್ರಾಣನಲ್ಲಿಯೂ ಸೇರುತ್ತದೆ-ಯೆಂದೂ, 'ಪ್ರಾಣಸ್ತೇಜಸಿ' ಎಂಬ ವಚನದಂತೆ ತೇಜಸ್ಸಿನಲ್ಲಿಯೇ ಪ್ರಾಣವು ಸೇರುತ್ತದೆಯೆಂದು ತಿಳಿದು ಬದಲಾಗಿ ಹೇಳುತ್ತೇವೆ · 'ಸೋಽಧ್ಯಕ್ಷೇ' ಇತ್ಯಾದಿ ಈ ಪ್ರಾಣನು ಅಧ್ಯಕ್ಷೇ ಇಂದ್ರಿಯಗಳಿಗೆ ಅಧಿಪತಿ-ಯಾದ ಜೀವನಲ್ಲಿ ನೆಲೆಸುತ್ತಾನೆ · ಏಕೇ? **ತದುಪಗಮಾದಿಭ್ಯಃ** ಪ್ರಾಣನು ಜೀವನನ್ನು ಕೂಡುವುದು ಶ್ರುತಿಯಲ್ಲಿಯೇ ಸ್ಪಷ್ಟವಾಗುತ್ತದೆ **'ಏವಮೇವಮಾತ್ಮಾನ** ಇತಿ । ಎಂದು ಹಾಗೆಯೇ ಜೀವ-ನೊಂದಿಗೆ ಪ್ರಾಣನ ಉತ್ಕ್ರಾಂತಿಯನ್ನು **ತಮುತ್ಕ್ರಾಮಂತಮ್** ಇತಿ । 'ಉತ್ಕ್ರಮಿಸುವ ಜೀವನನ್ನು ಪ್ರಾಣವು ಅನುಸರಿಸಿ ಉತ್ಕ್ರಮಣವನ್ನು ಮಾಡುತ್ತಾನೆ; ಅನುಸರಿಸಿ ಉತ್ಕ್ರಮಿಸುವ ಪ್ರಾಣನನ್ನು ಉಳಿದ ಪ್ರಾಣಗಳು ಅನುಸರಿಸುತ್ತವೆ' ಎಂಬ ಶ್ರುತಿವಾಕ್ಯವು ಸ್ಪಷ್ಟಪಡಿಸುತ್ತದೆ · ಜೀವನೊಂದಿಗೆ ನೆಲೆಸುವುದನ್ನೂ 'ಕಸ್ಮಿನ್ನುತ್ಕ್ರಾಂತೇ ಇತಿ । ಯಾರು ಉತ್ಕ್ರಮಿಸಿದರೆ ಉತ್ಕ್ರಮಿಸುವೆನು, ಮತ್ತೂ ಯಾರು ನೆಲೆಸಿದರೆ'

ಎಂಬ ಶ್ರುತಿಯು ಹೇಳುತ್ತದೆ · ಈ ರೀತಿ ಜೀವನೊಂದಿಗೆ ಸಂಬಂಧವನ್ನು ಹೊಂದಿ, ಅವನೊಂದಿಗೆ ತೇಜಸ್ಸಿನ ಸೇರುವಿಕೆಯನ್ನು ಇಲ್ಲಿ 'ಪ್ರಾಣಸ್ತೇಜಸಿ' ಎಂಬ ವಾಕ್ಯದಲ್ಲಿ ಹೇಳಲಾಗಿದೆ· ಆದ್ದರಿಂದ ಪ್ರಾಣನು ಜೀವನೊಂದಿಗೆ ಸಂಬಂಧವನ್ನು ಪಡೆದೇ ತೇಜಸ್ಸಿನೊಂದಿಗೆ ಸಂಬಂಧವನ್ನು ಪಡೆಯುತ್ತಾನೆ · ಯಮುನಾ ನದಿಯು ಗಂಗಾನದಿಯನ್ನು ಸೇರಿ ಸಾಗರವನ್ನು ತಲುಪಿದರೂ 'ಯಮುನಾ ನದಿಯು ಸಾಗರವನ್ನು ಸೇರುತ್ತದೆ' ಎಂಬ ಮಾತು ಹೇಗೆ ವಿರುದ್ಧವಲ್ಲವೋ ಹಾಗೇ ಎಂಬ ಭಾಷ್ಯವಿದೆ; ಹಾಗಾದರೂ ಈ ಪ್ರಕರಣವು ಪ್ರಾಣದ ಪ್ರಶಂಸೆಗಾಗಿ ಇರುವುದರಿಂದ ಜೀವನು ಪ್ರಾಣನನ್ನು ಪಡೆಯುತ್ತಾನೆ ಎಂಬ ಉಕ್ತಿಯು ಸಂಗತವಾಗುತ್ತದೆಯೆಂದು ತಿಳಿಯಬೇಕು·

**ಪ್ರಾಣಸ್ತೇಜಸಾ ಲೋಕಂ ನಯತಿ ।** ಆಮೇಲೆ, 'ಪ್ರಾಣಃ ತೇಜಸಿ' 'ತೇಜಃಪರಸ್ಯಾಂ ದೇವತಾಯಾಮ್' ಎಂದು ವೇದೋಕ್ತಕ್ರಮದಲ್ಲಿ ತೇಜಸ್ಸಿನಿಂದಲೂ, ಪರಮಾತ್ಮನಿಂದಲೂ ಕೂಡಿದ ಪ್ರಾಣನು ಆಯಾಯಾ ಜೀವ ಸಂಕಲ್ಪಕ್ಕೆ ಅನುಸಾರವಾಗಿ ಆಯಾಯಾ ಲೋಕಕ್ಕೆ ಮೃತನಾಗುತ್ತಿರುವವನ್ನು ಒಯ್ಯುತ್ತಾನೆ · ಆದ್ದರಿಂದ ತೇಜಸ್ಸಿನಿಂದ ಕೂಡಿದ ಪ್ರಾಣನೇ ಮೇಲ್ಮುಖಚಲನೆಗೆ ಕಾರಣನಾಗಿರುವುದರಿಂದ, ತೇಜಸ್ಸೂ ಉನ್ನಯನಕ್ಕೆ ಕಾರಣವಾಗಿರುವುದರಿಂದ ಉದಾನವಾಗುವುದು ಯೋಗ್ಯವೇ ಆಗಿದೆ· 'ಪ್ರಾಣಸ್ತೇಜಸಿ' ಎಂಬಲ್ಲಿ 'ತೇಜಸ್' ಶಬ್ದವು ಎಲ್ಲ ಭೂತಗಳನ್ನು ಹೇಳುತ್ತದೆಯೇ ಹೊರತು ಕೇವಲ ತೇಜಸ್ಸನ್ನಲ್ಲ ಎಂದು 'ಭೂತೇಷು ತಚ್ಛ್ರುತೇಃ' ಹಾಗೂ 'ನೈಕಸ್ಮಿನ್ ದರ್ಶಯತೋ ಹಿ' ಎಂಬ ಸೂತ್ರಗಳ ಭಾಷ್ಯದಲ್ಲಿ ವಿವರಿಸಲಾಗಿದೆ · ಆದರೂ 'ಭೂತಾಂತರ ಸಂಸೃಷ್ಟಮೇವ ತೇಜಃ ತೇಜಶ್ಶಬ್ದೇನಾಭಿಧೀಯತೇ' ಎಂಬ ಭಾಷ್ಯಸೂಕ್ತಿಯಂತೆ ತೇಜಸ್ಸೇಪ್ರಧಾನವಾಗಿರುವುದರಿಂದ ಈ ಮಾತು ಯುಕ್ತವೆಂದು ತಿಳಿಯಬೇಕು·

## ಭಾಷ್ಯಸಾರ

ಬಾಹ್ಯತೇಜಸ್ಸು ಪ್ರಸಿದ್ಧವಾದುದು · ಇದು ಆಧ್ಯಾತ್ಮಿಕ ಉದಾನವಾಯುವನ್ನು ಉಪಕರಿಸುವುದರಿಂದ ಇದನ್ನು ಉದಾನವೆಂದು ಕರೆಯಲಾಗಿದೆ · ಮುಖ್ಯಪ್ರಾಣನು ಬಾಹ್ಯತೇಜಸ್ಸಿನ ಸಹಕಾರದಿಂದ ಹೊರಪ್ರಪಂಚವನ್ನು ಪಾಲಿಸುತ್ತಾನೆ · ಉದಾನವಾಯುವನ್ನು ಪೋಷಿಸಿ ಅಂತರಂಗಿಕ ಲೋಕವನ್ನು ಅನುಗ್ರಹಿಸುತ್ತಾನೆ· ಆತ್ಮಧಾರಣೆಯನ್ನು ನಿರ್ವಹಿಸುತ್ತಾನೆ·

ಮೇಲಕ್ಕೆಚಿಮ್ಮುವುದೇ ಉದಾನವಾಯುವಿನ ಹುಟ್ಟುಗುಣ · ಹೊರಗಿನಿಂದ ತೇಜೋರೂಪಿ·ಯಾದ ಪ್ರಾಣದ ಉಪಕಾರವಿರುವುದರಿಂದ ಉದಾನವಾಯುವು ಶರೀರವನ್ನು ಬಿಟ್ಟು ಹೊರ-ಹೊರಡಲಾರದು · ಅದೇ ಬಾಹ್ಯತೇಜಸ್ಸಿನ ಅನುಗ್ರಹ ಆರಿಹೋದಾಗ, ಉದಾನವಾಯುವು ಹೊರ-ಹೊರಡುತ್ತದೆ · ಜಾಠರಾಗ್ನಿಯ ಶಾಖವನ್ನು ನಿವಾ[illegible]ಸುತ್ತದೆ · ಮನಸ್ಸು, ಇಂದ್ರಿಯಗಳು ಸೇರಿ, ಜೀವನನ್ನು ದೇಹಾಂತರಕ್ಕೆ (ಜನ್ಮಾಂತರಕ್ಕೆ) ಒಯ್ಯುತ್ತವೆ·

## ಮಂತ್ರ - ೧೦

यच्चित्तस्तेनैष प्राणमायाति । प्राणस्तेजसा युक्तः ।
स हात्मना यथासंकल्पितं लोकं नयति ।। 10 ।।

ಯಚ್ಚಿತ್ತಸ್ತೇನೈಷ ಪ್ರಾಣಮಾಯಾತಿ । ಪ್ರಾಣಸ್ತೇಜಸಾ
ಯುಕ್ತಃ । ಸ ಹಾತ್ಮನಾ ಯಥಾಸಂಕಲ್ಪಿತಂ ಲೋಕಂ
ನಯತಿ ॥

### ಪ್ರತಿಪದಾರ್ಥ

**ಏಷಃ** - ಈ ಜೀವನು, **ಯಚ್ಚಿತ್ತಃ** - (ಮರಣಕಾಲದಲ್ಲಿ) ಯಾವ ಆಸೆಯನ್ನು ಹೊಂದಿರುವನೋ, **ತೇನ** - ಆ ಆಸೆಯಿಂದ, **ಪ್ರಾಣಮ್** - ಪ್ರಾಣವನ್ನು, **ಆಯಾತಿ** - ಹೊಂದುತ್ತಾನೆ· **ಪ್ರಾಣಃ** - ಈ ಪ್ರಾಣನು, **ತೇಜಸಾ** - ತೇಜಸ್ಸಿನೊಂದಿಗೂ, **ಆತ್ಮನಾ(ಚ) ಸಹ** - ಪರಮಾತ್ಮನೊಂದಿಗೂ ಕೂಡಿದವನಾಗಿ, **ಯಥಾಸಂಕಲ್ಪಿತಮ್** - ಜೀವನ ಇಚ್ಛೆಗೆ ಅನುಗುಣವಾದ, **ಲೋಕಮ್** - ಲೋಕಕ್ಕೆ, **ನಯತಿ** - ಈ ಜೀವನನ್ನು ಒಯ್ಯುತ್ತಾನೆ·

### ತಾತ್ಪರ್ಯ

ಪ್ರಾಣೋತ್ಕ್ರಮಣಕಾಲದಲ್ಲಿ ಜೀವನಿಗೆ ಯಾವ ಆಸೆಯುಂಟಾಗುವುದೋ ಅದನ್ನೇ ಜೀವನು ಹೊಂದುತ್ತಾನೆ · ಈ ಪ್ರಾಣನು ಪಂಚಭೂತಗಳು ಹಾಗೂ ಪರಮಾತ್ಮ ಇವರನ್ನು ಕೂಡಿ ಜೀವನ ಸಂಕಲ್ಪಾನುಸಾರ ದೇವ-ಮನುಷ್ಯ-ತಿರ್ಯಗಾದಿಲೋಕಗಳಿಗೆ ಜೀವನನ್ನು ಒಯ್ಯುತ್ತಾನೆ·

(ರಂಗರಾಮಾನುಜಭಾಷ್ಯ ಮತ್ತು ಅನುವಾದ ೯ನೇ ಮಂತ್ರದೊಡನೆ ಸೇರಿದೆ)

### ಭಾಷ್ಯಸಾರ

ಜೀವನು ಶರೀರದಿಂದ ಶರೀರಕ್ಕೆ ಸಾಗುತ್ತಾನೆ · ಆಯಾಯಾ ಶರೀರಗಳ ಸಹಕಾರದಿಂದ ಕರ್ಮಫಲವನ್ನು ಅನುಭವಿಸುತ್ತಾನೆ · ದೇಹದಿಂದ ದೇಹಕ್ಕೆ ಹೋಗುವ ಈ ಜನ್ಮಾಂತರ ಪ್ರಕ್ರಿಯೆಯನ್ನು ಆಚಾರ್ಯರು ವಿವರಿಸುತ್ತಾರೆ·

ಸಾವಿನ ದವಡೆಯಲ್ಲಿ ಸಿಕ್ಕಿದ್ದರೂ ಮನುಷ್ಯರ ಮನಸ್ಸು ಏನನ್ನಾದರೂ ಹಂಬಲಿಸದೇ (ಬಯಸದೇ) ಇರದು · ಆ ಹಂಬಲ ಅಥವಾ ಬಯಕೆಯ ಸಂಸ್ಕಾರವನ್ನು ಒಳಗೂ ಮಾಡಿಕೊಂಡ ಮನಸ್ಸು ಜೀವನ ಪ್ರಾಣನೊಂದಿಗೆ ಒಂದು ವಿಶಿಷ್ಟವಾದ ಸಂಬಂಧತಂತುವನ್ನು ನೇಯ್ದುಕೊಳ್ಳುತ್ತದೆ · ಈ ಪ್ರಾಣನು ಪಂಚಭೂತಗಳೊಂದಿಗೂ, ಭೂತಾಧಿಪತಿಯಾದ ಪರಮಾತ್ಮನೊಂದಿಗೂ ಸಂಪರ್ಕವನ್ನು ನಿರ್ಮಿಸಿ- ಕೊಂಡು ಸಂಕಲ್ಪಿಸಿದ ಲೋಕಕ್ಕೆ ಜೀವನನ್ನು ಕರೆದೊಯ್ಯುತ್ತದೆ· ಹೀಗೆ ಜೀವನು ಅವನ ಅಭಿಲಾಷೆಗೆ ಅನುಗುಣವಾಗಿ ದೇವ-ಮನುಷ್ಯ-ತಿರ್ಯಕ್ ಮುಂತಾದ ಜನ್ಮಗಳನ್ನು ಪಡೆಯುತ್ತಾನೆ·

ಯಂ ಯಂ ವಾಪಿಸ್ಮರನ್‌ಭಾವಂ ತ್ಯಜತ್ಯಂತೇ ಕಳೇಬರಮ್ ।
ತಂ ತಮೇವೈತಿ ಕೌಂತೇಯ ಸದಾತದ್ಭಾವ ಭಾವಿತಃ ॥

ಎಂದುಗೀತೆಯು ಹೇಳುತ್ತದೆ·

## ಮಂತ್ರ - ೧೧

य एवं विद्वान् प्राणं वेद, न हास्य प्रजा हीयते;
अमृतो भवति । तदेष श्लोकः ।। 11 ।।

ಯ ಏವಂ ವಿದ್ವಾನ್ ಪ್ರಾಣಂ ವೇದ, ನ ಹಾಸ್ಯ
ಪ್ರಜಾ ಹೀಯತೇ; ಅಮೃತೋ ಭವತಿ । ತದೇಷ
ಶ್ಲೋಕಃ ॥

### ಪ್ರತಿಪದಾರ್ಥ

ಏವಮ್ - ಈ ರೀತಿಯಾಗಿರುವ, ಪ್ರಾಣಮ್ - ಪ್ರಾಣವನ್ನು, ಯಃ ವಿದ್ವಾನ್ - ಯಾವ ವಿದ್ವಾಂಸನು, ವೇದ - ಉಪಾಸಿಸುತ್ತಾನೆಯೋ, ಅಸ್ಯ - ಇಂತಹ ವಿದ್ವಾಂಸನ, ಪ್ರಜಾಃ - ಪುತ್ರಪೌತ್ರಾದಿ- ಸಂತತಿಯು, ನ ಹೀಯತೇ - ನಾಶವಾಗುವುದಿಲ್ಲ, ಅಮೃತೋ ಭವತಿ - ಅವನು ಅಮರ- ನಾಗುತ್ತಾನೆ (ಮೋಕ್ಷವನ್ನು ಪಡೆಯುತ್ತಾನೆ) ತತ್ - ಪ್ರಾಣವಿಷಯಕ ತಿಳಿವನ್ನು ಕುರಿತು ಏಷಶ್ಲೋಕಃ - ಈ ಶ್ಲೋಕವು ಹೇಳಲ್ಪಟ್ಟಿದೆ·

### ತಾತ್ಪರ್ಯ

ಉತ್ಪತ್ತಿ ಮುಂತಾದ ವಿಶಿಷ್ಟ ಗುಣಗಳನ್ನು ಪಡೆದ ಪ್ರಾಣನನ್ನು ಉಪಾಸಿಸುವ ವಿದ್ವಾಂಸನ ಪುತ್ರಪೌತ್ರಾದಿಸಂತತಿಯು ನಶಿಸಲಾರದು · ಇವನೂ ಉಪಾಸನೆಯ ಮೂಲಕ ಮೋಕ್ಷವನ್ನು ಪಡೆಯು- ತ್ತಾನೆ· ಈ ವಿಷಯವನ್ನು ಈ ಶ್ಲೋಕವು ತಿಳಿಸುತ್ತದೆ·

## ರಂಗರಾಮಾನುಜಭಾಷ್ಯ

ಯ ಏವಂ ವಿದ್ವಾನ್ ಇತಿ । ಏವಮುತ್ಪತ್ತ್ಯಾಗಮನಪ್ರತಿಷ್ಠಾದಿಪ್ರಕಾರೇಣ ಪ್ರಾಣಂ ಯ ಉಪಾಸ್ತೇ, ತಸ್ಯ ಪುತ್ರಪೌತ್ರಾದಿಲಕ್ಷಣಪ್ರಜಾಹಾನಿಃ ನ ಭವತಿ । ಪರಿಶುದ್ಧಪ್ರತ್ಯಗಾತ್ಮಸ್ವರೂಪಪ್ರತಿಪತ್ತಿಮುಖೇನ ಬ್ರಹ್ಮೋಪಾಸನಪ್ರೀತಿದ್ವಾರಾ ಮೋಕ್ಷಹೇತುಶ್ಚ ಭವತೀತಿ ದ್ರಷ್ಟವ್ಯಮ್ । ತದೇಷಶ್ಲೋಕಃ । ತತ್ ಪ್ರಾಣವೇದನಮಧಿಕೃತ್ಯ ಪ್ರವೃತ್ತೋಽಯಂ ಶ್ಲೋಕ ಇತ್ಯರ್ಥಃ ॥

## ಅನುವಾದ

ಯ ಏವಂ ವಿದ್ವಾನ್ ಇತಿ । ಹೀಗೆ ಉತ್ಪತ್ತಿ, ಗತಿ, ಸ್ಥಿತಿ ಮುಂತಾದ ವಿಶೇಷಗಳನ್ನು ಪಡೆದ ಪ್ರಾಣನನ್ನು, ಯಾರು ಉಪಾಸಿಸುತ್ತಾರೆಯೋ, ಅಂತಹವನ ಮಗ-ಮೊಮ್ಮಗರೇ ಮೊದಲಾದ ಸಂತತಿಯು ನಾಶವಾಗಲಾರದು · ನಿರ್ಮಲವಾದ ಜೀವಸ್ವರೂಪದ ತಿಳಿವಿನ ಮೂಲಕ ಬ್ರಹ್ಮೋಪಾಸನೆಯು ಏರ್ಪಡುವುದರ ಮುಖಾಂತರ ಮೋಕ್ಷಕ್ಕೆ ಕಾರಣವಾಗುತ್ತದೆಯೆಂದು ತಿಳಿಯತಕ್ಕದ್ದು · **ತದೇಷಶ್ಲೋಕಃ । ತತ್** ಪ್ರಾಣನ ಬಗ್ಗೆ ಉಂಟಾದ ತಿಳಿವನ್ನು ಕುರಿತು ಈ ಶ್ಲೋಕವು ಪ್ರವೃತ್ತವಾಗಿದೆ

## ಭಾಷ್ಯಸಾರ

ಪ್ರಶ್ನೆ ಮತ್ತು ಉತ್ತರಗಳಿಂದ ಈ ಭಾಗದಲ್ಲಿ ಪ್ರಾಣನ ಹುಟ್ಟು, ನೆಲೆ, ಬರವು ಮುಂತಾದ ವಿಶೇಷ ಚಟುವಟಿಕೆಗಳನ್ನು ವಿವರಿಸಲಾಗಿದೆ · ಇಂತಹ ಪ್ರಾಣನನ್ನು ಉಪಾಸಿಸುವವನು ವಿದ್ವಾಂಸನೇ ಸರಿ ಅವನ ಸಂತತಿಯು ಸದಾ ಸಮೃದ್ಧವಾಗಿರುತ್ತದೆ · ಅದಕ್ಕೆ ಹಾನಿ ಖಂಡಿತಕ್ಕೂ ತಟ್ಟಲಾರದು · ಅವನು ಮುಕ್ತಿಯನ್ನೂ ಪಡೆಯುತ್ತಾನೆ·

ಇಲ್ಲಿ [೧]ಮುಕ್ತಿಯೇ ಪ್ರಧಾನ ಪ್ರಯೋಜನ · ಸಂತತಿಯ ಸಮೃದ್ಧಿ ಆನುಷಂಗಿಕ ಲಾಭ; [೨]ಅಮೃತತ್ವವೆಂದರೆ ಮೋಕ್ಷ · ಪ್ರಾಣನವಿಷಯದಲ್ಲಿ ಉಂಟಾದ ತಿಳಿವು ಸಾಕ್ಷಾತ್ ಮೋಕ್ಷಕಾರಣವಲ್ಲ ಆದರೂ ಪ್ರಾಣನ ಹುಟ್ಟನ್ನು ಅರಿಯುವಾಗ ಪರಮಾತ್ಮನನ್ನು ಸ್ಮರಿಸಲೇಬೇಕು · ಹೀಗೆ ಪರಮಾತ್ಮಜ್ಞಾನದಿಂದ ಮೋಕ್ಷ ಲಭಿಸುವುದು ಅಥವಾ [೩]ಅಮೃತಭಾವವೆಂದರೆ ಬಹುಕಾಲ ಬದುಕುವುದು·

---

೧· ಅತ್ರ ಮುಕ್ತಿಃ ಮುಖ್ಯಂ ಫಲಮ್ । ಪ್ರಾಣೋತ್ಪತ್ತಿಕಾರಣತಯಾ ಪರಮಾತ್ಮವಿಜ್ಞಾನಾತ್ ಪ್ರಜಾವಿಚ್ಛೇದರಾಹಿತ್ಯಂ ತು ಫಲಮಾನುಷಂಗಿಕಮ್ - ಆನಂದಭಾಷ್ಯ·

೨· ಅಮೃತತ್ವಂ ಚೇಹ ಮೋಕ್ಷಃ - ಸುಬೋಧಿನೀ

೩· ಅಮೃತತ್ವಂ ಚಿರಕಾಲಜೀವಿತ್ವಮಾತ್ರ ವಾ - ಸುಬೋಧಿನೀ·

## ಮಂತ್ರ - ೧೨

उत्पत्तिमायतिं स्थानं विभुत्वं चैव पंचधा ।
अध्यात्मं चैव प्राणस्य विज्ञायामृतमश्नुते
विज्ञायामृतमश्नुत इति ।। 12 ।।

ಉತ್ಪತ್ತಿಮಾಯತಿಂ ಸ್ಥಾನಂ ವಿಭುತ್ವಂ ಚೈವ ಪಂಚಧಾ ।
ಅಧ್ಯಾತ್ಮಂ ಚೈವ ಪ್ರಾಣಸ್ಯ ವಿಜ್ಞಾಯಾಮೃತಮಶ್ನುತೇ
ವಿಜ್ಞಾಯಾಮೃತಮಶ್ನುತ ಇತಿ ॥

### ಪ್ರತಿಪದಾರ್ಥ

**ಪ್ರಾಣಸ್ಯ** - ಪ್ರಾಣನ, **ಉತ್ಪತ್ತಿಮ್** - (ಪರಮಾತ್ಮನಿಂದ) ಹುಟ್ಟನ್ನೂ, **ಆಯತಿಮ್** - (ಮನಸ್ಸಿನೊಂದಿಗೆ) ದೇಹಪ್ರವೇಶವನ್ನೂ, **ಸ್ಥಾನಮ್** - (ಪಾಯ್ವಾದಿ ಇಂದ್ರಿಯಗಳಲ್ಲಿ) ನೆಲೆಯನ್ನೂ, **ಪಂಚಧಾ ವಿಭುತ್ವಮ್** - (ಚಕ್ರವರ್ತಿಯಂತೆ) ಪ್ರಾಣಾಪಾನಾದಿರೂಪದಿಂದ ಐದು ಭಾಗಗಳಾಗಿ ನಡೆಸುವ ಪ್ರಭುತ್ವವನ್ನೂ, **ಅಧ್ಯಾತ್ಮಮ್** - ದೇಹದೊಳಗಿದ್ದು ಮಾಡುವ ಧಾರಣೆಯನ್ನೂ, **ವಿಜ್ಞಾಯ** - ತಿಳಿದು, **ಅಮೃತಮಶ್ನುತೇ** - ಮೋಕ್ಷವನ್ನು ಪಡೆಯುತ್ತಾನೆ·

### ತಾತ್ಪರ್ಯ

ಪರಮಾತ್ಮನಿಂದ ಪ್ರಾಣನ ಹುಟ್ಟು, ಮನಸ್ಸಿನೊಂದಿಗೆ ದೇಹಪ್ರವೇಶ, ಪಾಯು ಮುಂತಾದ ಪ್ರಾಣಗಳಲ್ಲಿ ನೆಲೆ, ತನ್ನನ್ನೇ ಐದಾಗಿ ಹಂಚಿಕೊಟ್ಟು ನಡೆಸುವ ಪ್ರಭುತ್ವ ಹಾಗೂ ಬಾಹ್ಯ ಮತ್ತು ಆಂತರಿಕ ದೇಹಧಾರಣೆ - ಇವುಗಳನ್ನು ಅರಿತುಕೊಂಡು ಮಾಡುವ ಪರಮಾತ್ಮೋಪಾಸನೆಯಿಂದ ಮೋಕ್ಷವನ್ನು ಪಡೆಯುತ್ತಾನೆ·

### ರಂಗರಾಮಾನುಜಭಾಷ್ಯ

**ಉತ್ಪತ್ತಿಮಾಯತಿಮ್** ಇತಿ । **ಉತ್ಪತ್ತಿಮ್** - ಪ್ರಾಣಸ್ಯ ಪರಮಾತ್ಮನ ಉತ್ಪತ್ತಿಂ, ಮನಸಾ ಸಹಾಽಽಗಮನಮಸ್ಮಿನ್ ಶರೀರೇ, ಪಾಯೂಪಸ್ಥಾದಿಸ್ಥಾನೇಷು ಸ್ಥಿತಿಮ್, 'ಯಥಾ ಸಮ್ರಾಡೇ-ವಾಧಿಕೃತಾನ್' ಇತ್ಯುಕ್ತಂ ಸ್ವಾಮ್ಯಲಕ್ಷಣಂ ವಿಭುತ್ವಮ್, ಅಧ್ಯಾತ್ಮಮ್ ಪ್ರಾಣಾದಿರೂಪೇಣ

ಪಂಚಧಾ ಸ್ಥಿತಿಮ್, ಚಶಬ್ದಸಮುಚ್ಚಿತಮಾದಿತ್ಯಾದಿರೂಪೇಣ ಪಂಚಧಾ ಬಾಹ್ಯಮವಸ್ಥಾನಂ ಚ ವಿಜ್ಞಾಯ **ಅಮೃತಮ್** - ಮೋಕ್ಷಮ್ ಅಶ್ನುತೇ ಪ್ರಾಪ್ನೋತಿ । ದ್ವಿರ್ವಚನಂ ಪ್ರತಿವಚನ ಸಮಾಪ್ತಿದ್ಯೋತನಾರ್ಥಮ್ ।

## ಅನುವಾದ

**ಉತ್ಪತ್ತಿಮ್** ಪರಮಾತ್ಮನಿಂದ ಪ್ರಾಣನ ಹುಟ್ಟನ್ನೂ, ಮನಸ್ಸಿನೊಂದಿಗೆ ಈ ಶರೀರಕ್ಕೆ ಬರವನ್ನೂ, ಪಾಯು-ಉಪಸ್ಥಾದಿ ಅವಯವಗಳಲ್ಲಿ ಇರುವಿಕೆಯನ್ನೂ 'ಯಥಾ ಸಮ್ರಾಡೇವಾಧಿಕೃತಾನ್' ಎಂದು ಹೇಳಿದ ಒಡೆತನವನ್ನು ದೇಹದಲ್ಲಿ ಪ್ರಾಣಾಪಾನ ಮುಂತಾದ ಐದುರೂಪಗಳಲ್ಲಿ ಇರುವುದನ್ನೂ, ಚಕಾರ-ದಿಂದ ಸೇರಿಸಲಾದ ಆದಿತ್ಯಾದಿ ಪ್ರಾಣಗಳರೂಪದಲ್ಲಿ ಐದಾಗಿ ದೇಹದ ಹೊರಗೆ ಇರುವುದನ್ನೂ ಅರಿತು **ಅಮೃತಮ್** - ಮುಕ್ತಿಯನ್ನು **ಅಶ್ನುತೇ** - ಅನುಭವಿಸುತ್ತಾನೆ · ಉತ್ತರವು ಮುಗಿಯಿತು ಎಂಬುದನ್ನು ಸೂಚಿಸುವ ಸಲುವಾಗಿ (ವಿಜ್ಞಾಯಾಮೃತಮಶ್ನುತೇ) ಎರಡು ಬಾರಿ ಹೇಳಿದೆ·

## ಭಾಷ್ಯಸಾರ

ಕುಮಾರ ಕೌಸಲ್ಯನ ಜಿಜ್ಞಾಸೆಯನ್ನು ಉಪಶಮನಮಾಡುವುದಕ್ಕೋಸ್ಕರ ಆಚಾರ್ಯ ಪಿಪ್ಪಲಾದರು ಅನುಗ್ರಹಿಸಿದ ಉಪದೇಶಗಳನ್ನೆಲ್ಲವನ್ನೂ ಈ ಮಂತ್ರದಲ್ಲಿ ಸಂಗ್ರಹಿಸಲಾಗಿದೆ · ಆಚಾರ್ಯರು ಪ್ರಾಣ-ತತ್ವದ ಹುಟ್ಟನ್ನು ಹಿಡಿದು ದೇಹಧಾರಣೆಯವರೆಗಿನ ಸಂಪೂರ್ಣ ಪ್ರಕ್ರಿಯೆಗಳನ್ನು ವಿವರಿಸಿದ್ದಾರೆ · ಮುಖ್ಯಪ್ರಾಣನ ಉಪಾಸನೆಯಿಂದ ಪರಂಪರೆಯ ಮೋಕ್ಷಸಾಮ್ರಾಜ್ಯವನ್ನೇ ಸೇರಬಹುದು ಎಂದು ಫಲೋಲ್ಲೇಖನವನ್ನೂ ಮಾಡಿದ್ದಾರೆ·

ಮೂರನೆಯ ಪ್ರಶ್ನೆ ಮುಗಿದುದು

☆ ※ ☆

# ಚತುರ್ಥ ಪ್ರಶ್ನಃ

## ಮಂತ್ರ - ೧

अथ हैनं सौर्यायणी गार्ग्यः पप्रच्छ ।
भगवन् ! एतस्मिन् कानि स्वपन्ति? कान्यस्मिन् जाग्रति?
कतर एष देवः स्वप्नान् पश्यति? कस्यैतत् सुखं भवति?
कस्मिन्नु सर्वे (सं) प्रतिष्ठिता भवन्तीति ॥ 1 ॥

ಅಥ ಹೈನಂ ಸೌರ್ಯಾಯಣೀ ಗಾರ್ಗ್ಯಃ ಪಪ್ರಚ್ಛ ।
ಭಗವನ್! ಏತಸ್ಮಿನ್ ಕಾನಿ ಸ್ವಪಂತಿ? ಕಾನ್ಯಸ್ಮಿನ್ ಜಾಗ್ರತಿ?
ಕತರ ಏಷ ದೇವಃ ಸ್ವಪ್ನಾನ್ ಪಶ್ಯತಿ? ಕಸ್ಯೈತತ್ ಸುಖಂ
ಭವತಿ? ಕಸ್ಮಿನ್ನು ಸರ್ವೇ (ಸಂ)ಪ್ರತಿಷ್ಠಿತಾ ಭವಂತೀತಿ ॥

### ಪ್ರತಿಪದಾರ್ಥ

**ಅಥ ಹ** - (ಅಶ್ವಲಾಯನನ ಪ್ರಶ್ನೆಯನ್ನು ಉತ್ತರಿಸಿದ) ನಂತರ, **ಸೌರ್ಯಾಯಣೀ ಗಾರ್ಗ್ಯಃ** - ಸೂರ್ಯಾಯಣನ ಮಗನಾದ ಗಾರ್ಗ್ಯನು, **ಏನಮ್** - ಈ ಪಿಪ್ಪಲಾದರನ್ನು, '**ಹೇ ಭಗವನ್** - ಪೂಜ್ಯರೇ!', **ಏತಸ್ಮಿನ್** [೧]**ಪುರುಷೇ** - ಜೀವನು ಮಲಗಿರಲು, **ಕಾನಿ** - ಯಾವ ಇಂದ್ರಿಯಗಳು, **ಸ್ವಪಂತಿ** - ಮಲಗುತ್ತವೆ? **ಅಸ್ಮಿನ್** - ಈ ಜೀವನು ಮಲಗಿರಲು, **ಕಾನಿ** - ಯಾವ ಇಂದ್ರಿಯ-ಗಳು, **ಜಾಗ್ರತಿ** - ಎಚ್ಚರವಾಗಿರುತ್ತವೆ? **ಏಷ ದೇವಃ** - ಪ್ರಕಾಶದಿಂದ ಕೂಡಿದ ಈ ಜೀವನು, **ಕತರಃ** - ಯಾವ ರೀತಿಯಲ್ಲಿ, **ಸ್ವಪ್ನಾನ್** - (ಸ್ವಪ್ನಗಳನ್ನು) ಕನಸುಗಳನ್ನು, **ಪಶ್ಯತಿ** - ಕಾಣುತ್ತಾನೆ? **ಏತತ್ ಸುಖಮ್** - ಈ ವಿಷಯಸುಖವು, **ಕಸ್ಯ** - ಯಾರಿಗೆ, **ಭವತಿ** - ಉಂಟಾಗುತ್ತದೆ? **ಸರ್ವೇ** - ಎಲ್ಲ ಇಂದ್ರಿಯಗಳು, **ಕಸ್ಮಿನ್ನು** - ಯಾರಲ್ಲಿ, [೨]**ಸಂಪ್ರತಿಷ್ಠಿತಾಃ ಭವಂತಿ** - ನೆಲೆಗೊಳ್ಳುತ್ತವೆ? **ಇತಿ** - ಎಂದು, **ಪಪ್ರಚ್ಛ** - ಪ್ರಶ್ನಿಸಿದನು·

### ತಾತ್ಪರ್ಯ

ಕೌಸಲ್ಯನ ಪ್ರಶ್ನೆಗಳಿಗೆ ಆಚಾರ್ಯಪಿಪ್ಪಲಾದರು ಉತ್ತರವನ್ನು ಕೊಟ್ಟನಂತರ ಗಾರ್ಗ್ಯನು

---

೧· 'ಪುರುಷೇ' ಎಂಬುದು ಅಧಿಕ ಪಾಠ ·

೨· 'ಸಮ್' ಎಂಬ ಉಪಸರ್ಗಸಹಿತವಾದ ಪಾಠವು ರಂಗರಾಮಾನುಜಭಾಷ್ಯದಲ್ಲಿ ಇಲ್ಲ·

ಪಿಪ್ಪಲಾದರನ್ನು ಸಮೀಪಿಸಿ, ಕೆಲವು ಪ್ರಶ್ನೆಗಳನ್ನು ಕೇಳುತ್ತಾನೆ · ಜೀವನು ನಿದ್ರಿಸುವಾಗ ಯಾವ ಇಂದ್ರಿಯಗಳು ಮಲಗುತ್ತವೆ? ಇನ್ನು ಯಾವ ಇಂದ್ರಿಯಗಳು ಎಚ್ಚೆತ್ತಿರುತ್ತವೆ? ಜೀವನು ಸ್ವಪ್ನ-ಪದಾರ್ಥಗಳನ್ನು ಹೇಗೆ ಕಾಣುತ್ತಾನೆ? ವಿಷಯಸಂಪರ್ಕದಿಂದ ಉಂಟಾಗುವ ಸುಖ-ದುಃಖಗಳು ಯಾರಿಗೆ ಸೇರಿವೆ? ಎಲ್ಲವೂ ಯಾರಲ್ಲಿ ನೆಲೆಸಿವೆ? - ಇವೇ ಗಾರ್ಗ್ಯನ ಪ್ರಶ್ನೆಗಳು·

## ರಂಗರಾಮಾನುಜಭಾಷ್ಯ

**ಅಥ ಹೈನಂ ಸೌರ್ಯಾಯಣೀ ಇತಿ** । ಸ್ಪಷ್ಟೋಽರ್ಥಃ । **ಭಗವನ್ ಏತಸ್ಮಿನ್ ಇತಿ**। ಪುರುಷೇ; ಸುಪ್ತೇ ಸತೀತಿ ಶೇಷಃ । ಶಿಷ್ಟಂ ಸ್ಪಷ್ಟಮ್ । **ಕಾನ್ಯಸ್ಮಿನ್ ಜಾಗ್ರತಿ** । ಅತ್ರಾಪಿ ಸುಪ್ತೇ ಸತೀತಿ ಶೇಷಃ । **ಕತರ ಏಷ ಇತಿ** । ಏಷ ದ್ಯೋತನಾದಿಗುಣಯೋಗಾತ್ ದೇವಃ ಜೀವಃ **ಕತರಃ** ಕೀದೃಶಸ್ಸನ್ ಸ್ವಾಪ್ನಾನ್ ರಥಾದೀನ್ ಪಶ್ಯತೀತ್ಯರ್ಥಃ । ಕಸ್ಯೈತತ್ ಸುಖಂ ಭವತಿ। ಕಸ್ಯ ಹೇತೋಃ ಏತದ್ವೈಷಯಿಕಂ ಸುಖಮಿತ್ಯರ್ಥಃ । **ಕಸ್ಮಿನ್ನು ಸರ್ವೇ ಇತಿ** । ಸ್ಪಷ್ಟೋಽರ್ಥಃ ।

## ಅನುವಾದ

**ಅಥ ಹೈನಮ್ ಇತಿ** । (ಅನಂತರ ಸೂರ್ಯಾಯಣನ ಮಗನಾದ ಗಾರ್ಗ್ಯನು ಪಿಪ್ಪಲಾದರನ್ನು ಪ್ರಶ್ನಿಸಿದನು) ಅರ್ಥವು ಸುಲಭವಾಗಿದೆ · **ಭಗವನ್ ಏತಸ್ಮಿನ್ ಇತಿ** । 'ಪುರುಷೇ ಸುಪ್ತೇ ಸತಿ' ಜೀವನು ಮಲಗಿರಲು ಎಂದು ಶೇಷಪೂರ್ತಿಮಾಡಬೇಕು; ಉಳಿದುದು ತಾನೆ ತಿಳಿಯು-ತ್ತದೆ · **ಕಾನ್ಯಸ್ಮಿನ್ ಜಾಗ್ರತಿ** ಇಲ್ಲಿಯೂ 'ಮಲಗಿರಲು' ಎಂದು ಸೇರಿಸಿಕೊಳ್ಳಬೇಕು · **ಕತರ ಏಷ ದೇವಃ ಇತಿ** । ಈ ಪ್ರಕಾಶಾದಿಗುಣಶಾಲಿಯಾದ ದೇವಃ ಜೀವನು ಕತರಃ ಯಾವ ರೀತಿಯಿಂದ ರಥ ಮುಂತಾದ ಸ್ವಾಪ್ನಪದಾರ್ಥಗಳನ್ನು ಕಾಣುತ್ತಾನೆ · **ಕಸ್ಯೈತತ್ಸುಖಂ ಭವತಿ** ಯಾವ ಕಾರಣದಿಂದ ಈ ವೈಷಯಿಕ ಸುಖವುಂಟಾಗುತ್ತದೆ · **ಕಸ್ಮಿನ್ನು ಸರ್ವೇ ಪ್ರತಿಷ್ಠಿತಾ ಭವಂತೀತಿ** (ಯಾರಲ್ಲಿ ಎಲ್ಲವೂ ನೆಲೆಸುತ್ತವೆಯೆಂದು) ಅಭಿಪ್ರಾಯವು ಸ್ಫುಟವಾಗಿದೆ·

## ಭಾಷ್ಯಸಾರ

ಕುಮಾರ ಕೌಸಲ್ಯನು ಕೇಳಿದ ಪ್ರಶ್ನೆಗಳಿಗೆ ಆಚಾರ್ಯರು ಪ್ರತಿವಚನವನ್ನು ತಿಳಿಸಿದ್ದಾಯಿತು · ಅವರು ಮುಖ್ಯಪ್ರಾಣನ ಮಹಿಮೆಯನ್ನು ವಿಸ್ತಾರವಾಗಿಯೇ ಬಿತ್ತರಿಸಿದ್ದಾರೆ · ಈಗ ಗರ್ಗಗೋತ್ರದಲ್ಲಿ ಜನಿಸಿದ ಸೌರ್ಯಾಯಣಿಯು ಆಚಾರ್ಯರ ಬಳಿಸಾರಿ ತನ್ನ ಸಂದೇಹಗಳನ್ನು ಅವರಲ್ಲಿ ತೋಡಿ-ಕೊಳ್ಳಲು ಅವಕಾಶವನ್ನು ಪಡೆಯುತ್ತಾನೆ·

ಈ ದೇಹವು ಮನಸ್ಸು, ಪ್ರಾಣ, ಇಂದ್ರಿಯ ಮೊದಲಾದ ವಸ್ತುಗಳ ಸಂಘಾತವಷ್ಟೇ! ಇಂತಹ ದೇಹ-ದಲ್ಲಿ, ಜೀವನು ನಿದ್ರಿಸುವಾಗ ಯಾವ ಇಂದ್ರಿಯಗಳು ತಮ್ಮ ವ್ಯಾಪಾರಗಳನ್ನು ನಿಲ್ಲಿಸಿ ಮಲಗಿರುತ್ತವೆ?

ಮತ್ತೆ ಯಾವ ಇಂದ್ರಿಯಗಳು ಆಗ ಎಚ್ಚೆತ್ತಿರುತ್ತವೆ? ಕಾರಣ, [1]ಜೀವನು ನಿದ್ರಿಸುವಾಗ ಎಲ್ಲಾ ಇಂದ್ರಿಯಗಳೂ ತಮ್ಮ ತಮ್ಮ ಕಾರ್ಯಗಳನ್ನು ಸ್ಥಗಿತಗೊಳಿಸುವುದಾದರೆ ಈ ದೇಹವು ಬಿದ್ದು ಹೋದೀತು!

ನಿದ್ರೆ ಹೋದವನಿಗೆ ಆಗಾಗ ಸ್ವಪ್ನ ಬೀಳುವುದು ಸ್ವಾಭಾವಿಕವಾದುದು· ಬಿದ್ದ ಸ್ವಪ್ನದಲ್ಲಿ ವಿವಿಧ ವಸ್ತುಗಳನ್ನು ಕಾಣುವುದೂ, ಬೇರೆ ಬೇರೆ ಅನುಭವಗಳನ್ನು ಪಡೆಯುವುದೂ ಅಸಹಜವೇನಲ್ಲ· ಈ ರೀತಿಯ ಕನಸುಗಳನ್ನು ಕಾಣುವವನು ಯಾರು? ಜೀವನೇ ಅಥವಾ ಮನಸ್ಸೇ? [2]ಸ್ವಪ್ನಾವಸ್ಥೆಯಲ್ಲಿ ಮನಸ್ಸೂ, ಜೀವನಂತೆ ಬೇರೆ ಇಂದ್ರಿಯಗಳ ಸಹಕಾರವನ್ನು ಅಪೇಕ್ಷಿಸದೇ ಸ್ವಾಪ್ನವಸ್ತುಗಳನ್ನು ಪ್ರಕಾಶಪಡಿಸಬಲ್ಲದು ಅಥವಾ ಕನಸು ಕಾಣುವವನು ಜೀವನೇ ಎಂದು ನಿರ್ಣಯಿಸುವುದಾದಲ್ಲಿ, ಯಾವ ರೀತಿಯಿಂದ ಅವನು ಸ್ವಪ್ನವನ್ನು ಅನುಭವಿಸುತ್ತಾನೆ?

ಗಾಢನಿದ್ರೆಯನ್ನು ಅನುಭವಿಸಿ ಎಚ್ಚರವಾದಾಗ ಮನುಷ್ಯನು ತಾನು ಸುಖವಾಗಿ ನಿದ್ರಿಸಿದೆನೆಂದು ಸ್ಮರಿಸುತ್ತಾನೆ· ನಿದ್ರೆಯಕಾಲದಲ್ಲಿ ಎಲ್ಲ ಇಂದ್ರಿಯಗಳೂ ತಮ್ಮ ತಮ್ಮ ಕಾರ್ಯಗಳಿಂದ ಪರಾಙ್ಮುಖವಾಗಿರುತ್ತವೆ· ಆಗ ಉಂಟಾಗುವ ಸುಖ ಯಾರಿಗೆ ಸೇರಿದುದು? ಅದು ವಿಷಯಕ್ಕೆ ಸಂಬಂಧಿಸಿದುದೇ? ಅಥವಾ ಜೀವನಿಗೆ ಸೇರಿದುದೇ? ಇಂದ್ರಿಯಗಳೂ, ಅವುಗಳಿಂದ ಸಿಗಲಿರುವ ಸುಖವನ್ನು ಅನುಭವಿಸುವವನೂ ಎಲ್ಲರೂ ನಿದ್ರೆಗೂ ಮೀರಿ ಮಿಕ್ಕಿದ ಸುಷುಪ್ತಿಯಲ್ಲಿ ಯಾರನ್ನು ಆಶ್ರಯಿಸುತ್ತಾರೆ?

ಸೌರ್ಯಾಯಣಿಯ ಸಂದೇಹಗಳು [3]ಪರತತ್ತ್ವವನ್ನು ಪ್ರಕಾಶಪಡಿಸಲು ತೀರಾ ಅನುಕೂಲವಾಗಿವೆ· ಅವು ತಾವಾಗಿಯೇ ಆ ತತ್ತ್ವದ ಕಡೆ ಬೆರಳಿಟ್ಟು, ಅದನ್ನು ನೆನಪಿಸುವಂತಿದೆ·

## ಮಂತ್ರ - ೨

तस्मै स होवाच - यथा गार्ग्य ! मरीचयोऽर्कस्यास्तं गच्छतः सर्वा एतस्मिंस्तेजोमण्डल एकीभवन्ति ; ताः पुनरुदयतः प्रचरन्ति – एवं ह वै तत् सर्वं परे देवे मनस्येकीभवति । तेन तर्ह्येष पुरुषो न श्रृणोति, न पश्यति, न जिघ्रति, न रसयते, न स्पृशते, नाभिवदते, नादत्ते, नानन्दयते, न विसृजते, नेयायते ; स्वपितीत्याचक्षते ॥ 2 ॥

---

೧· ಯದಿ ಸರ್ವೇಷಾಮೇವಾಸ್ತವ್ಯಾಪಾರತಾ ತದಾ ಶರೀರನಾಶ ಏವ ಪ್ರಸಜ್ಯೇತ್ - ಸುಬೋಧಿನೀ·

೨· ಮನಸೋಽಪಿ ಸ್ವಪ್ನಾವಸ್ಥಾಯಾಮಿಂದ್ರಿಯಸಹಕಾರಮನಪೇಕ್ಷ್ಯೈವ ಸ್ವಾಪ್ನವಸ್ತುಪ್ರಕಾಶಕತ್ವಾತ್ - ಆನಂದಭಾಷ್ಯ·

೩· ಪರತರಂ ತತ್ತ್ವಂ ವಿಚಾರಮುಖೇನ ಸುಖೇನ ಜ್ಞಾಪಯಿತುಂ ಚತುರ್ಥಪ್ರಶ್ನಃ ಪ್ರವರ್ತತೇ - ಸುಬೋಧಿನೀ·

ತಸ್ಮೈ ಸ ಹೋವಾಚ । ಯಥಾ ಗಾರ್ಗ್ಯ! ಮರೀಚಯೋಽರ್ಕ
ಸ್ಯಾಸ್ತಂಗಚ್ಛತಃ ಸರ್ವಾ ಏತಸ್ಮಿಂಸ್ತೇಜೋಮಂಡಲೇ ಏಕೀಭವಂತಿ;
ತಾಃ ಪುನರುದಯತಃ ಪ್ರಚರಂತಿ - ಏವಂ ಹ ವೈ ತತ್ ಸರ್ವಂ
ಪರೇ ದೇವೇ ಮನಸ್ಯೇಕೀಭವತಿ । ತೇನ ತರ್ಹ್ಯೇಷ ಪುರುಷೋ ನ
ಶೃಣೋತಿ, ನ ಪಶ್ಯತಿ, ನ ಜಿಘ್ರತಿ, ನ ರಸಯತೇ, ನ ಸ್ಪೃಶತೇ,
ನಾಭಿವದತೇ, ನಾದತ್ತೇ, ನಾನಂದಯತೇ, ನ ವಿಸೃಜತೇ,
ನೇಯಾಯತೇ, ಸ್ವಪಿತೀತ್ಯಾಚಕ್ಷತೇ ॥

## ಪ್ರತಿಪದಾರ್ಥ

**ಸಃ** - ಆಚಾರ್ಯಪಿಪ್ಪಲಾದರು, **ತಸ್ಮೈ** - ಶಿಷ್ಯ ಗಾರ್ಗ್ಯನಿಗೆ, **ಉವಾಚ** - ಹೇಳಿದರು· **ಹೇ ಗಾರ್ಗ್ಯ** - ಎಲೈ ಗಾರ್ಗ್ಯನೇ, **ಅಸ್ತಂಗಚ್ಛತಃ** - ಮುಳುಗುತ್ತಿರುವ, **ಅರ್ಕಸ್ಯ** - ಸೂರ್ಯನ, **ಸರ್ವಾಃ (ಏವ)** - ಎಲ್ಲಾ, **ಮರೀಚಯಃ** - ಕಿರಣಗಳು, **ಏತಸ್ಮಿಂಸ್ತೇಜೋಮಂಡಲೇ** - ಈ ಸೂರ್ಯಮಂಡಲದಲ್ಲಿ, **ಏಕೀಭವಂತಿ** - ಒಟ್ಟುಗೂಡುತ್ತವೆ, **ತಾಃ** - ಆ ಕಿರಣಗಳು, **ಪುನಃ ಪುನಃ** - ಮತ್ತೆ ಮತ್ತೆ, **ಉದಯತಃ** - ಉದಯಿಸಲು, **ಪ್ರಚರಂತಿ** - ಎಲ್ಲೆಡೆಯಲ್ಲಿಯೂ ಹರಡುತ್ತವೆ **ಏವಮ್** - ಈ ರೀತಿಯಾಗಿ, **ತತ್ಸರ್ವಂ** - ಎಲ್ಲ ಇಂದ್ರಿಯಗಳಿಗೂ, **ಪರೇ ದೇವೇ** - ಉತ್ಕೃಷ್ಟವೂ, ಪ್ರಕಾಶಿಸುವುದೂ ಆದ, **ಮನಸಿ** - ಮನಸ್ಸಿನಲ್ಲಿ, **ಏಕೀಭವತಿ** - ಒಂದಾಗುತ್ತವೆ·

**ತೇನ** - ಆ ಕಾರಣದಿಂದ, **ತರ್ಹಿ** - ಆಗ, **ಏಷ ಪುರುಷಃ** - ಈ ಜೀವನು, **ನ ಶೃಣೋತಿ**- (ಶಬ್ದವನ್ನು) ಕೇಳುವುದಿಲ್ಲ; **ನ ಪಶ್ಯತಿ** - (ರೂಪಾದಿಗಳನ್ನು) ನೋಡುವುದಿಲ್ಲ; **ನ ಜಿಘ್ರತಿ**- (ಗಂಧಾದಿಗಳನ್ನು) ಆಘ್ರಾಣಮಾಡುವುದಿಲ್ಲ; **ನ ರಸಯತೇ** - ಆಸ್ವಾದಿಸುವುದಿಲ್ಲ; **ನ ಸ್ಪೃಶತೇ** (ಕಾಠಿಣ್ಯಾದಿಗಳನ್ನು) ಸ್ಪರ್ಶಮಾಡುವುದಿಲ್ಲ· **ನ ಅಭಿವದತೇ** - ಮಾತನಾಡುವುದಿಲ್ಲ· **ನ ಆದತ್ತೇ** ತೆಗೆದುಕೊಳ್ಳುವುದಿಲ್ಲ, **ನ ಆನಂದಯತೇ** - (ರತಿಯ) ಆನಂದ ಪಡೆಯುವುದಿಲ್ಲ, **ನ ವಿಸೃಜತೇ** - (ಮೂತ್ರಾದಿಗಳನ್ನು) ವಿಸರ್ಜಿಸುವುದಿಲ್ಲ· **ನ ಈಯಾಯತೇ** - ಚಲಿಸುವುದಿಲ್ಲ· **ಕಿಂತು** - ಆದರೆ, **ಸ್ವಪಿತಿ** - ಮಲಗುತ್ತಾನೆ (ನಿದ್ರಿಸುತ್ತಾನೆ) **ಇತಿ** - ಎಂದು (ಚಿದಚಿತ್ತತ್ವವನ್ನು ತಿಳಿದ ಜ್ಞಾನಿಗಳು), **ಆಚಕ್ಷತೇ** - ಹೇಳುತ್ತಾರೆ·

## ತಾತ್ಪರ್ಯ

ಆಚಾರ್ಯ ಪಿಪ್ಪಲಾದರು ಗಾರ್ಗ್ಯನ ಪ್ರಶ್ನೆಗಳಿಗೆ ಉತ್ತರವನ್ನು ನೀಡಲಾರಂಭಿಸಿದ್ದಾರೆ· 'ಎಲೈ ಗಾರ್ಗ್ಯನೇ! ಭಾಸ್ಕರನು ಅಸ್ತಂಗತನಾಗುವಾಗ ಎಲ್ಲ ಬೆಳ್ಳಿಕಿರಣಗಳು ಸೂರ್ಯಮಂಡಲದಲ್ಲಿ

ಒಂದಾಗುತ್ತವೆ· ಪುನಃ ಆ ಕಿರಣಗಳು ಸೂರ್ಯನು ಉದಯಿಸುವಾಗ ಎಲ್ಲ ಕಡೆಯೂ ಪಸರಿಸುತ್ತವೆ ಹೀಗೆ ಎಲ್ಲ ಕರ್ಮ-ಜ್ಞಾನೇಂದ್ರಿಯಗಳು ಉತ್ತಮವಾದ ಮನಸ್ಸಿನಲ್ಲಿ ತಮ್ಮ ತಮ್ಮ ಕಾರ್ಯಗಳನ್ನು ಬಿಟ್ಟು ಒಂದಾಗುತ್ತವೆ· ಸುಷುಪ್ತಿಯ ದೆಸೆಯಲ್ಲಿ ಜೀವನು ಶಬ್ದವನ್ನು ಕೇಳಲಾರನು; ರೂಪವನ್ನು ನೋಡಲಾರನು; ಗಂಧವನ್ನು ಘ್ರಾಣಿಸಲಾರನು; ಮಧುರಾದಿರಸಗಳನ್ನು ಸವಿಯಲಾರನು; ಸ್ಪರ್ಶವನ್ನು ತಿಳಿಯಲಾರನು; ಮಾತನಾಡಲಾರನು; ತೆಗೆದುಕೊಳ್ಳಲಾರನು; ಐಂದ್ರಿಯಾನಂದವನ್ನು ಅನುಭವಿಸ-ಲಾರನು; ಎಲ್ಲಿಗೂ ಹೋಗಲಾರನು ಎಂದು ತತ್ತ್ವವೇತ್ತರು ಹೇಳುತ್ತಾರೆ·

## ರಂಗರಾಮಾನುಜಭಾಷ್ಯ

**ತಸ್ಮೈ ಸ ಹೋವಾಚ ಇತಿ** । ಸ್ಪಷ್ಟೋಽರ್ಥಃ । **ಯಥಾ ಗಾರ್ಗ್ಯೇತಿ** । ಯಥಾ ಸಾಯಂಕಾಲೇಽಸ್ತಂ ಗಚ್ಛತಃ ಸೂರ್ಯಸ್ಯ ಕಿರಣಾಃ ನಾನಾದಿಕ್ಷು ಪ್ರಸರಣಂ ವಿನಾ ಆದಿತ್ಯಮಂಡಲೇ ಏಕೀಭವಂತಿ; ಪುನಶ್ಚ ಉದ್ಯತಃ ಸೂರ್ಯಸ್ಯ ಕಿರಣಾಃ ನಾನಾದಿಕ್ಷು ಪ್ರಸರಂತಃ ಪ್ರಕಾಶಕಾ ಭವಂತಿ - ಏವಮೇತತ್ಸರ್ವಮಿಂದ್ರಿಯಜಾತಂ ಪರೇ ಇತರೇಭ್ಯ ಉತ್ಕೃಷ್ಟೇ ದೇವೇ ದ್ಯೋತನಾದಿಗುಣಯುಕ್ತೇ ಮನಸ್ಯೇಕೀಭವತಿ । ಸ್ವಸ್ವವ್ಯಾಪಾರಾಭಿಮುಖ್ಯವಿರೋಧಿಸಂಶ್ಲೇಷ-ವಿಶೇಷಯುಕ್ತಂ ಭವತೀತ್ಯರ್ಥಃ । **ತೇನ ತರ್ಹ್ಯೇಷ ಪುರುಷೋ ನ ಶೃಣೋತಿ** । **ತೇನ** ಶ್ರೋತ್ರಾದೀಂದ್ರಿಯಾಣಾ-ಮುಪರತತ್ವೇನೇತ್ಯರ್ಥಃ । ಶಿಷ್ಟಂ ಸ್ಪಷ್ಟಮ್ । **ನ ಪಶ್ಯತಿ** ಇತ್ಯಾದಿನಾ। **ಆನಂದಃ** ಉಪಸ್ಥೇಂದ್ರಿಯಕಾರ್ಯಮ್ । **ವಿಸರ್ಗಸ್ತ್ವಪಾನಕಾರ್ಯಮ್** । **ನೇಯಾಯತೇ** ನ ಗಚ್ಛತೀತ್ಯರ್ಥಃ । ಸ್ವಪಿತೀತ್ಯಾಚಕ್ಷತೇ ಇತ್ಯನೇನ, 'ಕಾನಿ ಸ್ವಪಂತಿ' ಇತಿ ಪ್ರಶ್ನಸ್ಯ ಬಾಹ್ಯಜ್ಞಾನೇಂದ್ರಿಯಕರ್ಮೇಂದ್ರಿಯಾಣಿ ಸ್ವಪಂತೀತ್ಯುತ್ತರಮುಕ್ತಂ ಭವತಿ । ಪ್ರತ್ಯೇಕಮೇಕತ್ವಾಭಿ-ಪ್ರಾಯೇಣ ಸ್ವಪಿತೀತ್ಯೇಕವಚನಮ್ । ಶಿಷ್ಟಂ ಸ್ಪಷ್ಟಮ್ ।

## ಅನುವಾದ

**ತಸ್ಮೈ ಸ ಹೋವಾಚ ಇತಿ** । (ಗಾರ್ಗ್ಯನಿಗೆ ಆಚಾರ್ಯರು ಹೇಳಿದರು) ಅರ್ಥವು ನಿಚ್ಚಳವಾಗಿದೆ ಯಥಾ ಗಾರ್ಗ್ಯ! ಮನಸ್ಯೇಕೀ ಭವತಿ । ಸಂಜೆಯ ಸಮಯದಲ್ಲಿ ಮುಳುಗುತ್ತಿರುವ ನೇಸರನ ಕಿರಣಗಳು ಬೇರೆ ಬೇರೆ ದಿಕ್ಕುಗಳಲ್ಲಿ ಪಸರಿಸದೇ ಹೇಗೆ ಆದಿತ್ಯಮಂಡಲದಲ್ಲಿಯೇ ಒಂದುಗೂಡಿರು-ವುವೋ ಮತ್ತೆ ಮೂಡುತ್ತಿರುವ ಸೂರ್ಯನಕಿರಣಗಳು ಅನೇಕ ದಿಕ್ಕುಗಳಲ್ಲಿ ಪಸರಿಸಿ ಹೇಗೆ ಬೆಳಗುವುವೋ, ಹಾಗೆ ಈ ಇಂದ್ರಿಯಗಳೆಲ್ಲವುಗಳ ಸಮೂಹವೆಲ್ಲವೂ **ಪರೇ** ಉಳಿದವುಗಳಿಗಿಂತ ಉತ್ತಮವಾದ, ದೇವೇ ಬೆಳಗುವ ಶೀಲವುಳ್ಳ ಮನಸ್ಸಿನಲ್ಲಿ ಒಂದುಗೂಡುತ್ತವೆ· **ತೇನ ತರ್ಹ್ಯೇಷ ಪುರುಷೋ ನ ಶೃಣೋತಿ** । (ಆದ್ದರಿಂದ ಆಗ ಈ ಜೀವನು ಶಬ್ದಾದಿಗಳನ್ನು ಕೇಳುವುದಿಲ್ಲ) **ತೇನ** ಕಿವಿ ಮುಂತಾದ ಇಂದ್ರಿಯಗಳು ವಿಶ್ರಾಂತವಾಗಿರುವುದರಿಂದ, ಉಳಿದುದು ಸುಲಭವಾಗಿದೆ · **ನ ಪಶ್ಯತಿ** ಇತಿ । ಆನಂದಃ ಉಪಸ್ಥೇಂದ್ರಿಯದ ಕಾರ್ಯವು, **ವಿಸರ್ಗವು** ಅಪಾನದ ಕಾರ್ಯವು **ನೇಯಾಯತೇ** ಹೋಗುವುದಿಲ್ಲ · 'ಸ್ವಪಿತೀತ್ಯಾಚಕ್ಷತೇ' ಎಂಬ ವಾಕ್ಯದಿಂದ 'ಕಾನಿ ಸ್ವಪಂತಿ' ಎಂಬ

ಪ್ರಶ್ನೆಗೆ ಬಾಹ್ಯಜ್ಞಾನೇಂದ್ರಿಯ ಮತ್ತು ಕರ್ಮೇಂದ್ರಿಯಗಳು ವಿಶ್ರಮಿಸುತ್ತವೆ ಎಂದು ಉತ್ತರವನ್ನು ಹೇಳಿದಂತಾಯಿತು · 'ಸ್ವಪಿತಿ' ಎಂಬ ಪದದಲ್ಲಿ, ಪ್ರತ್ಯೇಕ ಏಕತ್ವಸಂಖ್ಯೆಯು ಹೊಂದುವುದು ಎಂಬ ಅಭಿಪ್ರಾಯದಿಂದ ಏಕವಚನವನ್ನು ಉಳಿಸಿಕೊಳ್ಳಲಾಗಿದೆ· ಉಳಿದುದು ಸುಲಭವಾಗಿದೆ·

## ಭಾಷ್ಯಸಾರ

ಒಬ್ಬರ ಮೇಲೊಬ್ಬರಂತೆ, ತಮ್ಮ ಶಿಷ್ಯರು ಪರತತ್ವದ ಹತ್ತಿರಕ್ಕೆ ಬಂದು ಪ್ರಶ್ನಿಸುವುದನ್ನು ಕಂಡ ಆಚಾರ್ಯಪಿಪ್ಪಲಾದರ ಹೃನ್ಮನಗಳು ತಣಿದಿವೆ · ರಹಸ್ಯವಿಷಯಗಳನ್ನು ಅಂತೇವಾಸಿಗಳು ಸುಲಭವಾಗಿ ತಿಳಿಯುವಂತೆ ಉಪದೇಶವನ್ನು ಅನುಗ್ರಹಿಸುವ ಸಂಕಲ್ಪ ಅವರಲ್ಲಿ ಕುಣಿದು ಕುಪ್ಪಳಿಸಿವೆ · ಪೂರ್ಣಾ-ಹಾರಕ್ಕಾಗಿ ಕೆಚ್ಚಲಿಗೆ ಬಾಯಿಟ್ಟು ತಲೆಯಿಂದ ಗುದ್ದುವ ತನ್ನ ಕಂದಮ್ಮಗಳಿಗೆ ಯಾವ ಗೋಮಾತೆ ನೊರೆಹಾಲನ್ನು ಧಾರೆಯಾಗಿ ಸುರಿಸಲಾರಳು! ಪೂಜ್ಯ ಪಿಪ್ಪಲಾದರು ಗಂಭೀರವಾಗಿ ಶಿಷ್ಯನ ಶಂಕೆಗಳನ್ನು ನಿವಾರಿಸುವ ಪ್ರಯತ್ನಕ್ಕೆ ಕೈಯಿಕ್ಕುತ್ತಾರೆ·

ಲೋಕವನ್ನು ಬೆಳಗುವ ಬೆಳ್ಳಿಕಿರಣಗಳ ಆಕರ ಸೂರ್ಯ · ಇವನು ಮುಳುಗುವಾಗ ಕತ್ತಲೆ ಆವರಿಸುತ್ತದೆ · ಇವನ ಆ ಲೋಕವೆಲ್ಲವೂ ಒಂದುಗೂಡಿ ಆದಿತ್ಯಮಂಡಲದಲ್ಲಿ ಸಂಪಿಂಡಿತವಾಗಿರುತ್ತದೆ ಆದರೆ ಆದಿತ್ಯನು ಪುನಃ ಉದಯಿಸುವಾಗ ಅವನ ಹೊಂಗಿರಣಗಳು ಗಗನದೊಡಲಿನಲ್ಲಿ ಹರಡಿ ಜಗವನ್ನು ಬೆಳಗಿಸುತ್ತವೆ · ಹಾಗೆಯೇ ಇಂದ್ರಿಯಗಳು ಪ್ರಕಾಶ ಸಾಧನಗಳಾಗಿದ್ದು ಸುಷುಪ್ತಿಕಾಲದಲ್ಲಿ ಮನಸ್ಸನ್ನು ಸೇರುತ್ತವೆ · ಮನಸ್ಸು ಇಂದ್ರಿಯಗಳಲ್ಲೆಲ್ಲಾ ಪ್ರಧಾನವಾದುದು · ಆಗ ಜೀವನು ಎಲ್ಲ ಇಂದ್ರಿಯವ್ಯಾಪಾರಗಳಿಂದಲೂ ದೂರನಾಗಿ ನಿದ್ರಿಸುತ್ತಾನೆ · ಹೀಗೆ ನಿದ್ರೆಯಕಾಲದಲ್ಲಿ ಎಲ್ಲ ಇಂದ್ರಿಯಗಳು ಮಲಗುತ್ತವೆ· ಇದೇ ಗಾರ್ಗ್ಯನ ಮೊದಲ ಪ್ರಶ್ನೆಗೆ ಉತ್ತರ·

## ಮಂತ್ರ - ೩

प्राणाग्नय एव एतस्मिन् पुरे जाग्रति ।
गार्हपत्यो ह वा एषोऽपानः व्यानोऽ-
न्वाहार्यपचनः यत् गार्हपत्यात् प्रणीयते,
प्रणयनादाहवनीयः प्राणः ॥ 3 ॥

ಪ್ರಾಣಾಗ್ನಯ ಏವ ಏತಸ್ಮಿನ್ ಪುರೇ ಜಾಗ್ರತಿ ।
ಗಾರ್ಹಪತ್ಯೋ ಹ ವಾ ಏಷೋಽಪಾನಃ ವ್ಯಾನೋಽ-
ನ್ವಾಹಾರ್ಯಪಚನಃ ಯತ್ ಗಾರ್ಹಪತ್ಯಾತ್ಪ್ರಣೀಯತೇ,
ಪ್ರಣಯನಾದಾಹವನೀಯಃ ಪ್ರಾಣಃ ॥

## ಪ್ರತಿಪದಾರ್ಥ

**ಏತಸ್ಮಿನ್** - ಈ, **ಪುರೇ** - (ನವದ್ವಾರಯುಕ್ತವಾದ) ದೇಹದಲ್ಲಿ, (**ಪುರುಷೇ ಸುಪ್ತೇ ಸತಿ**- ಜೀವನು ಮಲಗಿರಲು), **ಪ್ರಾಣಾಗ್ನಯ ಏವ** - ಪ್ರಾಣಾಪಾನ ಮುಂತಾದ ಅಗ್ನಿಗಳು, **ಜಾಗ್ರತಿ**- ಎಚ್ಚರವಾಗಿರುತ್ತವೆ· **ಏಷಃ ಹ ವೈ** - ಪ್ರಸಿದ್ಧವಾದ, **ಅಪಾನಃ** - ಅಪಾನವಾಯುವು, **ಗಾರ್ಹಪತ್ಯಃ** - ಗಾರ್ಹಪತ್ಯಾಗ್ನಿಯು, **ವ್ಯಾನಃ** - ವ್ಯಾನವಾಯುವು, **ಅನ್ವಾಹಾರ್ಯಪಚನಃ** - ' ದಕ್ಷಿಣಾಗ್ನಿಯು, **ಯತ್** - ಯಾವುದು, **ಗಾರ್ಹಪತ್ಯಾತ್** - ಗಾರ್ಹಪತ್ಯಾಗ್ನಿಯಿಂದ, **ಪ್ರಣೀಯತೇ** - ಉತ್ತೇಜಿತವಾಗಿದೆಯೋ, (ಅ) **ಪ್ರಾಣಃ** - ಪ್ರಾಣವಾಯುವು, **ಪ್ರಣಯನಾತ್** - ಉತ್ತೇಜನದಿಂದ, **ಆಹವನೀಯಃ** - ಆಹವನೀಯಾಗ್ನಿಯು·

## ತಾತ್ಪರ್ಯ

ನವದ್ವಾರಗಳಿಂದ ಕೂಡಿದ ಈ ಶರೀರದಲ್ಲಿ ಜೀವನು ಮಲಗಿರಲು, ಪ್ರಾಣ, ಅಪಾನ ಮುಂತಾದ ಪ್ರಾಣಗಳು ಜಾಗ್ರತವಾಗಿರುತ್ತವೆ · ಇವುಗಳೇ ಅಗ್ನಿಗಳು · ಅಪಾನವಾಯುವು ಗಾರ್ಹಪತ್ಯಾಗ್ನಿಯು · ಸರ್ವಶರೀರವರ್ತಿಯಾದ ವ್ಯಾನವು ದಕ್ಷಿಣಾಗ್ನಿಯೆನಿಸಿದೆ · ಗಾರ್ಹಪತ್ಯಾಗ್ನಿಯಿಂದ ಉತ್ತೇಜಿಸಲಾದ ಆಹವನೀಯವು ಪ್ರಾಣನೇ ಆಗಿರುತ್ತಾನೆ·

## ರಂಗರಾಮಾನುಜಭಾಷ್ಯ

'ಕಾನ್ಯಸ್ಮಿನ್‌ಜಾಗ್ರತಿ?' ಇತ್ಯಸ್ಯೋತ್ತರಮಾಹ - **ಪ್ರಾಣಾಗ್ನಯ ಇತಿ** । ಪ್ರಾಣಾಪಾನಾದಿರೂಪಾಃ ಅಗ್ನಯ ಏವೈ ತಸ್ಮಿನ್ ಪುರಶಬ್ದನಿರ್ದಿಷ್ಟೇ ಶರೀರೇ ಜಾಗರಂ ಕುರ್ವಂತೀತ್ಯರ್ಥಃ । ಸ್ವಾಪದಶಾಯಾಂ ಜಾಗ್ರತ್ಸು ಪ್ರಾಣಾದಿಪಂಚಕೋಚ್ಛ್ವಾಸನಿಶ್ವಾಸಮನೋರೂಪೇಷು ಉಪಾಸನಾರ್ಥ-ಮಗ್ನಿಹೋತ್ರತ್ವಸಂಪತ್ತಿಂ ದಿದರ್ಶಯಿಷುಃ - ತತ್ರ ವ್ಯಾಪ್ರಿಯಮಾಣಂ ಮನ ಏವ ಯಜಮಾನಃ, ಅಪಾನೋ ಮೂಲಾಧಾರಸ್ಥತಯಾ ಗಾರ್ಹಪತ್ಯಃ, ತತ್ಸನ್ನಿಹಿತೋ ವ್ಯಾನೋಽನ್ವಾಹಾರ್ಯಪಚನ ಶಬ್ದಿತೋ ದಕ್ಷಿಣಾಗ್ನಿಃ, ಅಪಾನವಾಯುಮೂಲಕಃ ಪ್ರಾಣಃ ಗಾರ್ಹಪತ್ಯಾತ್ಪ್ರಣೀಯಮಾನಾ-ಹವನೀಯತುಲ್ಯತಯಾಽಽಹವನೀಯಃ, ತದಾಧಾರಕೌ ಉಚ್ಛ್ವಾಸ-ನಿಶ್ವಾಸೌ 'ದ್ವೇ ಆಹವನೀಯೇ' ಇತಿ ನಿರ್ದಿಷ್ಟಾಹುತಿದ್ವಯಮ್, ಉಚ್ಛ್ವಾಸನಿಶ್ವಾಸಹೇತುಭೂತಃ ಸಮಾನೋ ವಾಯುಃ 'ಆಹುತೀಃ ಸಮಂ ನಯತಿ' ಇತಿ ನಿರ್ದೇಶಯೋಗ್ಯಾಧ್ವರ್ಯುಃ, ಉದಾನವಾಯುಸ್ತು ಯಜಮಾನಸ್ಯ ಲೋಕಾಂತರೋನ್ನಯನಹೇತುತ್ವಾತ್ ಉದಾನಃ (ಕರ್ಮಫಲಮ್) ಇತ್ಯಗ್ನಿಹೋತ್ರಾಹುತ್ಯವಯ-ವಭೂತಾನ್ ಯಜಮಾನಾಗ್ನಿತ್ರಯಾಹುತಿದ್ವಯಾಧ್ವರ್ಯುಕರ್ಮಫಲಭೂತಾನ್ ಅಷ್ಟಾವಪಿ ಪದಾರ್ಥಾನ್ ಪ್ರಾಣಾದಿಪಂಚಕೋಚ್ಛ್ವಾಸನಿಶ್ವಾಸಮನೋರೂಪೇಷ್ವಷ್ಟಸು ದರ್ಶಯತಿ **ಗಾರ್ಹ-ಪತ್ಯೋ ಹ ವಾ ಇತಿ** ।

ಅತ್ರ ಯದ್ಯಪಿ ಜೀವಸ್ಯೈವ, 'ಏವಮೇವೇಮಾಃ ಸರ್ವಾಃ ಪ್ರಜಾ ಅಹರಹರ್ಗಚ್ಛಂತ್ಯಃ ಏತಂ ಬ್ರಹ್ಮಲೋಕಂ ನ ವಿಂದಂತಿ' ಇತಿ ಬ್ರಹ್ಮಗಮನಂ ಶ್ರೂಯತೇ; ನ ಮನಸಃ ತಥಾಪಿ ಮನಸಃ ಪುರೀತದ್ಗಮನಶ್ರವಣಾತ್ ತದ್ಗತಬ್ರಹ್ಮಗಮಯಿತೃತ್ವೋಕ್ತಿರುಪಪದ್ಯತ ಇತಿ ದ್ರಷ್ಟವ್ಯಮ್ ॥

## ಅನುವಾದ

ಯಾವುವು ಎಚ್ಚೆತ್ತಿರುವುವು? ಎಂಬ ಪ್ರಶ್ನೆಗೆ ಈ ಉತ್ತರವನ್ನು ಹೇಳುತ್ತಾರೆ - ಪ್ರಾಣಾಗ್ನಯ ಇತಿ। ಪ್ರಾಣ, ಅಪಾನ ಮೊದಲಾದ ಅಗ್ನಿಗಳು 'ಪುರ' ಎಂಬ ಪದದಿಂದ ತಿಳಿಸಲಾದ ಈ ದೇಹದಲ್ಲಿ ಎಚ್ಚರವಾಗಿರುತ್ತವೆ.

ನಿದ್ರೆಹೋದಾಗ ಎಚ್ಚತ್ತೇ ಇರುವ ಪ್ರಾಣ, ಅಪಾನ ಮುಂತಾದ ಐದು ಪ್ರಾಣಗಳು ಶ್ವಾಸ-ನಿಶ್ವಾಸಗಳು ಮತ್ತು ಮನಸ್ಸು, ಇವುಗಳಲ್ಲಿ ಉಪಾಸನೆಯ ಸಲುವಾಗಿ ಅಗ್ನಿಹೋತ್ರತ್ವದ ಸಮನ್ವಯ-ವನ್ನು ತೋರಿಸುವ ಅಭಿಲಾಷೆಯಿಂದ ಈ ಕಾರ್ಯದಲ್ಲಿ ವ್ಯಾಪಿಸಿರುವ ಮನಸ್ಸೇ ಯಜಮಾನನು, ಮೂಲಾಧಾರದಲ್ಲಿರುವುದರಿಂದ ಅಪಾನವು ಗಾರ್ಹಪತ್ಯಾಗ್ನಿಯು, ಅದಕ್ಕೆ ಸನಿಹದಲ್ಲಿರುವ ವ್ಯಾನವು ಅನ್ವಾಹಾರ್ಯಪಚನವೆಂಬ ದಕ್ಷಿಣಾಗ್ನಿಯು, ಅಪಾನವಾಯುವಿನಿಂದ ಉಂಟಾದ ಪ್ರಾಣನು ಗಾರ್ಹಪತ್ಯದಿಂದ ಹುಟ್ಟುವ ಆಹವನೀಯಕ್ಕೆ ಸಮಾನವಾಗಿರುವುದರಿಂದ ಆಹವನೀಯ . ಅದನ್ನೇ ಆಧಾರವಾಗಿ ಪಡೆದು ಶ್ವಾಸ-ನಿಶ್ವಾಸಗಳು 'ದ್ವೇ ಆಹವನೀಯೇ' ಎಂದು ನಿರ್ದಿಷ್ಟವಾದ ಎರಡು ಆಹುತಿಗಳು, ಶ್ವಾಸ-ನಿಶ್ವಾಸಗಳಿಗೆ ಕಾರಣವಾಗಿರುವ ಸಮಾನವಾಯುವು 'ಆಹುತೀಃ ಸಮಂ ನಯತಿ' ಎಂಬ ಉಲ್ಲೇಖಕ್ಕೆ ಅರ್ಹವಾದ ಅಧ್ವರ್ಯು, ಉದಾನವಾಯುವು ಯಜಮಾನನನ್ನು ಲೋಕಾಂತರಕ್ಕೆ ಕರೆದೊಯ್ಯುವುದರಿಂದ (ಕರ್ಮಫಲ), ಹೀಗೆ ಅಗ್ನಿಹೋತ್ರಕ್ಕೆ ಅಂಗಗಳಾದ ಯಜಮಾನ, ಮೂರು ಅಗ್ನಿಗಳು, ಎರಡು ಆಹುತಿಗಳು, ಅಧ್ವರ್ಯು ಕರ್ಮಫಲಗಳೆಂದು ಎಂಟುಪದಾರ್ಥಗಳನ್ನು ಪ್ರಾಣಾ-ಪಾನಾದಿ ಪಂಚಪ್ರಾಣಗಳು ಶ್ವಾಸ-ನಿಶ್ವಾಸಗಳು, ಮನಸ್ಸು ಇವುಗಳಲ್ಲಿ ತೋರಿಸುತ್ತಾನೆ . ಗಾರ್ಹಪತ್ಯೋ ಹ ವಾ ಇತಿ । 'ಏವಮೇವೇಮಾಃ ಸರ್ವಾಃ ಪ್ರಜಾ ಅಹರಹರ್ಗಚ್ಛಂತ್ಯಃ ಏತಂ ಬ್ರಹ್ಮಲೋಕಂ ನ ವಿಂದಂತಿ' - 'ಹೀಗೆಯೇ ಈ ಎಲ್ಲ ಜೀವರು ಪ್ರತಿನಿತ್ಯ ಸಂಚರಿಸಿದರೂ ಬ್ರಹ್ಮವನ್ನು ತಿಳಿಯಲಾರರು (ಪಡೆಯಲಾರರು)' ಎಂಬ ಛಾಂದೋಗ್ಯಶ್ರುತಿಯು ಜೀವನಿಗೆ ಬ್ರಹ್ಮಪ್ರಾಪ್ತಿಯನ್ನು ತಿಳಿಸಿದೆಯೇ ಹೊರತು ಮನಸ್ಸಿಗಲ್ಲ . ಆದರೂ ಮನಸ್ಸು 'ಪುರೀತತ್' ನಾಡಿಯಲ್ಲಿ ಸೇರುವುದನ್ನು ತಿಳಿಸಿರುವುದರಿಂದ ಆ ನಾಡಿಯೊಳಗಿರುವ (ಅಂತರ್ಯಾಮಿರೂಪದ) ಬ್ರಹ್ಮವನ್ನು ತಲಪಿಸುತ್ತದೆಯೆಂಬ ಮಾತನ್ನು ಒಪ್ಪಬಹುದು.

## ಭಾಷ್ಯಸಾರ

ದೇಹ ಒಂದು ನಗರ. ಇದಕ್ಕೆ ಪಟ್ಟಣದಲ್ಲಿ ಇರುವಂತೆಯೇ ಅನೇಕ ದ್ವಾರಗಳಿವೆ. ನಿದ್ರೆಕಾಲ-ದಲ್ಲಿ ಮಾತು ಮುಂತಾದ ಇಂದ್ರಿಯಗಳೇನೋ ನಿದ್ರಿಸಬಹುದು . ಆದರೆ ನಗರದಂತಿರುವ ಈ

ದೇಹವನ್ನು ಆ ಕಾಲದಲ್ಲಿ ಸಂರಕ್ಷಿಸುವ ಹೊಣೆ ಪಂಚಪ್ರಾಣಗಳಿಗೆ ಸೇರಿದೆ· ಪ್ರಾಣ, ಅಪಾನ, ವ್ಯಾನ, ಉದಾನ, ಸಮಾನಗಳು ಸದಾ ಎಚ್ಚೆತ್ತಿರುತ್ತವೆ· ದೇಹಧಾರಣೆಯನ್ನೂ ನಿರ್ವಹಿಸುತ್ತವೆ·

ಪ್ರಾಣಾಪಾನಾದಿಗಳು ವಾಯುವಿಶೇಷಗಳೇ ಹೊರತು ಅಗ್ನಿಯಲ್ಲ · ಆದರೂ ಅವುಗಳನ್ನು ಅಗ್ನಿಯೆಂದು ರೂಪಿಸಲಾಗಿದೆ · ಹಾಗೆ ರೂಪಿಸುವಲ್ಲಿ ಅಗ್ನಿಹೋತ್ರದ ಕಲ್ಪನೆಯನ್ನು ಕೊಡುವುದೇ ಪ್ರಧಾನ ಉದ್ದೇಶ · ಅಗ್ನಿಹೋತ್ರವು ಸ್ವರ್ಗವನ್ನು ಸಂಪಾದಿಸಿ ಕೂಡುವ ಹೋಮವು · ವಿದ್ವಾಂಸರು ಕೈಗೆತ್ತಿಕೊಳ್ಳುವ ಕರ್ಮವಿಶೇಷ ·[೧]ನಿದ್ರೆಯೂ ಒಂದು ಕಾರ್ಯವಿಶೇಷವೇ, ಇದು ವಿದ್ವಾಂಸರನ್ನೂ ಬಿಡಲಾರದು · ನಿದ್ರೆಯನ್ನು ಸರ್ವಪ್ರಾಣಿ ಸಾಧಾರಣ ಅವಸ್ಥೆಯೆಂದು ಗುರುತಿಸಿದ್ದಾರೆ · ಈ ಅಂಶವನ್ನು ಸೂಚಿಸುವ ಸಲುವಾಗಿ ಅಗ್ನಿಹೋತ್ರದ ರೂಪಣವನ್ನು ಮುಂದುವರಿಸಲಾಗಿದೆ·

ಅಗ್ನಿಹೋತ್ರ ಮೊದಲಾದ ಕ್ರತುಗಳನ್ನು ಮಾಡುವ ಶ್ರೋತ್ರಿಯನು ಆಹಿತಾಗ್ನಿಯಾಗಿರಬೇಕು · ಅವನು ಅಗ್ನಿಕಾರ್ಯಕ್ಕಾಗಿ ಗಾರ್ಹಪತ್ಯ, ದಕ್ಷಿಣ ಹಾಗೂ ಆಹವನೀಯಗಳೆಂಬ ಮೂರು ಅಗ್ನಿಗಳನ್ನು ರಕ್ಷಿಸುತ್ತಾನೆ · ಇದೇ ರೀತಿ ನಮ್ಮ ದೇಹದಲ್ಲಿ ಮೂಲಾಧಾರಸ್ಥಾನದಲ್ಲಿರುವ ಅಪಾನವಾಯುವೇ ಗಾರ್ಹಪತ್ಯಾಗ್ನಿಯು · ಗಾರ್ಹಪತ್ಯದಿಂದ ಪ್ರಣೀತವಾದ ಅಗ್ನಿಗೆ ಆಹವನೀಯವೆಂದು ಹೆಸರು · ಗಾರ್ಹ-ಪತ್ಯವು ಯಜಮಾನನ ಮನೆಗೆ ಸಂಬಂಧಪಟ್ಟ ಅಗ್ನಿಯು · ಆದ್ದರಿಂದ ಈ ಅಗ್ನಿಯನ್ನೇ ಋತ್ವಿಜರು ಯಜ್ಞಕುಂಡಕ್ಕೆ ತರುತ್ತಾರೆ · ಪ್ರಾಣವಾಯುವು ಆಹವನೀಯಾಗ್ನಿಯು · ಇದು ಹೃದಯಕ್ಕಿಂತಲೂ ಮೇಲೆ ಏರಿ ಅಪಾನಕ್ಕಿಂತಲೂ ಕೆಳಗಿರುವುದನ್ನು ಮೇಲಕ್ಕೆ ಒಯ್ಯುತ್ತದೆ · ವ್ಯಾನವಾಯುವು ದಕ್ಷಿಣಾಗ್ನಿಯು · ಇದನ್ನು ಈ ಹೆಸರಿನಿಂದ ಕರೆಯಲು ಹೃದಯದಲ್ಲಿರುವ ಐದು ಸುಷಿರಗಳಲ್ಲಿ ದಕ್ಷಿಣ ಸುಷಿರದಿಂದ ವ್ಯಾನವು ನಿರ್ಗಮಿಸುವುದೇ ಕಾರಣವಾಗಿದೆ·

## ಮಂತ್ರ - ೪

यदुच्छ्वासनिश्वासौ, एतावाहुती । समं
नयतीति समानः । मनो ह वाव
यजमानः । इष्टफलमेवोदानः । स एनं
यजमानमहरहर्ब्रह्म गमयति ।। 4 ।।

---

೧· ವಿದುಷಃ ಸ್ವಾಪೋಽಪಿ ಕರ್ಮವಿಶೇಷ ಏವೇತಿ ಜ್ಞಾಪಯಿತುಮಗ್ನಿಹೋತ್ರದೃಷ್ಟಿವಿಧಾನಮ್ - ಸುಬೋಧಿನೀ·

ಯದುಚ್ಛ್ವಾಸನಿಶ್ವಾಸೌ, ಏವತಾವಾಹುತೀ । ಸಮಂ
ನಯತೀತಿ ಸಮಾನಃ । ಮನೋ ಹ ವಾವ ಯಜಮಾನಃ
ಇಷ್ಟಫಲಮೇವೋದಾನಃ । ಸ ಏನಂ ಯಜಮಾನ-
ಮಹರಹರ್ಬ್ರಹ್ಮ ಗಮಯತಿ ॥

## ಪ್ರತಿಪದಾರ್ಥ

ಯತ್ - ಯಾವುವು, ಉಚ್ಛ್ವಾಸನಿಶ್ವಾಸೌ - ಶ್ವಾಸನಿಶ್ವಾಸಗಳೋ, ಏತೌ - ಅವು, ಆಹುತೀ - ಆಹುತಿಸ್ಥಾನೀಯಗಳು, ಸಮಂ ನಯತಿ ಇತಿ - ಸಮಗೊಳಿಸುವುದರಿಂದ, ಸಮಾನಃ - ಸಮಾನ-ವಾಯುವು (ಅಧ್ವರ್ಯುವು), ಮನೋ ಹ ವೈ - ಮನಸ್ಸೇ, ಯಜಮಾನಃ - ಯಜಮಾನನು, ಇಷ್ಟಫಲಮೇವ - ಕರ್ಮಫಲವೇ, ಉದಾನಃ - ಉದಾನವಾಯುವು, ಸಃ - ಆ ಉದಾನ-ವಾಯುವು, ಏನಮ್ - ಈ, ಯಜಮಾನಮ್ - ಯಜಮಾನನ ಮನಸ್ಸನ್ನು, ಅಹರಹಃ - ದಿನ-ದಿನವೂ, ಬ್ರಹ್ಮಗಮಯತಿ - ಪರಮಾತ್ಮನ ಬಳಿಗೆ ಕಳುಹಿಸುತ್ತದೆ·

## ತಾತ್ಪರ್ಯ

ಶ್ವಾಸ-ನಿಶ್ವಾಸಗಳೆಂಬ ಉಸಿರಾಟವೇ ಆಹುತಿ· ಸಮಾನವಾಯುವು ಆಹುತಿಯನ್ನು ಸಮನಾಗಿಸುತ್ತದೆ ಮನಸ್ಸೇ ಯಜಮಾನನು · ಉದಾನವಾಯುವು ಕರ್ಮಫಲವೆನಿಸುತ್ತದೆ, ಕಾರಣ ಇದೇ ಮನಸ್ಸನ್ನು ಬ್ರಹ್ಮದೊಂದಿಗೆ ಹೊಂದಿಸುತ್ತದೆ·

(ರಂಗರಾಮಾನುಜಭಾಷ್ಯದಲ್ಲಿ ೩ ಮತ್ತು ೪ನೇ ಮಂತ್ರಗಳನ್ನು ಸೇರಿಸಿಯೇ ವ್ಯಾಖ್ಯಾನಿಸ-ಲಾಗಿದೆ· ಆದ್ದರಿಂದ ಭಾಷ್ಯ ಮತ್ತು ಅನುವಾದಗಳನ್ನು ೩ನೇ ಮಂತ್ರದಲ್ಲಿ ನೋಡಿ· )

## ಭಾಷ್ಯಸಾರ

ಶ್ವಾಸ-ನಿಶ್ವಾಸಗಳು ಅಗ್ನಿಹೋತ್ರದ ಎರಡು ಆಹುತಿಗಳು· ಸಮಾನವು ಈ ಹವಿಸ್ಸುಗಳನ್ನು ಶರೀರದ ಸಾಮ್ಯಸ್ಥಿತಿಗಾಗಿ ಆಹವನೀಯ(ಪ್ರಾಣ)ಸ್ಥಾನಕ್ಕೆ ಒಯ್ಯುತ್ತದೆ · ಆದ್ದರಿಂದ ·ಇದೇ ಹೋತೃವು · ಮನಸ್ಸು ಯಜಮಾನ, ಯಾಗ ಫಲಭೋಕ್ತೃವು· ಸ್ವಾಪಾಗ್ನಿಹೋತ್ರದಫಲವು ಉದಾನವಾಯುವು· ಈ ಉದಾನವು ಯಾಗಫಲವು · ಯಜಮಾನನನ್ನು ಸ್ವರ್ಗಾದಿಗಳಿಗೆ ಕೊಂಡೊಯ್ಯುವಂತೆ, ಮನಸ್ಸನ್ನು ಪುರೀತನ್ನಾಡಿ-ಯಲ್ಲಿರುವ ಬ್ರಹ್ಮದೊಂದಿಗೆ ಸೇರಿಸುತ್ತದೆ·

ಬ್ರಹ್ಮವು ಸರ್ವವ್ಯಾಪಕವಾದುದು· ಅದು 'ಪುರೀತತ್' ನಾಡಿಯಲ್ಲಿಯೂ ಇರುತ್ತದೆ· ಆದ್ದರಿಂದ

ಜೀವನು ನಿದ್ರೆಯಕಾಲದಲ್ಲಿ ಅಲ್ಲಿರುವ ಬ್ರಹ್ಮವನ್ನು ಸೇರುವುದು ಸಹಜವಾಗಿದೆ · ಇದನ್ನೇ 'ಏವಮೇವೇಮಾಃ ಪ್ರಜಾಃ' ಎಂಬ ಛಾಂದೋಗ್ಯಶ್ರುತಿಯಲ್ಲಿ ಹೇಳಲಾಗಿದೆ · ಇದೇ ರೀತಿ ಮನಸ್ಸು ಸುಷುಪ್ತಿಯಕಾಲದಲ್ಲಿ ಪುರೀತನ್ನಾಡಿಯಲ್ಲಿ ಪ್ರವೇಶಿಸುತ್ತದೆ·

## ಮಂತ್ರ - ೫

अत्रैष देवः स्वप्ने महिमानमनुभवति ।
यद् दृष्टंदृष्टमनुपश्यति, श्रुतंश्रुतमेवार्थं
मनुश्रृणोति, देशदिगन्तरैश्च प्रत्यनुभूतं
पुनः पुनः प्रत्यनुभवति, दृष्टं चादृष्टं च श्रुतं
चाश्रुतं च अनुभूतं चाननुभूतं च
सच्चासच्च सर्वं पश्यति ; सर्वः पश्यति ॥ 5 ॥

ಅತ್ರೈಷ ದೇವಃ ಸ್ವಪ್ನೇ ಮಹಿಮಾನಮನುಭವತಿ ।
ಯದ್ದೃಷ್ಟಂ ದೃಷ್ಟಮನುಪಶ್ಯತಿ, ಶ್ರುತಂಶ್ರುತಮೇವಾರ್ಥ
ಮನುಶೃಣೋತಿ, ದೇಶದಿಗಂತರೈಶ್ಚ ಪ್ರತ್ಯನುಭೂತಂ
ಪುನಃ ಪುನಃ ಪ್ರತ್ಯನುಭವತಿ, ದೃಷ್ಟಂ ಚಾದೃಷ್ಟಂ ಚ ಶ್ರುತಂ
ಚಾಶ್ರುತಂ ಚ ಅನುಭೂತಂ ಚಾನನುಭೂತಂ ಚ
ಸಚ್ಚಾಸಚ್ಚ ಸರ್ವಂ ಪಶ್ಯತಿ; ಸರ್ವಃ ಪಶ್ಯತಿ ॥

### ಪ್ರತಿಪದಾರ್ಥ

**ಅತ್ರ** - ಇಲ್ಲಿ, **ಏಷಃ** - ಈ, **ದೇವಃ** - ಪ್ರಕಾಶದಿಂದ ಕೂಡಿದ ಜೀವನು, **ಸ್ವಪ್ನೇ** - ಕನಸಿನಲ್ಲಿ , **ಮಹಿಮಾನಮ್** - (ಆನೆ, ಕುದುರೆ ಮುಂತಾದ ವಾಹನಗಳನ್ನು ಏರುವ ಹಾಗೂ ಇತರ) ವೈಭವ-ವನ್ನು, **ಅನುಭವತಿ** - ಅನುಭವಿಸುತ್ತಾನೆ · **ಯತ್** - ಯಾವುದು, **ದೃಷ್ಟಂ ದೃಷ್ಟಮ್** - (ಎಚ್ಚರವಾಗಿರುವಾಗ) ಬಹಳಸಾರಿ ನೋಡಲ್ಪಟ್ಟಿದೆಯೋ, (**ತತ್** - ಅದನ್ನು), **ಅನುಪಶ್ಯತಿ** - ಪುನಃ ಕಾಣುತ್ತಾನೆ · **ಶ್ರುತಂ ಶ್ರುತಮ್** - ಅನೇಕ ಸಲ ಕೇಳಿರುವುದನ್ನು, **ಅನುಶೃಣೋತಿ** - ತಿರುಗಿ ಕೇಳುತ್ತಾನೆ, **ದೇಶದಿಗಂತರೈಶ್ಚ** - ಬೇರೆ-ಬೇರೆ, ದಿಕ್ಕು-ದೇಶಗಳಲ್ಲಿ, **ಪ್ರತ್ಯನುಭೂತಮ್** - ಅನುಭವಿಸಿದ ವಿಷಯಗಳನ್ನು, **ಪುನಃ ಪುನಃ** - ಪದೇ ಪದೇ, **ಪ್ರತ್ಯನುಭವತಿ** - ಅನುಭವಿಸುತ್ತಾನೆ

**ದೃಷ್ಟಂ ಚ** - ನೋಡಿರುವುದನ್ನೂ, **ಅದೃಷ್ಟಂ ಚ** - ನೋಡದಿರುವುದನ್ನೂ, **ಶ್ರುತಂ ಚ**- ಕೇಳಿರುವುದನ್ನೂ, **ಅಶ್ರುತಂ ಚ** - ಕೇಳದಿರುವುದನ್ನೂ, **ಅನುಭೂತಂ ಚ** - ಅನುಭವಿಸಿದುದನ್ನೂ, **ಅನನುಭೂತಂಚ** - ಅನುಭವಿಸದೇ ಇರುವುದನ್ನೂ, **ಸತ್ ಚ** - ಇರುವುದನ್ನೂ, **ಅಸತ್ ಚ** - ಇಲ್ಲದಿರುವುದನ್ನೂ, **ಸರ್ವಮ್** - ಎಲ್ಲವನ್ನೂ, **ಪಶ್ಯತಿ** - ನೋಡುತ್ತಾನೆ. **ಸರ್ವಃ** - ಕರ್ತೃ, ಭೋಕ್ತೃ ಮುಂತಾಗಿ, **ಪಶ್ಯತಿ** - ಅನುಭವಿಸುತ್ತಾನೆ·

## ತಾತ್ಪರ್ಯ

ಪ್ರಕಾಶರೂಪನಾದ ಜೀವನು ಕನಸಿನಲ್ಲಿ ಅನೇಕ ವೈಭವಗಳನ್ನು ಅನುಭವಿಸುತ್ತಾನೆ· ಜಾಗ್ರದವಸ್ಥೆ-ಯಲ್ಲಿ ನೋಡಿದ, ಕೇಳಿದ, ಅನುಭವಿಸಿದ ವಿಷಯಗಳನ್ನು ನೋಡುತ್ತಾನೆ, ಕೇಳುತ್ತಾನೆ ಹಾಗೂ ಅನುಭವಿಸುತ್ತಾನೆ· ಆ ಅವಸ್ಥೆಯಲ್ಲಿ ಕಾಣದ, ಕೇಳದ, ಅನುಭವಿಸದ ವಿಷಯಗಳನ್ನೂ ಕಂಡು, ಕೇಳಿ ಅನುಭವಿಸುತ್ತಾನೆ · ಇವನು ಸ್ವಾಪ್ನಅನುಭವವನ್ನು ಕರ್ತೃವಾಗಿಯೋ ಭೋಕ್ತೃವಾಗಿಯೋ ಸಂಪಾದಿಸ-ಬಹುದು·

## ರಂಗರಾಮಾನುಜಭಾಷ್ಯ

ಕತರ ಏಷ ದೇವಃ ಸ್ವಪ್ನಾನ್ ಪಶ್ಯತೀಶ್ಯಸ್ಯೋತ್ತರಮಾಹ - **ಅತ್ರೈಷ ದೇವಃ ಇತಿ** । ಅತ್ರ ಅಸ್ಮಿನ್ನವಸರೇ **ಏಷ ದೇವಃ** - ಜೀವಃ ಸ್ವಪ್ನೇ ಕರಿತುರಗಾದಿಲಕ್ಷಣಂ ಮಹಿಮಾನಮನುಭವತಿ - ಪಶ್ಯತಿ । ಜಾಗರೇ ಪ್ರಾಕ್ ಯದ್ ದೃಷ್ಟಮ್, ತಮೇವಾರ್ಥಮನುಪಶ್ಯತಿ । **ಅನು** - ಪಶ್ಚಾತ್ **ಪಶ್ಯತಿ** - ಅನುಭವತಿ । ದೃಷ್ಟಂ ದೃಷ್ಟಮ್ ಭೂಯೋದೃಷ್ಟಮಿತ್ಯರ್ಥಃ । ಶ್ರುತಮೇವಾರ್ಥ ಮನುಶೃಣೋತಿ । ದೇಶಾಂತರೇಷು ದಿಗಂತರೇಷು ಪ್ರತ್ಯಹಮನುಭೂತಮರ್ಥಂ ಪುನಃ ಪುನರನುಭವತಿ । ದೃಷ್ಟಂ ಶ್ರುತಮೇವಾನುಭವತೀತ್ಯಯಮಪಿ ನಿಯಮೋ ನಾಸ್ತಿ; ಕದಾಚಿತ್ ಪೂರ್ವಾನನುಭೂತಮಪಿ ಸ್ವಶರೀರಚ್ಛೇದನಾದಿಕಮನುಭವತಿ । ವಿದ್ಯಮಾನಂ ಚಾನುಭವತಿ । ಅವಿದ್ಯಮಾನಂ ಚಾನುಭವತಿ । **ಸರ್ವಃ ಪಶ್ಯತಿ** ಸರ್ವಃ ಸನ್ ಪಶ್ಯತಿ । ದ್ರಷ್ಟಾ, ಶ್ರೋತಾ, ಘ್ರಾತಾ, ಗಂತಾ, ವಕ್ತಾಚೇತ್ಯಾದಿಸರ್ವರೂಪಃ ಸನ್ ಪಶ್ಯತೀತ್ಯರ್ಥಃ । ತದಾನೀಂ ಜಾಗರೀಯ ಬಾಹ್ಯ-ಜ್ಞಾನಕರ್ಮೇಂದ್ರಿಯಾಣಾ-ಮುಪರತವ್ಯಾಪಾರತ್ವೇಽಪಿ ಸ್ವಾಪ್ನಿಕೈರೀಶ್ವರಸೃಷ್ಟೈಃ ಶರೀರೇಂದ್ರಿಯೈಃ ದ್ರಷ್ಟೃತ್ವಾದಿಮಾನ್ ಸನ್ ಅನುಭವತೀತಿ ಭಾವಃ ॥

## ಅನುವಾದ

ಈ ಜೀವನು ಯಾವರೀತಿಯಿಂದ ಕನಸುಗಳನ್ನು ಕಾಣುತ್ತಾನೆ? (ಸ್ವಾಪ್ನವಸ್ತುಗಳನ್ನು ಅನುಭವಿಸು-ತ್ತಾನೆ?) ಎಂಬ ಪ್ರಶ್ನೆಗೆ ಉತ್ತರವನ್ನು ಹೇಳುತ್ತಾರೆ - **ಅತ್ರೈಷ ದೇವಃ ಸ್ವಪ್ನೇ ಇತಿ** । **ಅತ್ರ**

ಈ ಸಂದರ್ಭದಲ್ಲಿ **ಏಷ ದೇವಃ** - ಜೀವನು ಕನಸಿನಲ್ಲಿ ಆನೆ, ಕುದುರೆ ಮುಂತಾದ ಹಿರಿಮೆಯನ್ನು **ಅನುಭವತಿ** - ಕಾಣುತ್ತಾನೆ· ಎಚ್ಚರವಾಗಿರುವಾಗ ಹಿಂದೆ ಯಾವುದು ನೋಡಲ್ಪಟ್ಟಿದೆಯೋ, ಅದೇ ವಸ್ತುವನ್ನು ತಿರುಗಿಕಾಣುತ್ತಾನೆ· **ಅನು** - ಆಮೇಲೆ **ಪಶ್ಯತಿ** - ಅನುಭವಿಸುತ್ತಾನೆ· **ದೃಷ್ಟಂ ದೃಷ್ಟಮ್** - ಬಹಳಸಾರಿ ನೋಡಿದ್ದು ಎಂದರ್ಥ· ಕೇಳಿದ ಶಬ್ದವನ್ನೇ ತಿರುಗಿ ಕೇಳುತ್ತಾನೆ· ಬೇರೆ ಸ್ಥಳಗಳಲ್ಲಿ ಬೇರೆ ದಿಕ್ಕುಗಳಲ್ಲಿ ಪ್ರತಿದಿನ ಅನುಭವಿಸಿದ ಅರ್ಥವನ್ನೇ ಪುನಃ ಪುನಃ ಅನುಭವಿಸುತ್ತಾನೆ· ಕಂಡಿರುವುದನ್ನು, ಕೇಳಿರುವುದನ್ನು ಮಾತ್ರ ಅನುಭವಿಸುತ್ತಾನೆ ಎಂಬ ನಿಯಮವೂ ಇಲ್ಲ· ಒಮ್ಮೊಮ್ಮೆ ಹಿಂದೆಂದೂ ಅನುಭವಿಸದೇ ಇರುವ ತನ್ನ ಶರೀರಚ್ಛೇದನ ಮುಂತಾದವುಗಳನ್ನು ಅನುಭವಿಸುತ್ತಾನೆ· ಇರುವುದನ್ನೂ ಅನುಭವಿಸುತ್ತಾನೆ, ಇಲ್ಲದಿರುವುದನ್ನೂ ಅನುಭವಿಸುತ್ತಾನೆ· **ಸರ್ವಃ ಪಶ್ಯತಿ** - ಎಲ್ಲವೂ ಆಗಿ ಅನುಭವಿಸುತ್ತಾನೆ· ನೋಡುವವನು, ಕೇಳುವವನು, ವಾಸನೆಹಿಡಿಯುವವನು, ಹೋಗುವವನು, ಮಾತನಾಡುವವನು, ಈ ರೀತಿ ಎಲ್ಲವೂ ಆಗಿ ಅನುಭವಿಸುತ್ತಾನೆ ಎಂದು ಆಶಯ· ಆ ಕಾಲದಲ್ಲಿ ಜಾಗ್ರದವಸ್ಥೆಯ ಬಾಹ್ಯವಾದ ಎಲ್ಲ ಜ್ಞಾನ-ಕರ್ಮೇಂದ್ರಿಯಗಳೂ (ತಮ್ಮ ತಮ್ಮ) ಕಾರ್ಯಗಳಿಂದ ವಿಶ್ರಾಂತವಾದರೂ ಈಶ್ವರನಿಂದ ಸೃಜಿಸಲಾದ ಸ್ವಾಪ್ನಿಕ - ದೇಹೇಂದ್ರಿಯಗಳಿಂದ ದ್ರಷ್ಟೃತ್ವಾದಿಗಳನ್ನು ಪಡೆದು ಅನುಭವಿಸುತ್ತಾನೆ ಎಂದು ತಾತ್ಪರ್ಯ·

## ಭಾಷ್ಯಸಾರ

ಕನಸು ಕಾಣುವವನು ಯಾರು, ಹೇಗೆ? ಎಂಬುದು ಅತ್ಯಂತ ಕುತೂಹಲಕಾರಿಯಾದ ಪ್ರಶ್ನೆ· ಇಂದ್ರಿಯಗಳು ವಿಶ್ರಮಿಸಿದ ಮೇಲೆ ಗಾಢನಿದ್ರೆ (ಸುಷುಪ್ತಿ) ಬರುವ ಮೊದಲು ಕನಸು ಬೀಳುತ್ತದೆ· ಇಂತಹ ಕನಸಿನಲ್ಲಿ ವಿವಿಧ-ವಿಚಿತ್ರವಾದ ಅನುಭವಗಳು ಉಂಟಾಗುವುದೇನೋ ನಿಜ · ಆದರ ಕರ್ತೃವಾಗಲೀ, ಭೋಕ್ತೃವಾಗಲೀ ಯಾರೆಂದು ಆಚಾರ್ಯರು ವಿವರಿಸುತ್ತಾರೆ·

ಸ್ವಪ್ನವನ್ನು ಅನುಭವಿಸುವವನು ಅಪೂರ್ವ ವ್ಯಕ್ತಿಯೇನಲ್ಲ· ಶರೀರದಲ್ಲಿರುವ ಕ್ಷೇತ್ರಜ್ಞ, ಜೀವಾತ್ಮ· ಇವನೇ ಜಾಗ್ರದವಸ್ಥೆಯಲ್ಲಿ ಇಂದ್ರಿಯಗಳಿಂದ ಪ್ರತ್ಯಕ್ಷಾನುಭವ ಪಡೆಯುತ್ತಾನೆ· ಆದರೆ ಇವನು ಸ್ವಪ್ನ-ಸಮಯದಲ್ಲಿ ಯಾವ ಇಂದ್ರಿಯಗಳ ಸಹಕಾರವಿಲ್ಲದೆಯೇ ತನ್ನಷ್ಟಕ್ಕೆ ತಾನೆ ಬೆಳಗುತ್ತ, ಸ್ವಾಪ್ನ-ಪದಾರ್ಥಗಳನ್ನು ಅನುಭವಿಸುತ್ತಾನೆ· ಸ್ವಾಪ್ನಅನುಭವಗಳು ಅಗಾಧ, ಅಪಾರ· ಅನುಭವಿಸಿದ ವಸ್ತು-ಗಳನ್ನೇ ಅನುಭವಿಸಬಹುದು· ಹಿಂದೆಂದೂ ಅನುಭವಕ್ಕೆ ಬಾರದ ವಿಚಿತ್ರಆಕಾರಗಳನ್ನೂ ಕಾಣಬಹುದು, ಅವಸ್ಥೆಗಳನ್ನೂ ತಲುಪಬಹುದು· ಆಗ ಕ್ಷೇತ್ರಜ್ಞನು ಕನಸಿನಲ್ಲಿಯೇ ಪರಮಾತ್ಮನಿಂದ ತಾತ್ಕಾಲಿಕವಾಗಿ ಸೃಷ್ಟಿಸಲ್ಪಟ್ಟ ಪದಾರ್ಥಗಳನ್ನು ಅನುಭವಿಸುತ್ತಾನೆ· ಕೆಲವು ವಿದ್ವಾಂಸರು ಈ ರೀತಿ ಅಭಿಪ್ರಾಯ-ಪಡುತ್ತಾರೆ· ಮನಸ್ಸು ಜ್ಞಾನಸಾಧನ· ಆದುದರಿಂದ ದ್ರಷ್ಟೃ ಎಂದಿಗೂ ಆಗಲಾರದು· ದ್ರಷ್ಟಾ ಜೀವನೇ ಸರಿ· ಆದರೂ ಕಣ್ಣು ಮೊದಲಾದ ಬಾಹ್ಯೇಂದ್ರಿಯಗಳ ಸಹಾಯವಿಲ್ಲದೆಯೇ ಸ್ವಾಪ್ನಾನು-ಭವಕ್ಕೆ ಸಾಧನವಾಗುವಲ್ಲಿ ಮನಸ್ಸು ಸ್ವತಂತ್ರವು· ಹಾಗಾಗಿ ಇಂದ್ರಿಯವ್ಯಾಪಾರಗಳು ಇಲ್ಲದಿದ್ದರೂ ಮನಸ್ಸೇ ಕನಸು ಕಾಣುತ್ತದೆಯೆಂದು ಈ ಮಂತ್ರ ತಿಳಿಸಿದರೂ ತೊಂದರೆಯೇನಿಲ್ಲ· ಪ್ರಶ್ನೆ ಕೇಳು-ವವನು ಮಂದಪ್ರಜ್ಞನೇನಲ್ಲ, ಅವನಿಗೆ ಸಾಧನ ಬೇರೆ, ದ್ರಷ್ಟಾ ಬೇರೆಯೆಂಬ ಅರಿವು ಇದ್ದೇ ಇದೆ·

ಆದರೂ ಪ್ರಶ್ನೆಕೇಳುವಲ್ಲಿ ಇದು ಅಭಿಪ್ರಾಯ ಕಣ್ಣು ಮುಂತಾದ ಬಾಹ್ಯೇಂದ್ರಿಯಗಳು ವಿಶ್ರಾಂತವಾದಾಗ ಮನಸ್ಸಿಗೆ ಕನಸುಕಾಣುವ ಶಕ್ತಿ ಎಲ್ಲಿಂದ ಬರಬೇಕು? ಜಾಗ್ರದವಸ್ಥೆಯಲ್ಲಿ ಆಯಾಯಾ ಇಂದ್ರಿಯಗಳ ಸಹಕಾರದಿಂದ ಮಾತ್ರ ಪ್ರತ್ಯಕ್ಷಾದಿ ಅನುಭವವುಂಟಾಗುವುದು ನಿಯತವಷ್ಟೇ! ಆದರೆ ಸ್ವಪ್ನಸಮಯದಲ್ಲಿ ಮನಸ್ಸು ಬಾಹ್ಯೇಂದ್ರಿಯಗಳ ಸಹಕಾರವಿಲ್ಲದೆಯೇ ಸ್ವಾಪ್ನರೂಪಾದಿಗಳನ್ನು ಕಾಣಬಹುದು·

## ಮಂತ್ರ - ೬

स यदा तेजसाऽभिभूतो भवति, अत्रैष देवः
स्वप्नान्न पश्यति । अथ य(त)देतस्मिन् शरीरे (एतत्)
सुखं भवति ।। 6 ।।

ಸ ಯದಾ ತೇಜಸಾಽಽಭಿಭೂತೋ ಭವತಿ, ಅತ್ರೈಷ ದೇವಃ
ಸ್ವಪ್ನಾನ್ನ ಪಶ್ಯತಿ । ಅಥ ಯ (ತ)ದೇತಸ್ಮಿನ್ ಶರೀರೇ
(ಏತತ್) ಸುಖಂ ಭವತಿ ॥

### ಪ್ರತಿಪದಾರ್ಥ

ಸಃ - ಜೀವನು, ಯದಾ - ಯಾವ ಸುಷುಪ್ತಿಕಾಲದಲ್ಲಿ, ತೇಜಸಾ - ಸರ್ವಪ್ರಕಾಶಕನಾದ ಪರಮಾತ್ಮನಿಂದ, ಅಭಿಭೂತಃ - ಹಬ್ಬಿಕೊಳ್ಳಲ್ಪಡುತ್ತಾನೆಯೋ, ಅತ್ರ - ಆಗ, ಏಷ ದೇವಃ - ಈ ಜೀವನು, ಸ್ವಪ್ನಾನ್ - ಕನಸಿನವಸ್ತುಗಳನ್ನು, ನ ಪಶ್ಯತಿ - ನೋಡುವುದಿಲ್ಲ, ಅಥ - ಆದರೆ, ಯತ್ ಸುಖಮ್ - ಯಾವ ಸುಖವಿದೆಯೋ, ತತ್ - ಅದು, ಏತಸ್ಮಿನ್ - ಈ, ಶರೀರೇ ಸತ್ಯೇವ - ಶರೀರವಿದ್ದಾಗಲೇ, ಭವತಿ - ಉಂಟಾಗುತ್ತದೆ·

### ತಾತ್ಪರ್ಯ

ಸುಷುಪ್ತಿಕಾಲದಲ್ಲಿ ಜೀವನು ಸರ್ವಲೋಕಪ್ರಕಾಶಕನಾದ ಪರಮಾತ್ಮನೊಂದಿಗೆ ಕೂಡಿದ್ದು ಸ್ವಪ್ನ-ಕಾಲದಲ್ಲಿ ಸೃಜಿಸಲ್ಪಟ್ಟ ರಥ, ಗಜ, ತುರಗಾದಿವೈಭವಗಳನ್ನು ನೋಡಲಾರನು · ಸುಖವುಂಟಾಗುವುದು ಈ ಶರೀರ ಇರುವವರೆಗೆ ಮಾತ್ರ·

### ರಂಗರಾಮಾನುಜಭಾಷ್ಯ

ಏತಸ್ಮಿನ್ನಂತರೇ 'ಸತಾ ಸೋಮ್ಯ ತದಾ ಸಂಪನ್ನೋ ಭವತಿ', 'ತೇಜಸಾ ಹಿ ತದಾ ಸಂಪನ್ನೋ

ಭವತಿ ಇತಿ ಶ್ರುತ್ಯುಕ್ತರೀತ್ಯಾ ಪರಪ್ರಕಾಶಕತಯಾ ತೇಜಶ್ಶಬ್ದಿತೇನ ಪರಮಾತ್ಮನಾ ಅಭಿಭೂತೋ ಭವತಿ । ಸಂಪನ್ನೋಭವತಿ - ಸಂಪರಿಷ್ವಕ್ತೋ ಭವತೀತಿ ಯಾವತ್, ತದಾ ಸ್ವಾಪ್ನಾನ್ ಪದಾರ್ಥಾನ್ ನ ಪಶ್ಯತೀತ್ಯರ್ಥಃ । ತತಶ್ಚ ಕತರ ಏಷ ಸ್ವಪ್ನಾನ್ ಪಶ್ಯತೀತಿ ಪ್ರಶ್ನಸ್ಯ - 'ಬ್ರಹ್ಮಸಂಪತ್ತಿವಿರಹದಶಾಯಾಂ ಮನೋಮಾತ್ರಪರಿಶೇಷಸಮಯೇ ಸ್ವಾಪ್ನಾನ್ ಪದಾರ್ಥಾನ್ ಪಶ್ಯತೀತಿ ಉತ್ತರಮುಕ್ತಂ ಭವತಿ' ।

'ಕಸ್ಮಿತತ್ ಸುಖಂ ಭವತಿ' ಇತ್ಯಸ್ಯ ಉತ್ತರಮಾಹ - **ಅಥ ಯ(ತ)ದೇತಸ್ಮಿನ್ ಇತಿ** । ಯತ್ ಸುಖಂ ಭವತಿ ತತ್ ಏತಸ್ಮಿನ್ ಶರೀರೇ ಸತ್ಯೇವ ಭವತೀತ್ಯರ್ಥಃ । ಶರೀರಮೇವ ವೈಷಯಿಕಸುಖಹೇತುರಿತ್ಯುಕ್ತಂ ಭವತಿ । 'ಅಶರೀರಂ ವಾವ ಸಂತಂ ನ ಪ್ರಿಯಾಪ್ರಿಯೇ ಸ್ಪೃಶತಃ' ಇತಿ ಶ್ರುತೇರಿತಿ ದ್ರಷ್ಟವ್ಯಮ್ ।

## ಅನುವಾದ

ಇಷ್ಟರಲ್ಲಿಯೇ, 'ಸತಾ ಸೋಮ್ಯ ತದಾ ಸಂಪನ್ನೋ ಭವತಿ' 'ತೇಜಸಾ ಹಿ ತದಾ ಸಂಪನ್ನೋಭವತಿ' ಎಂಬ ಶ್ರುತಿವಾಕ್ಯಗಳಂತೆ ಬೇರೆಯ ವಸ್ತುಗಳನ್ನು ಬೆಳಗಿಸುವುದರಿಂದ 'ತೇಜಸ್' ಎಂದು ಕರೆಯಲಾದ ಪರಮಾತ್ಮನಿಂದ **ಅಭಿಭೂತೋ ಭವತಿ** (ಪುಷ್ಟವಾಗುತ್ತದೆ) ತಬ್ಬಿಕೊಳ್ಳಲ್ಪಡುತ್ತದೆ ಎಂದು ಭಾವ· ಆಗ ಸ್ವಾಪ್ನವಸ್ತುಗಳನ್ನು ಕಾಣುವುದಿಲ್ಲ ಆದುದರಿಂದ ಜೀವನು ಹೇಗೆ ಕನಸು ಕಾಣುತ್ತಾನೆ? ಎಂಬ ಪ್ರಶ್ನೆಗೆ ಬ್ರಹ್ಮಪ್ರಾಪ್ತಿಯಿಲ್ಲದೇ ಮನಸ್ಸು ಮಾತ್ರ ಉಳಿದಿರುವ ಕಾಲದಲ್ಲಿ ಸ್ವಾಪ್ನಪದಾರ್ಥಗಳನ್ನು ಕಾಣುತ್ತಾನೆ ಎಂದು ಉತ್ತರವನ್ನು ಹೇಳಿದಂತಾಯಿತು·

ಯಾರಿಗೆ ಈ ಸುಖವುಂಟಾಗುತ್ತದೆ? ಎಂಬ ಪ್ರಶ್ನೆಗೆ ಉತ್ತರವನ್ನು ಹೇಳುತ್ತಾನೆ· **ಅಥ ಯ(ತ)ದೇತಸ್ಮಿನ್ ಇತಿ** । ಯಾವ ಸುಖವಿದೆಯೋ ಅದು ಈ ಶರೀರವಿದ್ದರೆ ಮಾತ್ರವುಂಟಾಗುತ್ತದೆ· ಇದರಿಂದ ಶರೀರವೇ ವೈಷಯಿಕಸುಖಕ್ಕೆ ಕಾರಣವೆಂದು 'ಅಶರೀರಂ ವಾವ ಸಂತಂ ನ ಪ್ರಿಯಾಪ್ರಿಯೇ ಸ್ಪೃಶತಃ' - 'ಶರೀರವಿಲ್ಲದವನನ್ನು ಸುಖದುಃಖಗಳು ಮುಟ್ಟಲಾರವು' ಎಂಬ ಶ್ರುತಿಯಲ್ಲಿ ಹೇಳಿರುವುವರಿಂದ ಸಿದ್ಧವಾದಂತಾಯಿತು·

## ಭಾಷ್ಯಸಾರ

ಪರಮಾತ್ಮನು ಎಲ್ಲವನ್ನೂ ಪ್ರಕಾಶಿಸುವ ಪರಮಮಹಿಮನು· ಇಂತಹ ತೇಜೋರೂಪಿ ಪರಮಾತ್ಮನನ್ನು ಜೀವ ಆಲಿಂಗಿಸಿದಾಗ ಕನಸು ಕಾಣಲಾರದು· ಸುಖಮಾತ್ರ ಉಂಟಾಗುತ್ತದೆ ಮಲಗಿ ಎಚ್ಚತ್ತವನು ಸ್ಮರಿಸುವ ಸುಷುಪ್ತಿಸುಖವು ಈ ಶರೀರದ ಹೊರಗೆ ಹುಟ್ಟಲಾರದು· ಈ ದೇಹದಲ್ಲಿ ಮಾತ್ರ ಉಂಟಾಗುತ್ತದೆ· ಈ ಬಗೆಯ ಸುಷುಪ್ತಿಸುಖಕ್ಕೆ ಹೊರಗಿನ ಶಬ್ದ ಮುಂತಾದ ವಿಷಯಗಳು ಉಪಾಧಿಗಳಾಗಿ ಸಲ್ಲಲಾರವು· ನಿರುಪಾಧಿಕಸುಖವೇ ಸುಷುಪ್ತಿಸುಖ· ಇದು ಜೀವನಲ್ಲಿಯೇ ಹುಟ್ಟುವಂತಹದು,

## ಮಂತ್ರ - ೭

स यथा सोम्य वयांसि वासोवृक्षं संप्रतिष्ठन्ते ।
एवं ह वै तत् सर्वं पर आत्मनि संप्रतिष्ठते ।। 7 ।।

ಸ ಯಥಾ ಸೋಮ್ಯ ವಯಾಂಸಿ ವಾಸೋವೃಕ್ಷಂ ಸಂಪ್ರತಿಷ್ಠಂತೇ
ಏವಂ ಹ ವೈ ತತ್ ಸರ್ವಂ ಪರ ಆತ್ಮನಿ ಸಂಪ್ರತಿಷ್ಠತೇ ॥

### ಪ್ರತಿಪದಾರ್ಥ

ಹೇ ಸೋಮ್ಯ! - ಪ್ರಿಯ ಶಿಷ್ಯನೇ!, ವಯಾಂಸಿ - ಪಕ್ಷಿಗಳು (ಹೊರಗೆಹಾರಾಡಿ ಬಂದ ನಂತರ), ವಾಸೋವೃಕ್ಷಮ್ - ವಾಸವಾಗಿದ್ದ ಮರದಲ್ಲಿ, ಯಥಾ - ಹೇಗೆ, ಸಂಪ್ರತಿಷ್ಠಂತೇ ಹ ವೈ - ಸೇರಿಕೊಳ್ಳುವವಷ್ಟೇ, ಸಃ - ಈ ದೃಷ್ಟಾಂತವು, ಯಥಾ - ಹೇಗೋ, ಏವಮ್ - ಹಾಗೆಯೇ, ತತ್ ಸರ್ವಮ್ - ಕಣ್ಣು ಮುಂತಾದವು, ಪರೇ ಆತ್ಮನಿ - ಪರಮಾತ್ಮನಲ್ಲಿ, ಸಂಪ್ರತಿಷ್ಠತೇ - ನೆಲೆಗೊಳ್ಳುತ್ತವೆ

### ತಾತ್ಪರ್ಯ

ಎಲೈ ಸೋಮ್ಯನೇ! ಪ್ರಪಂಚದ ಎಲ್ಲ ವಸ್ತುಗಳೂ ಪರಬ್ರಹ್ಮದಲ್ಲಿ ಪ್ರತಿಷ್ಠಿತವಾಗಿವೆ· ಈ ವಿಷಯದಲ್ಲಿ ಒಂದು ದೃಷ್ಟಾಂತವಿದೆ · ಪಕ್ಷಿಗಳು ತಮ್ಮ ವಾಸವೃಕ್ಷದಿಂದ ಹೊರಹೊರಟು ಆಹಾರಕ್ಕಾಗಿ ಸಂಚರಿಸಿ ಪುನಃ ವಿಶ್ರಾಂತಿಗಾಗಿ ಅಲ್ಲಿಗೆ ಹಿಂತಿರುಗುತ್ತವೆ · ಅವುಗಳಿಗೆ ಆ ಮರವೇ ನೆಲೆ. ಹಾಗೇ ಎಲ್ಲಕ್ಕೂ ಭಗವಂತನೇ ನಿಜವಾದ ಆಸರೆ·

### ರಂಗರಾಮಾನುಜಭಾಷ್ಯ

ಕಸ್ಮಿನ್ ಸರ್ವೇ ಪ್ರತಿಷ್ಠಿತಾ ಭವಂತಿ? ಇತ್ಯಸ್ಯೋತ್ತರಮಾಹ - ಸ ಯಥಾ ಸೋಮ್ಯ ಇತಿ । ವಯಾಂಸಿ - ಪಕ್ಷಿಣಃ ವಾಸೋವೃಕ್ಷಂ - ನಿವಾಸವೃಕ್ಷಂ ಪ್ರತಿ ಸಂಪ್ರತಿಷ್ಠಂತೇ । ಸ ದೃಷ್ಟಾಂತೋ ಯಥಾ, ಏವಂ ಪರಮಾತ್ಮನಿ ಸರ್ವಂ ಪ್ರತಿಷ್ಠಿತಂ ಭವತೀತ್ಯರ್ಥಃ ।

### ಅನುವಾದ

ಯಾರಲ್ಲಿ ಎಲ್ಲವೂ ನೆಲೆಗೊಂಡಿವೆ? ಎಂಬ ಪ್ರಶ್ನೆಗೆ ಉತ್ತರವನ್ನು ಹೇಳುತ್ತಾನೆ · ಸ ಯಥಾ ಸೋಮ್ಯ ಇತಿ । ವಯಾಂಸಿ - ಪಕ್ಷಿಗಳು ವಾಸೋವೃಕ್ಷಮ್ - ವಾಸಿಸುವಮರವನ್ನು

ಸಂಪ್ರತಿಷ್ಠಂತೇ - ಸೇರುತ್ತವೆ · ಈ ದೃಷ್ಟಾಂತವು ಹೇಗೋ ಹಾಗೆಯೇ ಪರಮಾತ್ಮನಲ್ಲಿ ಎಲ್ಲವೂ ನೆಲೆಸಿವೆ

## ಭಾಷ್ಯಸಾರ

ಪಕ್ಷಿಗಳು ಮರಗಳ ಗೂಡು-ಪೊಟರೆಗಳಲ್ಲಿ ವಾಸಿಸುತ್ತವೆ · ಹಗಲು ಆಹಾರಕ್ಕಾಗಿ ವಾಸಸ್ಥಳದಿಂದ ಹೊರಹೊರಡುತ್ತವೆ · ತಮಗೆ ಮನಬಂದಲ್ಲಿ ಹಾರಾಡಿ ಸಾಯಂಕಾಲ ಗೂಡಿಗೆ ಹಿಂತಿರುಗುತ್ತವೆ · ವಾಸ-ವೃಕ್ಷಗಳಲ್ಲಿ ತಂಗಿ ತಮ್ಮ ಬಳಲಿಕೆಯನ್ನು ಕಳೆದುಕೊಳ್ಳುತ್ತವೆ · ಇದೇ ರೀತಿ ಕಾರ್ಯಕಾರಣರೂಪದ ವಸ್ತುಗಳು ಅವುಗಳನ್ನು ಗ್ರಹಿಸುವ ಇಂದ್ರಿಯಗಳು, ಮನಸ್ಸು, ಪಂಚಪ್ರಾಣಗಳು ಮತ್ತು ಜೀವ-ಎಲ್ಲವೂ ಜಾಗ್ರದವಸ್ಥೆಯ ವಿವಿಧ ಚಟುವಟಿಕೆಗಳಿಂದ ಹಿಂದೆ ಸರಿದು ಸುಷುಪ್ತಿಯಕಾಲದಲ್ಲಿ ಅವಿಭಕ್ತವಾಗಿರುತ್ತವೆ· ಪರಬ್ರಹ್ಮನಲ್ಲಿ ನೆಲೆಸುತ್ತವೆ·

## ಮಂತ್ರ - ೮

पृथिवी च पृथिवीमात्रा च आपश्चापोमात्रा च
तेजश्च तेजोमात्रा च वायुश्च वायुमात्रा च
आकाशश्चाकाशमात्रा च चक्षुश्च द्रष्टव्यं च
श्रोत्रं च श्रोतव्यं च घ्राणं च घ्रातव्यं च
रसनं च (रसश्च) रसयितव्यं च त्वक् च स्पर्शयितव्यं च
वाक् च वक्तव्यं च हस्तौ चाऽऽदातव्यं च
उपस्थश्चाऽऽनन्दयितव्यं च पायुश्च विसर्जयितव्यं च
पादौ च गन्तव्यं च मनश्च मन्तव्यं च
बुद्धिश्च बोद्धव्यं च अहंकारश्चाहंकर्तव्यं च
चित्तं च चेतयितव्यं च तेजश्च विद्योतयितव्यं च
प्राणश्च विधारयितव्यं च ।। 8 ।।

ಪೃಥಿವೀ ಚ ಪೃಥಿವೀಮಾತ್ರಾ ಚ ಆಪಶ್ಚಾಪೋಮಾತ್ರಾ ಚ
ತೇಜಶ್ಚ ತೇಜೋಮಾತ್ರಾ ಚ ವಾಯುಶ್ಚ ವಾಯು
ಮಾತ್ರಾ ಚ ಆಕಾಶಶ್ಚಾಕಾಶಮಾತ್ರಾ ಚ ಚಕ್ಷುಶ್ಚ ದ್ರಷ್ಟವ್ಯಂ
ಚ ಶ್ರೋತ್ರಂ ಚ ಶ್ರೋತವ್ಯಂ ಚ ಘ್ರಾಣಂ ಚ ಘ್ರಾತವ್ಯಂ

ಚ ರಸನಂ ಚ (ರಸಶ್ಚ) ರಸಯಿತವ್ಯಂ ಚ ತ್ವಕ್ ಚ ಸ್ಪರ್ಶಯಿತವ್ಯಂ ಚ ವಾಕ್ ಚ ವಕ್ತವ್ಯಂ ಚ ಹಸ್ತೌಚಾಽಽದಾತವ್ಯಂ ಚ ಉಪಸ್ಥಶ್ಚಾನಂದಯಿತವ್ಯಂ ಚ ಪಾಯುಶ್ಚ ವಿಸರ್ಜಯಿತವ್ಯಂ ಚ ಪಾದೌ ಚ ಗಂತವ್ಯಂ ಚ ಮನಶ್ಚ ಮಂತವ್ಯಂ ಚ ಬುದ್ಧಿಶ್ಚ ಬೋದ್ಧವ್ಯಂ ಚ ಅಹಂಕಾರಶ್ಚಾಹಂಕರ್ತವ್ಯಂ ಚ ಚಿತ್ತಂ ಚ ಚೇತಯಿತವ್ಯಂ ಚ ತೇಜಶ್ಚ ವಿದ್ಯೋತಯಿತವ್ಯಂ ಚ ಪ್ರಾಣಶ್ಚ ವಿಧಾರಯಿತವ್ಯಂ ಚ ॥

## ಪ್ರತಿಪದಾರ್ಥ

**ಪೃಥಿವೀ ಚ** - ಪೃಥ್ವಿಯೂ, **ಪೃಥಿವೀ ಮಾತ್ರಾ ಚ** - [೧]ಗಂಧತನ್ಮಾತ್ರವೂ, **ಆಪಶ್ಚ** - ನೀರೂ, **ಆಪೋಮಾತ್ರಾ ಚ** - ರಸತನ್ಮಾತ್ರವೂ, **ತೇಜಶ್ಚ** - ಅಗ್ನಿಯೂ, **ತೇಜೋಮಾತ್ರಾ ಚ** - ರೂಪತನ್ಮಾತ್ರವೂ, **ವಾಯುಶ್ಚ** - ವಾಯುವೂ, **ವಾಯುಮಾತ್ರಾ ಚ** - ಸ್ಪರ್ಶತನ್ಮಾತ್ರವೂ, **ಆಕಾಶಶ್ಚ** - ಆಕಾಶವೂ, **ಆಕಾಶಮಾತ್ರಾ ಚ** - ಶಬ್ದತನ್ಮಾತ್ರವೂ, **ಚಕ್ಷುಶ್ಚ** - ಕಣ್ಣೂ, **ದ್ರಷ್ಟವ್ಯಂ ಚ** - ರೂಪವೂ, **ಶ್ರೋತ್ರಂ ಚ** - ಕಿವಿಯೂ, **ಶ್ರೋತವ್ಯಂ ಚ** - ಕೇಳಲ್ಪಡುವ ಶಬ್ದವೂ, **ಘ್ರಾಣಂ ಚ**- ಮೂಗೂ, **ಘ್ರಾತವ್ಯಂ ಚ** - ವಾಸನೆಯಿಂದ ಕೂಡಿದ ದ್ರವ್ಯಗಳೂ, **ರಸಂ ಚ** - ನಾಲಿಗೆಯೂ, **ರಸಯಿತವ್ಯಂ ಚ** - ಸವಿಯುವ ಮಧುರಾದಿ ರಸವೂ, **ವಾಕ್ ಚ** - ವಾಗಿಂದ್ರಿಯವೂ, **ವಕ್ತವ್ಯಂ ಚ** - ಶಬ್ದವ್ಯವಹಾರವೂ, **ಹಸ್ತೌ ಚ** - ಹಸ್ತಗಳೂ, **ಆದಾತವ್ಯಂ ಚ** - ಸ್ವೀಕಾರ್ಯವಸ್ತುಗಳೂ, **ಉಪಸ್ಥಶ್ಚ** - ಜನನೇಂದ್ರಿಯಗಳೂ, **ಆನಂದಯಿತವ್ಯಂ ಚ** - ಅವುಗಳಿಂದುಂಟಾಗುವ ಆನಂದವೂ, **ಪಾಯುಶ್ಚ** - ಗುದವೂ, **ವಿಸರ್ಜಯಿತವ್ಯಂ ಚ** - ಮೂತ್ರ-ಪುರೀಷಾದಿಗಳೂ, **ಪಾದೌ ಚ** - ಕಾಲುಗಳೂ, **ಗಂತವ್ಯಂ ಚ** - ಗಮನವೂ, **ಮನಶ್ಚ** - ಮನವೂ, **ಮಂತವ್ಯಂ ಚ** - ಮನನವೂ, **ಬುದ್ಧಿಶ್ಚ** - ಬುದ್ಧಿಯೂ, **ಬೋದ್ಧವ್ಯಂ ಚ** - ಅದರಿಂದ ತಿಳಿಯುವುದೂ, **ಅಹಂಕಾರಶ್ಚ** - ಅಹಂಕಾರವೂ, **ಅಹಂಕರ್ತವ್ಯಂ ಚ** - ಅಹಂಕಾರವಿಷಯವೂ, **ಚಿತ್ತಂಚ** - ಅಂತಃಕರಣವೂ, **ಚೇತಯಿತವ್ಯಂ ಚ** - ಅಂತಃಕರಣವಿಷಯವೂ, **ತೇಜಶ್ಚ** - ತೇಜಸ್ಸೂ, **ವಿದ್ಯೋತಯಿತವ್ಯಂ ಚ** - ಅದರಿಂದುಂಟಾದ ಪ್ರಕಾಶವೂ, **ಪ್ರಾಣಶ್ಚ** - ಪ್ರಾಣವೂ, **ವಿಧಾರಯಿತವ್ಯಂ ಚ** - ಪ್ರಾಣಾಪಾನಾದಿಗಳೂ (**ಪರೇ ಆತ್ಮನಿ** - ಪರಮಾತ್ಮನಲ್ಲಿ), **ಸಂಪ್ರತಿಷ್ಠಂತೇ** - ನೆಲೆಸುತ್ತವೆ·

---

೧· ಆಯಾಯಾ ಭೂತಗಳ ಪೂರ್ವಾವಸ್ಥೆಯನ್ನು ತನ್ಮಾತ್ರವೆಂದು ಕರೆಯುತ್ತಾರೆ·

## ತಾತ್ಪರ್ಯ

ಭೂಮಿ, ಅಗ್ನಿ, ವಾಯು, ಜಲ, ಆಕಾಶಗಳೆಂಬ ಪಂಚಭೂತಗಳೂ, ಇವುಗಳ ತನ್ಮಾತ್ರಗಳೂ, ಕಣ್ಣು, ಕಿವಿ, ಮೂಗು ಮುಂತಾದ ಜ್ಞಾನ-ಕರ್ಮೇಂದ್ರಿಯಗಳೂ ಅವುಗಳಿಗೆ ವಿಷಯಗಳಾದ ವಸ್ತುಗಳೂ, ಕಾರ್ಯಗಳೂ, ಬುದ್ಧಿ, ಅಹಂಕಾರ ಮೊದಲಾದ ತತ್ವಗಳೂ, ಎಲ್ಲ ಅಚಿತ್ ಪದಾರ್ಥಗಳೂ ಪರಮಾತ್ಮನಲ್ಲಿಯೇ ನೆಲೆಸಿವೆ·

## ರಂಗರಾಮಾನುಜಭಾಷ್ಯ

ಸರ್ವಶಬ್ದಾರ್ಥಂ ಪ್ರಪಂಚಯತಿ - ಪೃಥಿವೀ ಚ ಪೃಥಿವೀ ಮಾತ್ರಾ ಚ । ಅತ್ರ ಪೃಥಿವೀ ಮಾತ್ರಾ ಶಬ್ದೇನ ಪುರಾಣೇಷು ಗಂಧತನ್ಮಾತ್ರಶಬ್ದಾಭಿಲಪ್ಯಾ ಪೃಥಿವೀಪೂರ್ವಾವಸ್ಥೋಚ್ಯತೇ । ಏವಮುತ್ತರೇಷ್ವಪಿ ಮಾತ್ರಾಶಬ್ದೇಷು ದ್ರಷ್ಟವ್ಯಮ್ । **ಆಪಶ್ಚ ಆಪೋಮಾತ್ರಾ ಚ** ಇತ್ಯಾದಿನಾ। ಚೇತನಾ ಚೇತನ ರೂಪಃ ಕರ್ತೃಕರಣಕರ್ಮರೂಪಃ ಸರ್ವೋಽಪಿ ಪ್ರಪಂಚಸ್ತದಾಶ್ರಿತ ಇತಿ ಭಾವಃ । ಅತ್ರ ಬೋದ್ಧಾ ಕರ್ತಾ ವಿಜ್ಞಾನಾತ್ಮಾ ಇತಿ ನಿರ್ದೇಶಾತ್, 'ಆತ್ಮನೋ ಜ್ಞಾತೃತ್ವಮೇವ, ನ ಜ್ಞಾನರೂಪತ್ವಮಿತಿ ವದಂತಸ್ತಾರ್ಕಿಕಾಃ(ಶ್ಚ) 'ಜ್ಞಾನತ್ವಮೇವ ನ ಜ್ಞಾತೃತ್ವಮ್' ಇತಿ ವದಂತಃ ಮೃಷಾವಾದಿನಶ್ಚ ನಿರಸ್ತಾ ಭವಂತಿ ।

## ಅನುವಾದ

ಸರ್ವಶಬ್ದದ ತಾತ್ಪರ್ಯವನ್ನು ವಿವರಿಸುತ್ತಾರೆ · **ಪೃಥಿವೀ ಚ ಪೃಥಿವೀಮಾತ್ರಾ ಚ** । 'ಪ್ರಥಿವೀಮಾತ್ರಾ' ಪದವು ಪುರಾಣಗಳಲ್ಲಿ ಗಂಧತನ್ಮಾತ್ರಶಬ್ದದಿಂದ ಕರೆಯಲಾದ ಭೂಮಿಯ ಮೊದಲ ಸ್ಥಿತಿಯನ್ನು ತಿಳಿಸುತ್ತದೆ · ಮುಂದೆ ಪ್ರಯೋಗಿಸಲಾದ ಮಾತ್ರಾಶಬ್ದಗಳೂ ಹೀಗೆಯೇ ಎಂದು ಭಾವಿಸಬೇಕು · **ಆಪಶ್ಚಾಪೋಮಾತ್ರಾಚ** ಇತ್ಯಾದಿನಾ । ಜಡ-ಜೀವಾತ್ಮಕವಾದ ಕರ್ತೃ-ಕರ್ಮ-ಕರಣರೂಪದ ಸಮಸ್ತಜಗತ್ತೂ ಪರಮಾತ್ಮನನ್ನೇ ಆಶ್ರಯಿಸಿದೆ ಎಂದು ಅಭಿಪ್ರಾಯ · ಇಲ್ಲಿ 'ತಿಳಿಯುವವನು, ಮಾಡುವವನು ಜ್ಞಾನರೂಪನು' ಎಂದು ಉಲ್ಲೇಖಮಾಡಿರುವುದರಿಂದ 'ಆತ್ಮ ಜ್ಞಾನಾಶ್ರಯನೇ ಹೊರತು ಜ್ಞಾನಸ್ವರೂಪನಲ್ಲ' ಎಂದು ವಾದಿಸುವ ತಾರ್ಕಿಕರೂ ಮತ್ತು 'ಆತ್ಮನು ಜ್ಞಾನಸ್ವರೂಪನೇ ವಿನಹ ಜ್ಞಾನಾಶ್ರಯನಲ್ಲ 'ಎಂದು ವಾದಿಸುವ ಮಾಯಾವಾದಿಗಳು ನಿರಾಕರಿಸಲ್ಪಟ್ಟಿದ್ದಾರೆ·

## ಭಾಷ್ಯಸಾರ

**'ಸರ್ವಂ ಪರೇ ಆತ್ಮನಿ ಸಂಪ್ರತಿಷ್ಠತೇ'** - 'ಪರಮಾತ್ಮನಲ್ಲಿ ಎಲ್ಲವೂ ನೆಲೆಗೊಳ್ಳುತ್ತದೆ ಎಂದು ಹಿಂದೆ ಹೇಳಲಾಯಿತಷ್ಟೇ · ಈ ವಾಕ್ಯದಲ್ಲಿ ಉಪಯೋಗಿಸಿದ ಸರ್ವಶಬ್ದದ ಅರ್ಥವ್ಯಾಪ್ತಿ ಎಷ್ಟೆಂದು ಈಗ ವಿವರಿಸುತ್ತಾರೆ·

ಪೃಥಿವೀ, ಜಲ, ತೇಜಸ್ಸು, ವಾಯು ಮತ್ತು ಆಕಾಶಗಳು ಪಂಚಭೂತಗಳು · ಇವು ಸ್ಥೂಲ-

ರೂಪದ ಅಚಿದ್ವಸ್ತುಗಳು · ಸ್ಥೂಲರೂಪಕ್ಕೆ ಪರಿಣಮಿಸುವ ಮೊದಲು ಅಂದರೆ ಸೃಷ್ಟಿಯ ಸಮಯದಲ್ಲಿ ಇವು ಸೂಕ್ಷ್ಮರೂಪದಲ್ಲಿದ್ದವು · ಸೂಕ್ಷ್ಮಾವಸ್ಥೆಯಲ್ಲಿ ಇರುವ ಭೂತಗಳಿಗೆ ಭೂತ-ತನ್ಮಾತ್ರಗಳು ಎಂದು ಹೆಸರು· ಇವುಗಳ ಸಂಖ್ಯೆ ಐದು· ಪೃಥಿವಿಗೆ ಉಪಾದಾನಕಾರಣವು ಗಂಧತನ್ಮಾತ್ರ; ಜಲಕ್ಕೆ ಉಪಾದಾನಕಾರಣವು ರಸತನ್ಮಾತ್ರ; ಅಗ್ನಿಗೆ ಉಪಾದಾನಕಾರಣ ರೂಪತನ್ಮಾತ್ರ; ವಾಯುವಿಗೆ ಉಪಾದಾನಕಾರಣ ಸ್ಪರ್ಶತನ್ಮಾತ್ರ; ಆಕಾಶಕ್ಕೆ ಉಪಾದಾನಕಾರಣ ಶಬ್ದತನ್ಮಾತ್ರ ಈ ಪಂಚತನ್ಮಾತ್ರಗಳೂ ತಾಮಸಾಹಂಕಾರದ ಪರಿಣಾಮಗಳು · ಶಬ್ದತನ್ಮಾತ್ರವು ಇತರ ಸಹಾಯವಿಲ್ಲದೆಯೇ ಆಕಾಶಕ್ಕೆ ಕಾರಣವಾಗುವುದಾದರೂ ಸ್ಪರ್ಶ ಮೊದಲಾದ ಇತರ ನಾಲ್ಕು ತನ್ಮಾತ್ರಗಳು ಪೂರ್ವ ಪೂರ್ವ ತನ್ಮಾತ್ರಗಳ ಸಹಾಯ ಪಡೆದು ಉತ್ತರೋತ್ತರ ಭೂತಗಳನ್ನು ಉಂಟು ಮಾಡುತ್ತವೆ · ಸ್ಥೂಲಭೂತಗಳಿಗೆ ಸೂಕ್ಷ್ಮಭೂತಗಳಾದ ತನ್ಮಾತ್ರಗಳೇ ಕಾರಣಗಳು· ಹೀಗೆ ಕಾರ್ಯಕಾರಣಭಾವ ಸಂಬಂಧವನ್ನು ಹೊಂದಿದ ಸ್ಥೂಲಸೂಕ್ಷ್ಮಭೂತಗಳು ಪರಮಾತ್ಮನಲ್ಲಿ ಪ್ರತಿಷ್ಠಿತವಾಗಿವೆ·

ಜೀವನನ್ನು ಉಪಕರಿಸುವ ಇಂದ್ರಿಯಗಳೂ, ಅವುಗಳ ಅರ್ಥಗಳೂ ಪರಮಾತ್ಮನಲ್ಲಿಯೇ ನೆಲೆಗೊಳ್ಳುತ್ತವೆ · ಜ್ಞಾನಸಾಧನಗಳಾದ ಇಂದ್ರಿಯಗಳು ಐದು - ಕಣ್ಣು, ಕಿವಿ, ಮೂಗು, ನಾಲಿಗೆ ಹಾಗೂ ಚರ್ಮಗಳು · ಕರ್ಮಸಾಧನಗಳಾದ ಇಂದ್ರಿಯಗಳು ಐದು - ವಾಕ್, ಪಾಣಿ, ಪಾದ, ಪಾಯು ಹಾಗೂ ಉಪಸ್ಥಗಳು· ರೂಪ, ರಸ, ಗಂಧ, ಸ್ಪರ್ಶ ಮತ್ತು ಶಬ್ದಗಳು ಪಂಚಜ್ಞಾನೇಂದ್ರಿಯ ವಿಷಯಗಳು · ಶಬ್ದೋಚ್ಚಾರಣೆ, ವಸ್ತುಗ್ರಹಣ, ಗಮನ, ಮಲವಿರೇಚನ, ಇಂದ್ರಿಯಸುಖಗಳು ಪಂಚ ಕರ್ಮೇಂದ್ರಿಯಗಳ ಕಾರ್ಯಗಳು · ಹೀಗೆ ಇವೆಲ್ಲ ಸೇರಿ ಬಾಹ್ಯೇಂದ್ರಿಯಾರ್ಥಗಳ ಪರಿವಾರವು ಸಿದ್ಧವಾಗುತ್ತದೆ· ಈ ಬಾಹ್ಯೇಂದ್ರಿಯ ವರ್ಗಕ್ಕೆ ಪರಮಾತ್ಮನೇ ಪರಮಾಧಾರ·

ಮನಸ್ಸು ಅಂತರಿಂದ್ರಿಯವು· ಇದು ಸಂಕಲ್ಪ, ಸ್ಮೃತಿ ಮುಂತಾದವುಗಳಿಗೆ ಏಕೈಕ ಸಾಧನವಾಗಿದೆ ಬೇರೆ ಬೇರೆ ಅವಸ್ಥೆಗಳಿಗೆ ದಾಟುವಾಗ ಈ ಅಂತಃಕರಣಕ್ಕೆ ಮನಸ್ಸು, ಬುದ್ಧಿ, ಅಹಂಕಾರ, ಚಿತ್ತಗಳೆಂದು ಹೆಸರುಗಳು ಉಂಟಾಗುತ್ತವೆ · ಸಂಕಲ್ಪ-ವಿಕಲ್ಪಗಳು, ಗರ್ವ, ಸ್ಮೃತಿ ಮೊದಲಾದವು · ಅಂತಃಕರಣದ ವಿಭಿನ್ನ ವೃತ್ತಿಗಳಲ್ಲಿ ನಿಷ್ಪನ್ನವಾದ ವಿಷಯಗಳು · ಅಂತಃಕರಣದ ವಿವಿಧ ವೃತ್ತಿಗಳಿಗೂ, ಅವುಗಳ ವಿಷಯಗಳಿಗೂ ಭಗವಂತನೇ ಪಾರಮಾರ್ಥಿಕ ನೆಲೆ-ಬೆಲೆ·

ಈ ರೀತಿಯಾಗಿ ಭೂತಪರಿವಾರವೂ, ಇಂದ್ರಿಯಾರ್ಥಗಳ ಸಂಘಾತವೂ, ಅಂತಃಕರಣ ಪ್ರಪಂಚವೂ, ಪ್ರಾಣವಾಯುವೂ, ಕಾರ್ಯಕಾರಣವರ್ಗವೂ ಸೇರಿ ಪರಮಾತ್ಮನಲ್ಲಿ ನೆಲೆಗೊಂಡಿವೆ· ಇವೆಲ್ಲವೂ ಹಿಂದಿನ ಮಂತ್ರದಲ್ಲಿ ಪ್ರಯುಕ್ತವಾದ ಸರ್ವಶಬ್ದದ ಅರ್ಥವ್ಯಾಪ್ತಿಯಲ್ಲಿಯೇ ಅಡಕವಾಗಿವೆ··

## ಮಂತ್ರ - ೯

एष हि द्रष्टा स्प्रष्टा श्रोता घ्राता रसयिता मन्ता बोद्धा
कर्ता विज्ञानात्मा पुरुषः । स परेऽक्षरे आत्मनि संप्रतिष्ठते ॥ 9 ॥

ಏಷ ಹಿ ದ್ರಷ್ಟಾ ಸ್ಪ್ರಷ್ಟಾ ಶ್ರೋತಾ ಘ್ರಾತಾ ರಸಯಿತಾ
ಮಂತಾ ಬೋದ್ಧಾ ಕರ್ತಾ ವಿಜ್ಞಾನಾತ್ಮಾ ಪುರುಷಃ । ಸ
ಪರೇಽಕ್ಷರೇ ಆತ್ಮನಿ ಸಂಪ್ರತಿಷ್ಠತೇ ।

### ಪ್ರತಿಪದಾರ್ಥ

**ಏಷಃ** - ಈ, **ಪುರುಷಃ** - ಜೀವನು, **ದ್ರಷ್ಟಾ** - ನೋಡುವವನು, **ಸ್ಪ್ರಷ್ಟಾ** - ಮುಟ್ಟುವವನು, **ಶ್ರೋತಾ** - ಕೇಳುವವನು, **ಘ್ರಾತಾ** - ವಾಸನೆ ನೋಡುವವನು, **ರಸಯಿತಾ** - ಆಸ್ವಾದಿಸುವವನು, **ಮಂತಾ** - ಮನನಮಾಡುವವನು, **ಬೋದ್ಧಾ** - ನಿಶ್ಚಯಾತ್ಮಕಬುದ್ಧಿಯುಳ್ಳವನು, **ಕರ್ತಾ**- ನಿಯಮನ ಕರ್ತೃವು, **ವಿಜ್ಞಾನಾತ್ಮಾ** - ವಿಜ್ಞಾನಸ್ವರೂಪನು, **ಸಃ** - ಇಂತಹಜೀವನು, **ಪರೇ** - ಉತ್ಕೃಷ್ಟವಾದ, **ಅಕ್ಷರೇ** - ನಾಶವಿಲ್ಲದ, **ಆತ್ಮನಿ** - ಬ್ರಹ್ಮನಲ್ಲಿ, **ಸಂಪ್ರತಿಷ್ಠತೇ** - ನೆಲೆಸುತ್ತಾನೆ·

### ತಾತ್ಪರ್ಯ

ಈ ಜೀವಾತ್ಮನಿಗೆ ದರ್ಶನ ಶಕ್ತಿಯಿದೆ· ಇವನು ಶಬ್ದಗಳನ್ನು ಕೇಳಬಲ್ಲನು· ವಾಸನೆಯನ್ನು ಆಘ್ರಾಣಿಸುವನು ·ಮಾಧುರ್ಯಾದಿರಸಗಳನ್ನು ಸವಿದು ನೋಡುವನು · ಇವನು ಮನನ ಮಾಡಿ ನಿಶ್ಚಯಿಸುವ ಅರ್ಹತೆ ಪಡೆದಿದ್ದಾನೆ· ಇವನಲ್ಲಿ ಕರ್ತೃತ್ವವಿದೆ· ಇವನು ಸಾಕ್ಷಾತ್ ವಿಜ್ಞಾನಸ್ವರೂಪನು; ಇಂತಹ ವಿಶೇಷಗಳನ್ನು ತನ್ನಲ್ಲಿ ಉಳಿಸಿಕೊಂಡರೂ ಜೀವನು ಸರ್ವವಿಲಕ್ಷಣನೂ, ನಾಶರಹಿತನೂ ಆದ ಭಗವಂತನಲ್ಲಿ ತನ್ನ ನೆಲೆಯನ್ನು ಪಡೆಯುತ್ತಾನೆ·

(ರಂಗರಾಮಾನುಜರು ೮ ಮತ್ತು ೯ನೇ ಮಂತ್ರಗಳನ್ನು ಒಟ್ಟಿಗೆ ವ್ಯಾಖ್ಯಾನಿಸಿರುವುದರಿಂದ ಭಾಷ್ಯ ಮತ್ತು ಅನುವಾದಗಳನ್ನು ೮ನೇ ಮಂತ್ರದಲ್ಲಿ ಕೊಡಲಾಗಿದೆ· )

### ಭಾಷ್ಯಸಾರ

ಅಚಿದ್ವಸ್ತುಗಳು ಪರಮಾತ್ಮನಲ್ಲಿ ಪ್ರತಿಷ್ಠಿತವಾದಂತೆ, ಚಿದ್ವಸ್ತುವಾದ ಜೀವನೂ ಪರಮಾತ್ಮನಲ್ಲಿ ನೆಲೆಗೊಳ್ಳುತ್ತಾನೆ· ಇವನ ಕಾರ್ಯಕಲಾಪಗಳೆಲ್ಲ ಸೀಮಿತವಾಗಿವೆ· ಇವನಲ್ಲಿ ಆಂಶಿಕ ಸ್ವಾತಂತ್ರ್ಯವಿದ್ದರೂ

ಪರಮಾತ್ಮನಿಗೆ ಪೂರ್ಣವಾಗಿ ಅಧೀನವಾಗಿರುತ್ತಾನೆ· ಆದ್ದರಿಂದಲೇ ನೋಡುವಲ್ಲಿ, ಕೇಳುವಲ್ಲಿ, ಮನನ ಮಾಡುವಲ್ಲಿ ಮತ್ತು ಇನ್ನಿತರ ವ್ಯಾಪಾರಗಳಲ್ಲಿ ತಾನು ಸ್ವತಂತ್ರನೆಂದು ಇವನು ಭ್ರಮಿಸಬಾರದು·

## ಮಂತ್ರ - ೧೦

परमेवाक्षरं प्रतिपद्यते स यो ह वै तदच्छायमशरीरमलोहितं
शुभ्रमक्षरं वेदयते यस्तु(?)सौम्य, स सर्वज्ञस्सर्वो भवति ।
तदेष श्लोकः ।। 10 ।।

ಪರಮೇವಾಕ್ಷರಂ ಪ್ರತಿಪದ್ಯತೇ ಸ ಯೋ ಹ ವೈ ತದಚ್ಛಾಯ
ಮಶರೀರಮಲೋಹಿತಂ ಶುಭ್ರಮಕ್ಷರಂ ವೇದಯತೇ ಯಸ್ತು (?)
ಸೋಮ್ಯ ಸ ಸರ್ವಜ್ಞಃ ಸರ್ವೋ ಭವತಿ ॥ ತದೇಷ ಶ್ಲೋಕಃ ॥

### ಪ್ರತಿಪದಾರ್ಥ

**ಸೋಮ್ಯ!** - ಪ್ರಿಯ ಶಿಷ್ಯನೇ! **ಯಃ** - ಯಾವ ಜೀವನು, **ಏತತ್** - ಹಿಂದೆ ಹೇಳಿದ, **ಅಚ್ಛಾಯಮ್** - ಪಾಪರಹಿತವಾದ, **ಅಶರೀರಮ್** - ಕರ್ಮಾನುಬಂಧಿಯಾದ ಪ್ರಾಕೃತ-ಶರೀರವಿಲ್ಲದ, **ಅಲೋಹಿತಮ್** - ಪ್ರಾಕೃತರೂಪಾದಿಗಳಿಲ್ಲದ, **ಶುಭ್ರಮ್** - ಪರಿಶುದ್ಧವಾದ, **ಅಕ್ಷರಮ್** - ನಾಶವಿಲ್ಲದ ಪರಬ್ರಹ್ಮವನ್ನು, **ವೇದಯತೇ** - ತಿಳಿಯುತ್ತಾನೆಯೋ, **ಸಃ** - ಅವನು, **ಸರ್ವಜ್ಞೋ ಭವತಿ** - ಸರ್ವಜ್ಞನಾಗುತ್ತಾನೆ, **ಸಃ** - ಅವನು, **ಸರ್ವಃ ಭವತಿ** - ಎಲ್ಲವನ್ನೂ ಪಡೆದವ-ನಾಗುತ್ತಾನೆ· **ತತ್** - ಆ ಪರಬ್ರಹ್ಮವನ್ನು ಕುರಿತು, **ಅಯಂ ಶ್ಲೋಕಃ** - ಈ ಶ್ಲೋಕವಿದೆ·

### ತಾತ್ಪರ್ಯ

ಹೇ ಸೋಮ್ಯ! ಕರ್ತೃತ್ವ, ಭೋಕ್ತೃತ್ವ ಮುಂತಾದ ವಿಶೇಷಧರ್ಮಗಳಿಂದ ಕೂಡಿದ ಜೀವನು ಪಾಪವಿಲ್ಲದ, ಪ್ರಾಕೃತ ದೇಹರೂಪಾದಿಗಳಿಂದ ವಿವರ್ಜಿತವಾದ, ಪರಿಶುದ್ಧವಾದ ಪರಬ್ರಹ್ಮವನ್ನು ತಿಳಿದು ಅದನ್ನೇ ಹೊಂದುತ್ತಾನೆ · ಸಮಸ್ತಇಷ್ಟಾರ್ಥಗಳನ್ನೂ ಪಡೆಯುತ್ತಾನೆ · ಈ ವಿಷಯದಲ್ಲಿ ಮುಂದಿನ ಶ್ಲೋಕವೇ ಪ್ರಮಾಣ·

### ರಂಗರಾಮಾನುಜಭಾಷ್ಯ

ಪರಮೇವಾಕ್ಷರಂ ಇತಿ । ಅತ್ರ ಛಾಯಾಶಬ್ದೇನ ಜ್ಞಾನಸಂಕೋಚಕಂ ಕರ್ಮೋಚ್ಯತೇ ।

**ಅಚ್ಛಾಯಮ್** ಅಪಾಪಮಿತ್ಯರ್ಥಃ । ಅತ ಏವಾಶರೀರಮ್ **ಅಲೋಹಿತಮ್** ರೂಪಾದಿ-ಶೂನ್ಯಂ **ಶುಭ್ರಮ್** ಸ್ವಪ್ರಕಾಶಮ್ **ಅಕ್ಷರಮ್** ಕ್ಷರಣಶೂನ್ಯಂ ಪರಮಾತ್ಮಾನಂ **ವೇದಯತೇ** ಜಾನಾತಿ ಸಃ ಹೇ ಸೋಮ್ಯ! ಪ್ರಿಯದರ್ಶನ! ಪರಮೇವಾಕ್ಷರಂ ಬ್ರಹ್ಮ ವಾಸುದೇವಂ ಪ್ರತಿಪದ್ಯ ಸರ್ವಜ್ಞೋ ಭವತಿ । **ಸರ್ವೋ ಭವತಿ** ಸರ್ವಕಾಮ ಯುಕ್ತೋ ಭವತಿ । **ತದೇಷಶ್ಲೋಕ** ಇತಿ । ತತ್ ಬ್ರಹ್ಮಾಭಿಮುಖೀಕೃತ್ಯೈಷ ಶ್ಲೋಕ ಇತ್ಯರ್ಥಃ ॥

## ಅನುವಾದ

**ಪರಮೇವಾಕ್ಷರಂ** ಇತಿ । ಛಾಯಾಶಬ್ದದಿಂದ ಜ್ಞಾನವನ್ನುಸೀಮಿತಗೊಳಿಸುವ ಕರ್ಮವನ್ನು ಹೇಳಲಾಗುತ್ತದೆ · **ಅಚ್ಛಾಯಮ್** - ಪಾಪವಿಲ್ಲದವನೂ, ಆದ್ದರಿಂದಲೇ ದೇಹವಿಲ್ಲದವನೂ, **ಅಲೋಹಿತಮ್** - ರೂಪಾದಿಗಳಿಲ್ಲದವನೂ, **ಶುಭ್ರಮ್** ತಾನೆ ಬೆಳಗುವವನೂ **ಅಕ್ಷರಮ್** ನಾಶವಿಲ್ಲದವನೂ ಆದ ಪರಮಾತ್ಮನನ್ನು ತಿಳಿದು ಸರ್ವಜ್ಞನಾಗುತ್ತಾನೆ · **ಸರ್ವೋ ಭವತಿ** - ಎಲ್ಲ ಅಭಿಲಾಷೆಗಳೂ ಈಡೇರಿದವನಾಗುತ್ತಾನೆ · **ತದೇಷ ಶ್ಲೋಕಃ** - ಆ ಪರಬ್ರಹ್ಮವನ್ನು ಕುರಿತು ಈ ಶ್ಲೋಕವಿದೆ·

## ಭಾಷ್ಯಸಾರ

ಎಲ್ಲ ವಸ್ತುಗಳ ಮೂಲ ನೆಲೆ-ಬೆಲೆ ಪರಮಾತ್ಮ · ಅವನನ್ನು ಕಣ್ತುಂಬ ಕಾಣುವುದು ಅಮೂಲ್ಯ ಲಾಭ · ಈ ಲಾಭಕ್ಕಾಗಿ ಪ್ರಪಂಚದ ಎಲ್ಲ ಜೀವಗಳೂ ಹಾತೊರೆಯುತ್ತವೆ ಹೋರಾಡುತ್ತವೆ · ಭಗವಂತನನ್ನು ಕರ್ಮವೆಂಬ ಮಾಯೆ ಸೋಂಕಲಾರದು · ಆದುದರಿಂದಲೇ ಪ್ರಕೃತಿಯು ಆತನ ನಿಸ್ಸೀಮಮಹಿಮೆಯನ್ನೂ ಕೊಂಕಿಸಲಾರದು · ಇವನು ತಮೋಗುಣವನ್ನು ಮೀರಿದವನಾದುದರಿಂದ ಇವನಿಗೆ ದೇಹವಿಲ್ಲ, ಬಣ್ಣವಿಲ್ಲ · ಸಹಜವಾಗಿಯೇ ಇವನು ಶುದ್ಧನು · ಹೇಯವರ್ಗದಿಂದ ದೂರ-ವಾದವನು · ತಾನೇ ಬೆಳಗುವ ಈ ಭಗವಂತನಿಗೆ ನಾಶಸ್ಪರ್ಶವೇ ಇಲ್ಲ · ಇಂತಹ ಅಪಾರ ಮಹಿಮನಾದ ಪರಮಾತ್ಮನನ್ನು ಉಪಾಸಿಸುವ ಅಧಿಕಾರಿಯು ಪರಬ್ರಹ್ಮವನ್ನು ಪಡೆಯುತ್ತಾನೆ ಎಲ್ಲವನ್ನೂ ತಿಳಿದು ಸರ್ವಜ್ಞನಾಗುತ್ತಾನೆ · ಅವನ ಅರಿವಿಗೆ ಅಳವಡದ ವಸ್ತು ಲೋಕದಲ್ಲಿ ಉಳಿಯಲಾರದು · ಅವನಿಗೆ ಈಡೇರದ ಯಾವ ಇಚ್ಛೆಯೂ ಇರಲಾರದು·

ಮುಂದೆ ಹೇಳಲಿರುವ ಮಂತ್ರವು ಈ ವಿಷಯದ ಬಗ್ಗೆ ಪ್ರಮಾಣವನ್ನು ಒದಗಿಸುತ್ತದೆ · 'ಪರಬ್ರಹ್ಮವು ಎಲ್ಲಕ್ಕೂ ನೆಲೆ; ಅದನ್ನು ತಿಳಿದವನು ಅದನ್ನೇ ಅನುಭವಿಸುತ್ತಾನೆ; ಎಲ್ಲವನ್ನೂ ತಿಳಿಯು-ತ್ತಾನೆ; ಎಲ್ಲವನ್ನೂ ಪಡೆಯುತ್ತಾನೆ' ಎಂದು ಸಂಗ್ರಹವಾಗಿ ನಿರೂಪಿಸುತ್ತದೆ·

## ಮಂತ್ರ - ೧೧

विज्ञानात्मा सह देवैश्च सर्वैः प्राणा भूतानि संप्रतिष्ठन्ति यत्र ।
शुभ्रमक्षरं वेदयते यस्तु (?) सौम्य स सर्वज्ञस्सर्वमेवाऽऽविवेशेति ॥ 11 ॥

ವಿಜ್ಞಾನಾತ್ಮಾ ಸಹ ದೇವೈಶ್ಚ ಸರ್ವೈಃ ಪ್ರಾಣಾ ಭೂತಾನಿ
ಸಪ್ರತಿಷ್ಠಂತಿ ಯತ್ರ ।
ಶುಭ್ರಮಕ್ಷರಂ ವೇದಯತೇ ಯಸ್ತು(?) ಸೋಮ್ಯ ಸ
ಸರ್ವಜ್ಞಸ್ಸರ್ವಮೇವಾಽಽವಿವೇಶೇತಿ ॥

### ಪ್ರತಿಪದಾರ್ಥ

**ಸರ್ವೈಃ** - ಎಲ್ಲ, **ದೇವೈಃ ಸಹ** - ಇಂದ್ರಿಯಗಳ ಸಹಿತವಾಗಿ, **ಪ್ರಾಣಾಃ** - ಪ್ರಾಣಗಳು, **ಭೂತಾನಿ** - ಪೃಥಿವ್ಯಾದಿಭೂತಗಳು, **ವಿಜ್ಞಾನಾತ್ಮಾ** - ವಿಜ್ಞಾನಸ್ವರೂಪನಾದ ಜೀವನು, **ಯತ್ರ** - ಯಾವ ಪರಬ್ರಹ್ಮದಲ್ಲಿ, **ಸಂಪ್ರತಿಷ್ಠಂತಿ** - ನೆಲೆಗೊಳ್ಳುತ್ತವೆಯೋ; **ಶುಭ್ರಮ್** - ಶುದ್ಧವಾದ, **ಅಕ್ಷರಮ್** - ನಾಶವಿಲ್ಲದ, **ತತ್** - ಆ ಪರಬ್ರಹ್ಮವನ್ನು, **ಯಃ** - ಯಾರು, **ವೇದಯತೇ** - ತಿಳಿಯುತ್ತಾರೆಯೋ, **ಸೋಮ್ಯ!** - ಪ್ರಿಯಶಿಷ್ಯನೇ! **ಸಃ** - ಆ ಜೀವನು, **ಸರ್ವಜ್ಞೋ ಭವತಿ**- ಎಲ್ಲವನ್ನೂ ತಿಳಿಯುತ್ತಾನೆ, **ಸರ್ವಮೇವ** - ಎಲ್ಲ ಲೋಕಗಳನ್ನೂ, **ಆವಿವೇಶ** - ಪ್ರವೇಶಿಸುತ್ತಾನೆ, **ಇತಿ** - ಎಂದು·

### ತಾತ್ಪರ್ಯ

ಹೇ ಸೋಮ್ಯ! ಎಲ್ಲ ಇಂದ್ರಿಯಗಳೂ, ಪ್ರಾಣಗಳೂ, ಭೂತಗಳೂ, ಜೀವನೂ, ಪರಬ್ರಹ್ಮದಲ್ಲಿಯೇ ಪ್ರತಿಷ್ಠಿತರಾಗಿದ್ದಾರೆ· ಅವಿನಾಶಿಯೂ, ಪರಿಶುದ್ಧವೂ ಆದ ಈ ಪರತತ್ತ್ವವನ್ನು ತಿಳಿಯುವ ಮಹಾತ್ಮನು ಸರ್ವಜ್ಞನೇ ಆಗುತ್ತಾನೆ· ಅವನು ತನ್ನ ಇಚ್ಛೆಯಂತೆ ಎಲ್ಲಲೋಕಗಳನ್ನೂ ಪ್ರವೇಶಿಸಬಲ್ಲನು·

## ರಂಗರಾಮಾನುಜಭಾಷ್ಯ

**ವಿಜ್ಞಾನಾತ್ಮಾ** ಇತಿ । **ಸರ್ವೈರ್ದೇವೈಃ** ವಾಗಾದೀಂದ್ರಿಯೈಃ ಸಹ ಮುಖ್ಯಪ್ರಾಣಾಃ **ಭೂತಾನಿ** ಮಹಾಭೂತಾನಿ ಚ ಜೀವಾತ್ಮಾ ಚ ಯತ್ರ ಪ್ರತಿತಿಷ್ಠಂತಿ, ತಾದೃಶಂ **ಶುಭ್ರಮ್** ಸ್ವಪ್ರಕಾಶಮ್ **ಅಕ್ಷರಮ್** ನಿರ್ವಿಕಾರಂ ಪರಮಾತ್ಮನಂ ಯೋ ಜಾನಾತಿ, ಸ ಸರ್ವಜ್ಞಃ ಸರ್ವಮಪಿ ಕಾಮಜಾತಂ **ಆವಿವೇಶ** ಆವಿಶತಿ । 'ಸರ್ವೇಷು ಲೋಕೇಷು ಕಾಮಚಾರೋ ಭವತಿ' ಇತಿ ಶ್ರುತ್ಯುಕ್ತರೀತ್ಯಾ ಕಾಮ್ಯಮಾನ ಸರ್ವಲೋಕಸಂಚಾರೀ ಭವತೀತ್ಯರ್ಥಃ ।

## ಅನುವಾದ

**ವಿಜ್ಞಾನಾತ್ಮಾ** ಇತಿ । **ಸರ್ವೈರ್ದೇವೈಃ** ಮಾತು ಮುಂತಾದ ಇಂದ್ರಿಯಗಳೊಂದಿಗೆ ಮುಖ್ಯಪ್ರಾಣಗಳೂ, **ಭೂತಾನಿ** ಮಹಾಭೂತಗಳೂ, ಜೀವಾತ್ಮನೂ ಎಲ್ಲಿ ಆಶ್ರಿತರಾಗಿರುವರೋ ಅಂತಹ **ಶುಭ್ರಮ್** - ತಾನೇ ಬೆಳಗುವ **ಅಕ್ಷರಮ್** - ವಿಕಾರರಹಿತವಾದಪರಮಾತ್ಮನನ್ನು ಯಾವನು ತಿಳಿಯುತ್ತಾನೋ ಅವನು ಸರ್ವಜ್ಞನಾಗಿ, ಎಲ್ಲ ಕಾಮನೆಗಳನ್ನೂ **ಆವಿವೇಶ** - ಪಡೆಯುತ್ತಾನೆ· "ಸರ್ವೇಷು ಲೋಕೇಷು ಕಾಮಚಾರೋ ಭವತಿ" ಎಂಬ ಶ್ರುತಿಹೇಳಿದಂತೆ ಬಯಸಿದ ಎಲ್ಲ ಲೋಕಗಳಲ್ಲಿಯೂ ಸಂಚರಿಸುವ ಶೀಲವುಳ್ಳವನಾಗುತ್ತಾನೆ·

## ಭಾಷ್ಯಸಾರ

ಜೀವನು ವಿಜ್ಞಾನಸ್ವರೂಪನು· ಇವನು ಜ್ಞಾನಾಶ್ರಯನೂ ಹೌದು· ದೀಪವು ಪ್ರಭಾರೂಪವೂ, ಪ್ರಭೆಗೆ ಆಶ್ರಯವೂ ಆಗಿದೆ· ಇದೇ ರೀತಿ ಸ್ವಯಂಪ್ರಕಾಶನಾದ ಜೀವನು ಸಂಕೋಚ-ವಿಕಾಸಗಳನ್ನು ಒಳಗೊಂಡ ಧರ್ಮಭೂತಜ್ಞಾನಕ್ಕೆ ಆಶ್ರಯನೂ ಆಗಿದ್ದಾನೆ· ಹಾಗಾಗಿ ಜೀವನು ಕೇವಲ ಜ್ಞಾನಸ್ವರೂಪನೆಂದಾಗಲೀ, ಕೇವಲ ಜ್ಞಾನಾಶ್ರಯನೆಂದಾಗಲೀ, ವಾದಿಸುವುದು ಆತ್ಮಸ್ವರೂಪದ ಏಕದೇಶ ಪರಿಚಯದಿಂದ ಪ್ರೇರಿತವಾದುದು ಎಂದು ತಿಳಿಯಬೇಕು·

ನಾಲ್ಕನೇ ಪ್ರಶ್ನೆ ಮುಗಿದುದು

* ** *

# ಪಂಚಮ ಪ್ರಶ್ನಃ

## ಮಂತ್ರ - ೧

अथ हैनं शैब्यस्सत्यकामः पप्रच्छ । स यो
ह वै तद्भगवन् । मनुष्येषु प्रायणान्तमोंकार-
मभिध्यायीत, कतमं वाव स तेन लोकं जयतीति ।। 1 ।।

ಅಥ ಹೈನಂ ಶೈಬ್ಯಸ್ಸತ್ಯಕಾಮಃ ಪಪ್ರಚ್ಛ । ಸ ಯೋ
ಹ ವೈ ತದ್ಭಗವನ್! ಮನುಷ್ಯೇಷು ಪ್ರಾಯಣಾಂತ -
ಮೋಂಕಾರಮಭಿಧ್ಯಾಯೀತ, ಕತಮಂ ವಾವ ಸ ತೇನ
ಲೋಕಂ ಜಯತೀತಿ ॥

### ಪ್ರತಿಪದಾರ್ಥ

ಅಥ - (ಸೌರ್ಯಾಯಣಿಯ ಪ್ರಶ್ನೆಗೆ ಉತ್ತರವನ್ನು ಕೊಟ್ಟು) ನಂತರ, ಶೈಬ್ಯಃ ಸತ್ಯಕಾಮಃ- ಶಿಬಿಯ ಮಗನಾದ ಸತ್ಯಕಾಮನು, ಏನಮ್ - ಈ ಪಿಪ್ಪಲಾದಾಚಾರ್ಯರನ್ನು, 'ಹೇ ಭಗವನ್!- ಪೂಜ್ಯರೇ! ಮನುಷ್ಯೇಷು - ಮನುಷ್ಯರಲ್ಲಿ, ಯಃ - ಯಾವನು, ಪ್ರಾಯಣಾಂತಮ್- ಮರಣಕಾಲದವರೆಗೆ, ಏತಮ್ - ಪ್ರಸಿದ್ಧವಾದ, ಓಂಕಾರಮ್ - ಓಂಕಾರವನ್ನು, [೧]ಅಭಿಧ್ಯಾಯೀತ- ಧ್ಯಾನಿಸುತ್ತಾನೆಯೋ, ಸಃ - ಅಂತಹವನು, ತೇನ - ಪ್ರಣವದಿಂದ, ಕತಮಂ ವಾವ - ಯಾವ ರೀತಿಯ, ಲೋಕಮ್ - ಲೋಕವನ್ನು, ಜಯತಿ - ಸಾಧಿಸುತ್ತಾನೆ? 'ಇತಿ - ಎಂದು, ಪಪ್ರಚ್ಛ - ಪ್ರಶ್ನೆ ಮಾಡಿದನು·

### ತಾತ್ಪರ್ಯ

ಸೌರ್ಯಾಯಣೀ - ಪಿಪ್ಪಲಾದರ ಪ್ರಶ್ನ-ಪ್ರತಿವಚನಗಳು ಮುಗಿದ ಮೇಲೆ ಶಿಬಿಯ ಮಗನಾದ ಸತ್ಯಕಾಮನು ಆಚಾರ್ಯಪಿಪ್ಪಲಾದರನ್ನು ಈ ರೀತಿ ಪ್ರಶ್ನಿಸಿದನು. - 'ಪೂಜ್ಯರೇ! ಮನುಷ್ಯರಲ್ಲಿ ಯಾವನು ಸಾಯುವವರೆಗೂ ಓಂಕಾರವನ್ನು ಅಂದರೆ ಪ್ರಣವವನ್ನು ಅರ್ಥದೊಂದಿಗೆ ಧ್ಯಾನಿಸುವನೋ, ಅಂತಹ- ವನಿಗೆ ಯಾವ ರೀತಿಯ ಲೋಕವು ಪ್ರಾಪ್ತವಾಗುವುದು?

---

೧· 'ಅಭಿಧ್ಯಾಯೀತ' ಎಂಬ ಕ್ರಿಯಾಪದ ವಿಶೇಷಣವಾಚಕ ಪದವಾಗಿರುವುದರಿಂದ ಇಲ್ಲಿ ನಪುಂಸಕಲಿಂಗವೂ, ದ್ವಿತೀಯಾ ಏಕವಚನವೂ ಬಂದಿರುತ್ತದೆ·

## ರಂಗರಾಮಾನುಜಭಾಷ್ಯ

**ಅಥ ಹೈನಂ ಶೈಬ್ಯಃ ಇತಿ** । ಸ್ಪಷ್ಟೋಽರ್ಥಃ । **ಸ ಯೋ ಹ ವೈ ತತ್ ಇತಿ** । 'ಹ ವೈ' ಇತಿ ಪ್ರಸಿದ್ಧ್ಯತಿಶಯೇ । 'ತತ್' ಇತ್ಯೇತದವ್ಯಯಮ್ । 'ಸಃ' ಇತ್ಯೇತದಧಿಕಾರಿ-ಸಾಮಾನ್ಯಪರಮ್ । ಅಯಮರ್ಥಃ - ಹೇ ಭಗವನ್! ಪೂಜಾರ್ಹ! ಯೋಽಧಿಕಾರೀ ಮನುಷ್ಯಾಣಾಂ ಮಧ್ಯೇ ಮರಣಾಂತಮೋಂಕಾರಮಭಿಧ್ಯಾಯತಿ, ಸ ಕತಮಂ ಲೋಕಂ ತೇನ ಓಂಕಾರೇಣ ಪ್ರಾಪ್ನೋತೀತ್ಯರ್ಥಃ । ವಾವ ಶಬ್ದೋಽವಧಾರಣೇ, ಪ್ರಸಿದ್ಧೌ ವಾ ॥

## ಅನುವಾದ

**ಅಥ ಹೈನಂ ಶೈಬ್ಯಃ ಇತಿ** । (ಆಮೇಲೆ ಶಿಬಿಕುಮಾರ ಸತ್ಯಕಾಮನು ಪಿಪ್ಪಲಾದರಲ್ಲಿ ಪ್ರಶ್ನೆ-ಮಾಡಿದನು) ಅರ್ಥವು ನಿಚ್ಚಳವಾಗಿದೆ· **ಸ ಯೋ ಹ ವೈ ತತ್ ಇತಿ** । 'ಹ ವೈ' ಶಬ್ದಗಳು ಪ್ರಸಿದ್ಧಿಯ ಪ್ರಕರ್ಷವನ್ನು ಸೂಚಿಸುತ್ತವೆ · 'ತತ್' ಎಂಬುದು ಅವ್ಯಯವು · 'ಸಃ' ಎಂಬ ಪದವು ಅಧಿಕಾರಿಯಾದವರೆಲ್ಲರಿಗೂ ಅನ್ವಯಿಸುತ್ತದೆ· ಇದು ಭಾವವು · ಹೇ ಭಗವನ್! ಪೂಜ್ಯರೇ! ಯಾವ ಅಧಿಕಾರಿಯು ಮರಣಪರ್ಯಂತ ಪ್ರಣವವನ್ನು ಧ್ಯಾನಿಸುತ್ತಾನೆಯೋ, ಅವನು ಯಾವ ಲೋಕವನ್ನು ಆ ಓಂಕಾರದಿಂದ ಪಡೆಯುತ್ತಾನೆ? - ಎಂದು· 'ವಾವ' ಶಬ್ದವು ಅವಧಾರಣ ಅಥವಾ ಪ್ರಸಿದ್ಧಿ ಎಂಬ ಅರ್ಥವನ್ನು ಸೂಚಿಸುತ್ತದೆ·

## ಭಾಷ್ಯಸಾರ

ಶಿಬಿಯಕುಮಾರ ಸತ್ಯಕಾಮ · ಇವನು, ಆಚಾರ್ಯರು ಸೌರ್ಯಾಯಣಿಯ ಪ್ರಶ್ನೆಗಳಿಗೆ ಉತ್ತರವನ್ನು ನಿರೂಪಿಸಿದ ನಂತರ ಕ್ರಮದಂತೆ ಅವರಿಗೆ ವಂದನೆಮಾಡಿ, ವಿನಮ್ರನಾಗಿ ತನ್ನ ಪ್ರಶ್ನೆಯನ್ನು ಅವರಲ್ಲಿ ತೋಡಿಕೊಳ್ಳುತ್ತಾನೆ · "ಪೂಜ್ಯರೇ! ಅಧಿಕಾರಿಯಾದವನು ಮರಣಪರ್ಯಂತವಾಗಿ ಪ್ರಣವ-ಧ್ಯಾನದಲ್ಲಿ ನಿರತನಾಗಿದ್ದರೆ ಯಾವ ಲೋಕವನ್ನು ಪಡೆಯುತ್ತಾನೆ? ಅವನು ಪ್ರಣವಾಕ್ಷರದ ಅರ್ಥವನ್ನು ಅರಿತೇ ಧ್ಯಾನಿಸುವುದರಿಂದ ಕರ್ಮ-ಜ್ಞಾನ-ಭಕ್ತಿ-ಪ್ರಪತ್ತಿಗಳಿಂದ ದೊರಕಬಹುದಾದ ಲೋಕಗಳಲ್ಲಿ ಯಾವುದನ್ನು ಹೊಂದುತ್ತಾನೆ?" ಸತ್ಯಕಾಮನ ಪ್ರಶ್ನೆ ಪ್ರಣವೋಪಾಸನೆಯನ್ನು ಕುರಿತ ಗಂಭೀರವಾದ ಜಿಜ್ಞಾಸೆ · ಇದು ಪ್ರಣವೋಪಾಸನೆಯ ವಿಧಿ-ವಿಧಾನಗಳ ಹಾಗೂ ಫಲ-ಲಾಭಗಳ ವಿವರವನ್ನೂ ಪ್ರಕಾಶಪಡಿಸಬಲ್ಲದು·

## ಮಂತ್ರ - ೨

तस्मै स होवाच - एतद्वै सत्यकाम ! परं चा
परं च ब्रह्म यदोंकारः । तस्माद्विद्वान्
एतेनैवायनेनै(वाऽयतनेने) कतरमन्वेति ।। 2 ।।

ತಸ್ಮೈ ಸ ಹೋವಾಚ । ಏತದ್ವೈ ಸತ್ಯಕಾಮ! ಪರಂ ಚಾಪರಂ
ಚ ಬ್ರಹ್ಮ ಯದೋಂಕಾರಃ । ತಸ್ಮಾದ್ವಿದ್ವಾನ್
ಏತೇನೈವಾಯತನೇನೈ(ವಾಽಯತನೇನೇ)ಕತರಮನ್ವೇತಿ ॥

## ಪ್ರತಿಪದಾರ್ಥ

**ತಸ್ಮೈ** - ಶಿಷ್ಯ ಸತ್ಯಕಾಮನಿಗೆ, **ಸಃ** - ಆಚಾರ್ಯಪಿಪ್ಪಲಾದರು, **ಉವಾಚ** - ಹೇಳಿದರು· **ಸತ್ಯಕಾಮ!** - ಸತ್ಯಕಾಮನೇ! **ಯತ್ ಓಂಕಾರಃ** - ಯಾವ ಓಂಕಾರವಿದೆಯೋ, **ಏತತ್** - ಇದು, **ಪರಂ ಚ ಅಪರಂ ಚ ಬ್ರಹ್ಮ** - ಪರಬ್ರಹ್ಮ ಹಾಗೂ ಅಪರಬ್ರಹ್ಮವೆಂದು ದ್ವಿವಿಧವಾಗಿದೆ· **ತಸ್ಮಾತ್** - ಆದಕಾರಣ, **ವಿದ್ವಾನ್** - ಜ್ಞಾನಿಯಾದವನು, **ಏತೇನ** - ಈ, **ಆಯತನೇನ ಏವ** - (ಪ್ರಣವೋಪಾಸನ) ಮಾರ್ಗದಿಂದ, **ಏಕತರಮ್** - ಪರ ಮತ್ತು ಅಪರಬ್ರಹ್ಮಗಳಲ್ಲಿ ಒಂದನ್ನು, **ಅನ್ವೇತಿ**- ಅನುಸರಿಸುತ್ತಾನೆ (ಹೊಂದುತ್ತಾನೆ)·

## ತಾತ್ಪರ್ಯ

ಗುರು ಪಿಪ್ಪಲರು ಪ್ರಿಯಶಿಷ್ಯ ಸತ್ಯಕಾಮನ ಪ್ರಶ್ನೆಗಳನ್ನು ಉತ್ತರಿಸಲು ಆರಂಭಿಸುತ್ತಾರೆ · "ಸತ್ಯಕಾಮ! ಪ್ರಸಿದ್ಧವಾದ ಪ್ರಣವವು ಪರ ಮತ್ತು ಅಪರಬ್ರಹ್ಮಗಳ ವಾಚಕವಾಗಿದೆ · ಆದುದರಿಂದ ವಿದ್ವಾಂಸನು ಈ ಪ್ರಣವವನ್ನು ಉಪಾಸನೆ ಮಾಡಿ ಪರಾಪರಬ್ರಹ್ಮಗಳನ್ನು ಹೊಂದುತ್ತಾನೆ· "

## ರಂಗರಾಮಾನುಜಭಾಷ್ಯ

**ತಸ್ಮೈ ಸ ಹೋವಾಚ** । ಸ್ಪಷ್ಟೋಽರ್ಥಃ । **ಏತದ್ವೈ ಸತ್ಯಕಾಮ ಇತಿ** । ಹೇ ಸತ್ಯಕಾಮ! ಏತದೇವ ಪರಂ ಚಾಪರಂ ಚ ಬ್ರಹ್ಮ । ಉಭಯವಾಚಕಮಿತ್ಯರ್ಥಃ । ವಾಚ್ಯವಾಚಕಮಿತ್ಯರ್ಥಃ। ವಾಚ್ಯವಾಚಕಭಾವನಿಬಂಧನಂ ಸಾಮಾನಾಧಿಕರಣ್ಯಮ್ । ತಥೈವ ವ್ಯಾಸಾರ್ಯೈಃ ಈಕ್ಷತಿ-ಕರ್ಮಾಧಿಕರಣೇ ವ್ಯಾಖ್ಯಾತತ್ವಾತ್ । ಕಿಂ ತದಿತ್ಯತ್ರಾಹ ಯದೋಂಕಾರ ಇತಿ । ತಸ್ಮಾದುಪಾಸಕಃ ಏತೇನೈವೋಂಕಾರರೂಪೇಣ ಮಾರ್ಗೇಣ ಏಕತರಮ್ ಪರಮಪರಂ ವಾ ಬ್ರಹ್ಮ ಅನ್ವೇತಿ ಉಪಾಸ್ತ ಇತ್ಯರ್ಥಃ ।

## ಅನುವಾದ

**ತಸ್ಮೈ ಸ ಹೋವಾಚ** । ಸತ್ಯಕಾಮನಿಗೆ ಪಿಪ್ಪಲರು ಹೇಳಿದರು· ಅರ್ಥವು ಸ್ಪಷ್ಟವಾಗಿದೆ· **ಏತದ್ವೈ ಸತ್ಯಕಾಮ ಇತಿ** । ಸತ್ಯಕಾಮ! ಇದೇ ಪರಬ್ರಹ್ಮವೂ, ಅಪರಬ್ರಹ್ಮವೂ ಹೌದು· ಇದು ಉಭಯ-

ವಾಚಕವು· [೧]ಸಾಮಾನಾಧಿಕರಣ್ಯ ಪ್ರಯೋಗವು ವಾಚ್ಯ-ವಾಚಕಗಳ ಸಂಬಂಧಕ್ಕೆ ಅಧೀನವಾಗಿದೆ· ಏಕೆಂದರೆ [೨]'ಈಕ್ಷತಿಕರ್ಮಾಧಿಕರಣ'ದಲ್ಲಿ ಸುದರ್ಶನಸೂರಿಗಳು ಹೀಗೆಯೇ ವ್ಯಾಖ್ಯಾನ ಮಾಡಿದ್ದಾರೆ· ಏನದು? ಎಂದಾಗ ಹೇಳುತ್ತಾರೆ - ಯದೋಂಕಾರಃ ಎಂದು· ಆದ್ದರಿಂದ ಉಪಾಸಕನು ಈ ಪ್ರಣವಮಾರ್ಗ-ದಿಂದ **ಏಕತರಮ್** - ಪರಾಪರಬ್ರಹ್ಮಗಳಲ್ಲೊಂದನ್ನು **ಅನ್ವೇತಿ** - ಉಪಾಸಿಸುತ್ತಾನೆ·

## ಭಾಷ್ಯಸಾರ

ಶ್ರದ್ಧೆಯಿಂದ ಬಂದು, ವಿನೀತನಾಗಿ ಪ್ರಶ್ನೆ ಕೇಳಿದ ಸತ್ಯಕಾಮನನ್ನು ಆಚಾರ್ಯಪಿಪ್ಪಲಾದರು ಅಭಿನಂದಿಸುತ್ತಾರೆ· ಉಪಾಸನೆ ಪರಮಪದವನ್ನು ಏರಲು ಅನುವಾಗುವ ಪವಿತ್ರಸಾಧನ· ಅದರ ಸ್ವರೂಪ-ಸಿದ್ಧಿಗಳನ್ನೇ ಶಿಷ್ಯನು ತಿಳಿಯಲು ಬಯಸಿದ್ದಾನೆ, ಅಂದ ಮೇಲೆ ಆಚಾರ್ಯರ ಆನಂದಕ್ಕೆ ಪಾರವೇ ಇಲ್ಲ· ಅಕ್ಕರೆಯಿಂದಲೇ ಉಪದೇಶ ಮಾಡಲು ಅವರು ಉಪಕ್ರಮಿಸುತ್ತಾರೆ·

ಪ್ರಣವವೇ ಪರ ಹಾಗೂ ಅಪರಬ್ರಹ್ಮವು· ಇದು ಪರಾಪರಬ್ರಹ್ಮಗಳಿಗೆ ವಾಚಕವಾಗಿದೆ· ವಾಚಕ-ಪದವು ತನ್ನಲ್ಲಿ ಅಹಿತವಾದ ಶಕ್ತಿಯಿಂದ ವಸ್ತುವನ್ನು ಬೋಧಿಸುತ್ತದೆ· ಬೀಜದಲ್ಲಿ ಅಂಕುರೋತ್ಪತ್ತಿಗೆ ಅನುಕೂಲವಾದ ಶಕ್ತಿಯಿರುವಂತೆ, ಬೆಂಕಿಯಲ್ಲಿ ಸುಡುವ ಗುಣವಿರುವಂತೆ, ಪದಗಳಲ್ಲಿ ನಿಯತವಾಗಿ ಆಯಾಯಾ ಅರ್ಥಗಳನ್ನು ತಿಳಿಸುವ ಸಾಮರ್ಥ್ಯವಿರುವುದನ್ನು 'ಮಣ್ಣು', 'ಮಡಕೆ', 'ನೀರು' ಮುಂತಾದ ಅನೇಕಪದಗಳಲ್ಲಿ ನಾವು ಮನಗಂಡಿದ್ದೇವೆ· ಲೌಕಿಕವಾದ ಘಟ-ಪಟಾದಿ ಪದಗಳಂತೆ ಅಲೌಕಿಕವೂ, ಪವಿತ್ರವೂ ಆದ ಪ್ರಣವದಲ್ಲಿಯೂ ಬೋಧನ ಶಕ್ತಿಯಿರಲೇಬೇಕು· ಈ ಓಂಕಾರವು ತನ್ನ ನಿರುಪಾಧಿಕಶಕ್ತಿಯ ಸಹಕಾರದಿಂದ ಪರ ಮತ್ತು ಅಪರಬ್ರಹ್ಮಗಳನ್ನು ಬೋಧಿಸುತ್ತದೆ·

ಹಿಂದಿನ ಪ್ರಶ್ನೆಗಳಲ್ಲಿ ವಿವರಿಸಲಾದ ಅವಿನಾಶಿಯು ಪರಬ್ರಹ್ಮವು· ಈ ಪರವಸ್ತುವಿಗೆ ಸೂಕ್ಷ್ಮವಾದ (ಕಾರಣಾವಸ್ಥೆಯಲ್ಲಿರುವ) ಚಿದಚಿದ್ವಸ್ತುಗಳೇ ಶರೀರಗಳು· ಹಿರಣ್ಯಗರ್ಭನವರೆಗಿನ ಚೇತನಸಮುದಾಯವು ಅಪರಬ್ರಹ್ಮವು· ಇದು ಸ್ಥೂಲ-ಚಿದಚಿದ್ವಸ್ತುಗಳಿಗೆ ಶರೀರಿಯಾಗಿದೆ· ಈ ಇಬ್ಬಗೆಯ ಬ್ರಹ್ಮವನ್ನು ಧ್ಯಾನಿಸಲು ಪ್ರಣವವೇ ಆಲಂಬನೆ· ಜ್ಞಾನಿಯಾದವನು ಪರಾಪರಬ್ರಹ್ಮವನ್ನು ಉಪಾಸಿಸಲು ಈ ಓಂಕಾರ ಪ್ರತೀಕವನ್ನು ಆಶ್ರಯಿಸುತ್ತಾನೆ·

---

೧· ವಿಶೇಷಣ-ವಿಶೇಷ್ಯಪದಗಳು ಒಂದೇ ವಿಭಕ್ತ್ಯಂತವಾಗಿರುವುದು·

೨· ವಿವರಣೆಗಾಗಿ ಅನುಬಂಧವನ್ನು ನೋಡಿ·

## ಮಂತ್ರ - ೩

**स यद्येकमात्रमभिध्यायीत, स तेनैव संवेदित-
स्तूर्णमेव जगत्यामभिसंपद्यते । तमृचो मनुष्य-
लोकमुपनयन्ते । स तत्र तपसा ब्रह्मचर्येण
श्रद्धया संपन्नो महिमानमनुभवति ।। 3 ।।**

ಸ ಯದ್ಯೇಕಮಾತ್ರಮಭಿಧ್ಯಾಯೀತ, ಸ ತೇನೈವ ಸಂವೇದಿತ -
ಸ್ತೂರ್ಣಮೇವ ಜಗತ್ಯಾಮಭಿಸಂಪದ್ಯತೇ । ತಮೃಚೋ ಮನುಷ್ಯ -
ಲೋಕಮುಪನಯಂತೇ । ಸ ತತ್ರ ತಪಸಾ ಬ್ರಹ್ಮಚರ್ಯೇಣ
ಶ್ರದ್ಧಯಾ ಸಂಪನ್ನೋ ಮಹಿಮಾನಮನುಭವತಿ ॥

### ಪ್ರತಿಪದಾರ್ಥ

**ಸಃ** - ಉಪಾಸಕನು, **ಯದಿ** - ಒಂದುವೇಳೆ, **ಏಕಮಾತ್ರಮ್** - ಒಂದೇ ಮಾತ್ರೆಯ (ಅಪರ ಬ್ರಹ್ಮವಾಚಕವಾದ) [೧]ಪ್ರಣವವನ್ನು, **ಅಭಿಧ್ಯಾಯೀತ** - ಧ್ಯಾನಿಸುವುದಾದರೆ, **ಸಃ** - ಆ ಉಪಾಸಕನು, **ತೇನ ಏವ** - ಆ ಹ್ರಸ್ವ ಓಂಕಾರದಿಂದಲೇ, **ಸಂವೇದಿತಃ** - ಆತ್ಮಲಾಭ (ಅಸ್ತಿತ್ವ)ವನ್ನು ಪಡೆದು, **ತೂರ್ಣಮೇವ** - ಶೀಘ್ರವಾಗಿ, **ಜಗತ್ಯಾಮ್** - ಭೂಮಿಯಲ್ಲಿ, **ಅಭಿಸಂಪದ್ಯತೇ** - ಶ್ರೇಷ್ಠನಾಗುತ್ತಾನೆ **ಋಚಃ** - ಋಙ್ಮಂತ್ರಗಳು, **ತಮ್** - ಆ ಉಪಾಸಕನನ್ನು, **ಮನುಷ್ಯಲೋಕಮ್** - (ದೇಹತ್ಯಾಗದ ನಂತರ) ಮನುಷ್ಯಲೋಕಕ್ಕೆ, **ಉಪನಯಂತೇ** - ಒಯ್ಯುತ್ತವೆ· **ಸಃ** - ಆ ಉಪಾಸಕನು, **ತತ್ರ** ಮನುಷ್ಯಜನ್ಮದಲ್ಲಿ, **ತಪಸಾ** - ಶರೀರಕ್ಲೇಶದಿಂದ, **ಬ್ರಹ್ಮಚರ್ಯೇಣ** - ಬ್ರಹ್ಮಚರ್ಯದಿಂದ, **ಶ್ರದ್ಧಯಾ** - ಆಸ್ತಿಕ್ಯಬುದ್ಧಿಯಿಂದ, **ಸಂಪನ್ನಃ** - ಕೂಡಿದವನಾಗಿ, **ಮಹಿಮಾನಮ್** - ಶ್ರೇಯಸ್ಸಾಧನ-ವಾದ ಅನುಷ್ಠಾನವನ್ನು, **ಅನುಭವತಿ** - ಅನುಭವಿಸುತ್ತಾನೆ·

### ತಾತ್ಪರ್ಯ

ಜ್ಞಾನಿಯಾದ ಉಪಾಸಕನು ಅಪರಬ್ರಹ್ಮವಾಚಕವಾದ ಹ್ರಸ್ವಪ್ರಣವವನ್ನು ಒಂದು ವೇಳೆ ಧ್ಯಾನಿಸಿದರೆ,

---

೧· ಮಾಂಡೂಕ್ಯಾದಿ ಉಪನಿಷತ್ತುಗಳಲ್ಲಿ, ಪ್ರಣವ ಘಟಕಗಳಾದ 'ಅ'ಕಾರ 'ಉ'ಕಾರ, 'ಮ'ಕಾರ ಹಾಗೂ ಬಿಂದುಗಳ ಉಚ್ಚಾರಣಾಕಾಲವನ್ನು ಮಾತ್ರಾ ಪರಿಮಾಣದಲ್ಲಿ ವಿವರಿಸಲಾಗಿದೆ· ಆದರೆ ಇಲ್ಲಿ ಅಖಂಡ ಪ್ರಣವದ ಉಚ್ಚಾರಣಾಕಾಲವನ್ನೇ ಗಣನೆಗೆ ತೆಗೆದುಕೊಂಡು ಮಾತ್ರಾವ್ಯವಸ್ಥೆಯನ್ನು ಮಾಡಲಾಗಿದೆ·

ಮನುಷ್ಯಲೋಕಕ್ಕೆ ಸಲ್ಲುತ್ತಾನೆ· ಅವನು ದೇಹತ್ಯಾಗ ಮಾಡಿದ ಮೇಲೆ, ಅವನನ್ನು ಋಙ್ಮಂತ್ರಗಳು ಮರ್ತ್ಯಲೋಕಕ್ಕೆ ಕರೆದೊಯ್ಯುತ್ತವೆ· ಅಲ್ಲಿ ಅವನು ತಪಸ್ಸು, ಆಸ್ತಿಕ್ಯಭಾವನೆ ಹಾಗೂ ಬ್ರಹ್ಮಚರ್ಯೆ-ಗಳಿಂದ ಕೂಡಿ ಶ್ರೇಯಸ್ಸಿಗೆ ಸಾಧನವಾದ ಅನುಷ್ಠಾನವನ್ನು ಕೈಗೊಳ್ಳುತ್ತಾನೆ·

## ರಂಗರಾಮಾನುಜಭಾಷ್ಯ

**ಸ ಯದ್ಯೇಕಮಾತ್ರಮಿತಿ** । ಸಃ ಉಪಾಸಕಃ ಯದಿ **ಏಕಮಾತ್ರಂ** ಹ್ರಸ್ವಂ ಪ್ರಣವಮಪರಬ್ರಹ್ಮವಾಚಕಮ್ **ಅಭಿಧ್ಯಾಯೀತ,** ಅಪರಬ್ರಹ್ಮವಾಚಕೇನ ಹ್ರಸ್ವೇನ ಪ್ರಣವೇನ ಯೋಽಪರಂ ಬ್ರಹ್ಮೋಪಾಸ್ತೇ ಸ **ತೇನೈವ** - ಏಕಮಾತ್ರೋಂಕಾರಕರಣಕಾಪರಬ್ರಹ್ಮಧ್ಯಾನೇನೈವ **ಸಂವೇದಿತಃ** - ಲಬ್ಧಸತ್ತಾಕಃ **ಜಗತ್ಯಾಮ್** - ಭುವಿ **ಅಭಿಸಂಪದ್ಯತೇ** - ಅಭ್ಯರ್ಹಿತಃ ಶ್ರೇಷ್ಠಃ ಸಂಪದ್ಯತೇ । **ತಮ್ ಋಚೋ ಇತಿ** । ತಮೃಙ್ಮಂತ್ರಾಃ ಮನುಷ್ಯಲೋಕಂ ಪ್ರಾಪಯಂತಿ । **ಸ ತತ್ರೇತಿ** । ಸಃ ಮನುಷ್ಯಲೋಕಂ ನೀತಃ ತಪಸಾ ಅನಶನಾದಿನಾ ಬ್ರಹ್ಮಚರ್ಯೇಣ ಮೈಥುನ-ವರ್ಜನೇನ ಶ್ರದ್ಧಯಾ ಆಸ್ತಿಕ್ಯಬುದ್ಧ್ಯಾ ಯದಿ ಸಂಪನ್ನೋ ಭವತಿ, ತದಾ ಮಹಿಮಾನಮ್ ಶ್ರೇಯಸ್ಸಾಧಕಂ ಬ್ರಹ್ಮೋಪಾಸನಮನುತಿಷ್ಠತೀತ್ಯರ್ಥಃ । ನ ಚ ಏಚೋ ಹ್ರಸ್ವಾಭಾವಾತ್ ಕಥಮೋಂಕಾರಸ್ಯ ಹ್ರಸ್ವತ್ವಮಿತಿ ಶಂಕನೀಯಮ್, ಸ್ಮೃಂಖೇ ಹ್ರಸ್ವಸ್ಯ ಓಂಕಾರಸ್ಯ ದರ್ಶನಾತ್ ।

## ಅನುವಾದ

**ಸ ಯದ್ಯೇಕಮಾತ್ರಮಿತಿ** । ಸಃ ಉಪಾಸಕನು ಒಂದು ವೇಳೆ ಏಕಮಾತ್ರಮ್ ಹ್ರಸ್ವವಾದ ಅಪರ-ಬ್ರಹ್ಮವಾಚಕವಾದ ಪ್ರಣವವನ್ನು ಧ್ಯಾನಿಸುವುದಾದರೆ, ಅಪರಬ್ರಹ್ಮದಲ್ಲಿ ಶಕ್ತವಾದ ಹ್ರಸ್ವಓಂಕಾರದಿಂದ ಯಾವನು ಅಪರಬ್ರಹ್ಮವನ್ನು ಉಪಾಸಿಸುವನೋ ಅವನು **ತೇನೈವ** - ಒಂದೇ ಮಾತ್ರೆಯ ಪ್ರಣವ ಸಾಧ್ಯವಾದ ಅಪರಬ್ರಹ್ಮೋಪಾಸನೆಯಿಂದ **ಸಂವೇದಿತಃ** - ಅಸ್ತಿತ್ವವನ್ನು ಪಡೆದು **ಜಗತ್ಯಾಮ್** - ಭೂಮಿಯಲ್ಲಿ **ಅಭಿಸಂಪದ್ಯತೇ ಅಭಿ** - ಶ್ರೇಷ್ಠನಾಗುತ್ತಾನೆ· **ತಮೃಚೋ ಇತಿ** । ಅವನನ್ನು ಋಙ್ಮಂತ್ರಗಳು ಮನುಷ್ಯಲೋಕಕ್ಕೆ ಒಯ್ಯುತ್ತವೆ· **ಸ ತತ್ರ ಇತಿ** । ಸಃ - ಮನುಷ್ಯಲೋಕಕ್ಕೆ ಒಯ್ಯಲ್ಪಟ್ಟ ಅವನು **ತಪಸಾ** - ಉಪವಾಸಾದಿ ತಪಸ್ಸಿನಿಂದಲೂ, ಬ್ರಹ್ಮಚರ್ಯೇಣ - ಮೈಥುನ-ತ್ಯಾಗದಿಂದಲೂ **ಶ್ರದ್ಧಯಾ** - ಆಸ್ತಿಕ್ಯಬುದ್ಧಿಯಿಂದಲೂ ಕೂಡಿದವನಾಗುವುದಾದರೆ, ಆಗ **ಮಹಿಮಾನಮ್** - ಶ್ರೇಯಸ್ಸಾಧಕವಾದ ಬ್ರಹ್ಮೋಪಾಸನೆಯನ್ನು ಮಾಡುತ್ತಾನೆ· 'ಏಚ್' ವರ್ಣಗಳಿಗೆ ಹ್ರಸ್ವವರ್ಣವಿಲ್ಲದಿರುವುದರಿಂದ ಓಂಕಾರವು ಹ್ರಸ್ವವಾಗುವುದು ಹೇಗೆಂದು ಶಂಕಿಸಬಾರದು· ಏಕೆಂದರೆ ಸ್ಮೃಂಖದಲ್ಲಿ ಹ್ರಸ್ವಪ್ರಣವವು ಕಂಡುಬರುತ್ತದೆ·

## ಭಾಷ್ಯಸಾರ

ಓಂಕಾರವು ಏಕಮಾತ್ರ, ದ್ವಿಮಾತ್ರ ಹಾಗೂ ತ್ರಿಮಾತ್ರ ಎಂಬುದಾಗಿ ಮೂರು ಬಗೆಯದಾಗಿದೆ·

ಉಚ್ಚಾರಣೆಯ ಕಾಲವನ್ನು ಗಣನೆಗೆ ತೆಗೆದುಕೊಂಡು ಪ್ರಣವಸ್ವರೂಪದಲ್ಲಿ ಈ ಬಗೆಯ ವಿಭಾಗಕ್ರಮವನ್ನು ಗುರುತಿಸಬಹುದು· ಕ್ರಮವಾಗಿ ಒಂದು, ಎರಡು ಮೂರು ಮಾತ್ರೆಗಳ ಕಾಲವ್ಯಾಪ್ತಿಗೆ ಅಳವಡಿಸಿ ಉಚ್ಚರಿಸಿದರೆ ಓಂಕಾರವು ಏಕಮಾತ್ರ, ದ್ವಿಮಾತ್ರ ಮತ್ತು ತ್ರಿಮಾತ್ರ ಓಂಕಾರಗಳಾಗಿ ಮಾರ್ಪಡುತ್ತದೆ· ಏಕಮಾತ್ರ ಹಾಗೂ ದ್ವಿಮಾತ್ರ ಓಂಕಾರಗಳು ಅಪರಬ್ರಹ್ಮವಾಚಕಗಳು; ತ್ರಿಮಾತ್ರವಾದ ಓಂಕಾರವು ಪರಬ್ರಹ್ಮಕ್ಕೆ ವಾಚಕ·

ಏಕಮಾತ್ರಾಕಾಲಿಕವೂ, ಅಪರಬ್ರಹ್ಮವಾಚಕವೂ ಆದ ಹ್ರಸ್ವಪ್ರಣವವನ್ನು ಉಪಾಸಿಸುವ ಜ್ಞಾನಿಯು ಅಪರಬ್ರಹ್ಮಸಾಕ್ಷಾತ್ಕಾರವನ್ನು ಹೊಂದಿ ಭೂಮಿಯಲ್ಲಿ ಜನ್ಮವನ್ನು ಪಡೆಯುತ್ತಾನೆ· [೧]ಹ್ರಸ್ವಪ್ರಣವೋಪಾಸಕನಿಗೆ ಋಙ್ಮಂತ್ರಗಳು ಮನುಷ್ಯಶರೀರವನ್ನು ದಯಪಾಲಿಸುತ್ತವೆ· ಆಭಿಮುಖ್ಯದಿಂದ ಹ್ರಸ್ವ ಓಂಕಾರವನ್ನು ಧ್ಯಾನಿಸಿರುವುದರಿಂದ ಅವನು ಪಶು, ಪಕ್ಷಿ, ಕ್ರಿಮಿ, ಕೀಟ ಮುಂತಾದ ತಿರ್ಯಕ್ ದೇಹಗಳನ್ನು ಪಡೆಯದೇ ಮನುಷ್ಯನಾಗಿಯೇ ಹುಟ್ಟುತ್ತಾನೆ· ಮನುಷ್ಯದೇಹವನ್ನು ಪಡೆದರೂ ಜೀವನು ತಪಸ್ಸು ಮುಂತಾದವುಗಳನ್ನು ಅನುಷ್ಠಿಸದಿದ್ದರೆ ಲೋಕದಲ್ಲಿ ಅಧೋಗತಿಗೆ ಇಳಿಯುವ ಸಾಧ್ಯತೆಯಿದೆ· ಆದರೆ ಉಪಾಸಕನು ಮಾತ್ರ ಹಾಗೆ ಆಗಲಾರ· ಪ್ರಣವೋಪಾಸನೆಯ ಪ್ರಭಾವದಿಂದಾಗಿ ಜನ್ಮಾಂತರದಲ್ಲಿಯೂ ಚಾಂದ್ರಾಯಣಾದಿ ತಪಸ್ಸನ್ನು ಆಚರಿಸುತ್ತಾನೆ· ಅಷ್ಟವಿಧಮೈಥುನಗಳನ್ನು ತ್ಯಜಿಸಿ ಬ್ರಹ್ಮಚರ್ಯವನ್ನು ಪಾಲಿಸುತ್ತಾನೆ· ಆಸ್ತಿಕ್ಯಬುದ್ಧಿಯಿಂದ ಮನುಷ್ಯಲೋಕಕ್ಕೆ ಸಂಬಂಧಿಸಿದ ಹಿರಿಮೆ-ಗರಿಮೆಗಳನ್ನೂ ಅನುಭವಿಸುತ್ತಾನೆ·

## ಮಂತ್ರ - ೪

अथ यदि द्विमात्रेण मनसि संपद्यते,
सोऽन्तरिक्षं यजुर्भिरुन्नीयते सोमलोकम् ।
स सोमलोके विभूतिमनुभूय पुनरावर्तते ।। 4 ।।

೧· ಹ್ರಸ್ವಪ್ರಣವೋಪಾಸಕಮ್ । ಋಗ್ವೇದಮಂತ್ರಾಃ ಮಾನುಷಂ ಶರೀರಂ ಪ್ರಾಪಯಂತಿ । ಸ ಪೃಥಿವ್ಯಾಂ ಜಾಯಮಾನಃ ಹ್ರಸ್ವಪ್ರಣವೋಪಾಸನವಶಾತ್ ನ ಪಶ್ವಾದಿಶರೀರಂ ಪ್ರಾಪ್ನೋತಿ ಕಿಂತು ಮನುಷ್ಯಶರೀರಮೇವ - ಆನಂದಭಾಷ್ಯ·

**ಅಥ ಯದಿ ದ್ವಿಮಾತ್ರೇಣ ಮನಸಿ ಸಂಪದ್ಯತೇ, ಸೋಽಂತ -**
**ರಿಕ್ಷಂ ಯಜುರ್ಭಿರುನ್ನೀಯತೇ ಸೋಮಲೋಕಮ್ । ಸ**
**ಸೋಮಲೋಕೇ ವಿಭೂತಿಮನುಭೂಯ ಪುನರಾವರ್ತತೇ ॥**

## ಪ್ರತಿಪದಾರ್ಥ

**ಅಥ** - ಆಮೇಲೆ, **ದ್ವಿಮಾತ್ರೇಣ** - ಅಪರಬ್ರಹ್ಮವಾಚಕವಾದ ದ್ವಿಮಾತ್ರಕಾಲಿಕಪ್ರಣವದಿಂದ, **ಯದಿ** - ಒಂದು ವೇಳೆ, **ಮನಸಿ** - ಮನಸ್ಸಿನಲ್ಲಿ, **ಸಂಪದ್ಯತೇ** - (ಅಪರಬ್ರಹ್ಮಧ್ಯಾನವು) ಉಂಟಾದರೆ, **ಸಃ** - ಆ ಉಪಾಸಕನು, **ಅಂತರಿಕ್ಷಮ್** - ಅಂತರಿಕ್ಷದಲ್ಲಿರುವ, **ಸೋಮಲೋಕಮ್** - ಸೋಮ-ಲೋಕಕ್ಕೆ, **ಯಜುರ್ಭಿಃ** - ಯಜುರ್ಮಂತ್ರಗಳಿಂದ, **ಉನ್ನೀಯತೇ** - ಕರೆದೊಯ್ಯಲ್ಪಡುತ್ತಾನೆ· **ಸಃ** - ಆ ಉಪಾಸಕನು, **ಸೋಮಲೋಕೇ** - ಸೋಮಲೋಕದಲ್ಲಿ, **ವಿಭೂತಿಮ್** - ಐಶ್ವರ್ಯವನ್ನು, **ಅನುಭೂಯ** - ಅನುಭವಿಸಿ, **ಪುನರಾವರ್ತತೇ** - ಹಿಂತಿರುಗುತ್ತಾನೆ·

## ತಾತ್ಪರ್ಯ

ಎರಡುಮಾತ್ರಾಕಾಲದ ಪ್ರಣವವನ್ನು ಮನಸ್ಸಿನಲ್ಲಿ ಧ್ಯಾನಿಸುವುದರಿಂದ ಉಪಾಸಕನು ಅಪರಬ್ರಹ್ಮ ವಾಚಕವಾದ ದ್ವಿಮಾತ್ರಪ್ರಣವದ ಉಪಾಸನೆ ಮಾಡಿದಂತಾಗುತ್ತದೆ· ಈ ಉಪಾಸಕನನ್ನು ಯಜು-ರ್ಮಂತ್ರಗಳು ಅಂತರಿಕ್ಷದ ಸೋಮಲೋಕಕ್ಕೆ ಕರೆದೊಯ್ಯುತ್ತವೆ· ಅಲ್ಲಿ ಅವನು ಐಶ್ವರ್ಯವನ್ನು ಅನುಭವಿಸಿ ಮರ್ತ್ಯಲೋಕಕ್ಕೇ ಹಿಂತಿರುಗುತ್ತಾನೆ·

## ರಂಗರಾಮಾನುಜಭಾಷ್ಯ

**ಅಥ ಯದಿ ದ್ವಿಮಾತ್ರೇಣೇತಿ** । ದ್ವಿಮಾತ್ರೇಣ ಅಪರಬ್ರಹ್ಮವಾಚಕೇನ ಪ್ರಣವೇನ ಯಸ್ಯ ಮನಸಿ ಅಪರಬ್ರಹ್ಮಧ್ಯಾನಂ ಸಂಪದ್ಯತೇ - **ಸೋಽಂತರಿಕ್ಷಂ** ಇತಿ । ಸಃ ಅಂತರಿಕ್ಷಾ-ಶ್ರಿತಂ ಸೋಮಲೋಕಂ ದ್ವಿಮಾತ್ರೋಪಾಸಕಃ ಪುಮಾನ್ ಯಜುರ್ಮಂತ್ರೈಃ ಉನ್ನೀಯತೇ । ಅತ್ರ ಅಂತರಿಕ್ಷಸೋಮಲೋಕಶಬ್ದೌ ಊರ್ಧ್ವಮಾತ್ರೋಪಲಕ್ಷಕಃ ಆಮುಷ್ಮಿಕಮಾತ್ರಪರಃ । ಅತ ಏವ ಈಕ್ಷತಿಕರ್ಮಾಧಿಕರಣಭಾಷ್ಯೇ, ''ಯತ್ ಅಪರಂ ಕಾರ್ಯಂ ಬ್ರಹ್ಮನಿರ್ದಿಷ್ಟಮ್ ತತ್ ಐಹಿಕಾಮುಷ್ಮಿಕತ್ವೇನ ದ್ವಿಧಾ ವಿಭಜ್ಯ, ಏಕಮಾತ್ರಂ ಪ್ರಣವಮುಪಾಸೀನಾನಾಮೈಹಿಕಂ ಮನುಷ್ಯಲೋಕಪ್ರಾಪ್ತಿರೂಪಂ ಫಲಮಭಿಧಾಯ ದ್ವಿಮಾತ್ರಮುಪಾಸೀನಾನಾಮುಷ್ಮಿಕಮಂತರಿಕ್ಷ ಶಬ್ದೋಪಲಕ್ಷಿತಂ ಫಲಂ ಚಾಭಿಧಾಯ'' ಇತ್ಯುಕ್ತಮ್ । **ಸ ಸೋಮಲೋಕೇತಿ** । ಆಮುಷ್ಮಿನ್ನೈಶ್ವರ್ಯಮನುಭೂಯ ತತ್ಪುಣ್ಯಾವಸಾನೇ ಪುನರಾವರ್ತತೇ ॥

## ಅನುವಾದ

**ಅಥ ಯದಿ ದ್ವಿಮಾತ್ರೇಣೇತಿ** । ಎರಡು ಮಾತ್ರಾಕಾಲದ ಅಪರಬ್ರಹ್ಮವಾಚಕ ಓಂಕಾರದಿಂದ ಯಾರ ಮನಸ್ಸಿನಲ್ಲಿ ಅಪರಬ್ರಹ್ಮಧ್ಯಾನವು ಉಂಟಾಗುವುದೋ - **ಸೋಽಂತರಿಕ್ಷಮ್ ಇತಿ** ಅಂತರಿಕ್ಷದಲ್ಲಿರುವ ಸೋಮಲೋಕಕ್ಕೆ ಎರಡುಮಾತ್ರೆಗಳಿಂದ ಪ್ರಣವೋಪಾಸನೆಯನ್ನು ಮಾಡುವ ಆ ವ್ಯಕ್ತಿಯನ್ನು ಯಜುರ್ಮಂತ್ರಗಳು ಒಯ್ಯುತ್ತವೆ· ಇಲ್ಲಿ ಅಂತರಿಕ್ಷ ಹಾಗೂ ಸೋಮಲೋಕಶಬ್ದಗಳು ಊರ್ಧ್ವ-ಲೋಕಗಳಿಗೆ ಅಥವಾ ಪರಲೋಕಗಳಿಗೆ ಉಪಲಕ್ಷಕವಾಗಿವೆ· ಆದ್ದರಿಂದಲೇ ಈಕ್ಷತಿಕರ್ಮಾಧಿ-ಕರಣಭಾಷ್ಯದಲ್ಲಿ "ಕಾರ್ಯರೂಪದ ಅಪರಬ್ರಹ್ಮವನ್ನು ಐಹಿಕ ಆಮುಷ್ಮಿಕಗಳೆಂಬ ಎರಡು ವಿಭಾಗ-ಮಾಡಿ, ಒಂದೇ ಮಾತ್ರೆಯ ಪ್ರಣವೋಪಾಸನೆ ಮಾಡುವವರಿಗೆ ಐಹಿಕವಾದ ಮನುಷ್ಯಲೋಕ ಪ್ರಾಪ್ತಿಯನ್ನು ಹೇಳಿ; ದ್ವಿಮಾತ್ರಾವಧಿಯ ಪ್ರಣವೋಪಾಸನೆ ಮಾಡುವವರಿಗೆ ಅಂತರಿಕ್ಷಶಬ್ದದಿಂದ ಕರೆಯಲಾದ ಆಮುಷ್ಮಿಕ ಫಲವನ್ನು ಹೇಳಿ" ಎಂದು ವಿವರಿಸಲಾಗಿದೆ· **ಸಃ ಸೋಮಲೋಕೇತಿ** । ಪರಲೋಕ-ದಲ್ಲಿ ಐಶ್ವರ್ಯವನ್ನು ಅನುಭವಿಸಿ ಅದರ ಪುಣ್ಯತೀರಲು ಹಿಂದಿರುಗುತ್ತಾನೆ·

## ಭಾಷ್ಯಸಾರ

ಹ್ರಸ್ವಪ್ರಣವೋಪಾಸನೆಗೆ ಐಹಿಕವಾದ ಮನುಷ್ಯಲೋಕವೇ ಪ್ರಯೋಜನ· ಆದರೆ ದ್ವಿಮಾತ್ರವಾದ ದೀರ್ಘಪ್ರಣವದ ಉಪಾಸನೆಯು ಆಮುಷ್ಮಿಕವಾದ ಅಂತರಿಕ್ಷಲೋಕಗಳನ್ನು ಅನುಗ್ರಹಿಸಬಲ್ಲದು · ದೀರ್ಘ ಓಂಕಾರವನ್ನು ಆಲಂಬನವಾಗಿಸಿ ಉಪಾಸಿಸಿದ ಜ್ಞಾನಿಯು ಯಜುರ್ಮಂತ್ರಗಳ ನೆರವಿನಿಂದ ಅಂತರಿಕ್ಷದಲ್ಲಿರುವ ಚಂದ್ರಲೋಕವನ್ನು ಹಿಡಿದು ಹಿರಣ್ಯಗರ್ಭಲೋಕದವರೆಗಿನ ಎಲ್ಲಲೋಕಗಳಿಗೂ ಹೋಗುವನು· ಆ ಲೋಕಗಳಲ್ಲಿ ಆಯಾಯಾ ಲೋಕಧರ್ಮಗಳಿಗೆ ಅನುರೂಪವಾದ ದೈವಸಂಪತ್ತನ್ನು ಅನುಭವಿಸುತ್ತಾನೆ·

ಆದರೆ ಅಪರಬ್ರಹ್ಮೋಪಾಸಕರು ಹಿಂದಿರುಗಲೇಬೇಕು· "ಕ್ಷೀಣೇಪುಣ್ಯೇ ಮರ್ತ್ಯಲೋಕಂ ವಿಶಂತಿ" - 'ಪುಣ್ಯವು ಕ್ಷಯಿಸಲು ಮನುಷ್ಯಲೋಕಕ್ಕೆ ಹಿಂದಿರುಗುತ್ತಾರೆ' · ಭೋಗದಿಂದ ಪುಣ್ಯವು ತೀರಿದಾಗ ಪುನರಾವೃತ್ತಿ ಅನಿವಾರ್ಯ · ಈ ಪುನರಾವೃತ್ತಿ ಏಕಮಾತ್ರ ಹಾಗೂ ದ್ವಿಮಾತ್ರ ಪ್ರಣವೋಪಾಸಕರಿಗೆ ಸಾಧಾರಣವಾದುದು·

## ಮಂತ್ರ - ೫

यः पुनरेतं त्रिमात्रेणोमित्येतेनैवाक्षरेण परं पुरुषमभिध्यायीत,
स तेजसि सूर्ये संपन्नः - यथा पादोदरस्त्वचा विनिर्मुच्यते
एवं ह वै स पाप्मना विनिर्मुक्तः स सामभिरुन्नीयते ब्रह्मलोकम् ।
स एतस्माज्जीवघनात् परात्परं पुरिशयं पुरुषमीक्षते ।
तदेतौ श्लोकौ भवतः ॥ 5 ॥

ಯಃ ಪುನರೇತಂ ತ್ರಿಮಾತ್ರೇಣೋಮಿತ್ಯೇನ್ಯೈವಾಕ್ಷರೇಣ ಪರಂ
ಪುರುಷಮಭಿಧ್ಯಾಯೀತ, ಸ ತೇಜಸಿ ಸೂರ್ಯೇ ಸಂಪನ್ನಃ
ಯಥಾ ಪಾದೋದರಸ್ತ್ವಚಾ ವಿನಿರ್ಮುಚ್ಯತೇ
ಏವಂ ಹ ವೈ ಸ ಪಾಪ್ಮನಾ ವಿನಿರ್ಮುಕ್ತಃ ಸ ಸಾಮಭಿರುನ್ನೀ -
ಯತೇ ಬ್ರಹ್ಮಲೋಕಮ್ । ಸ ಏತಸ್ಮಾಜ್ಜೀವಘನಾತ್
ಪರಾತ್ಪರಂ ಪುರಿಶಯಂ ಪುರುಷಮೀಕ್ಷತೇ ।
ತದೇತೌ ಶ್ಲೋಕೌ ಭವತಃ ॥

### ಪ್ರತಿಪದಾರ್ಥ

ಯಃ ಪುನಃ - ಮತ್ತೆ ಯಾರು (ಯಾವ ಉಪಾಸಕನು) ಓಮ್ ಇತಿ - ಓಮ್ ಎಂಬ ತ್ರಿಮಾತ್ರೇಣ - ಮೂರು ಮಾತ್ರಾಕಾಲದ, ಏತೇನ್ಯೈವ ಅಕ್ಷರೇಣ - ಪರಬ್ರಹ್ಮವಾಚಕವಾದ ಈ ಪ್ರಣವದಿಂದಲೇ, ಏತಮ್ - ಈ, ಪರಮಪುರುಷಮ್ - ಪರಮಾತ್ಮನನ್ನು, ಅಭಿಧ್ಯಾಯೀತ-ಧ್ಯಾನಿಸುವನೋ, ಸಃ - ಆ ಉಪಾಸಕನು, ತೇಜಸಿ ಸೂರ್ಯೇ - ತೇಜೋಮಂಡಲರೂಪನಾದ ಸೂರ್ಯನಲ್ಲಿ, ಸಂಪನ್ನಃ - ಸಂಗತನಾಗಿ, ಪಾದೋದರಃ - ಸರ್ಪವು, ಯಥಾ - ಹೇಗೆ, ತ್ವಚಾ-ಪೊರೆಯಿಂದ, ವಿನಿರ್ಮುಚ್ಯತೇ - ಕಳಚಿಕೊಳ್ಳುತ್ತದೆಯೋ, ಏವಂ ಹ ವೈ - ಹಾಗೆಯೇ, ಪಾಪ್ಮನಾ - ಪಾಪದಿಂದ, ವಿನಿರ್ಮುಕ್ತಃ - ಬಿಡಲ್ಪಟ್ಟು, ಸಃ - ಅವನು, ಸಾಮಭಿಃ - ಸಾಮ-ಮಂತ್ರಗಳಿಂದ, ಬ್ರಹ್ಮಲೋಕಮ್ - ಬ್ರಹ್ಮಲೋಕಕ್ಕೆ, ಉನ್ನೀಯತೇ - ಕರೆದೊಯ್ಯಲ್ಪಡುತ್ತಾನೆ · ಸಃ - (ವೈಕುಂಠವನ್ನು ಸೇರಿದ) ಉಪಾಸಕನು, ಏತಸ್ಮಾತ್ - ಈ, ಜೀವಘನಾತ್ - ಜೀವನಿಗಿಂತಲೂ,

**ಪರಾತ್** - ಉತ್ಕೃಷ್ಟನಾದ ಶುದ್ಧಾತ್ಮನಿಗಿಂತಲೂ, **ಪರಮ್** - ಉತ್ಕೃಷ್ಟನಾದ, **ಪುರಿಶಯಮ್** - ಎಲ್ಲಾ ಪ್ರಾಣಿಗಳಲ್ಲಿಯೂ ಅಂತರಾತ್ಮನಾಗಿರುವ, **ಪುರುಷಮ್** - ಭಗವಂತನನ್ನು, **ಈಕ್ಷತೇ**- ನೋಡುತ್ತಾನೆ · **ತತ್** - ಪ್ರಣವಧ್ಯಾನವನ್ನು ಕುರಿತು, **ಏತೌ** - ಈ ಎರಡು, **ಶ್ಲೋಕೌ** - ಮಂತ್ರಗಳು, **ಭವತಃ** - ಇವೆ·

## ತಾತ್ಪರ್ಯ

ತ್ರಿಮಾತ್ರಾವಧಿಯ ಪ್ರಣವೋಪಾಸನೆಯನ್ನು ಮಾಡುವವನು ಜ್ಞಾನಿಯು· ಅವನು ಪರಬ್ರಹ್ಮ ವಾಚಕವಾದ ಈ ಓಂಕಾರವೆಂಬ ಸಾಧನದಿಂದ ಪರಬ್ರಹ್ಮವನ್ನು ಧ್ಯಾನಿಸುತ್ತಾನೆ· ಸೌರಮಂಡಲವಾಸವೇ ಈ ಧ್ಯಾನಕ್ಕೆ ಮೊದಲ ಪ್ರಯೋಜನ · ಸರ್ಪವು ಜೀರ್ಣವಾದ ಪೊರೆಯನ್ನು ಕಳಚಿಕೊಂಡಂತೆ ಪಾಪಲೇಪವನ್ನು ಕಳೆದುಕೊಂಡ· ಉಪಾಸಕನು ಸಾಮಮಂತ್ರಗಳಿಂದ ವೈಕುಂಠಲೋಕಕ್ಕೆ ಹೋಗುತ್ತಾನೆ ಅಲ್ಲಿ ಸಕಲಚರಾಚರವಸ್ತುಗಳಿಗಿಂತ ಉತ್ಕೃಷ್ಟನೂ, ಸರ್ವಾಂತರ್ಯಾಮಿಯೂ ಆದ ಭಗವಂತನನ್ನು ಆನಂದದಿಂದ ಅನುಭವಿಸುತ್ತಾನೆ · ಮುಂದೆ ಹೇಳಲಿರುವ ಮಂತ್ರಗಳು ಇಂತಹ ಪ್ರಣವಧ್ಯಾನವನ್ನು ಕುರಿತೇ ಇವೆ·

## ರಂಗರಾಮಾನುಜಭಾಷ್ಯ

**ಯಃ ಪುನರೇತಮಿತಿ** । ಯಸ್ತು ಏಕಮಾತ್ರದ್ವಿಮಾತ್ರತ್ವದಶಾಯಾಮರ್ವಾಚೀನಫಲ- ಸಾಧನೇನ ಏತೇನೈವಾಕ್ಷರೇಣ ಪರಮಾತ್ಮಾನಮ್ **ಅಭಿಧ್ಯಾಯತಿ** - ಆಭಿಮುಖ್ಯೇನ ಧ್ಯಾಯತಿ - ನಿರಂತರಂ ಧ್ಯಾಯತೀತ್ಯರ್ಥಃ । **ಸ ತೇಜಸಿ ಇತಿ** । ಸ ಉಪಾಸಕಃ ತೇಜೋಮಂಡಲೇ ಸೂರ್ಯೇ ಸಂಗತಃ ಸನ್ ಉದರಮೇವ ಪಾದೋ ಯಸ್ಯ ಸಃ - ಪಾದೋದರಃ, ಸರ್ಪ ಇತಿ ಯಾವತ್ । ಯಥಾ ಸರ್ಪೋ ಜೀರ್ಣಯಾ ತ್ವಚಾ ವಿನಿರ್ಮುಕ್ತೋ ಭವತಿ, ಏವಂ ಪಾಪ್ಮನಾ ವಿನಿರ್ಮುಕ್ತಃ ಸನ್ ಭಗವಲ್ಲೋಕಂ ವೈಕುಂಠಂ **ಸಾಮಭಿಃ** ಗೀತಿಪ್ರಧಾನೈರ್ಮಂತ್ರೈ- ರುನ್ನೀಯತೇ । ಅತ್ರ ವ್ಯಾಸಾರ್ಯೈಃ ಸ ಪಾಪ್ಮನಾ ವಿನಿರ್ಮುಕ್ತಃ ಇತಿ ತಚ್ಛಬ್ದಾಂತರಶ್ರವಣಾತ್ ಸಸಾಮಭಿಃ ಇತ್ಯೇಕಪದ್ಯಮಾಶ್ರಿತ್ಯ, 'ಸಾಮಗಾನಸಹಿತೈರಿತಿ ವಾ ಸಾಂತ್ವವಚನಸಹಿತೈಃ ಪುರುಷೈರಿತಿ ವಾಽರ್ಥಃ' ಇತಿ ಈಕ್ಷತಿಕರ್ಮಾಧಿಕರಣೇ ವ್ಯಾಖ್ಯಾತಮ್ ॥

**ಸ ಏತಸ್ಮಾಜ್ಜೀವಘನಾತ್** ಇತಿ । ಈಕ್ಷತಿಕರ್ಮಾಧಿಕರಣೇ, "ಯಸ್ಯ ಹಿ ಕರ್ಮನಿಮಿತ್ತಂ ದೇಹಿತ್ವಮ್, ಸ ಜೀವಘನ" ಇತ್ಯುಚ್ಯತೇ । ಚತುರ್ಮುಖಸ್ಯಾಪಿ ತಚ್ಛ್ರೂಯತೇ 'ಯೋ ಬ್ರಹ್ಮಾಣಂ ವಿದಧಾತಿ ಪೂರ್ವಮ್' ಇತಿ ಭಾಷ್ಯೋಕ್ತೇಃ ।· ಜೀವಘನಶಬ್ದೇನ ಸಂಸಾರಿಮಂಡಲ- ಮುಚ್ಯತೇ; "ಮೂರ್ತೌ ಘನಃ" ಇತಿ ಕಾಶಿಕಾಶಬ್ದಿತಮೂರ್ತೌ ಘನಶಬ್ದಸ್ಯ ನಿಪಾತಿತತ್ವಾತ್ । ದೇಹದ್ವಾರತ್ವಾದಾತ್ಮನಿ ಕಾಶಿಕಾಸ್ಯ, ಘನಶಬ್ದೋದೇಹಿಪರ ಏವ; ತಸ್ಮಾತ್ ಪರಃ ಪರಿಶುದ್ಧಾತ್ಮಾ ,

ತಸ್ಮಾದಪಿ ಪರಭೂತಂ ಪುರಿಶಯಮ್ - "ಪೂಃ ಪ್ರಾಣಿನಃ ಸರ್ವ ಏವ ಗುಹಾಶಯಸ್ಯ" ಇತಿ ಸರ್ವೇಷು ಪ್ರಾಣಿಷ್ವಂತರಾತ್ಮತಯಾ ಶಯಾನಮ್, "ಭಗವಾನಿತಿ ಶಬ್ದೋऽಯಂ ತಥಾ ಪುರುಷ ಇತ್ಯಪಿ । ನಿರುಪಾಧೀ ಚ ವರ್ತೇತೇ ವಾಸುದೇವೇ ಸನಾತನೇ ॥" ಇತಿ ನಿರುಪಾಧಿಕಪುರುಷಶಬ್ದ-ವಾಚ್ಯಂ ಭಗವಂತಂ ಪರವಾಸುದೇವಮೀಕ್ಷತ ಇತ್ಯರ್ಥಃ । ಅತ ಏವ, 'ಸ ಸಾಮಭಿರುನ್ನೀಯತೇ ಬ್ರಹ್ಮಲೋಕಮ್" ಇತ್ಯತ್ರ ಬ್ರಹ್ಮಲೋಕಶಬ್ದಸ್ಯ ಚತುರ್ಮುಖಲೋಕ ಪರತ್ವಶಂಕಾ ವ್ಯುದಸ್ತಾ, ತದ್ಗತಾನಾಂ ಪರವಾಸುದೇವೇಕ್ಷಣಾಸಂಭವಾದಿತಿ ದ್ರಷ್ಟವ್ಯಮ್ । ತದೇತೌ ಶ್ಲೋಕೌ ಭವತಃ । ತತ್ ಓಂಕಾರಧ್ಯಾನಮಧಿಕೃತ್ಯ ವಕ್ಷ್ಯಮಾಣೌ ಶ್ಲೋಕೌ ಪ್ರವೃತ್ತಾವಿತ್ಯರ್ಥಃ ॥

## ಅನುವಾದ

**ಯಃ ಪುನರೇತಮಿತಿ** । ಯಾರು, ಒಂದು ಮಾತ್ರೆ ಮತ್ತು ಎರಡು ಮಾತ್ರೆಗಳ ಅವಧಿಗೆ ಒಳಪಟ್ಟಾಗ ನಶ್ವರಪ್ರಯೋಜನಗಳನ್ನು ತಂದುಕೊಡುವ ಇದೇ ಪ್ರಣವಾಕ್ಷರದಿಂದ ಪರಮಾತ್ಮನನ್ನು **ಅಭಿಧ್ಯಾಯತಿ** - ಅಭಿಮುಖನಾಗಿ ಧ್ಯಾನಿಸುತ್ತಾನೆಯೋ (ನಿರಂತರವಾಗಿ ಉಪಾಸಿಸುತ್ತಾನೆಯೋ) ಎಂದರ್ಥ· **ಸ ತೇಜಸಿ ಇತಿ** । ಆ ಉಪಾಸಕನು ತೇಜೋಮಂಡಲನಾದ ಸೂರ್ಯನಲ್ಲಿ ಸಂಪನ್ನನಾಗಿ - ಹೊಟ್ಟೆಯೇ ಪಾದವಾಗಿ ಇರುವ, **ಪಾದೋದರಃ** - ಸರ್ಪವು ಎಂದರ್ಥ · ನಾಗರಹಾವು ಹೇಗೆ ಹಳೆಯಪೊರೆಯನ್ನು ಕಳಚಿಕೊಳ್ಳುತ್ತದೆಯೋ ಹಾಗೆಯೇ ಪಾಪವನ್ನು ಕಳೆದುಕೊಂಡವನಾಗಿ ಪರಮಾತ್ಮ ಸ್ಥಾನವಾದ ವೈಕುಂಠಕ್ಕೆ **ಸಾಮಭಿಃ** - ಗಾನಪ್ರಧಾನವಾದ ಮಂತ್ರಗಳಿಂದ ಕರೆದೊಯ್ಯಲ್ಪಡುತ್ತಾನೆ · ಇಲ್ಲಿ ಶ್ರುತಪ್ರಕಾಶಿಕಾಚಾರ್ಯರು, 'ಸ ಪಾಪ್ಮನಾ ವಿನಿರ್ಮುಕ್ತಃ' ಎಂಬಲ್ಲಿ ಮತ್ತೊಂದು ತಚ್ಛಬ್ದವು ಇರುವುದರಿಂದ 'ಸಸಾಮಭಿಃ' ಎಂಬುದು ಒಂದೇ ಪದವೆಂದು ಭಾವಿಸಿ, 'ಸಾಮಗಾನ ಅಥವಾ ಸಾಂತ್ವನವಾಕ್ಯಗಳಿಂದ ಕೂಡಿದ ಪುರುಷರಿಂದ ಎಂದರ್ಥ · ಎಂಬುದಾಗಿ ಈಕ್ಷತಿಕರ್ಮಾಧಿಕರಣದಲ್ಲಿ ವ್ಯಾಖ್ಯಾನ ಮಾಡಿರುತ್ತಾರೆ·

**ಸ ಏತಸ್ಮಾಜ್ಜೀವಘನಾತ್ ಇತಿ** । ಈಕ್ಷತಿಕರ್ಮಾಧಿಕರಣದಲ್ಲಿ 'ಕರ್ಮದ ದೆಸೆಯಿಂದ ಯಾರು ಸಂಸಾರಿಯೋ ಅವನೇ ಜೀವಘನ' ಎಂದು ಹೇಳಲಾಗಿದೆ· 'ಯೋ ಬ್ರಹ್ಮಾಣಂ ವಿದಧಾತಿ ಪೂರ್ವಮ್' ಎಂಬ ವೇದವಾಕ್ಯದಲ್ಲಿ ಚತುರ್ಮುಖಬ್ರಹ್ಮನೂ ಜೀವಘನನೆಂದೇ ಭಾಷ್ಯದ ಶ್ರೀಸೂಕ್ತಿಯ ಪ್ರಕಾರ ಹೇಳಲಾಗಿದೆ · ಜೀವಘನಶಬ್ದವು ಸಂಸಾರಿ-ಗಳ ಸಮೂಹವನ್ನು ಸೂಚಿಸುತ್ತದೆ · 'ಮೂರ್ತೌ ಘನಃ' ಎಂಬ ಅನುಶಾಸನದಂತೆ ಕಾಠಿನ್ಯಶಬ್ದದಿಂದ ಕರೆಯಲಾದ ಮೂರ್ತಿಯೆಂಬ ಅರ್ಥದಲ್ಲಿ ಘನ-ಶಬ್ದವು ನಿಪಾತಿತವಾಗಿದೆ· ಕಾಠಿನ್ಯವು ಆತ್ಮನಲ್ಲಿ ಶರೀರದ ಮೂಲಕವೇ ಸಂಭವಿಸುತ್ತದೆ· ಆದುದರಿಂದ ಘನಶಬ್ದವು ದೇಹಿಯನ್ನೇ (ಜೀವನನ್ನೇ) ಸೂಚಿಸುತ್ತದೆ· ಅವನಿಗೂ ಉತ್ಕೃಷ್ಟನು, ಪರಿಶುದ್ಧಾತ್ಮನು; ಅವನಿಗಿಂತಲೂ ಉತ್ತಮನೂ ಆದ, **ಪುರಿಶಯಮ್** - ಗುಹೆಯಲ್ಲಿ ವಾಸಿಸುವ ಅವನಿಗೆ (ಪರಮಾತ್ಮನಿಗೆ) ಎಲ್ಲ ಪ್ರಾಣಿಗಳೂ ಶರೀರವೇ ಆಗಿವೆ ಎಂದು ಹೇಳಿದಂತೆ ಎಲ್ಲ ಜೀವಿಗಳಲ್ಲಿಯೂ ಅಂತರಾತ್ಮನಾಗಿ ವಿಶ್ರಮಿಸಿರುವ,

''ಭಗವಾನಿತಿ ಶಬ್ದೋऽಯಂ ತಥಾ ಪುರುಷ ಇತ್ಯಪಿ ।
ನಿರುಪಾಧೀ ಚ ವರ್ತೇತೇ ವಾಸುದೇವೇ ಸನಾತನೇ ॥

'ಉಪಪದಗಳಲ್ಲಿರುವ 'ಭಗವನ್' ಮತ್ತು 'ಪುರುಷ' ಶಬ್ದಗಳು ಪುರಾಣಪುರುಷನಾದ ವಾಸುದೇವನನ್ನೇ ಬೋಧಿಸುತ್ತವೆ' ಎಂಬ ವಾಕ್ಯಕ್ಕೆ ಅನುಗುಣವಾಗಿ ಉಪಪದಗಳಲ್ಲಿರುವ ಪುರುಷಶಬ್ದದಿಂದ ಬೋಧ್ಯನಾದ ಭಗವಂತನಾದ ಪರವಾಸುದೇವನನ್ನು ನೋಡುತ್ತಾನೆ ಎಂದರ್ಥ· ಆದ್ದರಿಂದ 'ಸ ಸಾಮಭಿರುನ್ನೀಯತೇ ಬ್ರಹ್ಮಲೋಕಮ್' ಎಂಬ ವಾಕ್ಯದಲ್ಲಿ ಕೇಳಿಬರುವ ಬ್ರಹ್ಮಲೋಕಶಬ್ದಕ್ಕೆ ಚತುರ್ಮುಖಬ್ರಹ್ಮಲೋಕವು ಅರ್ಥವಾಗಬಹುದೇ ಎಂಬ ಸಂದೇಹವು ದೂರವಾಗಿದೆ· ಏಕೆಂದರೆ ಚತುರ್ಮುಖಬ್ರಹ್ಮನ ಲೋಕದಲ್ಲಿರುವವರು ಪರವಾಸುದೇವನನ್ನು ನೋಡುವುದು ಸಾಧ್ಯವಾಗದ ಮಾತು ಎಂದು ತಿಳಿಯಬೇಕು· ತದೇತೌ ಶ್ಲೋಕೌ ಭವತಃ । ತತ್ - ಓಂಕಾರಧ್ಯಾನದ ಬಗ್ಗೆ ಉದಾಹರಿಸಲ್ಪಡುವ ಶ್ಲೋಕಗಳು ಹೀಗಿವೆ ಎಂದು ಅಭಿಪ್ರಾಯ·

## ಭಾಷ್ಯಸಾರ

ತ್ರಿಮಾತ್ರೆಯುಳ್ಳ ಓಂಕಾರ ಪ್ಲುತಪ್ರಣವ· ಇದು ಪರಬ್ರಹ್ಮವಸ್ತುವಿಗೆ ವಾಚಕ· ಇದನ್ನು ಆಲಂಬನವಾಗಿಸಿ ನಿರಂತರವಾಗಿ ಪರಮಪುರುಷನನ್ನು ಧ್ಯಾನಿಸುವವನು ಉತ್ತಮ ಉಪಾಸಕನು· ಅವನು ಶ್ರೇಷ್ಠಜ್ಞಾನಿಯೇ ಸರಿ· ಈ ಪ್ಲುತಪ್ರಣವದ ನಿರಂತರವಾದ ಉಪಾಸನೆಯಿಂದ ಪುನರಾವೃತ್ತಿಯಿಲ್ಲದ ಫಲವನ್ನು ಉಪಾಸಕನು ಅನುಭವಿಸುತ್ತಾನೆ ·ಅವನು ತೇಜೋಮಂಡಲದಿಂದ ಮಂಡಿತನಾದ ಭಗವದ್ಭಾಸ್ಕರನಲ್ಲಿ ಸಂಗತನಾಗುತ್ತಾನೆ· ಅವನ ಪ್ರಖರಪ್ರಭೆಯ ದೆಸೆಯಿಂದ ಪಾಪಲೇಪದಿಂದ ಮುಕ್ತನಾಗುತ್ತಾನೆ· ಮುಕ್ತಿಗೆ ತಡೆಯೊಡ್ಡುವ ಪುಣ್ಯ-ಪಾಪಗಳಿಂದ ದೂರವಾಗುತ್ತಾನೆ· ಹಾವು ಹೇಗೆ ತನ್ನ ಹಳೆಯಪೊರೆಯನ್ನು ಕಳಚಿಕೊಂಡು ಹೊಸ ಮೈಬಣ್ಣದಿಂದ, ಲವಲವಿಕೆಯಿಂದ ಮಿಂಚುವುದೋ, ಹಾಗೆಯೇ ಉಪಾಸಕನೂ ಶುದ್ಧಾತ್ಮನಾಗಿ ಪರಮಪದವನ್ನು ಸೇರಲು ಸಜ್ಜಾಗುವನು·

ಸಾಮಮಂತ್ರಗಳು ಈ ಬ್ರಹ್ಮಜ್ಞಾನಿಯನ್ನು ಬ್ರಹ್ಮಲೋಕಕ್ಕೆ ಕರೆದೊಯ್ಯುತ್ತವೆ· ಅಲ್ಲಿ ಉಪಾಸಕನು ಪರತತ್ತ್ವವನ್ನು ಕಾಣುತ್ತಾನೆ· ಅಪೂರ್ವ ಪದಾರ್ಥವನ್ನು ನೋಡಿ ಅನುಭವಿಸುವಂತೆ, ಅದನ್ನು ಆನಂದದಿಂದ ಭೋಗಿಸುತ್ತಾನೆ· ಆ ಪರವಸ್ತುವಿನ ಹಿರಿಮೆ ಅಪಾರ· ಅದು ಪುರುಷಸೂಕ್ತ ಮುಂತಾದ ಮಂತ್ರಗಳಲ್ಲಿ ಪ್ರಸಿದ್ಧ· ಎಲ್ಲ ಪ್ರಾಣಿಗಳ ಹೃದಯಗುಹೆಯಲ್ಲಿ ಅಂತರ್ಯಾಮಿಯಾಗಿರುವ ವಾಸುದೇವನಾದ ಈ ಪರಮಪುರುಷನು ಪ್ರಪಂಚದಲ್ಲಿರುವ ಎಲ್ಲಾ ಚಿದಚಿದ್ವಸ್ತುಗಳಿಗಿಂತ ವಿಲಕ್ಷಣನು, ಉತ್ತಮನು· ಅವನ ಸಾಕ್ಷಾತ್ಕಾರವೇ ಈ ಪ್ಲುತಪ್ರಣವ ಧ್ಯಾನದ ಫಲ·

---

೧· ಬ್ರಹ್ಮಲೋಕವನ್ನು ಆನಂದಭಾಷ್ಯದಲ್ಲಿ ಶ್ರೀರಾಮಧಾಮವಾದ ಸಾಕೇತವೆಂದೂ, ಪ್ರತಿಪದಾರ್ಥದೀಪಿಕೆಯಲ್ಲಿ ವೈಕುಂಠ ವೆಂದೂ ವರ್ಣಿಸಲಾಗಿದೆ·

# ಮಂತ್ರ - ೬

त्रिस्रो मात्रा मृत्युमन्त्यः प्रयुक्ताः
अन्योन्यसक्ता अनविप्रयुक्ताः ।
क्रियासु बाह्याभ्यन्तरमध्यमासु सम्यक्
प्रयुक्तासु न कम्पते ज्ञः ॥ 6 ॥

ತಿಸ್ರೋಮಾತ್ರಾ ಮೃತ್ಯುಮಂತ್ಯಃ ಪ್ರಯುಕ್ತಾಃ
ಅನ್ಯೋನ್ಯಸಕ್ತಾ ಅನವಿಪ್ರಯುಕ್ತಾಃ ।
ಕ್ರಿಯಾಸು ಬಾಹ್ಯಾ(ಭ್ಯ)ಂತರಮಧ್ಯಮಾಸು ಸಮ್ಯಕ್
ಪ್ರಯುಕ್ತಾಸು ನ ಕಂಪತೇ ಜ್ಞಃ ॥

## ಪ್ರತಿಪದಾರ್ಥ

ಅನವಿಪ್ರಯುಕ್ತಾಃ - ಅತ್ಯಂತ ವಿಚ್ಛಿನ್ನವಾಗಿ, ಅನ್ಯೋನ್ಯಸಕ್ತಾಃ - (ಶೀಘ್ರೋಚ್ಚಾರಣೆಯಿಂದ) ಪರಸ್ಪರಕೂಡಿದಂತೆ, **ಪ್ರಯುಕ್ತಾಃ** - ಉಚ್ಚರಿಸಲ್ಪಟ್ಟ, **ತಿಸ್ರೋಮಾತ್ರಾಃ** - ಮೂರು ಮಾತ್ರೆಗಳೂ, **ಮೃತ್ಯುಮಂತ್ಯಃ** - ಮೃತ್ಯುವನ್ನು ಉಂಟುಮಾಡುವುವು · **ಬಾಹ್ಯಾ(ಭ್ಯ)ಂತರಮಧ್ಯಮಾಸು-ಕ್ರಿಯಾಸು** - (ಯಾಜ್ಞಿಕ, ಮಾನಸಿಕ ಮತ್ತು ಜಪ ಮುಂತಾದ) ಬಾಹ್ಯ, ಅಂತರ ಹಾಗೂ ಮಾಧ್ಯಮಿಕ ಕರ್ಮಗಳಲ್ಲಿ, (ತಿಸೃಷು ಮಾತ್ರಾಸು) **ಸಮ್ಯಕ್ ಪ್ರಯುಕ್ತಾಸು** - (ಮೂರು ಮಾತ್ರೆಗಳೂ) ಸರಿಯಾಗಿ ಉಚ್ಚರಿಸಲ್ಪಟ್ಟರೆ, **ಜ್ಞಃ** - (ಆಯಾಯಾ ಮಾತ್ರೆಗಳ ಪ್ರಯೋಗವನ್ನು) ತಿಳಿದವನು, **ನ ಕಂಪತೇ** ಪ್ರಯೋಜನದಿಂದ ಜಾರುವುದಿಲ್ಲ·

## ತಾತ್ಪರ್ಯ

ಅತ್ಯಂತ ವಿಲಂಬೋಚ್ಚಾರಣೆಯಿಂದ ವಿಚ್ಛೇದ ಏರ್ಪಡುವ ಹಾಗೆ ಪ್ರಯೋಗ ಮಾಡುವುದ-ರಿಂದಲೂ, ಅತ್ಯಂತ ವೇಗವಾಗಿ ಉಚ್ಚರಿಸುತ್ತ ಪರಸ್ಪರ ವಿಚ್ಛೇದವಿಲ್ಲದಹಾಗೆ ಪ್ರಯೋಗ ಮಾಡುವುದ-ರಿಂದಲೂ, ಮೂರು ಮಾತ್ರೆಗಳು ಅನರ್ಥಕಾರಿಯಾಗಬಲ್ಲವು· ಅದೇ ಈ ಮಾತ್ರೆಗಳನ್ನು ಯಾಗಾದಿ ಬಾಹ್ಯಕರ್ಮಗಳಲ್ಲಿ, ಮಾನಸಿಕ ಕ್ರಿಯೆಗಳಲ್ಲಿ ಮತ್ತು ಜಪಾದಿ ಮಧ್ಯಮಕರ್ಮಗಳಲ್ಲಿ ಸಮಂಜಸವಾಗಿ ಬಳಸುವುದರಿಂದ ಪ್ರಯೋಗಾಭಿಜ್ಞನಾದ ಮಹಾತ್ಮನು ಪ್ರಯೋಜನಗಳಿಂದ ವಂಚಿತನಾಗಲಾರನು·

## ರಂಗರಾಮಾನುಜಭಾಷ್ಯ

**ತಿಸ್ರೋ ಮಾತ್ರಾ** ಇತಿ । ಅವಿಪ್ರಯುಕ್ತಾ ನ ಭವಂತೀತಿ ಅನವಿಪ್ರಯುಕ್ತಾಃ । ವಿಪ್ರಯುಕ್ತಾ ಯಾವತ್ । ಅತ್ಯಂತದ್ರುತೋಚ್ಚಾರಣೇನಾನ್ಯೋನ್ಯಸಕ್ತತಯಾ, ಅತಿವಿಪ್ರಕೃಷ್ಟಕಾಲ-ತಯಾಽತ್ಯಂತವಿಪ್ರಯುಕ್ತತಯಾ ವಾ **ಪ್ರಯುಕ್ತಾಃ ತಿಸ್ರೋಮಾತ್ರಾಃ ಮೃತ್ಯುಮಂತ್ಯಃ** - ಮೃತ್ಯುಪ್ರದಾಃ; ಅನರ್ಥಾವಹಾ ಇತಿ ಯಾವತ್ । ಮೃತ್ಯುಮತ್ಯ ಇತಿ ಪಾಠೇಽಪಿ ಸ ಏವಾರ್ಥಃ । **ಕ್ರಿಯಾಸು** ಇತಿ । ಯಜ್ಞಾದಿಕಾ ಬಾಹ್ಯಾಃ ಕ್ರಿಯಾಃ ಅಂತರಾಃ ಮಾನಸಕ್ರಿಯಾಃ, ಮಧ್ಯಮಾ ವಾಚಿಕಜಪರೂಪಾಃ । ಆಸು ಕ್ರಿಯಾಸು, ತಿಸೃಷು ಮಾತ್ರಾಸು ಸಮ್ಯಕ್ ಅತ್ಯಂತ ಸಂಯೋಗ-ವಿಪ್ರಯೋಗಮಂತರೇಣ ಪ್ರಯುಕ್ತಾಸು ಸತೀಷು ಜ್ಞಃ ತತ್ತತ್ಪ್ರಯೋಗಾಭಿಜ್ಞಃ ಪುಮಾನ್ ನ ಕಂಪತೇ - ಫಲಾನ್ನ ಚ್ಯವತ ಇತ್ಯರ್ಥಃ ॥

## ಅನುವಾದ

**ತಿಸ್ರೋಮಾತ್ರಾ** ಇತಿ । ಸಂಬಂಧವಿಲ್ಲದವು ಆಗುವುದಿಲ್ಲ ಎಂಬುದಿಲ್ಲ ಎಂಬುದರಿಂದ **ಅನವಿಪ್ರಯುಕ್ತಾಃ** - ಸಂಬಂಧರಹಿತವಾದವು ಎಂದು ತಾತ್ಪರ್ಯ· ತೀರವೇಗವಾದ ಉಚ್ಚಾರಣೆ-ಯಲ್ಲಿ ಪರಸ್ಪರ ಕೂಡಿಕೊಳ್ಳುವಂತೆ, ತೀರ ವಿಲಂಬವಾದ ಉಚ್ಚಾರಣೆಯಿಂದ ತೀರ ವಿಚ್ಛಿನ್ನವಾಗುವಂತೆ ಪ್ರಯೋಗಿಸಲ್ಪಟ್ಟ ಮೂರುಮಾತ್ರೆಗಳು, **ಮೃತ್ಯುಮಂತ್ಯಃ** - ಮರಣವನ್ನು ತರುವಂತಹವು, ಅನರ್ಥ-ಕಾರಿಗಳು ಎಂದು ಅಭಿಪ್ರಾಯ · 'ಮೃತ್ಯುಮತ್ಯಃ' ಎಂಬ ಪಾಠದಲ್ಲಿಯೂ ಇದೇ ಅರ್ಥ · **ಕ್ರಿಯಾಸು** ಇತಿ । ಯಜ್ಞ ಮೊದಲಾದವು ಬಾಹ್ಯಕ್ರಿಯೆಗಳು, ಅಂತರಕ್ರಿಯೆಗಳು ಮಾನಸಿಕವಾದವು · ಶಬ್ದರೂಪದಲ್ಲಿರುವ ಜಪಾದಿಗಳು ಮಧ್ಯಮಕ್ರಿಯೆಗಳು · ಈ ಕರ್ಮಗಳಲ್ಲಿ ಮೂರು ಮಾತ್ರೆಗಳೂ **ಸಮ್ಯಕ್** ಅತ್ಯಂತ ವೇಗವಿಲಂಬಗಳಿಲ್ಲದೆಯೇ ಉಚ್ಚರಿಸಲ್ಪಟ್ಟಾಗ **ಜ್ಞಃ** ಆಯಾಯಾ ಉಚ್ಚಾರಗಳನ್ನು ಚೆನ್ನಾಗಿಬಲ್ಲ ವ್ಯಕ್ತಿಯು ನ ಕಂಪತೇ - ಪ್ರಯೋಜನದಿಂದ ಕದಲುವುದಿಲ್ಲ·

## ಭಾಷ್ಯಸಾರ

ಪ್ರಣವಧ್ಯಾನವು ಅಮೃತತ್ವ ಸಾಧಕವಾಗಿದೆ · ಆದರೆ ಮಾತ್ರೆಗಳ ವಿವೇಕವಿಲ್ಲದವನು, ಈ ಪ್ರಣವಧ್ಯಾನದ ವಿಕೃತಾನುಷ್ಠಾನದಿಂದ ಮೃತ್ಯುವಶನಾಗುತ್ತಾನೆ · ಅನರ್ಥಕ್ಕೆ ಒಳಗಾಗುತ್ತಾನೆ · ವಿಹಿತವಾದ ಪ್ರಯೋಜನಗಳಿಂದ ವಂಚಿತನಾಗುತ್ತಾನೆ · ಆದುದರಿಂದ ಈ ಪ್ರಣವದ ಉಪದೇಶ ಮತ್ತು ಉಪಾಸನೆ-ಗಳಲ್ಲಿ ಉಪಾಸಕರು, ಅಧಿಕಾರಿಯಾದವರು ಜಾಗರೂಕರಾಗಿರಬೇಕು ಮಾತ್ರಾಕಾಲಗಳ ಸಮರ್ಪಕ ತಿಳಿವಿನಿಂದಲೂ, ಪ್ರಯೋಗದಿಂದಲೂ ಅವರು ತಮ್ಮ ಪ್ರಯತ್ನದಲ್ಲಿ ಸಫಲರಾಗುತ್ತಾರೆ·

## ಮಂತ್ರ - ೭

ऋग्भिरेतं यजुर्भिरन्तरिक्षं सामभिर्यत्तत् कवयो वेदयन्ते ।
तमोंकारेणैवाय(त)नेनान्वेति विद्वान्
यत्तच्छान्तमजरममृतमभयं परं चेति ॥7॥

ಋಗ್ಭಿರೇತಂ ಯಜುರ್ಭಿರಂತರಿಕ್ಷಂ
ಸಾಮಭಿರ್ಯತ್ತತ್ಕವಯೋ ವೇದಯಂತೇ ।
ತಮೋಂಕಾರೇಣೈವಾಯ(ತ)ನೇನಾನ್ವೇತಿ ವಿದ್ವಾನ್
ಯತ್ತಚ್ಛಾಂತಮಜರಮಮೃತಮಭಯಂ ಪರಂ ಚೇತಿ ॥

### ಪ್ರತಿಪದಾರ್ಥ

**ಸಃ** - ಪ್ರಣವೋಪಾಸಕನು, **ಋಗ್ಭಿಃ** - ಋಙ್ಮಂತ್ರಗಳಿಂದ, **ಏತಮ್** - ಈ ಮನುಷ್ಯಲೋಕ-ವನ್ನೂ, **ಯಜುರ್ಭಿಃ** - ಯಜುರ್ಮಂತ್ರಗಳಿಂದ, **ಅಂತರಿಕ್ಷಮ್** - ಅಂತರಿಕ್ಷಲೋಕವನ್ನೂ, **ಸಾಮಭಿಃ** - ಸಾಮಮಂತ್ರಗಳಿಂದ, **ಯತ್-ತತ್** - ಯಾವ ಯಾವುದನ್ನು, **ಕವಯಃ**- ಕವಿಗಳು, **ವೇದಯಂತೇ** - ಕಾಣುತ್ತಾರೆಯೋ, **ತಮ್** - ಆ ಲೋಕವನ್ನೂ (ಪರಮಪದವನ್ನೂ), **ಓಂಕಾರೇಣೈವಾಯನೇನ ಏವ** - ಓಂಕಾರ ಮಾರ್ಗದಿಂದಲೇ, **ಅನ್ವೇತಿ** - ಹೊಂದುತ್ತಾನೆ · (ಹೊಂದಿ) **ಯತ್** - ಯಾವ, **ಶಾಂತಮ್** - [೧]ಷಡೂರ್ಮಿರಹಿತವಾದ, **ಅಜರಮ್** - ಮುಪ್ಪಿಲ್ಲದ, **ಅಮೃತಮ್** - ಹುಟ್ಟುಸಾವಿಲ್ಲದ, **ಅಭಯಮ್** - ಭಯವಿಲ್ಲದ, **ಪರಮ್** - ಪರಬ್ರಹ್ಮ-ವಿದೆಯೋ, **ತತ್ ಚ** - ಅದನ್ನೂ ಹೊಂದುತ್ತಾನೆ·

### ತಾತ್ಪರ್ಯ

ಪ್ರಣವೋಪಾಸನೆಯನ್ನು ಚೆನ್ನಾಗಿ ತಿಳಿದ ಜ್ಞಾನಿಯು ಋಙ್ಮಂತ್ರಗಳಿಂದ ಮನುಷ್ಯಲೋಕವನ್ನೂ, ಯಜುರ್ಮಂತ್ರಗಳಿಂದ ಅಂತರಿಕ್ಷಲೋಕವನ್ನೂ, ಸಾಮಮಂತ್ರಗಳಿಂದ ಪರಮಪದವನ್ನೂ ಪಡೆಯು-ತ್ತಾನೆ· ಈ ಲೋಕಗಳನ್ನು ಪಡೆಯಲು ಓಂಕಾರವೇ ಪ್ರಧಾನ ಸಾಧನ· ಪರಮಪದವನ್ನು ಹೊಂದಿದ ಸೂರಿಗಳು ಶಾಶ್ವತವೂ, ಹುಟ್ಟು-ಸಾವುಗಳಿಲ್ಲದ್ದೂ, ಅಭಯವೂ ಆದ ಪರಬ್ರಹ್ಮವನ್ನು ಪಡೆಯುತ್ತಾರೆ·

---

೧· ಮುಪ್ಪು-ಮೃತ್ಯುಗಳು ಶರೀರಕ್ಕೆ, ಶೋಕ-ಮೋಹಗಳು ಮನಸ್ಸಿಗೆ, ಹಸಿವು-ಬಾಯಾರಿಕೆಗಳು ಪ್ರಾಣಕ್ಕೆ ಪೀಡಾಕಾರಕಗಳಾಗಿರುವುದರಿಂದ ಇವುಗಳನ್ನು ಷಡೂರ್ಮಿಗಳು ಎಂದು ಹೆಸರಿಸುತ್ತಾರೆ·

## ರಂಗರಾಮಾನುಜಭಾಷ್ಯ

**ಋಗ್ಭಿರೇತಮಿತಿ** । (ಸ ವಿದ್ವಾನ್) **ಏತಮ್** - ಮನುಷ್ಯಲೋಕಮಿತ್ಯರ್ಥಃ ಯತ್ತತ್ಕವಯೋ ವೇದಯಂತೇ । **ಕವಯಃ** ಕ್ರಾಂತದರ್ಶಿನಃ । 'ತದ್ವಿಷ್ಣೋಃ ಪರಮಂ ಪದಂ ಸದಾ ಪಶ್ಯಂತಿ ಸೂರಯಃ' ಇತ್ಯುಕ್ತರೀತ್ಯಾ ಸೂರಯೋ ಯಂ ಲೋಕಂ ಪಶ್ಯಂತಿ, ತಮ್ - ಓಂಕಾರೇಣೈವ ಮಾರ್ಗೇಣಾನ್ವೇತಿ । ಗತ್ವಾ ಚ **ಶಾಂತಮ್** - ಊರ್ಮಿಷಟ್ಕರಹಿತಮ್, **ಅಜರ-ಮಮೃತಮ್** - ಜರಾಮರಣಶೂನ್ಯಮ್ **ಅಭಯಮ್** - ಅಕುತೋಭಯಮ್ **ಪರಂ** ಸರ್ವಕಾರಣತ್ವೇನ ಸರ್ವೋತ್ಕೃಷ್ಟಂ ಬ್ರಹ್ಮ ಚ ಪ್ರಾಪ್ನೋತೀತ್ಯರ್ಥಃ ॥

ಅಸ್ಯ ಸಂದರ್ಭಸ್ಯ ಪರಮಾತ್ಮಪರತ್ವಂ ಭಗವತಾ ಬಾದರಾಯಣೇನ ಪ್ರತಿಪಾದಿತಮ್ । ಅತ್ರ ಹಿ ಪೃಥಿವ್ಯಂತರಿಕ್ಷಪ್ರಾಯ(ಕ್ಷ ಬ್ರಹ್ಮಲೋಕಃ) ಪಾಠಾತ್ ಬ್ರಹ್ಮಲೋಕಶಬ್ದಸ್ಯ ಚತುರ್ಮುಖ-ಲೋಕವಾಚಿತಯಾ ತದ್ಗತೇನೇಕ್ಷ್ಯಮಾಣತ್ವಸ್ಯ ಚತುರ್ಮುಖ ಏವ ಸಂಭವಾತ್ ಚತುರ್ಮುಖ ಇತಿ ಪೂರ್ವಪಕ್ಷೇ ಪ್ರಾಪ್ತೇ, 'ಈಕ್ಷತಿಕರ್ಮವ್ಯಪದೇಶಾತ್ ಸಃ' ಇತಿ ಸೂತ್ರೇಣ ಸಿದ್ಧಾಂತಿತಮ್ । ಪುರಿಶಯಂ ಪುರುಷಮೀಕ್ಷತ ಇತೀಕ್ಷತಿಕರ್ಮತಯಾ ವ್ಯಪದಿಶ್ಯಮಾನಃ ಪರಮಾತ್ಮಾ, ಶಾಂತತ್ವಾ ಜರತ್ವಾಮೃತತ್ವಾದಿಪರಮಾತ್ಮಾಸಾಧಾರಣಧರ್ಮವ್ಯಪದಶಾದಿತ್ಯರ್ಥಃ ಇತಿ ॥

## ಅನುವಾದ

**ಋಗ್ಭಿರೇತಮಿತಿ** । (ಆ ಜ್ಞಾನಿಯು) **ಏತಮ್** - ಈ ಮನುಷ್ಯ ಲೋಕವನ್ನು ಯತ್ತತ್ ಕವಯೋ ವೇದಯಂತೇ - **ಕವಯಃ** ಕ್ರಾಂತದರ್ಶಿಗಳು· 'ತದ್ವಿಷ್ಣೋಃ ಪರಮಂ ಪದಂ ಸದಾ ಪಶ್ಯಂತಿ ಸೂರಯಃ ' - 'ಉತ್ತಮವಾದ ಆ ವಿಷ್ಣುಲೋಕವನ್ನು ಜ್ಞಾನಿಗಳು ಯಾವಾಗಲೂ ಕಾಣುತ್ತಾರೆ' ಎಂಬ ಶ್ರುತಿವಾಕ್ಯಕ್ಕೆ ಅನುಸಾರವಾಗಿ ಜ್ಞಾನಿಗಳು ಯಾವ ಲೋಕವನ್ನು ನೋಡುತ್ತಾರೆಯೋ ಅದನ್ನು ಓಂಕಾರ ಮಾರ್ಗದಿಂದಲೇ ಸೇರುತ್ತಾನೆ· (ಹೋಗಿ), **ಶಾಂತಮ್** - ಷಟ್ಪೀಡಾರಹಿತವಾದ, **ಅಜರಮಮೃತಮ್** - ಮುಪ್ಪು-ಮರಣಗಳಿಲ್ಲದ, **ಅಭಯಮ್** - ಯಾರಿಂದಲೂ ಭಯವಿಲ್ಲದ, **ಪರಮ್** - ಎಲ್ಲಕ್ಕೂ ಕಾರಣವಾಗಿರುವುದರಿಂದ್ದ, ಸರ್ವೋತ್ಕೃಷ್ಟವಾದ ಬ್ರಹ್ಮವಸ್ತುವನ್ನು ಪಡೆಯುತ್ತಾನೆ·

ಈ ಪ್ರಕರಣವು ಪರಮಾತ್ಮಪರವೆಂದು ಪೂಜ್ಯರಾದ ಬಾದರಾಯಣರು ಪ್ರತಿಪಾದಿಸಿದ್ದಾರೆ · ಈ ಮಂತ್ರದಲ್ಲಿ ಭೂಮಿ-ಅಂತರಿಕ್ಷಗಳಿಗೆ ಸದೃಶವಾದ ಬ್ರಹ್ಮಲೋಕವನ್ನು ತಿಳಿಸುವ ಬ್ರಹ್ಮಲೋಕಶಬ್ದವಿರು-ವುದರಿಂದ ಬ್ರಹ್ಮಲೋಕಶಬ್ದಕ್ಕೆ ಚತುರ್ಮುಖಬ್ರಹ್ಮಲೋಕವು ಅರ್ಥವಾಗಿರುವುದರಿಂದಲೂ, ಆ ಲೋಕದಲ್ಲಿದ್ದು ನೋಡಲ್ಪಡಬೇಕಾಗಿರುವುದು ಚತುರ್ಮುಖನಲ್ಲಿಯೇ ಸಂಭವಿಸುವುದರಿಂದಲೂ, ಚತುರ್ಮುಖನೇ ಈಕ್ಷಣಕರ್ಮ ಎಂದು ಪೂರ್ವಪಕ್ಷವಿರುವಾಗ ''ಈಕ್ಷತಿಕರ್ಮವ್ಯಪದೇಶಾತ್ ಸಃ''

ಎಂಬ ಸೂತ್ರದಿಂದ ಸಿದ್ಧಾಂತ ಮಾಡಿರುತ್ತಾರೆ· 'ಪುರಿಶಯಂ ಪುರುಷಮೀಕ್ಷತೇ' - 'ಎಲ್ಲ ಪ್ರಾಣಿಗಳಲ್ಲಿಯೂ ಅಂತರ್ಯಾಮಿಯಾಗಿ ವಾಸಿಸುವ ವಾಸುದೇವನನ್ನು ಕಾಣುತ್ತಾನೆ' ಎಂದು ಈಕ್ಷಣಕರ್ಮವಾಗಿ ನಿರ್ದೇಶಿಸಲ್ಪಡುವವನು ಪರಮಾತ್ಮನೇ· ಏಕೆಂದರೆ ಅವನನ್ನೇ ಶಾಂತಿ, ಮುಪ್ಪು, ಮರಣರಾಹಿತ್ಯ ಮುಂತಾದ ಭಗವಂತನ ಅಸಾಧಾರಣ ಗುಣಗಳ ಮೂಲಕ ಉಲ್ಲೇಖಿಸಲಾಗಿದೆ·

## ಭಾಷ್ಯಸಾರ

ಈ ಮಂತ್ರವು ಹಿಂದಿನ ಮಂತ್ರಗಳಲ್ಲಿ ವಿವರಿಸಲಾದ ಪ್ರಣವೋಪಾಸನೆಯ ಸ್ವರೂಪ ಪ್ರಯೋಜನಗಳನ್ನೇ ಸಂಗ್ರಹಿಸಿ ನಿರೂಪಿಸುತ್ತದೆ·

## ಐದನೇ ಪ್ರಶ್ನೆ ಮುಗಿದುದು

※ ☆ ※

# ಷಷ್ಠ ಪ್ರಶ್ನಃ
## ಮಂತ್ರ - ೧

अथ हैनं सुकेशा भारद्वाजः पप्रच्छ । भगवन् ! हिरण्यनाभः कौसल्यो राजपुत्रो मामुपेत्यैनं प्रश्नमपृच्छत -- षोडशकलं भारद्वाज ! पुरुषं वेत्थ इति । तमहं कुमारमब्रुवम् -- नाहमिमं वेद ; यद्यहमिममवेदिषम्, कथं ते नावक्ष्यमिति। समूलो वा एष परिशुष्यति, योऽनृतमभिवदति । तस्मान्नार्हाम्यनृतं वक्तुम् । स तूष्णीं रथमारुह्य प्रवव्राज । तं त्वा पृच्छामि, क्वासौ पुरुष इति ।। 1 ।।

ಅಥ ಹೈನಂ ಸುಕೇಶಾ ಭಾರದ್ವಾಜಃ ಪಪ್ರಚ್ಛ । ಭಗವನ್!
ಹಿರಣ್ಯನಾಭಃ ಕೌಸಲ್ಯೋ ರಾಜಪುತ್ರೋ ಮಾಮುಪೇತ್ಯೈ
ನಂ ಪ್ರಶ್ನಮಪೃಚ್ಛತ - ಷೋಡಶಕಲಂ ಭಾರದ್ವಾಜ!
ಪುರುಷಂ ವೇತ್ಥ ಇತಿ । ತಮಹಂ ಕುಮಾರಮಬ್ರುವಮ್-
ನಾಹಮಿಮಂ ವೇದ; ಯದ್ಯಹಮಿಮಮವೇದಿಷಮ್, ಕಥಂ ತೇ
ನಾವಕ್ಷ್ಯಮಿತಿ । ಸಮೂಲೋ ವಾ ಏಷ ಪರಿಶುಷ್ಯತಿ,
ಯೋಽನೃತಮಭಿವದತಿ । ತಸ್ಮಾನ್ನಾರ್ಹಾಮ್ಯನೃತಂ
ವಕ್ತುಮ್ । ಸ ತೂಷ್ಣೀಂ ರಥಮಾರುಹ್ಯ ಪ್ರವವ್ರಾಜ ।
ತಂ ತ್ವಾ ಪೃಚ್ಛಾಮಿ, ಕ್ವಾಸೌ ಪುರುಷ ಇತಿ ॥

### ಪ್ರತಿಪದಾರ್ಥ

**ಅಥ ಹ** - (ಸತ್ಯಕಾಮನ ಪ್ರಶ್ನೆಯಾದ) ನಂತರ, **ಏನಮ್** - ಪಿಪ್ಪಲಾದರನ್ನು, **ಭಾರದ್ವಾಜಃ ಸುಕೇಶಾ** - ಭಾರದ್ವಾಜಗೋತ್ರದ ಸುಕೇಶನು, **ಪಪ್ರಚ್ಛ** - ಪ್ರಶ್ನಿಸಿದನು · **ಭಗವನ್** - ಪೂಜ್ಯರೇ! **ಕೌಸಲ್ಯಃ** - ಕೋಸಲಕ್ಕೆ ಅಧಿಪತಿಯಾದ, **ರಾಜಪುತ್ರಃ** - ರಾಜಕುಮಾರನಾದ, **ಹಿರಣ್ಯನಾಭಃ** - ಹಿರಣ್ಯ-

ನಾಭನು, **ಮಾಮ್** - ನನ್ನನ್ನು, **ಉಪೇತ್ಯ** - ಸಮೀಪಿಸಿ, **ಏನಮ್** - ಈ, **ಪ್ರಶ್ನಮ್**- ಪ್ರಶ್ನೆಯನ್ನು, **ಅಪೃಚ್ಛತ** - ಕೇಳಿದನು · **ಭಾರದ್ವಾಜ** - ಭಾರದ್ವಾಜನೇ! (**ತ್ವಮ್** - ನೀನು) **ಷೋಡಶಕಲಮ್** - ಹದಿನಾರು ಕಲೆಗಳುಳ್ಳ, **ಪುರುಷಮ್** - ಪುರುಷನನ್ನು, **ವೇತ್ಥ**- ತಿಳಿದಿರುವೆಯಾ? **ಅಹಮ್** - ನಾನು, **ತಂ ಕುಮಾರಮ್** - ಆ ರಾಜಕುಮಾರನಿಗೆ, **ಅಬ್ರುವಮ್** - ಹೇಳಿದೆನು · **ಅಹಮ್** - ನಾನು, **ಇಮಂ** - ಈ ಪುರುಷನನ್ನು, **ನ ವೇದ** - ತಿಳಿದಿಲ್ಲ · **ಯದಿ** - ಒಂದು ವೇಳೆ, **ಅಹಮ್** - ನಾನು, **ಇಮಮ್** - ಈ ಪುರುಷನನ್ನು, **ಅವೇದಿಷಮ್**- ತಿಳಿದಿದ್ದರೆ, **ತೇ** - ನಿನಗೆ, **ಕಥಮ್** - ಹೇಗೆ ತಾನೆ, **ನ ಅವಕ್ಷ್ಯಮ್** - ಹೇಳುತ್ತಿರಲಿಲ್ಲ · **ಯಃ** - ಯಾರು, **ಅನೃತಮ್** - ಸುಳ್ಳನ್ನು, **ಅಭಿವದತಿ** - ಹೇಳುತ್ತಾನೆಯೋ, **ಏಷಃ** - ಇವನು, **ಸಮೂಲಃ** - ಬೇರುಸಹಿತವಾಗಿ, **ಪರಿಶುಷ್ಯತಿ** - ನಷ್ಟವಾಗುತ್ತಾನೆ · **ತಸ್ಮಾತ್** - ಆದಕಾರಣ, **ಅನೃತಮ್** - ಸುಳ್ಳನ್ನು, **ವಕ್ತುಮ್** - ಹೇಳಲು, **ನ ಅರ್ಹಾಮಿ** - ಸಾಧ್ಯವಿಲ್ಲ · **ಸಃ** - ಹಿರಣ್ಯನಾಭನು, **ರಥಮ್** - ರಥವನ್ನು, **ಆರುಹ್ಯ** - ಏರಿ, **ತೂಷ್ಣೀಮ್** - ಸುಮ್ಮನೆ, **ಪ್ರವವ್ರಾಜ** - ಹೋದನು · (**ಅತಃ** - ಆದುದರಿಂದ), **ತ್ವಾ** - ನಿನ್ನಲ್ಲಿ, **ತಮ್** - ಆ (ಹದಿನಾರು ಕಲೆಗಳುಳ್ಳ) ಪುರುಷನನ್ನು, **ಪೃಚ್ಛಾಮಿ** - ಕೇಳುತ್ತೇನೆ · **ಅಸೌ** - ಇವನು, **ಕ್ವ** - ಎಲ್ಲಿರುವನು, **ಇತಿ** - ಎಂದು·

## ತಾತ್ಪರ್ಯ

ಸತ್ಯಕಾಮನ ಪ್ರಶ್ನೆಗೆ ಆಚಾರ್ಯರು ಉತ್ತರವನ್ನು ಅನುಗ್ರಹಿಸಿದ ಮೇಲೆ ಭರದ್ವಾಜಗೋತ್ರದ ಸುಕೇಶನು ಅವರ ಬಳಿ ತನ್ನ ಪ್ರಶ್ನೆಯನ್ನು ಮಂಡಿಸುತ್ತಾನೆ· 'ಪೂಜ್ಯರೇ! ಕೋಸಲದ ರಾಜಕುಮಾರನಾದ ಹಿರಣ್ಯನಾಭನು ನನ್ನಲ್ಲಿ, 'ಹದಿನಾರು ಕಲಾವಂತನಾದ ಪುರುಷನನ್ನು ತಿಳಿದಿರುವೆಯಾ? ಎಂದು ಕೇಳಿದ ನಾನು ಅವನಿಗೆ 'ಷೋಡಶಕಲಾತ್ಮಕ ಪುರುಷನನ್ನು ತಿಳಿದಿಲ್ಲ; ತಿಳಿದಿದ್ದಲ್ಲಿ ಹೇಳದೇ ಇರುತ್ತಿರಲೂ ಇಲ್ಲ, ಸುಳ್ಳನ್ನು ಆಡಿದವನು ಪುಣ್ಯವನ್ನು ಕಳೆದುಕೊಳ್ಳುತ್ತಾನಷ್ಟೇ! ಎಂದು ಹೇಳಿದೆನು · ಆ ರಾಜಕುಮಾರನು ಈ ಮಾತನ್ನು ಕೇಳಿ ರಥವನ್ನು ಏರಿ ಹೊರಟುಹೋದನು · ಆದ್ದರಿಂದ ಆ ಪುರುಷನು ಎಲ್ಲಿದ್ದಾನೆ? ಎಂದು ತಮ್ಮನ್ನು ಕೇಳುತ್ತಿದ್ದೇನೆ·

## ರಂಗರಾಮಾನುಜಭಾಷ್ಯ

**ಅಥ ಹೈನಂ ಸುಕೇಶಾ ಭಾರದ್ವಾಜಃ ಪಪ್ರಚ್ಛ** । ಸ್ಪಷ್ಟೋಽರ್ಥಃ । **ಭಗವನ್! ಹಿರಣ್ಯನಾಭಃ ಇತಿ** । ಹೇ ಭಗವನ್ । ಹಿರಣ್ಯನಾಭನಾಮಾ ಕೋಸಲದೇಶಾಧಿಪತೀ ರಾಜಪುತ್ರಃ ಮತ್ಸಮೀಪಮಾಗತ್ಯ ಇಮಂ ವಕ್ಷ್ಯಮಾಣಂ ಪ್ರಶ್ನಂ ಕೃತವಾನ್ । ಕಿಮಿತಿ - **ಷೋಡಶಕಲಮ್ ಭರದ್ವಾಜ ಪುರುಷಂ ವೇತ್ಥ ಇತಿ** । ಹೇ ಭಾರದ್ವಾಜೇತಿ ಮಾಂ ಸಂಬೋಧ್ಯಾಽಽಹ ಪ್ರಾಣಾದ್ಯಾಃ ನಾಮಾಂತಾಃ ಷೋಡಶಕಲಾ ಯಸ್ಯ ಸಃ - ಷೋಡಶಕಲಃ ತಂ ಪುರುಷಂ **ವೇತ್ಥ** - ಜಾನಾಪಿ ಕಿಮಿತಿ ಇತ್ಯರ್ಥಃ । **ತಮಹಂ ಕುಮಾರಮಬ್ರುವಮ್ ಇತಿ** । ತಂ

ರಾಜಕುಮಾರಮಹಮೇವಮುಕ್ತವಾನ್, 'ತ್ವದುಕ್ತಂ ಪುರುಷಮಹಂ ನ ಜಾನಾಮಿ । ಯದ್ಯಹಂ ಜಾನೀಯಾಮ್, ತೇನ ಹೇತುನಾ ರಾಜಕುಮಾರಾಯ ಯೋಗ್ಯಾಯ ಶಿಷ್ಯಾಯ ನ ಕಥಯಿಷ್ಯಾಮಿ' ಇತಿ । **ಸಮೂಲೋ ಹ ವಾ ಏಷ ಇತಿ** । ಯೋಽನೃತಂ ಬ್ರೂತೇ, ಸ ಮೂಲೇನ ಸಹ ಸರ್ವತಃ ಶುಷ್ಯತಿ । ಶ್ರೇಯೋಹೇತುಭೂತಂ ಪುಣ್ಯಂ ಸವಾಸನಂ ನಶ್ಯತೀತ್ಯರ್ಥಃ। ಅತೋ ಮದುಕ್ತೇ ತ್ವಯಾಽನೃತಶಂಕಾ ನ ಕಾರ್ಯೇತಿ ಭಾವಃ । **ಸ ತೂಷ್ಣೀಂ ರಥಮಾರುಹ್ಯ ಪ್ರವವ್ರಾಜ** । ಸಃ ರಾಜಕುಮಾರಃ ಪ್ರಶ್ನಸ್ಯ ಪ್ರಯೋಜನಲೇಶಂ(?) ಕಿಮಪ್ಯಲಬ್ಧ್ವೈವ ರಥಮಾರುಹ್ಯ ಪ್ರವವ್ರಾಜ - ಪ್ರಕರ್ಷೇಣ ಗತಃ । ಅನೇನ ಲಜ್ಜಾ ಸೂಚಿತಾ । ರಥೇನ ಪ್ರವವ್ರಾಜೇತ್ಯನೇನ ತಸ್ಯ ಪ್ರಭುತ್ವಂ ಸೂಚಿತಂ ಭವತಿ । **ತಂ ತ್ವಾ ಪೃಚ್ಛಾಮಿ ಕ್ವಾಸೌ ಪುರುಷ ಇತಿ** । ತಮೇವ ಷೋಡಶಕಲಂ ಪುರುಷಂ ಪೃಚ್ಛಾಮಿ ತ್ವಾಮ್ ಕ್ವಾಸಾವಿತಿ । ಕ್ವ ಪ್ರದೇಶೇ ತಿಷ್ಠತೀತ್ಯರ್ಥಃ । ಅತ್ರ ಆಧಾರಭೂತದೇಶಪ್ರಶ್ನದ್ವಾರಾ ಜೀವೋ ವಾ ಪರಮಾತ್ಮಾ ವೇತಿ ನಿರ್ಣಯಾರ್ಥೋಽಯಂ ಪ್ರಶ್ನ ಇತಿ ದ್ರಷ್ಟವ್ಯಮ್ ॥

## ಅನುವಾದ

**ಅಥ ಹೈನಂ ಸುಕೇಶಾ ಭಾರದ್ವಾಜಃ ಪಪ್ರಚ್ಛ** । (ಆಮೇಲೆ ಭರದ್ವಾಜಗೋತ್ರದ ಸುಕೇಶನು ಪಿಪ್ಪಲಾದರನ್ನು ಕೇಳಿದನು) ಅರ್ಥವು ನಿಚ್ಚಳವಾಗಿದೆ· **ಭಗವನ್! ಹಿರಣ್ಯನಾಭಃ ಇತಿ** । ಪೂಜ್ಯರೇ! ಕೋಸಲ ರಾಷ್ಟ್ರಸ್ವಾಮಿಯಾದ ಹಿರಣ್ಯನಾಭನೆಂಬ ರಾಜಕುಮಾರನು ನನ್ನ ಬಳಿಗೆ ಬಂದು, ಹೇಳಲಿರುವ ಈ ಪ್ರಶ್ನೆಯನ್ನು ಕೇಳಿದನು· ಏನೆಂದು? **ಷೋಡಶಕಲಂ ಭಾರದ್ವಾಜ ಪುರುಷಂ ವೇತ್ಥ ಇತಿ** । ಭಾರದ್ವಾಜನೆಂದು ನನ್ನನ್ನು ಸಂಬೋಧಿಸಿ ಪ್ರಾಣದಿಂದ ಆರಂಭಿಸಿ ನಾಮದವರೆಗೆ ಹದಿನಾರು ಕಲೆಗಳುಳ್ಳ ಪುರುಷನನ್ನು ತಿಳಿದಿರುವೆಯಾ? ಎಂದು ಕೇಳಿದನು·

**ತಮಹಂ ಕುಮಾರಮಬ್ರುವಮ್ ಇತಿ** । ಆ ರಾಜಕುಮಾರನಿಗೆ ನಾನು ಹೀಗೆ ಹೇಳಿದೆನು · ನೀನು ಉಲ್ಲೇಖಿಸಿದ ಪುರುಷನನ್ನು ನಾನು ತಿಳಿದಿಲ್ಲ · ನಾನು ತಿಳಿದಿದ್ದರೆ, ಯೋಗ್ಯ ಶಿಷ್ಯನೂ, ರಾಜಕುಮಾರನೂ ಆದ ನಿನಗೆ ಏಕೆ ಹೇಳುತ್ತಿರಲಿಲ್ಲ· **ಸಮೂಲೋ ಹ ವಾ ಏಷ ಇತಿ** । ಯಾವನು ಸುಳ್ಳು ಹೇಳುತ್ತಾನೆಯೋ, ಅವನು ಬೇರುಸಹಿತವಾಗಿ ಎಲ್ಲ ರೀತಿಗಳಿಂದಲೂ ಶುಷ್ಕನಾಗುತ್ತಾನೆ (ಅವನಲ್ಲಿ) · ಶ್ರೇಯಸ್ಸಿಗೆ ಕಾರಣವಾದ ಪುಣ್ಯವು ಸಂಸ್ಕಾರಸಮೇತವಾಗಿ ನಾಶವಾಗುತ್ತದೆ · ಆದುದರಿಂದ ನನ್ನ ಮಾತಿನಲ್ಲಿ ಸುಳ್ಳೆಂದು ಸಂದೇಹವನ್ನು ವ್ಯಕ್ತಪಡಿಸಬಾರದು ಎಂದು ಅಭಿಪ್ರಾಯ·

**ಸ ತೂಷ್ಣೀಂ ರಥಮಾರುಹ್ಯ ಪ್ರವವ್ರಾಜ** । ಆ ರಾಜಕುಮಾರನು ಪ್ರಶ್ನೆಗೆ ಪ್ರಯೋಜನಲೇಶವನ್ನೂ ಪಡೆಯಲಾರದೇ ರಥವನ್ನು ಏರಿ ಹೊರಟುಹೋದನು · ರಥವನ್ನೇರಿ ಹೋದನೆಂಬುದರಿಂದ ಹಿರಣ್ಯನಾಭನ ಸ್ವಾಮಿತ್ವವು ಸೂಚಿಸಲ್ಪಡುತ್ತದೆ · **ತಂ ತ್ವಾ ಪೃಚ್ಛಾಮಿ ಕ್ವಾಸೌ ಪುರುಷ ಇತಿ** । ಆ ಷೋಡಶ-

ಕಲಾತ್ಮಕಪುರುಷನ ಬಗ್ಗೆಯೇ ನಿಮ್ಮಲ್ಲಿ ಕೇಳುತ್ತಿದ್ದೇನೆ· 'ಕ್ವಾಸೌ' ಎಂದು· ಅವನು ಎಲ್ಲಿದ್ದಾನೆ? ಇಲ್ಲಿ ಆಧಾರಪ್ರದೇಶದ ಬಗ್ಗೆ ಪ್ರಶ್ನೆ ಮಾಡುವುದರ ಮೂಲಕ ಅವನು ಜೀವನೇ ಅಥವಾ ಪರಮಾತ್ಮನೇ ಎಂದು ನಿರ್ಣಯಿಸಲು ಈ ಪ್ರಶ್ನೆಯೆಂದು ಭಾವಿಸಬೇಕು·

## ಭಾಷ್ಯಸಾರ

ಆಚಾರ್ಯರು ಸತ್ಯಕಾಮನ ಜಿಜ್ಞಾಸೆಯನ್ನು ಶಮನಮಾಡುತ್ತ, ಪ್ರಣವೋಪಾಸನೆಯ ವಿಧಿ - ವಿಧಾನಗಳನ್ನೂ, ಆದರಿಂದ ದೊರೆಯುವ ಪ್ರಯೋಜನಗಳನ್ನೂ, ಉಪಾಸನಾಕಾಲದಲ್ಲಿ ವಹಿಸಬೇಕಾದ ಮುನ್ನೆಚ್ಚರವನ್ನೂ ವಿಶದವಾಗಿ ವರ್ಣಿಸಿದರು · ಸತ್ಯಕಾಮನು ಸಂದೇಹಗೊಂದಲದಿಂದ ದೂರನಾಗಿ, ಆಚಾರ್ಯರ ಅನುಗ್ರಹದಿಂದ ಶಾಂತನಾಗಿ ಹಿಂದಿರುಗಿದ ಮೇಲೆ ಸುಕೇಶನು ಪಿಪ್ಪಲಾದರ ಬಳಿ ಬಂದನು· ಇವನು ಭರದ್ವಾಜವಂಶಜನು· ಇವನಿಗೆ ಷೋಡಶಕಲಾವಂತನಾದ ಪುರುಷನ ವಿಷಯದಲ್ಲಿ ಆಳವಾಗಿ ತಿಳಿಯುವ ಹಂಬಲವುಂಟಾಗಿತ್ತು · ಈ ತಿಳಿವಿನ ಆಸೆ ಅವನ ಮನಸ್ಸಿನ ಆಳದಲ್ಲಿ ಬೇರೂರುವುದಕ್ಕೆ ಘಟನೆಯೊಂದು ಕಾರಣವಾಗಿತ್ತು · ಅದನ್ನು ಸುಕೇಶನು ಪವಿತ್ರಪಾಣಿಯಾಗಿ ಪಿಪ್ಪಲಾದರಿಗೆ ಅಭಿವಾದನ ಮಾಡಿ ತನ್ನ ಪ್ರಶ್ನೆಯ ಮುಖಾಂತರ ಆಮೂಲಾಗ್ರವಾಗಿ ಸಾದರಪಡಿಸುತ್ತಾನೆ· ಪೂಜ್ಯರೇ! ಕೋಸಲದೇಶಕ್ಕೆ ಹಿರಣ್ಯನಾಭ ಪ್ರಭು· ಅವನು ಹುಟ್ಟಿನಿಂದ ಕ್ಷತ್ರಿಯನು· ಒಮ್ಮೆ ನನ್ನ ಬಳಿಗೆ ಅವನು ಬಂದು 'ಭಾರದ್ವಾಜ! ಷೋಡಶಕಲಾತ್ಮಕನಾದ ಪುರುಷನ ವಿಷಯವನ್ನು ತಿಳಿದಿರುವೆಯಾ?' ಎಂದು ಕೇಳಿದನು · ವಿನಮ್ರವಾಗಿ ವಿನಂತಿಸಿಕೊಂಡ ರಾಜಕುಮಾರ ಹಿರಣ್ಯನಾಭನಿಗೆ ನಾನು ಈ ರೀತಿಯಾಗಿ ಹೇಳಿದೆ - ''ರಾಜಕುಮಾರ! ನೀನು ಕೇಳಿದ ಅಂತಹ ಪುರುಷನ ಬಗ್ಗೆ ನಾನು ಏನೂ ತಿಳಿದಿಲ್ಲ ಆ ಪುರುಷನ ಬಗ್ಗೆ ನನಗೆ ಸಾಕಷ್ಟು ತಿಳಿದಿದ್ದರೆ ನಾನೇಕೆ ಹೇಳದೇ ಹಿಂದುಳಿಯುತ್ತಿದ್ದೆ · ನೀನು ಶ್ರದ್ಧಾಳು, ಜಿಜ್ಞಾಸು · ಉತ್ತಮ ಶಿಷ್ಯನ ಅರ್ಹತೆಯನ್ನು ಪಡೆದಿರುವೆ · ನಿನಗೆ ಉತ್ತರವನ್ನು ಕೊಡಲೇಬೇಕಿತ್ತು · ಆದರೆ ನಾನೀಗ ನಿರುಪಾಯ · ಪ್ರಾಯಶಃ ನಾನು ಇಷ್ಟು ಹೇಳಿದರೂ ನಿನಗೆ ಭರವಸೆ ಮೂಡಿರಲಿಕ್ಕಿಲ್ಲ · ನನ್ನ ಮಾತಿನಲ್ಲಿ ಸುಳ್ಳಿನ ಸಂದೇಹ ನಿನಗುಂಟಾಗಿರಬಹುದು · ಆದರೆ ಆ ಬಗೆಯ ಸಂದೇಹಕ್ಕೆ ಇಂಬುಗೊಡಬಾರದು · ಹುಸಿ ನುಡಿದವನು ಪುಣ್ಯಹೀನನಾಗುವುದಿಲ್ಲವೇ! ಶ್ರೇಯೋಹೇತುವಾದ ಸುಕೃತವನ್ನು ಬೇರುಸಹಿತ ಕಳೆದುಕೊಳ್ಳುವನಷ್ಟೇ! ಅವನು ಇಹಪರಗಳಿಂದ ಭ್ರಷ್ಟನಾಗುತ್ತಾನೆ· ಆದುದರಿಂದ ಏನಾದರೂ ಸುಳ್ಳನ್ನು ಹೇಳಲೊಲ್ಲೆನು''·

ನನ್ನ ಈ ಮಾತನ್ನು ಕೇಳಿ ನಾಚಿದ ಹಿರಣ್ಯನಾಭನು ರಥವನ್ನು ಏರಿಕೊಂಡು ಬಂದಲ್ಲಿಗೇ ಹೊರಟು ಹೋದನು · ಸ್ವಾಮಿ! ೧ಜಿಜ್ಞಾಸಿತವಿಷಯದಲ್ಲಿ ಅಸಡ್ಡೆ ಸಲ್ಲದು ಎಂದು ನಾನು ತಿಳಿದಿದ್ದೇನೆ · ೨ಯಾವುದೇ ಅವಸ್ಥೆಯಲ್ಲಾದರೂ ಯೋಗ್ಯ ವಿದ್ಯಾರ್ಥಿಯು ದೊರೆತಾಗ ವಿದ್ಯೋಪದೇಶ ಮಾಡಬೇಕು ಎಂದೂ ನನಗೆ ಗೊತ್ತಿದೆ · ಆದರೆ ಪರೋಪದೇಶಕ್ಕೆ ಮೊದಲು ನಾನು, ಆ ವಿಷಯವನ್ನು ಅರ್ಹ

---

೧· ಇದಂ ಚ ಜಿಜ್ಞಾಸಿತಾರ್ಥಸ್ಯ ಅನುಪೇಕ್ಷಣೀಯತ್ವಜ್ಞಾಪನಾಯ - ಸುಬೋಧಿನೀ·

೨· ಕಸ್ಯಾಮಪ್ಯವಸ್ಥಾಯಾಂ ವಿಧಿವದುಪಗತಾಯ ಯೋಗ್ಯಶಿಷ್ಯಾಯ ವಿದ್ಯೋಪದೇಶ್ಯೈವ ಸಾಪಲಪನೀಯಾ - ಆನಂದಭಾಷ್ಯ·

ಗುರುವಿನಿಂದ ಅರಿಯಬೇಕಷ್ಟೇ: ಹಾಗಾಗಿ ಷೋಡಶಕಲಾತ್ಮಕಪುರುಷನು ಯಾರು? ಎಲ್ಲಿರುವನು? ಎಂಬಿತ್ಯಾದಿ ವಿಷಯಗಳನ್ನು ತಾವು ವಿಸ್ತಾರವಾಗಿ ಬೋಧಿಸುವ ಕೃಪೆ ಮಾಡಬೇಕು· ರಹಸ್ಯ ವಿಷಯ-ಗಳನ್ನು ಸ್ವಯಂ ಸಮರ್ಪಕವಾಗಿ ಅರಿತು, ಯೋಗ್ಯಶಿಷ್ಯರಿಗೆ ಬೋಧಿಸುವ ಉಪದೇಶ ಪರಂಪರೆಯನ್ನು ಜೀವಂತವಾಗಿ ಇಡುವ ನನ್ನ ಪವಿತ್ರ ಧ್ಯೇಯಕ್ಕೆ ಅನುಗ್ರಹಸುಧೆಯನ್ನು ಸುರಿಯುವ ಸಂಕಲ್ಪ ಮಾಡಬೇಕು·

## ಮಂತ್ರ - ೨

तस्मै स होवाच । इहैवान्तश्शरीरे सोम्य स पुरुषः,
यस्मिन्नेताः षोडश कलाः प्रभवन्तीति ॥ 2 ॥

ತಸ್ಮೈ ಸ ಹೋವಾಚ । ಇಹೈವಾಂತಶ್ಶರೀರೇ ಸೋಮ್ಯ
ಸ ಪುರುಷಃ, ಯಸ್ಮಿನ್ನೇತಾಃ ಷೋಡಶಕಲಾಃ ೧ಪ್ರಭವಂತೀತಿ ॥

### ಪ್ರತಿಪದಾರ್ಥ

**ಸಃ** - ಪಿಪ್ಪಲಾದರು, **ತಸ್ಮೈ** - ಸುಕೇಶನಿಗೆ, **ಸೋಮ್ಯ** - ಪ್ರಿಯಶಿಷ್ಯನೇ, **ಇಹ** - ಈ ಲೋಕದಲ್ಲಿರುವ, **ಅಂತಶ್ಶರೀರೇ ಏವ** - ಶರೀರದ ಹೃದಯಪ್ರದೇಶದಲ್ಲಿಯೇ, **ಪುರುಷಃ** - ಜೀವನು ಇರುತ್ತಾನೆ· **ಯಸ್ಮಿನ್** - ಯಾರಲ್ಲಿ, **ಏತಾಃ** - ಈ, **ಷೋಡಶಕಲಾಃ** - ಹದಿನಾರು ಕಲೆಗಳು, **ಪ್ರಭವಂತಿ** - ಹುಟ್ಟುತ್ತವೆಯೋ, **ಇತಿ** - ಎಂದು **ಉವಾಚ** - ಹೇಳಿದರು·

### ತಾತ್ಪರ್ಯ

ಆಚಾರ್ಯರು ಸುಕೇಶನಿಗೆ ಹೀಗೆ ಹೇಳುತ್ತಾರೆ· ಪ್ರಿಯಶಿಷ್ಯನೇ! ಈ ಶರೀರದಲ್ಲಿರುವ ಹೃದಯಸ್ಥಾನದಲ್ಲಿಯೇ ಜೀವನು ನೆಲೆಸಿರುತ್ತಾನೆ· ಜೀವನಲ್ಲಿ ಹದಿನಾರು ಕಲೆಗಳು ಹುಟ್ಟುತ್ತವೆ· ಈ ಕಲೆಗಳು ಜೀವನಲ್ಲಿ ಸುಖ-ದುಃಖಗಳನ್ನು ಉಂಟುಮಾಡುವಲ್ಲಿ ಸಮರ್ಥವಾಗಿವೆ·

### ರಂಗರಾಮಾನುಜಭಾಷ್ಯ

**ತಸ್ಮೈ ಸ ಹೋವಾಚ । ಸ್ಪಷ್ಟೋಽರ್ಥಃ । ಇಹೈವಾಂತಶ್ಶರೀರೇ ಸೋಮ್ಯ ಇತಿ ।**

---

೧· 'ಇತಿ' ಎಂಬ ಪದವು ರಂಗರಾಮಾನುಜಭಾಷ್ಯದಂತೆ ಮಂತ್ರ ಘಟಕವಾಗಿಲ್ಲ·

**ಹೇ ಸೋಮ್ಯ** - ಪ್ರಿಯದರ್ಶನ! ಸ ಪುರುಷಃ ಇಹೈವಾಂತಶ್ಶರೀರೇ, ವರ್ತತೇ ಇತಿ ಶೇಷಃ । ಅನೇನ ಪರಿಚ್ಛಿನ್ನಪ್ರದೇಶಮಾತ್ರಾಧಾರತ್ವೋಕ್ತ್ಯಾ ಜೀವ ಇತ್ಯುತ್ತರಮುಕ್ತಂ ಭವತಿ ।

ನನು ಜೀವಸ್ಯೈವ ಕಥಂ ಷೋಡಶಕಲತ್ವಮ್, ಷೋಡಶಕಲಾಧಾರತ್ವತತ್ಸ್ರಷ್ಟೃತ್ವಯೋಃ ಜೀವಾಪೇಕ್ಷಯಾ ಪರಮಾತ್ಮನ್ಯೇವ ಪುಷ್ಕಲತ್ವಾತ್ ಇತ್ಯಾಶಂಕ್ಯಾಹ - **ಯಸ್ಮಿನ್ನೇತಾಃ ಇತಿ** । ಯಸ್ಮಿನ್ ಪುರುಷೇ ಏತಾಃ ವಕ್ಷ್ಯಮಾಣಾಃ ಪ್ರಾಣಾದ್ಯಾಃ ನಾಮಾಂತಾಃ ಷೋಡಶಕಲಾಃ ಸ್ವಸಂಸರ್ಗಪ್ರಯುಕ್ತಸುಖದುಃಖಾದಿಭೋಗಾಖ್ಯಮುಪಕಾರಂ ಕರ್ತುಂ **ಪ್ರಭವಂತಿ** - ಸಮರ್ಥಾ ಭವಂತೀತ್ಯರ್ಥಃ । ತತಶ್ಚ ಷೋಡಶಕಲಾಭೋಕ್ತೃತ್ವಮೇವ ಷೋಡಶಕಲತ್ವಮ್ । ತಚ್ಚ ಜೀವಸ್ಯೈವೇತಿ ಭಾವಃ ।

## ಅನುವಾದ

**ತಸ್ಮೈ ಸ ಹೋವಾಚ** । (ಪಿಪ್ಪಲಾದರು ಸುಕೇಶನಿಗೆ ಹೇಳಿದರು) ಅರ್ಥವು ಸ್ಫುಟವಾಗಿದೆ. **ಇಹೈವಾಂತಶ್ಶರೀರೇ ಸೋಮ್ಯ! ಇತಿ** । **ಹೇ ಸೋಮ್ಯ** - ಪ್ರಿಯದರ್ಶನನೇ! ಆ ಪುರುಷನು ಈ ದೇಹದಲ್ಲಿಯೇ ಇರುತ್ತಾನೆ. ಹೀಗೆ ಪುರುಷನು ಸೀಮಿತಸ್ಥಳದಲ್ಲಿ ಇರುವವನು ಎಂದು ಹೇಳಿರುವುದರಿಂದ ಆ ಪುರುಷನು [1]ಜೀವನೇ ಎಂದು ಉತ್ತರವನ್ನು ಕೊಟ್ಟಂತಾಯಿತು.

ಹದಿನಾರು ಕಲೆಗಳಿಗೆ ನೆಲೆಯಾಗಿರುವುದೂ, ಅವುಗಳನ್ನು ಸೃಷ್ಟಿಸುವುದೂ, ಪರಮಾತ್ಮನಲ್ಲಿಯೇ ಪುಷ್ಕಲವಾಗಿ ಸಂಭವಿಸುತ್ತದೆ. ಆದ್ದರಿಂದ ಜೀವಾತ್ಮನು ಹೇಗೆ ಷೋಡಶಕಲಾತ್ಮಕನು ಎಂದು ಆಶಂಕೆ ಮಾಡಿ ಉತ್ತರಿಸುತ್ತಾರೆ. **ಯಸ್ಮಿನ್ನೇತಾಃ ಇತಿ** । ಯಾವ ಪುರುಷನಲ್ಲಿ ಹೇಳಲಿರುವ ಪ್ರಾಣಾದಿ ನಾಮಾಂತ ಹದಿನಾರುಕಲೆಗಳು ತಮ್ಮ ಸಂಪರ್ಕದಿಂದ ಉಂಟಾದ ಸುಖ-ದುಃಖಗಳ ಭೋಗೋಪಕಾರವನ್ನು ಮಾಡಲು **ಪ್ರಭವಂತಿ** - ಸಮರ್ಥವಾಗುತ್ತವೆಯೋ; ಆದುದರಿಂದ ಹದಿನಾರುಕಲೆಗಳ ಭೋಗವೇ ಷೋಡಶಕಲಾತ್ಮಕತೆ. ಅದು ಜೀವನದೇ ಎಂದು ಅಭಿಪ್ರಾಯ.

## ಭಾಷ್ಯಸಾರ

ಪೂಜ್ಯರಾದ ಆಚಾರ್ಯರು ಸಮಚಿತ್ತದಿಂದ ಸುಕೇಶನು ಬಿನ್ನವಿಸಿದ ಸಂಗತಿಯನ್ನೂ, ಪ್ರಶ್ನೆಯನ್ನೂ ಆಲಿಸಿದ್ದಾರೆ. ಅಂತರ್ಮುಖಿಗಳಾದ ಅವರ ಅಂತರಂಗ ಹರ್ಷದಿಂದ ಕುಣಿದಿದೆ. ಉಪದೇಶ-ಸಂಪ್ರದಾಯದ ಸತ್ವಪೂರ್ಣ ಅನುವೃತ್ತಿಯ ಬಗ್ಗೆ ಶಿಷ್ಯನಿಗಿರುವ ಅನುರಕ್ತಿಯನ್ನು ಅವರು ಮನಸಾ ಅಭಿನಂದಿಸಿದ್ದಾರೆ. ಹಾಗಾಗಿ ಉತ್ತರಿಸಲು ಬಾಯ್ದೆರೆಯುತ್ತಿದ್ದಂತೆಯೇ 'ಸೋಮ್ಯ - ಪ್ರಿಯದರ್ಶನ' ಎಂಬ ನುಡಿ ಹೊರಹೊರಟಿದೆ.

---

೧. ಸುಬೋಧಿನೀಕಾರರು ಪುರುಷಶಬ್ದವನ್ನು ಪರಮಾತ್ಮಪರವೆಂದು ವ್ಯಾಖ್ಯಾನ ಮಾಡಿ ಅದಕ್ಕೆ ಅನುಗುಣವಾಗಿಯೇ ಈ ಪ್ರಶ್ನೆಯ ಮಂತ್ರಗಳನ್ನು ನಯನ ಮಾಡಿರುತ್ತಾರೆ.

'ಸೋಮ್ಯ! ಪ್ರತ್ಯಕ್ಷಗೋಚರವಾಗುವ ಈ ದೇಹದಲ್ಲಿಯೇ ನೀನು ಕೇಳಿದ ಷೋಡಶಕಲಾತ್ಮಕನಾದ ಪುರುಷನಿದ್ದಾನೆ· ಅವನಲ್ಲಿ ಹದಿನಾರುಕಲೆಗಳು ಹುಟ್ಟುತ್ತವೆ· ಈ ಕಲೆಗಳು ಪುರುಷನ ಜೀವನದಲ್ಲಿ ಸುಖ-ದುಃಖಭೋಗಕ್ಕೆ ನೆರವಾಗುವಂತಹವು · ಇವುಗಳನ್ನು ಸೃಷ್ಟಿಮಾಡುವ ಸಾಮರ್ಥ್ಯ ಭಗವಂತನದಾದರೂ ಅವುಗಳ ಭೋಗ ಜೀವನಿಗೇ ಸೇರಿದೆ·

## ಮಂತ್ರ - ೩

स ईक्षांचक्रे । कस्मिन्नहमुत्क्रान्त उत्क्रान्तो
भविष्यामि, कस्मिन् वा प्रतिष्ठिते प्रतिष्ठास्यामीति ।। 3 ।।

ಸ ಈಕ್ಷಾಂಚಕ್ರೇ ।ಕಸ್ಮಿನ್ನಹಮುತ್ಕ್ರಾಂತ ಉತ್ಕ್ರಾಂತೋ
ಭವಿಷ್ಯಾಮಿ, [೧]ಕಸ್ಮಿನ್ ವಾ ಪ್ರತಿಷ್ಠಿತೇ ಪ್ರತಿಷ್ಠಾಸ್ಯಾಮೀತಿ ॥

### ಪ್ರತಿಪದಾರ್ಥ

**ಸಃ** - ಜೀವನು, **ಕಸ್ಮಿನ್ ಉತ್ಕ್ರಾಂತೇ** - ಯಾರು ಉತ್ಕ್ರಮಣ ಮಾಡಿದರೆ, **ಅಹಮ್** - ನಾನು, **ಉತ್ಕ್ರಾಂತಃ** - ಉತ್ಕ್ರಮಣ ಮಾಡಿದವನಾಗಿ, **ಭವಿಷ್ಯಾಮಿ** - ಆಗುವೆನು · **ಕಸ್ಮಿನ್ ಪ್ರತಿಷ್ಠಿತೇ** - ಯಾರು ನೆಲೆಸಿದರೆ, **ಪ್ರತಿಷ್ಠಾಸ್ಯಾಮಿ** - ನೆಲೆಸುವೆನು · **ಇತಿ** - ಎಂದು, **ಈಕ್ಷಾಂಚಕ್ರೇ** - ಪರ್ಯಾಲೋಚಿಸಿದನು·

### ತಾತ್ಪರ್ಯ

ಷೋಡಶಕಲಾವಂತನಾದ ಜೀವನು, ಯಾರ ಉತ್ಕ್ರಮಣ ಹಾಗೂ ಸ್ಥಿತಿಗಳಿಗೆ ಅನುಗುಣವಾಗಿ ತನ್ನ ಸ್ಥಿತಿ-ಗತಿಗಳು ಇವೆ ಎಂದು ಆಲೋಚಿಸಿದನು·

### ರಂಗರಾಮಾನುಜಭಾಷ್ಯ

ನನು ಷೋಡಶಕಲಾಸರ್ಗಹೇತುತ್ವೇ ಜೀವಪರಮಾತ್ಮನೋರವಿಶಿಷ್ಟೇ ತದ್ಭೋಕ್ತೃತ್ವಂ ಜೀವಸ್ಯೈವ, ನ ಪರಮಾತ್ಮನಃ ಇತ್ಯತ್ರ ಕಿಂ ನಿಯಾಮಕಮಿತ್ಯತ್ರಾಽಽಹ - ಸ **ಈಕ್ಷಾಂಚಕ್ರೇ ಇತಿ** ।- 'ಸೋಽಧ್ಯಕ್ಷೇ ತದುಪಗಮಾದಿಭ್ಯಃ' ಇತಿ ಭಾಷ್ಯೇ ಪ್ರತಿಷ್ಠಾ ಚ ಜೀವೇನ ಸಹ ಶ್ರೂಯತೇ ।

---

೧· ರಂಗರಾಮಾನುಜಭಾಷ್ಯದಲ್ಲಿ 'ಇತಿ' ಎಂಬ ಅಧಿಕಪಾಠವನ್ನು ಆಚರಿಸಲಾಗಿದೆ·

ಕಸ್ಮಿನ್ನಹಮುತ್ಕ್ರಾಂತೇ ಉತ್ಕ್ರಾಂತೋ ಭವಿಷ್ಯಾಮಿ, ಕಸ್ಮಿನ್ವಾ ಪ್ರತಿಷ್ಠಿತೇ ಪ್ರತಿಷ್ಠಾಸ್ಯಾಮೀತಿ' ಇತ್ಯುಕ್ತತ್ವಾತ್ ಇದಂ ವಾಕ್ಯಂ ಜೀವಾಭಿಸಂಬಂಧಿಪ್ರಕಾರಪ್ರದರ್ಶನಪರಮ್ । ಮದುತ್ಕ್ರಾಂತಿಪ್ರತಿಷ್ಠಾ-ಸಹಭೂತೋತ್ಕ್ರಾಂತಿಪ್ರತಿಷ್ಠಃ ಕೋ ವಾ ಇತಿ ಪರ್ಯಾಲೋಚಿತವಾನಿತ್ಯರ್ಥಃ । ತತಶ್ಚ ಸ್ವೋಪಕಾರಾಭಿಸಂಧಿಪೂರ್ವಕಂ ಜೀವಸ್ಯ ಪ್ರಾಣಾದಿ ಸ್ರಷ್ಟೃತ್ವಾತ್ ತದ್ಭೋಕ್ತೃತ್ವಂ ಸಂಭವತಿ । ಪರಮಾತ್ಮನಸ್ತು "ನ ಚ ಮಾಂ ತಾನಿ ಕರ್ಮಾಣಿ ನಿಬಧ್ನಂತಿ ಧನಂಜಯ । ಉದಾಸೀನ-ವದಾಸೀನಮಸಕ್ತಂ ತೇಷು ಕರ್ಮಸು । ನ ಚ ಮಾಂ ಕರ್ಮಾಣಿ ಲಿಂಪಂತಿ ನ ಮೇ ಕರ್ಮಫಲೇ ಸ್ಪೃಹಾ" । ಇತ್ಯುಕ್ತರೀತ್ಯಾ ಸ್ವೋಪಕಾರಾಭಿಸಂಧಿಪೂರ್ವಕ ಸ್ರಷ್ಟೃತ್ವಾಭಾವಾನ್ನ ತಸ್ಯ ಷೋಡಶಕಲಾ-ಭೋಕ್ತೃತ್ವಮಿತಿ ಭಾವಃ ॥

## ಅನುವಾದ

ಹದಿನಾರುಕಲೆಗಳ ಹುಟ್ಟಿಗೆ ಜೀವ - ಪರಮಾತ್ಮರು ಸಮಾನವಾಗಿಯೇ ಕಾರಣರಾಗಿರುವಾಗ ಅವುಗಳನ್ನು ಅನುಭವಿಸುವುದು ಜೀವನದೇ ವಿನಹ ಪರಮಾತ್ಮನದಲ್ಲ ಎಂಬ ವಿಷಯದಲ್ಲಿ ನಿರ್ಣಾಯಕ ಯುಕ್ತಿ ಯಾವುದು? ಎಂಬಲ್ಲಿ ಹೇಳುತ್ತಾರೆ· ಸ ಈಕ್ಷಾಂಚಕ್ರೇ ಇತಿ । 'ಸೋಽಧ್ಯಕ್ಷೇ ತದುಪಗಮಾದಿಭ್ಯಃ' ಎಂಬ ಸೂತ್ರದ ಭಾಷ್ಯದಲ್ಲಿ ಜೀವನೊಂದಿಗೆ ಇರುವಿಕೆಯನ್ನು ತಿಳಿಸ-ಲಾಗಿದೆ 'ಕಸ್ಮಿನ್ನಹಮುತ್ಕ್ರಾಂತೇ ಉತ್ಕ್ರಾಂತೋ ಭವಿಷ್ಯಾಮಿ, ಕಸ್ಮಿನ್ವಾ ಪ್ರತಿಷ್ಠಿತೇ ಪ್ರತಿಷ್ಠಾಸ್ಯಾಮಿ' ಎಂಬ ವಾಕ್ಯವಿರುವುದರಿಂದ ಈ ಮಂತ್ರವಾಕ್ಯವು ಜೀವನ ನಿಯತಸಂಬಂಧಪ್ರಕಾರವನ್ನು ತಿಳಿಸುತ್ತದೆ· ತನ್ನ ಸ್ಥಿತಿ-ಗತಿಗಳ ಸಂಗಡವೇ ಸ್ಥಿತಿಗತಿಗಳುಳ್ಳವನು ಯಾರೆಂದು ಆಲೋಚಿಸಿದನು ಎಂದರ್ಥ· ಆದುದರಿಂದ, ಜೀವನು ತನ್ನ ಉಪಕಾರದ ಅಭಿಲಾಷೆಯಿಂದ ಪ್ರಾಣಾದಿಗಳನ್ನು ಸೃಷ್ಟಿಮಾಡಿರುವುದರಿಂದ ಅವುಗಳ ಭೋಗವು ಸಾಧ್ಯವಾಗುತ್ತದೆ· 'ಹೇ ಧನಂಜಯ! ಅಸಕ್ತನಾಗಿ ಉದಾಸೀನನಾಗಿ ಇರುವ ನನ್ನನ್ನು ಆ ಕರ್ಮಗಳು ಬಂಧಿಸಲಾರವು· ನನಗೆ ಕರ್ಮಫಲದಲ್ಲಿ ಅಭಿಲಾಷೆಯಿಲ್ಲ; ನನ್ನಲ್ಲಿ ಕರ್ಮಗಳು ಅಂಟಲಾರವು· ಈ ವಾಕ್ಯಗಳಿಗೆ ಅನುಸಾರವಾಗಿ ಪರಮಾತ್ಮನಿಗೆ ಷೋಡಶಕಲೆಗಳನ್ನು ಸೃಜಿಸುವಲ್ಲಿ ಸ್ವಾನುಕೂಲದ ಅಭಿಲಾಷೆಯಿಲ್ಲದಿರುವುದರಿಂಧ ಅವುಗಳ ಭೋಗವೂ ಇಲ್ಲ ಎಂದು ತಾತ್ಪರ್ಯ·

## ಮಂತ್ರ - ೪

स प्राणमसृजत प्राणाच्छ्रद्धां खं वायु-
र्ज्योतिरापः पृथिवीन्द्रियम् मनोऽन्न-
मन्नाद्वीर्यं तपो मन्त्राः कर्म लोका
लोकेषु च नाम च ॥ 4 ॥

ಸ ಪ್ರಾಣಮಸೃಜತ ಪ್ರಾಣಾಚ್ಛ್ರದ್ಧಾಂ ಖಂ ವಾಯು-
ರ್ಜ್ಯೋತಿರಾಪಃ ಪೃಥಿವೀಂದ್ರಿಯಮ್ ಮನೋಽನ್ನ-
ಮನ್ನಾದ್ವೀರ್ಯಂ ತಪೋ ಮಂತ್ರಾಃ ಕರ್ಮ ಲೋಕಾ
ಲೋಕೇಷು ಚ ನಾಮ ಚ ॥

## ಪ್ರತಿಪದಾರ್ಥ

**ಸಃ** - ಜೀವನು, **ಪ್ರಾಣಮ್** - ಮುಖ್ಯಪ್ರಾಣನನ್ನು, **ಅಸೃಜತ** - ಸೃಜಿಸಿದನು· **ಪ್ರಾಣಾತ್** - ಮುಖ್ಯಪ್ರಾಣನಿಂದ, **ಶ್ರದ್ಧಾಮ್** - ಆಸ್ತಿಕ್ಯಬುದ್ಧಿಯನ್ನು ಸೃಷ್ಟಿಸಿದನು · (ಅದರಿಂದ) **ಖಂ**-ಆಕಾಶವನ್ನೂ, **ವಾಯುಃ** - ವಾಯುವನ್ನೂ, **ಜ್ಯೋತಿಃ** - ತೇಜಸ್ಸನ್ನೂ, **ಆಪಃ** - ನೀರನ್ನೂ, **ಪೃಥಿವೀ** - ಭೂಮಿಯನ್ನೂ, **ಇಂದ್ರಿಯಮ್** - ವಾಗಾದಿ-ಇಂದ್ರಿಯಗಳನ್ನೂ, **ಮನಃ** -ಮನಸ್ಸನ್ನೂ, **ಅನ್ನಮ್** - ಆಹಾರವನ್ನೂ, **ಅನ್ನಾತ್** - ಅನ್ನದಿಂದ, **ವೀರ್ಯಮ್** - ಶಕ್ತಿಯನ್ನೂ, **ತಪಃ**-ತಪಸ್ಸನ್ನೂ, **ಮಂತ್ರಾಃ** - ವೇದಗಳನ್ನೂ, **ಕರ್ಮ** - ಯಾಗಾದಿಕ್ರಿಯೆಗಳನ್ನೂ, **ಲೋಕಾಃ** -(ಅದರಿಂದ ಸಿಗುವ) ಲೋಕಗಳನ್ನೂ, **ಲೋಕೇಷು** - ಆ ಲೋಕಗಳಲ್ಲಿ, **ನಾಮ ಚ**- ಹೆಸರುಗಳನ್ನೂ ಸೃಷ್ಟಿಸಿದನು·

## ತಾತ್ಪರ್ಯ

ಜೀವನು ತನ್ನ ಉತ್ಕ್ರಾಂತಿ - ಪ್ರತಿಷ್ಠೆಗಳಿಗೆ ಅನುಗುಣವಾದ ಉತ್ಕ್ರಾಂತಿ ಪ್ರತಿಷ್ಠೆಗಳನ್ನು ಆಲೋಚಿಸಿ, ಮೊದಲು ಮುಖ್ಯಪ್ರಾಣನನ್ನು ಸೃಜಿಸಿದನು · ನಂತರ ಆಸ್ತಿಕ್ಯಬುದ್ಧಿಯನ್ನೂ, ಆಕಾಶ-ವಾಯು-ತೇಜಸ್ಸು-ಜಲ-ಪೃಥಿವಿಗಳೆಂಬ ಪಂಚಭೂತಗಳನ್ನೂ, ವಾಗಾದಿ-ಇಂದ್ರಿಯಗಳನ್ನೂ, ಮನಸ್ಸು, ಆಹಾರ-ವೀರ್ಯ-ಗಳನ್ನೂ, ತಪಸ್ಸು - ಮಂತ್ರಗಳು ಯಾಗಾದಿಕರ್ಮಗಳನ್ನೂ, ಅವುಗಳಿಂದ ಸಿಗುವ ಲೋಕಗಳನ್ನೂ, ಅವುಗಳಲ್ಲಿ ಸಲ್ಲುವ ನಾಮಗಳನ್ನೂ ಸೃಷ್ಟಿ ಮಾಡಿದನು·

## ರಂಗರಾಮಾನುಜಭಾಷ್ಯ

**ಸ ಪ್ರಾಣಮಸೃಜತ ಇತಿ** । ಸಃ ಜೀವಃ ಏವಂ ಪರ್ಯಾಲೋಚ್ಯ ಪ್ರಥಮತಃ ಸ್ವೋತ್ಕ್ರಾಂತಿಪ್ರತಿಷ್ಠಾಸಹಭೂತೋತ್ಕ್ರಾಂತಿಪ್ರತಿಷ್ಠಂ ಮುಖ್ಯಪ್ರಾಣಂ ಸೃಷ್ಟವಾನ್ । ತಸ್ಮಾದೂರ್ಧ್ವಂ ಆಸ್ತಿಕ್ಯಬುದ್ಧಿಮ್, ಪಂಚಮಹಾಭೂತಾನಿ, ವಾಗಾದೀಂದ್ರಿಯಮ್, ಮನಃ, ವ್ರೀಹ್ಯಾದಿರೂಪ-ಮನ್ನಮ್, ತದಾಯತ್ತಂ ಶರೀರೇಂದ್ರಿಯಸಾಮರ್ಥ್ಯಮ್, ಶರೀರಶೋಷಣಾದಿಲಕ್ಷಣಂ ತಪಃ, ಋಗ್ಯಜುಸ್ಸಾಮಾದೀನ್ ಮಂತ್ರಾನ್, ಜ್ಯೋತಿಷ್ಟೋಮಾದೀನಿಕರ್ಮಾಣಿ, ಕರ್ಮಫಲಭೂತಾನ್ ಸ್ವರ್ಗಾದೀನ್ ಲೋಕಾನ್, ತೇಷು ಸ್ವರ್ಗಾದಿಲೋಕೇಷು ನಾಮಾನಿ(ಚ) ಸೃಷ್ಟವಾನಿತ್ಯರ್ಥಃ ।

ಯದ್ಯಪಿ ಷೋಡಶಕಲಾಸ್ರಷ್ಟೃತ್ವಂ ಪರಮಾತ್ಮನ ಏವ, ತಥಾಪಿ ತದ್ಧೇತುಭೂತಾದೃಷ್ಟಾರಂಭಕಕರ್ಮಕರ್ತೃತ್ವೇನ ಅಯಂ ಸ್ರಷ್ಟೃತ್ವವಾದ ಇತಿ ದ್ರಷ್ಟವ್ಯಮ್ । ತತಶ್ಚ ಸ್ವಭೋಗೋಪಕಾರಿಕಾಃ ಷೋಡಶಾಪಿ ಕಲಾಃ ತದ್ಧೇತುಭೂತಾದೃಷ್ಟಾರಂಭಕಕರ್ಮಾಣಿ ಕೃತ್ವಾ ಸೃಷ್ಟವಾನ್, ಅತಃ ತದ್ಭೋಕ್ತೃತಯಾ ಷೋಡಶಕಲತ್ವಂ ಜೀವಸ್ಯೇತಿ ಯಾವತ್ ॥

## ಅನುವಾದ

ಸ ಪ್ರಾಣಮಸೃಜತ ಇತಿ । ಜೀವನು ತನ್ನ ಇರವು ಅಳಿವುಗಳೊಂದಿಗೆ ಇರುವ ಸ್ಥಿತಿ-ಗತಿಗಳುಳ್ಳ ಮುಖ್ಯಪ್ರಾಣನನ್ನು ಮೊದಲು ಸೃಷ್ಟಿಸಿದನು · ಆಮೇಲೆ ಆಸ್ತಿಕ್ಯಬುದ್ಧಿಯನ್ನೂ, ಪಂಚಮಹಾಭೂತಗಳನ್ನೂ, ಮಾತು ಮುಂತಾದ ಇಂದ್ರಿಯಗಳನ್ನು, ಮನಸ್ಸನ್ನೂ, ಅನ್ನ ಮೊದಲಾದ ಆಹಾರವನ್ನೂ, ಅದಕ್ಕೆ ಅಧೀನವಾದ ದೇಹೇಂದ್ರಿಯಗಳ ಶಕ್ತಿಯನ್ನೂ, ಶರೀರ ಶೋಷಣೆಯೆಂಬ ತಪಸ್ಸನ್ನೂ, ಋಕ್‌ಯಜುಸ್ಸಾಮಗಳೆಂಬ ವೇದಗಳನ್ನೂ, ಜ್ಯೋತಿಷ್ಟೋಮಾದಿ ಕರ್ಮಗಳನ್ನೂ, ಕರ್ಮಫಲಗಳಾದ ಸ್ವರ್ಗಾದಿಲೋಕಗಳನ್ನೂ, ಆ ಲೋಕಗಳಿಗೆಲ್ಲ ಹೆಸರುಗಳನ್ನೂ ಸೃಜಿಸಿದನು ಎಂದರ್ಥ·

ಷೋಡಶಕಲೆಗಳ ಸೃಷ್ಟಿಯೇನೋ ಪರಮಾತ್ಮನಿಗೇ ಸೇರಿದೆ · ಆದರೂ ಅವುಗಳ ಹುಟ್ಟಿಗೆ ಕಾರಣವಾದ ಅದೃಷ್ಟಕ್ಕೆ ನಿಮಿತ್ತವಾದ ಕರ್ಮಗಳನ್ನು ಮಾಡುವುದರಿಂದ ಜೀವನಲ್ಲಿ ಕಲಾಸೃಷ್ಟಿಯ ವರ್ಣನೆಯೆಂದು ತಿಳಿಯಬೇಕು · ಆದುದರಿಂದ ತನ್ನ ಭೋಗಕ್ಕೆ ಅನುಕೂಲಕರವಾದ ಹದಿನಾರು-ಕಲೆಗಳನ್ನು, ಅವಕ್ಕೆ ಕಾರಣವಾದ ಅದೃಷ್ಟೋತ್ಪಾದಕಕರ್ಮಗಳನ್ನು ಅನುಷ್ಠಿಸಿ ಜೀವನು ಸೃಜಿಸಿದನು · ಹಾಗಾಗಿ ಅವುಗಳ ಭೋಗವಿರುವುದರಿಂದ ಜೀವನೇ ಷೋಡಶಕಲಾವಂತನೆಂದು ತಾತ್ಪರ್ಯ·

## ಭಾಷ್ಯಸಾರ

ಹದಿನಾರುಕಲೆಗಳೂ ಜೀವನ ಭೋಗಸಾಧನಗಳು · ಹಾಗಾಗಿಯೇ ಅವುಗಳ ಉತ್ಪಾದನೆಗೆ ಅವನು ಸಂಕಲ್ಪವನ್ನು ಮಾಡುತ್ತಾನೆ · ಭೋಗಕ್ಕೆ ಉಪಕಾರಕಗಳಾದ ಆ ಕಲೆಗಳ ಸೃಷ್ಟಿ ಅವನಿಂದ ನೇರವಾಗಿ ಸಾಧ್ಯವಿಲ್ಲ · ಅದಕ್ಕಾಗಿ ಅದೃಷ್ಟವನ್ನು ಅವಲಂಬಿಸಬೇಕು · ಅದೃಷ್ಟಕ್ಕೆ ಕರ್ಮಗಳು ಕಾರಣ · ಹೀಗೆ ಕರ್ಮಗಳನ್ನು ಅವನು ಅನುಷ್ಠಿಸಿ, ಅದೃಷ್ಟವಂತನಾಗಿ ಈ ಕಲೆಗಳ ಹುಟ್ಟಿಗೆ ನಿಮಿತ್ತವಾಗುತ್ತಾನೆ·

ಜೀವನು ಮೊದಲು - 'ಯಾರು ಉತ್ಕ್ರಮಣ ಮಾಡಿದರೆ ನಾನೂ ಉತ್ಕ್ರಮಣ ಮಾಡುತ್ತೇನೆ · ಯಾರು ನೆಲೆ ನಿಂತರೆ ನಾನೂ ನೆಲೆಸುತ್ತೇನೆ' ಎಂದು ಆಲೋಚಿಸಿ ಮುಖ್ಯಪ್ರಾಣನನ್ನು ಸೃಷ್ಟಿ ಮಾಡಿದನು ಆಮೇಲೆ ಶ್ರದ್ಧೆ, ಆಕಾಶ, ವಾಯು, ತೇಜಸ್ಸು, ಜಲ, ಪೃಥಿವೀ, ಇಂದ್ರಿಯಗಳು, ಮನಸ್ಸು, ಅನ್ನ ವೀರ್ಯ, ತಪಸ್ಸು, ಮಂತ್ರಗಳು, ಕರ್ಮಗಳು, ಲೋಕಗಳು, ಹೆಸರುಗಳು - ಹೀಗೆ ಉಳಿದ ಎಲ್ಲ ಕಲೆಗಳನ್ನೂ ಸೃಜಿಸಿದನು·

## ಮಂತ್ರ - ೫

स यथेमा नद्यस्स्यन्दमानास्समुद्रायणास्समुद्रं
प्राप्यास्तं गच्छन्ति, भिद्येते तासां नामरूपे,
समुद्र इत्येवं प्रोच्यते - एवमेवास्य परिद्रष्टुरिमाष्षोडश कलाः
पुरुषायणाः पुरुषं प्राप्यास्तं गच्छन्ति ;
भिद्येते चासां नामरूपे, पुरुष इत्येवं प्रोच्यते ।
स एषोऽकलोऽमृतो भवति । तदेष श्लोकः ॥ 5 ॥

ಸ ಯಥೇಮಾಃ ನದ್ಯಸ್ಸ್ಯಂದಮಾನಾಸ್ಸಮುದ್ರಾಯಣಾ-
ಸ್ಸಮುದ್ರಂ ಪ್ರಾಪ್ಯಾಸ್ತಂ ಗಚ್ಛಂತಿ, ಭಿದ್ಯೇತೇ ತಾಸಾಂ
ನಾಮರೂಪೇ, ಸಮುದ್ರ ಇತ್ಯೇವಂ ಪ್ರೋಚ್ಯತೇ - ಏವ
ಮೇವಾಸ್ಯ ಪರಿದ್ರಷ್ಟುರಿಮಾಃ ಷೋಡಶಕಲಾಃ ಪುರುಷಾಯಣಾಃ
ಪುರುಷಂ ಪ್ರಾಪ್ಯಾಸ್ತಂ ಗಚ್ಛಂತಿ; ಭಿದ್ಯೇತೇ ಚಾಸಾಂ ನಾಮರೂಪೇ
ಪುರುಷ ಇತ್ಯೇವಂ ಪ್ರೋಚ್ಯತೇ ॥
ಸ ಏಷೋಽಕಲೋಽಮೃತೋ ಭವತಿ । ತದೇಷ ಶ್ಲೋಕಃ ॥

### ಪ್ರತಿಪದಾರ್ಥ

**ಯಥಾ** - ಹೇಗೆ, **ಇಮಾಃ** - ಕಾಣುವ, **ಸ್ಯಂದಮಾನಾಃ** - ಹರಿಯುವ, **ಸಮುದ್ರಾಯಣಾಃ** - ಸಮುದ್ರವೇ ಆಶ್ರಯವಾಗಿರುವ, **ನದ್ಯಃ** - (ಗಂಗಾದಿ)ನದಿಗಳು, **ಸಮುದ್ರಮ್** - ಸಾಗರವನ್ನು, **ಪ್ರಾಪ್ಯ** - ಸೇರಿ, **ಅಸ್ತಂಗಚ್ಛಂತಿ** - ಕಣ್ಮರೆಯಾಗುತ್ತವೆಯೋ, **ತಾಸಾಮ್** - ಆ ನದಿಗಳ, **ನಾಮರೂಪೇ** - ಹೆಸರು ಹಾಗೂ ರೂಪಗಳು, **ಭಿದ್ಯೇತೇ** - ನಾಶವಾಗುತ್ತವೆಯೋ, **ಸಮುದ್ರಃ** - ಸಮುದ್ರವು, **ಇತ್ಯೇವ** - ಎಂದೇ, **ಪ್ರೋಚ್ಯತೇ** - ಕರೆಯಲ್ಪಡು-ತ್ತವೆಯೋ, **ಏವಮೇವ** - ಹಾಗೆಯೇ, **ಅಸ್ಯ** - ಈ **ಪರಿದ್ರಷ್ಟುಃ** - ಭೋಕ್ತೃವಾದ, ಜೀವನ **ಇಮಾಃ** - ಈ, **ಷೋಡಶ** - ಹದಿನಾರು, **ಪುರುಷಾಯಣಾಃ** - ಪರಮಾತ್ಮನೇ (ಕೊನೆಯ) ನೆಲೆಯಾಗಿರುವ, **ಕಲಾಃ** - ಕಲೆಗಳು, **ಪುರುಷಮ್** - ಪರಮಾತ್ಮನನ್ನು, **ಪ್ರಾಪ್ಯ** - ಪಡೆದು, **ಅಸ್ತಂ ಗಚ್ಛಂತಿ** - ಕಣ್ಮರೆಯಾಗುತ್ತವೆ · **ಆಸಾಮ್** - ಈ ಕಲೆಗಳ, **ನಾಮರೂಪೇ** - ಹೆಸರು ಹಾಗೂ ರೂಪಗಳು,

**ಭಿದ್ಯೇತೇ** - ನಾಶವಾಗುತ್ತವೆ· **ಪುರುಷಃ** - ಪರಮಾತ್ಮ, **ಇತ್ಯೇವ** - ಎಂದೇ, **ಪ್ರೋಚ್ಯತೇ**- ಕರೆಯಲ್ಪಡುತ್ತದೆ · **ಸ ಏಷಃ** - ಅಂತಹ ಪರಮಾತ್ಮನೇ, **ಅಕಲಃ** - ಕಲಾಶೂನ್ಯನೂ, **ಅಮೃತಃ** - ಮರಣರಹಿತನೂ, **ಭವತಿ** - ಆಗಿದ್ದಾನೆ· **ತತ್** - ಆ ಪರವಸ್ತುವನ್ನು ಕುರಿತು, **ಏಷಃ** - ಈ **ಶ್ಲೋಕಃ** - ಮಂತ್ರವು ಇದೆ·

## ತಾತ್ಪರ್ಯ

ಕಣ್ಣಿಗೆ ಕಾಣುವ ಎಲ್ಲ ನದಿಗಳೂ ಆಶ್ರಯವಾಗಿರುವ ಸಾಗರವನ್ನು ಕೊನೆಯಲ್ಲಿ ಸೇರುತ್ತವೆ· ಸಮುದ್ರವನ್ನು ಸೇರಿದ ಈ ನದಿಗಳನ್ನು ಗಂಗಾನದಿಯೆಂದಾಗಲೀ, ಯಮುನಾನದಿಯೆಂದಾಗಲೀ ಬೇರ್ಪಡಿಸಲು ಸಾಧ್ಯವಿಲ್ಲ· ಅವುಗಳ ನಾಮರೂಪಗಳು ಲುಪ್ತವಾಗುತ್ತವೆ· ಕಪ್ಪು ಬಿಳುಪು ಮೊದಲಾದ ಬಣ್ಣಗಳು ಮರೆಯಾಗುತ್ತವೆ · ಗಂಗೆ, ಯಮುನೆ ಇತ್ಯಾದಿ ಹೆಸರುಗಳು ಇಲ್ಲವಾಗುತ್ತವೆ · ಎಲ್ಲ ನದಿಗಳು ಸೇರಿ ಸಿದ್ಧವಾದ ಜಲರಾಶಿಯನ್ನು ಸಮುದ್ರ ಎಂದೇ ಕರೆಯುತ್ತಾರೆ · ಹೀಗೆಯೇ ಜೀವನ ಭೋಗೋಪಕರಣಗಳಾದ ಹದಿನಾರುಕಲೆಗಳು, ತಮಗೆ ಗಮ್ಯಸ್ಥಾನವಾದ ಸಹಸ್ರಶೀರ್ಷನಾದ ಪುರುಷನಲ್ಲಿಯೇ ಲಯಹೊಂದುತ್ತವೆ · ಅವು ಅವನಲ್ಲಿ ಲೀನವಾದ ನಂತರ ತಮ್ಮ ಪ್ರತ್ಯೇಕತೆಯನ್ನು ಕಳೆದುಕೊಳ್ಳುತ್ತವೆ· ಈ ಕಲೆಗಳ, ಮೂಲನೆಲೆಯಾದ ಪರಮಾತ್ಮನು ಅಕಲನೂ, ಅಮೃತನೂ ಆಗಿದ್ದಾನೆ ಈ ವಿಷಯದಲ್ಲಿ ಮುಂದಿನ ಮಂತ್ರವು ಭದ್ರ ಆಧಾರವನ್ನು ಮುಂದೊಡ್ಡುತ್ತದೆ·

## ರಂಗರಾಮಾನುಜಭಾಷ್ಯ

ಷೋಡಶಕಲತ್ವಂ ಜೀವಸ್ಯೋಪಪಾದ್ಯ ಪರಮಾತ್ಮನ ಈದೃಕ್ತ್ವಾಭಾವಾದಕಲತ್ವಮ್, ತದ್ದ್ವಾರಾ ಮುಮುಕ್ಷುವೇದ್ಯತ್ವಂ ಚೋಪಪಾದಯತಿ - **ಸ ಯಥೇಮಾಃ ಇತಿ** । **ಯಥಾ ಪ್ರಸ್ರವಂತ್ಯೋ ಗಂಗಾದ್ಯಾ ನದ್ಯಃ ಸಮುದ್ರಾಯಣಾಃ** - ಅತ್ರ ಅಯನಶಬ್ದೇನ ಆಧಾರತ್ವಮುಖೇನಾऽऽತ್ಮತ್ವಮುಚ್ಯತೇ । ಸಮುದ್ರಾತ್ಮಿಕಾಃ ಸಮುದ್ರಾ- ಪೃಥಕ್ಸ್ಥಿತಿಪ್ರತಿಪತ್ತಿಯೋಗ್ಯಾ ಭೂತ್ವಾ **ಸಮುದ್ರಂ ಪ್ರಾಪ್ಯ ಅಸ್ತಂ ಗಚ್ಛಂತಿ** - ಅದರ್ಶನಂ ಯಾಂತಿ, ನ ತು ಸಮುದ್ರೇ ವೃದ್ಧ್ಯಾದಿಲಕ್ಷಣಂ· ವಿಕಾರಮುತ್ಪಾದಯಿತುಂ ಪ್ರಭವಂತಿ । ತಾಸಾಂ ಚ ಗಂಗಾಯಮುನಾದೀನಿ ನಾಮಾನಿ ಯಾನಿ, ಯಾನಿ ಚ ಶುಕ್ಲಕೃಷ್ಣಾದೀನಿ ರೂಪಾಣಿ ಪ್ರಾಕ್ತನಾನಿ, ತಾನಿ **ಭಿದ್ಯಂತೇ** ತತ್ಪ್ರವೇಶಾನಂತರಂ ನ ಭವಂತಿ । ನಾಮಾಂತರಂ ರೂಪಾಂತರಂ ಚ ಭವತೀತ್ಯರ್ಥಃ । ತದೇವ ದರ್ಶಯತಿ - **ಸಮುದ್ರ ಇತ್ಯೇವಂ ಪ್ರೋಚ್ಯತೇ ಇತಿ** । ತತ್ರ ಪ್ರವಿಷ್ಟಂ ನದೀಜಾತಂ ಸರ್ವಂ ಸಮುದ್ರ ಇತ್ಯೇವಂ ಪ್ರೋಚ್ಯತೇ, ನ ತು ಗಂಗಾ, ಯಮುನೇತಿ । ಸ ಯಥಾ - ಸ ದೃಷ್ಟಾಂತೋ ಯಥೇತ್ಯರ್ಥಃ ।

**ಏವಮೇವಾಸ್ಯ ಇತಿ** । ಏವಮೇವ ಅಸ್ಯ ಪರಿದ್ರಷ್ಟುಃ ಅನುಭವಿತುರ್ಭೋಕ್ತುರ್ಜೀವಸ್ಯ

ಭೋಗೋಪಕರಣಭೂತಾ **ಇಮಾಃ ಷೋಡಶಾಪಿ ಕಲಾಃ** ನಿರುಪಾಧಿಕಃ ಪುರುಷಶಬ್ದವಾಚ್ಯಂ ವಾಸುದೇವಂ **ಪ್ರಾಪ್ಯಾಸ್ತಂ ಗಚ್ಛಂತಿ** । ಯಥಾ ಶಿಲಾತಲಂ ಪ್ರಾಪ್ಯ ಕ್ಷುರಧಾರಾಃ ಕುಂಠೀಭವಂತಿ, ತಥಾ ಭೋಗಾಧಾಯಿಕಾ ನ ಭವಂತೀತ್ಯರ್ಥಃ । ತತ್ರ ಹೇತುಮಾಹ - **ಪುರುಷಾಯಣಾ ಇತಿ**। ಪುರುಷಸಂಕಲ್ಪಾಧೀನಸ್ವರೂಪಸ್ಥಿತಿಪ್ರವೃತ್ತಿಕಾ ಇತ್ಯರ್ಥಃ । ಆಸಾಂ ಕಲಾನಾಂ ಜೀವವಿಷಯೇ ಭೋಗ್ಯಭೋಗಸ್ಥಾನಭೋಗೋಪಕರಣತ್ವಾದಿನಾಮರೂಪಭೇದವತ್ ಪರಮಾತ್ಮವಿಷಯೇ ಭೋಗ-ಸ್ಥಾನತ್ವಾದಿನಾಮರೂಪೇ ನ ಸ್ತಃ । ತದೇವ ದರ್ಶಯತಿ - **ಪುರುಷ ಇತ್ಯೇವಂ ಪ್ರೋಚ್ಯತೇ ಇತಿ** । ಪುರುಷಾಪೃಥಕ್ಸ್ಥಿತಿಪ್ರತಿಪತ್ತಿಕತಯಾ ಪುರುಷ ಇತ್ಯೇವಂ ಪ್ರೋಚ್ಯತೇ, ನ ತು ತದ್ಭಿನ್ನತ್ವಾದಿನಾ ತತ್ಕಲಾದಿತ್ವೇನ ಪ್ರೋಚ್ಯತೇ । ತಸ್ಮಾತ್ಪರಮಾತ್ಮನಃ ಕಲಾಭೋಕ್ತೃತ್ವಾಭಾವಾತ್ ಅಕಲ ಇತ್ಯೇವೋಚ್ಯತೇ। ಅತ ಏವ ಅಮೃತಶ್ಚ, ಮರಣಸ್ಯ ಭೋಕ್ತೃತ್ವರೂಪಕಲಾಸಂಬಂಧಾಧೀನತ್ವಾದಿತಿ ಭಾವಃ । **ತದೇಷ ಶ್ಲೋಕಃ** । ತತ್ ಪರಮಾತ್ಮಸ್ವರೂಪಮಧಿಕೃತ್ಯ ವಕ್ಷ್ಯಮಾಣಶ್ಲೋಕಃ ಪ್ರವೃತ್ತ ಇತ್ಯರ್ಥಃ ।

## ಅನುವಾದ

ಜೀವನಲ್ಲಿ ಷೋಡಶಕಲೆಗಳನ್ನು ಹೇಳಿ, ಪರಮಾತ್ಮನು ಈ ರೀತಿಯಿಲ್ಲದಿರುವುದರಿಂದ ಕಲಾರಹಿತ-ನೆಂದೂ, ತನ್ಮೂಲಕವೇ ಮುಮುಕ್ಷುವಿನಿಂದ ಪ್ರಾಪ್ಯನೆಂದೂ ಪ್ರತಿಪಾದಿಸುತ್ತಾನೆ· ಸ ಯಥೇಮಾಃ ಇತಿ । ಹರಿಯುತ್ತಿರುವ ಗಂಗಾದಿ ನದಿಗಳು ಹೇಗೆ **ಸಮುದ್ರಾಯಣಾಃ** - ಇಲ್ಲಿ ಅಯನಶಬ್ದವು ಆಧಾರರೂಪಾರ್ಥವನ್ನು ಬೋಧಿಸಿ, ಸಮುದ್ರಾತ್ಮಕವಾಗಿ ಸಮುದ್ರಕ್ಕಿಂತಲೂ ಬೇರೆಯಾದ ಸ್ಥಿತಿ ಪ್ರತಿಪತ್ತಿ ಮಾಡಲು ಅನರ್ಹವಾಗಿ ಆತ್ಮತ್ವವನ್ನು ಪ್ರತಿಪಾದಿಸುತ್ತದೆ· ಸಮುದ್ರವನ್ನು ಸೇರಿ **ಅಸ್ತಂ ಗಚ್ಛಂತಿ** - ಅದೃಶ್ಯವಾಗುವುವೋ, ಹೊರತು ಸಮುದ್ರದಲ್ಲಿ (ನೀರಿನ) ಹೆಚ್ಚಳ ಮೊದಲಾದ ವಿಕಾರಗಳನ್ನು ಉಂಟುಮಾಡಲಾರವೋ, ಆ ಗಂಗಾ, ಯಮುನಾ ಮುಂತಾದ ನದಿಗಳ ಹೆಸರುಗಳಾಗಲೀ, ಕಪ್ಪು ಬಿಳುಪು ಮೊದಲಾದ ಹಿಂದಿನ ರೂಪಗಳಾಗಲೀ ಸಮುದ್ರವನ್ನು ಸೇರಿದ ನಂತರ ಉಳಿಯಲಾರವು · ಬೇರೆ ಹೆಸರೂ, ರೂಪವೂ ಬರುತ್ತದೆಯೆಂದು ಅಭಿಪ್ರಾಯ· ಅದನ್ನೇ ಉದಾಹರಿಸುತ್ತಾನೆ· 'ಸಮುದ್ರ ಇತ್ಯೇವಂ ಪ್ರೋಚ್ಯತೇ' ಎಂದು· ಸಮುದ್ರವನ್ನು ಸೇರಿದ ನದೀಸಮೂಹವು ಸಮುದ್ರ ಎಂದೇ ಕರೆಸಿ-ಕೊಳ್ಳುತ್ತದೆಯೇ ವಿನಹ ಗಂಗೆಯೆಂದಾಗಲೀ, ಯಮುನೆಯೆಂದಾಗಲೀ ಅಲ್ಲ · ಸ ಯಥಾ - ಉದಾಹರಣೆ ಹೇಗೋ ಎಂದರ್ಥ·

**ಏವಮೇವಾಸ್ಯ ಇತಿ** । ಹಾಗೆಯೇ ಈ **ಪರಿದ್ರಷ್ಟುಃ** ಅನುಭವಿಸುವ ಜೀವನ ಭೋಗಸಾಧನ-ಗಳಾದ ಹದಿನಾರುಕಲೆಗಳು ನಿರುಪಾಧಿಕವಾದ ಪುರುಷಶಬ್ದದಿಂದ ಹೆಸರಿಸಲ್ಪಟ್ಟ ವಾಸುದೇವನನ್ನು ಹೊಂದಿ ಅದೃಶ್ಯವಾಗುತ್ತವೆ · ಕತ್ತಿಯ ಅಲಗುಗಳು ಹೇಗೆ ಶಿಲೆಗೆ ತಾಗಿ ಕುಂಠಿತವಾಗುತ್ತವೆಯೋ, ಹಾಗೆ ಈ ಕಲೆಗಳು ಭೋಗ ಸಮರ್ಥವಾಗಲಾರವು ಎಂದರ್ಥ· ಈ ವಿಷಯದಲ್ಲಿ ಕಾರಣವನ್ನು ಹೇಳುತ್ತಾರೆ - 'ಪುರುಷಾಯಣಾ' ಎಂದು - ಪುರುಷ ನಿಶ್ಚಯಕ್ಕೆ ಅಧೀನವಾಗಿ ಸ್ವರೂಪ, ಸ್ಥಿತಿ ಮತ್ತು ಪ್ರವೃತ್ತಿಗಳುಳ್ಳವು ಜೀವನಿಗೆ ಸಂಬಂಧಿಸಿದಂತೆ ಈ ಕಲೆಗಳಿಗೆ ಹೇಗೆ ಭೋಗ್ಯ, ಭೋಗಸ್ಥಾನ, ಭೋಗೋಪಕರಣಗಳೆಂಬ

ನಾಮರೂಪ ವೈವಿಧ್ಯವಿದೆಯೋ ಹಾಗೆಯೇ ಪರಮಾತ್ಮನವಿಷಯದಲ್ಲಿ ಇರಲು ಸಾಧ್ಯವಿಲ್ಲ· ಅದನ್ನೇ ತೋರಿಸಿ-ಕೊಡುತ್ತಾನೆ: 'ಪುರುಷ ಇತ್ಯೇವಂ ಪ್ರೋಚ್ಯತೇ' ಎಂದು· ಪರಮಾತ್ಮನನ್ನು ಬಿಟ್ಟು ಇರುವಂತೆ ಅರಿವುಗಳನ್ನು ಪಡೆಯಲಾರದುದರಿಂದ 'ಪುರುಷ' ಎಂದೇ ಕರೆಯಲಾಗಿದೆಯೇ ಹೊರತು, ಅವುಗಳಿಗಿಂತಲೂ ಬೇರೆಯಾಗಿರುವುದರಿಂದ ಆ ಕಲೆಗಳಿಂದ ಕೂಡಿದವನು ಎಂದು ಕರೆಯಲಾಗಿಲ್ಲ· ಆದುದರಿಂದ ಪರಮಾತ್ಮನು ಕಲೆಗಳನ್ನು ಭೋಗಿಸದ ಕಾರಣ, ಅಕಲ ಎಂದು ಹೊಗಳಲಾಗಿದೆ· ಹಾಗಾಗಿಯೇ ಅಮರನವನು· ಏಕೆಂದರೆ ಮರಣವು ಭೋಕ್ತೃರೂಪವಾದ ಕಲಾಸಂಬಂಧಕ್ಕೆ ಅಧೀನವಾಗಿದೆ ತದೇಷ ಶ್ಲೋಕಃ - ಹೇಳಲಿರುವ ಮಂತ್ರವು ಪರಮಾತ್ಮ ಸ್ವರೂಪವನ್ನು ಕುರಿತದ್ದಾಗಿದೆ·

## ಮಂತ್ರ - ೬

अरा इव रथनाभौ कला यस्मिन् प्रतिष्ठिताः ।
तं वेद्यं पुरुषं वेद मा वो मृत्युः परिव्यथा इति ।। 6 ।।

ಅರಾ ಇವ ರಥನಾಭೌ ಕಲಾ ಯಸ್ಮಿನ್ ಪ್ರತಿಷ್ಠಿತಾಃ ।
ತಂ ವೇದ್ಯಂ ಪುರುಷಂ ವೇದ ಮಾ ವೋ ಮೃತ್ಯುಃ
ಪರಿವ್ಯಥಾ ಇತಿ ॥

### ಪ್ರತಿಪದಾರ್ಥ

**ರಥನಾಭೌ** - ರಥಚಕ್ರದ ಗುಂಭದಲ್ಲಿ, **ಅರಾ ಇವ** - ಅರೆಕಾಲುಗಳಂತೆ, **ಯಸ್ಮಿನ್**- ಯಾರ(ಪರಮಾತ್ಮನ)ಲ್ಲಿ, **ಕಲಾಃ** - ಹದಿನಾರು ಕಲೆಗಳು, **ಪ್ರತಿಷ್ಠಿತಾಃ** - ನೆಲೆಸಿರುವುವೋ, **ತಮ್**- ಪ್ರಸಿದ್ಧನಾದ, **ವೇದ್ಯಮ್** - ಮುಮುಕ್ಷುಗಳಿಗೆ ಪ್ರಾಪ್ಯನಾದ, **ಪುರುಷಮ್** - ಭಗವಂತನನ್ನು, **ವೇದ** - ತಿಳಿಯಿರಿ· **ವಃ** - (ಅಂತಹ) ನಿಮ್ಮನ್ನು, **ಮೃತ್ಯುಃ** - (ಸಂಸಾರರೂಪ) ಮೃತ್ಯುವು, **ಮಾ ಪರಿವ್ಯಥಾಃ ಇತಿ** - ಬಾಧೆಯನ್ನು ಉಂಟುಮಾಡದಿರಲಿ ಎಂದು·

### ತಾತ್ಪರ್ಯ

ರಥಚಕ್ರದ ಮಧ್ಯದಲ್ಲಿರುವ ಗುಂಭದಲ್ಲಿ ಎಲ್ಲ ಅರೆಕಾಲುಗಳೂ ಹೋಗಿ ಸೇರುತ್ತವೆ· ಇದರಂತೆ ಹದಿನಾರುಕಲೆಗಳೂ ಪರಮಾತ್ಮನಲ್ಲಿ ನೆಲೆಸುತ್ತವೆ· ಈ ಎಲ್ಲ ಕಲೆಗಳ ಮೂಲ ನೆಲೆಯಾದ ಭಗವಂತನು ಮುಮುಕ್ಷುಗಳಿಗೆ ಪ್ರಾಪ್ಯನು· ಜಗತ್ಕಾರಣನಾದ ಅವನನ್ನು ಉಪಾಸಿಸಿದರೆ ನೀವು ಸಂಸಾರವೆಂಬ ಮೃತ್ಯುವಿನಿಂದ ಪಾರಾಗುತ್ತೀರಿ· ಅಲ್ಲಿನ ಬಾಧೆಗಳಿಂದ ಮುಕ್ತರಾಗುತ್ತೀರಿ·

## ರಂಗರಾಮಾನುಜಭಾಷ್ಯ

**ಅರಾ ಇವ ರಥನಾಭೌ ಇತಿ ।** ಯಸ್ಮಿನ್ ಪ್ರತಿಷ್ಠಿತಾಃ - ಪದಾತ್ಮಿಕಾಃ ಯದುಪಾದಾನಿಕಾಃ ಇತ್ಯರ್ಥಃ । ಶಿಷ್ಟಂ ಸ್ಪಷ್ಟಮ್ । **ತಂ ವೇದ್ಯಂ ಪುರುಷಂ ವೇದ ।** ಯಥಾವತ್ ತಮೇವ ಪುರುಷಂ ಮುಮುಕ್ಷುವೇದ್ಯಮವಗಚ್ಛತ । ಬ್ರಹ್ಮಜ್ಞಾನಸ್ಯ ಫಲಮಾಹ - **ಮಾ ವೋ ಮೃತ್ಯುಃ ಪರಿವ್ಯಥಾಃ ।** ಬ್ರಹ್ಮಜ್ಞಾನಂ ಯುಷ್ಮಾಕಂ ಪರಿತೋ ವ್ಯಥಾಃ, ಮೃತ್ಯುರ್ಮಾಕಾರ್ಷೀದಿತ್ಯರ್ಥಃ ॥

## ಅನುವಾದ

**ಅರಾ ಇವ ರಥನಾಭೌ ಇತಿ ।** ಯಾವುದು ಮೂಲಾಧಾರವಾಗುಳ್ಳವೋ ಆ ಅರೆಕಾಲುಗಳು · ಉಳಿದುದು ಸ್ಪಷ್ಟವಾಗಿದೆ · **ತಂ ವೇದ್ಯಂ ಪುರುಷಂ ವೇದ ।** ಅದೇ ಪರಮಾತ್ಮನನ್ನು ಸಮಂಜಸವಾಗಿ ಮುಮುಕ್ಷುಗಳಿಂದ ತಿಳಿಯಲ್ಪಡಬೇಕಾದವನೆಂದು ತಿಳಿಯಿರಿ ಬ್ರಹ್ಮಜ್ಞಾನದ ಪ್ರಯೋಜನವನ್ನು ಹೇಳುತ್ತಾನೆ · **ಮಾ ವೋ ಮೃತ್ಯುಃ ಪರಿವ್ಯಥಾಃ ಇತಿ ।** ಬ್ರಹ್ಮಜ್ಞಾನವು ನಿಮಗೆ ಯಾವ ರೀತಿಯಿಂದಲೂ ಮೃತ್ಯುವನ್ನು ಉಂಟು ಮಾಡದಿರಲಿ·

## ಭಾಷ್ಯಸಾರ

ರಥನಾಭಿ ಎಂದು ರಥಚಕ್ರದ ಮಧ್ಯಭಾಗಕ್ಕೆ ಹೆಸರು · ಇದನ್ನು ಗುಂಭವೆಂದೂ ಕರೆಯುತ್ತಾರೆ · ಗುಂಭವು ಸುತ್ತಲೂ ರಂಧ್ರಗಳನ್ನೊಳಗೊಂಡ ಮರದ ವಸ್ತು · ಇದರಲ್ಲಿ ಒಂದಾಗುವ ಅರೆಕಾಲುಗಳು ನಾಭಿಗೂ, ನೇಮಿಗೂ ಸಂಬಂಧವನ್ನು ಕಲ್ಪಿಸುತ್ತವೆ · ಇವು ನಾಭಿಯನ್ನು ಭದ್ರವಾಗಿ ಕಟ್ಟಿಕೊಂಡಿರುತ್ತವೆ, ಅದರಲ್ಲಿ ಸೇರಿರುತ್ತವೆ · ಇವುಗಳಂತೆ ಹದಿನಾರುಕಲೆಗಳೂ ಪರಮಪುರುಷನಲ್ಲಿ ನೆಲೆಸಿರುತ್ತವೆ · ಈ ಕಲೆಗಳಿಗೆ ಮೂಲಕಾರಣ ಪರಮಾತ್ಮನೇ, ಅವನು ಅವುಗಳಿಗೆ ಪ್ರಾಪ್ಯಸ್ಥಾನ; ಉಪಾದಾನ ಕಾರಣ· ಹಾಗಾಗಿ ಅವನಲ್ಲಿಯೇ ಲೀನವಾಗುತ್ತವೆ·

ಇಂತಹ ಮಹಾಮಹಿಮನಾದ ಪರಮಪುರುಷನನ್ನು ತಿಳಿದವರು ಅವನ ಸಾಕ್ಷಾತ್ಕಾರದ ಪ್ರಭಾವದಿಂದ ಮೃತ್ಯುವನ್ನು ಮೀರುತ್ತಾರೆ· ಸಂಸಾರಗರ್ತವನ್ನು ಉತ್ತರಿಸುತ್ತಾರೆ· ನಿರ್ಭೀಕರೂ ಅಮರರೂ ಆಗುತ್ತಾರೆ

## ಮಂತ್ರ - ೭

तान् होवाच - एतावदेवाहमेतत् परं ब्रह्म
वेद, नातः परमस्तीति ॥ 7 ॥

ತಾನ್ ಹೋವಾಚ - ಏತಾವದೇವಾಹಮೇತತ್ ಪರಂ ಬ್ರಹ್ಮ
ವೇದ, ನಾತಃ ಪರಮಸ್ತೀತಿ ॥

## ಪ್ರತಿಪದಾರ್ಥ

(ಆಚಾರ್ಯಪಿಪ್ಪಲಾದರು) **ತಾನ್** - ಶಿಷ್ಯರಿಗೆ, **ಅಹಮ್** - ನಾನು, **ಏತತ್** - ಈ, **ಪರಂ ಬ್ರಹ್ಮ** - ಪರಬ್ರಹ್ಮವನ್ನು, **ಏತಾವದೇವ** - ಇಷ್ಟೇ, **ವೇದ** - ತಿಳಿದಿರುತ್ತೇನೆ· **ಅತಃ** - ಈ ಪರಬ್ರಹ್ಮಕ್ಕಿಂತಲೂ, **ಪರಮ್** - ಶ್ರೇಷ್ಠವಾದುದು· **ನಾಸ್ತಿ** - (ಯಾವುದೂ) ಇಲ್ಲ **ಇತಿ** - ಎಂದು, **ಉವಾಚ ಹ** - ಹೇಳಿದರು·

## ತಾತ್ಪರ್ಯ

ಪರಬ್ರಹ್ಮದ ವಿಷಯದಲ್ಲಿ ತನಗೆ ಇಷ್ಟೇ ತಿಳಿದಿದೆ· ಪರಬ್ರಹ್ಮವಸ್ತುವಿಗಿಂತಲೂ ಉತ್ಕೃಷ್ಟವಾದುದು ಈ ಲೋಕದಲ್ಲಿ ಯಾವುದೂ ಇಲ್ಲ ಎಂಬುದಾಗಿ ಆಚಾರ್ಯಪಿಪ್ಪಲಾದರು ಸುಕೇಶ ಮೊದಲಾದ ಆರು ಜನ ಶಿಷ್ಯರಿಗೆ ಹೇಳಿದರು·

## ರಂಗರಾಮಾನುಜಭಾಷ್ಯ

**ತಾನ್ ಹೋವಾಚ ಇತಿ ।** ತಾನ್ ಸುಕೇಶಾದೀನ್ ಷಡಪಿ ಶಿಷ್ಯಾನ್ ಪ್ರತಿ ಏತದುವಾಚ - ಅಹಮೇತಾವದೇವ ಪರಂ ಬ್ರಹ್ಮ ಜಾನಾಮಿ । ಪರಬ್ರಹ್ಮವಿಷಯೇ ಮಮೈತಾವದೇವ ಜ್ಞಾನಮ್। ಇತೋಽಧಿಕಂ ನಾಸ್ತೀತ್ಯರ್ಥಃ ॥

## ಅನುವಾದ

**ತಾನ್ ಹೋವಾಚ ಇತಿ ।** ಸುಕೇಶ ಮೊದಲಾದ ಆರು ಜನ ಶಿಷ್ಯರಿಗೆ ಈ ಮಾತನ್ನು ಹೇಳಿದರು ನನಗೆ ಪರಬ್ರಹ್ಮದವಿಷಯದಲ್ಲಿ ತಿಳಿದಿರುವುದಿಷ್ಟೇ· ಪರಬ್ರಹ್ಮದವಿಷಯದಲ್ಲಿ ನನಗೆ ಇಷ್ಟೇ ಜ್ಞಾನವಿದೆ ಇದಕ್ಕೂ ಹೆಚ್ಚು ಇಲ್ಲವೆಂದು ಅಭಿಪ್ರಾಯ·

## ಭಾಷ್ಯಸಾರ

ಆಚಾರ್ಯರು ಆರು ಜನ ಶಿಷ್ಯರಿಗೆ ಹೇಳುತ್ತಾರೆ· ಪ್ರಿಯ ಅಂತೇವಾಸಿಗಳೇ; ಪರಬ್ರಹ್ಮವಸ್ತುವಿನ ಬಗ್ಗೆ ನಾನೂ ಇಷ್ಟೇ ತಿಳಿದಿರುತ್ತೇನೆ· ಇದರಿಂದ ನಾನು ತಿಳಿಯಬೇಕಾಗಿರುವುದು ಇನ್ನೂ ಉಳಿದಿದೆ

ಬ್ರಹ್ಮವು ಸ್ವರೂಪದಿಂದಲೂ, ಗುಣಗಳಿಂದಲೂ ಪರಿಚ್ಛೇದವಿಲ್ಲದ ಹಿರಿದಾದ ವಸ್ತು· ಈ ಸೀಮಾತೀತವಸ್ತುವನ್ನು ಸಂಪೂರ್ಣವಾಗಿ ಅರಿಯುತ್ತೇನೆ ಎಂಬುದು ಅಸಾಧ್ಯವಾದ ಮಾತು· ಒಂದು

ವೇಳೆ ಯಾರಾದರೂ ಅದನ್ನು ಪೂರ್ತಿಯಾಗಿ ತಿಳಿದಿರುವೆನು ಎಂದು ಭಾವಿಸಿದರೆ, ಅವನು ಮೋಸ ಹೋದಂತೆಯೇ ಸರಿ· ಬ್ರಹ್ಮದಸ್ವರೂಪ, ಗುಣಗಳನ್ನು ನಿಶ್ಶೇಷವಾಗಿ 'ಇದು ಇಷ್ಟು' ಎಂದು ವಿವೇಚಿಸಿ ವರ್ಣಿಸಲು ಯಾರಿಂದಲೂ ಸಾಧ್ಯವಿಲ್ಲದುದರಿಂದ ಇದಕ್ಕಿಂತಲೂ ಹೆಚ್ಚು ತಿಳಿಯಲು ಸಾಧ್ಯವಿಲ್ಲ-ವೆಂದು ನಾನು ಹೇಳುತ್ತಿರುವುದು· ಹೀಗಾಗಿ ಪರಬ್ರಹ್ಮವು ಅಪರಿಚ್ಛಿನ್ನ, ಸೀಮಾತೀತ, ಅನಂತ ಎಂಬ ಅರಿವೇ ಬ್ರಹ್ಮದವಿಷಯದಲ್ಲಿ ಪೂರ್ಣಜ್ಞಾನವೆಂದು ತಿಳಿಯಿರಿ·

## ಮಂತ್ರ - ೮

ते तमर्चयन्तः त्वं हि नः पिता योऽस्माक-
मविद्यायाः परं पारं तारयसीति ।।
नमः परमऋषिभ्यो नमः परमऋषिभ्यः ।। 8 ।।

ತೇ ತಮರ್ಚಯಂತಃ ತ್ವಂ ಹಿ ನಃ ಪಿತಾ ಯೋಽಸ್ಮಾಕ-
ಮವಿದ್ಯಾಯಾಃ ಪರಂ ಪಾರಂ ತಾರಯಸೀತಿ ।
ನಮಃ ಪರಮಋಷಿಭ್ಯೋ ನಮಃ ಪರಮಋಷಿಭ್ಯಃ ॥

### ಪ್ರತಿಪದಾರ್ಥ

**ತೇ** - ಸುಕೇಶಾದಿ ಶಿಷ್ಯರು, **ತಮ್** - ಆಚಾರ್ಯಪಿಪ್ಪಲಾದರನ್ನು, **ಅರ್ಚಯಂತಃ** -ಪೂಜಿಸುತ್ತ, **ತ್ವಮ್** - ನೀವು, **ನಃ** - ನಮ್ಮ, **ಪಿತಾ** - ತಂದೆಯಾಗಿರುವಿರಿ· **ಹಿ** - ಏಕೆಂದರೆ, **ಯಃ** - ಯಾವ ನೀವು, **ಅಸ್ಮಾಕಮ್** - ನಮ್ಮ, **ಅವಿದ್ಯಾಯಾಃ** - ಅಜ್ಞಾನದ, **ಪರಮ್** - ಆಚೆಯ, **ಪಾರಮ್**-ತಡಿಯನ್ನು, **ತಾರಯಸಿ** - ದಾಟಿಸಿರುತ್ತೀ, **ಇತಿ** - ಎಂದು (ಗೌರವಿಸುತ್ತಾರೆ) · **ಪರಮಋಷಿಭ್ಯಃ** - ಉತ್ತಮ ಋಷಿಗಳಿಗೆ, **ನಮಃ** - ನಮಸ್ಕಾರ·

### ತಾತ್ಪರ್ಯ

ಪರಬ್ರಹ್ಮದಉಪದೇಶವು ಮುಗಿದ ಮೇಲೆ ಸುಕೇಶ, ಕೌಸಲ್ಯ ಮೊದಲಾದ ಆರು ಜನ ಶಿಷ್ಯರೂ ಗಂಧ-ಪುಷ್ಪಾದಿಗಳಿಂದ ಗುರು ಪಿಪ್ಪಲಾದರನ್ನು ಪೂಜಿಸಿದರು · ಅದರೊಂದಿಗೆ 'ಗುರುಗಳೇ! ನೀವು ನಮಗೆ ತಂದೆಯಾಗಿರುತ್ತೀರಿ · ನಮ್ಮ ಅವಿದ್ಯೆಯನ್ನು ದೂರ ಮಾಡಿದ್ದೀರಿ · ಜ್ಞಾನರೂಪದ ತೀರಕ್ಕೆ ತಲುಪಿಸಿದ್ದೀರಿ· ಆದ್ದರಿಂದ ಪ್ರಾಪ್ಯ-ಪ್ರಾಪಕರಾದ ನಿಮಗೆ ನಮಸ್ಕಾರಗಳು ಎಂದು ಬಿನ್ನವಿಸಿದರು·

## ರಂಗರಾಮಾನುಜಭಾಷ್ಯ

**ತೇ ತಮರ್ಚಯಂತಃ** ಇತಿ । ತೇ ಷಡಪಿ ತಂ ಪಿಪ್ಪಲಾದಮ್, ತ್ವಮಸ್ಮಾಕಂ ಸಂಸಾರಾಕೂಪಾರತೀರ ಪ್ರಾಪಕತಯಾ ಪಿತಾಽಸಿ । ತಸ್ಮಾತ್ ತ್ವತ್ತೋ ಜನ್ಮೈವ ಶ್ರೇಷ್ಠಂ ಜನ್ಮ; ಸ ಹಿ ವಿದ್ಯಾತಸ್ತಂ ಜನಯತಿ । ತಚ್ಛ್ರೇಷ್ಠಂ ಜನ್ಮ ಇತಿ ಶ್ರವಣಾತ್ ಇತಿ **ಅರ್ಚಯಂತಃ** -ಪೂಜಯಂತೋ ಬಭೂವುಃ । **ನಮಃ ಪರಮಋಷಿಭ್ಯೋ ನಮಃ ಪರಮಋಷಿಭ್ಯಃ** । ಉತ್ತರಶಾಂತಿಸ್ಥಾನೇ ಇದಮ್ । ವಾಕ್ಯಾಭ್ಯಾಸಃ ಉಪನಿಷತ್ಸಮಾಪ್ತ್ಯರ್ಥಃ ॥

ನ ಚ 'ಏತಾವದೇವಾಹಂ ಪರಂ ಬ್ರಹ್ಮ ವೇದ, ನಾತಃ ಪರಮಸ್ತಿ' ಇತಿ ಷೋಡಶಕಲಜೀವಾತಿರಿಕ್ತಪರಬ್ರಹ್ಮನಿಷೇಧಃ ಕಿಂ ನ ಸ್ಯಾದಿತಿ ವಾಚ್ಯಮ್ । 'ಅಧಿಕಂ ತು ಭೇದನಿರ್ದೇಶಾತ್' ಇತ್ಯಾದಿಭಿರ್ವಿರೋಧಪ್ರಸಂಗಾತ್ । ತಥಾ ಹಿ ಸ್ಮೃತಿಪಾದೇ - 'ತತ್ತ್ವಮಸಿ', 'ಅಯಮಾತ್ಮಾ ಬ್ರಹ್ಮ' ಇತ್ಯನೇನೇತರಸ್ಯ ಜೀವಸ್ಯೈವ ಬ್ರಹ್ಮಭಾವೋಪದೇಶಾತ್ ಸಾರ್ವಜ್ಞ್ಯಸತ್ಯಸಂಕಲ್ಪತ್ವಾದಿಯುಕ್ತಸ್ಯ ಅನಂತದುಃಖಾಕರಂ ಸ್ವಾನರ್ಥಾವಹಂ ಜಗತ್ ಸೃಜತೋ ಜೀವರೂಪಸ್ಯ ಬ್ರಹ್ಮಣಃ ಆತ್ಮನೋ ಹಿತಾಕರಣಾಹಿತಕರಣಾದಯೋ ದೋಷಾಃ ಪ್ರಾದುಃಷ್ಯುರಿತಿ, 'ಇತರವ್ಯಪದೇಶಾದ್ಧಿತಾಕರಣಾದಿದೋಷಪ್ರಸಕ್ತಿಃ' ಇತಿ ಸೂತ್ರೇಣ ಪೂರ್ವಪಕ್ಷಂ ಕೃತ್ವಾ, 'ಅಧಿಕಂ ತು ಭೇದನಿರ್ದೇಶಾತ್' 'ಅಶ್ಮಾದಿವಚ್ಚ ತದನುಪಪತ್ತಿಃ' ಇತಿ ದ್ವಾಭ್ಯಾಂ ಸೂತ್ರಾಭ್ಯಾಂ ಸಿದ್ಧಾಂತಿತಮ್ । ತುಶಬ್ದಃ ಪೂರ್ವಪಕ್ಷಂ ವ್ಯಾವರ್ತಯತಿ । ಬ್ರಹ್ಮ ಪ್ರತ್ಯಗಾತ್ಮನಃ **ಅಧಿಕಂ** ಭಿನ್ನಮ್ । ಕುತಃ? ಭೇದನಿರ್ದೇಶಾತ್ । 'ಯ ಆತ್ಮನಿ ತಿಷ್ಠನ್ನಾತ್ಮನೋಽಂತರಃ' 'ಪೃಥಗಾತ್ಮಾನಂ ಪ್ರೇರಿತಾರಂ ಚ ಮತ್ವಾ' 'ಸ ಕಾರಣಂ ಕರಣಾಧಿಪಾಧಿಪಃ', 'ತಯೋರನ್ಯಃ ಪಿಪ್ಪಲಂ ಸ್ವಾದ್ವತ್ತಿ ಅನಶ್ನನ್ನನ್ಯೋ ಅಭಿಚಾಕಶೀತಿ', 'ಜ್ಞಾಜ್ಞೌ ದ್ವಾವಜಾವೀಶನೀಶೌ', 'ಪ್ರಾಜ್ಞೇನಾತ್ಮನಾ ಸಂಪರಿಷ್ವಕ್ತಃ' 'ಪ್ರಾಜ್ಞೇನಾತ್ಮನಾಽನ್ವಾರೂಢಃ', 'ಅಸ್ಮಾನ್ಮಾಯೀ ಸೃಜತೇ ವಿಶ್ವಮೇತತ್ತಸ್ಮಿಂಶ್ಚಾನ್ಯೋ ಮಾಯಯಾ ಸನ್ನಿರುದ್ಧಃ', 'ಪ್ರಧಾನಕ್ಷೇತ್ರಜ್ಞಪತಿರ್ಗುಣೇಶಃ', 'ನಿತ್ಯೋ ನಿತ್ಯಾನಾಂ ಚೇತನಶ್ಚೇತನಾನಾಮ್' ಇತ್ಯಾದಿಭಿರ್ವಾಕ್ಯೈರ್ಭೇದನಿರ್ದೇಶಾತ್ । ಕಿಂಚ ಯಥಾ ಅಶ್ಮಲೋಷ್ಟಾದೀನಾಮಖಿಲಹೇಯಪ್ರತ್ಯನೀಕ ಕಲ್ಯಾಣೈಕತಾನಬ್ರಹ್ಮೈಕ್ಯಾನುಪಪತ್ತಿಃ, ಏವಮಖಿಲಹೇಯಾಸ್ಪದಸ್ಯ ಜೀವಸ್ಯ ಅತಾದೃಶೇನ ಬ್ರಹ್ಮಣಾ ಐಕ್ಯಾನುಪಪತ್ತಿರಿತಿ ಸೂತ್ರದ್ವಯಾರ್ಥಃ । ಏವಮ್, 'ಅಧಿಕೋಪದೇಶಾತ್ತು ಬಾದರಾಯಣಸ್ಯೈವಂ ತದ್ದರ್ಶನಾತ್', 'ಭೇದವ್ಯಪದೇಶಾಚ್ಚಾಽನ್ಯಃ', 'ಸುಷುಪ್ತ್ಯುತ್ಕ್ರಾಂತ್ಯೋರ್ಭೇದೇನ', ಉಭಯೇಽಪಿ ಹಿ ಭೇದೇನೈನಮಧೀಯತೇ' 'ಇತ್ಯಾದಿನ್ಯಾಯಾಶ್ಚ ಕುಪ್ಯೇಯುರಿತ್ಯಲಂ ಪ್ರಪಂಚೇನ'।

## ಅನುವಾದ

**ತೇ ತಮರ್ಚಯಂತಃ** ಇತಿ । **ತೇ** - ಆರು ಜನ ಶಿಷ್ಯರೂ **ತಮ್** - ಪಿಪ್ಪಲಾದರನ್ನು, ನೀವು ಸಂಸಾರಸಾಗರದ ತಡಿಗೆ ತಲುಪಿಸಿರುವುದರಿಂದ ನಮ್ಮ ತಂದೆಯಾಗಿರುವಿರಿ · **ಸ ಹಿ ವಿದ್ಯಾತಸ್ತಂ**

**ಜನಯತಿ । ತಚ್ಛ್ರೇಷ್ಠಂ ಜನ್ಮ** - ಅವನು (ಆಚಾರ್ಯನು) ವಿದ್ಯೆಯಿಂದ ಅವನನ್ನು(ಶಿಷ್ಯನನ್ನು) ಹುಟ್ಟಿಸುತ್ತಾನೆ· ಅದೇ ಉತ್ತಮ ಜನ್ಮ ಎಂದು ವೇದದಲ್ಲಿ ಹೇಳಿರುವುದರಿಂದ ನಿಮ್ಮಿಂದಾದ ಜನ್ಮವೇ ಉತ್ತಮ ಜನ್ಮವು · **ಇತಿ ಅರ್ಚಯಂತಃ** - ಹೀಗೆ ಪೂಜಿಸುವವರಾದರು · **ನಮಃ ಪರಮ-ಋಷಿಭ್ಯೋ ನಮಃ ಪರಮಋಷಿಭ್ಯಃ ।** ಉತ್ತರ ಶಾಂತಿಯ ಸ್ಥಳದಲ್ಲಿ ಈ ವಾಕ್ಯವಿದೆ ಉಪನಿಷತ್ತಿನ ಮುಕ್ತಾಯವನ್ನು ಸೂಚಿಸಲು ವಾಕ್ಯದ ಪುನರಾವೃತ್ತಿಯನ್ನು ಮಾಡಲಾಗಿದೆ·

'ಏತಾವದೇವಾಹಂ ಪರಂ ಬ್ರಹ್ಮ ವೇದ, ನಾತಃ ಪರಮಸ್ತಿ' ಎಂಬ ವಾಕ್ಯವು ಹದಿನಾರುಕಲೆಗಳುಳ್ಳ ಜೀವನಿಗಿಂತಲೂ ಅತಿರಿಕ್ತವಾದ ಪರಬ್ರಹ್ಮವನ್ನು ಏಕೆ ನಿಷೇಧಿಸಬಾರದು ಎಂದು (ಯಾರೂ) ಹೇಳು-ವಂತಿಲ್ಲ · ಕಾರಣ, 'ಅಧಿಕಂ ತು ಭೇದನಿರ್ದೇಶಾತ್' ಮುಂತಾದ ಸೂತ್ರಗಳೊಂದಿಗೆ (ಈ ಹೇಳಿಕೆಗೆ) ವಿರೋಧವೇರ್ಪಡುವುದು · ಹೇಗೆಂದರೆ 'ತತ್ವಮಸಿ' - ನೀನು ಅದೇ ಆಗಿರುವೆ · 'ಅಯಮಾತ್ಮಾ ಬ್ರಹ್ಮ' - 'ಈ ಜೀವನು ಬ್ರಹ್ಮವೇ' ಮುಂತಾದ ವಾಕ್ಯಗಳು ಜೀವನಿಗೇ ಬ್ರಹ್ಮಭಾವವನ್ನು ಉಪದೇಶಿಸುತ್ತವೆ (ಈ ವಾಕ್ಯಗಳಿಗೆ ಅನುಗುಣವಾಗಿ ಜೀವನೂ ಬ್ರಹ್ಮವೂ ಒಂದು ಎಂದಾದರೆ) ಎಲ್ಲ ವಿಷಯಗಳ ತಿಳುವಳಿಕೆ, ಹುಸಿಯಾಗದ ಸಂಕಲ್ಪ ಮುಂತಾದ ಗುಣಗಳಿಂದ ಕೂಡಿದ ಅನೇಕ ದುಃಖಗಳಿಗೆ ಆಗರವೂ, ಅನರ್ಥಕಾರಿಯೂ ಆದ ಸಂಸಾರವನ್ನು ಸೃಷ್ಟಿಸುವ, ಜೀವರೂಪವಾದ ಪರಬ್ರಹ್ಮದಲ್ಲಿ ತನಗೆ ಹಿತವನ್ನು ಮಾಡಿಕೊಳ್ಳದಿರುವುದು, ಅಹಿತವನ್ನು ಮಾಡಿಕೊಳ್ಳುವುದು ಮುಂತಾದ ದೋಷಗಳು ತಲೆದೋರ-ಬಹುದು · ಈ ಅಭಿಪ್ರಾಯದಿಂದ ಸೃತಿಪಾಠದಲ್ಲಿ 'ಇತರ ವ್ಯಪದೇಶಾದ್ಧಿತಾಕರಣಾದಿದೋಷಪ್ರಸಕ್ತಿಃ' ಎಂಬ ಸೂತ್ರದಿಂದ ಪೂರ್ವಪಕ್ಷವನ್ನು ಮಾಡಿ, 'ಅಧಿಕಂ ತು ಭೇದನಿರ್ದೇಶಾತ್' ಮತ್ತು 'ಅಶ್ಮಾದಿವಚ್ಚ ತದನುಪಪತ್ತಿಃ' ಎಂಬ ಎರಡು ಸೂತ್ರಗಳಿಂದ ಸಿದ್ಧಾಂತವನ್ನು ಮಾಡಲಾಗಿದೆ · (ಸಿದ್ಧಾಂತ ಸೂತ್ರದಲ್ಲಿರುವ) 'ತು' ಶಬ್ದವು ಪೂರ್ವಪಕ್ಷದ ನಿವೃತ್ತಿಯನ್ನು ಬೋಧಿಸುತ್ತದೆ·

ಬ್ರಹ್ಮವು ಜೀವನಿಗಿಂತಲೂ ಅಧಿಕಮ್ - ಬೇರೆಯಾದುದು · ಏಕೆ? ಬೇರೆಯೆಂದು ಉಲ್ಲೇಖವಿರು-ವುದರಿಂದ 'ಯ ಆತ್ಮನಿ ತಿಷ್ಠನ್ನಾತ್ಮನೋಽಂತರಃ' - ಯಾರು ಜೀವನಲ್ಲಿ ಇದ್ದು, ಜೀವನಿಗಿಂತಲೂ ಬೇರೆಯಾದವನೋ; 'ಪೃಥಗಾತ್ಮಾನಂ ಪ್ರೇರಿತಾರಂ ಚ ಮತ್ವಾ' - 'ಜೀವನನ್ನೂ, ಅವನನ್ನು ಪ್ರೇರಿಸುವ ಪರಮಾತ್ಮನನ್ನೂ ಪ್ರತ್ಯೇಕವಾಗಿ ಅನುಸಂಧಾನ ಮಾಡಿ', 'ಸ ಕಾರಣಂ ಕರಣಾಧಿಪಾಧಿಪಃ' - 'ಜೀವನಿಗೆ ಅಧಿಪತಿಯಾದ ಅವನು (ಪರಮಾತ್ಮನು) ಕಾರಣನು', 'ತಯೋರನ್ಯಃ ಪಿಪ್ಪಲಂ ಸ್ವಾದ್ವತ್ತಿ ಅನಶ್ನನ್ನನ್ಯೋಽಭಿಚಾಕಶೀತಿ' - 'ಅವರಲ್ಲಿ ಒಬ್ಬನಾದ ಜೀವನು ಪಕ್ವವಾದ ಕರ್ಮಫಲವನ್ನು ಅನುಭವಿಸು-ತ್ತಾನೆ, ಮತ್ತೊಬ್ಬನು (ಪರಮಾತ್ಮನು) ಅನುಭವಿಸದೇ ಪ್ರಕಾಶಿಸುತ್ತಾನೆ' 'ಜ್ಞಾಜ್ಞೌ ದ್ವಾವಜಾವೀಶನೀಶೌ' - 'ಸರ್ವಜ್ಞನೂ, ಅಜ್ಞನೂ ಆದ ಈಶ - ಜೀವರು ಇಬ್ಬರು', 'ಪ್ರಾಜ್ಞೇನಾಽಽತ್ಮನಾ ಸಂಪರಿಷ್ವಕ್ತಃ' - (ಜೀವನು) ಸರ್ವಜ್ಞನಾದ ಪರಮಾತ್ಮನಿಂದ ಆಲಿಂಗಿಸಲ್ಪಟ್ಟವನು · 'ಪ್ರಾಜ್ಞೇನಾತ್ಮನಾಽನ್ವಾರೂಢಃ' - '(ಜೀವನು) ಸರ್ವಜ್ಞನಾದ ಪರಮಾತ್ಮನಿಂದ ಸಂಬಂಧವಿಶೇಷವನ್ನು ಪಡೆದವನು', 'ಅಸ್ಮಾನ್ ಮಾಯೀ ಸೃಜತೇ ವಿಶ್ವಮೇತತ್ತಸ್ಮಿಂಶ್ಚಾನ್ಯೋ ಮಾಯಯಾ ಸನ್ನಿರುದ್ಧಃ' - ಮಾಯಾಪ್ರೇರಕನಾದ ಪರಮಾತ್ಮನು

ವಿಶ್ವವನ್ನು ಸೃಜಿಸುತ್ತಾನೆ; ಮತ್ತೊಬ್ಬನು (ಜೀವನು) ಅವನ ಮಾಯೆಯಿಂದ ಮೋಹಿತನಾಗಿದ್ದಾನೆ' · 'ಪ್ರಧಾನಕ್ಷೇತ್ರಜ್ಞಪತಿರ್ಗುಣೇಶಃ' 'ಪ್ರಕೃತಿಜೀವರಿಗೆ ಶೇಷಿಯಾದವನೂ, ಜ್ಞಾನ ಮುಂತಾದ ಆರುಗುಣ- ಗಳಿಂದ ತುಂಬಿದವನೂ,(ಪರಮಾತ್ಮ), 'ನಿತ್ಯೋ ನಿತ್ಯಾನಾಂ ಚೇತನಶ್ಚೇತನಾನಾಮ್' - 'ಅನಿತ್ಯರಲ್ಲಿ ನಿತ್ಯ ಚೇತನರಿಗೂ ಚೇತನ' ಇತ್ಯಾದಿ ಶ್ರುತಿವಾಕ್ಯಗಳಿಂದ ಜೀವ-ಬ್ರಹ್ಮಭೇದವನ್ನು ಉಲ್ಲೇಖಿಸಲಾಗಿದೆಯಷ್ಟೇ: ಅಷ್ಟೇ ಅಲ್ಲದೆ, ಕಲ್ಲು, ಮರ ಮುಂತಾದ ಜಡವಸ್ತುಗಳೂ ಎಲ್ಲ ಹೀನಗುಣಗಳಿಗೆ ವಿರುದ್ಧವಾದ ಮಂಗಳಗುಣಗಳಿಗೆ ಏಕೈಕ ಆಕರನಾದ ಪರಬ್ರಹ್ಮವೂ ಹೇಗೆ ಒಂದಾಗಲಾರವೋ ಹಾಗೆಯೇ ಎಲ್ಲ ಹೇಯಗುಣಗಳಿಗೆ ಆಶ್ರಯನಾದ ಜೀವನಿಗೂ-ಪರಬ್ರಹ್ಮನಿಗೂ ಐಕ್ಯವು ಏರ್ಪಡಲಾರದು· ಇದು ಎರಡು ಸೂತ್ರಗಳ ಅರ್ಥ · ಹೀಗೆ 'ಅಧಿಕೋಪದೇಶಾತ್ತು ಬಾದರಾಯಣಸ್ಯೈವಂ ತದ್ದರ್ಶನಾತ್', 'ಭೇದ- ವ್ಯಪದೇಶಾಚ್ಚಾನ್ಯಃ', 'ಸುಷುಪ್ತ್ಯುತ್ಕ್ರಾಂತ್ಯೋರ್ಭೇದೇನ', 'ಉಭಯೇಽಪಿ ಹಿ ಭೇದೇನೈನಮಧೀಯತೇ' ಮುಂತಾದ ನಿಯಮಗಳೂ ವಿರುದ್ಧವಾಗಬಹುದು· ಇಲ್ಲಿಗೆ ವಿವರಣೆ ಸಾಕು·

## ಭಾಷ್ಯಸಾರ

ಆಚಾರ್ಯರ ಉಪದೇಶ ಅಮೋಘವಾದುದು · ಅವರ ಅನುಗ್ರಹವು ಅಪಾರವಾದುದು · ಎಳೆ ಎಳೆಯಾಗಿ ವಿಷಯದ ಸಿಕ್ಕನ್ನು ಬಿಡಿಸಿ, ರಹಸ್ಯತತ್ತ್ವವನ್ನು ಸುಲಭವಾಗಿ ತಿಳಿಸಿಕೊಟ್ಟಿದ್ದಾರೆ · ಶಿಷ್ಯರ ಸಂಶಯ-ವಿಪರ್ಯಯಗಳು ದೂರವಾಗಿವೆ · ಅವರಲ್ಲಿ ನೈಜದ ಅರಿವು ಕುದುರಿದೆ · ಬೆಳಕು ಬೆಳಗಿದೆ ಅಜ್ಞತೆ ಕರಗಿ ಮರೆಯಾಗಿದೆ· ಈಗ ಕತ್ತಲೆಯಿಂದ ಬೆಳಕಿಗೆ, ತಮಸ್ಸಿನಿಂದ ತೇಜಸ್ಸಿಗೆ ಸಾಗುವ ಜ್ಞಾನ- ನೌಕೆ ಪ್ರಾಪ್ತವಾಗಿದೆ · ಆದರಿಂದ ಅವರು ಕೃತಕೃತ್ಯರಾದರು; ಸಿದ್ಧರಾದರು · ಮಹನೀಯರೂ, ಅಭಿನಂದನೀಯರೂ ಆಗಿ ಸಂದರು·

ಶಿಷ್ಯರ ಧನ್ಯತೆಯ ಮಹಾತೃಪ್ತಿಯಿಂದ ಭಾರವಾಗಿ ಮೇಲೆದ್ದು, ಗುರು ಪಿಪ್ಪಲಾದರ ಪಾದಪದ್ಮಗಳಿಗೆ ಪುಷ್ಪಾಂಜಲಿಯನ್ನಿಟ್ಟು, ತಲೆಬಾಗಿ ಭಕ್ತಿಯಿಂದ ಅವರನ್ನು ಅರ್ಚಿಸಿದರು · ಕಳೆದುಕೊಳ್ಳಲು ಸಾಧ್ಯವಿಲ್ಲದ ಕೃತಜ್ಞತೆಯ ನಾಲ್ಕು ಮಾತುಗಳನ್ನು ಉದ್ಗರಿಸಿದರು· 'ಪೂಜ್ಯರೇ! ನೀವೇ ನಮಗೆ ತಂದೆ· ಜನ್ಮಕೊಟ್ಟ ತಂದೆ ದೇಹವನ್ನು ಮಾತ್ರ ಅನುಗ್ರಹಿಸುತ್ತಾನೆ · ಅದು ಮೃತ್ಯು-ಮರಣಗಳಿಗೆ ಆಸ್ಪದ- ವಾದುದು · ದುಃಖ-ದುಮ್ಮಾನಗಳಿಗೆ ಉತ್ಪತ್ತಿ ಸ್ಥಾನವು · ಆದರೆ ನೀವು ಹುಟ್ಟು-ಸಾವುಗಳ ಚಕ್ರವ್ಯೂಹ- ದಿಂದ ಪಾರಾಗುವ ವಿದ್ಯೆಯನ್ನೇ ಕರುಣಿಸಿದ್ದೀರಿ · ಆದುದರಿಂದ ದೇಹಕೊಟ್ಟ ತಂದೆಗಿಂತಲೂ ಉತ್ತಮರು · ಆ ಸಂಸಾರವೆಂಬ ಸಮುದ್ರದ ಆಚೆತಡಿಗೆ ತಲುಪಿಸಿದ ಪರಮ ಋಷಿಗಳಿಗೆ (ನಿಮಗೆ) ಅನಂತ ನಮನಗಳು·

ಆರನೆಯ ಪ್ರಶ್ನೆ ಮುಗಿದುದು

ಪ್ರಶ್ನೋಪನಿಷತ್ ಸಮಾಪ್ತ

ಸಂಸ್ಕೃತಮೂಲ-ಕನ್ನಡಮೂಲ-ಪ್ರತಿಪದಾರ್ಥ-ತಾತ್ಪರ್ಯ
ರಂಗರಾಮಾನುಜಭಾಷ್ಯ-ಭಾಷಾಂತರ-ಭಾಷ್ಯಸಾರಗಳು
ಪೂರ್ಣವಾದುವು·

☆ ⁂ ☆

# ಪ್ರಶ್ನೋಪನಿಷತ್

ಅನುಬಂಧ

೧

# ಮಂತ್ರಗಳ ಅಕಾರಾದಿ


| | |
|---|---|
| ಅತ್ರೈಷ ದೇವಃ ಸ್ವಪ್ನೇ | ೪ - ೫ |
| ಅಥ ಕಬಂಧೀ ಕಾತ್ಯಾಯನಃ | ೧ - ೩ |
| ಅಥ ಯದಿ ದ್ವಿಮಾತ್ರೇಣ | ೫ - ೪ |
| ಅಥ ಹೈನಂ ಕೌಸಲ್ಯಶ್ಚಾಽಽಶ್ವಲಾಯನಃ | ೩ - ೧ |
| ಅಥ ಹೈನಂ ಭಾರ್ಗವೋ ವೈದರ್ಭಿಃ | ೨ - ೧ |
| ಅಥ ಹೈನಂ ಶೈಬ್ಯಸ್ಸತ್ಯಕಾಮಃ | ೫ - ೧ |
| ಅಥ ಹೈನಂ ಸುಕೇಶಾ ಭಾರದ್ವಾಜಃ | ೬ - ೧ |
| ಅಥ ಹೈನಂ ಸೌರ್ಯಾಯಣೀ | ೪ - ೧ |
| ಅಥಾಽಽದಿತ್ಯಃ ಉದಯನ್ | ೧ - ೬ |
| ಅಥೈಕಯೋರ್ಧ್ವ ಉದಾನಃ | ೩ - ೭ |
| ಅಥೋತ್ತರೇಣ ತಪಸಾ ಬ್ರಹ್ಮಚರ್ಯೇಣ | ೧ - ೧೦ |
| ಅನ್ನಂ ವೈ ಪ್ರಜಾಪತಿಃ | ೧ - ೧೪ |
| ಅರಾ ಇವ ರಥನಾಭೌ ಕಲಾಃ | ೬ - ೬ |
| ಅರಾ ಇವ ರಥನಾಭೌ ಪ್ರಾಣೇ | ೨ - ೬ |
| ಅಹೋ ರಾತ್ರೋ ವೈ ಪ್ರಜಾಪತಿಃ | ೧ - ೧೩ |
| ಆತ್ಮನ ಏಷ್ವೈಷ ಪ್ರಾಣೋ ಜಾಯತೇ | ೩ - ೩ |
| ಆದಿತ್ಯೋ ಹ ವೈ ಪ್ರಾಣಃ | ೧ - ೫ |
| ಆದಿತ್ಯೋ ಹ ವೈ ಬಾಹ್ಯಃ ಪ್ರಾಣಃ | ೩ - ೮ |
| ಇಂದ್ರಸ್ತ್ವಂ ಪ್ರಾಣ ತೇಜಸಾ | ೨ - ೯ |
| ಉತ್ಪತ್ತಿಮಾಯತಿಂ ಸ್ಥಾನಂ | ೩ - ೧೨ |
| ಋಗ್ಭಿರೇತಂ ಯಜುರ್ಭಿಃ | ೫ - ೭ |
| ಏಷ ಹಿ ದ್ರಷ್ಟಾ ಸ್ಪ್ರಷ್ಟಾ ಶ್ರೋತಾ | ೪ - ೯ |
| ಏಷೋಽಗ್ನಿಸ್ತಪತ್ಯೇಷಸೂರ್ಯಃ | ೨ - ೫ |
| ತದ್ಯೇಹ ತತ್ ಪ್ರಜಾಪತಿವ್ರತಂ | ೧ - ೧೫ |
| ತಸ್ಮೈ ಸ ಹೋವಾಚ ಅತಿಪ್ರಶ್ನಾನ್ ಪೃಚ್ಛಸಿ | ೩ - ೨ |

| | |
|---|---|
| ತಸ್ಮೈ ಸ ಹೋವಾಚ - ಆಕಾಶೋ ಹ ವಾ· | ೨ - ೨ |
| ತಸ್ಮೈ ಸ ಹೋವಾಚ ಇಹ | ೬ - ೨ |
| ತಸ್ಮೈ ಸ ಹೋವಾಚ ಏತದ್ವೈ | ೫ - ೨ |
| ತಸ್ಮೈ ಸ ಹೋವಾಚ - ಪ್ರಜಾಕಾಮಃ | ೧ - ೪ |
| ತಸ್ಮೈ ಸ ಹೋವಾಚ - ಯಥಾಗಾರ್ಗ್ಯ | ೪ - ೨ |
| ತಾನ್ ವರಿಷ್ಠಃ ಪ್ರಾಣ ಉವಾಚ | ೨ - ೩ |
| ತಾನ್ ಹ ಸ ಋಷಿರುವಾಚ | ೧ - ೨ |
| ತಾನ್ ಹೋವಾಚ ಏತಾವದೇವ | ೬ - ೭ |
| ತಿಸ್ರೋ ಮಾತ್ರಾ ಮೃತ್ಯುಮಂತ್ಯಃ | ೫ - ೬ |
| ತುಭ್ಯಂ ಪ್ರಾಣ ಪ್ರಜಾಸ್ತ್ವಿಮಾಃ | ೨ - ೭ |
| ತೇಜೋ ಹ ವಾ ಉದಾನಃ | ೩ - ೯ |
| ತೇ ತಮರ್ಚಯಂತಃ ತ್ವಂ ಹಿ | ೬ - ೮ |
| ತೇಽಶ್ರದ್ಧಧಾನಾ ಬಭೂವುಃ | ೨ - ೪ |
| ತೇಷಾಮಸೌವಿರಜೋ ಬ್ರಹ್ಮಲೋಕಃ | ೧ - ೧೬ |
| ದೇವನಾಮಸಿ ವಹ್ನಿತಮಃ | ೨ - ೮ |
| ಪಂಚಪಾದಂ ಪಿತರಂ ದ್ವಾದಶಾಕೃತಿಂ | ೧ - ೧೧ |
| ಪರಮೇವಾಕ್ಷರಂ ಪ್ರತಿಪದ್ಯತೇ | ೪ - ೧೦ |
| ಪಾಯೂಪಸ್ಥೇ ಅಪಾನಂ | ೩ - ೫ |
| ಪೃಥಿವೀ ಚ ಪೃಥಿವೀಮಾತ್ರಾ ಚ | ೪ - ೮ |
| ಪ್ರಾಣಸ್ಯೇದಂ ವಶೇ ಸರ್ವಂ | ೨ - ೧೩ |
| ಪ್ರಾಣಾಗ್ನಯ ಏವ ಏತಸ್ಮಿನ್ಪುರೇ | ೪ - ೩ |
| ಮಾಸೋ ವೈ ಪ್ರಜಾಪತಿಃ | ೧ - ೧೨ |
| ಯಃ ಪುನರೇತಂ ತ್ರಿಮಾತ್ರೇಣ | ೫ - ೫ |
| ಯ ಏವಂ ವಿದ್ವಾನ್ ಪ್ರಾಣಂ ವೇದ | ೩ - ೧೧ |
| ಯಚ್ಚಿತ್ತಸ್ತೇನೈಷ ಪ್ರಾಣಮಾಯಾತಿ· | ೩ - ೧೦ |
| ಯಥಾ ತ್ವಮಭಿವರ್ಷಸಿ | ೨ - ೧೦ |
| ಯಥಾ ಸಮ್ರಾಡೇವಾಧಿಕೃತಾನ್ ವಿನಿಯುಂಕ್ತೇ· | ೩ - ೪ |
| ಯದುಚ್ಛ್ವಾಸ ನಿಶ್ವಾಸೌ | ೪ - ೪ |
| ಯಾ ತೇ ತನೂರ್ವಾಚಿಪ್ರತಿಷ್ಠಿತಾ | ೨ - ೧೨ |
| ವ್ರಾತ್ಯಃ ತ್ವಂ ಪ್ರಾಣೈಕ ಋಷಿರತ್ತಾ· | ೨ - ೧೧ |
| ವಿಜ್ಞಾನಾತ್ಮಾ ಸಹ ದೇವೈಶ್ಚ | ೪ - ೧೧ |
| ವಿಶ್ವರೂಪಂ ಹರಿಣಂ ಜಾತವೇದಸಂ | ೧ - ೮ |

| | |
|---|---|
| ಸಂವತ್ಸರೋ ವೈ ಪ್ರಜಾಪತಿಃ | ೧ - ೯ |
| ಸ ಈಕ್ಷಾಂಚಕ್ರೇ ಕಸ್ಮಿನ್ನಹಂ | ೬ - ೩ |
| ಸ ಏಷ ವೈಶ್ವಾನರೋ ವಿಶ್ವರೂಪಃ | ೧ - ೭ |
| ಸ ಪ್ರಾಣಮಸೃಜತ ಪ್ರಾಣಾಃ | ೬ - ೪ |
| ಸ ಯಥಾ ಸೋಮ್ಯ ವಯಾಂಸಿ | ೪ - ೭ |
| ಸ ಯಥೇಮಾ ನದ್ಯಃ | ೬ - ೫ |
| ಸ ಯದಾ ತೇಜಸಾಽಭಿಭೂತೋ ಭವತಿ | ೪ - ೬ |
| ಸ ಯದ್ಯೇಕಮಾತ್ರಮಭಿಧ್ಯಾಯೀತ | ೫ - ೩ |
| ಸುಕೇಶಾ ಚ ಭಾರದ್ವಾಜಃ | ೧ - ೧ |
| ಹೃದಿ ಹ್ಯೇಷ ಆತ್ಮಾ ಅತ್ರೈತತ್ | ೩ - ೬ |


★ ** ★

೨

# ಪ್ರಮಾಣಾಕರ ಅಕಾರಾದಿಸೂಚಿ

| | |
|---|---|
| ಅಶರೀರಂ ವಾವ | ಛಾಂ· ಉ· ೮ - ೧೨ - ೧ |
| ಅಸ್ಮಾನ್ ಮಾಯೀ | ಶ್ವೇ· ಉ· ೪ - ೯ |
| ಆದಿತ್ಯಾಚ್ಚಂದ್ರಮಸಮ್ | ಛಾಂ· ಉ· ೪ - ೧೫ - ೫ |
| ಇಮಮಾತ್ಮಾನಂ | ಬೃ· ಉ· ೬ - ೩ - ೩೮ |
| ಈಕ್ಷತಿಕರ್ಮವ್ಯಪದೇಶಾತ್ | ಬ್ರ· ಸೂ· ೧ - ೩ - ೧೨ |
| ಏತಸ್ಮಾಜ್ಜಾಯತೇ | ಮುಂ· ಉ ೧ - ೩ - ೧೨ |
| ಏವಮೇವೇಮಮಾತ್ಮಾನಂ | ಬೃ· ಉ ೬ - ೩ - ೩೮ |
| ಕಿಂ ಪ್ರಜಯಾ | ಬೃ· ಉ ೬ - ೪ - ೨೨ |
| ಜ್ಞಾಜ್ಞೌ ದ್ವಾವಜೌ | ಶ್ವೆ· ಉ ೧ - ೯ |
| ತದ್ಯಥಾರಥಸ್ಯಾರೇಷು | ಕೌ· ಉ· ೩ - ೬೧ |
| ತದ್ವಿಷ್ಣೋಃ ಪರಮಂ | ಸುಬಾ· ೬ |
| ತಮುತ್ಕ್ರಾಮಂತಂ | ಬೃ· ಉ· ೬ - ೪ - ೨೨ |
| ತಯೋರನ್ಯಃ | ಮುಂ· ಉ· ೩ - ೧ - ೧ |
| ತೇಜಸಾ ಹಿ ತದಾ | ಛಾಂ· ಉ ೮ - ೬ - ೩ |
| ದ್ವೆ ಆಹವನೀಯೇ | ತೈ· ಬ್ರಾ·· ೨ - ೧ - ೩ |
| ಧೂಮೋರಾತ್ರಿಃ | ಭ· ಗೀ· ೮ - ೨೫ |
| ನಿತ್ಯೋ ನಿತ್ಯಾನಾಮ್ | ಶ್ವೆ· ಉ· ೬· ಕ· ಉ· ೫ ೧೩ |
| ಪೃಥಗಾತ್ಮಾನಮ್ | ಶ್ವೇ· ಉ· ೧ - ೬ |
| ಪ್ರಧಾನಕ್ಷೇತ್ರಜ್ಞಪತಿಃ | ಶ್ವೆ· ಉ· ೬ - ೧೬ |
| ಪ್ರಾಜ್ಞೇನಾತ್ಮನಾ | ಬೃ· ಉ· ೬ - ೩ - ೩೫ |
| ಪ್ರಾಣಸ್ತೇಜಸಿ | ಛಾಂ· ಉ ೬ - ೮ - ೬ |
| ಭಗವಾನಿತಿ ಶಬ್ದೋಽಯಮ್ | ನ್ಯ· ಪು· |
| ಭೂತಾಂತರಸಂಸೃಷ್ಟಮೇವತೇಜಃ | ಶ್ರೀಭಾ· ೪ - ೨ - ೬ |
| ಮನಸ್ಕನ್ಯತ್ | ಹಿಂತೋ |
| ಮಾಮುಪೇತ್ಯತು | ಭ· ಗೀ ೮ - ೧೬ |
| ಯ ಆತ್ಮನಿ ತಿಷ್ಠನ್ | ಬೃ· ಉ· ಮಾಧ್ಯಂ ೩-೭-೩೯ |

| | |
|---|---|
| ಯ ಇಮೇ ಗ್ರಾಮೇ | ಛಾಂ· ಉ· ೫ - ೧೦ - ೩ |
| ವಾಙ್ಮನಸಿ | ಛಾಂ· ಉ· ೬ - ೮ - ೬ |
| ಸ ಕಾರಣಂ ಕರಣಾಧಿಪಾಧಿಪಃ | ಶ್ವೇ · ಉ· ೬ - ೯ |
| ಸತಾಸೋಮ್ಯ | ಛಾಂ· ಉ· ೬- ೮ - ೧ |
| ಸೋಽಧ್ಯಕ್ಷೇ | ಬ್ರ· ಸೂ· ೪ - ೨ - ೪ |

೩

## ಭಗವನ್ನಾಮಗಳು

| | |
|---|---|
| ಅಕಲಃ | ೬ - ೫ |
| ಅಕ್ಷರಮ್ | ೪ - ೧೦,೧೧ |
| ಅಕ್ಷರಾತ್ಮಾ | |
| ಅಗ್ನಿಃ | ೧ -೭, ೨ -೫ |
| ಅಚ್ಛಾಯಮ್ | ೪ - ೧೦ |
| ಅಜರಮ್ | ೫ - ೭ |
| ಅಭಯಮ್ | ೧ -೧೦, ೫ -೭ |
| ಅಮೃತಮ್ | ೧-೧೦, ೨-೫, ೫-೭ |
| ಅಮೃತಃ | ೬ - ೫ |
| ಅಲೋಹಿತಮ್ | ೪ - ೧೦ |
| ಅಶರೀರಮ್ | ೪ - ೧೦ |
| ಅಸತ್ | ೨ - ೫ |
| ಆತ್ಮಾ | ೨ - ೩ |
| ಆದಿತ್ಯಃ | ೧ - ೬ |
| ಇಂದ್ರಃ | ೨ - ೯ |
| ಜಾತವೇದಾಃ | ೧ - ೮ |
| ಜೀವಃ | ೨ - ೧, ೫ |
| ದ್ವಾದಶಾಕೃತಿಮ್ | ೧ - ೧೧ |
| ಪಂಚಪಾದಮ್ | ೧ - ೧೧ |
| ಪರಮ್ | ೫ - ೭ |

| | |
|---|---|
| ಪರಂಬ್ರಹ್ಮ | ೧ - ೧ |
| ಪರ್ಜನ್ಯಃ | ೨ - ೫ |
| ಪರಪುರುಷಃ | ೫ - ೫ |
| ಪರಮಾತ್ಮಾ | |
| ಪರಾತ್ಪರಃ | ೫ - ೫ |
| ಪರಾಯಣಮ್ | ೧ - ೧೦, ೮ |
| ಪುರಿಶಯಃ | ೫ - ೫ |
| ಪುರೀಷಣಮ್ | ೧ - ೧೧ |
| ಪುರುಷಃ | ೬ - ೫, ೬ |
| ಪುರುಷಾಯಣಃ | ೬ - ೫ |
| ಪ್ರಜಾಪತಿಃ | ೧ - ೪, ೯, ೧೨, ೧೩, ೧೪ |
| ಪ್ರಾಣಂ | ೩ - ೧೧ |
| ಪ್ರಾಣಃ | ೧ - ೭, ೮ |
| ಪ್ರಾಣಾನಾಮಾಯತನಮ್ | ೧ - ೧೦ |
| ಪೃಥಿವೀ | ೨ - ೨ |
| ಬ್ರಹ್ಮಲೋಕಃ | ೧ - ೧೬ |
| ಮಘವಾನ್ | ೨ - ೫ |
| ರಯಿಃ | ೨ - ೫ |
| ರುದ್ರಃ | ೨ - ೯ |
| ವಾಯುಃ | ೨ - ೨, ೫ |
| ವಿಜ್ಞಾನಾತ್ಮಾ | ೪ - ೧೧ |
| ವಿರಜಃ | ೧ - ೧೬ |
| ವಿಶ್ವರೂಪಃ | ೧ - ೭ |
| ವೈಶ್ವಾನರಃ | ೧ - ೭ |
| ವ್ಯಾನಃ | ೩ - ೬ |
| ಶಾಂತಮ್ | ೫ - ೭ |
| ಶುಭ್ರಮ್ | ೪ -೧೦, ೧೧ |
| ಸತ್ | ೨ - ೫ |
| ಸೂರ್ಯಃ | ೧-೮, ೨ -೯ |
| ಹರಿಃ | ೧ - ೮ |
| ಹರಿಣಂ | ೧ - ೮ |

# ವ್ಯಕ್ತಿಸೂಚಿ

| | | |
|---|---|---|
| ಕಬಂಧೀ ಕಾತ್ಯಾಯನಃ | - | ಕಾತ್ಯಾಯನ ಗೋತ್ರದಲ್ಲಿ ಜನಿಸಿದ ಕಬಂಧೀ |
| ಕೌಸಲ್ಯಶ್ಚಾಽಽಶ್ವಲಾಯನಃ | - | ಅಶ್ವಲಾಯನನ ಮಗ ಕೌಸಲ್ಯ |
| ಭಗವಾನ್ ಪಿಪ್ಪಲಾದಃ | - | ಪೂಜ್ಯರಾದ ಪಿಪ್ಪಲಾದರು |
| ಭಾರ್ಗವೋ ವೈದರ್ಭಿಃ | - | ಭಾರ್ಗವಗೋತ್ರದಲ್ಲಿ ಜನಿಸಿದ ವೈದರ್ಭಿ |
| ಶೈಬ್ಯಃ ಸತ್ಯಕಾಮಃ | - | ಶಿಬಿಯ ಮಗ ಸತ್ಯಕಾಮ |
| ಸುಕೇಶಾ ಭಾರದ್ವಾಜಃ | - | ಭರದ್ವಾಜನ ಮಗ ಸುಕೇಶ |
| ಸೌರ್ಯಾಯಣೀ ಗಾರ್ಗ್ಯಃ | - | ಗರ್ಗಗೋತ್ರದಲ್ಲಿ ಜನಿಸಿದ ಸೌರ್ಯಾಯಣೀ |
| ಹಿರಣ್ಯನಾಭಃ ಕೌಸಲ್ಯೋ ರಾಜಪುತ್ರಃ | - | ಕೋಸಲದೇಶದ ರಾಜಕುಮಾರ ಹಿರಣ್ಯನಾಭ |

⋙ ☆ ⋙

# ಮಂತ್ರದಲ್ಲಿನ ವಿಶೇಷ ಶಬ್ದಾರ್ಥ

| | |
|---|---|
| ಅಕ್ಷರಮ್ - | ಪರಬ್ರಹ್ಮ (ಕ್ಷರಣ ಶೂನ್ಯನಾದವನು) |
| ಅಗ್ನಿಃ - | ಮುನ್ನಡೆಸುವವನು, ಪರಮಪದಕ್ಕೆ ಒಯ್ಯುವವನು |
| ಅಧ್ಯಾತ್ಮಮ್ - | ದೇಹದೊಳಗಿದ್ದು ಮಾಡುವ ಧಾರಣೆ |
| ಅಮೂರ್ತಮ್ - | ಅವಯವರಹಿತ, ಆಕಾರರಹಿತ |
| ಆತತಮ್ - | ವ್ಯಾಪ್ತವಾಗಿರುವುದು (ಸಂಬದ್ಧವಾಗಿರುವುದು) |
| ಆದಿತ್ಯಃ - | ಭೋಕ್ತೃವಾದ ಜೀವ |
| ಆದ್ಯಮ್ - | ಅನುಭವಿಸುವುದಕ್ಕೆ ಯೋಗ್ಯವಾದುದು |
| ಇಷ್ಟಮ್ - | ಭಗವದಾರಾಧನೆ |
| ಕವಿಃ - | ಕ್ರಾಂತದರ್ಶೀ |
| ಚಂದ್ರಮಾಃ - | ಭೋಗ್ಯವರ್ಗ |
| ಜಾತವೇದಸಮ್ - | ವೇದಗಳಿಗೆ ಜನಕನಾದ ಪರಮಾತ್ಮ |
| ಜೀವಘನಃ - | ಕರ್ಮನಿಮಿತ್ತವಾದ ಶರೀರವುಳ್ಳವನು |
| ತಪಃ - | ಶರೀರಶೋಷಣೆ |
| ದಕ್ಷಿಣಮ್ - | ಧೂಮಾದಿ ಮಾರ್ಗ |
| ದ್ವಾದಶಾಕೃತಿಮ್ - | ಮೇಷಾದಿ ಹನ್ನೆರಡುಮಾಸಗಳನ್ನೇ ಅವಯವವಾಗುಳ್ಳವನು |
| ಪಂಚಪಾದಮ್ - | ಪರಮಾತ್ಮ ಯಾರಿಗೆ ವತ್ಸರ, ಸಂವತ್ಸರ, ಪರಿವತ್ಸರ, ಇದಾವತ್ಸರ, ಮತ್ತು ಅನುವತ್ಸರ ಎಂಬ ಐದು ಪಾದಗಳನ್ನುಳ್ಳವನು ಅಥವಾ ಹೇಮಂತಶಿಶಿರ ಋತುಗಳನ್ನು ಪಾದವಾಗಿ ಉಳ್ಳವನು· |
| ಪಿತೃಯಾಣಃ - | ಪಿತೃಗಳು ಚಂದ್ರಲೋಕಕ್ಕೆ ಹೋಗುವ ಮಾರ್ಗ (ಧೂಮಾದಿ ಮಾರ್ಗ) |
| ಪುರೀಷಿಣಮ್ - | ಬ್ರಹ್ಮಗೋಲದಲ್ಲಿರುವವನು |

| | |
|---|---|
| ಪುರುಷಾಯಣಃ - | ಪುರುಷಸಂಕಲ್ಪಾಧೀನವಾದ ಸ್ವರೂಪಸ್ಥಿತಿ ಮತ್ತು ಪ್ರವೃತ್ತಿಯುಳ್ಳವನು |
| ಪ್ರಜಾಪತಿಃ - | ಶ್ರೀಮನ್ನಾರಾಯಣ |
| ಪ್ರಾಣಃ - | ಪರಮಾತ್ಮಾ |
| ಬಾಣಃ - | ಶರೀರ |
| ಬ್ರಹ್ಮಚರ್ಯಮ್ - | ಎಂಟುವಿಧವಾದ ಮೈಥುನಗಳನ್ನು ತ್ಯಾಗ-ಮಾಡಿದವನು |
| ಬ್ರಹ್ಮನಿಷ್ಠಾಃ - | ಪರಮಾತ್ಮನಲ್ಲಿ ಮಾತ್ರ ನಂಬಿಕೆಯುಳ್ಳವರು |
| ಬ್ರಹ್ಮಪರಾಃ - | ವೇದೈಕ ಶರಣರು |
| ಬ್ರಹ್ಮಿಷ್ಠಃ - | ಬ್ರಹ್ಮಜ್ಞಾನಿ |
| ಮೂರ್ತಮ್ - | ಪೃಥಿವೀ, ಜಲ, ತೇಜಸ್ಸು |
| ರಥನಾಭಿಃ - | ಚಕ್ರದ ಮಧ್ಯಪ್ರದೇಶ |
| ರಯಿಃ - | ಭೋಗ್ಯವಸ್ತುಗಳು |
| ವಹ್ನಿತಮಃ - | ದೇವತೆಗಳಿಗೆ ಹವಿಸ್ಸನ್ನು ಒಯ್ಯುವುದರಲ್ಲಿ ಶ್ರೇಷ್ಠನು |
| ವಿಶ್ವರೂಪಮ್ - | ಪ್ರಪಂಚವೇ ಶರೀರವಾಗಿ ಉಳ್ಳವನು |
| ವೈಶ್ವಾನರಃ - | ಪರಮಾತ್ಮಾ· |
| ವ್ರಾತ್ಯಃ - | ಸಂಸ್ಕಾರಹೀನಬ್ರಾಹ್ಮಣ |
| ಷೋಡಶಕಲಾಃ - | ಹದಿನಾರುಕಲೆಗಳು |
| ಸಪ್ತಾರ್ಚಿಷಃ - | ಕಾಲೀ, ಕರಾಲೀ ಮೊದಲಾದ ಏಳು ಜ್ವಾಲೆಗಳು |
| ಸೋಮಲೋಕಃ - | ಸ್ವರ್ಗಲೋಕ |
| ಹರಿಣಮ್ - | ಶ್ರೀಮನ್ನಾರಾಯಣ |

❋ ❋ ❋

# ಪ್ರಶ್ನೋಪನಿಷದರ್ಥಸಂಗ್ರಹಃ

೧. ಸುಕೇಶಾಶ್ಶೈಬ್ಯಸೌರ್ಯಾಯಣ್ಯಾಶ್ವಲಾಯನಭಾರ್ಗವಾಃ ।
ಕಬಂಧೀ ಚೇತಿ ಷಟ್ ಪ್ರಾಪ್ತಾಃ ಪಿಪ್ಪಲಾದಮೃಷೀಶ್ವರಮ್ ॥

ಸುಕೇಶ, ಶೈಬ್ಯ, ಸೌರ್ಯಾಯಣೀ, ಆಶ್ವಲಾಯನ, ಭಾರ್ಗವ ಮತ್ತು ಕಬಂಧೀ ಎಂಬ ಆರುಜನ ಶಿಷ್ಯರು, ಋಷಿಪುಂಗವರಾದ ಪಿಪ್ಪಲಾದರನ್ನು ಸಮೀಪಿಸಿದರು.

೨. ತತ್ರೋತ್ತರೋತ್ತರಸ್ಯೇಹ ಪ್ರಶ್ನಸ್ಸಹ ಸಮಾಧಿನಾ ।
ಪೂರ್ವಂ ಪೂರ್ವಂ ನಿಬಧ್ಯೋಽಸ್ತಿ ಷಟ್ ಪ್ರಶ್ನಾಃ ಪ್ರಶ್ನಗಾಸ್ತತಃ ॥

ಶಿಷ್ಯರ ಉತ್ತರೋತ್ತರ ಪ್ರಶ್ನೆಗೆ ಆಚಾರ್ಯಪಿಪ್ಪಲಾದರ ಉತ್ತರವನ್ನು ಕ್ರಮವಾಗಿ ಇಲ್ಲಿ ಅಳವಡಿಸಲಾಗಿದೆ.

೩. ಕುತಃ ಪ್ರಜಾಃ ಪ್ರಜಾಯಂತ ಇತಿ ಪ್ರಶ್ನೇ ಕಬಂಧಿನಃ ।
ಪ್ರಜಾಕಾಮಾತ್ ರಯಿಪ್ರಾಣಸೃಜೋ ಜಾತಾಃ ಪ್ರಜಾಪತೇಃ ॥

ಈ ಲೋಕದಲ್ಲಿ ಪ್ರಜೆಗಳು ಹೇಗೆ ಮತ್ತು ಎಲ್ಲಿಂದ ಜನಿಸುತ್ತಾರೆ? ಎಂಬುದು ಕಬಂಧಿಯ ಪ್ರಶ್ನೆ ಇದಕ್ಕೆ ಉತ್ತರ ಪ್ರಜಾಕಾಮನಾದ ಪ್ರಜಾಪತಿಯು ತಪಸ್ಸನ್ನು ಆಚರಿಸಿ ರಯಿ ಮತ್ತು ಪ್ರಾಣ ಎಂಬ ಜೋಡಿಯನ್ನು ಉತ್ಪಾದಿಸಿದನು - ಎಂಬುದು.

೪. ಅನ್ನರೂಪಾತ್ ಪ್ರಜಾಃ, ಯಾಸಾಂ ಸಂಸರಂತೀಂದುಸಂಗತಾಃ ।
ಶುದ್ಧಾಸ್ತ್ವಾದಿತ್ಯಗಾ ಬ್ರಹ್ಮ ಯಾನ್ತೀತ್ಯಾಹ ಸ್ಮ ತಂ ಗುರುಃ ॥

ಅಚೇತನವನ್ನು ಶರೀರವಾಗಿ ಹೊಂದಿರುವ ಸರ್ವೇಶ್ವರನಿಂದ ಚೇತನರಾದ ಪ್ರಜೆಗಳು ಉಂಟಾಗುತ್ತಾರೆ, ಇವರಲ್ಲಿ ಚಂದ್ರಲೋಕಕ್ಕೆ ಹೋದವರು ಈ ಪ್ರಕೃತಿಮಂಡಲದಲ್ಲಿ ಸಂಸಾರಿಗಳಾಗುತ್ತಾರೆ . ನಿಷ್ಕಾಮರಾಗಿ ಸೂರ್ಯಮಂಡಲವನ್ನು ಹೊಂದಿದವರು ಮಾತ್ರ ಪರಬ್ರಹ್ಮವನ್ನು ಹೊಂದುತ್ತಾರೆ . ಹೀಗೆಂದು ಗುರುಗಳು ಉತ್ತರವನ್ನು ನೀಡಿದರು.

೫· ಭಾರ್ಗವಂ ತ್ವಾಹ ದೇವೇಷು ಮಹಾಭೂತೇಂದ್ರಿಯಾತ್ಮಸು ।
ಪ್ರಜಾಧೃತ್ಸು ವರಿಷ್ಠತ್ವಂ ಪ್ರಾಣಸ್ಯೈತತ್ಸ್ತವಂ ಚ ತೈಃ ॥

ಭಾರ್ಗವನೆಂಬ ಶಿಷ್ಯನಿಗೋಸ್ಕರ ಪ್ರಜೆಗಳನ್ನು ಭರಿಸುವ, ಪಂಚಭೂತಗಳು ಪ್ರಾಣವಾಯು, ಇಂದ್ರಿಯ-ಗಳು ಮುಂತಾದವುಗಳಿಗೆ ಅಭಿಮಾನಿಗಳಾದ ದೇವತೆಗಳಲ್ಲಿ ಮುಖ್ಯಪ್ರಾಣದೇವತೆಗೆ ಶ್ರೇಷ್ಠತ್ವವನ್ನೂ, ಉಳಿದ ದೇವತೆಗಳು ಪ್ರಾಣದೇವತೆಯನ್ನು ಹೊಗಳಿ ಹಾಡಿದ ವಿಧಾನವನ್ನೂ ಗುರುವು ಉಪದೇಶಿಸಿದರು·

೬· ಉತ್ಪತ್ತಿಮಾಗತಿಂ ದೇಹೇ ಸ್ಥಾನಾನ್ಯೇತತ್ಕ್ರಿಯಾಭಿದಾಮ್ ।
ಆದಿತ್ಯಾದ್ಯಾತ್ಮತಾಂಚಾಹ ಪ್ರಾಣಸ್ಯೈವಾಶ್ವಲಾಯನಮ್ ॥

ಗುರುವು ಆಶ್ವಲಾಯನನ್ನು ಕುರಿತು ಮೇಲೆ ಹೇಳಿದ ಪ್ರಾಣವಾಯುವಿಗೆ, ಪರಮಾತ್ಮನಿಂದ ಉತ್ಪತ್ತಿಯನ್ನೂ, ದೇಹದೊಳಗೆ ಮನಸ್ಸು ಮುಂತಾದವುಗಳ ಜೊತೆ ಬೆರೆಯುವಿಕೆಯನ್ನೂ ಐದು ಪ್ರಾಣವಾಯುಗಳಿಗೆ ಬೇರೆ ಬೇರೆ ಜಾಗಗಳನ್ನೂ ಪ್ರಾಣ, ಅಪಾನ, ಸಮಾನ, ವ್ಯಾನ ಮತ್ತು ಉದಾನ-ವಾಯುಗಳ ಕ್ರಿಯಾಭೇದವನ್ನೂ ಮತ್ತು ಪ್ರಾಣಕ್ಕೆ ಆದಿತ್ಯದೇವತೆಯನ್ನೂ, ಅಪಾನಕ್ಕೆ ಪೃಥಿವೀದೇವತೆ-ಯನ್ನೂ ಸಮಾನಕ್ಕೆ ಆಕಾಶದೇವತೆಯನ್ನು, ವ್ಯಾನಕ್ಕೆ ವಾಯು ದೇವತೆಯನ್ನೂ ಉದಾನಕ್ಕೆ ತೇಜೋ ದೇವತೆಯನ್ನೂ ಆಧಾರವಾಗಿ ಹೇಳಿದರು·

೭· ಸುಪ್ತೌ ಸ್ವಪನ್ತಿ ಜಾಗ್ರನ್ತಿ ಸ್ವಪ್ನಿನಂ ಸುಖಿನಂ ತನೌ ।
ಪರಾತ್ಮನಿ ಪ್ರತಿಷ್ಠಾನಂ ಜ್ಞಾತುಃ ಸೌರ್ಯಾಯಣಿಂ ಜಗೌ ॥

ಶರೀರವು ನಿದ್ರಿಸುವಾಗ ಕೆಲಸವಿಲ್ಲದೆ ಮಲಗುವ ಇಂದ್ರಿಯಗಳನ್ನೂ, ಎಚ್ಚರದಿಂದಿರುವ ಜಾಠರಾಗ್ನಿ ಮತ್ತು ಪ್ರಾಣವಾಯುಗಳನ್ನೂ, ಸ್ವಪ್ನವನ್ನು ಅನುಭವಿಸುವ ಜೀವಾತ್ಮನನ್ನೂ, ಅವನು ಒಳ್ಳೆಯ ನಿದ್ರೆಯಲ್ಲಿ ಸುಖವಾಗಿ ಪರಮಾತ್ಮನನ್ನು ಅನುಭವಿಸುವಂತೆಯೂ, ಆಗ ಜೀವನಿಗೆ ಪರಮಾತ್ಮನಲ್ಲಿ ಅಸ್ತಿತ್ವವನ್ನೂ ಅಶ್ವಲಾಯನನ್ನು ಕುರಿತು ಆಚಾರ್ಯರು ತಿಳಿಸಿದರು·

೮· ಶೈಬ್ಯಂ ತ್ವೇಕದ್ವಿತ್ರಿಮಾತ್ರತಾರೋಪಾಸ್ತೌ ಗತಿಃ ಕ್ರಮಾತ್ ।
ನೃಲೋಕಪುನರಾವರ್ತಿಲೋಕಮೋಕ್ಷಪದೇಷ್ವಿತಿ ॥

ಶೈಬ್ಯನನ್ನು ಕುರಿತು - ಒಂದು, ಎರಡು ಮತ್ತು ಮೂರು ಮಾತ್ರಾಕಾಲಗಳ ಪ್ರಣವದಿಂದ (ಓಂಕಾರದಿಂದ) ಪರಮಾತ್ಮನನ್ನು ಉಪಾಸಿಸುವ ಕ್ರಮವನ್ನೂ ಅದರಿಂದ ಕ್ರಮವಾಗಿ, ಮನುಷ್ಯಲೋಕ-

ಪ್ರಾಪ್ತಿ, ಸ್ವರ್ಗಲೋಕಪ್ರಾಪ್ತಿ, ಮೋಕ್ಷಸ್ಥಾನಪ್ರಾಪ್ತಿ ಎಂದು ಉಪದೇಶಿಸಿದರು·

೯· ಸ ಷೋಡಶಕಲೋ ಯಸ್ಮಿನ್ ಪ್ರಭ್ವಃ ಪ್ರಾಣಾದಯಃ ಕಲಾಃ ।
ಅಸ್ತಂ ಗಚ್ಛಂತ್ಯಮೂಃ ಪುಂಸಿ ಪರ ಇತ್ಯಾಹ ಚಾದಿಮಮ್ ॥

ಯಾವನಲ್ಲಿ ಪ್ರಾಣವಾಯು ಮೊದಲಾದ ಅಂಶಗಳು (ಕಲೆಗಳು) ಪ್ರಭುತ್ವವನ್ನು ಹೊಂದಿರುವುವೋ ಆ ಜೀವನು ಹದಿನಾರು ಅಂಶಗಳಿಂದ ಕೂಡಿದವನಾಗುತ್ತಾನೆ· ಪರಮಾತ್ಮನಲ್ಲಿ ಈ ಹದಿನಾರು ಕಲೆಗಳು ತಮ್ಮ ಸಾಮರ್ಥ್ಯವನ್ನು ಕಳೆದುಕೊಂಡು ಅಸ್ತವಾಗುತ್ತವೆ ಎಂಬುದಾಗಿ ಉಪದೇಶಿಸಿದರು·

೧೦· ಇತ್ಥಂ ಪ್ರಶ್ನೋಪನಿಷದಃ ಷಟ್ಸು ಪ್ರಶ್ನೇಷು ವರ್ಣಿತಾಃ ।
ಸ್ರಷ್ಟಾ, ಪ್ರಾಣೋಽಸ್ಯ ಭೂಮಾಽಜ್ಞಪ್ರತಿಷ್ಠಾ ಪ್ರಣವಃ ಕಲಾಃ ॥

ಈ ರೀತಿಯಲ್ಲಿ ಪ್ರಶ್ನೋಪನಿಷತ್ತಿನ ಆರು ಪ್ರಶ್ನೆಗಳಲ್ಲಿ, ಸೃಷ್ಟಿಕರ್ತಾ, ಮುಖ್ಯಪ್ರಾಣ, ಅದರ ಹಿರಿಮೆ, ಜೀವಾತ್ಮನ ಇರುವಿಕೆ, ಓಂಕಾರ ಮತ್ತು ಜೀವನ ಕಲೆಗಳು ವಿಚಾರಿಸಲ್ಪಟ್ಟವು·

* * *

೭

# ಭಾಷ್ಯಕಾರರ ಚರಿತ್ರೆ

## ೧. ರಾಮಾನಂದ

ಕಾಲ : ಕ್ರಿ. ಶ. ೧೩೦೦ ಅಥವಾ ಕ್ರಿ. ಶ. ೧೫ನೆಯ ಶತಮಾನ.

ದೇಶ : ಹುಟ್ಟೂರು-ಪ್ರಯಾಗ. ವಾಸ-ಕಾಶಿಯ ಪಂಚಗಂಗಾಘಾಟ್.

ಕೃತಿಗಳು : ದಶೋಪನಿಷದ್‌ಭಾಷ್ಯ, ಬ್ರಹ್ಮಸೂತ್ರಭಾಷ್ಯ, ಗೀತಾಭಾಷ್ಯ, ಶ್ರೀವೈಷ್ಣವಮತಾಬ್ಜಭಾಸ್ಕರ ಇತ್ಯಾದಿ

ಬಿರುದು : 'ವಾದೀಭಪಂಚಾನನ' 'ವೈರಾಗ್ಯವಾರಿಧಿ'

ಸಾಧನೆಗಳು : ಪ್ರಸ್ಥಾನತ್ರಯಭಾಷ್ಯರಚನೆ, ಭಾರತಾದ್ಯಂತಸಂಚಾರ, ಶ್ರೀಸಂಪ್ರದಾಯದ ರಕ್ಷಣೆ, ಪ್ರಚಾರ

ಕುಲಗೋತ್ರ : ಬೋಧಾಯನಶ್ರೀವೈಷ್ಣವಸಂಪ್ರದಾಯ, ವಿದ್ಯಾಗುರು ಮತ್ತು ಸನ್ಯಾಸದೀಕ್ಷಾಗುರು-ರಾಘವಾನಂದ

ಇಷ್ಟದೈವ : ಶ್ರೀರಾಮಚಂದ್ರ ಮತ್ತು ಸೀತಾದೇವಿ

## ೨. ರಂಗರಾಮಾನುಜಮುನಿ

ಹೆಸರು : ರಾಮಾನುಜ, ಶ್ರೀರಂಗರಾಮಾನುಜಮುನಿ

ಕಾಲ : ಕ್ರಿ. ಶ. ೧೬೭೦ರಿಂದ ೧೭೫೦ (ಸುಮಾರು)

ದೇಶ : ಹುಟ್ಟೂರು ತಿರುಪತಿ ಇರಬಹುದು. ವಾಸ-ಪ್ರಾಯಶಃ ಕಾಂಚೀಪುರದ ದೀಪಪ್ರಕಾಶಸನ್ನಿಧಿ

ಕೃತಿಗಳು : ಇವರ ಕೃತಿಗಳೆಂದು ಈವರೆಗೆ ಉಪಲಬ್ಧವಾಗಿರುವ ಮುದ್ರಿತಗ್ರಂಥಗಳು--
ಕೇನ, ಕಠ, ಪ್ರಶ್ನ, ಮುಂಡಕ, ಮಾಂಡೂಕ್ಯ, ತೈತ್ತಿರೀಯ, ಐತರೇಯ, ಛಾಂದೋಗ್ಯ, ಬೃಹದಾರಣ್ಯಕ, ಮಂತ್ರಿಕ, ಅಥರ್ವಶಿಖಾ, ಕೌಷೀತಕೀ, ಶ್ವೇತಾಶ್ವತರ, ಅಗ್ನಿರಹಸ್ಯ, ಪುರುಷಸೂಕ್ತಭಾಷ್ಯಗಳು, ಶ್ರೀಭಾಷ್ಯ-ಮೂಲಭಾವಪ್ರಕಾಶಿಕೆ, ಶ್ರುತಪ್ರಕಾಶಿಕಾಭಾವಪ್ರಕಾಶಿಕೆ, ಶಾರೀರಕಶಾಸ್ತ್ರಾರ್ಥದೀಪಿಕೆ, ವಿಷಯವಾಕ್ಯದೀಪಿಕೆ, ನ್ಯಾಯಸಿದ್ಧಾಂಜನ ಟೀಕೆಗಳು, ತಿರುಪ್ಪಲ್ಲಾಂಡು, ತಿರುಪ್ಪಾವೈ, ತಿರುವಾಯ್ಮೊಳಿ ಎಂಬ ತಮಿಳುದಿವ್ಯ ಪ್ರಬಂಧಗಳ ಸಂಸ್ಕೃತ ಭಾಷಾಂತರಗಳು.

ಅಮುದ್ರಿತ ಗ್ರಂಥಗಳು : ಕಣ್ಣಿನುಣ್‌ಶಿರುತ್ತಾಂಬುವ್ಯಾಖ್ಯಾನ, (ಮಹೋಪನಿಷದ್ಭಾಷ್ಯಮ್) ರಾಮಾನುಜಸಿದ್ಧಾಂತಸಾರಸಂಗ್ರಹ, ತತ್ವನಿಷ್ಕರ್ಷ, ರಹಸ್ಯತ್ರಯಸಾರತಾತ್ಪರ್ಯಕೌಮುದೀ, ಪ್ರತಿತಂತ್ರ-ಪರಿಷ್ಕ್ರಿಯಾ, ಈಶಾವಾಸ್ಯಭಾವದೀಪಿಕಾ ಇತ್ಯಾದಿ·

ಬಿರುದು : 'ಚತುಷ್ಷಷ್ಟಿ ಪ್ರಬಂಧನಿರ್ಮಾತ', 'ದಶೋಪನಿಷದ್ಭಾಷ್ಯಕಾರ'

## ೩· ಶ್ರೀಗೋಪಾಲಾನಂದಸ್ವಾಮಿ

ಹೆಸರು : ಗೋಪಾಲನಂದಜೀಯೋಗಿರಾಜ· ಪೂರ್ವಾಶ್ರಮದ ಹೆಸರು ಕುಶಾಲಭಟ್ಟ·

ಕಾಲ : ಅವತಾರ- ಕ್ರಿ· ಶ· ೧೭೮೧, ಮಾಘಶುಕ್ಲಅಷ್ಟಮಿ ಪ್ರಾತಃಕಾಲ· ಸಮಾಧಿ ಕ್ರಿ· ಶ· ೧೮೫೨, ವೈಶಾಖಶುಕ್ಲ ಪಂಚಮಿ· ಜೀವಿತ ಕಾಲ— ೭೧ ವರ್ಷ, ೨ ತಿಂಗಳು, ೨೭ ದಿವಸ·

ದೇಶ : ಹುಟ್ಟೂರು ಗುಜರಾತಿನ 'ಇಡಾರ್' ಪ್ರದೇಶದ 'ಟೋರಡಾ' ಗ್ರಾಮಸಮಾಧಿ ಸ್ಥಳ— 'ವಡತಾಲ್' ನಗರದ ಪುರುಷೋತ್ತಮ ಮಂದಿರ· ಇವರ ಪೂರ್ವಜರು ಉತ್ತರಪ್ರದೇಶದವರು·

ಕೃತಿಗಳು : ಈಶಾದಿದಶೋಪನಿಷದ್ಭಾಷ್ಯಮ್ (ಸುಬೋಧಿನೀ); ಭಗವದ್ಗೀತಾಭಾಷ್ಯಮ್; ಬ್ರಹ್ಮಸೂತ್ರದೀಪಿಕಾ; ಶುಕಾಭಿಪ್ರಾಯಬೋಧಿಕಾ (ಭಾಗವತದ್ವಿತೀಯಸ್ಕಂಧವ್ಯಾಖ್ಯಾ) ನಿಗೂಢಾರ್ಥ-ಪ್ರಕಾಶಿಕಾ; (ಭಾಗವತದಶಮಸ್ಕಂಧವಾಖ್ಯಾ); ಶ್ರೀಕೃಷ್ಣಾಭಿಪ್ರಾಯಪ್ರಬೋಧಿನೀ (ಶ್ರೀಭಾಗವತೈಕಾ-ದಶಸ್ಕಂಧವ್ಯಾಖ್ಯಾ); ಅನ್ವಯಾರ್ಥಪ್ರಕಾಶಿಕಾ (ವೇದಸ್ತುತಿವ್ಯಾಖ್ಯಾ), ಶ್ರುತ್ಯರ್ಥದೀಪಿಕಾ (ವೇದಸ್ತುತಿವ್ಯಾಖ್ಯಾ), ವಿವೇಕದೀಪ, ಭಕ್ತಿಸಿದ್ಧಿಃ, ಹರಿಭಕ್ತನಾಮರತ್ನಾವಲೀ; ವಿಷ್ಣುಯಾಗಪದ್ಧತಿಃ, ಧರ್ಮದೇವಪೂಜಾವಿಧಿಃ, ಭಕ್ತಿದೇವಿಪೂಜಾವಿಧಿ, ಪುರಾಣೋಕ್ತ ಶ್ರೀಕೃಷ್ಣಪೂಜಾ, ಹನುಮತ್ಪೂಜಾವಿಧಿಃ ಇನ್ನೂ ಅನೇಕ ಹಿಂದೀ ಗುಜರಾತೀ ಭಾಷೆಯ ಗ್ರಂಥಗಳು·

ಸಾಧನೆಗಳು : ಇವರಿಗೆ ಹುಟ್ಟುವಾಗಲೇ ಅನೇಕ ಯೋಗಶಕ್ತಿಗಳಿದ್ದುವು · ಚಿಕ್ಕಂದಿನಿಂದಲೇ ವ್ಯಾಕರಣ, ನ್ಯಾಯ, ಮೀಮಾಂಸೆ, ಜ್ಯೋತಿಷ, ವೇದಾಂತ ಇತ್ಯಾದಿ ಸಕಲಶಾಸ್ತ್ರಾಧ್ಯಯನ, ಶಿಷ್ಯರಿಗೆ ಅಧ್ಯಾಪನ, ಯೋಗಾಭ್ಯಾಸ, ಭಕ್ತಿಯಿಂದ ಭಗವತ್ಪೂಜೆ ಇವರ ದಿನಚರಿಯಾಗಿತ್ತು·

ಕುಲ, ಗೋತ್ರ : ಬ್ರಾಹ್ಮಣ, ಶುಕ್ಲಯಜುರ್ವೇದದ ಮಾಧ್ಯಂದಿನಶಾಖಾಧ್ಯಾಯಿ· ಉದ್ಧವಸಂಪ್ರದಾಯ·

## ೪· ಭಾರದ್ವಾಜರಾಮಾನುಜಾಚಾರ್ಯ

ಹೆಸರು : ಶ್ರೀಭಾಷ್ಯಂರಾಮಾನುಜಾಚಾರ್ಯ· ದೀಕ್ಷೆಕೊಟ್ಟಗುರು ಇಟ್ಟ ಹೆಸರು

ತಿರುವಾಯ್‌ಮೊಳಿಪ್ಪಿಳ್ಳೈ, ಬಾಲ್ಯದ ಹೆಸರು 'ರಾಮಾನುಜಯ್ಯ' ವಿದ್ಯಾಗುರುವಿನಿಂದ ಬಂದುದು 'ಶ್ರೀಭಾಷ್ಯಂ' ಎಂಬ ಬಿರುದು·

**ಕಾಲ** : ಕ್ರಿ· ಶ· ೧೭೮೦ ರಿಂದ ೧೮೮೦ (ಸುಮಾರು)

**ದೇಶ** : ಹುಟ್ಟೂರು ಮತ್ತು ವಾಸ ಆಂಧ್ರದ ಮಂಗಳಾದ್ರಿ ಕ್ಷೇತ್ರದ ಬಳಿ ಹಳೆಯ ಮಂಗಳಗಿರಿ ಗ್ರಾಮ·

**ಕೃತಿಗಳು:** :

ಪರಮವೈದಿಕಸಿದ್ಧಾಂತ
ವಿಷ್ಣುಪುರಾಣಪ್ರಥಮಪದ್ಯವ್ಯಾಖ್ಯಾನ
ಸರ್ವವೇದಾಂತಸಾರಾರ್ಥ
ಜ್ಯೋತಿಷಭಾವಾರ್ಥನಿಧಿ,
ಶಿಷ್ಟಾದ್ವೈತಿಜನಾಚಾರ
ಆಂಧ್ರದೇಶೀಯವಿಪ್ರಚರಿತಮ್
ಶಿಷ್ಟಶ್ರೀವೈಷ್ಣವಾಚಾರ
ಉಪಮಾವಾದ
ಸೀತಾಕಲ್ಯಾಣಸರ್ಗವ್ಯಾಖ್ಯಾನ
ದಶೋಪನಿಷತ್ಪದಾರ್ಥದೀಪಿಕಾ
ಶ್ರೀರಾಮಜನನಶ್ಲೋಕವ್ಯಾಖ್ಯಾನ,
ಶ್ರೀವತ್ಸವಂಶತಿಲಕಶ್ಲೋಕವ್ಯಾಖ್ಯಾನ
ಶ್ರೀಕೃಷ್ಣಜನನಶ್ಲೋಕವ್ಯಾಖ್ಯಾನ

**ಕುಲ, ಗೋತ್ರ** : ನಿಯೋಗಿಬ್ರಾಹ್ಮಣಕುಲ, ಭಾರದ್ವಾಜಗೋತ್ರ, ನುರ್ಲಪಾಟವಂಶ·

✡ ★ ✡

೮

# ಮೂಲ ಮತ್ತು ಭಾಷ್ಯಗ್ರಂಥಗಳು


೧ ಗ್ರಂ· ಅಷ್ಟಾವಿಂಶತ್ಯುಪನಿಷದಃ
ಸಂ· ವಾಸುದೇವ ಲಕ್ಷ್ಮಣಶಾಸ್ತ್ರಿ ಪಣ್ಸೀಕರ್
ವಿ· ಈಶ-ಕೇನ-ಕಠ -ಪ್ರಶ್ನದಿಂದ ಮುಕ್ತಿಕದವರೆಗೆ ೨೫ ಉಪನಿಷತ್ತುಗಳಿವೆ
ಪ್ರ· ತುಕಾರಾಮ್ ಜಾವಜೀ ಭಾ· ಸಂ·
ನಿರ್ಣಯ ಸಾಗರಪ್ರೆಸ್ ಲಿ· ದೇ·
ಬೊಂಬಾಯಿ - ೧೯೧೮

೨· ಗ್ರಂ· ಅಷ್ಟೋತ್ತರಶತೋಪನಿಷದಃ
ಸಂ· ಅನೇಕಪಂಡಿತರು
ಪ್ರ· ವಾವಿಳ್ಳರಾಮಸ್ವಾಮಿಶಾಸ್ತ್ರಿ ಅಂಡ್ ಸನ್ಸ್ ಭಾ· ಸಂ·
ಶ್ರೀರಾಮಪ್ರೆಸ್ ಲಿ· ತೆ·
ಮದ್ರಾಸ್ - ೧೯೨೮

೩ ಗ್ರಂ· ಅಷ್ಟೋತ್ತರಶತೋಪನಿಷದಃ
ಸಂ· ಸಿದ್ಧಾಂತಿಸುಬ್ರಹ್ಮಣ್ಯಮನೀಷೀ
ಪ್ರ· ಸಿದ್ಧಾಂತಿಶಿವಶಂಕರಶಾಸ್ತ್ರಿ ಭಾ· ಸಂ·
ಬೆಂಗಳೂರು - ೧೯೦೦ ಲಿ· ತೆ·

೪· ಗ್ರಂ· ಅಷ್ಟೋತ್ತರಶತೋಪನಿಷತ್
ಪ್ರ· ಆದಿಕಲಾನಿಧಿಪ್ರೆಸ್ ಭಾ· ಸಂ·
ಮದ್ರಾಸ್-೧೮೮೩ ಲಿ· · ತೆ·

೫· ಗ್ರಂ· ಅಷ್ಟೋತ್ತರಶತೋಪನಿಷದಃ
ಸಂ· ವೆಂಕಟಕೃಷ್ಣಶಾಸ್ತ್ರಿ
ಪ್ರ· ಶ್ರೀರಾಮಚಂದ್ರಶಾಸ್ತ್ರಿ ಭಾ· ಸಂ·
ಮದ್ರಾಸ್ - ೧೮೯೬ ಲಿ· ಗ್ರಂ·

೬· ಗ್ರಂ· ಅಷ್ಟೋಪನಿಷದ್ಭಾಷ್ಯಮ್
ಸಂ· ವ· ನ· ಕೃಷ್ಣಮಾಚಾರ್ಯ
ವಿ· ಈಶ-ಕೇನ-ಕಠ -ಪ್ರಶ್ನಾದಿ ದಶೋಪನಿಷತ್ತುಗಳ ಮೂಲ ಮತ್ತು
ಕೇನಾದ್ಯುಪನಿಷತ್ತುಗಳಿಗೆ ರಂಗರಾಮಾನುಜಮುನಿಗಳ ಭಾಷ್ಯಗಳೂ ಇವೆ·
ಪ್ರ· ವೈದಿಕವರ್ಧಿನೀ ಸಭಾ ಭಾ· ಸಂ·
ಉಪ್ಪಿಲಿಅಪ್ಪನ್ ಸನ್ನಿಧಿ - ೧೯೧೩ ಲಿ· ಗ್ರಂ·

೭· ಗ್ರಂ· ದಶೋಪನಿಷದಃ
ಸಂ· ಶಾತ್ತನೂರು ಕಲ್ಯಾಣಸುಂದರಶಾಸ್ತ್ರಿ
ಪ್ರ· ವಾಜಪೇಯ ಕೃಷ್ಣಶಾಸ್ತ್ರಿ ಭಾ· ಸಂ·
ಮದ್ರಾಸ್ - ೧೯೦೩ ಲಿ· ತೆ·

೮· ಗ್ರಂ· ದಶೋಪನಿಷದಃ
ಸಂ· ಯನಮದಲವೆಂಕಟಾಚಾರ್ಯ
ವಿ· ೧೮೮೦ರಲ್ಲಿ ಇದರ ದ್ವಿತೀಯ ಮುದ್ರಣವಾಗಿದೆ
ಪ್ರ· ವಿವೇಕಕಳಾನಿಧಿಪ್ರೆಸ್ ಭಾ· ಸಂ
ಯನಮದಲ - ೧೮೭೬ ಲಿ· ತೆ·

೯· ಗ್ರಂ· ದ್ವಾದಶೋಪನಿಷದಃ
ಸಂ· }
ಪ್ರ· } ಧರ್ಮಾಧಿಕಾರಿ ಚಕ್ರವರ್ತಿ ಅಯ್ಯಂಗಾರ್
ವಿದ್ಯಾತರಂಗಿಣಿ ಪ್ರೆಸ್ ಭಾ· ಸಂ·
ಮೈಸೂರು - ೧೮೯೧ ಲಿ· ತೆ·

೧೦ ಗ್ರಂ· ಈಶಾದಿವಿಂಶದುತ್ತರಶತೋಪನಿಷದಃ
ಸಂ· ಕಾವ್ಯತೀರ್ಥನಾರಾಯಣರಾಮ ಆಚಾರ್ಯ
ವಿ· ನಿರ್ಣಯಸಾಗರಪ್ರೆಸ್ ಭಾ· ಸಂ·
ಮುಂಬಯಿ - ೧೯೪೮ ಲಿ· ದೇ·

೧೧· ಗ್ರಂ· ಈಶ-ಕೇನ-ಕಠ -ಪ್ರಶ್ನ-ಮುಂಡಕ-ಮಾಂಡೂಕ್ಯ-
ತೈತ್ತಿರೀಯ-ಐತರೇಯೋಪನಿಷದಃ
ಸಂ· ಸ್ವಾಮಿ ಶ್ರೀವೈಷ್ಣವಾಚಾರ್ಯ
ವಿ·· ಮೂಲ ಮತ್ತು ಶ್ರೀರಾಮಾನಂದ ವಿರಚಿತ 'ಆನಂದ'
ಭಾಷ್ಯವಿದೆ·
ಪ್ರ· ರಾಮಾನಂದವೇದಾಂತ ಪ್ರಚಾರಸಮಿತಿ ಭಾ· ಸಂ·
ಅಹಮದಾಬಾದ್ - ೧೯೬೭ ಲಿ· ದೇ·

೧೨· ಗ್ರಂ· ಈಶಾದಿದಶೋಪನಿಷದ್ಭಾಷ್ಯಮ್
ಕ· ಗೋಪಾಲಾನಂದಸ್ವಾಮಿ
ಸಂ· ಎಂಬಾರ್ ಕೃಷ್ಣಮಾಚಾರ್
ವಿ· ಮೂಲ ಮತ್ತು ಶ್ರೀ ಗೋಪಾಲಾನಂದಸ್ವಾಮಿವಿರಚಿತ 'ಸುಬೋಧಿನೀ'
ವ್ಯಾಖ್ಯಾನ ಮತ್ತು ವಿಸ್ತೃತವಾದ ಮುನ್ನುಡಿಯೂ ಇದೆ
ಪ್ರ· ಭಟ್ಟಜಯಕೃಷ್ಣಬಾಪೂಜಿ ಭಾ· ಸಂ·
ನಿರ್ಣಯಸಾಗರಪ್ರೆಸ್ ಲಿ· ದೇ·
ಬಾಂಬೆ - ೧೯೩೨

೧೩· ಗ್ರಂ· ಉಪನಿಷತ್ ಷಟ್ಕಮ್
ಸಂ· ಧರ್ಮಾಧಿಕಾರಿ ಚಕ್ರವರ್ತಿ ಅಯ್ಯಂಗಾರ್
ವಿ· ಈಶ-ಕೇನ-ಕಠ -ಪ್ರಶ್ನಾದಿ ಉಪನಿಷತ್ತುಗಳ ಮೂಲ, ಶಂಕರಭಾಷ್ಯ,
ಆನಂದಗಿರಿಟೀಕೆ, ರಂಗರಾಮಾನುಜರಭಾಷ್ಯವೂ ಇದೆ·
ಪ್ರ· ವಿದ್ಯಾತರಂಗಿಣಿಪ್ರೆಸ್ ಭಾ· ಸಂ
ಮೈಸೂರು ಲಿ· ತೆ·

೧೪· ಗ್ರಂ· ಉಪನಿಷದರ್ಥಸಂಗ್ರಹಮ್
ಕ·
ಸಂ· } ಉತ್ತಮೂರ್ ವೀರರಾಘವಾಚಾರ್ಯ
ಪ್ರ· ಆರ್· ವೆಂಕಟಾಚಾರಿ
ರಾಮಕೃಷ್ಣ ಪ್ರಿಟಿಂಗ್ ಪ್ರೆಸ್ ಭಾ· ಸಂ·
ಮದ್ರಾಸ್ - ೧೯೭೭ ಲಿ· ತ·

೧೫· ಗ್ರಂ· ದಶೋಪನಿಷದ್ವ್ಯಾಖ್ಯಾನಮ್
ಕ· ಭಾರದ್ವಾಜ ರಾಮಾನುಜಾಚಾರ್ಯ
ವಿ· ಈಶ-ಕೇನ-ಕಠ -ಪ್ರಶ್ನಾದಿದಶೋಪನಿಷತ್ತುಗಳಿಗೆ ಭಾರದ್ವಾಜ
ರಾಮಾನುಜಾಚಾರ್ಯ ವಿರಚಿತ ವ್ಯಾಖ್ಯಾನವೂ, ಮೂಲವೂ ಇವೆ·
ಪ್ರ· ಚಿನ್ನವೆಂಕಟರತ್ನಮ್ ಭಾ· ಸಂ·
ವಿವೇಕಕಳಾನಿಧಿಪ್ರೆಸ್ ಲಿ· ತೆ·
ಮದ್ರಾಸ್-೧೮೭೫

೧೬· ಗ್ರಂ· ಷಡುಪನಿಷದ್ಭಾಷ್ಯಮ್
ಸಂ· ವಾವಿಳ್ಳರಾಮಸ್ವಾಮಿಶಾಸ್ತ್ರಿ
ವಿ· ಈಶ-ಕೇನ-ಕಠ -ಪ್ರಶ್ನಾದಿ ೬ ಉಪನಿಷತ್ತುಗಳ ಮೂಲ,
ಶಂಕರಭಾಷ್ಯ, ಆನಂದಗಿರಿಟೀಕೆ, ವೇದಾಂತದೇಶಿಕರಭಾಷ್ಯ
ಮತ್ತು ನಾರಾಯಣಮುನಿಗಳ ವ್ಯಾಖ್ಯಾನಗಳೂ ಇವೆ·
ಪ್ರ· ವಾವಿಳ್ಳ ರಾಮಸ್ವಾಮಿಶಾಸ್ತ್ರಿ ಅಂಡ್ ಸನ್ಸ್ ಭಾ· ಸಂ·
ಮದ್ರಾಸ್ - ೧೯೩೯ ಲಿ· ತೆ·

೧೭· ಗ್ರಂ· ದಶೋಪನಿಷದಃ (ಭಾಗ ೧)
ಸಂ· ಅಡ್ಯೆಯಾರ್ ಗ್ರಂಥಾಲಯದ ಪಂಡಿತರು
ವಿ· ಶಂಕರಭಾಷ್ಯವನ್ನು ಹೋಲುವ ಉಪನಿಷದ್ಬ್ರಹ್ಮಯೋಗಿಗಳ ವ್ಯಾಖ್ಯಾನ
ಮತ್ತು ಮೂಲಗಳಿವೆ·
ಪ್ರ· ಅಡ್ಯೆಯಾರ್ ಲೈಬ್ರರಿ,
ಥಿಯಸಾಫಿಕಲ್ ಸೊಸೈಟಿ ಭಾ· ಸಂ·
ಮದ್ರಾಸ್ - ೧೯೩೫ ಲಿ· ದೇ

* * *

೯

# ಭಾಷಾಂತರಗಳು

## ಕನ್ನಡ

೧. ಗ್ರಂ. ಉಪನಿಷತ್ತು

ಸಂ. }
ಅನು. } ದೇವುಡು ನರಸಿಂಹಶಾಸ್ತ್ರಿ

ವಿ. ಈಶ-ಕೇನ-ಕಠ -ಪ್ರಶ್ನಾದಿ ಉಪನಿಷತ್ತುಗಳ ತಾತ್ಪರ್ಯ ಮತ್ತು ವಿಸ್ತಾರವಾದ ಪೀಠಿಕೆ ಇದೆ.

ಪ್ರ. ಮೈಸೂರು ಸಂಸ್ಥಾನದ ಸಾಹಿತ್ಯ ಮತ್ತು ಸಂಸ್ಕೃತಿ ಇಲಾಖೆ
ಬೆಂಗಳೂರು - ೧೯೫೮

೨. ಗ್ರಂ. ಉಪನಿಷತ್ಪರಿಚಯ

ಸಂ. }
ಅನು. } ಸ್ವಾಮಿ ಸೋಮನಾಥಾನಂದ

ಪ್ರ. ಪ್ರಸಾರಾಂಗ
ಮೈಸೂರು ವಿಶ್ವವಿದ್ಯಾಲಯ
ಮೈಸೂರು - ೧೯೬೮

## ತಮಿಳು

೧. ಗ್ರಂ. ಉಪನಿಷತ್ಸಾರಮ್

ಕ. }
ಸಂ. } ಉತ್ತಮೂರು ವೀರರಾಘವಾಚಾರ್

ವಿ. ಈಶ-ಕೇನ-ಕಠ -ಪ್ರಶ್ನ ಮುಂತಾದ ಉಪನಿಷತ್ತುಗಳ ಸಾರವು ತಮಿಳು ಭಾಷೆಯಲ್ಲಿದೆ.

ಪ್ರ. ವಿಶಿಷ್ಟಾದ್ವೈತ ಪ್ರಚಾರಿಣೀ ಸಭಾ
ಮದ್ರಾಸ್ - ೧೯೭೦.

೨ ಗ್ರಂ· ದಶೋಪನಿಷತ್ತುಕ್ಕಳಿನ್‌ದ್ರಾವಿಡಪ್ರತಿಪದಭಾಷ್ಯಮ್

ವಿ· ಮೂಲವು ಗ್ರಂಥ ಮತ್ತು ತೆಲುಗು ಲಿಪಿಯಲ್ಲಿದೆ·
ಪ್ರತಿಪದಾರ್ಥವು ತಮಿಳಿನಲ್ಲಿದ್ದು ಶಂಕರ, ರಾಮಾನುಜಮತಾನು-
ಸಾರಿಯಾದ ಅನುವಾದವೂ ಇದೆ·

## ಹಿಂದಿ

೧ ಗ್ರಂ· ಈಶಾದಿಪಂಚೋಪನಿಷದಃ

ಕ· } ಸಂ· } ತ್ರಿದಂಡಿ ಶ್ರೀಮದ್ವಿಷ್ವಕ್ಸೇನಾಚಾರ್ಯಸ್ವಾಮಿ

ವಿ· ಈಶ-ಕೇನ-ಕಠ -ಪ್ರಶ್ನ-ಮುಂಡಕಾದಿಉಪನಿಷತ್ತುಗಳಿಗೆ
ವಿಶಿಷ್ಟಾದ್ವೈತಪರವಾದ ಹಿಂದಿ ಪ್ರತಿಪದಾರ್ಥವಿದೆ· ಈ ಹಿಂದೀ
ವ್ಯಾಖ್ಯಾನಕ್ಕೆ 'ಗೂಢಾರ್ಥದೀಪಿಕಾ' ಎಂದು ಹೆಸರು·

ಪ್ರ· ಶ್ರೀರಾಮದೇವಾಚಾರ್ಯ
ಅಚ್ಯುತ ಮುದ್ರಣಾಲಯ
ಕಾಶಿ - ೧೯೫೨

## ಆಂಗ್ಲ

೧· ಗ್ರಂ· ದಿ ಉಪನಿಷತ್ಸ್ (ಭಾಗ ೧)

ಕ· } ಸಂ· } ಮ್ಯಾಕ್ಸ್‌ಮುಲ್ಲರ್

ವಿ· ಈಶ-ಕೇನ-ಕಠ -ಪ್ರಶ್ನಾದಿಉಪನಿಷತ್ತುಗಳಿಗೆ ಆಂಗ್ಲಭಾಷಾಂತರ ಮತ್ತು
ಟಿಪ್ಪಣಿಗಳಿವೆ·

ಪ್ರ· ಡೋವರ್ ಪಬ್ಲಿಕೇಷನ್ಸ್
ನ್ಯೂಯಾರ್ಕ್ - ೧೮೮೪

೨· ಗ್ರಂ· ಉಪನಿಷತ್ಸ್

ಸಂ· } ಅನು· } ಕೆ· ಪಿ· ಬಹಾದೂರ್

ವಿ ಈಶ-ಕೇನ-ಕಠ-ಪ್ರಶ್ನಾದಿ ಉಪನಿಷತ್ತುಗಳ ಮೂಲವು ಸಂಸ್ಕೃತ ಮತ್ತು
ಇಂಗ್ಲೀಷ್ ಲಿಪಿಗಳಲ್ಲಿದೆ·
ಪ್ರ· ಹೆರಿಟೇಜ್ ಪಬ್ಲಿಕೇಷನ್ಸ್
ಪ್ರಿಂಟ್‌ವೆಲ್ಸ್ ಪ್ರೆಸ್
ದೆಹಲಿ - ೧೯೭೮

೩· ಗ್ರಂ· ದಿ ಟೆನ್ ಪ್ರಿನ್ಸಿಪಲ್ ಉಪನಿಷತ್
ಕ· ಪುರೋಹಿತಸ್ವಾಮಿ ಮತ್ತು ಡಬ್ಲ್ಯು-ಬಿ-ಈಟ್ಸ್
ವಿ· ಈಶ-ಕೇನ-ಕಠ-ಪ್ರಶ್ನಾದಿ ಉಪನಿಷತ್ತುಗಳ ಆಂಗ್ಲಭಾಷಾನುವಾದವಿದೆ·
ಪ್ರ· ಫೇಬರ್ ಅಂಡ್ ಫೇಬರ್ ಲಿಮಿಟೆಡ್
ಲಂಡನ್ - ೧೯೭೫

೪· ಗ್ರಂ ಉಪನಿಷತ್ಸ್-ರಿ-ಟೋಲ್ಡ್
ಕ·
ಸಂ· ವಿ· ಹೆಚ್· ದಾತೆ
ವಿ· ಪ್ರಶ್ನ ಮೊದಲಾದ ಉಪನಿಷತ್ತುಗಳ ಆಂಗ್ಲ ವಿವರಣವಿದೆ·
ಪ್ರ· ಅಲೈಡ್ ಪಬ್ಲಿಕೇಷನ್ಸ್ ಪ್ರೈವೇಟ್ ಲಿಮಿಟೆಡ್
ಬೊಂಬಾಯಿ - ೧೯೭೮

೫· ಗ್ರಂ· ಗೈಡ್ ಟು ದಿ ಉಪನಿಷತ್ಸ್
ಕ·
ಸಂ· ಎಮ್· ಪಿ· ಪಂಡಿತ್
ಪ್ರ· ದೀಪ್ತಿಪಬ್ಲಿಕೇಷನ್ಸ್
ಜುಪಿಟರ್‌ಪ್ರೆಸ್
ಮದ್ರಾಸ್-೧೯೭೨

೬· ಗ್ರಂ· ದಿ ಮೆಸೇಜ್ ಆಫ್ ದಿ ಉಪನಿಷತ್ಸ್
ಕ· ಸ್ವಾಮಿ ರಂಗನಾಥಾನಂದ
ವಿ· ಈಶ-ಕೇನ-ಕಠ-ಪ್ರಶ್ನಾದಿಉಪನಿಷತ್ತುಗಳ ಮೂಲ ದೇವನಾಗರಿಲಿಪಿಯಲ್ಲಿದ್ದು
ಅದರ ತಾತ್ಪರ್ಯವು ಆಂಗ್ಲಭಾಷೆಯಲ್ಲಿದೆ·

| | |
|---|---|
| ಪ್ರ· | ಭಾರತೀಯ ವಿದ್ಯಾಭವನ |
| | ರಾಣಿಭಾರತೀ ಪ್ರೆಸ್ |
| | ಬೊಂಬಾಯಿ - ೧೯೭೧ |
| ೭· ಗ್ರಂ· | **ಯ್ಯೆಟ್ ಉಪನಿಷತ್ಸ್** |
| ಸಂ· | ಸ್ವಾಮಿ ಗಭೀರಾನಂದ |
| ವಿ· | ದೇವನಾಗರಿಯಲ್ಲಿ ಮೂಲವೂ, ಆಂಗ್ಲಭಾಷೆಯ ಪ್ರತಿಪದಾರ್ಥ |
| | ಮತ್ತು ವಿಸ್ತಾರವಾದ ವ್ಯಾಖ್ಯಾನವೂ ಇದೆ· |
| ಪ್ರ· | ಅದ್ವೈತಾಶ್ರಮ, ಮಾಯಾವರ |
| | ಯೂನಿಯನ್‌ಪ್ರೆಸ್ |
| | ಕಲ್ಕತ್ತಾ - ೧೯೭೭ |
| ೮· ಗ್ರಂ· | **ರಾಮಾನುಜ ಆನ್ ದಿ ಉಪನಿಷತ್ಸ್** |
| ಕ· | ಎಸ್· ಎಸ್· ರಾಘವಾಚಾರ್ಯ |
| ವಿ· | ಭಗವದ್ರಾಮಾನುಜರ ಶ್ರೀಭಾಷ್ಯಾದಿಗ್ರಂಥಗಳಲ್ಲಿ ಉದಾಹರಿಸಿರುವ ಈಶ-ಕೇನ-ಕಠ - |
| | ಪ್ರಶ್ನ ಮುಂತಾದ ಉಪನಿಷತ್ತುಗಳ ಸಾರಾಂಶವು ಆಂಗ್ಲಭಾಷೆಯಲ್ಲಿದೆ· |
| ಪ್ರ· | ಎಮ್· ರಂಗಾಚಾರ್ಯ ಮೆಮೋರಿಯಲ್ ಟ್ರಸ್ಟ್ |
| | ವಿದ್ಯಾಪ್ರೆಸ್ |
| | ಮದ್ರಾಸ್-೧೯೭೨ |

❋ ❋ ❋

# ಹಸ್ತಲಿಖಿತ, ತಾಳಪತ್ರಗಳು

## ಗೌರ್ನಮೆಂಟ್ ಓರಿಯಂಟಲ್ ಲೈಬ್ರರಿ, ಮೈಸೂರು

ಪ್ರಶ್ನೋಪನಿಷದ್ಭಾಷ್ಯಮ್ (ರಂಗರಾಮಾನುಜ) - ಗ್ರಂಥ - ನಂ· ೩೯೨೬

## ಅಡ್ಯೆಯಾರ್ ಲೈಬ್ರರಿ, ಮದ್ರಾಸು

ಪ್ರಶ್ನೋಪನಿಷದ್ಭಾಷ್ಯಮ್ (ರಂಗರಾಮಾನುಜ) - ಗ್ರಂಥ - ಭಾಗ ೧ - ನಂ· ೨೯ ಜೆ ೧೬

## ಸೆಂಟ್ರಲ್ ಲೈಬ್ರರಿ, ಬರೋಡಾ

ಪ್ರಶ್ನೋಪನಿಷದ್ಭಾಷ್ಯಮ್ (ರಂಗರಾಮಾನುಜ) - ಗ್ರಂಥ - ಭಾಗ ೧ - ನಂ· ೩೯೨೬

✿ ✿ ✿

# ಶ್ರೀಭಾಷ್ಯದಲ್ಲಿ ಉದ್ಧೃತವಾದ ಪ್ರಶ್ನೋಪನಿಷನ್ಮಂತ್ರಗಳ ಅಕಾರಾದಿ

| | ಪ್ರ· ಉ | ಅ· ಸಂ· |
|---|---|---|
| ಏತದ್ವೈಸತ್ಯಕಾಮ | ೫ - ೨ | ೧ - ೩ - ೪ |
| ಏತಮೇವಾಸ್ಮಪರಿ | ೬ - ೫ | (ಮ· ಸಿ· ) ೧ - ೧ - ೧ |
| | | ೨ - ೩ - ೪ |
| ಏಷ ಹಿ ದ್ರಷ್ಟಾ | ೪ - ೯ | ೨ - ೩ - ೪ |
| ತಸ್ಮಿನ್ನುತ್ಕ್ರಾಂತೇ | ೬ - ೩ | ೪ - ೨ - ೩ |
| ತಪಸಾಬ್ರಹ್ಮಚರ್ಯೇಣ | ೧ - ೧೦ | ೩ - ೪ - ೯ |
| ತಮೋಂಕಾರೇಣೈವ | ೫ - ೭ | ೧ - ೩ - ೪ |
| ತಸ್ಮಾದುಪಶಾನ್ತತೇಜಾಃ | ೩ - ೯ | ೪ - ೨ - ೧ |
| ತೇಷಾಮೇವೈಷ | ೧ - ೧೫ | (ಲಘು ಸಿ· ) ೧ - ೧ - ೧ |
| ತ್ವಂ ಹಿ ನಃ ಪಿತಾ | ೬ - ೮ | ೧ - ೧ - ೪ |
| ಯಃ ಪುನರೇತಮ್ | ೫ - ೫ | ೧ - ೩ - ೪ |
| ಯತ್ತಚ್ಛಾನ್ತಮಜರಮ್ | ೫ - ೭ | ೧ - ೩ - ೪ |
| ಯತ್ತತ್ಕವಯೋ | ೫ - ೭ | ೧ - ೩ - ೪ |
| ಯಥಾಪಾದೋದರಃ | ೫ - ೫ | ೧ - ೩ - ೪ |
| ಷೋಡಶಕಲಮ್ | ೬ - ೧ | ೩ - ೨ - ೭ |
| ಸ ಈಕ್ಷಾಂಚಕ್ರೇ | ೬ - ೩ | ೧ - ೧ - ೫ |
| ಸ ಏಷ ವೈಶ್ವಾನರೋ | ೧ - ೭ | ೧ - ೨ - ೬ |
| ಸ ಯೋ ಹ ವೈ ಏತದ್ಭಗವನ್ | ೫ - ೧ | ೧ - ೩ - ೪ |
| ಹೃದಿಹ್ಯಯಮಾತ್ಮಾ | ೩ - ೬ | ೨ - ೩ - ೪ |

❋ ❋ ❋

# ಸಂಕೇತಾಕ್ಷರಸೂಚಿ

| | |
|---|---|
| ಅನುವಾದ | ಅನು· |
| ಕರ್ತೃ | ಕ· |
| ಗ್ರಂಥದ ಹೆಸರು | ಗ್ರಂ· |
| ಗ್ರಂಥ ಲಿಪಿ | ಗ್ರಂ· |
| ತಮಿಳು | ತ· |
| ತೆಲುಗು | ತೆ· |
| ದೇವನಾಗರಿ | ದೇ· |
| ಪ್ರಕಾಶನ | ಪ್ರ· |
| ಭಾಷೆ | ಭಾ |
| ಲಿಪಿ | ಲಿ |
| ವಿಶೇಷ | ವಿ· |
| ಸಂಪಾದಕರು | ಸಂ· |
| ಸಂಸ್ಕೃತ | ಸಂ· |

| | |
|---|---|
| ಅಧಿಕರಣಸಂಖ್ಯೆ | ಅ· ಸಂ |
| ಕಠೋಪನಿಷತ್ | ಕ· ಉ· |
| ಕೌಶೀತಕೀ ಉಪನಿಷತ್ | ಕೌ· ಉ· |
| ಛಾಂದೋಗ್ಯೋಪನಿಷತ್ | ಛಾಂ· ಉ· |
| ತೈತ್ತಿರೀಯಬ್ರಾಹ್ಮಣ | ತೈ· ಬ್ರಾ· |
| ಪ್ರಶ್ನೋಪನಿಷತ್ | ಪ್ರ· ಉ |
| ಬೃಹದಾರಣ್ಯಕೋಪನಿಷತ್ (ಮಾಧ್ಯಂದಿನ) | ಬೃ· ಉ ಮಾಧ್ಯಂ |
| ಬ್ರಹ್ಮಸೂತ್ರ | ಬ್ರ· ಸೂ· |
| ಭಗವದ್ಗೀತಾ | ಭ· ಗೀ· |
| ಮಹಾಸಿದ್ಧಾಂತ | ಮ· ಸಿ· |
| ಮುಂಡಕೋಪನಿಷತ್ | ಮುಂ· ಉ· |
| ಲಘುಸಿದ್ಧಾಂತ | ಲಘುಸಿ· |
| ಶ್ವೇತಾಶ್ವತರೋಪನಿಷತ್ | ಶ್ವೇ· ಉ· |
| ಶ್ರೀಭಾಷ್ಯ | ಶ್ರೀಭಾ· |
| ಸುಬಾಲೋಪನಿಷತ್ | ಸುಬಾ |
| ಹಿತೋಪದೇಶ | ಹಿತೋ· |

* * *